ಮಹಾನ್ ಸಾಧಕ
ಕೆ.ಸಿ.ರೆಡ್ಡಿ

ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ



ಡಾ. ಆರ್.ವಿ. ರವೀಂದ್ರನಾಥ
M.A., M.Phil., PGDACT., PGDI., PGDEpi., Ph.D.,

ಮಹಾನ್ ಸಾಧಕ ಕೆ.ಸಿ. ರೆಡ್ಡಿ

(ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ)

ಡಾ. ಆರ್.ವಿ. ರವೀಂದ್ರನಾಥ

M.A., M.Phil., PGDACT., PGDI., PGDEpi., Ph.D.,

ಶ್ರೀ ಅನ್ನಪೂರ್ಣೇಶ್ವರಿ ಪ್ರಕಾಶನ

ಕೋಲಾರ–563 101.

MAHAAN SAADHAKA K.C.REDDY (Karnataka Rajyada Modala Mukhyamantri) - A Biography, Language : **KANNADA**

Written By : **Dr. R.V. Ravindranatha,** Lakshminarayana Nilaya
Near Dharmaraya Temple, Kataripalya, Kolar-563 101. M : 99164 48999

Published by : **Sri Annapurneshwari Prakashana,** Kolar-563 101.

First Impression : March - 2014

Price : Rs. **275/-**

Pages : xLii + 342 = **384** (including Photos)

Copies : 1000

Paper Used : 70 GSM Book Print

Book Size : 1/8th Demy

DTP By : **Smt. Radha Munisiddappa**, Varthur, Bengaluru.

Cover Page Design By : **Prashanth Vitla**

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಅರ್ಪಣೆ



ನನ್ನಲ್ಲಿ ಇತಿಹಾಸವನ್ನು ಕುರಿತು ಆಸಕ್ತಿ ಮೂಡಿಸಿದ

ನನ್ನ ಪೂಜ್ಯ ಗುರುಗಳಾದ


ಡಾ. ಗೋವಿಂದಶೆಟ್ಟಿ

M.A., Ph.D., PGDHTM., M.B.A., (Executive)

ಅವರಿಗೆ

ಗೌರವಪೂರ್ವಕವಾಗಿ ಸಮರ್ಪಿಸಲಾಗಿದೆ.

ಪೂಜ್ಯ ಮಾತಾ ಪಿತೃಗಳಾದ



ಶ್ರೀಮತಿ ಎ. ಶಾಂತಮ್ಮ ಮತ್ತು ಶ್ರೀ ಆರ್. ವೆಂಕಟಾಚಲಪತಿ

ಪ್ರಸಿದ್ಧ ನುಡಿಗಟ್ಟು

'ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಿ.
ಅದನ್ನೇ ನಿಮ್ಮ ಬದುಕಾಗಿಸಿಕೊಳ್ಳಿ.
ಅದನ್ನೇ ಯೋಚಿಸಿ,
ಅದರ ಬಗ್ಗೆಯೇ ಕನಸು ಕಾಣಿ,
ಅದರೊಟ್ಟಿಗೇ ಬದುಕಿ
ನಿಮ್ಮ ಮೆದುಳು, ಸ್ನಾಯುಗಳು, ನರನಾಡಿ
ಸೇರಿದಂತೆ ನಿಮ್ಮ ದೇಹದ ಎಲ್ಲ ಭಾಗಗಳೂ
ಆ ಯೋಜನೆಯಿಂದಲೇ ತುಂಬಿ ಹೋಗಲಿ,
ಇತರ ಎಲ್ಲ ಯೋಜನೆಗಳನ್ನೂ ಬದಿಗೆ ಸರಿಸಿ,
ಇದೇ ಯಶಸ್ಸಿನ ಮಾರ್ಗ......'

–ಸ್ವಾಮಿ ವಿವೇಕಾನಂದ

ಕೃಪೆ : ಪ್ರಜಾವಾಣಿ

ಪರಿವಿಡಿ

ಮುನ್ನುಡಿ

ವಸಾಹತುಶಾಹಿ ಕಾಲಘಟ್ಟದಲ್ಲಿ ಮೈಸೂರು ಅರಸೊತ್ತಿಗೆಯ ಸಂಸ್ಥಾನ ದೀರ್ಘಾವಧಿ ಬದಲಾವಣೆಗಳಿಗೆ ಒಳಗಾಯಿತು. ಮೈಸೂರು ಚರಿತ್ರೆಗೆ ಸಂಬಂಧಿಸಿದಂತೆ ಅನೇಕ ಕೃತಿಗಳು ಬಂದಿವೆ – ಬಹುತೇಕ ವಿವರಣಾ ಪ್ರಧಾನ ಕೃತಿಗಳಾದರೆ ಕೆಲವು ವಿಶ್ಲೇಷಣಾ ಕ್ರಮಕ್ಕೆ ಸೇರಿವೆ. 1970ರ ದಶಕಕ್ಕೆ ಹಿಂದೆ ಬಂದ ಕೃತಿಗಳು ಮೊದಲ ವರ್ಗಕ್ಕೆ ಸೇರಿದರೆ, 1970ರ ದಶಕ ಮತ್ತು ನಂತರ ಕಾಲಘಟ್ಟದಲ್ಲಿ ಬಂದವು ಎರಡನೆಯ ವರ್ಗಕ್ಕೆ ಸೇರುತ್ತವೆ. ಎರಡನೆಯ ವರ್ಗಕ್ಕೆ ಹೆಚ್ಚಿನ ಕೊಡುಗೆ ಸಂದಿರುವುದು ವಿದೇಶಿ ವಿದ್ವಾಂಸರಿಂದ. ಒಂದರ್ಥದಲ್ಲಿ ಅವರು ಮಾರ್ಗಕಾರರು. ಇಂದಿಗೂ ವಿವರಣಾ ಪ್ರಧಾನವಾದ ಕೃತಿಗಳು ಬರುತ್ತಿದ್ದರೂ, ಅಲ್ಲೊಮ್ಮೆ ಇಲ್ಲೊಮ್ಮೆ ಅಪವಾದಗಳೂ ಸೃಷ್ಟಿಯಾಗುತ್ತಿವೆ. ಡಿ.ಆರ್. ಗಸ್ಟೇವ್‌ಸನ್ ಅವರ ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ 'ಮೈಸೂರು : 1881–1902 ದ ಮೇಕಿಂಗ್ ಆಫ್ ಅ ಮಾಡೆಲ್ ಸ್ಟೇಟ್' (ವಿಸ್‌ಕಾನ್ಸಿನ್ ವಿಶ್ವವಿದ್ಯಾಲಯ, 1969) ಇಂದ ಆರಂಭವಾದ ವಿಶ್ಲೇಷಣಾ ಧಾರೆ ತೀರ ಇತ್ತೀಚಿನ ಜೇಮ್ಸ್ ಮೇನರ್ ಅವರ ಲೇಖನಗಳು, ಎಸ್. ಚಂದ್ರಶೇಖರ್ ಅವರ 'ಡೈಮೆಂಶನ್ಸ್ ಆಫ್ ಸೋಶಿಯೋ ಪೊಲಿಟಿಕಲ್ ಚೇಂಜ್ ಇನ್ ಮೈಸೂರ್' 1918–1940 ಮತ್ತು ಜಾನಕಿನಾಯರ್ ಅವರ 'ಮೈಸೂರು ಮಾಡ್ರನ್' ವರೆಗೂ ಮುಂದುವರೆದಿದೆ. ಹಾಗೆ ನೋಡಿದರೆ ಮೈಸೂರಿನ ಚರಿತ್ರೆ, ಲೇಖನ ಪರಂಪರೆ ಪ್ರಕಟಣೆಯ ದೃಷ್ಟಿಯಿಂದ ಸಾಕಷ್ಟು ಶ್ರೀಮಂತವಾಗಿಯೆ ಇದೆ. ಭಿನ್ನ ಪರಿಪ್ರೇಕ್ಷಗಳ ಕೊರತೆಯಿದ್ದರೂ ಮೇಲಿನ ಮಾತನ್ನು ಹೇಳಬಹುದಾಗಿದೆ. ರಾಜಕೀಯ, ಆಡಳಿತ, ಅರ್ಥಚರಿತ್ರೆ, ಸಾಮಾಜಿಕ ಸಂಘರ್ಷಗಳ ಪಲ್ಲಟಗಳು ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಚಾರಿತ್ರಿಕ ಆಯಾಮಗಳನ್ನು ತಿಳಿಸುವ ಕೃತಿಗಳು ಬಂದಿವೆ. ಬಹುತೇಕ ಪ್ರಯತ್ನಗಳು ಮೈಸೂರು ಸಂಸ್ಥಾನದ ಆಧುನಿಕ ಚರಿತ್ರೆಗೆ ಸಂಬಂಧಿಸಿದಂತೆಯೆ ನಡೆದಿವೆ, ನಡೆಯುತ್ತಿವೆ. ಮೈಸೂರಿನ ಮಧ್ಯಕಾಲೀನ ಕಾಲಘಟ್ಟಕ್ಕೆ ಸಂಬಂಧಿಸಿದ ವಿಶ್ಲೇಷಣೆಗಳೂ ತೀರ ಕಡಮೆ. ಮತ್ತಷ್ಟು ಹಿಂದಕ್ಕೆ ಹೋಗಿ ಮೈಸೂರು ಚರಿತ್ರೆಯನ್ನು ಆವರಿಸಿರುವ ಮಬ್ಬುಗಳನ್ನು ಪಕ್ಕಕ್ಕೆ ಸರಿಸಿ ನೋಡುವ ಅಗತ್ಯವಿದೆ. ಹಾಗೆಯೇ ಮೈಸೂರನ್ನು ದಕ್ಷಿಣ ಭಾರತದ ಒಟ್ಟು ದೇಶೀ ಸಂಸ್ಥಾಗಳ ಚೌಕಟ್ಟಿಗೆ ತಂದು ಮೈಸೂರು

ಮತ್ತು ಅವುಗಳ ನಡುವೆ ಇದ್ದು ಕಳೆದು ಹೋಗಿರಬಹುದಾದ ಕೊಂಡಿಗಳನ್ನು ಹುಡುಕುವ ಜರೂರಿದೆ. ಇಲ್ಲಿಯವರೆಗೂ ಮೈಸೂರನ್ನು ಸ್ವತಂತ್ರ ಮತ್ತು ಸಂಪೂರ್ಣ ಪ್ರತ್ಯೇಕ ಘಟಕವನ್ನಾಗಿಯೇ ನೋಡಲಾಗಿದೆ. ವಸಾಹತುಶಾಹಿ ಶಕ್ತಿಯೊಂದಿಗಿನ ಮೈಸೂರು ಸಂಬಂಧವನ್ನು ಬಿಟ್ಟರೆ ಅದರ ಇತರ ದೇಶೀ ಸಂಸ್ಥಾನಗಳ ಜೊತೆಗಿನ ಕೊಳ್ಳುಕೊಡುಗೆಗಳ ಚರಿತ್ರೆಯನ್ನು ನೋಡಿಲ್ಲ. ಚರಿತ್ರೆಯನ್ನು ಸಾಪೇಕ್ಷವಾಗಿ ನೋಡುವ ದೃಷ್ಟಿಕೋನವಿಲ್ಲದಿದ್ದಾಗ ಸಂಭವಿಸುವ ಪರಿಣಾಮವಿರಬಹುದು.

ಮೈಸೂರು ಸಂಸ್ಥಾನ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗಿ ಪ್ರತ್ಯೇಕ ರಾಜ್ಯವಾದ ನಂತರ ಅದರ ಪ್ರಥಮ ಮುಖ್ಯಮಂತ್ರಿಯಾಗಿ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿಯವರು ಅಧಿಕಾರ ಗ್ರಹಣ ಮಾಡಿದರು. ಈ ಹೆಗ್ಗಳಿಕೆಯನ್ನು ಬಿಟ್ಟರೆ, ಕೆ.ಸಿ. ರೆಡ್ಡಿಯವರ ಬಗ್ಗೆ ಒಂದು 'ಕ್ರೆಡಿಬಲ್'(credible)ಆದ ಸಂಶೋಧನಾ ಕೃತಿ ಬಂದಿಲ್ಲ. ಆಧುನಿಕ ಮೈಸೂರು ಚರಿತ್ರೆ ಲೇಖನ ಪರಂಪರೆಯಲ್ಲಿ ಅವರಿಗೆ ಸಿಗಬೇಕಾದ ಸ್ಥಾನ ದೊರಕಿಲ್ಲ. ಈ ಹಿನ್ನೆಲೆ ಯಲ್ಲಿ ಶ್ರೀ ಆರ್.ವಿ. ರವೀಂದ್ರನಾಥ ಅವರ ಪಿಎಚ್.ಡಿ. ಮಹಾಪ್ರಬಂಧವು ಪರಿಷ್ಕೃತ ಗೊಂಡು ಹೊರಬರುತ್ತಿರುವುದು ಆ ಕೊರತೆಯನ್ನು ಮೌಲ್ಯಯುತವಾಗಿಯೆ ನೀಗಿಸುತ್ತದೆ. ನನ್ನ ಮಾರ್ಗದರ್ಶನದಲ್ಲೇ ಈ ಮಹಾಪ್ರಬಂಧವು ರೂಪುಗೊಂಡಿದ್ದರಿಂದ ಸಹಜ ವಾಗಿಯೆ ಅದರ ಬೆಳವಣಿಗೆಯ ವಿವಿಧ ಹಂತಗಳಿಗೆ ನಾನು ಸಾಕ್ಷಿಯಾಗಿದ್ದೇನೆ. ಈ ಪ್ರಬಂಧವು ಅವರಿಗೆ ಡಾಕ್ಟರೇಟ್ ಪದವಿಯನ್ನೂ ತಂದುಕೊಟ್ಟಿತು. ರವಿಗೆ ದಾಖಲೆಗಳನ್ನು, ಮಾಹಿತಿಗಳನ್ನು ಕಲೆಹಾಕುವ ಮಹಾಹುಚ್ಚಿದೆ. ಪಡೆದ ಮಾಹಿತಿಗಳಿಗೆ ವಿಶ್ಲೇಷಣೆಯ ಮೂಲಕ ಪರಿಪ್ರೇಕ್ಷಣಾ ನೆಲೆಗಳನ್ನು ಕಟ್ಟಿಕೊಡುವಂತೆ ನಾನು ಯಾವಾಗಲೂ ಒತ್ತಾಯಿಸು ತ್ತಿದ್ದೆ. ಅವರಿಗೆ ದಕ್ಕಿದ ಹಂತಕ್ಕೆ ಅದನ್ನು ತಂದುಕೊಡುವ ಪ್ರಯತ್ನ ಮಾಡುತ್ತಿದ್ದರು.

ಇಪ್ಪತ್ತನೇ ಶತಮಾನ ದೇಶೀ ಸಂಸ್ಥಾನಗಳ ಚರಿತ್ರೆಯಲ್ಲಿ ವಿಶಿಷ್ಟ ಕಾಲಘಟ್ಟ. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಒಟ್ಟಾರೆ ಸಾಂಸ್ಕೃತಿಕ ಬದುಕು ಹಲವು ತಲಸ್ಪರ್ಶಿ ಪ್ರಭಾವಗಳಿಗೆ ಒಳಗಾಯಿತು. ಯುರೋಪಿನಲ್ಲಿ ಹುಟ್ಟಿಕೊಂಡ ಸಮಾನತೆ, ಸ್ವಾತಂತ್ರ್ಯದ ಆಶಯಗಳು ಇಂಗ್ಲೀಷ್ ವಿದ್ಯಾಸಂಸ್ಥೆಗಳಲ್ಲಿ ಅಧ್ಯಯನ ಮಾಡಿ ವಾಪಸ್ಸು ಬಂದ ಸಂವೇದನಾಶೀಲರ ಮೂಲಕ ಇಲ್ಲಿಯ ನೆಲಮೂಲಗಳನ್ನು ತಲುಪಲು ಆರಂಭಿಸಿದವು. ಒಂದು ಹೊಸಬಗೆಯ 'Securalization' ಪ್ರಕ್ರಿಯೆ ಆರಂಭವಾಯಿತು. ಇಂಗ್ಲೀಷ್ ಕಲಿಕೆಯನ್ನು ಒಂದು ಇತ್ಯಾತ್ಮಕ ಮೌಲ್ಯವನ್ನಾಗಿ ಒಪ್ಪಿಕೊಂಡಿದ್ದರಿಂದ ಬಹುಜನ ಸಮಾಜವು ಹಿಂದೆಂದೂ ಕಾಣದ ಬದಲಾವಣೆಗಳಿಗೆ ಒಳಗಾಯಿತು. ಚರಿತ್ರೆಯಲ್ಲಿ ತನ್ನದೇ ಆದ ಹೊಸ 'Space'ನ್ನು ಕಟ್ಟಿಕೊಳ್ಳತೊಡಗಿತು. ಹೊಸಬಗೆಯ

ಸಾಮಾಜಿಕ ಚಲನಶೀಲತೆಯು ಹೊಸ ಸಾಮಾಜಿಕ ಸಂಕೀರ್ಣತೆಯನ್ನು ಸೃಷ್ಟಿಸಿತು. ನೆಲಮೂಲದ ಧ್ವನಿಗಳು ಗಟ್ಟಿಗೊಳ್ಳತೊಡಗಿ, ಒಟ್ಟು ರಾಜಕೀಯ ವ್ಯವಸ್ಥೆಗೆ ಹೊಸ ಭಾಷ್ಯವನ್ನು ಬರೆದವು. ಈ ಪ್ರಕ್ರಿಯೆಯಲ್ಲಿಯೇ ಕಾಲಕ್ರಮೇಣ ಹೊಸ ಹೊಸ ಸಾಮಾಜಿಕ ಟಿಸಿಲುಗಳು ಒಡೆಯಲಾರಂಭಿಸಿದವು. ಇಪ್ಪತ್ತನೇ ಶತಮಾನ ಒಂದು ರೀತಿಯಲ್ಲಿ ನೋಡಿದರೆ ಈ ಹೊಸ ಸಾಮಾಜಿಕ ಟಿಸಿಲುಗಳ ಶತಮಾನ.

ಮೈಸೂರು ಸಂಸ್ಥಾನ ಇದಕ್ಕೆ ಹೊರತಾಗಿರಲಿಲ್ಲ. ಬ್ರಾಹ್ಮಣೇತರ ಜಾತಿ ಸಂಸ್ಥೆಗಳು ಹುಟ್ಟಿಕೊಂಡವು. ಅರಮನೆ ಬ್ರಾಹ್ಮಣೇತರರ ಪರವಾಗಿ ನಿಂತಿತು. ಗಾಂಧೀಜಿಯವರು ಮೈಸೂರನ್ನು ಕೇವಲ ರಾಜಕೀಯವಾಗಿ ಮಾತ್ರವಲ್ಲದೆ ತಾತ್ವಿಕವಾಗಿಯೂ ತಲುಪಲಾರಂಭಿಸಿದರು. ಸ್ವಾತಂತ್ರ್ಯ ಚಳವಳಿಯ ಅರ್ಥವನ್ನು, ಆ ಚಳವಳಿಗೆ ಭಂಗವಾಗದ ರೀತಿಯಲ್ಲಿ, ಬ್ರಾಹ್ಮಣೇತರ, ದಲಿತ, ಕಾರ್ಮಿಕ, ಮಹಿಳಾ ವಿಮೋಚನಾ ಚಳವಳಿಗಳು ಕಂಡು ಕೊಳ್ಳಲಾರಂಭಿಸಿದವು. ಅವರವರ ತತ್‌ಕ್ಷಣದ ನೆಲೆಗಳಿಗೆ ಬದ್ಧರಾಗಿದ್ದುಕೊಂಡೇ, ಅಪ್ಪಟ ದೇಶಭಕ್ತರಾಗಿದ್ದದ್ದು ಆ ಕಾಲದ ವಿಶೇಷ. ಅದು ಒಂದು ಅನನ್ಯ ಪ್ರತಿಭೆ ಎಂದೇ ಭಾವಿಸುತ್ತೇನೆ. ಜನಸಮುದಾಯಗಳನ್ನು ವಿಶೇಷವಾಗಿ ಬ್ರಾಹ್ಮಣೇತರ ಸಮುದಾಯಗಳನ್ನು ಒಂದು ಹೊಸಬಗೆಯ ಕ್ರಿಯಾಶೀಲತೆ ಆವರಿಸಿತು. ಈ ಕ್ರಿಯಾಶೀಲತೆಯ ಮಿತಿಗಳು ಬೇರೆಯದೇ ಆದ ಚರ್ಚೆ. ಆ ಸಂದರ್ಭದ ಮೂಸೆಯಲ್ಲಿಯೇ ಸಮುದಾಯಗಳ 'ಅಸ್ಮಿತೆ' (Identity)ಯ ಪ್ರಶ್ನೆಗಳು ಸಾರ್ವಜನಿಕ ರಂಗಸ್ಥಳವನ್ನು ಪ್ರವೇಶಿಸಿದವು. ಸಾಮಾಜಿಕವಾಗಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವೆ ಸಂಘರ್ಷಾತ್ಮಕ ಹೊಗೆಯಿದ್ದರೂ, ಸ್ವಾತಂತ್ರ್ಯ ಹೋರಾಟದ ತುರ್ತುಗಳು ಅವುಗಳ ನಡುವೆ ಹೊಂದಾಣಿಕೆಯನ್ನು ತಂದವು. 1930ರ ದಶಕದಲ್ಲಿ ಮೈಸೂರಿನಲ್ಲಿ ನಡೆದ ಬೆಳವಣಿಗೆಗಳು ಇದಕ್ಕೆ ನಿದರ್ಶನ. ಈ ಬೆಳವಣಿಗೆಗಳು ಕೇವಲ 'Mathematical' ಆಗಿರಲಿಲ್ಲ. ಸರಳರೇಖೆಯ ಮಾದರಿಯೂ ಆಗಿರಲಿಲ್ಲ. ಈ ಎಲ್ಲ ಬೆಳವಣಿಗೆಗಳನ್ನು ಚರಿತ್ರೆಯ ಒಂದು 'ಮಹಾಪ್ರಕ್ರಿಯೆ'ಯ ರೂಪಕದಲ್ಲಿ ಗ್ರಹಿಸಬೇಕಾಗುತ್ತದೆ. ಮೈಸೂರು ರಾಜ್ಯ ಉಳಿದ ಪ್ರದೇಶಗಳಂತೆಯೆ ಬಹುಮುಖಿ ಸಾಮಾಜಿಕ ಧರೆಗಳ ಸಂಘರ್ಷದ ರಂಗಸ್ಥಳವಾಗಿತ್ತು. ಆ ಕಾಲದ ಸಂಸ್ಕೃತಿ ರೂಪುಗೊಂಡಿದ್ದೇ ಹೀಗೆ. ಬ್ರಾಹ್ಮಣ, ಬ್ರಾಹ್ಮಣೇತರ, ದಲಿತ, ಅಲ್ಪಸಂಖ್ಯಾತ, ರೈತ, ಮಹಿಳೆ,ಕಾರ್ಮಿಕ, ವಿದ್ಯಾರ್ಥಿ ಮುಂತಾದ ಇನ್ನೂ ಅನೇಕ ಬಗೆಯ ಅಸ್ಮಿತೆಗಳು ಟಿಸಿಲೊಡೆಯುತ್ತಿದ್ದ ಕಾಲ. ಈ ಕಾಲಘಟ್ಟದ ಶಿಶು ಶ್ರೀ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿಯವರು. ನಂತರ ಅದನ್ನು ಕಟ್ಟುವ, ರೂಪಿಸುವ ಪಾತ್ರವನ್ನು ನಿರ್ವಹಿಸಿದರು. ಇದರಿಂದಾಗಿಯೆ, ಆ ಕಾಲಘಟ್ಟದ ಚರಿತ್ರೆಯ ಸಂಘರ್ಷಾತ್ಮಕ

ಶಕ್ತಿಗಳ ವಿವಿಧ ಆಯಾಮಗಳನ್ನು ಅರ್ಥ ಮಾಡಿಕೊಳ್ಳಲು ಕೆ.ಸಿ. ರೆಡ್ಡಿಯವರ ಮೂಲಕ ಒಂದು ಆಪ್ತ ಪ್ರವೇಶವನ್ನು ಪಡೆಯಬಹುದು.

ಕೆ.ಸಿ. ರೆಡ್ಡಿಯವರ ಕೌಟುಂಬಿಕ ಮತ್ತು ಶೈಕ್ಷಣಿಕ ಹಿನ್ನೆಲೆಯನ್ನು ಗಮನಿಸಿದರೆ ಅವರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಶ್ರೀಮಂತ ರೈತ ಕುಟುಂಬದಲ್ಲಿ ಬೆಳೆದರೂ ಸೂಕ್ಷ್ಮಸಂವೇದಿ ವಿದ್ಯಾರ್ಥಿಯಾಗಿ ಬೆಳೆಯುವುದನ್ನು ರವಿಯವರು ವಿವರಿಸುತ್ತಾರೆ. ರೆಡ್ಡಿಯವರು ಬೆಂಗಳೂರಿನ ಮಿಶನರಿ ಶಾಲೆಯಲ್ಲಿ ಅಧ್ಯಯನವನ್ನು ಮುಗಿಸಿ ಬಿ.ಎ. ಪದವಿಗೆ ಮದ್ರಾಸಿನ ಪ್ರಸಿದ್ಧ ಪಚ್ಚೆಯಪ್ಪ ಕಾಲೇಜಿನಲ್ಲಿ ಪ್ರವೇಶ ಪಡೆಯುತ್ತಾರೆ. ಇವರು ಮಿಶನರಿ ಶಾಲೆಯಲ್ಲಿ ಓದುತ್ತಿದ್ದಾಗ ಅಲ್ಲಿಯ ಪ್ರಿನ್ಸಿಪಾಲರಾದ ಎಡ್ವರ್ಡ್ ಪಿ. ರೈಸ್ ಅವರು ಇವರ ಪ್ರತಿಭೆಯನ್ನು ಗುರುತಿಸಿ ಒಂದು ಪುಸ್ತಕವನ್ನು ಬಹುಮಾನವನ್ನಾಗಿ ನೀಡುವ ಮೂಲಕ ಇವರ ಬೆನ್ನುತಟ್ಟಿದರು ಎಂಬುದನ್ನು ರವಿಯವರು ದಾಖಲಿಸುತ್ತಾರೆ. [ಕರ್ನಾಟಕದ ಸಂಶೋಧನೆ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಸೇವೆಯನ್ನು ಮಾಡಿದ ರೈಸ್ ಕುಟುಂಬದ ರತ್ನತ್ರಯರಲ್ಲಿ ಇವರು ಒಬ್ಬರು. ಉಳಿದ ಇಬ್ಬರು ಬಿ.ಎಚ್.ರೈಸ್ (ಇವರ ತಂದೆ) ಮತ್ತು ಬಿ.ಎಲ್. ರೈಸ್ (ಇವರ ಸಹೋದರ)]. ಬಿ.ಎ. ತರಗತಿಯಲ್ಲಿ ಬಂಗಾರದ ಪದಕವನ್ನು ಪಡೆದ ಅವರು ಮುಂದೆ ಬಿ.ಎಲ್. ಪದವಿಗಾಗಿ ಮದ್ರಾಸ್ ಲಾ ಕಾಲೇಜನ್ನು ಸೇರುತ್ತಾರೆ. ಉತ್ತಮ ಸ್ಥಾನದೊಂದಿಗೆ ಈ ಪದವಿಯನ್ನೂ ಮುಗಿಸುತ್ತಾರೆ. ತನ್ನ ಕಾಲದ ಅನೇಕ ವಾರಗೆಯವರಂತೆ ಕೆ.ಸಿ. ರೆಡ್ಡಿಯವರೂ ಕೂಡ ಆ ಕಾಲಕ್ಕೆ ಬಿ.ಎ., ಬಿ.ಎಲ್., ಪದವಿಗಳು ತಂದುಕೊಡಬಹುದಾದ ಶ್ರೀಮಂತಿಕೆ ಸ್ಥಾನಮಾನಗಳನ್ನು ಬಿಟ್ಟು ದೇಶಕಟ್ಟುವ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಾರೆ. ಅನೇಕರಂತೆ ಇವರೂ ಕೂಡ ಗಾಂಧೀಜಿ ಪ್ರಣೀತ ಸ್ವಾತಂತ್ರ್ಯ ಚಳವಳಿಯಿಂದ ಪ್ರೇರಣೆಗೊಳ್ಳುತ್ತಾರೆ. ಸ್ವತಃ ಗಾಂಧಿಯವರನ್ನು ಭೇಟಿ ಮಾಡುವ ಅವಕಾಶ ದೊರೆಯುತ್ತದೆ. ಗಾಂಧೀಜಿಯವರು 1927ರ ಏಪ್ರಿಲ್ 20 ರಿಂದ ಜೂನ್ 4ರ ವರೆಗೆ ನಮ್ಮ ನಂದಿಬೆಟ್ಟದಲ್ಲಿ ಆರೋಗ್ಯ ಸುಧಾರಿಸಲು ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭದಲ್ಲಿ ರೆಡ್ಡಿಯವರು ಅವರನ್ನು ಭೇಟಿಯಾದದ್ದು ಅವರ ಬದುಕಿ ಗುರಿಯನ್ನು ಗಟ್ಟಿಗೊಳಿಸಿತು. ಸ್ವಪ್ರಯೋಜನ ನಿಷ್ಠೆ ಅಥವಾ ಕುಟುಂಬ ನಿಷ್ಠೆಯಿಂದ ದೂರ ಸರಿದು ರಾಷ್ಟ್ರನಿಷ್ಠೆಯ ಕಡೆ ತಿರುಗಿದರು. ಗಾಂಧಿಯವರಂತೆ, ಹೋಂ ರೂಲ್ ಚಳವಳಿಯ ರೂವಾರಿಯಾದ ಆನಿಬೆಸೆಂಟರ ಪ್ರಭಾವಕ್ಕೂ ರೆಡ್ಡಿಯವರು ಒಳಗಾಗುತ್ತಾರೆ. ಮದರಾಸಿನಲ್ಲಿ ಪಚ್ಚೆಯಪ್ಪ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದಾಗಲೇ ಸಮಾನ ವಯಸ್ಕ ಸ್ನೇಹಿತ ರೊಡಗೂಡಿ 'ಯುವಜನ ಸಂಘ'ವನ್ನು ಕಟ್ಟುತ್ತಾರೆ. ನಂತರ ಮೈಸೂರಿಗೆ

ಬಂದ ಮೇಲೆ 'ಪ್ರೋಗ್ರೆಸ್ಸೀವ್ ಪಾರ್ಟಿ'ಯನ್ನು ಸೇರಿ ರಾಜಕೀಯ ಸಿದ್ಧಾಂತಗಳನ್ನು ಮತ್ತು ಚಳವಳಿಗಳ ಜೊತೆ ಅನುಸಂಧಾನ ಗೊಳ್ಳುತ್ತಾರೆ. ಈ ಬಗೆಯ ರಾಷ್ಟ್ರೀಯ ಪ್ರೇರಕ ಶಕ್ತಿಗಳಿಂದ ತಾತ್ವಿಕ ಸ್ಫೂರ್ತಿಯನ್ನು ಗಳಿಸಿಕೊಂಡಿದ್ದರ ಫಲವೇ ಇವರು ಹಳೆಯ ಮೈಸೂರು ಸಂಸ್ಥಾನದ ರಾಜಕೀಯ ನಾಯಕತ್ವದ ಅಗ್ರಪಂಕ್ತಿಯಲ್ಲಿರಲು ಸಾಧ್ಯವಾಯಿತು ಎಂದು ರವಿಯವರ ಕೃತಿ ಅನಾವರಣ ಮಾಡುತ್ತದೆ.

ಕೆ.ಸಿ. ರೆಡ್ಡಿಯವರು ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಗಳ ಸದಸ್ಯರಾಗಿ ರೈತರ, ಬ್ರಾಹ್ಮಣೇತರರ ಮತ್ತು ಸೂಕ್ಷ್ಮ ಸಾಮಾಜಿಕ ಸಂವೇದನಾ ವಿಷಯಗಳ ಬಗೆಗೆ ನಿರಂತರ ಒತ್ತಾಸೆ ಪೂರ್ವಕ ಬೆಂಬಲವನ್ನು ನೀಡುತ್ತಾರೆ. ರೈತರ, ಗಣಿ, ಕಾರ್ಮಿಕರ ಸಮಸ್ಯೆಗಳ ಸೂಕ್ಷ್ಮ ವಿಚಾರಗಳನ್ನು ಅವರು ಮಂಡಿಸಿರುವ ಬಗೆ ಇಂದಿಗೂ ಅಭ್ಯಾಸ ಯೋಗ್ಯವಾಗಿವೆ. ಸಂಸದೀಯ ಪಟುವಾಗಿ ಅವರಿಗಿದ್ದ ದೂರದೃಷ್ಟಿಯನ್ನು ಅವರ ಮಾತುಗಳೇ ಸಾದರಪಡಿಸುತ್ತವೆ. ಇಂದಿನ ರಾಜಕೀಯ ನಾಯಕತ್ವ ಗಂಭೀರವಾಗಿ ಗಮನಿಸಬೇಕಾಗಿದೆ. ಅವರ ಮಾತುಗಳ ಹಿಂದಿರುವ ಕಾಳಜಿ ಮತ್ತು ಜರೂರುಗಳನ್ನು ಅರ್ಥ ಮಾಡಿಕೊಂಡ ಅವರ ಸಭಾ ಸಹೋದ್ಯೋಗಿಗಳು ಅವರಿಗೆ ಬೆಂಬಲವನ್ನು ವ್ಯಕ್ತಪಡಿಸುವ ರೀತಿಯನ್ನು ಇಂದಿನ ರಾಜಕೀಯ ಪಟುಗಳು ಅರ್ಥ ಮಾಡಿಕೊಳ್ಳಬೇಕಿದೆ. ವಿಪರೀತ ರಾಜಕೀಯ ಲಾಭ ನಷ್ಟಗಳ 'ನಿಷ್ಠೆ'ಯ ಮೂಸೆಯಿಂದ ಹೊರಡುವ ಇಂದಿನ ರಾಜಕಾರಣಿಗಳ 'ಮಾತುಗಳಿಗೂ', 'ವಚನಗಳಿಗೂ' ಆ ಕಾಲದ ರಾಜಕಾರಣಿಗಳಿಗೂ ತುಂಬಾ ವ್ಯತ್ಯಾಸವಿದೆ. ಅಂದಿನ ಲೆಕ್ಕಾಚಾರಗಳ ತೆಳುಲೇಪಕ್ಕೂ ಮತ್ತು ಇಂದಿನ ಅದರಲ್ಲೇ ಮುಳುಗಿ ತೋಯ್ದ ರೂಪಕ್ಕೂ ವ್ಯತ್ಯಾಸ ಗುರುತಿಸುವುದು ಚರಿತ್ರೆಯ ವಿದ್ಯಾರ್ಥಿಗಳಿಗೆ ಕಷ್ಟವಾಗಲಾರದು. ಇಂದು ನಮ್ಮನ್ನು ಬಾಧಿಸುತ್ತಿರುವುದು ನೆಲಮೂಲದ Colonial ಶಕ್ತಿಗಳು.

ಕೆ.ಸಿ. ರೆಡ್ಡಿಯರು ಇಡಿಯಾಗಿ ತೊಡಗಿಸಿಕೊಂಡ ಕ್ಷೇತ್ರಗಳು ಎರಡು. ಒಂದು ದೇಶೀ ಸಂಸ್ಥಾನ ನೆಲೆಯ ರಾಷ್ಟ್ರೀಯ ಹೋರಾಟ ಮತ್ತೊಂದು ಬ್ರಾಹ್ಮಣೇತರ ಚಳವಳಿ. ನಮ್ಮ ಸಂಸ್ಥಾನ ಸ್ವಾತಂತ್ರ್ಯ ಚಳವಳಿಯು ಕಾವನ್ನು ಇಡಿಯಾಗಿ ಆಹ್ವಾನಿಸಿಕೊಂಡಿತ್ತು. ತಿಲಕ ಮಾದರಿಯ ಮತ್ತು ಗಾಂಧಿ ಮಾದರಿಯ ಚಳವಳಿಗೂ ತೀವ್ರವಾಗಿ ಸ್ಪಂದಿಸುತ್ತಲೇ ತನ್ನ ಸ್ವಾತಂತ್ರ್ಯ ಹೋರಾಟವನ್ನು ಕಟ್ಟಿಕೊಂಡಿತು. ತಿಲಕ ಮಾದರಿಯು ಕ್ರಮೇಣ ಗಾಂಧಿ ಮಾದರಿಯಲ್ಲಿ ಕರಗಿಹೋಯಿತು. ನಮ್ಮ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರೆಡ್ಡಿಯವರು ವಹಿಸಿದ ಮತ್ತು ನಿರ್ವಹಿಸಿದ, ಪಾತ್ರದ

Historiographical ಚಿತ್ರಣ ತುಂಬಾ ತೆಳುವಾದದ್ದು. ಅವರಿಗೆ ಸಿಗಬೇಕಾಗಿದ್ದ 'space' ಪೂರ್ಣವಾಗಿ ಸಿಕ್ಕಿಲ್ಲ. ರವಿಯವರು ತಮ್ಮ ಕೃತಿಯಲ್ಲಿ ಆ ಕೊರತೆಯನ್ನು ನೀಗಿಸಿದ್ದಾರೆ. ಮುಂದೆ ಬರಬಹುದಾದ ಸಂಕಥನಗಳಲ್ಲಿಯೂ ರೆಡ್ಡಿಯವರಿಗೆ ಬಹುಶಃ ನ್ಯಾಯ ದೊರೆಯಬಹುದು. ಹಾಗೆಯೇ ಅವರು ಬ್ರಾಹ್ಮಣೇತರ ಚಳವಳಿಯಲ್ಲಿ ನಿರ್ವಹಿಸಿದ ಪಾತ್ರವೂ ಅವಜ್ಞೆಗೆ ಒಳಗಾಗಿದೆ. ಹಾಗೆ ನೋಡಿದರೆ ಬ್ರಾಹ್ಮಣೇತರ ಚಳವಳಿಯ ಬಗ್ಗೆ ಅನೇಕ ಕೃತಿಗಳು ಬಂದಿವೆ. ಸಾಹುಕಾರ್ ಚೆನ್ನಯ್ಯ, ಎಂ. ಬಸವಯ್ಯ ಮೊದಲಾದವರ ಬಗೆಗೆ ಹೆಚ್ಚು ಒತ್ತನ್ನು ಕಾಣುತ್ತೇವೆ. ರೆಡ್ಡಿಯವರೂ ಈ ಚಳವಳಿಯ ಪೂರ್ಣ ಕ್ರಮೇಣದ ಬೆಂಬಲಿಗರಾಗಿದ್ದರು. 'ಒಕ್ಕಲಿಗರ ಸಂಘ'ದ ಕಾರ್ಯದರ್ಶಿಯವರಾಗಿ ಅವರು ನಿರ್ವಹಿಸಿದ ಪಾತ್ರ ಅನನ್ಯವಾದದ್ದು. ಈ ವಿವರಗಳನ್ನು ರವಿಯವರು ತಮ್ಮ ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ ಕೃತಿಯು ರೆಡ್ಡಿಯವರ ಪತ್ರಿಕಾ ವೃತ್ತಿಯ ಮುಖ, ಕೋಲಾರ ಜಿಲ್ಲಾ ಬೋರ್ಡ್ ಸದಸ್ಯರಾಗಿ, ಅಧ್ಯಕ್ಷರಾಗಿ ಅವರ ಕಾರ್ಯವೈಖರಿ, ಬ್ರಾಹ್ಮಣೇತರ ಚಳವಳಿಯ ರಾಜಕೀಯ ಮುಖವಾಣಿ 'ಪ್ರಜಾಪ್ರತಿನಿಧಿ ಸಭೆ'ಯಲ್ಲಿ ಅವರು ನಿರ್ವಹಿಸಿದ ಜವಾಬ್ದಾರಿ, ನಂತರ ರಾಜಕೀಯ ಸ್ಥಿತ್ಯಂತರಗಳಲ್ಲಿ ಸೃಷ್ಟಿಯಾದ 'ಪ್ರಜಾಪಕ್ಷ' ಮತ್ತು ಅದು ಲೀನಗೊಳ್ಳುವ 'ಪ್ರಜಾ ಸಂಯುಕ್ತ ಪಕ್ಷ' ಮುಂತಾದವುಗಳಲ್ಲಿ ಅವರ ಪಾತ್ರ ಗಾಂಧೀಜಿಯವರ ಹರಿಜನೋದ್ಧಾರ ಚಳವಳಿಯಲ್ಲಿ ತೊಡಗಿಸಿಕೊಳ್ಳುವಿಕೆ ಮುಂತಾದ ಎಲ್ಲವನ್ನೂ ಕಟ್ಟಿಕೊಡುತ್ತದೆ. ಹಾಗೆಯೇ 1947ರಲ್ಲಿ ಮೈಸೂರು ಸಂಸ್ಥಾನದ ಪ್ರಭುತ್ವ ಜವಾಬ್ದಾರಿ ಸರಕಾರವನ್ನು ಜನರಿಗೆ ಕೊಡಲು ನಿರಾಕರಿಸಿದ ಸಂದರ್ಭದಲ್ಲಿ ಹುಟ್ಟಿಕೊಂಡ ಅರಮನೆ ಸತ್ಯಾಗ್ರಹದಲ್ಲಿ ಕೇವಲ ಭಾಗವಹಿಸಿದ್ದು ಮಾತ್ರವಲ್ಲ, ಆ ಚಳವಳಿಯನ್ನು ಮುನ್ನಡೆಸುವ ಚಾಲಕಶಕ್ತಿಗಳಲ್ಲೊಂದಾಗಿ ಸಮಾನ ಮನಸ್ಕರೊಡನೆ ಕೂಡಿ ಹೋರಾಟ ಮಾಡಿದರು ಎಂಬ ವಿವರಗಳು ಓದುಗನನ್ನು ತಟ್ಟುತ್ತವೆ.

ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಸಹಜವಾಗಿಯೇ ಅನೇಕ ಸವಾಲುಗಳನ್ನು ಎದುರಿಸಬೇಕಾಗಿತ್ತು. ರಾಜಕೀಯದ ಮೂಲಸೂತ್ರ ಗೊತ್ತಿದ್ದವರಿಗೆ ಸಹಜವಾಗಿ ಅರ್ಥವಾಗುವ ಅಂಶ – ಒಬ್ಬರಿಗೆ ಒಂದು ಪ್ರಮುಖಸ್ಥಾನ ಸಿಕ್ಕಿದೊಡನೆಯೆ, ಆ ಸ್ಥಾನ ಅನೇಕ ಶತ್ರುಗಳನ್ನು ತಕ್ಷಣಕ್ಕೆ ಸೃಷ್ಟಿಸಿ ಬಿಟ್ಟಿರುತ್ತದೆ. ಆಂತರಿಕ ಶತೃತ್ವಕ್ಕೆ ಅಸೂಯೆಯೆ ಮೂಲ ಕಾರಣವೂ ಆಗಿರುತ್ತದೆ. ಇವುಗಳನ್ನು ತಂದುಕೊಡಲು ರವಿಯವರು ಒಂದಷ್ಟು ಪ್ರಯತ್ನ ಪಡಬೇಕಿತ್ತು ಎಂದೆನಿಸುತ್ತದೆ.

ದೂರದೃಷ್ಟಿಯ ಕಾರ್ಯಯೋಜನೆ ರೂಪಿಸುವ ಬಹುದೊಡ್ಡ ಜವಾಬ್ದಾರಿ ಕೆ.ಸಿ.ರೆಡ್ಡಿ ಅವರ ಮೇಲಿತ್ತು. ನಿರ್ವಸಾಹತೀಕರಣ ಪ್ರಕ್ರಿಯೆಗೆ ಚಾಲನೆಯನ್ನು ಕೊಡಬೇಕಿತ್ತು. ರಾಜ್ಯವ್ಯವಸ್ಥೆಯ ಎಲ್ಲ ಅಂಗಗಳಿಗೂ ಹೊರ ರೂಪಕೊಡಬೇಕಿತ್ತು. ಏಕೀಕರಣ ಪರ–ವಿರೋಧಿ ಬಣಗಳನ್ನು ಎದುರಿಸುವುದು, ಕೋಮುಗಲಭೆಗಳನ್ನು ನಿಯಂತ್ರಿಸುವುದು, ಯುದ್ಧಗಳಿಂದ ಜರ್ಜರಿತವಾದ ಅರ್ಥವ್ಯವಸ್ಥೆಯನ್ನು ಪುನಃಶ್ಚೇತನ ಗೊಳಿಸುವುದು, ವಿಭಜನೆಯಿಂದ ಸೃಷ್ಟಿಯಾದ ನಿರಾಶ್ರಿತರ ಸಮಸ್ಯೆಯನ್ನು ಬಗೆಹರಿಸಿದ್ದು ಹಾಗೂ ದಿವಾನರ ನೇಮಕವನ್ನು ಇತ್ಯರ್ಥಗೊಳಿಸುವುದು, ಆಹಾರ ಸಮಸ್ಯೆಗಳನ್ನು ನಿಭಾಯಿಸುವುದು ಮತ್ತು ತುರ್ತಾಗಿ ರಾಜರ ಖಾಸಗಿ ಸ್ವತ್ತುಗಳ ಸಮಸ್ಯೆಯನ್ನು ಇತ್ಯರ್ಥಗೊಳಿಸುವುದು ತತ್‌ಕ್ಷಣದ ತಲೆನೋವಾದ ಕಾಂಗ್ರೆಸ್ಸಿಗರ ಅಧಿಕಾರ ವ್ಯಾಮೋಹ ಸಮಸ್ಯೆಯನ್ನು ಎದುರಿಸುವುದು ಹಾಗೂ ಅವರನ್ನು ಜೊತೆಯಲ್ಲಿ ಕರೆದೊಯ್ಯುವುದು ಮುಂತಾದವು ಅವರ ಮೇಲಿನ ಭಾರಗಳು. ಇವುಗಳನ್ನು ಎದುರಿಸುವಲ್ಲಿ ಅವರು ತೋರಿದ 'statesmanship'ನ್ನು ರವಿಯವರು ಆಪ್ತವಾಗಿ ವಿವರಿಸುತ್ತಾರೆ.

ರಾಜ್ಯದ ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಿದರು. ಅದು ಅನಿವಾರ್ಯವೂ ಆಗಿತ್ತು. ಅಠಾರ ಕಛೇರಿಯೇ ಸರ್ಕಾರದ ಕಾರ್ಯಸೌಧವಾಗಿತ್ತು. ಹೀಗಾಗಿ ರಾಜಧಾನಿಯನ್ನು ಬೆಂಗಳೂರಿಗೆ ವರ್ಗಾಯಿಸುವುದು ಸಮಂಜಸ ನಿರ್ಧಾರ ವಾಗಿತ್ತು. ಆದರೆ ಹೊಸ ಪ್ರಜಾಸರ್ಕಾರ ಕಾರ್ಯನಿರ್ವಹಿಸಲು ಹೊಸದೊಂದು ಕಟ್ಟಡದ ಅಗತ್ಯವಿತ್ತು. 1951ರ ಜನವರಿ 4 ರಂದು ವಿಧಾನಸಭೆಯ ಒಪ್ಪಿಗೆಯನ್ನು ಪಡೆದು ಹೊಸದಾಗಿ ನಿರ್ಮಿಸಲಾಗುವ ಕಟ್ಟಡಕ್ಕೆ 'ಮೈಸೂರು ಶಾಸನಸಭಾ ಭವನ' ಎಂದು ನಾಮಕರಣವೂ ಮಾಡಲಾಯಿತು. 33 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಎರಡು ಹಂತಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ತೀರ್ಮಾನಿಸ ಲಾಯಿತು. ಆದರೆ ಈ ಕಟ್ಟಡವನ್ನು ಅಮೇರಿಕನ್ ಶೈಲಿಯಲ್ಲಿ ಕಟ್ಟಬೇಕೆಂದದ್ದು ಕೆಂಗಲ್ ಹನುಮಂತಯ್ಯನವರಿಗೆ ಇಷ್ಟವಾಗಿಲ್ಲ ಎಂದು ರವಿ ತಿಳಿಸುತ್ತಾರೆ. ಭಾರತದ ಪ್ರಧಾನಿ ನೆಹರು ಅವರೇ 1951ರ ಜುಲೈ 13ರಂದು ಈ ಕಟ್ಟಡದ ಶಿಲಾನ್ಯಾಸವನ್ನು ನೆರವೇರಿಸಿದರು. ಈಗಲೂ ಈ ಶಿಲಾನ್ಯಾಸ ಶಿಲೆಯನ್ನು ವಿಧಾನಸೌಧದ ಕಟ್ಟಡದ ಮುಂಭಾಗದ ಸ್ತಂಭದಲ್ಲಿ ಕಾಣಬಹುದು. ಈ ಆರಂಭಿಕ ರೂಪುರೇಶೆಯನ್ನು ಆಡಳಿತಾತ್ಮಕವಾಗಿ ವಿನ್ಯಾಸಗೊಳಿಸಿದ ಕೀರ್ತಿ ಕೆ.ಸಿ. ರೆಡ್ಡಿಯವರಿಗೆ ಸಲ್ಲಬೇಕು.

ಇವರ ಆಡಳಿತ ಕಾಲದಲ್ಲಿ ದೇಶವ್ಯಾಪಿ ಸುದ್ದಿಯಾದ ಚಳವಳಿ ಕಾಗೋಡು ಚಳವಳಿ. ರಾಮಮನೋಹರ ಲೋಹಿಯಾ ಅವರ ಮೂಲಕ ರಾಷ್ಟ್ರೀಯ ಮತ್ತು

ಅಂತರ ರಾಷ್ಟ್ರೀಯ ಹಂತದಲ್ಲೂ ಸುದ್ದಿಯಾಯಿತು. ಇದನ್ನು ರೆಡ್ಡಿಯವರು ರಾಜಕಾರಣಿಯಾಗಿಯೇ ನೋಡಿದರೋ ಅಥವಾ ದೂರದೃಷ್ಟಿಯ, ಜನಪರಬದ್ಧತೆಯಿಂದ ನೋಡಿದರೋ ಎಂಬುದನ್ನು ನಿಷ್ಕರ್ಷಿಸಿಲ್ಲ.

ಇಲ್ಲಿಯವರೆಗೂ ಬಂದಿರುವ ಮೈಸೂರು ಚರಿತ್ರೆ ಲೇಖನ ಪರಂಪರೆಯಲ್ಲಿ ಕೆ.ಸಿ. ರೆಡ್ಡಿಯವರಿಗೆ ಸಿಗಬೇಕಾದ ನ್ಯಾಯಬದ್ಧ 'Space' ಸಿಕ್ಕಿದೆಯೆ ಎಂದರೆ ಖಂಡಿತ ಸಿಕ್ಕಿಲ್ಲ. ರಾಜ್ಯದ ಮೊದಲ ಮುಖ್ಯಮಂತ್ರಿ ಎಂಬ ಔಪಚಾರಿಕ ರೂಪದ ಕೀರ್ತಿಬಿಟ್ಟರೆ, ಚರಿತ್ರೆಯ ಪ್ರಮುಖ ಕಾಲಘಟ್ಟವೊಂದು ರೂಪಿಸಿದ ಆಕೃತಿ ಹಾಗೂ ಅದೇ ಕಾಲಘಟ್ಟವನ್ನು ಪ್ರಭಾವಿಸಿದ ಶಕ್ತಿ ಎಂಬ ನಿರ್ಮಿತಿ ಇಲ್ಲಿಯವರೆಗೂ ಆಗಿಲ್ಲ. ಆ ಕೊರತೆಯನ್ನು ನೀಗಿಸುವಲ್ಲಿ ಈ ಕೃತಿಯು ನಮಗೆ ಸಹಾಯವಾಗುತ್ತದೆ. ಮೈಸೂರು ಚರಿತ್ರೆಗೆ ಅರ್ಥಪೂರ್ಣ ಪರಿಪ್ರೇಕ್ಷಗಳನ್ನು ತಂದುಕೊಡಲು ಈ ಬಗೆಯ ಸಂಶೋಧನಾತ್ಮಕ ಕೃತಿಗಳು ಬರುವುದು ಆದಷ್ಟು ಒಳ್ಳೆಯದೆ.

ಈ ಕೃತಿಯನ್ನು ಕನ್ನಡ ಲೋಕಕ್ಕೆ ಕಟ್ಟಿಕೊಟ್ಟ ರವೀಂದ್ರನಾಥ ಅವರು ಅಭಿನಂದನಾರ್ಹರು.

ಡಾ. ಅಶ್ವತ್ಥನಾರಾಯಣ
ಅಸೋಸಿಯೆಟ್ ಪ್ರೊಫೆಸರ್
ಇತಿಹಾಸ ವಿಭಾಗ
ಜ್ಞಾನಭಾರತಿ ಕ್ಯಾಂಪಾಸ್
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು.

ಸ್ಪಂದನ
ಸಹಕಾರ ನಗರ
ಬೆಂಗಳೂರು – 560092
ದಿ : 15-08-2013

ಲೇಖಕರ ಮಾತು

ಭಾರತದ ರಾಷ್ಟ್ರೀಯ ಚಳವಳಿ ಸಮಕಾಲೀನ ವಿಶ್ವ ಇತಿಹಾಸದಲ್ಲಿ ಒಂದು ಮಹತ್ತರವಾದ ಘಟನೆ. ಈ ಚಳವಳಿಯು ಯಾವುದೋ ಒಂದು ಉದ್ದೇಶಕ್ಕಾಗಿ ನಿಯೋಜಿಸಲ್ಪಟ್ಟ ಚಳವಳಿಯಾಗಿರಲಿಲ್ಲ. ಇದು ಒಂದು ನಿರ್ದಿಷ್ಟ ಹಾಗೂ ಸೂಕ್ಷ್ಮದರ್ಶಿ ದೃಷ್ಟಿಯುಳ್ಳದ್ದಾಗಿತ್ತು. ಇದು ಭಾರತದ ವಸಾಹತುಶಾಹಿ ರಾಜ್ಯಗಳ ಸಂಕೀರ್ಣ ಹೊಂದಾಣಿಕೆಯ ಮೇಲೆ ಆಧಾರಿತವಾಗಿತ್ತು. ಇದರ ಆಧಾರಸ್ತಂಭವೇ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್' ಎಂಬ ಪ್ರಾತಿನಿಧಿಕ ಸಂಸ್ಥೆ.

ವಸಾಹತುಶಾಹಿ ಭಾರತದ ಇತಿಹಾಸದಲ್ಲಿ ಮೈಸೂರು ಸಂಸ್ಥಾನ ವಿಶೇಷ ಸ್ಥಾನ ಹೊಂದಿತ್ತು. 20ನೇ ಶತಮಾನದ ಆರಂಭದಲ್ಲಿ ಸಂಸ್ಥಾನದಲ್ಲಿ ರಾಷ್ಟ್ರೀಯ ಚಳವಳಿಯ ಕಾವು ಹುಟ್ಟಲಾರಂಭಿಸಿತು. ಇದಕ್ಕೆ ರಾಜರ ಒಲವು ಇರುವುದನ್ನು ಮನಗೊಂಡು ಜಾಗೃತರಾದ ಬ್ರಿಟಿಷ್ ಆಡಳಿತಗಾರರು ರಾಜರನ್ನು, ರಾಷ್ಟ್ರೀಯ ಐಕ್ಯತೆಯ ಬೆಳವಣಿಗೆಯನ್ನು ತಡೆಯಲು ಮತ್ತು ಹೆಚ್ಚುತ್ತಿರುವ ರಾಷ್ಟ್ರೀಯ ಚಳವಳಿಯನ್ನು ತಡೆಯಲು ಬಳಸಿಕೊಳ್ಳಲಾರಂಭಿಸಿದರು. ಆದರೆ ರಾಷ್ಟ್ರೀಯ ಕಾಂಗ್ರೆಸ್ ರಾಜ್ಯಗಳ ಜನತೆಯ ಹೋರಾಟವನ್ನು ಪ್ರೋತ್ಸಾಹಿಸಿ, ಬೆಂಬಲಿಸುವ ಮೂಲಕ ಜನತೆಯು ರಾಷ್ಟ್ರೀಯ ಚಳವಳಿಯಲ್ಲಿ ಹೆಚ್ಚು ಹೆಚ್ಚಾಗಿ ಸಕ್ರಿಯರಾಗತೊಡಗಿದ ಕಾರಣ ಭಾರತ ಸ್ವಾತಂತ್ರ್ಯಗೊಂಡು ಮೈಸೂರು ಸಂಸ್ಥಾನ, ಮೈಸೂರು ರಾಜ್ಯವಾಗಿ ರೂಪುಗೊಳ್ಳಲು ಕಾರಣವಾಯಿತು. ಈ ಪ್ರಕ್ರಿಯೆಯಲ್ಲಿ ಸುಮಾರು 700(ಏಳುನೂರು)ಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರು ಕರ್ನಾಟಕದಾದ್ಯಂತ ಹುತಾತ್ಮರಾಗಿರುವುದು ಇತ್ತೀಚಿನ ನನ್ನ ಸಂಶೋಧನೆ [DICTIONARY OF MARTYRS : INDIA'S FREEDOM STRUGGLE - 1857-1947] ಯಿಂದ ಕಂಡು ಬಂದಿದೆ. [ಕೇಂದ್ರ ಸರ್ಕಾರದ HUMAN RESOURCE DEVELOPMENT ಇಲಾಖೆ ಪ್ರಾಯೋಜಕತ್ವದಲ್ಲಿ I.C.H.R. ಬೆಂಗಳೂರು ಇಲಾಖೆಗೆ ಸಂಯೋಜಿಸಲಾಗಿದೆ]. ಇದನ್ನು ಸಂಶೋಧಕರು ಹಾಗೂ ಇತಿಹಾಸಕಾರರು ಜಾಗರೂಕತೆಯಿಂದ ಗಮನಿಸಬೇಕು. ಈಗಿನ ಪೀಳಿಗೆಯವರು ಹುತಾತ್ಮರನ್ನು ಗೌರವಿಸಬೇಕು. ಇದು ಈ ಕೃತಿಯ ಆಶಯವು ಆಗಿದೆ.

ರಾಜಕೀಯ, ಆಡಳಿತ ಮತ್ತು ಕೆ.ಸಿ.ರೆಡ್ಡಿ ಎಂಬುದು ನನ್ನ ಪಿಎಚ್.ಡಿ. ಪ್ರೌಢ ಪ್ರಬಂಧ. ಇದರ ಪರಿಷ್ಕೃತ ರೂಪವೇ ಮಹಾನ್ ಸಾಧಕ : ಕೆ.ಸಿ.ರೆಡ್ಡಿ [ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ] ಎಂಬ ಕೃತಿ. [1902–1952]

ಒಬ್ಬ ಮಾರ್ಗದರ್ಶಕರಾಗಿ, ನನ್ನ ಸಂಶೋಧನೆಗೆ ಹಾಗೂ ಬರವಣಿಗೆಗೆ ಪೂರ್ಣ ಪ್ರಮಾಣದ ಸ್ವಾತಂತ್ರ್ಯವನ್ನು ಕೊಟ್ಟಿದ್ದರಲ್ಲದೆ, ಪ್ರೌಢ ಪ್ರಬಂಧದ ಕರಡನ್ನು ತಿದ್ದಿ, ಪ್ರೋತ್ಸಾಹ ನೀಡಿದ್ದರಿಂದಲೇ ಇಂತಹ ಅಪರೂಪದ, ಔಚಿತ್ಯಪೂರ್ಣ ಕೃತಿ ಮೊಟ್ಟ ಮೊದಲ ಬಾರಿಗೆ ಸ್ವಾತಂತ್ರ್ಯ ಬಂದು 67ವರ್ಷಗಳ ನಂತರ, 100ವರ್ಷಗಳ ಹಿಂದಿನ ಇತಿಹಾಸವನ್ನು ಕರ್ನಾಟಕ ರಾಜ್ಯ ಪತ್ರಾಗಾರದಿಂದ ಹೆಕ್ಕಿ ತೆಗೆದು ಸಾಮಾನ್ಯ ಜನತೆಗೂ ಅರ್ಥವಾಗುವ ರೀತಿಯಲ್ಲಿ ರಚಿಸಲು ಕಾರಣರಾದವರು ಡಾ. ಅಶ್ವತ್ಥನಾರಾಯಣ, ಅಸೋಸಿಯೆಟ್ ಪ್ರೊಫೆಸರ್, ಇತಿಹಾಸ ವಿಭಾಗ, ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಅವರಿಗೆ ಈ ಕೃತಿ ಬಿಡುಗಡೆಯೊಂದಿಗೆ ಗೌರವಪೂರ್ವಕ ವಂದನೆಗಳನ್ನು ಅರ್ಪಿಸುತ್ತಿದ್ದೇನೆ. ಹಾಗೂ ಈ ಕೃತಿಗೆ ವಿದ್ವತ್ಪೂರ್ಣವಾದ ಮುನ್ನುಡಿ ಬರೆದು ಆಶೀರ್ವದಿಸಿದ ಅವರಿಗೆ ನನ್ನ ಹೃತ್ಪೂರ್ವಕ ನಮಸ್ಕಾರಗಳು.

ಮೊದಲ ಅಧ್ಯಾಯ – **ಪೀಠಿಕೆ** ಭಾಗವಾಗಿದೆ. ಇದರಲ್ಲಿ ವಸಾಹತು ಭಾರತದ ಸುಮಾರು 600ಕ್ಕೂ ಹೆಚ್ಚು ದೇಶೀಯ ಸಂಸ್ಥಾನಗಳಲ್ಲಿ ಮೈಸೂರು ವಿಸ್ತೀರ್ಣ [29,475 ಚ.ಮೈಲಿ]ದ ದೃಷ್ಟಿಯಿಂದ ಐದನೆಯ ಸ್ಥಾನವನ್ನು, ಜನಸಂಖ್ಯೆ ದೃಷ್ಟಿಯಿಂದ ಎರಡನೆಯ ಸ್ಥಾನವನ್ನು ಪಡೆದಿತ್ತು. 1799ರಲ್ಲಿ ಟಿಪ್ಪುಸುಲ್ತಾನ ಮರಣ ಹೊಂದಿದ್ದರಿಂದ ಬ್ರಿಟಿಷರು ಮೈಸೂರು ಒಡೆಯರಿಗೆ ಷರತ್ತಿನ ಮೇಲೆ ಕೊಟ್ಟ ಒಂದುಭಾಗವೇ ಮೈಸೂರು ಸಂಸ್ಥಾನ, ಇದು 1799–1830ರವರೆಗೂ ಒಡೆಯರ ವಶದಲ್ಲಿತ್ತು. 1831–1881ರವರೆಗೆ ಸು. ಐವತ್ತು ವರ್ಷಗಳ ಕಾಲ ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿತ್ತು. ಪುನಃ 1881–1947ರವರೆಗೂ ಒಡೆಯರ ವಶದಲ್ಲಿತ್ತು ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. 1900–1947ರಲ್ಲಿ ಸಂಸ್ಥಾನದಲ್ಲಿ ನಡೆದ ರಾಷ್ಟ್ರೀಯ ಚಳವಳಿಯ ಬಗ್ಗೆ ವಿದೇಶಿಯ ಬರಹಗಾರರು ಮತ್ತು ದೇಶೀಯ ಬರಹಗಾರರು ತಮ್ಮ ಕೃತಿಗಳ ಮೂಲಕ ಒಂದು ಸ್ಪಷ್ಟ ಚಿತ್ರಣವನ್ನು ಕೊಡಲು ಪ್ರಯತ್ನಿಸಿರುವುದನ್ನು ಹಾಗೂ ಈ ಚಳವಳಿಯನ್ನು ಸಂಸ್ಥಾನದಲ್ಲಿ ಕೆ.ಸಿ.ರೆಡ್ಡಿ ಅವರು ಹಂತ ಹಂತವಾಗಿ ಸಂಘಟಿಸಿ ಹೇಗೆ ಜವಾಬ್ದಾರಿ ಸರ್ಕಾರ ಪಡೆಯಲು ಕಾರಣವಾಯಿತು ಎಂಬುದನ್ನು ಸಾಧ್ಯವಿರುವಷ್ಟು ಮಟ್ಟಿಗೆ ವಸ್ತುನಿಷ್ಠ ನೆಲೆಯಲ್ಲಿ ವಿಶ್ಲೇಷಣೆ ಮಾಡುವುದರ ಮೂಲಕ ಅವರ ಸಾಧನೆಯ ಮೇಲೆ ಮೊದಲ ಬಾರಿಗೆ ಬೆಳಕು ಚೆಲ್ಲಲಾಗಿದೆ.

ಎರಡನೆ ಅಧ್ಯಾಯ – **ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಕೆ.ಸಿ. ರೆಡ್ಡಿ ಪ್ರವೇಶ.** ಈ ಭಾಗದಲ್ಲಿ ಕೆ.ಸಿ. ರೆಡ್ಡಿ ಅವರ ಕೌಟುಂಬಿಕ ಹಿನ್ನೆಲೆ, ಬಾಲ್ಯ, ಶಿಕ್ಷಣ, ಪ್ರಭಾವ ಬೀರಿದ ವ್ಯಕ್ತಿಗಳು, ಮದ್ರಾಸಿನ ರಾಜಕೀಯ ಚಳವಳಿ, ಗಾಂಧೀಜಿ ಅವರ ಭೇಟಿ ನಂತರ ಸಾರ್ವಜನಿಕ ಜೀವನ ಪ್ರವೇಶಿಸಲು ಕೈಗೊಂಡ ತೀರ್ಮಾನ, ಮೈಸೂರು ಪ್ರಜಾಪ್ರತಿನಿಧಿ ಸಭೆ, ಮೈಸೂರು ನ್ಯಾಯವಿಧಾಯಕ ಸಭೆಗಳನ್ನು ಪ್ರವೇಶಿಸಿ ಸಭೆಗಳಲ್ಲಿ ರೈತರ, ಕಾರ್ಮಿಕರ, ದಲಿತರ, ಹೆಣ್ಣುಮಕ್ಕಳ ಹಕ್ಕುಗಳ ಪರವಾಗಿ, ಶಿಶುಹತ್ಯೆ, ಬಾಲ್ಯವಿವಾಹಗಳ ವಿರುದ್ಧವಾಗಿ ಧ್ವನಿ ಎತ್ತುವ ಮೂಲಕ ಪರಿಪೂರ್ಣ ರಾಜಕೀಯ ನಾಯಕರಾಗಿ ಹೊರಹೊಮ್ಮಿರುವುದು ಕಂಡು ಬರುತ್ತದೆ. 'ಹಿಂದೂಪತ್ರಿಕೆ' ಪ್ರೇರಣೆಯಿಂದ 'ಜನವಾಣಿ' ಪತ್ರಿಕೆ ಸಂಪಾದಕರಾಗಿ ರಾಷ್ಟ್ರೀಯ ಚಳವಳಿಗೆ ಜನತೆಯನ್ನು ಅಣಿಗೊಳಿಸಿದ್ದು, ಕೋಲಾರ ಜಿಲ್ಲಾ ಬೋರ್ಡ್‌ನ ಸದಸ್ಯರು, ಅಧ್ಯಕ್ಷರು ಆಗಿ ಕೆ.ಸಿ. ರೆಡ್ಡಿ ಅವರ ಸಾಧನೆಗಳನ್ನು ವಿಶ್ಲೇಷಿಸಲಾಗಿದೆ.

ಮೂರನೆ ಅಧ್ಯಾಯ – **ಬ್ರಾಹ್ಮಣೇತರ ಚಳವಳಿ ಮತ್ತು ಕೆ.ಸಿ.ರೆಡ್ಡಿ.** ಇದು ಮೈಸೂರು ಸಂಸ್ಥಾನದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಇತಿಹಾಸದ ದೃಷ್ಟಿಯಿಂದ ಬಹಳ ಕ್ರಾಂತಿಕಾರಿ ಚಳವಳಿ [1917–1937]. ಈ ಚಳವಳಿಯನ್ನು ಇತಿಹಾಸದಲ್ಲಿ ದಾಖಲಿಸಲು ಯಾವ ವಿದೇಶೀಯ ಸಂಶೋಧಕರು ಹಾಗೂ ದೇಶೀಯ ಸಂಶೋಧಕರು ನೋಡಿರದ, ಬಳಸಿಕೊಳ್ಳದ ಮೂಲ ದಾಖಲೆಗಳಾದ [ವಿಶೇಷವಾಗಿ ಪ್ರಜಾಪಕ್ಷ ಮತ್ತು ಪ್ರಜಾ ಸಂಯುಕ್ತ ಪಕ್ಷ – 1930–1937] ಕರಪತ್ರಗಳು, ಕಿರುಹೊತ್ತಿಗೆಗಳು, ಪ್ರಕಟಣೆಗಳು, ನಡಾವಳಿಗಳು, ಭಿನ್ನವತ್ತಳೆಗಳು, ಮಾನಪತ್ರಗಳು, ಅಧಿವೇಶನಗಳ ಕಿರು ಹೊತ್ತಿಗೆಗಳು, ಪತ್ರಿಕೆಗಳು, ಪೋಲೀಸ್ ವರದಿ, ಗುಪ್ತ ವರದಿಗಳು (C.B. Files), ಆತ್ಮಚರಿತ್ರೆಗಳನ್ನು ಸೂಕ್ತವಾಗಿ ಬಳಸಿಕೊಂಡು ಬ್ರಾಹ್ಮಣೇತರ ಚಳವಳಿಯನ್ನು ಮೊಟ್ಟ ಮೊದಲ ಬಾರಿಗೆ ಹೊಸದಾಗಿ ಕಟ್ಟಿಕೊಡಲಾಗಿದೆ. ಸುಮಾರು 18,000ಕ್ಕೂ ಹೆಚ್ಚು ಹಳ್ಳಿಗಳನ್ನು ಹೊಂದಿದ್ದ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳವಳಿ ಹೇಗೆ ತನ್ನ ರಾಜಕೀಯ ಭದ್ರನೆಲೆಗಟ್ಟನ್ನು ಹೊಂದಿತ್ತು ಎಂಬುದನ್ನು ಆಧಾರಗಳ ಮೂಲಕ ನಿರೂಪಿಸಲಾಗಿದೆ. ಪ್ರಜಾ ಸಂಯುಕ್ತ ಪಕ್ಷ ಮತ್ತು ಕಾಂಗ್ರೆಸ್ ವಿಲೀನ (1937) ಮೈಸೂರು ಸರ್ಕಾರವನ್ನು, ಅದರಲ್ಲೂ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಕೃತಕ ಮಿತೃತ್ವ ಬ್ರಾಹ್ಮಣೇತರ ನಾಯಕರ ಮೇಲಿತ್ತು ಎಂಬುದನ್ನು ಬಯಲು ಮಾಡುವ ಮೂಲಕ ಹಾಗೂ ಕೆ.ಸಿ.ರೆಡ್ಡಿ ಅವರು ಈ ಹೋರಾಟದಲ್ಲಿ ಎಂತಹ ನಿರ್ಣಾಯಕ ಪಾತ್ರ ವಹಿಸಿದ್ದರು ಎಂಬುದನ್ನು ವಿಶ್ಲೇಷಿಸಲಾಗಿದೆ.

ನಾಲ್ಕನೆ ಅಧ್ಯಾಯ – **ಸ್ವಾತಂತ್ರ್ಯ ಹೋರಾಟದ ಸಂಕೀರ್ಣತೆ ಮತ್ತು ಕೆ.ಸಿ. ರೆಡ್ಡಿ.** ಇದು ಈ ಕೃತಿಯ ವಿಶೇಷ ಅಧ್ಯಾಯ. ಭಾರತೀಯ ರಾಷ್ಟ್ರೀಯ ಚಳವಳಿಯ ಪ್ರಭಾವದಿಂದ ಮೈಸೂರು ಸಂಸ್ಥಾನದಲ್ಲಿ ನಡೆದ ಕಾಂಗ್ರೆಸ್ ಚಳವಳಿಯ ಇತಿಹಾಸವನ್ನು ಸೀಮಿತ ಅಧ್ಯಾಯದಲ್ಲಿ ಕಟ್ಟಿಕೊಡುವುದು ಕಷ್ಟಸಾಧ್ಯ. ಈ ಚಳವಳಿಯನ್ನು 1900–1920, 1920–1937 ಮತ್ತು 1937–1947 ಮೂರು ಹಂತಗಳಾಗಿ ವಿಂಗಡಿಸಬಹುದು. 1937ರಲ್ಲಿ ಸಂಸ್ಥಾನದ ಬಹುದೊಡ್ಡ ಬ್ರಾಹ್ಮಣೇತರ ರಾಜಕೀಯ ಪಕ್ಷವಾಗಿದ್ದ ಪ್ರಜಾ ಸಂಯುಕ್ತ ಪಕ್ಷ, ಕಾಂಗ್ರೆಸ್ ಪಕ್ಷದೊಡನೆ ವಿಲೀನಗೊಳ್ಳುವ ಮೂಲಕ ಮೈಸೂರು ಕಾಂಗ್ರೆಸ್ ಹೊಸದಾದ ರಾಜಕೀಯ ಪಕ್ಷವಾಗಿ ಧೃವೀಕರಣಗೊಂಡು ಬಲಗೊಳ್ಳ ತೊಡಗಿತು. ಮುಂದಿನ ಹತ್ತುವರ್ಷಗಳ (1937–1947) ಹೋರಾಟದಲ್ಲಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ದೇಶೀಯ ಸಂಸ್ಥಾನಗಳ ರಾಜಕೀಯ ಹೋರಾಟಗಳ ಬಗ್ಗೆ ತಳೆದಿದ್ದ ವಿಭಿನ್ನ ಧೋರಣೆಗಳನ್ನು ಕೆ.ಸಿ.ರೆಡ್ಡಿ ಅವರು ಬದಲಾಯಿಸುವ ಮೂಲಕ ಸಂಸ್ಥಾನದಲ್ಲಿ ಮೈಸೂರು ಕಾಂಗ್ರೆಸ್‌ನ ಆರು ಅಧಿವೇಶನಗಳನ್ನು ಸಂಘಟಿಸಿ, ಆಯೋಜಿಸಿ ರಾಷ್ಟ್ರೀಯ ಚಳವಳಿಗೆ ಬಲತುಂಬಿದರು. ಹಾಗೂ ಸಂಸ್ಥಾನದಲ್ಲಿ ಮಿರ್ಜಾ ಇಸ್ಮಾಯಿಲ್‌ರ ರಾಜಕೀಯ ಚದುರಂಗದಾಟವನ್ನು ಕೆ.ಸಿ.ರೆಡ್ಡಿ, ಗಾಂಧೀಜಿ ಅವರಿಗೆ ಮನವರಿಕೆ ಮಾಡಿಕೊಟ್ಟು ಕಾಂಗ್ರೆಸ್ ಚಳವಳಿಗೆ ಬಲತಂದರು. ಮೈಸೂರು ಚಲೋ ಚಳವಳಿ ಸಂಘಟಿಸಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಕಾಂಗ್ರೆಸ್ ಪಕ್ಷದ ಮೂಲಕ ಮುನ್ನುಡಿ ಬರೆದರು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಕಾಂಗ್ರೆಸ್‌ನ ಕಾರ್ಯ ಚಟುವಟಿಕೆಗಳು ಹಾಗೂ ಅದರಲ್ಲಿ ಕೆ.ಸಿ. ರೆಡ್ಡಿ ಅವರು ನಿರ್ವಹಿಸಿದ ಜವಾಬ್ದಾರಿ ಸ್ಥಾನವನ್ನು ಮೊದಲ ಬಾರಿಗೆ ಹೊರ ಜಗತ್ತಿಗೆ ಕಾಣುವಂತೆ ಮೂಲ ಆಕರಗಳನ್ನು ಬಳಸಿಕೊಳ್ಳುವ ಮೂಲಕ ವಿಶ್ಲೇಷಿಸಲಾಗಿದೆ.

ಐದನೆ ಅಧ್ಯಾಯ – **ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಕೆ.ಸಿ. ರೆಡ್ಡಿ.** ಕೆ.ಸಿ. ರೆಡ್ಡಿ ಸರ್ಕಾರದ ಆಡಳಿತದ ಸಾಧನೆ ಏನು? ಎನ್ನುವ ಬಗ್ಗೆ ಕರ್ನಾಟಕದ ಜನತೆಗೆ ಈವರೆಗೆ ಗೊತ್ತೆ ಇಲ್ಲ. ತೀವ್ರ ಹೋರಾಟ ಮಾಡಿ ಜವಾಬ್ದಾರಿ ಸರ್ಕಾರ ಪಡೆದ ರಾಜ್ಯದ ಮೊದಲ ಕಾಂಗ್ರೆಸ್ ಸರ್ಕಾರದ ಮಂತ್ರಿಮಂಡಲ ಎಂತಹ ಸಾಧನೆ ಮಾಡಿರಬೇಕೆಂಬ ಕುತೂಹಲ ಜನತೆಗೆ ಇರುವುದು ಸಹಜ. ಈ ಕುತೂಹಲವನ್ನು ತಣಿಸುವ ಕೆಲಸವನ್ನು ಈವರೆಗೆ ಯಾವ ಬರಹಗಾರರು ಮಾಡಿಲ್ಲ. ಇದು ನನ್ನ ಪಾಲಿನ ಅದೃಷ್ಟ. ಕೆ.ಸಿ. ರಡ್ಡಿ ಸರ್ಕಾರ ಎದುರಿಸಿದ ಬಹುಮುಖ್ಯ ಸಮಸ್ಯೆಗಳಲ್ಲಿ ಕೋಮು ಗಲಭೆ ಸಮಸ್ಯೆ, ಪ್ರಾಂತರಚನೆ ಹಾಗೂ ಏಕೀಕರಣ ಸಮಸ್ಯೆ, ಆಹಾರ

ಸಮಸ್ಯೆ, ನಿರಾಶ್ರಿತರ ಸಮಸ್ಯೆ, ಅರಮನೆ ಖಾಸಗಿ ಸ್ವತ್ತುಗಳ ಇತ್ಯರ್ಥ ಸಮಸ್ಯೆ, ಕಾಂಗ್ರೆಸ್ಸಿಗರ ಅಧಿಕಾರ ವ್ಯಾಮೋಹ ಸಮಸ್ಯೆ, ದಿವಾನ್ ಎ.ಆರ್. ಮೊದಲಿಯಾರ್ ನೇಮಕ ಸಮಸ್ಯೆ, ಹೊಸ ಕೈಗಾರಿಕೆಗಳ ಸ್ಥಾಪನಾ ಸಮಸ್ಯೆ, ಮೈಸೂರು ಸೈನ್ಯದ ವಿಲೀನ ಪ್ರಕ್ರಿಯೆ ಸಮಸ್ಯೆ, ಮಂತ್ರಿಮಂಡಲ ಪುನರ್ ರಚನಾ ಸಮಸ್ಯೆ, ಕಾಗೋಡು ರೈತರ ಚಳವಳಿ ಸಮಸ್ಯೆ, ಹೊಸ ಸಂವಿಧಾನ ರಚನಾ ಸಮಸ್ಯೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ಹಾಗೂ ಸಂಪನ್ಮೂಲ ಹಂಚಿಕೆ ಸಮಸ್ಯೆ, ನೀರಾವರಿ ಸಮಸ್ಯೆ, ವಿದ್ಯುಚ್ಛಕ್ತಿ ಉತ್ಪಾದನಾ ಸಮಸ್ಯೆ, ನಿರುದ್ಯೋಗ ನಿವಾರಣಾ ಸಮಸ್ಯೆ, ಕಾರ್ಮಿಕ ಕಲ್ಯಾಣ ಸಮಸ್ಯೆ, ಮುಸ್ಲಿಂರ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಬೇಡಿಕೆ ಸಮಸ್ಯೆ, ನೂತನ ಶಿಕ್ಷಣ ವ್ಯವಸ್ಥೆ ಸಮಸ್ಯೆ, ಬಡತನ ನಿವಾರಣಾ ಸಮಸ್ಯೆ, ವಸತಿಗಳ ನಿರ್ಮಾಣ ಸಮಸ್ಯೆ, ಗ್ರಾಮಾಭಿವೃದ್ಧಿ ಯೋಜನೆ ಅನುಷ್ಠಾನ ಸಮಸ್ಯೆ, ಭಿಕ್ಷುಕರ ಸಮಸ್ಯೆ, ಇತ್ಯಾದಿ. ಆದ್ದರಿಂದ ಯಾವುದೇ ರಾಜ್ಯ ಅಭಿವೃದ್ಧಿಗೊಳ್ಳಬೇಕಾದರೆ ಅಲ್ಲಿ ರಾಜಕೀಯ ಇಚ್ಛಾಶಕ್ತಿ ಮತ್ತು ಸ್ಥಿರತೆ ಅತ್ಯಗತ್ಯ. ಆದರೆ ರಾಜಕೀಯ ಇಚ್ಛಾಶಕ್ತಿಯನ್ನು ಅಡಗಿಸುವ, ಸ್ಥಿರತೆಯನ್ನು ಕದಡುವ ಈ ಮೇಲಿನ ಸಮಸ್ಯೆಗಳನ್ನು ಸವಾಲುಗಳನ್ನಾಗಿ ಸ್ವೀಕರಿಸಿ ಸರ್ಕಾರ ಮಾಡಿರುವ ಸಾಧನೆಗಳನ್ನು ತೆರೆದಿಡುವ ಮೂಲಕ ಕೆ.ಸಿ. ರೆಡ್ಡಿ ಸರ್ಕಾರದ ಮೇಲೆ ಇಲ್ಲಿಯವರೆಗೆ ಹಲವರು "ಏನೂ ಮಾಡೇ ಇಲ್ಲ, ಏನೂ ಸಾಧನೆ ಇಲ್ಲ" ಎಂಬ ಆರೋಪಗಳಿಗೆ ಸುಮಾರು ಅರವತ್ತೇಳು ವರ್ಷಗಳ ನಂತರ ಮೂಲ ಆಕರಗಳ ಗರ್ಭವನ್ನು ಬಳಸಿಕೊಳ್ಳುವ ಮೂಲಕ ಸೂಕ್ತ ಉತ್ತರವನ್ನು ನೀಡಲಾಗಿದೆ.

ಆರನೆ ಅಧ್ಯಾಯ – **ಸಂಸದೀಯ ಪಟುವಾಗಿ ಕೆ.ಸಿ. ರೆಡ್ಡಿ**. ಮೈಸೂರು, ಭಾರತದಲ್ಲಿಯೇ ಅತ್ಯಂತ ದೀರ್ಘಾವಧಿ ಸಂಸದೀಯ ಇತಿಹಾಸ ಹೊಂದಿರುವ ರಾಜ್ಯವಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕೆ.ಸಿ.ರೆಡ್ಡಿ ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಗಳಲ್ಲಿ ಪ್ರಜಾಪಕ್ಷ, ಪ್ರಜಾ ಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್‌ನ ಸದಸ್ಯರು, ಅಧ್ಯಕ್ಷರು ಆಗಿ, ಸುಮಾರು ಐವತ್ತಕ್ಕೂ ಹೆಚ್ಚು ಸರ್ಕಾರಿ ಸಮಿತಿಗಳಲ್ಲಿ ಸದಸ್ಯರಾಗಿ ಸಲ್ಲಿಸಿರುವ ಸೇವೆ ಯಾವುದೇ ಸಂಸದೀಯ ಪಟುವಿನ ಜೀವನದಲ್ಲಿ ಬಹುದೊಡ್ಡ ಮೈಲಿಗಲ್ಲು. ಈ ಮೂಲಕ ಕೆ.ಸಿ.ರೆಡ್ಡಿ ಅವರು ಮೈಸೂರು ಸಂಸ್ಥಾನದ ಜನತೆಗೆ ಸಲ್ಲಿಸಿರುವ ಸೇವೆಯ ಅಗಾಧತೆಯನ್ನು ಅರ್ಥ ಮಾಡಿಕೊಳ್ಳಬೇಕು. ಆಗ ಮಾತ್ರ ಕಲಾಪಗಳಲ್ಲಿನ ಕೆ.ಸಿ.ರೆಡ್ಡಿ ಅವರ ಬೌದ್ಧಿಕವಾದ, ತರ್ಕಬದ್ಧವಾದ, ಸ್ವಾರಸ್ಯಯುತವಾದ, ವಿಚಾರಪೂರ್ಣ ಚರ್ಚೆಗಳನ್ನು ತುಲನಾತ್ಮಕವಾಗಿ ಅವಲೋಕನ ಮಾಡಿದ್ದೆ ಆದರೆ ಇಂದಿಗೂ ಕೂಡ ಹಿಂದಿನ ಚರ್ಚೆಗಳು ಪ್ರಸ್ತುತ

ಎನಿಸಿಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೊಂಡ ನಂತರವೂ ಕೂಡ ಕೆ.ಸಿ.ರೆಡ್ಡಿ ಅವರು ಶಾಸನಸಭೆಗಳಲ್ಲಿ ಚರ್ಚಿಸಿರುವ ವಿಷಯಗಳಿಂದ ಕರ್ನಾಟಕ ರಾಜ್ಯದ ಗಮನ ಸೆಳೆದಿರುವುದು ಕಂಡು ಬರುತ್ತದೆ.

ಅನುಬಂಧಗಳು – ಭಾಷಣಗಳು, ಬಿಡಿಲೇಖನಗಳು ಮತ್ತು ಛಾಯಾಚಿತ್ರಗಳು. ಇದು ಕೆ.ಸಿ. ರೆಡ್ಡಿ ಅವರ ಭಾಷಣಗಳು ಮತ್ತು ಬಿಡಿಲೇಖನಗಳನ್ನು ಬಳಸಿಕೊಂಡಿರುವುದು ಈ ಕೃತಿಗೆ ಔಚಿತ್ಯಪೂರ್ಣ ಎನಿಸಿವೆ. ಏಕೆಂದರೆ ಇವು ಆ ಕಾಲಘಟ್ಟದ ಸರ್ಕಾರದ ಪಥದ ಸ್ಪಷ್ಟಚಿತ್ರಣವನ್ನು ಕೊಡುತ್ತದೆ. ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಕೆ.ಸಿ. ರೆಡ್ಡಿ ಅವರನ್ನು ಬಹಳ ಹತ್ತಿರದಿಂದ ಬಲ್ಲಂತಹ ಜಿ.ಎಸ್. ಗುಪ್ತ, ಹೆಚ್.ಕೆ. ವೀರಣ್ಣಗೌಡ, ಸರ್ದಾರ್ ವೆಂಕಟರಾಮಯ್ಯ ಅವರು ರೆಡ್ಡಿ ಅವರ ವ್ಯಕ್ತಿತ್ವ, ಬುದ್ಧಿವಂತಿಕೆ, ಸಮರ್ಪಣಾ ಪ್ರವೃತ್ತಿ, ಸಂಘಟನಾ ಚಾತುರ್ಯ, ಮುಂದಾಲೋಚನೆ ದೃಢಮನಸ್ಸು, ದೇಶಭಕ್ತಿ, ಕಾರ್ಯಕ್ಷಮತೆ, ಸ್ವಾತಂತ್ರ್ಯ ಹೋರಾಟದಲ್ಲಿ ಸಲ್ಲಿಸಿದ ಸೇವೆಯನ್ನು ತಮ್ಮ ಲೇಖನಗಳ ಮೂಲಕ ಕರ್ನಾಟಕದ ಜನತೆಗೆ ತೆರೆದಿಡುವ ಮೂಲಕ ಮಹದುಪಕಾರ ಮಾಡಿದ್ದಾರೆ.

ಇದರ ಜೊತೆಗೆ ಸುಮಾರು ಐವತ್ತಕ್ಕೂ ಹೆಚ್ಚು ಅಪೂರ್ವ ಛಾಯಾಚಿತ್ರಗಳನ್ನು ಈ ಕೃತಿ ಹೊಂದಿದೆ. ಇವು ಕೆ.ಸಿ. ರೆಡ್ಡಿ ಅವರ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ಮೈಸೂರು ರಾಜಕೀಯ ಇತಿಹಾಸವನ್ನು ಕಟ್ಟಿಕೊಡುವ ಸಂಗ್ರಹಯೋಗ್ಯ ಛಾಯಾಚಿತ್ರಗಳಾಗಿವೆ. ಇವುಗಳ ಸಂಗ್ರಹವೇ ಒಂದು ಸಾಹಸ/ಇತಿಹಾಸ.

ಈ ಕೃತಿಯು ಹಲವಾರು ಹೊಸ ವಿಚಾರಗಳಿಗೆ ದಾರಿ ಮಾಡಿಕೊಡುವುದರ ಜೊತೆಗೆ ಮಾರ್ಗದರ್ಶಕವೂ ಆಗಿದೆ.

ನಾನು ಪಿಎಚ್.ಡಿ. ಪದವಿಗಾಗಿ ಸಂಶೋಧನೆ ಪ್ರಾರಂಭಿಸಿದ ದಿನದಿಂದಲೂ ನನ್ನನ್ನು ಪ್ರೋತ್ಸಾಹಿಸುತ್ತಿರುವ ಪ್ರೀತಿಯ ಗುರುಗಳಾದ ಡಾ.ಎಸ್. ಚಂದ್ರಶೇಖರ್, ಡಾ. ಎಂ. ಜಮುನ, ಮುಖ್ಯಸ್ಥರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಡಾ.ಎಸ್. ಷಡಕ್ಷರಯ್ಯ, ಡಾ.ಎಸ್. ಷೇಕ್‌ಮಸ್ತಾನ್ ಅವರಿಗೆ ನನ್ನ ಮನಃಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನೆಗೆ ಸಂಬಂಧಿಸಿದಂತೆ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಕೆ.ಸಿ. ರೆಡ್ಡಿ ಅವರ ಸಮಕಾಲೀನರು ಹಾಗೂ ಒಡನಾಡಿಗಳಾದ ಸುಮಾರು ಮೂವತ್ತೈದಕ್ಕೂ ಹೆಚ್ಚು ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಸಂದರ್ಶನವನ್ನು ಮಾಡಿದ್ದೇನೆ. ಇವರು ಕೊಟ್ಟ ಹಲವಾರು ಅಮೂಲ್ಯ

ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ನನ್ನ ಈ ಕೃತಿಯಲ್ಲಿ ಬಳಸಿಕೊಂಡಿದ್ದೇನೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ನನ್ನ ಸಂಶೋಧನಾ ಕಾರ್ಯಕ್ಕೆ ಅಪಾರ ಪ್ರೋತ್ಸಾಹ ನೀಡಿದ ಕೆ.ಸಿ. ರೆಡ್ಡಿ ಅವರ ಅಣ್ಣ ವೆಂಕಟರಾಮರೆಡ್ಡಿ ಅವರ ಪುತ್ರರಾದ ಕ್ಯಾಸಂಬಳ್ಳಿಯ ಶ್ರೀ ಕೆ.ವಿ. ವೆಂಕಟಕೃಷ್ಣಾರೆಡ್ಡಿ, ಶ್ರೀಮತಿ ಚಂದ್ರಮಣಿ ವೆಂಕಟಕೃಷ್ಣಾರೆಡ್ಡಿ, ಕೆ.ಸಿ. ರೆಡ್ಡಿ ಅವರ ಹೆಂಡತಿ ಸರೋಜಮ್ಮನವರ ತಮ್ಮ ಡಾ.ಎಚ್.ಜಿ.ವಿ. ರೆಡ್ಡಿ, ಶ್ರೀಮತಿ ರುಕ್ಮಿಣಿ ಎಚ್.ಜಿ.ವಿ. ರೆಡ್ಡಿ ಅವರು ಅಮೂಲ್ಯ ಛಾಯಾಚಿತ್ರಗಳನ್ನು ನೀಡಿ ಸಹಕರಿಸಿದ್ದಾರೆ. ಇವರ ಕುಟುಂಬದವರಿಗೆ ಮನಃಪೂರ್ವಕ ಧನ್ಯವಾದಗಳು.

ಸದಾ ನನ್ನ ಶ್ರೇಯಸ್ಸನ್ನು ಬಯಸುವ ಪ್ರೊ.ಕೆ. ಮಲ್ಲಯ್ಯ, ಡಾ. ಅಶ್ವತ್ಥನಾರಾಯಣ, ಡಾ. ಲಲಿತ ಅಶ್ವತ್ಥನಾರಾಯಣ, ಶ್ರೀ ಕೆ.ಜಿ. ಗೋಪಾಲಕೃಷ್ಣ, ಡಾ. ಶ್ಯಾಮಲ ಗೋಪಾಲಕೃಷ್ಣ, ಡಾ. ಗೋವಿಂದಶೆಟ್ಟಿ, ಶ್ರೀಮತಿ ಮಮತ ಗೋವಿಂದಶೆಟ್ಟಿ, ಡಾ. ಎಂ.ಜಿ. ಮಂಜುನಾಥ, ಶ್ರೀಮತಿ ಮಾಲತಿ ಮಂಜುನಾಥ, ಶ್ರೀಮತಿ ಶಶಿಕಲಾ ರವಿಕಾಂತೇಗೌಡ, ಪ್ರೊ.ಅರುಣ ಕುಮಾರಿ, ಪ್ರೊ. ಶ್ರೀರಾಮ್, ಕುಶಾಲಶಾಸ್ತ್ರಿ, ಪ್ರೊ.ಎಮ್.ಎಸ್. ಸುರೇಶ್. ಪ್ರೊ. ಸಿ. ಮರಿರಾಜ್, ಪ್ರಾಂಶು ಪಾಲರು, ಸ.ಪ್ರ.ದ. ಕಾಲೇಜು, ಹೊಸಕೋಟೆ, ಕೆ.ಎಂ. ಶಾಂತಕುಮಾರ್, ವೈ.ಎಚ್. ನಾರಾಯಣಸ್ವಾಮಿ, ಪ್ರೊ.ವಿ. ನಾರಾಯಣಸ್ವಾಮಿ, ಪ್ರೊ. ಸಿದ್ದಪ್ಪ, ಡಾ.ಕೆ.ಜಿ. ಗೋಪಾಲ ಕೃಷ್ಣರಾವ್, ಪ್ರೊ. ಕರುಣಾಕರಬಾಬು, ಪ್ರೊ.ಎನ್. ನರಹರಿ, ಪ್ರೊ. ಮುನಿಯಪ್ಪ, ಪ್ರೊ.ಎಸ್. ನಾಗರಾಜ್, ಪ್ರೊ.ಎಮ್.ಕೆ. ರಮೇಶ್, ಪ್ರೊ. ಇಮ್ತಿಯಾಜ್ ಅಹಮದ್, ಪ್ರೊ. ಸಿ.ಕೃಷ್ಣಪ್ಪ, ಡಾ.ಎಂ. ರಾಮಚಂದ್ರಗೌಡ, ಪ್ರೊ.ಎ.ವಿ. ರೆಡ್ಡಿ, ಪ್ರೊ. ಆಂಜನಪ್ಪ, ಹೆಚ್.ಕೆ. ಮಂಜುನಾಥ, ಪ್ರೊ. ಎಚ್.ಎನ್. ಶ್ರೀನಿವಾಸ್, ಡಾ. ಪಂಪಾದೇವಿ, ಎಮ್.ಎಸ್. ಪ್ರಸನ್ನಕುಮಾರ್, ಡಾ. ಶ್ರೀನಿವಾಸನಾಯಕ್, ಡಾ.ಡಿ.ವಿ. ಪರಮಶಿವಮೂರ್ತಿ, ಡಾ. ಹೆಚ್. ವೆಂಕಟೇಶಪ್ಪ, ಪ್ರೊ.ಸಾಂಬಾಜಿರಾವ್, ಡಾ.ಕೆ.ಆರ್. ಗಣೇಶ್, ಪ್ರೊ. ಕನಕತಾರಾ, ಡಾ. ದೇವರಕೊಂಡಾರೆಡ್ಡಿ, ಜಿ.ಕೆ. ದೇವರಾಜಸ್ವಾಮಿ, ಡಾ. ಮೋಹನಕುಂಟಾರ್, ಕೆ.ಎಲ್. ರಾಜಶೇಖರ್, ಪ್ರೊ.ಡಿ.ಕೆ. ಶಶಿಕುಮಾರ್, ಪ್ರೊ.ಬಿ.ಆರ್. ದೇವರಾಜ್, ಡಾ. ಜಿ.ಸಿ. ನಾಗೇಂದ್ರ ಕುಮಾರ್, ಡಾ. ಅಶೋಕ್ ರಂಜೆರೆ, ಡಾ. ಪದ್ಮಾರಂಜೆರೆ, ಫೋಟೋ ಕೃಷ್ಣ, ಡಿ.ಎಸ್. ಮಂಜುನಾಥ, ಐ.ಎಫ್. ಮುನಾವರ್, ಪಿ. ಹರಿಕುಮಾರ್, ಜಯಪ್ರಕಾಶ್ ಮುಂತಾದ ಆತ್ಮೀಯರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಸನ್ಮಾನ್ಯ ಶ್ರೀ ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ಅವರು ಈ ಪುಸ್ತಕದ ಪ್ರಕಟಣೆಗಾಗಿ ರೂ. 86,000/– (ಎಂಬತ್ತಾರು ಸಾವಿರ ರೂಪಾಯಿ)ಗಳನ್ನು ಕೊಟ್ಟಿದ್ದಾರೆ. ಅವರಿಗೆ ನನ್ನ ಹೃದಯಪೂರ್ವಕ ವಂದನೆಗಳು.

ಡಾ. ಶ್ರೀನಿವಾಸಲು, ನಿರ್ದೇಶಕರು, ದೈಹಿಕ ಶಿಕ್ಷಣ, ಸ.ಪ್ರ.ದ. ಕಾಲೇಜು, ಹೊಸಕೋಟೆ ಇವರಿಗೆ ವಿಶೇಷ ವಂದನೆಗಳು.

ನನ್ನ ಸಂಶೋಧನಾ ಕಾರ್ಯದ ಸಂದರ್ಭದಲ್ಲಿ ಸಹಕರಿಸಿದವರು

ಕಂಚಿ ವರದಯ್ಯ, ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ, ವಿಧಾನಸೌಧ (ವಿಕಾಸಸೌಧ) ಬೆಂಗಳೂರು, ಇತರೇ ಅಧಿಕಾರಿಗಳಾದ ಟಿ.ಇ. ಮಲ್ಲಿಕಾರ್ಜುನಪ್ಪ (ನಿವೃತ್ತಿ) ಡಾ. ಅಂಬುಜಾಕ್ಷಿ ಸಿದ್ಧಲಿಂಗಸ್ವಾಮಿ, ಎಂ.ಬಿ. ಮಹದೇವಸ್ವಾಮಿ, ಕೆ. ಕೃಷ್ಣಾಚಾರ್, ಎಸ್. ರಮಾ, ಸಯದ್ ಶಬನ ಅಪ್‌ರೋಜ್, ಸಿಬ್ಬಂದಿ ವರ್ಗದವರಾದ ಎಚ್.ಎ. ಬಾಬು, ಪಿ. ಸತ್ಯವತಿ, ರಮೇಶ್ ಎಲ್. ಪಾಟೀಲ್, ಬಿ.ಎಸ್. ಉದಯಶಂಕರ್, ಎಚ್.ವಿ. ನಾರಾಯಣಪ್ಪ, ಕೆ. ನಾರಾಯಣಬಾಬು, ವಿ. ರಮೇಶ್, ಎಂ. ರೋಹಿಣಿ, ಡಿ. ಬಾಲಸುಬ್ರಮಣಿ, ಎಂ. ಪ್ರಭಾಕರ್, ಬಿ.ಎಸ್. ರಾಮಯ್ಯ, ಗೌರಿಶಂಕರ್, ಆರ್. ರಾಮಚಂದ್ರ, ವೈಕುಂಠ ಚನ್ನಕೃಷ್ಣ, ಸಿ. ಸುಸೈರಾಜ್, ಜೆ. ಮೋಹನ್‌ರಾಜ್, ಎಸ್.ಎನ್ ಮುಕುಂದ, ಬೈಯಣ್ಣ, ಸೈಯದ್‌ಗೌಸ್, ಹನುಮಂತ, ವೆಂಕಟಮ್ಮ ಅವರುಗಳಿಗೆ ಧನ್ಯವಾದಗಳು.

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ, ವಿಧಾನಸೌಧ, ಬೆಂಗಳೂರು ಹಾಗೂ ಶಾಸಕರ ಭವನ ಗ್ರಂಥಾಲಯ ಅಧಿಕಾರಿ ಶ್ರೀಮತಿ ಅನಸೂಯ ಎನ್. ದೇವಗಿರಿ, ಸಿಬ್ಬಂದಿ ವರ್ಗದವಾದ ಟಿ.ಆರ್. ವೆಂಕಟರಾಂ, ಜೆ.ಎಲ್. ಲೋಕೇಶ್ವರ್, ಅಶೋಕ್ ನರಗುಂದ್, ವಿ. ಮಂಜುನಾಥ, ಸಂತೋಷ್, ಕೆ. ಮಹಂತಪ್ಪ, ಶ್ರೀಮತಿ ಮೀನಾಕ್ಷಿ, ನಂಜುಂಡಸ್ವಾಮಿ, ಶಾಂತಕುಮಾರ, ಲಕ್ಷ್ಮಣ್, ಅಶ್ವತ್ಥ್, ಐ.ಸಿ.ಹೆಚ್.ಆರ್.ನ ಡಾ.ಎಸ್.ಕೆ. ಅರುಣಿ, ಉಪ ನಿರ್ದೇಶಕರು, ಬೆಂಗಳೂರು, ಸಿಬ್ಬಂದಿವರ್ಗ ಕೆ. ಸಂಗಪ್ಪ, ಸಹಾಯಕ ಗ್ರಂಥಪಾಲಕರು, ಕೆ.ಎನ್. ಪರಿಮಳ, ಎನ್.ಎಸ್. ಬಾಬು, ಸಿ. ಸೊಣ್ಣಪ್ಪ, ಟಿ.ವಿ. ಮಂಗಳಮ್ಮ, ಮಿಥಿಕ್ ಸೊಸೈಟಿ ಗ್ರಂಥಾಲಯ ಬೆಂಗಳೂರಿನ ಬಿ.ಕೆ. ಶ್ರೀನಿವಾಸ್, ಶ್ರೀಮತಿ ಪ್ರಫುಲ್ಲರಾವ್, ಶ್ರೀಮತಿ ವಸಂತ ರಾಮಲಿಂಗಪ್ಪ, ಪಿ. ಜಯಸಿಂಹ, ಕುಶಲಕುಮಾರ್, ಟಿ.ಎಸ್. ಮಂಜುಳ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಗ್ರಂಥಾಲಯ,

ಬೆಂಗಳೂರು, ಡಿ.ವಿ.ಜಿ. ಗ್ರಂಥಾಲಯ, ಕೋಲಾರ, ಕನ್ನಡ ಭವನ ಗ್ರಂಥಾಲಯ, ಬೆಂಗಳೂರು, ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು ಅವರಿಗೆ ಧನ್ಯವಾದಗಳು.

ಇಷ್ಟು ದೊಡ್ಡ ಗ್ರಂಥವನ್ನು ತಪ್ಪಿಲ್ಲದಂತೆ ಅಚ್ಚುಕಟ್ಟಾಗಿ ಬೆರಳಚ್ಚು ಮಾಡಿದ ಜೀವನ್ ಡಿ.ಟಿ.ಪಿ. ಸೆಂಟರ್‌ನ ಶ್ರೀಮತಿ ಕೆ.ಸಿ. ರಾಧ ಮುನಿಸಿದ್ದಪ್ಪ ಅವರಿಗೂ ಹಾಗೂ ಸುಂದರವಾಗಿ ಮುದ್ರಣ ಮಾಡಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರಿಗೂ ಹಾಗೂ ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನನ್ನ ಎಲ್ಲ ಕಾರ್ಯಗಳಿಗೂ ಪ್ರೇರಣೆಯಾಗಿರುವ ಸದಾ ನನ್ನ ಏಳಿಗೆಯನ್ನೇ ಬಯಸುವ ನನ್ನ ತಾಯಿ ಶ್ರೀಮತಿ ಎ. ಶಾಂತಮ್ಮ, ತಂದೆ ಶ್ರೀ ಆರ್. ವೆಂಕಟಾಚಲಪತಿ, ಅಣ್ಣ ಆರ್.ವಿ. ಮಂಜುನಾಥ, ತಮ್ಮಂದಿರಾದ ಆರ್.ವಿ. ವಿಶ್ವನಾಥ, ಆರ್.ವಿ. ರಾಜೇಶ್ ಹಾಗೂ ಬಾವಂದಿರಾದ ಶ್ರೀ ಹೆಚ್.ಆರ್. ರವಿಶಂಕರ್, ಶ್ರೀಮತಿ ಭಾರತಿ ರವಿಶಂಕರ್, ಶ್ರೀ ಬಿ. ಶಂಕರ್, ಶ್ರೀಮತಿ ಆರತಿ ಶಂಕರ್ ಹಾಗೂ ನನ್ನ ಕುಟುಂಬದ ಎಲ್ಲರಿಗೂ ಧನ್ಯವಾದಗಳು.

ಡಾ.ಆರ್.ವಿ. ರವೀಂದ್ರನಾಥ
ಇತಿಹಾಸ ಉಪನ್ಯಾಸಕರು
ಸ.ಪ್ರ.ದ. ಕಾಲೇಜು
ಹೊಸಕೋಟೆ
ಬೆಂಗಳೂರು ಜಿಲ್ಲೆ.

ಲಕ್ಷ್ಮೀನಾರಾಯಣ ನಿಲಯ
ಧರ್ಮರಾಯ ದೇವಾಲಯದ ಹತ್ತಿರ
ಕಠಾರಿಪಾಳ್ಯ, ಕೋಲಾರ – 563 101

ಕೆ.ಸಿ. ರೆಡ್ಡಿ ಜೀವನದ ಹೆಗ್ಗುರುತುಗಳು
(1902–1976)

05.05.1902	ಜನನ ರಾಜಪೇಟೆ, ಕುಪ್ಪಂ ತಾಲ್ಲೂಕು, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.
ತಂದೆ	ಶ್ರೀ ಬಿ. ವೆಂಕಟರೆಡ್ಡಿ ಕ್ಯಾಸಂಬಳ್ಳಿ, ಕೋಲಾರ ಜಿಲ್ಲೆ.
ತಾಯಿ	ಶ್ರೀಮತಿ ಗಂಗೋಜಮ್ಮ, ರಾಜಪೇಟೆ, ಕುಪ್ಪಂ, ಚಿತ್ತೂರು ಜಿಲ್ಲೆ.
ಪ್ರಾಥಮಿಕ ಮತ್ತು ಮಾಧ್ಯಮಿಕ	ನರ್ಸರಿ ಲೋಯರ್ ಅಂಡ್ ಹೈಯರ್ ಪ್ರೈಮರಿ ಸ್ಕೂಲ್, ಕೆ.ಜಿ.ಎಫ್., ಕೋಲಾರ ಜಿಲ್ಲೆ.
1914	7ನೇ ತರಗತಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ.
1915	8ನೇ ತರಗತಿ 'ಲಂಡನ್ ಮಿಷನ್ ಹೈಸ್ಕೂಲ್' ಬೆಂಗಳೂರು
1916–18	ಸಹಾಯಕ ಕಾರ್ಯದರ್ಶಿ, ಒಕ್ಕಲಿಗರ ಸಂಘ, ಬೆಂಗಳೂರು
1918	ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಇಡೀ ಮೈಸೂರು ಸಂಸ್ಥಾನಕ್ಕೆ ನಾಲ್ಕನೆಯ ರ್‍ಯಾಂಕ್ ಪಡೆದರು. E.C.P.S. ಗೆ ಸರ್ಕಾರದಿಂದ ಅನುಮತಿ ಹಾಗೂ ತಿಂಗಳಿಗೆ 10 ರೂ.ನಂತೆ ಮೆರಿಟ್ ಸ್ಕಾಲರ್ ಶಿಪ್ ಪಡೆದರು.
1918	ಕೆ.ಸಿ.ರೆಡ್ಡಿ ಅವರ ತಂದೆ ಬಿ. ವೆಂಕಟರೆಡ್ಡಿ ಮರಣ ಹೊಂದಿದರು.
1918–26	ಡಾ.ಅನಿಬೆಸೆಂಟ್, ಖ್ಯಾತ ವಿದ್ವಾಂಸರು, ಥಿಯೋಸಾಫಿಕಲ್ ಸೊಸೈಟಿ ಮುಖ್ಯಸ್ಥರು, ಅವರ ಪರಿಚಯ ಮತ್ತು ಸೂಕ್ತಮಾರ್ಗ ದರ್ಶನದಲ್ಲಿ ಕೆ.ಸಿ. ರೆಡ್ಡಿಯವರ ಬೆಳವಣಿಗೆ. (ಮದ್ರಾಸ್)
1924	ಬಿ.ಎ., ಪದವೀಧರ, ಪಚ್ಚೆಯಪ್ಪ ಕಾಲೇಜು, ಮದ್ರಾಸ್
1924	ಬಿ.ಎ., ಪದವಿಯಲ್ಲಿ 'ರಾಜಾ ರಾಮಸ್ವಾಮಿ ಮೊದಲಿಯಾರ್' ಬಂಗಾರದ ಪದಕ ಪಡೆದರು.

1918–24	ಪ್ರಧಾನ ಕಾರ್ಯದರ್ಶಿ, ಯುವಜನ ಸಂಘ ಸ್ಥಾಪನೆ, ಪಚ್ಚಿಯಪ್ಪ ಕಾಲೇಜು, ಮದ್ರಾಸ್.
1926	ಬಿ.ಎಲ್., ಸ್ನಾತಕೋತ್ತರ ಪದವಿ, ಮದ್ರಾಸ್–ಲಾ–ಕಾಲೇಜು, ಮದ್ರಾಸ್.
1926–27	ಜಸ್ಟೀಸ್ ಸೋಮಯ್ಯ, ಮದ್ರಾಸ್, ಇವರ ಬಳಿ ಕೆಲವು ಕಾಲ ವಕೀಲ ವೃತ್ತಿ ತರಬೇತಿ.
1927	ಪ್ಲೋರ್‌ಮಿಲ್ ಸ್ಥಾಪನೆ, ಕ್ಯಾಸಂಬಳ್ಳಿ, ಕೆ.ಜಿ.ಎಫ್, ಕೋಲಾರ ಜಿಲ್ಲೆ.
1927	ಕೋಲಾರದಲ್ಲಿ ವಕೀಲ ವೃತ್ತಿ ಆರಂಭ.
1927	ಕೌಸಲ್ಯಮ್ಮ (ಮೊದಲನೆಯ ಹೆಂಡತಿ) ಮತ್ತು ಕೆ.ಸಿ. ರೆಡ್ಡಿ ಮದುವೆ
1927	ಮಹಾತ್ಮಾಗಾಂಧೀಜಿ ಅವರನ್ನು ಕೆ.ಸಿ. ರೆಡ್ಡಿಯವರು ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟದಲ್ಲಿ ಪ್ರಥಮ ಭೇಟಿ. ಇದು ಮೈಸೂರು ಸಂಸ್ಥಾನದ ರಾಜಕೀಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಬೆಳವಣಿಗೆ ಘಟ್ಟ.
1927	ಶ್ರೀಮತಿ ಕೌಸಲ್ಯಮ್ಮ ಕೆ.ಸಿ. ರೆಡ್ಡಿ (ಇನ್‌ಫ್ಲೂಯಿನ್ ಜಾ ಜ್ವರ) ಅವರ ಮರಣ. 30–11–1927
1928	ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಪ್ರೋಗ್ರೇಸ್ ಅಸೋಸಿಯೇಷನ್ ಸೇರ್ಪಡೆ.
1929	ಪ್ರಜಾಮಿತ್ರ ಮಂಡಲಿ ಪಕ್ಷ ಸೇರ್ಪಡೆ
1930	'ಪ್ರಜಾಪಕ್ಷ'ದ ಸ್ಥಾಪಕ ಸದಸ್ಯರು. ಮೈಸೂರು ಸಂಸ್ಥಾನ.
1930–33	ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು.
1930–32	ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು
1930–34	'ಪ್ರಜಾಪಕ್ಷ'ದ ಕಾರ್ಯಕಾರಿ ಮಂಡಲಿಯ ಪ್ರಮುಖ ಸದಸ್ಯರು.
1930–38	ಸದಸ್ಯರು, ರಿಯಾಸತ್ ಹಿಂದೀ ಪ್ರಚಾರ ಸಮಿತಿ.
1932	ಅಧ್ಯಕ್ಷರು, ಚಿತ್ರದುರ್ಗ ಜಿಲ್ಲೆಯ ರೈತರ ಸಮ್ಮೇಳನ.
1932	ಅಧ್ಯಕ್ಷರು, ಕೋಲಾರ ಜಿಲ್ಲೆಯ ರೈತರ ಸಮ್ಮೇಳನ.

1932–34	ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು.
1933	'ಪ್ಲೀಡರ್' ಪರೀಕ್ಷೆಯಲ್ಲಿ ತೇರ್ಗಡೆ, ಬೆಂಗಳೂರು ವಿಭಾಗ.
1933	ಅಧ್ಯಕ್ಷರು, 'ಕೋಲಾರ ಜಿಲ್ಲಾ ರೈತರ ಮಹಾಸಭೆ' ಬಂಗಾರಪೇಟೆ, ಕೋಲಾರ ಜಿಲ್ಲೆ.
1933	ಮೈಸೂರು ನ್ಯಾಯ ವಿಧಾಯಕ ಸಭೆಯಲ್ಲಿ ಪ್ರಜಾಪಕ್ಷದ ನಾಯಕನಾಗಿ ಕಾರ್ಯನಿರ್ವಹಿಸಿದರು.
1933	'ಪ್ರಜಾಮತ' ವಾರಪತ್ರಿಕೆ ಮೈಸೂರು ಸಂಸ್ಥಾನದಲ್ಲಿ ಪ್ರಕಟಣೆಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದರು.
1933–34	ಅಧ್ಯಕ್ಷರು, ಕೋಲಾರ ಜಿಲ್ಲಾ ಹಿಂದಿ ಪ್ರಚಾರ ಸಭಾ, ಕೋಲಾರ.
1933–34	ಅಧ್ಯಕ್ಷರು, ನಿಮ್ನ ವರ್ಗದವರ ವಿದ್ಯಾರ್ಥಿ ನಿಲಯ, ಕೋಲಾರ.
1933–34	ಅಧ್ಯಕ್ಷರು, ಕೋಲಾರ ಜಿಲ್ಲಾ ಹರಿಜನ ಸೇವಕ ಸಂಘ.
1933–36	ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು.
1934	ಸರೋಜಮ್ಮ (ಎರಡನೆಯ ಹೆಂಡತಿ) ಮತ್ತು ಕೆ.ಸಿ. ರೆಡ್ಡಿ ಮದುವೆ. [26–08–1934]
1934	ಪ್ರಜಾಮಿತ್ರ ಮಂಡಲಿ ಮತ್ತು ಪ್ರಜಾಪಕ್ಷಗಳು ವಿಲೀನಗೊಂಡು 'ಪ್ರಜಾ ಸಂಯುಕ್ತ ಪಕ್ಷ' ಸ್ಥಾಪನೆಯಲ್ಲಿ ಪ್ರಮುಖ ಪಾತ್ರ.
1933–36	ಕೋಲಾರ ಜಿಲ್ಲಾ ಬೋರ್ಡ್ ಸದಸ್ಯರಾಗಿ ಮೊದಲ ಬಾರಿ ಆಯ್ಕೆ.
1933–36	ಅಧ್ಯಕ್ಷರು, ಕೋಲಾರ ಜಿಲ್ಲಾ ಬೋರ್ಡ್ ಮೊದಲ ಬಾರಿ ಆಯ್ಕೆಗೊಂಡರು.
1933–36	ಅಧ್ಯಕ್ಷರು, ಕೋಲಾರ ಜಿಲ್ಲಾ ಸ್ಕೌಟ್ ಸ್ಥಾಪಕರು ಹಾಗೂ ಸದಸ್ಯರು.
1934–36	ಮೈಸೂರು ನ್ಯಾಯವಿಧಾಯಕ ಸಭೆ ಸದಸ್ಯರು.
1934	ಮಹಾತ್ಮಗಾಂಧೀಜಿಯವರ 'ಹರಿಜನ ಕಲ್ಯಾಣ ನಿಧಿ'ಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ವಿದುರಾಶ್ವತ್ಥದಲ್ಲಿ ಕೋಲಾರ

	ಜಿಲ್ಲಾ ಬೋರ್ಡ್ ಹಾಗೂ ಗೌರಿಬಿದನೂರು ಪುರಸಭೆ ವತಿಯಿಂದ ಕೆ.ಸಿ. ರೆಡ್ಡಿ ಅಧ್ಯಕ್ಷತೆಯಲ್ಲಿ ರೂ. 560 ಅರ್ಪಿಸಿದರು.
1934	ಅಧ್ಯಕ್ಷರು, ಕೋಲಾರ ಜಿಲ್ಲಾ ಬೋರ್ಡ್‌ನಿಂದ 'ಚಿಂತಾಮಣಿ ತಾಲ್ಲೂಕಿನ ತಳಗವಾರದಲ್ಲಿ 'ರೇಷ್ಮೆ ಬಿತ್ತನೆ ಕೋಠಿ' ಸ್ಥಾಪಿಸಿದರು.
1934	ಅಧ್ಯಕ್ಷರು, ಕೋಲಾರ ಜಿಲ್ಲಾಬೋರ್ಡ್‌ನಿಂದ ಗೌರಿಬಿದನೂರಿನ ಹೊಸೂರಿನಲ್ಲಿ 'ಖಾದಿ ಕೇಂದ್ರ ಸ್ಥಾಪನೆ' ಮಾಡಿದರು.
1934–37	ಅಧ್ಯಕ್ಷರು, ಪ್ರಜಾ ಸಂಯುಕ್ತ ಪಕ್ಷ, ಮೈಸೂರು ಸಂಸ್ಥಾನ.
1935	ಅಧ್ಯಕ್ಷರು, ಒಕ್ಕಲಿಗರ ಸಮ್ಮೇಳನ.
1935	ಅಧ್ಯಕ್ಷರು, ಪ್ರಜಾ ಸಂಯುಕ್ತ ಪಕ್ಷದ ಮೊದಲನೆಯ ಅಧಿವೇಶನ, ಹಾಸನ.
1936	ದೆಹಲಿಯಲ್ಲಿ ನಡೆದ 'ಅಖಿಲ ಭಾರತ ಸ್ಥಳೀಯ ಸರ್ಕಾರಗಳ ಸಮ್ಮೇಳನ' ದಲ್ಲಿ ಭಾಗವಹಿಸಿದ್ದರು. ಇದರ ಸದಸ್ಯತ್ವ ಕೋಲಾರ ಜಿಲ್ಲಾ ಬೋರ್ಡ್ ಪಡೆಯಿತು.
1936	ಮಹಾತ್ಮ ಗಾಂಧೀಜಿಯವರು 'ದಕ್ಷಿಣ ಭಾರತ ಹರಿಜನ ನಿಧಿ' ಸಂಗ್ರಹಕ್ಕಾಗಿ ಪ್ರವಾಸ ಕೈಗೊಂಡು ಚಿಕ್ಕಬಳ್ಳಾಪುರ ಜಿಲ್ಲೆ ನಂದಿಬೆಟ್ಟದಲ್ಲಿ ತಂಗಿದ್ದಾಗ ಕೆ.ಸಿ.ರೆಡ್ಡಿಯವರು ಗಾಂಧೀಜಿಯವರ ಮನವೊಲಿಸಿ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಪ್ರವಾಸ ಮಾಡಿಸಿ ಹರಿಜನ ಕಲ್ಯಾಣ ನಿಧಿಗೆ ರೂ.1,600ನ್ನು ಅರ್ಪಿಸಿದರು.
1936	ಕೋಲಾರದಲ್ಲಿ ನಡೆದ ಹನ್ನೊಂದನೆ 'ಮೈಸೂರು ರಾಜ್ಯಮಟ್ಟದ ಮಹಿಳಾ ಸಮ್ಮೇಳನ'ಕ್ಕೆ ಹಣದ ನೆರವು ನೀಡಿ ಯಶಸ್ವಿಗೆ ಕಾರಣರಾದರು.
1936	ಕೋಲಾರದಲ್ಲಿ 'ಕೋಲಾರ ಜಿಲ್ಲಾ ಮಹಿಳಾ ಸಮಾಜ'ದ ಸ್ವಂತ ಕಟ್ಟಡ ಹೊಂದಲು ನೆರವಾದರು.
1936–37	ಕೋಲಾರ ಜಿಲ್ಲಾ ಬೋರ್ಡ್ ಸದಸ್ಯರಾಗಿ ಎರಡನೆಯ ಬಾರಿ ಅಯ್ಕೆಗೊಂಡರು.

1936–37 ಅಧ್ಯಕ್ಷರು, ಕೋಲಾರ ಜಿಲ್ಲಾ ಬೋರ್ಡ್‌ಗೆ ಎರಡನೆಯ ಬಾರಿ ಆಯ್ಕೆಗೊಂಡರು.

1936–37 ಚಿಕ್ಕಬಳ್ಳಾಪುರದಲ್ಲಿ 'ಹರಿಜನ ಕಾಲೋನಿ' ಸ್ಥಾಪನೆ.

1937 ಅಧ್ಯಕ್ಷರು, ಸ್ವಾಗತ ಸಮಿತಿ, ಪ್ರಜಾ ಸಂಯುಕ್ತ ಪಕ್ಷದ ಎರಡನೆಯ ಅಧಿವೇಶನ, ಕೋಲಾರ.

1937 ಅಧ್ಯಕ್ಷರು, ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ, ಪ್ರಜಾ ಸಂಯುಕ್ತ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ.

1936–38 ಶ್ರೀ ನರಸಿಂಹರಾಜ ಆಸ್ಪತ್ರೆ (S.N.R.) ಹಾಗೂ ಹೆರಿಗೆ ಆಸ್ಪತ್ರೆ ಸ್ಥಾಪನೆ, ಕೋಲಾರ.

1936–37 ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು. (ರಾಜೀನಾಮೆ)

1937 ಅಧ್ಯಕ್ಷರು, ಕೋಲಾರಜಿಲ್ಲಾ ಬೋರ್ಡ್, 1937ರ ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಿದರು.

1937–47 ಅಧ್ಯಕ್ಷರು, ಹರಿಜನ ವಿದ್ಯಾರ್ಥಿ ನಿಲಯ, ಬಂಗಾರಪೇಟೆ, ಕೋಲಾರ ಜಿಲ್ಲೆ.

1937 ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘದ ಕಾರ್ಯಕಾರಿ ಮಂಡಲಿಯ ಪ್ರಮುಖ ಸದಸ್ಯರು.

1937 ಪ್ರಜಾ ಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್ ಬೋರ್ಡ್ ಎರಡು ಪಕ್ಷಗಳು ವಿಲೀನವಾಗಲು ಬಹುಮುಖ್ಯ ಪಾತ್ರವಹಿಸಿದರು.

1937 ಜೈಲುವಾಸ (ಮೊದಲ) ಮೈಸೂರು.

1937–38 ಅಧ್ಯಕ್ಷರು, ಮೈಸೂರು ಕಾಂಗ್ರೆಸ್ ಬೋರ್ಡ್.

1937 'ಜನವಾಣಿ' ಪತ್ರಿಕೆ ಸಂಪಾದಕರಾಗಿ ಏಳು ತಿಂಗಳು ಕಾಲ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು.

1937–38 ಅಧ್ಯಕ್ಷರು, ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ.

1937–52 ಕೆ.ಸಿ. ರೆಡ್ಡಿ ಅವರು ಕಾರ್ಯಕಾರಿ ಸಮಿತಿ ಸದಸ್ಯರು, ಮೈಸೂರು ಕಾಂಗ್ರೆಸ್.

1938	ಅಧ್ಯಕ್ಷರು, ಅಖಿಲ ಮೈಸೂರು ಕಾಂಗ್ರೆಸ್ ಬೋರ್ಡ್ ಸಮ್ಮೇಳನ, ಚಿತ್ರದುರ್ಗ.
1938	'ಮೈಸೂರು ಕಾಂಗ್ರೆಸ್' ಪಕ್ಷ ಸ್ಥಾಪನೆಯಲ್ಲಿ ಅತ್ಯಂತ ಪ್ರಮುಖಪಾತ್ರ.
1938	ಗೌರವ ಕಾರ್ಯದರ್ಶಿ, ಮೈಸೂರು ಕಾಂಗ್ರೆಸ್ ಪಕ್ಷ.
1938	ಅಧ್ಯಕ್ಷರು, ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ.
1938	ಮೈಸೂರು ಕಾಂಗ್ರೆಸ್‌ನ ಮೊದಲ ಅಧಿವೇಶನ ಶಿವಪುರ ಧ್ವಜ ಸತ್ಯಾಗ್ರಹ ಸಂದರ್ಭದಲ್ಲಿ ಜೈಲುವಾಸ (ಎರಡನೆ) 3 ತಿಂಗಳು 20 ದಿವಸ.
1938–40	ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು, ಮೈಸೂರು ಕಾಂಗ್ರೆಸ್ ಪಕ್ಷ.
1939	ಜೈಲುವಾಸ (ಮೂರನೆ) ಕೆ.ಜಿ.ಎಫ್. ಕೋಲಾರ ಜಿಲ್ಲೆ.
1940	ಅಧ್ಯಕ್ಷರು, ಕೋಲಾರ ಜಿಲ್ಲಾ ಭೂ ಅಡಮಾನ ಬ್ಯಾಂಕ್, ಕೋಲಾರ.
1940	'ಲೀಗಲ್ ಪ್ರಾಕ್ಟಿಷನರ್ ಆಕ್ಟ್' ಪ್ರಕಾರ ನ್ಯಾಯಾಧೀಶರಾದ ಸರ್.ಡಿ. ಅರ್ಸಿರ್ರೈಲಿ ಅವರು ಕೆ.ಸಿ.ರೆಡ್ಡಿ ಅವರ ವಕೀಲ ವೃತ್ತಿ ಸನ್ನದನ್ನು ರದ್ದು ಮಾಡಿದರು.
1940	ಗಾಂಧೀಜಿಯವರ ಅಣತೆಯಂತೆ ಸಂಸ್ಥಾನದ ರಾಜಕೀಯ ವಿದ್ಯಮಾನಗಳನ್ನು ಕೂಲಂಕುಷವಾಗಿ ವಿವರಿಸಲು ವಾರ್ಧಾ ಆಶ್ರಮಕ್ಕೆ ಮೈಸೂರು ಕಾಂಗ್ರೆಸ್ ಪಕ್ಷ ಕಳುಹಿಸಿತು.
1941–45	ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು.
1941–45	ಅಧ್ಯಕ್ಷರು, ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ.
1942	ಸೆನಟ್ ಸದಸ್ಯರಾಗಿ ಮೈಸೂರು ವಿಶ್ವವಿದ್ಯಾಲಯದಿಂದ ಆಯ್ಕೆ
1942	ಅಧ್ಯಕ್ಷರು, ಚಾಂಪಿಯನ್ ರೀಫ್ ಮೈನ್ಸ್ ಲೇಬರ್ ಅಸೋಸಿಯೇಷನ್, ಕೆ.ಜಿ.ಎಫ್., ಕೋಲಾರ ಜಿಲ್ಲೆ.
1938–42	ಅಧ್ಯಕ್ಷರು, ಅಜಾದ್ ಯೂತ್‌ಲೀಗ್, ಕೆ.ಜಿ.ಎಫ್, ರಾಬರ್ಟ್‌ಸನ್‌ಪೇಟೆ, ಕೋಲಾರ ಜಿಲ್ಲೆ.

1938–42 ಅಧ್ಯಕ್ಷರು, ಕೆ.ಸಿ.ಆರ್. ಯೂತ್‌ಲೀಗ್, ಕೆ.ಜಿ.ಎಫ್, ರಾಬರ್ಟ್‌ಸನ್‌ಪೇಟೆ, ಕೋಲಾರ ಜಿಲ್ಲೆ.

1938–42 ಅಧ್ಯಕ್ಷರು, ಟಿಳಕ್ ವಾಲಿಬನ್‌ಲೀಗ್, ಕೆ.ಜಿ.ಎಫ್, ರಾಬರ್ಟ್‌ಸನ್‌ಪೇಟೆ, ಕೋಲಾರ ಜಿಲ್ಲೆ.

1942 ಜೈಲುವಾಸ (ನಾಲ್ಕು) ಕ್ವಿಟ್ ಇಂಡಿಯಾ ಚಳವಳಿ 16 ತಿಂಗಳ ಕಾಲ ಜೈಲು ವಾಸ.

1944–45 ಕೆ.ಸಿ. ರೆಡ್ಡಿ, ಅಖಿಲ ಭಾರತ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ ಕಾರ್ಯಕಾರಿ ಮಂಡಲಿ ಸದಸ್ಯರಾಗಿ ಚುನಾಯಿತರಾದರು.(A.I.S.P.C.)

1945 ಸೆನೆಟ್ ಸದಸ್ಯರಾಗಿ ಮೈಸೂರು ವಿಶ್ವವಿದ್ಯಾಲಯದಿಂದ ಆಯ್ಕೆ.

1945 ಮೈಸೂರು ಸರ್ಕಾರ ಸಂಸ್ಥಾನದಲಿಲ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶದಿಂದ ಕೆ.ಸಿ. ರೆಡ್ಡಿ ಅವರನ್ನು ತನ್ನ ಪ್ರತಿನಿಧಿಯನ್ನಾಗಿ ಬ್ರಿಟನ್ನಿಗೆ ಕಳುಹಿಸಿಕೊಟ್ಟಿತ್ತು.

1945–46 'ಪ್ಯಾರಿಸ್'ನಲ್ಲಿ ನಡೆದ 'ಅಂತರಾಷ್ಟ್ರೀಯ ಗಣಿ ಕಾರ್ಮಿಕರ ಸಮ್ಮೇಳನ'ದಲ್ಲಿ ಭಾರತದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು.

1946 ಅಖಿಲ ಭಾರತ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನ (A.I.S.P.C.)ದ ಪ್ರತಿನಿಧಿಯಗಿ ಕೆ.ಸಿ. ರೆಡ್ಡಿ ಲಂಡನ್‌ಗೆ ಭೇಟಿ ನೀಡಿದರು.

1945–49 ಮೈಸೂರು ನ್ಯಾಯವಿಧಾಯಕ ಸಭೆ ಸದಸ್ಯರು.

1945–49 ಅಧ್ಯಕ್ಷರು, ಮೈಸೂರು ನ್ಯಾಯವಿಧಾಯಕ ಸಭೆ ಮೈಸೂರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ.

1945 ಪ್ಯಾನಲ್ ಚೇರ್‌ಮನ್, ಮೈಸೂರು ನ್ಯಾಯವಿಧಾಯಕ ಸಭೆ.

1946–47 ಅಧ್ಯಕ್ಷರು, ಮೈಸೂರು ಕಾಂಗ್ರೆಸ್ ಪಕ್ಷ.

1946 ಅಧ್ಯಕ್ಷರು, ಮೈಸೂರು ಕಾಂಗ್ರೆಸ್, ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರೊಡನೆ "ರಾಜಕೀಯ

	ಸುಧಾರಣೆ" ಬಗ್ಗೆ ಚರ್ಚಿಸಲು ಆಯ್ಕೆ ಮಾಡಿತು.
1946	ಅಧ್ಯಕ್ಷರು, ಆರನೆಯ ಮೈಸೂರು ಕಾಂಗ್ರೆಸ್ ಅಧಿವೇಶನ, ಸುಭಾಷ ನಗರ, ಬೆಂಗಳೂರು.
1947	ಅಧ್ಯಕ್ಷರು, ಮೈಸೂರು ನಗರದ ಟೌನ್‌ಹಾಲ್‌ನಲ್ಲಿ ಮೈಸೂರು ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಭೆ ನಡೆಯಿತು.
1947 ಆ. 15	ಭಾರತಕ್ಕೆ ಸ್ವಾತಂತ್ರ್ಯ ಬಂದ ಐತಿಹಾಸಿಕ ದಿನ.
1947	ಪ್ರಥಮ ಸರ್ವಾಧಿಕಾರಿ, ಮೈಸೂರು ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ಬಹುಮತದಿಂದ ಆಯ್ಕೆ ಮಾಡಿತು.
1947	ಅಧ್ಯಕ್ಷರು, ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ನಡೆದ ಮೈಸೂರು ಕಾಂಗ್ರೆಸ್ ಪಕ್ಷದ ಸಮ್ಮೇಳನ ನಡೆಯಿತು.
1947	ಅಧ್ಯಕ್ಷರು, 'ಮೈಸೂರು ಚಲೋ' ಐತಿಹಾಸಿಕ ಚಳವಳಿ. 42 ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.
1947	ಮೈಸೂರು ಮಹಾರಾಜ ಜಯ ಚಾಮರಾಜ ಒಡೆಯರ್ ಹಾಗೂ ಸರ್ವಾಧಿಕಾರಿ ಕೆ.ಸಿ. ರೆಡ್ಡಿಯವರ ನಡುವೆ ನಡೆದ ಒಪ್ಪಂದದಂತೆ 'ಇನ್ಸ್‌ಸ್ಟ್ರುಮೆಂಟ್ ಆಫ್ ಆಕ್ಸೇಷನ್'ಗೆ ಸಹಿ ಮಾಡಲಾಯಿತು.
1947	ಸರ್ವಾಧಿಕಾರಿ ಕೆ.ಸಿ.ರೆಡ್ಡಿ ಹಾಗೂ ದಿವಾನ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ನಡುವೆ ಐತಿಹಾಸಿಕ ಒಪ್ಪಂದಕ್ಕೆ ಸಹಿ ಮಾಡಲಾಯಿತು.
1947	ಅಧ್ಯಕ್ಷರು, ಆಚಾರ್ಯ ಕೃಪಲಾನಿ ಮತ್ತು ಶ್ರೀಮತಿ ಸುಚೇತ ಕೃಪಲಾನಿ ಅವರಿಗೆ ಬೆಂಗಳೂರಿನಲ್ಲಿ 'ಕಾಂಗ್ರೆಸ್ ಪಕ್ಷದ ನಿಧಿ'ಗೆ ರೂ. 10,223 ವಂತಿಗೆ ಅರ್ಪಿಸಿದರು.
1930–1947	ಕೆ.ಸಿ.ರೆಡ್ಡಿ ಅವರು ಎಂ.ಆರ್.ಎ. ಹಾಗೂ ಎಂ.ಎಲ್.ಸಿ. ಸದಸ್ಯರಾಗಿದ್ದ ಅವಧಿಯಲ್ಲಿ ಸು. 50ಕ್ಕೂ ಹೆಚ್ಚು ಸರ್ಕಾರದ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ.
24–10–1947	ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ. (ಜವಾಬ್ದಾರಿ ಸರ್ಕಾರ ಸ್ಥಾಪನೆ)
1947 ನ. 1	"**ಮೈಸೂರು ಬಿಡುಗಡೆಯ ದಿನ**"ವನ್ನು ಮೊದಲ ಬಾರಿಗ ರಾಜ್ಯದಾದ್ಯಂತ

ಆಚರಣೆ ಮಾಡಲಾಯಿತು.

1947–50 ಕೆ.ಸಿ. ರೆಡ್ಡಿ ಮೈಸೂರು ರಾಜ್ಯದ ಅಭಿವೃದ್ಧಿಗಾಗಿ "ತ್ರೈವಾರ್ಷಿಕ ಯೋಜನೆ" ರೂಪಿಸಿ ಜಾರಿಗೆ ತಂದಿದ್ದರು.

1947–52 ದಲಿತ ವರ್ಗದವರಿಗೆ ವಸತಿ ಕಲ್ಪಿಸಲು ಗೃಹ ನಿರ್ಮಾಣ (15,000 ಮನೆಗಳು)ಕ್ಕಾಗಿ ಒಂದು ಕೋಟಿ ರೂ. ವೆಚ್ಚ ಮಾಡಿದ್ದಾರೆ.

1947–52 ಇಂಡಸ್ಟ್ರಿಯಲ್ ಕಾರ್ಪೋರೇಷನ್ ಸ್ಥಾಪನೆ, ಮೈಸೂರು ರಾಜ್ಯ.

1947–52 ರೇಯಾನ್ ಕಾರ್ಖಾನೆ (ಬಟ್ಟೆ ಕೈಗಾರಿಕೆ) ಸ್ಥಾಪನೆ ಮೈಸೂರು ರಾಜ್ಯ.

1947–52 ಸೈಕಲ್ ಕಾರ್ಖಾನೆ ಸ್ಥಾಪನೆ, ಮೈಸೂರು ರಾಜ್ಯ.

1947–52 ಅಸಿಟಿಕ್ ಆಸಿಡ್ ದ್ರಾವಕ ಕಾರ್ಖಾನೆ ಸ್ಥಾಪನೆ, ಮೈಸೂರು ರಾಜ್ಯ.

1947–48 ಹಂಗಾಮಿ ಅಧ್ಯಕ್ಷರು, ಮೈಸೂರು ರಾಜ್ಯದ ಹೊಸ ರಾಜ್ಯಾಂಗ ರಚನಾ ಸಭೆಯ ಪ್ರಥಮ ಅಧಿವೇಶನ ಬೆಂಗಳೂರಿನ ಪುಟ್ಟಣಚೆಟ್ಟಿ ಪುರಭವನದಲ್ಲಿ ನಡೆಯಿತು.

1948 ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡಲಾಯಿತು.

1948 I.T.I.(ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್)ಸ್ಥಾಪನೆ, ಬೆಂಗಳೂರು, ಮೈಸೂರು ರಾಜ್ಯ.

1948 ಅಧ್ಯಕ್ಷರು, ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನ, ಬೀರೂರು.

1948–49 ಮೈಸೂರಿನಲ್ಲಿ "ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ಅಂಡ್ ರಿಸರ್ಚ್ ಇನ್ಸ್ಟಿಟ್ಯೂಟ್"(C.F.T.R.I.) ಸ್ಥಾಪನೆಗೆ ಕಾರಣರಾದರು.

1948 ಅ 1 ಕೆ.ಸಿ. ರೆಡ್ಡಿ ಸರ್ಕಾರ ಎಲ್.ಐ.ಸಿ. ಯೋಜನೆಯನ್ನು ಮೈಸೂರು ರಾಜ್ಯದಾದ್ಯಂತ ಪ್ರಥಮ ಬಾರಿಗೆ ಜಾರಿಗೆ ತಂದಿತು.

1948 ನ.26 ಕೆ.ಸಿ.ರೆಡ್ಡಿ ಅವರು ಮಾಲೂರಿನಲ್ಲಿ 'ಕಸ್ತೂರಿ ಶಿಶು ವಿಹಾರ ಮತ್ತು ಮಹಿಳಾ ಸಮಾಜ' ಕಟ್ಟಡದ ಅಸ್ತಿಭಾರ ಶಿಲೆ ಪ್ರತಿಷ್ಠಾಪನೆ ಮಾಡಿದರು.

1947–50 ಕೆ.ಸಿ. ರೆಡ್ಡಿ ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರು.

1948–52 ಅಧ್ಯಕ್ಷತೆ, ಭಾರತದ ಪ್ರಧಾನಿ ಜವಹರಲಾಲ್ ನೆಹರು "ಭಾರತ ಸರ್ಕಾರದ ಆಹಾರ ಪೌಷ್ಠಿಕಾಂಶ ಪ್ರಾಯೋಗಿಕ ಕೇಂದ್ರದ ವ್ಯವಸ್ಥೆಯ

	ಬಗ್ಗೆ ಸಲಹೆ ನೀಡಲು ಸಮಿತಿ ನೇಮಕ ಮಾಡಿದರು.
1948–49	ಅಧ್ಯಕ್ಷತೆ, ಕೇಂದ್ರ ಆಹಾರ ಸಮಿತಿಯ ಜಂಟಿ ಸಮಿತಿ ಸಭೆ ನಡೆಯಿತು.
1949	ಮಹಾತ್ಮಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಮೈಸೂರುರಾಜ್ಯ.
1949	ಅಧ್ಯಕ್ಷರು, ಭಾರತೀಯ ಸೈನಿಕರ ಮಂಡಲಿ, ಬೆಂಗಳೂರು.
1950–52	ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು.
1950	ಅಧ್ಯಕ್ಷರು, ಅಸ್ಸಾಂನಲ್ಲಿ ನಡೆದ ಭೂಕಂಪನದಲ್ಲಿ ನೊಂದ ಜನರಿಗೆ 'ಮುಖ್ಯಮಂತ್ರಿಗಳ ಅಸ್ಸಾಂ ಪರಿಹಾರ ನಿಧಿ' ಸ್ಥಾಪನೆ. ಸು. 3,66,268 ರೂಪಾಯಿಗಳಿಗೂ ಹೆಚ್ಚು ಹಣವನ್ನು ಸಂಗ್ರಹಿಸಿ ಕೊಟ್ಟರು.
1950–51	ಭಾರತ ಸರ್ಕಾರದ ಪ್ರಪ್ರಥಮ 'ವನ ಮಹೋತ್ಸವ' ಬಹುಮಾನ ಮೈಸೂರು ರಾಜ್ಯಕ್ಕೆ ಬಂದಿದೆ.
1950–51	ಮೈಸೂರು ಪಬ್ಲಿಕ್ ಸರ್ವಿಸ್ ಕಮೀಷನ್ ಸ್ಥಾಪನೆ, ಬೆಂಗಳೂರು.
1951–52	ಮೈಸೂರು ರಾಜ್ಯಕ್ಕೆ ಮೊದಲ ಬಾರಿಗೆ 'ಪಂಚ ವಾರ್ಷಿಕ ಯೋಜನೆ' ಯನ್ನು ರೂಪಿಸಿ 'ಮಾದರಿ ರಾಜ್ಯಕ್ಕೆ' ಅಸ್ತಿಭಾರ ಹಾಕಿದರು.
1951	ಕೆ.ಸಿ. ರೆಡ್ಡಿ ಅವರ ನಾಯಕತ್ವದಲ್ಲಿ ವಿಶ್ವಾಸಮತ ಕೋರುವ ಸಭೆಯಲ್ಲಿ ಪರವಾಗಿ 34, ವಿರುದ್ಧವಾಗಿ 30 ಮತಗಳು ಬಿದ್ದು 4 ಮತಗಳ ಅಂತರದಿಂದ ಸರ್ಕಾರ ಪಾರಾಯಿತು.
30–03–1952	ಕೆ.ಸಿ.ರೆಡ್ಡಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು.
1952	ಕೋಲಾರ ಜಿಲ್ಲೆ ಬಂಗಾರಪೇಟೆಯಿಂದ ಎಂ.ಎಲ್.ಎ. ಆಗಿ ಪ್ರಥಮ ಚುನಾವಣೆಯಲ್ಲಿ ಆಯ್ಕೆಗೊಂಡರು.
1952–57	ರಾಜ್ಯಸಭೆ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆಗೊಂಡರು.
1952–57	ಪ್ರಧಾನಿ ನೆಹರು ಸರ್ಕಾರದ ಸಂಪುಟದಲ್ಲಿ "ಉತ್ಪಾದನ ಖಾತೆ" ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.
1952–57	ಭಾರತ ದೇಶದ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ 'ಮೂರು ತೈಲ ಸಂಸ್ಕರಣಾ ಘಟಕ'ಗಳ ಸ್ಥಾಪನೆ.
1953	H.M.T. (ಹಿಂದೂಸ್ಥಾನ್ ಮೆಷಿನ್ ಟೂಲ್ಸ್) ಲಿಮಿಟೆಡ್ ಕಾರ್ಖಾನೆ

	ಸ್ಥಾಪನೆ, ಬೆಂಗಳೂರು, ಮೈಸೂರು ರಾಜ್ಯ.
1954–60	ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆ, ರೂರ್ಕೆಲ, ಒರಿಸ್ಸಾ ರಾಜ್ಯ.
1955	ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆ, ಭಿಲಾಯ್, ಮಧ್ಯಪ್ರದೇಶ ರಾಜ್ಯ. (ಇಂದಿನ ಛತ್ತೀಸ್‌ಘಡ್ ರಾಜ್ಯ)
1956	ಲಿಗ್ನೈಟ್ ಕಾರ್ಖಾನೆ ಸ್ಥಾಪನೆ ನೈವೇಲಿ, ತಮಿಳುನಾಡು ರಾಜ್ಯ.
1957–61	ಮಹಾತ್ಮಗಾಂಧೀಜಿ ಸಮಾಧಿ ನಿರ್ಮಾಣ, ರಾಜ್‌ಘಾಟ್, ನವದೆಹಲಿ.
1957–61	ಕೋಲಾರ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಆಯ್ಕೆ.
1957–61	ಪ್ರಧಾನಿ ನೆಹರು ಸರ್ಕಾರದ ಸಂಪುಟದಲ್ಲಿ "ಕಾಮಗಾರಿ, ಗೃಹ ನಿರ್ಮಾಣ ಮತ್ತು ಸರಬರಾಯಿ" ಖಾತೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.
1957–61	ದೆಹಲಿಯಲ್ಲಿ "ದೆಹಲಿ ಕರ್ನಾಟಕ ಭವನ'ದ ಸ್ವಂತ ಕಟ್ಟಡ ನಿರ್ಮಾಣಕ್ಕೆ ದೊಡ್ಡ ನಿವೇಶನ ಕೊಡಿಸಿದರು.
1959	ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆ, ರಾಂಚಿ, ಬಿಹಾರ ರಾಜ್ಯ (ಇಂದಿನ ಜಾರ್ಖಂಡ್ ರಾಜ್ಯ)
1960	ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆ, ದುರ್ಗಾಪುರ, ಪಶ್ಚಿಮ ಬಂಗಾಳ ರಾಜ್ಯ.
1960	ಮೈಸೂರು ವಿಶ್ವವಿದ್ಯಾಲಯ 1960 ಅಕ್ಟೋಬರ್ 2 ರಂದು "ಡಾಕ್ಟರ್ ಆಫ್ ಲಾಸ್" ಗೌರವ ಪ್ರಶಸ್ತಿ ನೀಡಿ ಗೌರವಿಸಿತು.
1961 ಅ. 28	ಕೆ.ಸಿ. ರೆಡ್ಡಿ : ಭಾರತ ಮತ್ತು ಸಿಲೋನ್ (ಶ್ರೀಲಂಕಾ) ನಡುವೆ (ವ್ಯಾಪಾರ) ಐತಿಹಾಸಿಕ ಒಪ್ಪಂದ.
1961 ನ. 27	ಕೆ.ಸಿ. ರೆಡ್ಡಿ : ಅಧ್ಯಕ್ಷರು, ಸ್ವಿಟ್ಜರ್‌ಲ್ಯಾಂಡ್‌ನ ಜಿನೀವಾದಲ್ಲಿ ನಡೆದ G.A.T.T. ಸಮ್ಮೇಳನಕ್ಕೆ ಭಾರತ ದೇಶದ ನಿಯೋಗದ ನಾಯಕತ್ವವನ್ನು ವಹಿಸಿದ್ದರು.
1961 ನ.27/28	ವಿಶ್ವಸಂಸ್ಥೆ (United Nations) ಕಚೇರಿ ವರದಿ : ಕೆ.ಸಿ. ರೆಡ್ಡಿ, ಸಚಿವರು, ವಾಣಿಜ್ಯ ಮತ್ತು ಕೈಗಾರಿಕೆ, ಸ್ವಿಟ್ಜರ್‌ಲ್ಯಾಂಡ್‌ನ ಜಿನೀವಾದಲ್ಲಿ ನಡೆದ G.A.T.T. (General Agreement on Tariffs and Trade) ಸಮ್ಮೇಳನದಲ್ಲಿ ಭಾರತ ದೇಶದ ನಿಯೋಗದ ಅಧ್ಯಕ್ಷರಾಗಿ ಹಾಗೂ ಪ್ರತಿನಿಧಿಯಾಗಿ ಐತಿಹಾಸಿಕ ಭಾಷಣ ಮಾಡಿದ್ದಾರೆ.

1961–64 ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಆಯ್ಕೆ.

1961–64 ಪ್ರಧಾನಿ ನೆಹರು ಸರ್ಕಾರದ ಸಂಪುಟದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಖಾತೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

1952–64 ಕೆ.ಸಿ. ರೆಡ್ಡಿಯವರು ಬ್ರಿಟನ್, ಅಮೇರಿಕಾ, ಸಂಯುಕ್ತ ಸಂಸ್ಥಾನ, ಸ್ವಿಟ್ಜರ್‌ಲ್ಯಾಂಡ್, ಸೋವಿಯತ್ ದೇಶ, (ರಷ್ಯಾ), ಯೂರೋಪ್‌ನ ಇತರ ರಾಷ್ಟ್ರಗಳಲ್ಲಿ ಸಂಚಾರ ಮಾಡಿದ್ದಾರೆ.

1961–65 ಕೆ.ಸಿ. ರೆಡ್ಡಿ. ದೆಹಲಿಯಲ್ಲಿ "ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್" ಸಂಸ್ಥೆಯ ಸ್ಥಾಪಕ ಸದಸ್ಯರು.

1964 B.E.M.L. (ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್) ಕಾರ್ಖಾನೆ ಸ್ಥಾಪನೆ, ಕೆ.ಜಿ.ಎಫ್.ಕೋಲಾರ, ಮೈಸೂರು ರಾಜ್ಯ.

1964 B.H.E.L. (ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್) ಕಾರ್ಖಾನೆ ಸ್ಥಾಪನೆ, ಬೆಂಗಳೂರು, ಮೈಸೂರು ರಾಜ್ಯ.

1964–65 ಕೆ.ಸಿ. ರೆಡ್ಡಿ. ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಪ ನಾಯಕರಾಗಿ ಚುನಾಯಿತರಾದರು.

11–02–1965 – 02–02–1966 ಕೆ.ಸಿ.ರೆಡ್ಡಿ, ರಾಜ್ಯಪಾಲರು, ಮಧ್ಯಪ್ರದೇಶ ರಾಜ್ಯ, ಭಾರತ ಸರ್ಕಾರ.

10–02–1966 – 07–03–1971 ಕೆ.ಸಿ.ರೆಡ್ಡಿ, ರಾಜ್ಯಪಾಲರು, ಮಧ್ಯಪ್ರದೇಶ ರಾಜ್ಯ, ಭಾರತ ಸರ್ಕಾರ.

1971–76 ಅಧ್ಯಕ್ಷರು, ರಾಜ್ಯದ ನೈತಿಕ, ಸಾಮಾಜಿಕ ಶುಚಿತ್ವ ಸಂಘ, ಬೆಂಗಳೂರು.

1971–76 ಅಧ್ಯಕ್ಷರು, ಮೈಸೂರು ಉದ್ಯಾನ ಸಂಘ, ಬೆಂಗಳೂರು.

1971–76 ಅಧ್ಯಕ್ಷರು, ಲಾನ್ ಟೆನ್ನಿಸ್ ಸಂಘ, ಬೆಂಗಳೂರು.

1976 ಫೆ.27 ಬೆಂಗಳೂರಿನ ಸೈಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಕೆ.ಸಿ. ರೆಡ್ಡಿಯವರು ಹೃದಯಾಘಾತದಿಂದ ನಿಧನ ಹೊಂದಿದರು.

ಅಧ್ಯಾಯ – 1

ಪೀಠಿಕೆ

1. ಪ್ರಸ್ತಾವನೆ

ವಸಾಹತುಶಾಹಿ ಸಂದರ್ಭದಲ್ಲಿ ಭಾರತದ ಕೆಲವು ಭಾಗಗಳು ಬ್ರಿಟಿಷರ ನೇರ ಹತೋಟಿಗೆ ಒಳಪಟ್ಟಿದ್ದು, ಉಳಿದ ಪ್ರದೇಶಗಳು ಪರೋಕ್ಷ ಆಳ್ವಿಕೆಗೆ ಒಳಪಟ್ಟಿದ್ದವು. ಬ್ರಿಟಿಷ್ ಇಂಡಿಯಾ ಎಂದು ಕರೆಯಲ್ಪಡುತ್ತಿದ್ದ ಭಾರತದ ಪ್ರದೇಶದ ಮೇಲೆ ಬ್ರಿಟಿಷರು ನೇರ ಹತೋಟಿ ಹೊಂದಿದ್ದರು. ಉಳಿದಂತೆ ಭಾರತದ ವಿವಿಧೆಡೆ 648ಕ್ಕೂ ಹೆಚ್ಚು ಸಣ್ಣ ಹಾಗೂ ದೊಡ್ಡ ದೇಶೀಯ ಸಂಸ್ಥಾನಗಳು ಬ್ರಿಟಿಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟಿದ್ದವು. ಬ್ರಿಟಿಷ್ ಆಡಳಿತ ವರದಿಗಳಲ್ಲಿ ಹಾಗೂ ಬರವಣಿಗೆಗಳಲ್ಲಿ ದೇಶೀಯ ಸಂಸ್ಥಾನಗಳಲ್ಲಿ ದುರಾಡಳಿತ ಹಾಗೂ ಭ್ರಷ್ಟಾಚಾರ ತುಂಬಿ ತುಳುಕುತ್ತಿತ್ತು ಎಂಬ ಅಭಿಪ್ರಾಯ ಬರುವಂತೆ ಚಿತ್ರಿಸಿದ್ದಾರೆ. ಸ್ವಾತಂತ್ರ್ಯ ನಂತರ ಬ್ರಿಟಿಷ್ ಭಾರತದ ಚರಿತ್ರೆಯ ಬಗ್ಗೆ ಸಂಶೋಧನೆ ನಡೆಸಿದ ಚರಿತ್ರಕಾರರು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳ ಚಾರಿತ್ರಿಕ ಬದಲಾವಣೆಗಳನ್ನು ಗುರುತಿಸುವ ಪ್ರಯತ್ನ ನಡೆಸಿದ್ದು, ಈ ಬ್ರಿಟಿಷ್ ಆಳ್ವಿಕೆ ಕಾಲದಲ್ಲಿ ದೇಶೀಯ ಸಂಸ್ಥಾನಗಳು ವಹಿಸಿದ ಪಾತ್ರವನ್ನು ನಿರ್ಲಕ್ಷಿಸಲಾಗಿದೆ. ಇದರಿಂದಾಗಿ ಆಧುನಿಕ ಭಾರತದ ಚರಿತ್ರೆ ಏಕಮುಖವಾಗಿದ್ದು, ಅಪೂರ್ಣವಾಗಿದೆ. ಬ್ರಿಟಿಷ್ ಕಾಲದ ಭಾರತದ ಒಂದು ಸಮಗ್ರ ಚರಿತ್ರೆ ರಚಿಸುವ ಸಂದರ್ಭದಲ್ಲಿ ಬ್ರಿಟಿಷ್ ಇಂಡಿಯಾ ಪ್ರದೇಶಗಳಂತೆಯೇ ದೇಶೀಯ ಸಂಸ್ಥಾನಗಳ ಚರಿತ್ರೆಗೂ ಮಹತ್ವ ಕೊಡುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಯ ರಚನೆಯು ಆಧುನಿಕ ಮೈಸೂರಿನ ಚರಿತ್ರೆಯನ್ನು ವಸ್ತುನಿಷ್ಠ ನೆಲೆಯ ವಿಶ್ಲೇಷಣೆಗೆ ತರುವ ಒಂದು ಪ್ರಯತ್ನವಾಗಿದೆ.

ಮೈಸೂರು ಸಂಸ್ಥಾನವು 29,475 ಚದರ ಮೈಲಿ ವಿಸ್ತೀರ್ಣ ಹೊಂದಿದ್ದು, ಭಾರತದ ದೇಶೀಯ ಸಂಸ್ಥಾನದಲ್ಲಿ ಗಾತ್ರದ ದೃಷ್ಟಿಯಿಂದ ಐದನೆಯ ಸ್ಥಾನವನ್ನು, ಜನಸಂಖ್ಯೆ ದೃಷ್ಟಿಯಿಂದ ಎರಡನೆಯ ಸ್ಥಾನವನ್ನು ಪಡೆದಿತ್ತು. ಮೈಸೂರು ಸಂಸ್ಥಾನವು ಬ್ರಿಟಿಷ್ ಸರ್ಕಾರಕ್ಕೆ 35 ಲಕ್ಷ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಸಲ್ಲಿಸುತ್ತಿದ್ದು, ಈ ಮೊತ್ತವು ಬ್ರಿಟಿಷ್ ಸರ್ಕಾರವು ದೇಶೀಯ ಸಂಸ್ಥಾನಗಳಿಂದ ಪಡೆಯುತ್ತಿದ್ದ ಒಟ್ಟು ಸಬ್ಸಿಡಿಯ

ಶೇಕಡ 40% ಭಾಗದಷ್ಟಿತ್ತು. ಈ ಎಲ್ಲಾ ಕಾರಣಗಳಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಮೈಸೂರು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿತ್ತು.

2. ಚಾರಿತ್ರಿಕ ಹಿನ್ನೆಲೆ

ಕ್ರಿ.ಶ. 1799ರ ನಾಲ್ಕನೆಯ ಆಂಗ್ಲೋ – ಮೈಸೂರು ಯುದ್ಧದಲ್ಲಿ ಟಿಪ್ಪುಸುಲ್ತಾನ ಪತನಗೊಂಡ ನಂತರ ಅವನ ರಾಜ್ಯವನ್ನು ವಿಭಜಿಸಿ ಒಂದು ಭಾಗವನ್ನು ಮೈಸೂರು ಸಂಸ್ಥಾನ ಎಂದು ಕರೆದು ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತಕ್ಕೆ ಒಳಪಡಿಸಲಾಯಿತು[1]. ಒಂದು ವರ್ಷಕ್ಕೆ 24 ಲಕ್ಷ ಐವತ್ತು ಸಾವಿರ ಸಬ್ಸಿಡಿ (TRIBUTE) ನೀಡುವುದರ ಜೊತೆಗೆ ಆಡಳಿತ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂಬ ಷರತ್ತಿನೊಂದಿಗೆ ಮೈಸೂರು ರಾಜ್ಯವನ್ನು ಮಹಾರಾಜರ ವಶಕ್ಕೆ ನೀಡಲಾಯಿತು. ಸಹಾಯಕ ಸೈನ್ಯ ಪದ್ಧತಿಯ ಒಪ್ಪಂದದಂತೆ ಮೈಸೂರು ಬ್ರಿಟಿಷ್ ಸೈನಿಕ ನಿಯಂತ್ರಣಕ್ಕೆ ಒಳಪಟ್ಟಿತು.

ಮುಮ್ಮಡಿ ಕೃಷ್ಣರಾಜ ಒಡೆಯರು ಅಪ್ರಾಪ್ತ ವಯಸ್ಕರಾದ್ದರಿಂದ ಒಂದು ದಶಕದ ಕಾಲ ಪೂರ್ಣಯ್ಯನವರು ರಾಜನ ಪ್ರತಿನಿಧಿಯಾಗಿ ಆಡಳಿತ ನಡೆಸಿದರು. ಈ ಅವಧಿಯಲ್ಲಿ ಆಡಳಿತದಲ್ಲಿ ಬಿಗಿ ಹತೋಟಿ ತಂದ ಪೂರ್ಣಯ್ಯ ಮೈಸೂರು ರಾಜ್ಯದ ಕೆರೆ – ನೀರಾವರಿ ವ್ಯವಸಾಯದ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿ, ತೆರಿಗೆ ಸಂಗ್ರಹಿಸುವಲ್ಲಿ ಜಾಣ್ಮೆ ಪ್ರದರ್ಶಿಸಿದರು. 1811ರಲ್ಲಿ ಮಹಾರಾಜರು ಹಾಗೂ ಪೂರ್ಣಯ್ಯನವರ ನಡುವೆ ಅವಿಶ್ವಾಸ ಏರ್ಪಟ್ಟು ಪೂರ್ಣಯ್ಯನವರು ಅಧಿಕಾರದಿಂದ ನಿರ್ಗಮಿಸಿದರು.

1811 ರಿಂದ 1830 ರವರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಆರಂಭದಲ್ಲಿ ಸ್ವತಂತ್ರವಾಗಿ ನಂತರ ವರ್ಷಗಳಲ್ಲಿ ದಿವಾನರುಗಳ ಸಹಾಯದಿಂದ ಆಡಳಿತ ನಡೆಸಿದರು. ಮಹಾರಾಜರು ದೇವಾಲಯ, ಮಠಗಳು ಹಾಗೂ ಸಂಬಂಧಿ ರಾಜ ಪರಿವಾರದ ವ್ಯಕ್ತಿಗಳಿಗೆ ವಿಶೇಷ ಹಣಕಾಸಿನ ಅನುಕೂಲಗಳನ್ನು ಕಲ್ಪಿಸುವ ಪ್ರಯತ್ನ ಮಾಡಿದರು. ಮಹಾರಾಜರ ದುಂದು ವೆಚ್ಚದ ಬಗ್ಗೆ ಬ್ರಿಟಿಷ್ ಅಧಿಕಾರಿಗಳು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು[2]. ಇದು ಸಾಲದೆಂಬಂತೆ ಆಡಳಿತದಲ್ಲಿ ಬಿಗಿ ತಪ್ಪಿ ಭ್ರಷ್ಟಾಚಾರ ಹೆಚ್ಚಾದ ಹಿನ್ನೆಲೆಯಲ್ಲಿ ಜನರ ಅಸಮಾಧಾನ ಸಾರ್ವಜನಿಕವಾಗಿ ವ್ಯಕ್ತವಾಗತೊಡಗಿತು. ಮಳೆ ಅಭಾವ, ಬೆಳೆನಷ್ಟ,

---

1. Selection from Parlimentary Blue Books Relating to the Transfer of the Province of Mysore to Native Rule, Parts I-IV, 1924.
2. GOPAL M.H. : British Sources of the Economic, Political and Social History of the Mysore State, Bombay, 1993.

ಕಂದಾಯ ಅಧಿಕಾರಿಗಳ ಅಟ್ಟಹಾಸ ಇವುಗಳಿಂದ ರೋಸಿ ಹೋದ ನಗರ ಪ್ರಾಂತದ ರೈತರು 1830ರಲ್ಲಿ ಸರ್ಕಾರದ ವಿರುದ್ಧ ದಂಗೆ ಎದ್ದರು. ನಗರದಂಗೆ ಎಂದೇ ಪ್ರಸಿದ್ಧವಾಗಿರುವ ಈ ಗಲಭೆಯನ್ನು ಅಡಗಿಸಲು ಮಹಾರಾಜರಿಗೆ ಸಾಧ್ಯವಾಗದೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸಹಾಯದಿಂದ ದಂಗೆಯನ್ನು ಹತ್ತಿಕ್ಕಿದರು.[3] ಈ ಘಟನೆಯ ಬಗ್ಗೆ ಬ್ರಿಟಿಷ್ ಸರ್ಕಾರ ಒಂದು ಆಯೋಗವನ್ನು ರಚಿಸಿ ದಂಗೆ ಕಾರಣಗಳನ್ನು ಕಂಡು ಹಿಡಿಯುವ ಪ್ರಯತ್ನ ನಡೆಸಿದರು. ಸಮಿತಿಯು ತನ್ನ ವರದಿಯಲ್ಲಿ ದಂಗೆಗೆ ಮಹಾರಾಜರ ದುರಾಡಳಿತವೇ ಕಾರಣ ಎಂದು ತೀರ್ಮಾನಿಸಿತು.[4] ಈ ಹಿನ್ನೆಲೆಯಲ್ಲಿ ಬ್ರಿಟಿಷರು ಮಹಾರಾಜರನ್ನು ಅಧಿಕಾರದಿಂದ ಕೆಳಗಿಳಿಸಿ ಮೈಸೂರನ್ನು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಳ್ಳಲು ತೀರ್ಮಾನಿಸಿದರು.

ಹೀಗಾಗಿ 1831 ರಿಂದ 1881 ರವರೆಗೆ ಮೈಸೂರು ಸಂಸ್ಥಾನವು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿತು. ಈ ಅವಧಿಯಲ್ಲಿ ಅಂದರೆ 1831 ರಲ್ಲಿ ಮೈಸೂರನ್ನು ಬ್ರಿಟಿಷ್ ಕಮೀಷನರುಗಳು ಆಳ್ವಿಕೆ ನಡೆಸಿದರು. 1831ರ ನಂತರ ಒಬ್ಬ ಹಿರಿಯ ಕಮೀಷನರ್, ಒಬ್ಬ ಕಿರಿಯ ಕಮೀಷನರ್ ಮೈಸೂರಿನ ಆಡಳಿತ ಜವಾಬ್ದಾರಿ ನಿರ್ವಹಿಸಿ ದರು. ಹಿರಿಯ ಕಮೀಷನರ್‌ನನ್ನು ಭಾರತದ ಇಂಗ್ಲೀಷ್ ಗೌರ್ನರ್ ಜನರಲ್ ನೇಮಿಸು ತ್ತಿದ್ದು, ಕಿರಿಯ ಕಮೀಷನರ್‌ನನ್ನು ಮದ್ರಾಸ್ ಸರ್ಕಾರ ನೇಮಿಸುತ್ತಿತ್ತು. ಇಬ್ಬರು ಕಮೀಷನರುಗಳ ನಡುವೆ ಹೊಂದಾಣಿಕೆ ಕೊರತೆ ಕಂಡು ಬಂದ ಹಿನ್ನೆಲೆಯಲ್ಲಿ ಈ ವ್ಯವಸ್ಥೆಯನ್ನು ನಿಲ್ಲಿಸಿ 1834ರಲ್ಲಿ ಮಾರ್ಕ್‌ಕಬ್ಬನ್ ಅವರನ್ನು ಮೈಸೂರಿನ ಕಮೀಷನರ್ ಆಗಿ ನೇಮಿಸಲಾಯಿತು. ಮೂಲತಃ ಸಂಪ್ರದಾಯವಾದಿಯಾಗಿದ್ದ ಮಾರ್ಕ್‌ಕಬ್ಬನ್ ಮೈಸೂರು ಸಂಸ್ಥಾನದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು, ರಾಜ್ಯದ ಆದಾಯವನ್ನು ಹೆಚ್ಚಿಸಲು ವಿಶೇಷ ಆದ್ಯತೆ ನೀಡಿದನು. ಇವನ ಆಳ್ವಿಕೆ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿ ರೈತವಾರಿ ವ್ಯವಸ್ಥೆ, ರಸ್ತೆಗಳ ನಿರ್ಮಾಣ, ಸೇತುವೆಗಳ ನಿರ್ಮಾಣ ಹಾಗೂ ವಾಣಿಜ್ಯ ಬೆಳೆಗಳಾದ ಕಾಫಿ, ಹೊಗೆಸೊಪ್ಪು, ರೇಷ್ಮೆ ಹಾಗೂ ಗೋಡಂಬಿಯಂತಹ ರಫ್ತು ಮಾಡಲು ಯೋಗ್ಯ ಪದಾರ್ಥಗಳನ್ನು ಬೆಳೆಯಲು ವಿಶೇಷ ಪ್ರೋತ್ಸಾಹ ನೀಡಲಾಯಿತು. ಸಂಸ್ಥಾನದ ರೈಲ್ವೆ ಅಭಿವೃದ್ಧಿಯಲ್ಲಿ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಯೂರೋಪಿಯನ್ನರು ಆಸಕ್ತಿತೋರಿ ಬಂಡವಾಳ ಹೂಡಲು ಮುಂದೆ ಬಂದರು.[5]

---

3. Report on the Origin, Progress and Suppression of the Recent Disturbances in Mysore (Bangalore-1833)
4. General Miscellanceous Files, 1931.
5. VENKATASUBBA SASTRI .K.N. : The Administration of Mysore Under Sir Mark Cubbon (1834-1861) London 1932.

ಬೌರಿಂಗ್ ತನ್ನ ಆಡಳಿತ ಅವಧಿಯಲ್ಲಿ ಮೈಸೂರಿನಲ್ಲಿ ಬ್ರಿಟಿಷ್ ಮಾದರಿಯ ಆಡಳಿತ ವ್ಯವಸ್ಥೆ ಜಾರಿಗೆ ತರಲು ಆದ್ಯತೆ ನೀಡಿದನು. ಬೌರಿಂಗ್ ಆಳ್ವಿಕೆ ಸಂದರ್ಭದಲ್ಲಿ ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ, ರೈಲುಹಳಿ ವಿಸ್ತರಣೆ, ನೀರಾವರಿ ಕೆರೆಗಳ ದುರಸ್ಥಿ ಹಾಗೂ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಿದನು. ಈ ಅವಧಿಯಲ್ಲಿ ಆಡಳಿತ ವಿಭಾಗಗಳು ಹೆಚ್ಚಾಗಿ ಸರ್ಕಾರಿ ಕಚೇರಿಗಳಲ್ಲಿ ಹಲವು ಉದ್ಯೋಗಾವಕಾಶಗಳು ಸೃಷ್ಟಿಯಾದವು[6]. ಈ ಉದ್ಯೋಗಗಳಿಗೆ ಅಗತ್ಯವಿದ್ದ ಇಂಗ್ಲೀಷ್ ಶಿಕ್ಷಣ ಪಡೆಯುವಲ್ಲಿ ಸ್ಥಳೀಯರು ವಿಫಲರಾದ ಕಾರಣ ಕಮೀಷನರ್‌ಗಳು ಮದ್ರಾಸ್ ಪ್ರಾಂತದ ಜನರಿಗೆ ಮೈಸೂರು ಆಡಳಿತ ಸೇವೆಯಲ್ಲಿ ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸಿಕೊಟ್ಟರು. 1876ರ ನಂತರ ಮೈಸೂರು ಸಂಸ್ಥಾನದಲ್ಲಿ ಮಳೆಯ ಅಭಾವ, ಕ್ಷಾಮ, ಬರಗಾಲ ಹಾಗೂ ಸಾಂಕ್ರಾಮಿಕ ರೋಗಗಳಿಗೆ ಒಳಗಾಗಿ ಅಪಾರ ಪ್ರಾಣಹಾನಿ, ಆರ್ಥಿಕ ನಷ್ಟಕ್ಕೆ ಒಳಗಾಯಿತು. ಇದೇ ವೇಳೆಗೆ ಮೈಸೂರು ರಾಜ ಮನೆತನದ ಸದಸ್ಯರು ಬ್ರಿಟಿಷರ ಮೇಲೆ ಹಲವು ರೀತಿಯ ಪ್ರಭಾವಗಳನ್ನು ತಂದು ಮೈಸೂರನ್ನು ತಮಗೆ ಹಿಂತಿರುಗಿಸಬೇಕೆಂದು ಒತ್ತಾಯ ಪಡಿಸಲಾರಂಭಿಸಿದರು[7]. ಅದರ ಪರಿಣಾಮದಿಂದ 1881ರಲ್ಲಿ ಮೈಸೂರು ಸಂಸ್ಥಾನವನ್ನು ಬ್ರಿಟಿಷರು ಮಹಾರಾಜರ ಕುಟುಂಬದವರಿಗೆ ವರ್ಗಾವಣೆ ಮಾಡಲು ತೀರ್ಮಾನಿಸಿದರು.[8]

1881ರಲ್ಲಿ ಆಡಳಿತವು ಒಡೆಯರ ಮನೆತನಕ್ಕೆ ವರ್ಗಾವಣೆಗೊಂಡ ನಂತರ ಸಿ. ರಂಗಾಚಾರ್ಲು (1881–83) ರವರೆಗೆ ದಿವಾನರಾಗಿ ಕರ್ತವ್ಯ ನಿರ್ವಹಿಸಿದರು. ಈ ಅವಧಿಯಲ್ಲಿ ಭಾರತದಲ್ಲಿಯೇ ಪ್ರಥಮವಾದ ಮೈಸೂರು ಪ್ರಜಾಪ್ರತಿನಿಧಿ ಸಭೆ ಅಸ್ತಿತ್ವಕ್ಕೆ ಬಂದಿತು. ಈ ಸಭೆಯು ನಾಮಕರಣ ಹೊಂದಿದ ಸದಸ್ಯರನ್ನು ಒಳಗೊಂಡಿದ್ದು ವಿಶೇಷ ಅಧಿಕಾರವನ್ನು ಪಡೆದಿದ್ದರೂ ಕೂಡ ಜನಗಳ ಪ್ರತಿನಿಧಿಗಳ ಮೂಲಕ ತಮ್ಮ ಕಷ್ಟಗಳನ್ನು ಸರ್ಕಾರದ ಮುಂದೆ ಮಂಡಿಸುವ ಅವಕಾಶ ನೀಡಿತು.[9] 1883ರಲ್ಲಿ ದಿವಾನರಾಗಿ ಅಧಿಕಾರ ವಹಿಸಿಕೊಂಡ ಕೆ. ಶೇಷಾದ್ರಿಅಯ್ಯರ್ 1900ರವರೆಗೆ ದಿವಾನರಾಗಿ ಕಾರ್ಯನಿರ್ವಹಿಸಿದರು. ಬರಗಾಲದ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಲು, ರೈಲ್ವೆ ಸಂಪರ್ಕ ಕಲ್ಪಿಸಲು, ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ಶೇಷಾದ್ರಿಅಯ್ಯರ್ ಆದ್ಯತೆ ನೀಡಿದರು. ರಾಜ್ಯದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ವಿದೇಶಿ ಬಂಡವಾಳ ಆಕರ್ಷಿಸಲು

---

6. VARADARAJAN M.K. : L.B. Bowring and the Mysore Rendition, 1935.
7. COLONEL .M.J. MEADE : The Indian States Mysore, The Imperial and Asiatic Quarterly Review, 1926.
8. Selection From Parlimentary Blue Books Relating to the Transfer of the Province of Mysore to Native Rule, Parts I-IV, 1924.
9. ಚಂದ್ರೇಖರ್. ಎನ್.ಎಸ್ : ದಿವಾನ್ ಸಿ. ರಂಗಾಚಾರ್ಲು, 1975

ಕ್ರಮ ಕೈಗೊಂಡರು. ಇದರ ಫಲವಗಿ ಹಲವು ಗಿರಣಿ ಉದ್ಯಮಗಳು ಬೆಂಗಳೂರಿನಲ್ಲಿ ಸ್ಥಾಪನೆಯಾದುದಲ್ಲದೆ, ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಗಣಿ ಉದ್ಯಮದಲ್ಲಿ ಬಂಡವಾಳ ಹೂಡಲು ಇಂಗ್ಲೆಂಡ್ ಮೂಲದ ಬಂಡವಾಳಗಾರರು ಮುಂದೆ ಬಂದರು.[10] 1885 ರಲ್ಲಿ ಚಿನ್ನದ ಅದಿರು ನಿಕ್ಷೇಪಗಳು ಪತ್ತೆಯಾದ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಗಣಿ ಉದ್ಯಮ ಒಂದು ಬೃಹತ್ ಉದ್ಯಮವಾಗಿ ಬೆಳೆಯಿತು. ಕೋಲಾರದ ಚಿನ್ನದ ಗಣಿ ಉದ್ಯಮಕ್ಕೆ ಅಗತ್ಯವಾದ ವಿದ್ಯುತ್ ಪೂರೈಸಲು 1902ರಲ್ಲಿ ಶಿವನಸಮುದ್ರ ಜಲವಿದ್ಯುತ್ ಘಟಕ ಸ್ಥಾಪನೆಯಾಯಿತು.[11]

3. ಪ್ರಸ್ತುತ ಅಧ್ಯಯನದ ಮಹತ್ವ

ಇಪ್ಪತ್ತನೆಯ ಶತಮಾನದ ಆರಂಭದಿಂದ ಭಾರತದ ದೇಶೀಯ ಸಂಸ್ಥಾನಗಳಲ್ಲಿ ಎರಡು ಬಗೆಯ ಚಳವಳಿಗಳನ್ನು ಗುರುತಿಸಬಹುದಾಗಿದೆ. ಒಂದೆಡೆ ದೇಶೀಯ ಸಂಸ್ಥಾನದ ಜನರು ಸ್ಥಳೀಯ ರಾಜಕೀಯ ಹಾಗೂ ಸಾಮಾಜಿಕ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದರೆ, ಮತ್ತೊಂದೆಡೆ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಚಳವಳಿಗಳನ್ನು ನಡೆಸಿದರು.

ಆಧುನಿಕ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂಬ ಬೇಡಿಕೆಯಡಿ ನಡೆದ ಹೋರಾಟ ಅತ್ಯಂತ ಮಹತ್ವ ಪಡೆದಿದ್ದು, ಮೈಸೂರು ರಾಜಕೀಯ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವಾಗಿತ್ತು. ಈ ಹೋರಾಟ ರಾಷ್ಟ್ರೀಯ ಕಾಂಗ್ರೆಸ್‌ನ ಅಡಿಯಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಜೊತೆ ಜೊತೆಯಲ್ಲಿಯೇ ನಡೆಯಿತು.[12] ಈ ಚಳವಳಿಯನ್ನು ಕುರಿತಂತೆ ಮೈಸೂರು ಸರ್ಕಾರ ಹಾಗೂ ಬ್ರಿಟಿಷ್ ಸರ್ಕಾರ ಅನುಸರಿಸಿದ ಧೋರಣೆಗಳು, ಈ ಚಳವಳಿಯಲ್ಲಿ ಭಾಗವಹಿಸಿದ ಪ್ರಮುಖ ನಾಯಕರು, ಅವರು ಅನುಸರಿಸಿದ ಚಳವಳಿಯ ಮಾರ್ಗಗಳು, ದೇಶೀಯ ಸಂಸ್ಥಾನದ ಜನ ನಡೆಸುತ್ತಿದ್ದ ಚಳವಳಿ ಕುರಿತಂತೆ ರಾಷ್ಟ್ರೀಯ ಕಾಂಗ್ರೆಸ್‌ನ ಬದಲಾಗುತ್ತಿದ್ದ ನೀತಿಗಳು, ಇವುಗಳನ್ನು ಕುರಿತಂತೆ ಇದುವರೆವಿಗೂ ಹಲವು ಸಂಶೋಧನೆಗಳು ನಡೆದಿದ್ದರೂ ಕೂಡ, ಈ ಕುರಿತಂತೆ ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯ ಕಂಡು ಬರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ

---

10. ಚಂದ್ರೇಖರ್. ಎನ್.ಎಸ್ : ದಿವಾನ್ ಶೇಷಾದ್ರಿ ಅಯ್ಯರ್, 1981.
11. HAYAVADANA RAO .C: Mysore Gazetter, Vol-I.
12. ವೀರತಪ್ಪ .ಕೆ. : ಮೈಸೂರು ಸಂಸ್ಥಾನದ ಸ್ವಾತಂತ್ರ್ಯದ ಚಳವಳಿ, 1977

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿ ನಾಯಕರಲ್ಲಿ ಒಬ್ಬರಾಗಿ, ಆಧುನಿಕ ಮೈಸೂರಿನ ಪ್ರಥಮ ಮುಖ್ಯಮಂತ್ರಿಯಾಗಿ ಕೆ. ಚಂಗಲರಾಯರೆಡ್ಡಿ ಅವರು ನಿರ್ವಹಿಸಿದ ಕಾರ್ಯಗಳನ್ನು ವಿಶ್ಲೇಷಿಸುವ ಒಂದು ಪ್ರಯತ್ನವನ್ನು ಮಾಡಲಾಗಿದೆ.

1928ರ ನಂತರ ಮೈಸೂರು ಸಂಸ್ಥಾನದಲ್ಲಿನ ರಾಜಕೀಯ ಪರಿಸ್ಥಿತಿ ಹಲವು ಮಹತ್ತರ ತಿರುವುಗಳನ್ನು ಪಡೆಯಿತು. ಬೆಂಗಳೂರಿನಲ್ಲಿ ಸಂಭವಿಸಿದ ಸುಲ್ತಾನಪೇಟೆ ಗಣಪತಿ ಗಲಭೆಯ ಪರಿಣಾಮದಿಂದಾಗಿ ಬ್ರಾಹ್ಮಣೇತರ ನಾಯಕರಿಗೆ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಲ್ಲಿ ವಿಶ್ವಾಸ ಕಡಿಮೆಯಾಯಿತು. ಮಿಲ್ಲರ್ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ ಒಂದು ದಶಕದ ನಂತರವು ಕೂಡ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ತಮ್ಮ ಸ್ಥಿತಿ ಗಮನಾರ್ಹವಾಗಿ ಉತ್ತಮಗೊಂಡಿಲ್ಲ ಎಂಬುದನ್ನು ಬ್ರಾಹ್ಮಣೇತರ ನಾಯಕರು ಅರಿತುಕೊಂಡರು. ಈ ಅಂಶಗಳು ಬ್ರಾಹ್ಮಣೇತರ ನಾಯಕರು ತಮ್ಮಲ್ಲಿ ರಾಜಕೀಯ ಸಂಘಟನೆ ಮಾಡಿಕೊಳ್ಳುವತ್ತ ಪ್ರೇರೇಪಿಸಿದವು. ಈ ಅನುಕೂಲಕರ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯಲ್ಲಿ ಹಲವಾರು ಬ್ರಾಹ್ಮಣೇತರ ಯುವ ರಾಜಕಾರಣಿಗಳು ಮೈಸೂರು ಸಂಸ್ಥಾನದ ಸಾರ್ವಜನಿಕ ಜೀವನ ಪ್ರವೇಶ ಮಾಡಿದರು.

ಇವರಲ್ಲಿ ಬಹಳ ಮುಖ್ಯರಾದವರೆಂದರೆ ವಿ. ವೆಂಕಟಪ್ಪ, ಹೆಚ್. ಸಿದ್ದಯ್ಯ, ಹೆಚ್.ಬಿ. ಗುಂಡಪ್ಪಗೌಡ, ಹೆಚ್.ಸಿ. ದಾಸಪ್ಪ ಹಾಗೂ ಕೆ.ಸಿ. ರೆಡ್ಡಿ ಮುಂತಾದವರು. ಈ ಎಲ್ಲಾ ನಾಯಕರಲ್ಲೂ ಕೆಲವು ಸಮಾನ ಅಂಶಗಳನ್ನು ಗುರುತಿಸಬಹುದಾಗಿದೆ. ಮೊದಲನೆಯದಾಗಿ ಇವರೆಲ್ಲರೂ 1902ರ ನಂತರ ಜನಿಸಿದವರು ಹಾಗೂ ಮೈಸೂರು ಸಂಸ್ಥಾನದಲ್ಲಿ ಲಭ್ಯವಿದ್ದ ಇಂಗ್ಲೀಷ್ ಶಿಕ್ಷಣ ಪಡೆಯುವುದರ ಜೊತೆಗೆ ನೆರೆಯ ಮದ್ರಾಸ್ ಹಾಗೂ ಪೂನಾ ನಗರಗಳಲ್ಲಿ ತಮ್ಮ ಶಿಕ್ಷಣವನ್ನು ಮುಂದುವರೆಸಿ ಕಾನೂನು ಪದವಿಗಳನ್ನು ಪಡೆದವರು. ಈ ನಾಯಕರಿಗೆ ಅಖಿಲ ಭಾರತ ಮಟ್ಟದ ರಾಜಕೀಯ ಬೆಳವಣಿಗೆಗಳ ಸ್ಪಷ್ಟ ಅರಿವಿತ್ತು. ಹಾಗೂ ರಾಜಕೀಯ ಕ್ಷೇತ್ರದಲ್ಲಿ ಯಶಸ್ಸು ಪಡೆಯಲು ಜಾತಿ ಸಂಪರ್ಕಗಳು ಹಾಗೂ ವೃತ್ತ ಪತ್ರಿಕೆಗಳ ಮಹತ್ವ ಅರಿತಿದ್ದರು. ಈ ಎಲ್ಲ ನಾಯಕರಿಗೂ ಸರ್ಕಾರಿ ಸೇವೆಯಲ್ಲಿ ತೊಡಗಿಸಿ ಕೊಳ್ಳುವುದಕ್ಕಿಂತಲೂ, ಲಭ್ಯವಿದ್ದ ಪ್ರಜಾಪ್ರತಿನಿಧಿ, ನ್ಯಾಯವಿಧಾಯಕ ಸಭೆಗಳ ಅವಕಾಶ ಬಳಸಿಕೊಂಡು ರಾಜಕೀಯ ಪ್ರಾಬಲ್ಯಗಳಿಸಲು ಸಂದರ್ಭಗಳು ಅನುಕೂಲಕರವಾಗಿದ್ದವು. ಈ ಹಿನ್ನೆಲೆಯಲ್ಲಿ ಕೆ.ಸಿ. ರೆಡ್ಡಿ ಅವರ ರಾಜಕೀಯ ಪ್ರವೇಶ ಗುರುತಿಸಬೇಕಾಗುತ್ತದೆ.

ಕೆ.ಸಿ. ರೆಡ್ಡಿ ಅವರು ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಸಮೀಪದ ಕ್ಯಾಸಂಬಳ್ಳಿ ಗ್ರಾಮದವರು. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂ ತಾಲ್ಲೂಕಿನ ರಾಜಪೇಟೆಯಲ್ಲಿ 1902 ಮೇ 5ರಂದು ಜನಿಸಿದರು. ಕೆ.ಜಿ.ಎಫ್.ನಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪಡೆದು ನಂತರ ಬೆಂಗಳೂರಿನ ಲಂಡನ್ ಮಿಷನ್ ಹೈಸ್ಕೂಲ್‌ನಲ್ಲಿ ಶಿಕ್ಷಣ ಮುಂದುವರೆಸಿದರು. ಕಾಲೇಜು ಶಿಕ್ಷಣ ಮುಂದುವರೆಸಲು ಮದ್ರಾಸ್‌ಗೆ ತೆರಳಿದ ಕೆ.ಸಿ. ರೆಡ್ಡಿ B.A., ಹಾಗೂ B.L., ಪದವಿಯನ್ನು ಪಡೆದರು. 1927ರಲ್ಲಿ ಕೋಲಾರದಲ್ಲಿ ಗಾಂಧೀಜಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರಿಂದ ಪ್ರಭಾವಿತರಾಗಿ ಗಾಂಧೀಜಿ ಅವರ ಮಾರ್ಗದರ್ಶನದಂತೆ ಸಾರ್ವಜನಿಕ ಜೀವನ ಪ್ರವೇಶಿಸಲು ತೀರ್ಮಾನಿಸಿದರು. ತಮ್ಮ 28ನೇ ವಯಸ್ಸಿನಲ್ಲಿ ಕೋಲಾರದ ಬಂಗಾರಪೇಟೆಯಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾದರು.

1930 ರಲ್ಲಿ ಕೆ.ಸಿ. ರೆಡ್ಡಿ ಅವರು ಇತರೆ ಬ್ರಾಹ್ಮಣೇತರ ನಾಯಕರಾದ ಹೆಚ್.ಸಿ. ದಾಸಪ್ಪ, ವಿ. ವೆಂಕಟಪ್ಪ, ಬಿ.ಎನ್. ಗುಪ್ತ ಹಾಗೂ ಎಚ್.ಬಿ. ಗುಂಡಪ್ಪಗೌಡ ಮುಂತಾದ ನಾಯಕರುಗಳ ಜೊತೆಗೂಡಿ ಪ್ರಜಾಪಕ್ಷ ಎಂಬ ರಾಜಕೀಯ ಪಕ್ಷ ಸ್ಥಾಪಿಸಿದರು. ಮುಂದೆ ಪ್ರಜಾಮಿತ್ರ ಮಂಡಲಿ ಹಾಗೂ ಪ್ರಜಾಪಕ್ಷ ಒಗ್ಗೂಡಿಸಿ 1934ರಲ್ಲಿ ಪ್ರಜಾ ಸಂಯುಕ್ತ ಪಕ್ಷ ಎಂಬ ಹೊಸ ರಾಜಕೀಯ ಪಕ್ಷ ಅಸ್ತಿತ್ವಕ್ಕೆ ಬಂದಿತು. ರಾಷ್ಟ್ರದೆಲ್ಲೆಡೆ ಸ್ವಾತಂತ್ರ್ಯಕ್ಕಾಗಿ ವ್ಯಾಪಕ ಚಳವಳಿಗಳು ನಡೆಯುತ್ತಿದ್ದ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ತಮ್ಮ ಆಂತರಿಕ ಭಿನ್ನಾಭಿಪ್ರಾಯಗಳನ್ನು ಮರೆತು ಒಂದು ಮುಖ್ಯವಾಹಿನಿಯಾಗಿ ಚಳವಳಿಯಲ್ಲಿ ತೊಡಗಬೇಕಾದ ರಾಜಕೀಯ ಅನಿವಾರ್ಯತೆ ಎದುರಾಯಿತು. ಮೈಸೂರಿನಲ್ಲಿ ಅಸ್ತಿತ್ವದಲ್ಲಿದ್ದ ಕಾಂಗ್ರೆಸ್ ಪಕ್ಷವು ಬ್ರಾಹ್ಮಣರ ಪಕ್ಷ ಎಂಬ ಹಣೆಪಟ್ಟಿ ತೊಡೆದು ಹಾಗೂ ಕೇವಲ ನಗರ ಮತ್ತು ಪಟ್ಟಣಗಳಿಗೆ ಮೀಸಲಾಗಿದ್ದ ತನ್ನ ವ್ಯಾಪ್ತಿಯನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಿಕೊಳ್ಳಲು ತೀರ್ಮಾನಿಸಿತು. ಇದರ ಫಲವಾಗಿ ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷವು 1937ರಲ್ಲಿ ಒಂದಾಯಿತು. ಈ ರಾಜಕೀಯ ಸಮ್ಮಿಲನ ಏರ್ಪಡುವಲ್ಲಿ ಕೆ.ಸಿ. ರೆಡ್ಡಿ ನಿರ್ಣಾಯಕ ಪಾತ್ರ ವಹಿಸಿದರು. ಮುಂದೆ ಮೈಸೂರು ಕಾಂಗ್ರೆಸ್ 1938ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಕಾಂಗ್ರೆಸ್ ಚಳವಳಿ ಪ್ರಾಬಲ್ಯಗಳಿಸಿ ಜನಪರವಾದ ಹೋರಾಟಕ್ಕಿಳಿದ ಸಂದರ್ಭದಲ್ಲಿ ಸರ್ಕಾರ ತನ್ನ ಧಮನಕಾರಿ ನೀತಿಯನ್ನು ಅನುಸರಿಸಿದಾಗ ಹಲವು ಗಲಭೆಗಳಾಗಿ ಪ್ರಾಣಹಾನಿ ಕೂಡ ಆಯಿತು. ಇಷ್ಟಾದರೂ ದೇಶೀಯ ಸಂಸ್ಥಾನವಾಗಿದ್ದ ಮಹಾರಾಜರ ಸರ್ಕಾರದ ಬಗ್ಗೆ ವಿಶೇಷ ಒಲವಿದ್ದ ರಾಷ್ಟ್ರೀಯ ಕಾಂಗ್ರೆಸ್, ಮೈಸೂರು ಕಾಂಗ್ರೆಸ್‌ಗೆ ನೇರವಾಗಿ ಮಹಾರಾಜರ ಆಳ್ವಿಕೆಗೆ ಒಳಪಟ್ಟ ಮೈಸೂರು ಪ್ರದೇಶದಲ್ಲಿ ಸ್ವಾತಂತ್ರ್ಯ ಚಳವಳಿ ನಡೆಸಲು

ಅನುಮತಿ ನೀಡಲಿಲ್ಲ. ಈ ಸಂಕಷ್ಟದಿಂದ ಪಾರಾಗಲು ಮೈಸೂರು ಕಾಂಗ್ರೆಸ್ ನಾಯಕರು ತಮ್ಮ ಪ್ರತಿನಿಧಿಯಾಗಿ ಕೆ.ಸಿ. ರೆಡ್ಡಿ ಅವರನ್ನು ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಸಭೆಗೆ ಕಳುಹಿಸಿದರು. ಕೆ.ಸಿ.ರೆಡ್ಡಿ ಈ ಸಂದರ್ಭವನ್ನು ಉಪಯೋಗಿಸಿ ಕೊಂಡು ಪ್ರಜಾಪರ ಹೋರಾಟ ನಡೆಸುತ್ತಿರುವ ಮೈಸೂರು ಕಾಂಗ್ರೆಸ್ ಚಳವಳಿಯನ್ನು ಹತ್ತಿಕ್ಕಲು ಮಹಾರಾಜರ ಸರ್ಕಾರ ಅನುಸರಿಸು ತ್ತಿರುವ ಧಮನಕಾರಿ ಕ್ರಮಗಳನ್ನು ಕಾಂಗ್ರೆಸ್ ನಾಯಕರಿಗೆ ಮನವರಿಕೆ ಮಾಡಿಕೊಟ್ಟರು.

1937 ರಿಂದ 1947ರ ಅವಧಿಯಲ್ಲಿ ನಡೆದ ನಿರ್ಣಾಯಕ ಹೋರಾಟಗಳಲ್ಲಿ ಮೈಸೂರು ಕಾಂಗ್ರೆಸ್‌ನ ನಾಯಕರಾಗಿ ಕೆ.ಸಿ. ರೆಡ್ಡಿ ತಮ್ಮ ಸ್ಥಾನ ಭದ್ರಪಡಿಸಿಕೊಂಡರು. ಈ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ ಆಯೋಜಿಸಿದ ಆರು ಧ್ವಜಸತ್ಯಾಗ್ರಹ ಅಧಿವೇಶನಗಳಲ್ಲಿ ಹಾಗೂ ಕೆ.ಜಿ.ಎಫ್ ಗಣಿ ಕಾರ್ಮಿಕರ ಸತ್ಯಾಗ್ರಹ ಹಾಗೂ ಭಾರತ ಬಿಟ್ಟು ತೊಲಗಿ ಚಳವಳಿಗಳಲ್ಲಿ ಕೆ.ಸಿ. ರೆಡ್ಡಿ ಪ್ರಮುಖ ಪಾತ್ರ ವಹಿಸಿದರು. ಆಗಸ್ಟ್ 15, 1947ರ ಭಾರತದ ಸ್ವಾತಂತ್ರ್ಯದ ನಂತರವು ಕೂಡ ಮೈಸೂರಿನಲ್ಲಿ ಮಹಾರಾಜರ ಆಳ್ವಿಕೆ ಮುಂದುವರೆದುದ್ದನ್ನು ವಿರೋಧಿಸಿ ಕೆ.ಸಿ.ರೆಡ್ಡಿಯವರ ನಾಯಕತ್ವದಲ್ಲಿ 'ಮೈಸೂರು ಚಲೋ ಚಳವಳಿ'ಯು 42 ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು. ಚಳವಳಿಯ ಪ್ರಾಬಲ್ಯಕ್ಕೆ ಮಣಿದ ಮಹಾರಾಜರು ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪನೆಗೆ ಸಮ್ಮತಿ ಸೂಚಿಸಿದರು. ಅಕ್ಟೋಬರ್ 24, 1947 ರಂದು ಕೆ.ಸಿ. ರೆಡ್ಡಿ ಅವರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿ ಕೊಂಡರು. ಸ್ವಾತಂತ್ರ್ಯ ನಂತರ ರಾಜ್ಯ ಹಾಗೂ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ, ಮೈಸೂರಿನ ಮುಖ್ಯಮಂತ್ರಿ, ಕೇಂದ್ರ ಸಚಿವರು, ಮಧ್ಯಪ್ರದೇಶ ರಾಜ್ಯದ ರಾಜ್ಯಪಾಲರಾಗಿ ಕೆ.ಸಿ. ರೆಡ್ಡಿ ಅವರ ಪಾತ್ರ ಬಹಳ ಮುಖ್ಯವಾದುದು.

ಇಪ್ಪತ್ತನೆಯ ಶತಮಾನದ ಆರಂಭ ಮೈಸೂರಿನ ಸಂದರ್ಭದಲ್ಲಿ ಬಹುಮುಖಿ ಆಯಾಮಗಳನ್ನು ಪಡೆದಿತ್ತು. ಮದ್ರಾಸ್ – ಮೈಸೂರಿಗರ ಸಂಘರ್ಷ, ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆ, ನ್ಯಾಯ ವಿಧಾಯಕ ಸಭೆಯ ಸ್ಥಾಪನೆ, ಮೈಸೂರನ್ನು 'ಮಾದರಿ' ರಾಜ್ಯವೆಂದು ಬಿಂಬಿಸುವ ಹಿನ್ನಲೆಯಲ್ಲಿದ್ದ ಹಿತಾಸಕ್ತಿಗಳು ಮುಂತಾದವು ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮೈಸೂರನ್ನು ಆವರಿಸಿದ್ದವು. ಇವುಗಳು ಸೃಷ್ಟಿಸಿದ ಗರ್ಭದಲ್ಲೇ ಬ್ರಾಹ್ಮಣೇತರ ಚಳವಳಿಯು ಹುಟ್ಟಿಕೊಂಡಿತು. ಮೈಸೂರಿನಲ್ಲಿ ಇಪ್ಪತ್ತನೆಯ ಶತಮಾನದ ಆರಂಭ ಬ್ರಾಹ್ಮಣೇತರ ಕೂಸಿನ ಹುಟ್ಟಿನೊಂದಿಗೆ ಪ್ರಾರಂಭವಾಯಿತು. ಗಾಂಧೀಜಿ ಅವರ ಪ್ರಭಾವ ಕ್ರಮೇಣ ಆವರಿಸಿಕೊಳ್ಳಲು ಪ್ರಾರಂಭಿಸಿತು. ಕೆ.ಸಿ. ರೆಡ್ಡಿ ಅವರು ಈ ವಿಭಿನ್ನ ಬಗೆಯ ಸಂಘರ್ಷಗಳ, ಪರಿಪೇಕ್ಷೆಗಳ ಪ್ರಭಾವಕ್ಕೆ ಒಳಗಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿ

ಕೊಂಡವರು. ರಾಷ್ಟ್ರೀಯ ವಿದ್ಯಮಾನಗಳು ರಾಜ್ಯದ ವಿದ್ಯಮಾನಗಳನ್ನು ಪ್ರಭಾವಿಸುತ್ತಿದ್ದ ಪರ್ವ ಕಾಲದಲ್ಲಿ ಕೆ.ಸಿ. ರೆಡ್ಡಿಯವರು ತಮ್ಮ ಪಾತ್ರವನ್ನು ನಿರ್ವಹಿಸಿದರು.

ಹೀಗಾಗಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಬದಲಾವಣೆಗಳ ಚಾರಿತ್ರಿಕ ಆಯಾಮ ಕೆ.ಸಿ. ರೆಡ್ಡಿ ಅವರ ಮೂಲಕ ಅರ್ಥೈಸಿಕೊಳ್ಳುವ ಪ್ರಯತ್ನ ನಡೆಸಲಾಗಿದೆ. ಆ ಕಾಲದ ಒಟ್ಟು ವಿದ್ಯಮಾನಗಳ ಚಾರಿತ್ರಿಕ ಹಿನ್ನಲೆಯಲ್ಲಿ ಕೆ.ಸಿ. ರೆಡ್ಡಿ ಅವರು ರೂಪುಗೊಂಡು, ರೂಪಿಸಿದ ಹಾಗೂ ನಿರ್ವಹಿಸಿದ ರಾಜಕೀಯ ಮತ್ತು ರಾಜಕೀಯೇತರ ಆಯಾಮಗಳನ್ನು ವಸ್ತುನಿಷ್ಠ ಚಾರಿತ್ರಿಕ ಪರಿಪೇಕ್ಷದಲ್ಲಿ ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

4. ಅಧ್ಯಯನದ ಸ್ಥೂಲ ಸಮೀಕ್ಷೆ

ಭಾರತದ ಮೇಲೆ ಬ್ರಿಟಿಷ್ ಆಳ್ವಿಕೆಯ ಪ್ರಭಾವ ಹಾಗೂ ಬ್ರಿಟಿಷರ ವಿರುದ್ಧ ನಡೆದ ರಾಷ್ಟ್ರೀಯ ಹೋರಾಟವನ್ನು ಕುರಿತು ಮೊದಲಿನಿಂದಲೂ ಚರಿತ್ರೆಕಾರರು ಆಸಕ್ತಿವಹಿಸಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಈ ಚಳವಳಿಗಳ ಅಧ್ಯಯನ ಕೈಗೊಂಡಿದ್ದಾರೆ. ಈ ಅಧ್ಯಯನದಲ್ಲಿ ಹಲವು ಸೈದ್ಧಾಂತಿಕ ವೈವಿಧ್ಯತೆಗಳಿದ್ದು, ಇವು ಆಧುನಿಕ ಭಾರತದ ಚರಿತ್ರೆಯನ್ನು ಹೆಚ್ಚು ಸಮಗ್ರ, ವ್ಯಾಪಕ ಹಾಗೂ ಅರ್ಥಪೂರ್ಣವಾಗಿಸಿವೆ. ಹೀಗಿದ್ದರೂ ಕೂಡ ದೇಶೀಯ ಸಂಸ್ಥಾನಗಳು ಬ್ರಿಟಿಷರ ಆಳ್ವಿಕೆಯಿಂದಾಗಿ ಆದ ಸಾಮಾಜಿಕ, ಆರ್ಥಿಕ ಬದಲಾವಣೆಗಳು ಹಾಗೂ ಬ್ರಿಟಿಷರ ವಿರುದ್ಧ ದೇಶೀಯ ಸಂಸ್ಥಾನಗಳಲ್ಲಿ ನಡೆದ ರಾಜಕೀಯ ಹೋರಾಟಗಳನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳ ಅಗತ್ಯವಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಕೆಲವು ದಶಕಗಳ ನಂತರವೂ ಕೂಡ ದೇಶೀಯ ಸಂಸ್ಥಾನಗಳನ್ನು ಕುರಿತು ಅಧ್ಯಯನಗಳು ನಡೆಯದಿದ್ದದ್ದು ಒಂದು ದೊಡ್ಡ ಕೊರತೆ. 1970ರ ದಶಕದ ನಂತರ ಆಧುನಿಕ ಮೈಸೂರು ರಾಜ್ಯವನ್ನು ಕುರಿತು ಹಲವು ಸಂಶೋಧನ ಪ್ರಬಂಧಗಳು ಪ್ರಕಟವಾಗಿದ್ದರೂ ಕೆಲವು ಮಾತ್ರ ಗಮನಾರ್ಹವಾಗಿವೆ. ಈ ಅಧ್ಯಯನಗಳು ಆಧುನಿಕ ಮೈಸೂರಿನ ರಾಜಕೀಯ ಬದಲಾವಣೆಗಳನ್ನು ಚರ್ಚಿಸಲು ವಿಶೇಷ ಒತ್ತುನೀಡಿವೆ.

ಆಧುನಿಕ ಮೈಸೂರು ರಾಜ್ಯದ ಚರಿತ್ರೆಯನ್ನು ದಾಖಲಿಸುವ ಮೊದಲ ಪ್ರಯತ್ನ ಮಾಡಿದ LELAH DUSHKIN ಅವರು ತಮ್ಮ ಅಪ್ರಕಟಿತ ಪಿಎಚ್.ಡಿ. ಪ್ರಬಂಧ 'The Non-Brahman movement in Princely Mysore' ನಲ್ಲಿ 'ಬ್ರಾಹ್ಮಣೇತರ ಚಳುವಳಿಯ ಮೂಲ, ಸಂಘ ಸಂಸ್ಥೆಗಳ ಬೆಳವಣಿಗೆ, ಮುಂಚೂಣಿ ಹಿಂದುಳಿದ ನಾಯಕರು, ಸಾಧನೆ ಮತ್ತು ವೈಫಲ್ಯಗಳ ಬಗ್ಗೆ ಚರ್ಚಿಸಿ, ಬ್ರಾಹ್ಮಣೇತರರು ಸಂಘಟನೆಯ ಪ್ರಯತ್ನದಲ್ಲಿ

ಕೈಗೊಂಡ ಸಂಘಟಿತ ಕಾರ್ಯಗಳನ್ನು ವಿಶ್ಲೇಷಿಸಿದ್ದಾರೆ'.[13] GUSTAFSON. D.R. ಅವರು ತಮ್ಮ ಅಪ್ರಕಟಿತ ಪಿಎಚ್.ಡಿ. ಪ್ರಬಂಧ 'The making of a Model State, Mysore: 1881-1902' ನಲ್ಲಿ 'ಮೈಸೂರು ಸಂಸ್ಥಾನವು ಒಂದು ಮಾದರಿ ರಾಜ್ಯವಾಗಿ ಬೆಳೆದು ಬಂದ ಹಂತಗಳನ್ನು ಗುರುತಿಸಿ 1881ರ ಪ್ರತಿಪಾನದ ನಂತರ ಸಂಸ್ಥಾನವು ಎದುರಿಸಿದ ಹಲವಾರು ಸವಾಲುಗಳನ್ನು, ಅವುಗಳನ್ನು ಎದುರಿಸಲು ಕೈಗೊಂಡ ಮಾರ್ಗಗಳನ್ನು ಚರ್ಚಿಸಿದ್ದಾರೆ'.[14]

JAMES MANOR ತಮ್ಮ ಕೃತಿ 'Political change in an Indian state Mysore. 1917-1955' ಯಲ್ಲಿ ಮೈಸೂರು ರಾಜ್ಯದಲ್ಲಿ 1917ರಿಂದ 1955ರ ನಡುವಿನ ರಾಜಕೀಯ ಬದಲಾವಣೆಗಳನ್ನು ಚರ್ಚಿಸುವ ಪ್ರಯತ್ನ ಮಾಡಿದ್ದಾರೆ.[15] ಆಧುನಿಕ ಮೈಸೂರನ್ನು ಕುರಿತು ಪ್ರಕಟವಾದ ಮತ್ತೊಂದು ಕೃತಿಯಲ್ಲಿ B. HETTNE ಅವರು ತಮ್ಮ ಕೃತಿ 'The Political Economi of Indirect Rule : Mysore, 1880-1947' ಯಲ್ಲಿ ಮೈಸೂರು ಸಂಸ್ಥಾನವು ಪರೋಕ್ಷ ವಸಾಹತುಶಾಹಿ ಹಿನ್ನೆಲೆಯಲ್ಲಿ ತನ್ನ ಆರ್ಥಿಕ ಬೆಳವಣಿಗೆಗಳನ್ನು ಸಾಧಿಸಲು ಎದುರಿಸಿದ ಬಿಕ್ಕಟ್ಟುಗಳನ್ನು ಹಾಗೂ ಈ ಬಿಕ್ಕಟ್ಟುಗಳನ್ನು ಎದುರಿಸಲು ಅಳವಡಿಸಿಕೊಂಡು ವಿವಿಧ ತಂತ್ರಗಳನ್ನು ಕುರಿತು ಚರ್ಚಿಸಿದ್ದಾರೆ. ವಿಶೇಷವಾಗಿ ಹೆಟ್ನೆಯವರು ಮೈಸೂರು ರಾಜ್ಯದಲ್ಲಿನ ರಾಜಕೀಯ ಚಳವಳಿಗಳು, ಆರ್ಥಿಕ ಅಭಿವೃದ್ಧಿ ಕಾರ್ಯಗಳು ಹಾಗೂ ಸಾಮಾಜಿಕ ಬದಲಾವಣೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ.[16]

S. CHANDRASHEKAR ಅವರು ತಮ್ಮ ಕೃತಿ "ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು: 1881 –1940" ಯಲ್ಲಿ "ಮೈಸೂರು ರಾಜ್ಯದ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಯ ಹಲವು ಮಜಲುಗಳನ್ನು ಚರ್ಚಿಸಿದ್ದಾರೆ. ವಿಶೇಷವಾಗಿ ಬ್ರಾಹ್ಮಣೇತರ ಚಳವಳಿ, ಪಂಚಮರ ಸಾಮಾಜಿಕ ಸ್ಥಿತಿ–ಗತಿಗಳು, ಕಾರ್ಮಿಕ ಚಳವಳಿ ಹಾಗೂ ರಾಜಕೀಯ ಬದಲಾವಣೆಗಳ ಬಗ್ಗೆ ಕೃತಿಯಲ್ಲಿ ವಿಶೇಷ ಬೆಳಕು ಚೆಲ್ಲಲಾಗಿದೆ"[17]

---

13. LELAH DUSHKIN : The Non-Brahman Movement in Princely Mysore, (Unpublished Ph.D., Dissertation, 1974)
14. GUSTAF SON .D.R. : The Making of a Model State, Mysore : 1881-1902 (Unpublished Ph.D., Dissertation, 1969).
15. JAMES MANOR : Political Change in an Indian State Mysore, 1917-1955.
16. HETTNE. B. : The political Economi of Indirect Rule : Mysore, 1880-1947.
17. ಚಂದ್ರಶೇಖರ್ ಎಸ್. : ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು, 1881–1940.

VANAJA RANGA SWAMY ಅವರು ತಮ್ಮ ಕೃತಿ 'The Story of Integration: A New Interpretation in the Context of the Democratic Movements in the Princely State of Mysore, Travancore and Cochin, 1900-1947' ಯಲ್ಲಿ ಮೈಸೂರು, ತಿರುವಾಂಕೂರು ಮತ್ತು ಕೊಚ್ಚಿನ್ ಸಂಸ್ಥಾನಗಳಲ್ಲಿ 1900 ರಿಂದ 1947ರ ಅವಧಿಯಲ್ಲಿ ನಡೆದ ಸಾಮಾಜಿಕ ಹಾಗೂ ರಾಜಕೀಯ ಚಳವಳಿಗಳನ್ನು ಚರ್ಚಿಸಿದ್ದಾರೆ. ತಮ್ಮ ಅಧ್ಯಯನದಲ್ಲಿ ಈ ಚಳವಳಿಗಳು ನಡೆದು ಬಂದ ವಿವಿಧ ಘಟ್ಟಗಳನ್ನು ಗುರುತಿಸಿ, ಹಲವು ಸ್ಥಳೀಯ ಭಿನ್ನತೆಗಳ ನಡುವೆಯೂ ದೇಶೀಯ ಸಂಸ್ಥಾನಗಳಲ್ಲಿ ನಡೆದ ಈ ಚಳವಳಿಗಳು ಸಮಾನ ಅಂಶಗಳನ್ನು ಹೊಂದಿದ್ದವೆಂಬ ಅಂಶವನ್ನು ಸ್ಪಷ್ಟಪಡಿಸುತ್ತಾರೆ[18].

B. KUPPU SWAMY ಅವರು ತಮ್ಮ ಕೃತಿಯಾದ 'Back ward Class Movement in Karnataka' ದಲ್ಲಿ "ಮೈಸೂರು ಬ್ರಾಹ್ಮಣ ಮತ್ತು ಮದ್ರಾಸ್ ಬ್ರಾಹ್ಮಣರ ವಿವಾದ, ಆ ನಂತರದ ಕಾಲಘಟ್ಟದಲ್ಲಿ ಹೇಗೆ ಇದು ಮೈಸೂರು ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಚಳವಳಿಯಾಗಿ ರೂಪುಗೊಂಡಿತು ಹಾಗೂ ಮಿಲ್ಲರ್ ಸಮಿತಿಯ ಬಗ್ಗೆ ಮಾಹಿತಿ ನೀಡುತ್ತದೆ. ಆದರೆ ಮೈಸೂರು ಸಂಸ್ಥಾನದಲ್ಲಿ ನಡೆದ ಬ್ರಾಹ್ಮಣೇತರ ಚಳವಳಿಯ ಬಗ್ಗೆ ಇವರು ನೀಡಿರುವ ಹೇಳಿಕೆಗಳು ವಿರೋಧಾಭಾಸದಿಂದ ಕೂಡಿದೆ".[19]

ಇತ್ತೀಚಿನ ದಶಕಗಳಲ್ಲಿ ಆಧುನಿಕ ಮೈಸೂರು ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಬದಲಾವಣೆಗಳನ್ನು ಕುರಿತಂತೆ ಕೆಲವು ಕೃತಿಗಳು ಹೊರ ಬಂದಿದೆ. R. RAMAKRISHNAN ತಮ್ಮ ಕೃತಿ 'Press and Politics in an Indian State-Mysore 1859-1947' ಯಲ್ಲಿ 'ಆಧುನಿಕ ಮೈಸೂರು ಪತ್ರಿಕೆಗಳ ಪಾತ್ರವನ್ನು ಕುರಿತು ಚರ್ಚಿಸಿದ್ದಾರೆ'.[20] SIDDALINGA SWAMY ಯವರು ತಮ್ಮ ಕೃತಿ 'Agrarian Relations in Mysore - 1799-1881' ಯಲ್ಲಿ ಬ್ರಿಟಿಷರ ಆಳ್ವಿಕೆ ಸಂದರ್ಭದಲ್ಲಿ 'ಮೈಸೂರು ರಾಜ್ಯದಲ್ಲಿ ವಸಾಹತುಶಾಹಿ ಹಿನ್ನೆಲೆಯಲ್ಲಿ ಆದ ಕೃಷಿ ಬದಲಾವಣೆಗಳನ್ನು ಕುರಿತು ಚರ್ಚಿಸಿದ್ದಾರೆ.[21]

---

18. VANAJA RANGA SWAMY : The Story of Integration : A New Interpretation in the Context of the Democratic Movements in the Princely State of Mysore, Travancore and Cochin, 1900-1947.
19. KUPPU SWAMY .B : BackWard Class Movement in Karnataka, Bangalore-1978.
20. RAMAKRISHNAN .R : Press and Politics in an Indian State - Mysore, 1859-1947.
21. SIDDALINGA SWAMY : Agrarian Relations in Mysore, 1799-1881.

G. MADE GOWDA ರವರು ತಮ್ಮ ಕೃತಿ 'A Formative Period of an Indian State : Modern Mysore, 1881-1902 (A Study of the Elite, Polity and Society)ಯಲ್ಲಿ 'ಆಧುನಿಕ ಮೈಸೂರಿನ ಪ್ರತಿಷ್ಠಿತ ವರ್ಗಗಳನ್ನು ಗುರುತಿಸಿ ಅವರ ಪಾತ್ರವನ್ನು ಚರ್ಚಿಸಿದ್ದಾರೆ'.[22] JANAKI NAIR ತಮ್ಮ ಕೃತಿ 'Miners and Mill Hands - work, Culture and Politics in Princely Mysore'ಯಲ್ಲಿ 'ಮೈಸೂರು ರಾಜ್ಯದಲ್ಲಿ ಆದ ಕೈಗಾರಿಕಾ ಅಭಿವೃದ್ಧಿ, ಕಾರ್ಮಿಕರ ಸ್ಥಿತಿ-ಗತಿಗಳು ಹಾಗೂ ಕಾರ್ಮಿಕ ಸಂಘಟನೆ ಕುರಿತು ಚರ್ಚಿಸಿದ್ದಾರೆ'.[23]

ಕ್ರಿ.ಶ. 1946 ರಲ್ಲಿ ಪ್ರಕಟವಾದ **'ತುಮಕೂರು ವಿಶೇಷಾಧಿವೇಶನ'** ಎಂಬ ಗ್ರಂಥದಲ್ಲಿ ಕೆ.ಸಿ ರೆಡ್ಡಿ ಅವರ ಬಗ್ಗೆ ಹತ್ತು ಪುಟಗಳ ವಿಶೇಷ ಲೇಖನವಿದೆ. ಇದು ಕೆ.ಸಿ. ರೆಡ್ಡಿ ಅವರ ಬಗ್ಗೆ ನಮಗೆ ದೊರೆಯುವ ಮೊದಲ ಲೇಖನ. ಇದರಲ್ಲಿ ರೆಡ್ಡಿ ಅವರ ಜನನ, ವಿದ್ಯಾಭ್ಯಾಸ, ರಾಜಕೀಯ ಪ್ರವೇಶ, ಸ್ವಾತಂತ್ರ್ಯ ಚಳವಳಿಯಲ್ಲಿ ಅವರ ಪಾತ್ರ, ದೂರದರ್ಶಿಕತ್ವ, ಸೂಕ್ಷ್ಮತೆ, ಆಲೋಚನೆ ಪರತೆ, ಮೈಸೂರು ಸಂಸ್ಥಾನದ ರಾಜಕೀಯವನ್ನೇ ಮೈಗೂಡಿಸಿಕೊಂಡ ಧೀಮಂತ ವ್ಯಕ್ತಿತ್ವ ಮುಂತಾದ ವಿವರಗಳಿವೆ.[24]

ಕೆ.ಸಿ. ರೆಡ್ಡಿ ಅವರು ಆಧುನಿಕ ಮೈಸೂರಿನ ರಾಜಕೀಯ ಹೋರಾಟಗಳಲ್ಲಿ ವಹಿಸಿದ ಪಾತ್ರವನ್ನು ಕುರಿತಂತೆ ಸೂಕ್ಷ್ಮವಾಗಿ **ಕೆ.ಆರ್. ಸಂಧ್ಯಾರೆಡ್ಡಿ** ಅವರು ತಮ್ಮ ಕೃತಿಯಲ್ಲಿ ನಿರೂಪಿಸಿದ್ದಾರೆ. ಕರ್ನಾಟಕ ಸರ್ಕಾರವು ಪ್ರತಿಭಾವಂತ ಸಂಸದೀಯ ಪಟುಗಳ ಬದುಕು-ಬರಹ ಮಾಲಿಕೆಯಡಿಯಲ್ಲಿ ಹಲವು ನಾಯಕರ ಜೀವನ ಚರಿತ್ರೆಗಳನ್ನು ಪ್ರಕಟಿಸುವ ಯೋಜನೆಯಡಿ ಮೇಲಿನ ಕೃತಿಯನ್ನು ಪ್ರಕಟಿಸಲಾಗಿದೆ. ಕೃತಿಯನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಕೆ.ಸಿ. ರೆಡ್ಡಿ ಅವರ ಒಂದು ವ್ಯಕ್ತಿ ಚಿತ್ರಣವನ್ನು ಸೂಕ್ಷ್ಮವಾಗಿ ನೀಡಲಾಗಿದೆ. ಎರಡನೆಯ ಭಾಗದಲ್ಲಿ ಶಾಸನಸಭೆಯಲ್ಲಿ ಕೆ.ಸಿ. ರೆಡ್ಡಿ ಅವರು ಮಾಡಿದ ಭಾಷಣಗಳ ವಿವರಗಳಿವೆ. ಮೂರನೆಯ ಭಾಗದಲ್ಲಿ ಭಾರತದ ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಿ ಕೆ.ಸಿ. ರೆಡ್ಡಿ ಮಾಡಿದ ಭಾಷಣದ ವಿವರಗಳಿವೆ. ನಾಲ್ಕನೆಯ ಭಾಗದಲ್ಲಿ ವಿಧಾನಸಭಾ ಕಲಾಪಗಳಿವೆ. ಐದನೆಯ ಭಾಗದಲ್ಲಿ ಕೆ.ಸಿ. ರೆಡ್ಡಿ ಲೋಕಸಭೆಯಲ್ಲಿ ಮಾಡಿದ ಭಾಷಣಗಳ ಪತ್ಯವಿದೆ. ಅನುಬಂಧ ರೂಪದಲ್ಲಿ ಕೆ.ಸಿ. ರೆಡ್ಡಿ ಅವರ ಜೀವನದ

---

22. MADE GOWDA .G : A Formative Period of an Indian State : Modern Mysore 1881-1902 (A Study of the Elite, Polity and Society) (Unpublished Ph.D., Dissertation 1983)
23. JANAKI NAIR : Miners and Mill Hands - Work, Culture and Politics in Princely Mysore, 1990.
24. ಆರಾಧ್ಯ .ಆರ್.ಎಸ್. : ತುಮಕೂರು ವಿಶೇಷಾಧಿವೇಶನ, 1946.

ಪ್ರಮುಖ ಹೆಜ್ಜೆ ಗುರುತಗಳನ್ನು ನೀಡಲಾಗಿದೆ. ಸಂಧ್ಯಾರೆಡ್ಡಿ ಅವರ ಕೃತಿ ಕೆ.ಸಿ. ರೆಡ್ಡಿ ಅವರ ಬಗ್ಗೆ ಮೂಲ ದಾಖಲೆಗಳನ್ನು ಒದಗಿಸುವ ಒಂದು ಆಕರ ಗ್ರಂಥದಂತಿದೆ. 36 ಪುಟಗಳಲ್ಲಿ ರೆಡ್ಡಿ ಅವರು ಮಾಡಿದ ಭಾಷಣಗಳು, ಅವರು ಭಾಗವಹಿಸಿದ ಚರ್ಚೆಗಳ ಮೂಲ ಪಾಠವನ್ನು ನೀಡಿದ್ದಾರೆ.[25]

ಅಶ್ವತ್ಥನಾರಾಯಣ ಅವರು "**ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳವಳಿಯ ಒಳನೋಟಗಳು 1870–1940**" ಎಂಬ ತಮ್ಮ ಕೃತಿಯಲ್ಲಿ "ವಸಾಹತುಶಾಹಿ ಆಳ್ವಿಕೆಯ ತಂತ್ರಗಳಿಗೆ ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳಲ್ಲಿ ಹುಟ್ಟಿಕೊಂಡ ಚಲನೆಗಳು, ಬಹುಮುಖಿ ಭಾರತೀಯ ಸಮಾಜದಲ್ಲಿದ್ದ ಸಾಂಸ್ಕೃತಿಕ ಅಲ್ಪಸಂಖ್ಯಾತ ಬಲಾಢ್ಯರು ಮತ್ತು ಬಹುಸಂಖ್ಯಾತ ಸಾಮಾಜಿಕ ಅಧೀನರ ನಡುವಿನ ಹೋರಾಟ, ಆ ನಂತರ ಮೈಸೂರು ಸಂಸ್ಥಾನದ ಜನತೆ ಒಂದಾಗಿ ಕಲೆತು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೇಗೆ ಬಲವಾದ ರಾಷ್ಟ್ರೀಯ ಹೋರಾಟವನ್ನು ಸಂಘಟಿಸಿದರು" ಎಂಬುದನ್ನು ವಿಶ್ಲೇಷಿಸಿದ್ದಾರೆ.[26]

ತಿಮ್ಮನಹಳ್ಳಿ ವೇಣುಗೋಪಾಲ್ ಅವರು "**ರೈತರು : ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳವಳಿ 1881–1947**" ಎಂಬ ತಮ್ಮ ಕೃತಿಯಲ್ಲಿ "ಸ್ವಾತಂತ್ರ್ಯಪೂರ್ವ ಮೈಸೂರು ಸಂಸ್ಥಾನದಲ್ಲಿನ ಸರ್ಕಾರದ ಭೂ ಕಂದಾಯ ನೀತಿಯಲ್ಲಾದ ಬದಲಾವಣೆ, ಈ ವ್ಯವಸ್ಥೆಯಲ್ಲಿ ಗ್ರಾಮಾಧಿಕಾರಿಗಳು, ಶಾನುಭೋಗರು ಮತ್ತು ಪಟೇಲರು ವಹಿಸಿದ ಪಾತ್ರ, ಮಹಾ ಆರ್ಥಿಕ ಮುಗ್ಗಟ್ಟು, ಸಂಸ್ಥಾನದ ಬ್ರಾಹ್ಮಣೇತರ ಪಕ್ಷಗಳು, ಆ ನಂತರ ಮೈಸೂರು ಕಾಂಗ್ರೆಸ್ ಸಂಸ್ಥಾನದಾದ್ಯಂತ ರೈತ ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ರೈತರನ್ನು ಸರ್ಕಾರದ ವಿರುದ್ಧ ಹೋರಾಟ ಮಾಡಲು ಪ್ರೇರೇಪಿಸಿ, ರಾಷ್ಟ್ರೀಯ ಚಳವಳಿ ಯಶಸ್ಸುಗೊಳ್ಳಲು ಹೇಗೆ ಕಾರಣರಾದರು" ಎಂಬುದನ್ನು ವಿಶ್ಲೇಷಿಸಿದ್ದಾರೆ.[27]

♦♦

---

25. ಸಂಧ್ಯಾರೆಡ್ಡಿ .ಕೆ.ಆರ್. : ಕೆ.ಸಿ. ರೆಡ್ಡಿ, 2000.
26. ಅಶ್ವತ್ಥನಾರಾಯಣ : ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳವಳಿಯ ಒಳನೋಟಗಳು 1870–1940.
27. ತಿಮ್ಮನಹಳ್ಳಿ ವೇಣುಗೋಪಾಲ್ : ರೈತರು : ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳವಳಿ 1881–1947.

ಅಧ್ಯಾಯ – 2

ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಕೆ.ಸಿ. ರೆಡ್ಡಿ ಪ್ರವೇಶ

1. ಕೌಟುಂಬಿಕ ಹಿನ್ನೆಲೆ ಮತ್ತು ವಿದ್ಯಾಭ್ಯಾಸ

ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿಯವರು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿ ಗ್ರಾಮದ ವೆಂಕಟರೆಡ್ಡಿ ಹಾಗೂ ಗಂಗೋಜಮ್ಮ ಇವರ ಎರಡನೆಯ ಪುತ್ರನಾಗಿ ಜನಿಸಿದರು. ಇವರ ಪೂರ್ವಿಕರು ಸಾವಿರಾರು ಎಕರೆ ಜಮೀನಿನ ಒಡೆಯರಾದ ಆಗರ್ಭ ಶ್ರೀಮಂತರು. ಇವರ ಮನೆಯಲ್ಲಿ ದೊರೆತ ವಂಶವೃಕ್ಷದ ದಾಖಲೆಗಳ ಪ್ರಕಾರ ಈ ವಂಶದ ಮೂಲ ಪುರುಷ ಬಶಿರೆಡ್ಡಿ. ಇವರ ಕಾಲ ಕ್ರಿ.ಶ. ಸು. 1800. ಇವರ ಮಗ ವೆಂಕಟರೆಡ್ಡಿ. ವೆಂಕಟರೆಡ್ಡಿಯವರಿಗೆ ಒಂಬತ್ತು ಮಂದಿ ಮಕ್ಕಳು. ಬಶಿರೆಡ್ಡಿ, ಬಂಗಿರೆಡ್ಡಿ ಹಾಗೂ ಏಳುಮಂದಿ ಹೆಣ್ಣು ಮಕ್ಕಳು. ವೆಂಕಟರೆಡ್ಡಿಯವರು ಕ್ರಿ.ಶ. 1855 ರಲ್ಲಿ ಮರಣಿಸಿದರು. ಹಿರಿಯ ಮಗನಾದ ಬಶಿರೆಡ್ಡಿಯವರಿಗೆ ಇಬ್ಬರು ಪತ್ನಿಯರು. ಹಿರಿಯ ಹೆಂಡತಿ ಪಾಪಮ್ಮ, ಕಿರಿಯ ಹೆಂಡತಿ ನಾಗಮ್ಮ. ಬಶಿರೆಡ್ಡಿ ನಾಗಮ್ಮ ದಂಪತಿಗಳಿಗೆ ಪುತ್ರನಾಗಿ ವೆಂಕಟರೆಡ್ಡಿ ಜನಿಸಿದರು. ವೆಂಕಟರೆಡ್ಡಿಯವರ ಪತ್ನಿ ಗಂಗೋಜಮ್ಮ. ಅವರ ತವರು ಮನೆ ಇಂದಿನ ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಕುಪ್ಪಂ ತಾಲ್ಲೂಕಿಗೆ ಸೇರಿದ ರಾಜಪೇಟೆ. ಶ್ರೀಮತಿ ಗಂಗೋಜಮ್ಮ ವೆಂಕಟರೆಡ್ಡಿಯವರಿಗೆ ಮೂರು ಮಂದಿ ಮಕ್ಕಳು. ವೆಂಕಟರಾಮರೆಡ್ಡಿ, ಚಂಗಲರಾಯರೆಡ್ಡಿ ಹಾಗೂ ಮೀನಾಕ್ಷಮ್ಮ.

ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿಯವರು ತಮ್ಮ ತಾಯಿ ಗಂಗೋಜಮ್ಮನವರ ತವರು ಊರಾದ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂ ತಾಲ್ಲೂಕಿಗೆ ಸೇರಿದ ರಾಜಪೇಟೆಯಲ್ಲಿ 05–05–1902 ರಂದು ಜನಿಸಿದರು. ಅವರ ತಂದೆ ವೆಂಕಟರೆಡ್ಡಿ ಸಾವಿರದ ನಾಲ್ಕು ನೂರು ಎಕರೆ ಭೂಮಿಯ ಒಡೆಯರಾಗಿದ್ದ ದೊಡ್ಡ ಜಮೀನ್ದಾರ ರಾಗಿದ್ದರಲ್ಲದೆ, ಮೈಸೂರು ಸಂಸ್ಥಾನದ ಕೋಲಾರ ಪ್ರದೇಶದ ಪ್ರಸಿದ್ಧ ಕಂಟ್ರಾಕ್ಟರ್ ಆಗಿದ್ದರು. ಕೆ.ಸಿ. ರೆಡ್ಡಿಯವರ ಆರಂಭದ ಶಿಕ್ಷಣ ಕೆ.ಜಿ.ಎಫ್.ನಲ್ಲಿ ನಡೆಯಿತು. ಕೋಲಾರದ ಚಿನ್ನದ ಗಣಿಗಳನ್ನು ನಡೆಸುತ್ತಿದ್ದ ಇಂಗ್ಲೆಂಡ್ ಮೂಲದ ಜಾನ್ ಟೇಲರ್ ಅಂಡ್ ಕಂಪನಿಯವರು

ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಬ್ರಿಟಿಷ್ ಕೆಲಸಗಾರರ ಮಕ್ಕಳಿಗೆಂದು ಪ್ರಾರಂಭಿಸಿದ ನರ್ಸರಿ ಲೋಯರ್ ಅಂಡ್ ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ ಕೆ.ಸಿ. ರೆಡ್ಡಿ ಅವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪಡೆದು 1914ರಲ್ಲಿ 7ನೇ ತರಗತಿಯನ್ನು ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು.[1]

ಹೈಸ್ಕೂಲ್ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಲಂಡನ್ ಮಿಷನ್ ಹೈಸ್ಕೂಲ್ ಸೇರಿದ ಕೆ.ಸಿ. ರೆಡ್ಡಿಯವರು 1915ರಲ್ಲಿ 8ನೇ ತರಗತಿ ಪರೀಕ್ಷೆಯಲ್ಲಿ ಶೇಕಡ 75% ಅಂಕಗಳನ್ನು ಪಡೆದುದಕ್ಕಾಗಿ ಪ್ರಾಂಶುಪಾಲರಾದ EDWARD P.RICE ರವರು ಬಹುಮಾನವಾಗಿ DANIEL DEFOE ನ ಕೃತಿಯಾದ LIFE AND ADVENTURES OF ROBINSON CRUSOE ಪುಸ್ತಕವನ್ನು ಪಡೆದರು. ಇದರಲ್ಲಿ PRIZE AWARED TO K. CHENGALARAYA REDDY FOR HAVING OBTAINED 75% OF THE TOTAL NUMBER OF MARKS ಎಂಬ ಬರಹದೊಡನೆ ಪ್ರಾಂಶುಪಾಲರಾದ EDWARD P.RICE ಸಹಿ ಇದೆ.[2] ಕೆ.ಸಿ. ರೆಡ್ಡಿಯವರು ಅಂತರ ಶಾಲಾ ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಹಲವಾರು ಬಹುಮಾನಗಳನ್ನು ಪಡೆದುಕೊಂಡಿದ್ದು ಉಪಾಧ್ಯಾಯರೆಲ್ಲರ ಮೆಚ್ಚಿನ ವಿದ್ಯಾರ್ಥಿಯಾಗಿದ್ದರು. 1918ರಲ್ಲಿ ಕೆ.ಸಿ. ರೆಡ್ಡಿಯವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಇಡೀ ಮೈಸೂರು ಸಂಸ್ಥಾನಕ್ಕೆ 4ನೇ ರ್‍ಯಾಂಕ್ ಪಡೆದರು. ಅಲ್ಲದೆ ಸರ್ಕಾರ E.C.P.S. ಅಂದರೆ ELIGIBLE FOR ADMISSION TO COLLEGE AND PUBLIC SERVICE ಗೆ ಅನುಮತಿ ನೀಡಿದಲ್ಲದೆ, 1918–19ನೇ ಸಾಲಿಗೆ ತಿಂಗಳಿಗೆ 10 ರೂ. ನಂತೆ ಮೆರಿಟ್ ಸ್ಕಾಲರ್‌ಶಿಪ್ ನೀಡಿ ಗೌರವಿಸಿತು.[3]

1918ರ ಅಕ್ಟೋಬರ್ 31 ರಂದು ಕೆ.ಸಿ. ರೆಡ್ಡಿ ಅವರ ತಂದೆ ವೆಂಕಟರೆಡ್ಡಿ ಅವರು ಮರಣ ಹೊಂದಿದರು. ಆದರೆ ಕೆ.ಸಿ. ರೆಡ್ಡಿ ಅವರ ಅಣ್ಣ ವೆಂಕಟರಾಮರೆಡ್ಡಿ ಅವರು ಸಂಸಾರದ ಜವಾಬ್ದಾರಿಗಳನ್ನು ಹೊತ್ತುಕೊಂಡು, ಕೆ.ಸಿ. ರೆಡ್ಡಿ ಅವರ ವಿದ್ಯಾಭ್ಯಾಸ ಮುಂದುವರೆಯುವಂತೆ ನೋಡಿಕೊಂಡರು.[4]

---

1. KYASAMBALLI CHENGALARAYA REDDY : ಕೆ.ಸಿ. ರೆಡ್ಡಿಯವರ ಸಂಬಂಧಿಕರು ರಚಿಸಿರುವ ಕೈಪಿಡಿ : ಲೇಖಕರ ಉಲ್ಲೇಖವಿಲ್ಲ, ಪುಟ–1
2. EDWARD P. RICE : LIFE AD ADVENTURE OF ROBINSON CRUSOE : ಈ ಗ್ರಂಥ ಈಗಲೂ ಕ್ಯಾಸಂಬಳ್ಳಿ ವೆಂಕಟಕೃಷ್ಣಾರೆಡ್ಡಿಯವರ ಮನೆಯಲ್ಲಿದೆ.
3. The Mysore Gazette : Date : July 1918, P-953.
4. KYASAMBALLI CHENGALARAYA REDDY : ಕೆ.ಸಿ. ರೆಡ್ಡಿಯವರ ಸಂಬಂಧಿಕರು ರಚಿಸಿರುವ ಕೈಪಿಡಿ : ಲೇಖಕರ ಉಲ್ಲೇಖವಿಲ್ಲ, ಪುಟ–1

1918ರಲ್ಲಿ ಕೆ.ಸಿ. ರೆಡ್ಡಿ ಅವರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮದ್ರಾಸ್‌ನ ಪಚ್ಚಿಯಪ್ಪ ಕಾಲೇಜಿಗೆ ಸೇರಿದರು. 1924ರಲ್ಲಿ ಕೆ.ಸಿ. ರೆಡ್ಡಿಯವರು ಉನ್ನತ ಶ್ರೇಣಿಯಲ್ಲಿ B.A. ಪದವಿ ಪಡೆದರು. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದುದಕ್ಕಾಗಿ 'ರಾಜಾ ರಾಮಸ್ವಾಮಿ ಮೊದಲಿಯಾರ್' ಬಂಗಾರದ ಪದಕ ಪಡೆದರು. ನಂತರ ಮದ್ರಾಸ್ –ಲಾ– ಕಾಲೇಜಿನಲ್ಲಿ ಶಿಕ್ಷಣ ಮುಂದುವರೆಸಿದ ಕೆ.ಸಿ. ರೆಡ್ಡಿ 1926ರಲ್ಲಿ B.L. ಪದವಿ ಪಡೆದರು.[5]

2. ಮದ್ರಾಸ್ ಪ್ರಾಂತ್ಯದ ಪ್ರಭಾವ

1921ರಲ್ಲಿ ಕೆ.ಸಿ. ರೆಡ್ಡಿಯವರು ಮದ್ರಾಸ್‌ನ ಪಚ್ಚಿಯಪ್ಪ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಮೇಲೆ ಪ್ರಭಾವ ಬೀರಿದವರಲ್ಲಿ ಅನಿಬೆಸೆಂಟರು ಪ್ರಮುಖರು. ಕೆ.ಸಿ. ರೆಡ್ಡಿ ಅನಿಬೆಸೆಂಟರು ಸ್ಥಾಪಿಸಿದ Y.M.I.A. (ಯಂಗ್ ಮ್ಯಾನ್ಸ್ ಇಂಡಿಯನ್ ಅಸೋಸಿಯೇಷನ್) ನಲ್ಲಿ ವಸತಿ ಮಾಡಿದ್ದರು. ಇಲ್ಲಿ ಓದುತ್ತಿದ್ದ ವೇಳೆ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಒಂದು 'ಯುವಜನ ಸಂಘ'ವನ್ನು ಸ್ಥಾಪಿಸಿದ ಕೆ.ಸಿ. ರೆಡ್ಡಿ, ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು.[6] ಭಾರತದ ಯುವ ಜನಾಂಗಕ್ಕೆ ಶೈಕ್ಷಣಿಕ ಅನುಕೂಲಗಳನ್ನು ಕಲ್ಪಿಸಲು, ಏಕತೆ, ಒಗ್ಗಟ್ಟನ್ನು ಮೂಡಿಸಲು ಅನಿಬೆಸೆಂಟ್ ಮದ್ರಾಸ್‌ನಲ್ಲಿ Y.M.I.A. ಸ್ಥಾಪಿಸಿದರು.

ಈ ಸಂಸ್ಥೆಯಲ್ಲಿದ್ದ ವಿವಿಧ ಜಾತಿ, ಕೋಮುಗಳಿಗೆ ಸೇರಿದ ಯುವಕರು ಈ ಸಂಘಟನೆಯ ಸದಸ್ಯರಾಗಿ ಅನಿಬೆಸೆಂಟರ ತತ್ವ, ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡರು. Y.M.I.A. ಆವರಣದಲ್ಲಿ ಅನಿಬೆಸೆಂಟರು ಸ್ಥಾಪಿಸಿದ ಸಭಾಂಗಣಕ್ಕೆ ಖ್ಯಾತ ರಾಷ್ಟ್ರೀಯವಾದಿ ನಾಯಕ 'ಗೋಖಲೆ' ಯವರ ಹೆಸರಿಡಲಾಗಿತ್ತು. ಇಲ್ಲಿ ನಡೆಯುತ್ತಿದ್ದ ಭಾಷಣಗಳು, ಚರ್ಚೆಗಳು ಮದ್ರಾಸ್‌ನಲ್ಲಿ ಒಂದು ರಾಜಕೀಯ ಜಾಗೃತಿಯನ್ನು ಬೆಳಸಲು ಕಾರಣವಾಯಿತು. ಈ ಸಂಸ್ಥೆ ಸಾವಿರಾರು ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ನೀಡಿದುದಲ್ಲದೆ, ಉನ್ನತ ಆದರ್ಶಗಳನ್ನು, ರಾಷ್ಟ್ರೀಯ ಮನೋಭಾವವನ್ನು, ದೇಶಾಭಿಮಾನವನ್ನು ಮೂಡಿಸಲು ಒಂದು ವೇದಿಕೆಯಾಯಿತು.[7]

ಕೆ.ಸಿ. ರೆಡ್ಡಿಯವರು ತಮ್ಮ ವಿದ್ಯಾಭ್ಯಾಸದ ಸಂದರ್ಭದಲ್ಲಿ ಪತ್ರಿಕೋದ್ಯಮಿಯಾಗುವ ಆಸೆ ಹೊತ್ತು ತಮ್ಮ ಅನಿಸಿಕೆಯನ್ನು ಅನಿಬೆಸೆಂಟರಲ್ಲಿ ನಿವೇದಿಸಿಕೊಂಡರು. ಆಗ

5. ಆರಾಧ್ಯ, ಆರ್.ಎಸ್. : ತುಮಕೂರು ವಿಶೇಷಾಧಿವೇಶನ – 1946, ಪುಟ – 72.
6. ಆರಾಧ್ಯ, ಆರ್.ಎಸ್. : ತುಮಕೂರು ವಿಶೇಷಾಧಿವೇಶನ – 1946, ಪುಟ – 70.
7. JAMES, H. COUSINS : The Annie Besant Centenary Book : 1847-1947, Page : 131-133

ಅನಿಬೆಸೆಂಟರು 'ನೀನು ಪತ್ರಿಕೋದ್ಯಮದಲ್ಲಿ ಯಶಸ್ಸು ಪಡೆಯಬೇಕಾದರೆ ವಿದ್ಯಾಭ್ಯಾಸವನ್ನು ಮೊದಲು ಮುಗಿಸುವುದು ಅಗತ್ಯ ಎಂದು ಹಿತವಚನ ನೀಡಿದರು'.[8] ಕೆ.ಸಿ. ರೆಡ್ಡಿಯವರು ಮದ್ರಾಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾದರು. 1921ರಲ್ಲಿ ಮದ್ರಾಸ್ ಸಮುದ್ರ ತೀರದಲ್ಲಿ ಗಾಂಧೀಜಿ ಅವರ ಭಾಷಣ ಏರ್ಪಡಿಸಿದ್ದಾಗ ಅದನ್ನು ಕೇಳಲು ಹೋದ ಸಾವಿರಾರು ಜನರಲ್ಲಿ ಕೆ.ಸಿ. ರೆಡ್ಡಿ ಅವರು ಒಬ್ಬರು. ಅಸಹಕಾರ ಚಳವಳಿಯ ಅಂಗವಾಗಿ ವಿದ್ಯಾರ್ಥಿಗಳು ಶಾಲಾ, ಕಾಲೇಜುಗಳ್ನು ತ್ಯಜಿಸಬೇಕು, ವಕೀಲರು ವಕಾಲತ್ತು ನಡೆಸುವುದನ್ನು ಬಿಡಬೇಕು, ಪರದೇಶದ ವಸ್ತ್ರಗಳನ್ನು ಬಹಿಷ್ಕರಿಸಿ ಖಾದಿ ಬಳಸಬೇಕು. ಇದು ಗಾಂಧೀಜಿಯವರು ಅಂದು ಮಾಡಿದ ಭಾಷಣದ ತಿರುಳು. ಆಗ ತಾನೇ ಇಂಟರ್ ಮುಗಿಸಿದ್ದ ಕೆ.ಸಿ. ರೆಡ್ಡಿ ಅವರ ಮೇಲೆ ಗಾಂಧೀಜಿ ಬೀರಿದ ಪ್ರಭಾವ ಅಪಾರ. ಅಂದಿನಿಂದಲೇ ಖಾದಿ ತೊಡುವ, ಕಾಲೇಜು ವ್ಯಾಸಂಗವನ್ನು ಬಿಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗುವ ನಿರ್ಧಾರ ಮಾಡಿದರು. ಆದರೆ ಹಿರಿಯರ ಬುದ್ಧಿಮಾತಿನಿಂದಾಗಿ ಕೆ.ಸಿ. ರೆಡ್ಡಿ ಶಿಕ್ಷಣದ ಕಡೆ ಗಮನಕೊಟ್ಟರು.[9]

ಕೆ.ಸಿ. ರೆಡ್ಡಿ ಅವರು ಕ್ಯಾಸಂಬಳ್ಳಿಯಂತಹ ಸಣ್ಣ ಊರಿನಲ್ಲಿ ಬಾಲ್ಯವನ್ನು ಕಳೆದರೂ, ಬೆಂಗಳೂರಿನಂತಹ ನಗರದಲ್ಲಿ ಪ್ರೌಢ ಶಿಕ್ಷಣವನ್ನು ಪಡೆದು, ಮದ್ರಾಸ್‌ನಂತಹ ದೊಡ್ಡ ನಗರದಲ್ಲಿ ವಿದ್ಯಾಭ್ಯಾಸ ಮಾಡುವ ಸದಾವಕಾಶ ದೊರೆತುದರಿಂದ ಅವರ ತಿಳುವಳಿಕೆ, ಜ್ಞಾನದ ಪರಿಧಿ ವಿಕಾಸವಾಗಲು ಅವಕಾಶ ದೊರೆಯಿತು. ಹಾಗೆ ದೊರೆತ ಸದಾವಕಾಶವನ್ನು ಅದ್ಭುತವಾಗಿ ಸದುಪಯೋಗಪಡಿಸಿಕೊಂಡು ರೆಡ್ಡಿ ಅವರು ಜ್ಞಾನದ ಕಣಜವೇ ಆದರು. ತಮ್ಮ ಕಾಲೇಜಿನ ಗ್ರಂಥಾಲಯದಲ್ಲಿ ದೊರೆತ ಅಮೂಲ್ಯ ಗ್ರಂಥಗಳನ್ನೆಲ್ಲಾ ಓದಿ ತಮ್ಮ ಜ್ಞಾನ ಭಂಡಾರವನ್ನು ವೃದ್ಧಿಸಿಕೊಂಡರು. ವಿದ್ಯಾರ್ಥಿಯಾಗಿದ್ದಾಗ ಬೆಳೆಸಿಕೊಂಡ ಈ ಹವ್ಯಾಸ ಅವರ ಜೀವನದ ಕಡೆಯವರೆಗೂ ಅವರೊಡನೆ ಬೆಳೆದು ಬಂದಿತು.

ಕೆ.ಸಿ. ರೆಡ್ಡಿ ಅವರು ಮದ್ರಾಸ್‌ನಲ್ಲಿ ವಿದ್ಯಾಜ್ಞಾನವಲ್ಲದೆ ಅಮೂಲ್ಯವಾದ ಲೋಕಜ್ಞಾನವನ್ನು ಪಡೆದುಕೊಂಡರು. ಮದ್ರಾಸ್ ಆ ಕಾಲಕ್ಕೆ ವಿದ್ಯಾಭ್ಯಾಸ ಹಾಗೂ ರಾಜಕೀಯ ಪ್ರಜ್ಞೆಯ ವಿಕಾಸಕ್ಕೆ ಪ್ರೇರೇಪಣೆ ನೀಡಬಲ್ಲಂತಹ ದೊಡ್ಡ ಪಟ್ಟಣವಾಗಿದ್ದುದು ರೆಡ್ಡಿಯಂತಹ ನಾಯಕರ ಬೆಳವಣಿಗೆಗೆ ಕಾರಣವಾಯಿತು. ಅನಿಬೆಸೆಂಟ್, ಮಹಾತ್ಮ ಗಾಂಧೀಜಿ ಮುಂತಾದ ಹಿರಿಯರ ವಿಚಾರ ಪ್ರಚೋದಕವಾದ ಭಾಷಣಗಳನ್ನು ಕೇಳಿ ತಮ್ಮ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡರು. ಆ ಕಾಲಘಟ್ಟದಲ್ಲಿಯೇ ಮದ್ರಾಸ್

---

8. ಸಂಧ್ಯಾರೆಡ್ಡಿ .ಕೆ.ಆರ್ : ಕೆ.ಸಿ.ರೆಡ್ಡಿ, ಸಂಸದೀಯ ಪಟುಗಳು ಬದುಕು–ಬರಹಮಾಲಿಕೆ, ಪುಟ 3
9. ಸಂಧ್ಯಾರೆಡ್ಡಿ .ಕೆ.ಆರ್ : ಕೆ.ಸಿ.ರೆಡ್ಡಿ, ಸಂಸದೀಯ ಪಟುಗಳು ಬದುಕು–ಬರಹಮಾಲಿಕೆ, ಪುಟ 2

ಪ್ರಾಂತ್ಯದಲ್ಲಿ ಬ್ರಾಹ್ಮಣೇತರ ಚಳವಳಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಅದು ರಾಜಕೀಯ ಸಂಘಟನೆಯ ರೂಪತಾಳಿ ಜಸ್ಟೀಸ್ ಪಾರ್ಟಿಯ ಉದಯಕ್ಕೂ ಕಾರಣವಾಯಿತು.

ಕ್ರಿ.ಶ. 1916ರ ನವೆಂಬರ್‌ನಲ್ಲಿ ಮದ್ರಾಸ್‌ನ ಬ್ರಾಹ್ಮಣೇತರ ಮುಖಂಡರಾಗಿದ್ದ ಡಾ॥ ಟಿ.ಎಂ. ನಾಯರ್, ತ್ಯಾಗರಾಜ್ ಚೆಟ್ಟಿ, ನಟೇಶ್ ಮೊದಲಿಯಾರ್ ಮುಂತಾದ ನಾಯಕರ ಚಿಂತನೆಯ ಫಲವಾಗಿ 'ಸೌತ್ ಇಂಡಿಯನ್ ಲಿಬರಲ್ ಫೆಡರೇಷನ್' ಎಂಬ ರಾಜಕೀಯ ಪಕ್ಷ ಆರಂಭವಾಯಿತು. ಇವರು 1917ರಲ್ಲಿ 'ಜಸ್ಟೀಸ್' ಎಂಬ ಇಂಗ್ಲೀಷ್, 'ದ್ರಾವಿಡ' ಎಂಬ ತಮಿಳು ದಿನಪತ್ರಿಕೆಯನ್ನು ಆರಂಭಿಸಿದರು. ಇವರು ಪ್ರಾರಂಭಿಸಿದ ಇಂಗ್ಲೀಷ್ ಪತ್ರಿಕೆಯಾದ 'ಜಸ್ಟೀಸ್' ಎಂಬುದು ಪಕ್ಷಕ್ಕೆ ಅಂಟಿಕೊಂಡು ಅದು 'ಜಸ್ಟೀಸ್ ಪಕ್ಷ' ಎಂದೇ ಹೆಸರಾಯಿತು.

1917ರಲ್ಲಿ ಅನಿಬೆಸೆಂಟ್ 'INDIAN BOYS SCOUT ASSOCIATION' ಅನ್ನು ಮದ್ರಾಸ್‌ನಲ್ಲಿ ಸ್ಥಾಪಿಸಿದರು. ಅನಿಬೆಸೆಂಟರ ಪ್ರೇರಣೆಯಿಂದ THE INDIAN SCOUTS ಎಂಬ ಮಾಸಪತ್ರಿಕೆ ಪ್ರಾರಂಭಿಸಲಾಯಿತು. ತಮ್ಮ ಬಿಡುವಿಲ್ಲದ ರಾಜಕೀಯ ಚಟುವಟಿಕೆಗಳ ನಡುವೆಯು ಸ್ಕೌಟ್ಸ್ ಚಳವಳಿಯ ಬಗ್ಗೆ ಅನಿಬೆಸೆಂಟರು ಅಪಾರ ಆಸಕ್ತಿವಹಿಸಿದ್ದರು. ಮದ್ರಾಸ್‌ನ ಮೈದಾನದಲ್ಲಿ ನಡೆದ ಬೃಹತ್ ಸ್ಕೌಟ್ಸ್ ಅಧಿವೇಶನದಲ್ಲಿ ಅನಿಬೆಸೆಂಟರು ಭಾಷಣ ಮಾಡಿದರು. ಸ್ಕೌಟ್ ತರಬೇತಿ ಕಾರ್ಯಕ್ರಮಗಳು ಅಡಿಯಾರ್‌ನ ಥಿಯೋಸಾಫಿಕಲ್ ಸೊಸೈಟಿ ಸಮುಚ್ಚಯದಲ್ಲಿ ನಿರಂತರವಾಗಿ ನಡೆಯುತ್ತಿದ್ದವು. ಇದು ಸಾವಿರಾರು. ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ ಹಾಗೂ ದೇಶಪ್ರೇಮವನ್ನು ಬೆಳೆಸುವಲ್ಲಿ ಕೊಡುಗೆ ನೀಡಿತ್ತು.[10] ವಿದ್ಯಾರ್ಥಿದೆಸೆಯಲ್ಲಿ ಕೆ.ಸಿ. ರೆಡ್ಡಿ ಅವರು ಸ್ಕೌಟ್ ಚಳವಳಿಯಿಂದ ಪ್ರಭಾವಿತರಾದರು. ಮುಂದೆ ಕೋಲಾರ ಜಿಲ್ಲೆಯಲ್ಲಿ ತಮ್ಮ ರಾಜಕೀಯ ಜೀವನ ಪ್ರಾರಂಭಿಸುವ ಸಂದರ್ಭದಲ್ಲಿ ಕೆ.ಸಿ. ರೆಡ್ಡಿ ಕೋಲಾರ ಜಿಲ್ಲೆಯಲ್ಲಿ ಸ್ಕೌಟ್ ಸಂಘಟನೆಯನ್ನು ಬಲಗೊಳಿಸಿದ್ದೆ ಅಲ್ಲದೆ, ಕೋಲಾರ ಜಿಲ್ಲಾ ಸ್ಕೌಟ್ ಸಂಘಟನೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಜಿಲ್ಲೆಯ ಸ್ಕೌಟ್ ಚಟುವಟಿಕೆಗಳಿಗೆ ಸಹಾಯವಾಗಲು ಒಂದು ಸ್ವಂತಕಟ್ಟಡವನ್ನು ಸಹಾ ನಿರ್ಮಿಸಿದ್ದಾರೆ.

1920ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ನಡೆದ ಚುನಾವಣೆಯಲ್ಲಿ ಜಸ್ಟೀಸ್ ಪಕ್ಷವು ಪೂರ್ಣ ಪ್ರಮಾಣದಲ್ಲಿ ಸ್ಪರ್ಧೆಗಿಳಿಯಿತು. ಚುನಾವಣೆ ನಡೆದ 98 ಸ್ಥಾನಗಳಲ್ಲಿ ಜಸ್ಟೀಸ್ ಪಕ್ಷವು 63 ಸ್ಥಾನಗಳನ್ನು ಪಡೆದು ಅಧಿಕಾರಗಳಿಸಿತು. ಜಸ್ಟೀಸ್ ಪಕ್ಷದ ಸುಬ್ಬರಾಯಲು

---

10. GORDON PEARCE .F : Annie Besant and The scout movement : P-134 - 139, The Annie Besant Centunary Book : 1847-1947.

ರೆಡ್ಡಿಯಾರ್ ಮದ್ರಾಸ್ ರಾಜ್ಯದ ಮೊದಲ ಮುಖ್ಯಮಂತ್ರಿಯಾದರು. ಕಾರಣಾಂತರಗಳಿಂದ ಅವರು ಕೆಲವೇ ದಿನಗಳಲ್ಲಿ ರಾಜೀನಾಮೆ ನೀಡಿದ ನಂತರ ಎ.ಪಿ. ಪತ್ರೊ ಮುಖ್ಯಮಂತ್ರಿ ಆದರು.

ಈ ಎಲ್ಲಾ ಬೆಳವಣಿಗೆಗಳನ್ನು ಕೆ.ಸಿ. ರೆಡ್ಡಿ ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ತೀರ ಹತ್ತಿರದಿಂದ ಕಂಡು ಪ್ರಭಾವಿತರಾಗಿದ್ದರು. ಬ್ರಾಹ್ಮಣೇತರ ಪಕ್ಷವಾಗಿ ಜನಿಸಿದ ಜಸ್ಟೀಸ್ ಪಾರ್ಟಿಯು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜಯಭೇರಿ ಸಾಧಿಸಿದುದನ್ನು ತಲಸ್ಪರ್ಶಿಯಾಗಿ ಕಂಡು ರೆಡ್ಡಿ ಅವರು ಮುಂದೊಂದು ಕಾಲಕ್ಕೆ ಇದೇ ಜಸ್ಟೀಸ್ ಪಾರ್ಟಿಯ ಪ್ರೇರಣೆಯಿಂದ ಮೈಸೂರು ರಾಜ್ಯದಲ್ಲಿಯೂ ಬ್ರಾಹಣೇತರ ಪಕ್ಷ ಪ್ರಜಾಮಿತ್ರ ಮಂಡಳಿಯ ವಿಕಾಸ ಮತ್ತು ಪ್ರಜಾಪಕ್ಷದ ಉಗಮ ಹಾಗೂ ವಿಕಾಸಕ್ಕೆ ಪ್ರಮುಖ ರೂವಾರಿಗಳಾದುದನ್ನು ಗಮನಿಸಬಹುದು.

1920ರ ದಶಕದಲ್ಲಿ ಮದ್ರಾಸ್‌ನಲ್ಲಿ ಹಲವು ಗಣ್ಯರು ಸೇರಿ ರಾಷ್ಟ್ರೀಯ ಹೋರಾಟದ ಜಾಗೃತಿಯನ್ನು ಮೂಡಿಸಲು 'ದಿ ಹಿಂದೂ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಹಿಂದೂಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ವರದಿಗಳನ್ನು ಆಸಕ್ತಿಯಿಂದ ಓದುತ್ತಿದ್ದ ರೆಡ್ಡಿ ಅವರಿಗೆ ತಾವು ಒಬ್ಬ ಪತ್ರಕರ್ತರಾಗಬೇಕೆಂಬ ಆಸೆ ಬೆಳೆಸಿಕೊಂಡಿದ್ದರು. ಆದರೆ ಕಾನೂನು ಪದವಿ ಪಡೆದ ನಂತರ ಕೆ.ಸಿ. ರೆಡ್ಡಿ ಮದ್ರಾಸ್‌ನಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ಜಸ್ಟೀಸ್ ಸೋಮಯ್ಯನವರಲ್ಲಿ ಕೆಲವು ಕಾಲ ಶಿಷ್ಯವೃತ್ತಿ ಮಾಡಿ ಅನುಭವ ಪಡೆದು ನಂತರ ಕ್ಯಾಸಂಬಳ್ಳಿಗೆ ಹಿಂತಿರುಗಿದರು.[11]

3. ಕೆ.ಸಿ. ರೆಡ್ಡಿ ಅವರ ವೈವಾಹಿಕ ಜೀವನ

ಕೆ.ಸಿ. ರೆಡ್ಡಿ ಅವರು ಮದ್ರಾಸ್‌ನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಕ್ಯಾಸಂಬಳ್ಳಿಗೆ 1926ರಲ್ಲಿ ವಾಪಸ್ಸಾಗಿ ತಾವು ವಕೀಲ ವೃತ್ತಿಯನ್ನು ಆರಂಭಿಸುವ ಯೋಚನೆಯಲ್ಲಿರುವಾಗಲೇ ವಿವಾಹ ಬಂಧನಕ್ಕೊಳಗಾದರು. ಕ್ರಿ.ಶ. 1927ರಲ್ಲಿ ತಮ್ಮ 25ನೇ ವಯಸ್ಸಿನಲ್ಲಿ ಬಾಗೇಪಲ್ಲಿಯ ರಾಮರೆಡ್ಡಿಯವರ ಸಾಕು ಮಗಳಾದ ಕೌಸಲ್ಯಮ್ಮ ಎಂಬುವರನ್ನು ವಿವಾಹವಾಗಿ ಗೃಹಸ್ಥ ಜೀವನವನ್ನು ಆರಂಭಿಸಿದರು.[12] ಇದೇ ಸಂದರ್ಭದಲ್ಲಿಯೇ ವಕೀಲ ವೃತ್ತಿಯನ್ನು ನಡೆಸಬೇಕಾದರೆ ಹುಟ್ಟಿದ ಊರನ್ನು ಬಿಟ್ಟಿರಲಾರದೆ, ಬಾಳಿ ಬದುಕಿದ ಮನೆಯನ್ನು ತೊರೆಯಲಾರದೆ ತಮ್ಮ ಗ್ರಾಮದಲ್ಲಿಯೇ ವ್ಯವಸಾಯದೊಂದಿಗೆ ಏನಾದರೂ ಪೂರಕ

---

11. ಸಂಧ್ಯಾರೆಡ್ಡಿ .ಕೆ.ಆರ್ : ಕೆ.ಸಿ.ರೆಡ್ಡಿ, ಸಂಸದೀಯ ಪಟುಗಳು ಬದುಕು–ಬರಹಮಾಲಿಕೆ, ಪುಟ 3
12. ವೀರಣ್ಣಗೌಡ ಎಚ್.ಕೆ.:ಬದುಕು–ಮೆಲುಕು: ಪ್ರಬುದ್ಧ ಪ್ರಕಾಶನ; ಮೈಸೂರು–2, ಪುಟ–206. 1974

ಉದ್ಯೋಗ ಮಾಡುವ ಇಚ್ಛೆಯಿಂದ 1927ರಲ್ಲಿ ಕೆ.ಜಿ.ಎಫ್.ನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಿಂದ ಸಾಲ ಪಡೆದುಕೊಂಡು ಒಂದು ಫ್ಲೋರ್ ಮಿಲ್ಲನ್ನು ಸ್ಥಾಪಿಸಿದರು. ದುರಾದೃಷ್ಟವಶಾತ್ ಅವರಿಗೆ ಆಘಾತದ ಮೇಲೆ ಆಘಾತ ಉಂಟಾಯಿತು. ಅವರ ಪತ್ನಿ ಕೌಸಲ್ಯಮ್ಮ ಇನ್‌ಫ್ಲೋಯೆಬಿನ್ ಜ್ಞಾ ಎಂಬ ಜ್ವರದಿಂದ ದಿನಾಂಕ 30-11-1927 ರಂದು ಮರಣಿಸಿದರು. ರೆಡ್ಡಿ ಅವರು ಪ್ರಾರಂಭಿಸಿದ್ದ ಫ್ಲೋರ್‌ಮಿಲ್ ಆದಾಯವಿಲ್ಲದೆ ಸಂಪೂರ್ಣ ನಷ್ಟವನ್ನುಂಟು ಮಾಡಿತು. ಯಾವ ವ್ಯವಹಾರವೂ ಕೈಗೆ ಹತ್ತಲಿಲ್ಲ. ಇದರಿಂದಾಗಿ ಸಾಲ ಸೋಲಗಳು ಹೆಚ್ಚಾದವು.

ಆರ್ಥಿಕವಾಗಿ ಉಂಟಾದ ನಷ್ಟವೊಂದು ಕಡೆಯಾದರೆ, ವಿವಾಹವಾದ ಆರು ತಿಂಗಳಲ್ಲಿ ಪತ್ನಿಯ ಮರಣ ಚಂಗಲರಾಯರೆಡ್ಡಿ ಅವರನ್ನು ಜರ್ಜರಿತರನ್ನಾಗಿಸಿತು. ಈ ಹೊಡೆತಗಳಿಂದ ತತ್ತರಿಸಿದ ರೆಡ್ಡಿ ಅವರು ತಮಗೆ ನೋವನ್ನು ತಂದಿದ್ದ ಕ್ಯಾಸಂಬಳ್ಳಿಯನ್ನು ತೊರೆದು ಹೋಗುವ ನಿರ್ಧಾರ ಮಾಡಿ ತಮಗೆ ಈ ಆಸ್ತಿಯಲ್ಲಿರುವ ಪಾಲೂ ಬೇಡವೆಂದು ತಮ್ಮ ಅಣ್ಣ ವೆಂಕಟರಾಮರೆಡ್ಡಿ ಅವರಿಗೆ ತಿಳಿಸಿ ಛಾಪಾಕಾಗದದ ಮೇಲೆ ಬರೆದುಕೊಟ್ಟು ಅದಕ್ಕೆ ಪ್ರತಿಯಾಗಿ ತಾವು ಬ್ಯಾಂಕಿಲ್ಲಿ ಮಾಡಿದ ಸಾಲವನ್ನು ತೀರಿಸಲು ಜವಾಬ್ದಾರಿ ವಹಿಸಿಕೊಟ್ಟು ಕ್ಯಾಸಂಬಳ್ಳಿಯನ್ನು ಬಿಟ್ಟು ಕೋಲಾರಕ್ಕೆ ಬಂದು ನೆಲೆಸಿದರು. ಕೋಲಾರಕ್ಕೆ ಬಂದ ಕೆ.ಸಿ. ರೆಡ್ಡಿ ಅವರು ವಕೀಲ ವೃತ್ತಿಯನ್ನು ಪ್ರಾರಂಭಿ ಸುವ ಉದ್ದೇಶದಿಂದ ಒಂದು ಬಾಡಿಗೆ ಮನೆ ಮಾಡಿ ವಾಸವಾಗಿದ್ದರು. ತಮ್ಮೊಡನೆ ತಮ್ಮ ಅಣ್ಣ ವೆಂಕಟರಾಮರೆಡ್ಡಿ ಅವರ ಮಕ್ಕಳಾದ ರಾಮಕೃಷ್ಣಪ್ರಸಾದ್ ರೆಡ್ಡಿ ಮತ್ತು ಸುಶೀಲಮ್ಮ ಎಂಬುವರನ್ನು ಉತ್ತಮ ಶಿಕ್ಷಣ ಕೊಡಿಸುವ ಉದ್ದೇಶದಿಂದ ತಮ್ಮೊಡನೆ ಇಟ್ಟುಕೊಂಡರು[13].

ಖ್ಯಾತ ಪತ್ರಕರ್ತ ಹಾಗೂ ಕೆ.ಸಿ. ರೆಡ್ಡಿ ಅವರ ರಾಜಕೀಯ ಒಡನಾಡಿಯಾಗಿದ್ದ ಬಿ.ಎನ್. ಗುಪ್ತ ತಮ್ಮ ಆತ್ಮಚರಿತ್ರೆಯಲ್ಲಿ ಕೆ.ಸಿ. ರೆಡ್ಡಿ ಅವರನ್ನು ಕುರಿತು ಮೆಲುಕು ಹಾಕುತ್ತಾ "ಆ ದಿನಗಳಲ್ಲಿ B.L., ಪದವಿ ಓದುವುದು ಬಹಳ ಟಫ್ ಎಂದು, ಮದ್ರಾಸ್ ವಿಶ್ವವಿದ್ಯಾಲಯ ಶೈಕ್ಷಣಿಕ ವಿಷಯಗಳಲ್ಲಿ ಬಹಳ ಸ್ಟ್ರಿಕ್ಟ್ ಎಂದು ಹೆಸರು ಪಡೆದಿತ್ತು. ಹೀಗಾಗಿ ಮುಂಬಯಿ ವಿಶ್ವವಿದ್ಯಾಲಯ L.L.B., ಪದವಿಗೆ ಹೋಲಿಸಿದರೆ ಮದ್ರಾಸ್‌ನ B.L., ಪದವಿಗೆ ಹೆಚ್ಚು ಪ್ರತಿಷ್ಠೆ ಇದ್ದಿತಂತೆ. ಕೆ.ಸಿ. ರೆಡ್ಡಿ ಪ್ರತಿಷ್ಠಿತ ಕೌಟುಂಬಿಕ ಹಿನ್ನೆಲೆಯಿಂದ ಬಂದಿದ್ದರಿಂದ ಮದ್ರಾಸ್ ವಿಶ್ವವಿದ್ಯಾಯದ B.L., ಪದವಿ ಮಾಡಿ ಮುಗಿಸಿದರು. ಬಿ.ಎಸ್. ಗುಪ್ತ ಅವರು ಹೇಳುವಂತೆ ರೆಡ್ಡಿ ಅವರಿಗೆ ನಿಜವಾಗಿ ವಕಾಲತ್ತು ಮಾಡುವ ಪ್ರಮೇಯವು

---

13. KYASAMALLI CHENGALARAYA REDDY : ಕೆ.ಸಿ. ರೆಡ್ಡಿಯವರ ಸಂಬಂಧಿಕರು **ರಚಿಸಿರುವ ಕೈಪಿಡಿ : ಪುಟ-1**

ಇರಲಿಲ್ಲ. ಅದೇ ಉದ್ದೇಶವು ಇರಲಿಲ್ಲ. ಅದೊಂದು ಗೌರವದ ಡಿಗ್ರಿಯ ಪ್ರಶ್ನೆ ಎಂದರು ತಪ್ಪಲ್ಲ. ರೆಡ್ಡಿ ಅವರಿಗೆ ರಾಜಕೀಯ ಮಹತ್ವಾಕಾಂಕ್ಷೆ ಹೊಂದಿರುವ ತಮಗೆ ಕಾನೂನಿನ ಜ್ಞಾನ ಇರಬೇಕು ಎಂಬ ಅರಿವಿತ್ತು. ಹುಡುಗನಾಗಿದ್ದಾಗಿನಿಂದಲೂ ರಾಜಕೀಯ ಮಹತ್ವಾಕಾಂಕ್ಷೆ ಅವರಲ್ಲಿ ಮನೆ ಮಾಡಿಕೊಂಡಿತ್ತು. ಮನೆಯಲ್ಲಿ ಅವರ ಅಣ್ಣ ಗಾಂಧೀಜಿ ಅವರ ಅನುಯಾಯಿಯಾಗಿ ಸಾರ್ವಜನಿಕ ಜೀವನದ ಆಶೋತ್ತರಗಳನ್ನು ಹೊಂದಿದ್ದರು" ಎಂದು ಅಭಿಪ್ರಾಯಪಟ್ಟಿದ್ದಾರೆ.[14]

ಮೈಸೂರು ಸಂಸ್ಥಾನದ ನೆರೆಯ ಮದ್ರಾಸ್ ಪ್ರಾಂತ್ಯಗಳಲ್ಲಿ ರೆಡ್ಡಿಯವರಿಗಿದ್ದ ಸಂಪರ್ಕ, ಸಂಬಂಧಗಳು ಅವರ ರಾಜಕೀಯ ಚಟುವಟಿಕೆಗಳಿಗೆ ಇನ್ನಷ್ಟು ಪೂರಕವಾಗಿದ್ದವು. ಸ್ವತಃ ತೆಲುಗು ರೆಡ್ಡಿಯವರಾಗಿದ್ದರಿಂದ ಮದ್ರಾಸ್ ಪ್ರಾಂತ್ಯಗಳಲ್ಲಿದ್ದ ಆಂಧ್ರದ ನಾಯಕರೊಡನೆ ಅವರಿಗೆ ಸಂಕರ್ಪ ನಿಕಟತೆ ಬೆಳೆದಿದ್ದಿತು. ಹಲವು ತಮಿಳುನಾಡಿನ ನಾಯಕರ ಒಡನಾಟ ರೆಡ್ಡಿ ಅವರಿಗೆ ವಿದ್ಯಾರ್ಥಿ ದೆಸೆಯಿದಲ್ಲೇ ಇದ್ದವು. ಹೀಗಾಗಿ ದಕ್ಷಿಣ ಭಾರತದ ಬ್ರಾಹ್ಮಣೇತರ ಚಳವಳಿ, ಜಸ್ಟೀಸ್‌ಪಾರ್ಟಿ ಹಾಗೂ ಪ್ರಜಾಮಿತ್ರ ಮಂಡಲಿ ಪಕ್ಷಗಳ ನಾಯಕರ ನಂಟು ರಾಜಕೀಯವಾಗಿ ರೆಡ್ಡಿ ಅವರು ಪ್ರಾಬಲ್ಯಕ್ಕೆ ಬರಲು ಸಹಾಯಕವಾದವು.[15]

ಟಿ. ಸಿದ್ದಲಿಂಗಯ್ಯ ತಮ್ಮ ಸಾರ್ವಜನಿಕ ಜೀವನದ ಘಟನೆಗಳನ್ನು ಮೆಲುಕು ಹಾಕುವ ಸಂದರ್ಭದಲ್ಲಿ ತಮ್ಮ ಹಾಗೂ ಕೆ.ಸಿ. ರೆಡ್ಡಿ ಅವರ ಪರಿಚಯ, ಒಡನಾಟದ ಬಗ್ಗೆ ಸ್ಮರಿಸುತ್ತಾ ನಾನು ಕೆ.ಸಿ. ರೆಡ್ಡಿ ಅವರನ್ನು ಮೊದಲು ಭೇಟಿಯಾದದ್ದು 1929ರಲ್ಲಿ ಮದ್ರಾಸ್‌ನಲ್ಲಿ ಆಗಿನ ಡಯಾರ್ಕಿ ಪದ್ಧತಿಯಂತೆ ಆಯ್ಕೆಯಾಗಿ ಮದ್ರಾಸ್‌ನಲ್ಲಿ ಮಂತ್ರಿಯಾಗಿದ್ದ ಬಳ್ಳಾರಿಯ ರಂಗನಾಥ ಮೊದಲಿಯಾರ್ ಅವರು ರೆಡ್ಡಿ ಅವರನ್ನು ಕುರಿತು "ನೋಡಿ ಇವರು ನಮ್ಮ ಮುಂದಿನ ವಿವೇಕಾನಂದ. ತಮ್ಮ ಪತ್ನಿಯ ಮರಣದಿಂದ ವ್ಯಥಿತರಾಗಿ ಅವರು ಇಲ್ಲಿ ಇದ್ದಾರೆ ಎಂದು ನನಗೆ ಪರಿಚಯ ಮಾಡಿಸಿಕೊಟ್ಟರು. ಆಗಿನಿಂದ ನನ್ನದು ಅವರ ಮೇಲೆ ಪ್ರೇಮ, ವಿಶ್ವಾಸ, ನನ್ನ ಸಹಪಾಠಿ ಗುರುವಾರೆಡ್ಡಿಯವರ ಮಗಳು ಸರೋಜಮ್ಮನ ಜೊತೆ 1934ರಲ್ಲಿ ಅವರ ಮದುವೆ ಆದಾಗ ನಾನು ಅವರನ್ನು ಮತ್ತೆ ಕಂಡಿದ್ದು. ಅವರ ಜೀವನದಲ್ಲಿ ಪ್ರತಿಯೊಂದು ಸಂಗತಿಯೂ ಜ್ಯೋತಿಷ್ಯರಿಂದ ಭವಿಷ್ಯ ಹೇಳಲ್ಪಟ್ಟಂತೆ ನಡೆದಿದೆಯಲ್ಲದೆ ಅವರ ಜೀವನ ಪರಿಪೂರ್ಣವಾಗಿದೆ. ಅವರು ದೇವರಲ್ಲಿ ವಿಶ್ವಾಸವುಳ್ಳವರು" ಎಂದು ಅಭಿಪ್ರಾಯಪಟ್ಟಿದ್ದಾರೆ.[16]

---

14. ಜನಪ್ರಗತಿ : ಬಿ.ಎನ್. ಗುಪ್ತ ಅತ್ಮಚರಿತ್ರೆ, ದಿನಾಂಕ : 07-07-1974 ಪುಟ-5
15. ಜನಪ್ರಗತಿ : ಬಿ.ಎನ್. ಗುಪ್ತ ಅತ್ಮಚರಿತ್ರೆ, ದಿನಾಂಕ : 07-07-1974 ಪುಟ-5
16. ಶುದ್ಧಸೇವೆಯ ಸಿದ್ದಲಿಂಗಯ್ಯ : ಪುಟ-85

ಬ್ರಾಹ್ಮಣೇತರರಲ್ಲಿ ರಾಷ್ಟ್ರೀಯ ಮನೋಭಾವದ ಕೆಲವರು ಚಿಕ್ಕ ವಯಸ್ಸಿನಿಂದಲೇ ದೇಶ ಸೇವೆಯಲ್ಲಿ ಆಸಕ್ತರಾಗಿದ್ದರು. ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಆಂದೋಳನದಿಂದ ಪ್ರಭಾವಿತರಾಗಿದ್ದರು. ಇನ್ನು ಕೆಲವರು ರಾಷ್ಟ್ರೀಯ ಮನೋಭಾವದಿಂದಿದ್ದರೂ, ಕೋಮುವಾರು ನ್ಯಾಯಸಲ್ಲಿಸುವ ವಿಚಾರದಲ್ಲೂ ಉತ್ಸುಕತೆ ಹೊಂದಿದ್ದರು. ಮೊದಲ ಗುಂಪಿನಲ್ಲಿ ವಿ. ವೆಂಕಟಪ್ಪ, ಎಚ್.ಕೆ. ವೀರಣ್ಣಗೌಡ, ಎರಡನೆಯ ಗುಂಪಿನಲ್ಲಿ ಕೆ.ಸಿ. ರೆಡ್ಡಿ ಅವರಂತಹ ಮೇಧಾವಿಗಳಿದ್ದರು. ರೆಡ್ಡಿ ಅವರು ಮದ್ರಾಸ್ ನಗರದಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ರಾಷ್ಟ್ರೀಯ ಚಳವಳಿ ವಿಚಾರಗಳತ್ತ ಆಕರ್ಷಿಸಲ್ಪಟ್ಟಿದ್ದರು. ತಮ್ಮ ರಾಜಕೀಯ ಗುರಿ–ಸಾಧನೆಗೆ ಇತರ ಸಮಾನ ಮನಸ್ಕರ ಸ್ನೇಹಿತರೊಂದಿಗೆ ಕೆ.ಸಿ. ರೆಡ್ಡಿ ಅವರು 1928ರಲ್ಲಿ ರಾಜಕೀಯ (ಪ್ರೋಗ್ರೆಸೀವ್ ಪಾರ್ಟಿ) ರಂಗಕ್ಕೆ ಧುಮುಕಿದರು. ರಾಜಕೀಯಕ್ಕೆ ಕಾಲಿಟ್ಟಾಗ ಅವರಿಗಿನ್ನೂ 26 ವರ್ಷ ವಯಸ್ಸು. ಆದರೆ ಈ ಪಕ್ಷ ಬಹುಕಾಲ ಉಳಿಯಲಿಲ್ಲ. ಮುಂದೆ ಪ್ರೋಗ್ರೆಸೀವ್ ಪಾರ್ಟಿ, ಪ್ರಜಾಪಕ್ಷದೊಂದಿಗೆ ವಿಲೀನವಾಯಿತು.[17]

ಬಿ.ಎನ್. ಗುಪ್ತರವರು ತಮ್ಮ ಆತ್ಮಚರಿತ್ರೆಯ ಸಂದರ್ಶನದಲ್ಲಿ "ಕೆ.ಸಿ. ರೆಡ್ಡಿ ಅವರು 1930ರ ದಶಕದ ಸಂದರ್ಭದಲ್ಲಿ 'ಮೈಸೂರು ರಾಜಕೀಯದಲ್ಲಿ ಏರುತ್ತಿದ್ದ ಮೂಡಲತಾರೆ' ಎಂದು ವರ್ಣಿಸಿದ್ದಾರೆ. ಅಲ್ಲದೆ ಹೆಚ್.ಆರ್. ಗುರುವಾರೆಡ್ಡಿ ಅವರ ಮಗಳಾದ ಸರೋಜಮ್ಮ ಅವರನ್ನು 26–8–1934ರಲ್ಲಿ ಮದುವೆಯಾಗಿದ್ದು ಕೆ.ಸಿ. ರೆಡ್ಡಿಯವರ ರಾಜಕೀಯ ಬೆಳವಣಿಗೆಗೆ ಪೂರಕವಾಯಿತು. ಗುರುವಾರೆಡ್ಡಿ ಅವರು ಪ್ರಬಲ ಬ್ರಾಹ್ಮಣೇತರ ಚಳವಳಿಯ ನಾಯಕರು. ಅವರು ಪ್ರಜಾಪಕ್ಷದಲ್ಲಿ ಪ್ರಭಾವಿಯಾಗಿದ್ದರು. ಪ್ರಜಾಪ್ರತಿನಿಧಿ ಸಭೆಯಲ್ಲಂತೂ ಅವರು ಬ್ರಾಹ್ಮಣೇತರರ ಸ್ಥಿತಿ–ಗತಿಗಳ ಬಗ್ಗೆ ಪ್ರಚಂಡ ವಕ್ತಾರರಾಗಿದ್ದರೆಂದರೂ ತಪ್ಪಲ್ಲ. ವಿಶೇಷವಾಗಿ ಬೆಂಗಳೂರು ಸುತ್ತಮುತ್ತಲ ಹಳ್ಳಿಗಳ ಬ್ರಾಹ್ಮಣೇತರ ಜನಸಾಮಾನ್ಯರಿಗೆ ಸ್ವಾಭಿಮಾನವನ್ನು ತುಂಬಿದವರು" ಎಂದು ತಿಳಿಸಿದ್ದಾರೆ.[18]

ಕೆ.ಸಿ. ರೆಡ್ಡಿ ಮತ್ತು ಸರೋಜಮ್ಮ ದಂಪತಿಗಳಿಗೆ ಒಟ್ಟು ಆರು ಮಂದಿ ಮಕ್ಕಳು ಜನಿಸಿದರು. ಕೆ.ಸಿ. ವೆಂಕಟೇಶ, ಕೆ.ಸಿ. ರಾಜಾರಾಂ, ಕೆ.ಸಿ. ಅರುಣಾರಾಣಿ, ಕೆ.ಸಿ. ವಿಜಯೇಂದ್ರ ರೆಡ್ಡಿ, ಕೆ.ಸಿ. ಸುದರ್ಶನ ರೆಡ್ಡಿ, ಕೆ.ಸಿ. ಪ್ರತಾಪ್‌ರೆಡ್ಡಿ.

---

17. ಸೂರ್ಯನಾಥ ಕಾಮತ್ : (ಸಂ) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–3, ಪುಟ–640–641

18. ಜನಪ್ರಗತಿ : ಬಿ.ಎನ್. ಗುಪ್ತ ಅತ್ಮಚರಿತ್ರೆ, ದಿನಾಂಕ : 07–07–1974 ಪುಟ–5

ಕೆ.ಸಿ. ರೆಡ್ಡಿ ಅವರ ವಂಶವೃಕ್ಷ

ಬಶಿರೆಡ್ಡಿ
(ಕ್ರಿ.ಶ. ಸು. 1800)

|

ವೆಂಕಟರೆಡ್ಡಿ

|

ಬಶಿರೆಡ್ಡಿ

|

- ಬಶಿರೆಡ್ಡಿ
  ಪಾಪಮ್ಮ (1ನೇ ಪತ್ನಿ)
  ನಾಗಮ್ಮ (2ನೇ ಪತ್ನಿ)
- ಬಂಗಿರೆಡ್ಡಿ
- 7 ಮಂದಿ ಹೆಣ್ಣು ಮಕ್ಕಳು

ಬಶಿರೆಡ್ಡಿ – ಪಾಪಮ್ಮ, ನಾಗಮ್ಮ


|

ಬಿ. ವೆಂಕಟರೆಡ್ಡಿ
ಗಂಗೋಜಮ್ಮ (ಪತ್ನಿ)

|

- ವೆಂಕಟರಾಮರೆಡ್ಡಿ
  ರುಕ್ಮಿಣಮ್ಮ (ಪತ್ನಿ)
  1. ಕೆ.ವಿ. ರಾಮಕೃಷ್ಣಪ್ರಸಾದ್ ರೆಡ್ಡಿ
  2. ಕೆ.ವಿ. ಸುಶೀಲಮ್ಮ
  3. ಕೆ.ವಿ. ದಮಯಂತಮ್ಮ
  4. ಕೆ.ವಿ. ಲೀಲಮ್ಮ
  5. ಕೆ.ವಿ. ವಿಮಲಮ್ಮ
  6. ಕೆ.ವಿ. ನಾಗಮ್ಮ
  7. ಕೆ.ವಿ. ಬಾಲಕೃಷ್ಣಾರೆಡ್ಡಿ
  8. ಕೆ.ವಿ. ವೆಂಕಟಕೃಷ್ಣಾರೆಡ್ಡಿ
  9. ಕೆ.ವಿ. ರಮಣ
  10. ಕೆ.ವಿ. ಮುರಳಿಕೃಷ್ಣ
- ಚಂಗಲರಾಯರೆಡ್ಡಿ
  ಕೌಸಲ್ಯಮ್ಮ (1ನೇ ಪತ್ನಿ)
  ಸರೋಜಮ್ಮ (2ನೇ ಪತ್ನಿ)
  1. ಕೆ.ಸಿ. ವೆಂಕಟೇಶ
  2. ಕೆ.ಸಿ. ರಾಜಾರಾಂ
  3. ಕೆ.ಸಿ. ಅರುಣಾರಾಣಿ
  4. ಕೆ.ಸಿ. ವಿಜಯೇಂದ್ರ ರೆಡ್ಡಿ
  5. ಕೆ.ಸಿ. ಸುದರ್ಶನ ರೆಡ್ಡಿ
  6. ಕೆ.ಸಿ. ಪ್ರತಾಪ್ ರೆಡ್ಡಿ
- ಮೀನಾಕ್ಷಮ್ಮ
  ಜಯರಾಮರೆಡ್ಡಿ
  1. ರಾಜಶೇಖರರೆಡ್ಡಿ

ಕೆ.ಸಿ. ರೆಡ್ಡಿ ಅವರ ಜನ್ಮ ಕುಂಡಲಿ



ಸಂಗ್ರಹ : ಕೆ.ಸಿ. ರೆಡ್ಡಿ ಅವರ ಮನೆಯಲ್ಲಿ ದೊರೆತಿರುವ ಜಾತಕ ಪುಸ್ತಕದಿಂದ ಪಡೆಯಲಾಗಿದೆ.

4. ರಾಜಕೀಯ ಪ್ರವೇಶ

ಮಹಾತ್ಮ ಗಾಂಧೀಜಿ ಮತ್ತು ಕೆ.ಸಿ. ರೆಡ್ಡಿ

ಕ್ರಿ.ಶ. 1927ರಲ್ಲಿ ಕೋಲಾರಕ್ಕೆ ಬಂದ ಕೆ.ಸಿ. ರೆಡ್ಡಿಯವರು ವಕೀಲ ವೃತ್ತಿ ಪ್ರಾರಂಭಿಸಲು ಯೋಚಿಸಿದ್ದರು. ಅದೇ ಕಾಲಕ್ಕೆ ಗಾಂಧೀಜಿಯವರು ತಮ್ಮ ಅನಾರೋಗ್ಯದಿಂದಾಗಿ ವಿಶ್ರಾಂತಿ ಪಡೆಯಲು ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಮೈಸೂರು ಸರ್ಕಾರದ ಆಹ್ವಾನದ ಮೇರೆಗೆ ಬಂದು ತಂಗಿದ್ದರು.

ಕ್ರಿ.ಶ. 1927ರ ಏಪ್ರಿಲ್ 20 ರಂದು ನಂದಿ ಗಿರಿಧಾಮಕ್ಕೆ ಗಾಂಧೀಜಿ ಅವರು ಬಂದು ಜೂನ್ 4ರವರೆಗೆ ತಂಗಿದ್ದರು. ಈ 46 ದಿನಗಳ ಗಾಂಧೀಜಿ ಅವರ ನಂದಿವಾಸವು ಮೈಸೂರು ಸಂಸ್ಥಾನದ ರಾಜಕೀಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿತು. ಗಾಂಧೀಜಿ ಅವರನ್ನು ಭೇಟಿ ಮಾಡಿ ಅವರಿಂದ ಪ್ರಭಾವಿತರಾದ ಹಲವಾರು ಮಂದಿ ಭಾರತದ ಸ್ವಾತಂತ್ರ್ಯ ಹೋರಾಟದ ರಂಗಕ್ಕೆ ಧುಮುಕಿ ನಾಡಿಗೆ ತಮ್ಮ ತನು, ಮನ, ಧನಗಳನ್ನು ಅರ್ಪಿಸಿದರು. ತಮ್ಮ ಇಡೀ ಜೀವನವನ್ನು ನಾಡಿನ ಏಳಿಗೆಗಾಗಿ ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ಕೆ.ಸಿ. ರೆಡ್ಡಿ ಅವರು ಸಹಾ ಮೊಟ್ಟ ಮೊದಲ ಭೇಟಿಯಲ್ಲಿಯೇ ಗಾಂಧೀಜಿ ಅವರಿಂದ ಅಪಾರವಾಗಿ ಪ್ರಭಾವಿತರಾಗಿ ತಮ್ಮ ಜೀವನದ ಗುರಿ, ಉದ್ದೇಶಗಳ ಬಗ್ಗೆ ದೀರ್ಘವಾಗಿ ಚರ್ಚಿಸಿದ ನಂತರ ದೀನ-ದಲಿತರ, ರೈತರ, ಕಾರ್ಮಿಕರ, ಶೋಷಿತ ವರ್ಗದವರ ಏಳಿಗೆಗಾಗಿ ಪಣತೊಟ್ಟು ತಮ್ಮ ಇಡೀ ಜೀವನವನ್ನು ದೇಶ ಸೇವೆಗಾಗಿ ಮುಡುಪಾಗಿಡಲು ನಿರ್ಧರಿಸಿದರು.

ಕೆ.ಸಿ. ರೆಡ್ಡಿ ಅವರೇ ಒಂದು ಕಡೆ ತಮ್ಮ ಬಗ್ಗೆಯೇ ಬರೆದುಕೊಳ್ಳುತ್ತಾ ಹೀಗೆ ಹೇಳಿದ್ದಾರೆ. "ನಾನು ಮಹಾತ್ಮ ಗಾಂಧೀಜಿ ಅವರನ್ನು ಮೊಟ್ಟ ಮೊದಲು 1927ನೇ ಇಸವಿಯಲ್ಲಿ ಭೇಟಿ ಮಾಡುವ ಸೌಭಾಗ್ಯ ಪಡೆದೆ. ಅದಕ್ಕೂ ಮುಂಚೆ ಅವರ ಭಾಷಣಗಳನ್ನು ಹಲವಾರು ಸಾರಿ ಕೇಳುವ ಸುಯೋಗ ಲಭಿಸಿತ್ತು. ವಿಶ್ರಾಂತಿಗಾಗಿ ಗಾಂಧೀಜಿ ನಂದಿಬೆಟ್ಟದಲ್ಲಿ ಬಿಡಾರ ಮಾಡಿದಾಗ, ಅವರೊಡನೆ ಇರುವ ಅವಕಾಶ ನನಗೆ ದೊರೆಯಿತು. ಅವರ ಮಾರ್ಗದರ್ಶನ ಮತ್ತು ಬುದ್ಧಿವಾದ ಈಗಲೂ ನನಗೆ ಕಿವಿಯಲ್ಲಿ ಮೊರೆಯುತ್ತಿವೆ. ಅವರ ಪ್ರಗಲ್ಭ ಸೂಚನೆಯ ಮೇರೆ ನನ್ನ ಜೀವಿತದ ವಿಷಯವಾಗಿ ಆಗ ಒಂದು ನಿರ್ಧಾರಕ್ಕೆ ಬಂದೆನು. ವಕೀಲ ವೃತ್ತಿಯನ್ನು ಬಿಟ್ಟು ಸಾರ್ವಜನಿಕ ಸೇವೆಗೆ ನನ್ನನ್ನು ಅರ್ಪಣೆ ಮಾಡಿಕೊಳ್ಳಲು ನಿರ್ಧರಿಸಿದೆನು. ಅಂದಿನಿಂದಲೂ ಯಥಾಶಕ್ತಿ ಅದೇ ಮಾರ್ಗದಲ್ಲಿ ಮುನ್ನುಗ್ಗುತ್ತಿದ್ದೇನೆ" ಎಂದು ಅಭಿಪ್ರಾಯಿಸಿದ್ದಾರೆ.[20]

---

20. ಆಕಾಶವಾಣಿ ಪ್ರಕಟಣೆ:ಬಾಪೂ ದರ್ಶನ : ಭಾಷಣ, ಕವನ, ನಾಟಕಗಳ ಸಂಗ್ರಹ,1949, ಪುಟ-37

ಹೀಗೆ ಕೆ.ಸಿ. ರೆಡ್ಡಿಯವರು ಕೆಲವು ದಿನಗಳವರೆಗೆ ಗಾಂಧೀಜಿ ಅವರಿಗೆ ಸೇವೆ ಸಲ್ಲಿಸಿ ಅವರ ಸೂಚನೆಯ ಮೇರೆಗೆ ತಮ್ಮ ವಕೀಲ ವೃತ್ತಿಯನ್ನು ಬಿಟ್ಟು ಸಾರ್ವಜನಿಕ ಸೇವೆಗೆ ಜೀವನವನ್ನು ಅರ್ಪಿಸಲು ನಿರ್ಧರಿಸಿದರು.

ಗಾಂಧೀಜಿ ಅವರು ಭಾರತದ ಇತರೆಡೆಗಳಲ್ಲಿ ಸ್ವಾತಂತ್ರ್ಯ ಚಳವಳಿಯ ಜ್ಯೋತಿ ಹೊತ್ತಿಸಿದ್ದರೂ ಸಹಾ ದೇಶೀಯ ರಾಜರ ಆಳ್ವಿಕೆಯಲ್ಲಿದ್ದ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ಪ್ರಾಂತ್ಯಗಳಲ್ಲಿಯಂತೆ ಸ್ವಾತಂತ್ರ್ಯ ಚಳವಳಿಯ ಅವಶ್ಯಕತೆ ಇಲ್ಲವೆಂದು ತಿಳಿದಿದ್ದರು. ಹಾಗಾಗಿ ಈ ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಚಳವಳಿಗಿಂತಲೂ ಮಿಗಿಲಾಗಿ ದಲಿತೋದ್ಧಾರ, ಗ್ರಾಮಗಳ ನೈರ್ಮಲ್ಯ ಹಾಗೂ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಪ್ರದೇಶದ ಹಿಂದುಳಿದವರ, ದೀನ ದಲಿತರ ಕಷ್ಟ–ಸುಖಗಳಿಗೆ ನೆರವಾಗಿ ಅವರ ಏಳಿಗೆಗಾಗಿ ತಮ್ಮ ಜೀವನವನ್ನು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳಲು ರೆಡ್ಡಿ ಅವರಿಗೆ ಸಲಹೆ ಮಾಡಿದರು. ರೆಡ್ಡಿ ಅವರು ಗಾಂಧೀಜಿ ಅವರ ಸಲಹೆಯಂತೆಯೇ ತಮ್ಮನ್ನು ಜನಸೇವೆಯಲ್ಲಿ ತೊಡಗಿಸಿಕೊಂಡರು.

ಗಾಂಧೀಜಿ ಅವರು 1927 ಜೂನ್ 4ರಂದು ನಂದಿ ಗಿರಿಧಾಮದಿಂದ ಹೋದ ನಂತರ ಕೋಲಾರಕ್ಕೆ ಹಿಂದಿರುಗಿದ ಕೆ.ಸಿ. ರೆಡ್ಡಿ ಅವರು ತಾವು ಉದ್ದೇಶಿಸಿರುವ ದೀನ ದಲಿತರ ಸೇವೆಗಾಗಿ ಸರಿಯಾದ ಒಂದು ವೇದಿಕೆಯನ್ನು ಹುಡುಕಿಕೊಳ್ಳುವ ಹಂತದಲ್ಲಿ ಅವರ ಗಮನ ಸೆಳೆದುದು ಪ್ರೋಗ್ರೇಸೀವ್ ಪಾರ್ಟಿ. ಇದು ಕೆ.ಸಿ. ರೆಡ್ಡಿ ಅವರ ರಾಜಕೀಯ ಪ್ರವೇಶಕ್ಕೆ ನಾಂದಿಯಾಯಿತು. ಆ ನಂತರ 'ಪ್ರಜಾಮಿತ್ರ ಮಂಡಲಿ' ಎಂಬ ರಾಜಕೀಯ ಪಕ್ಷವನ್ನು ಸೇರಿದರು. ಕ್ರಿ.ಶ. 1917ರಲ್ಲಿಯೇ ಸ್ಥಾಪಿತವಾದ ಪ್ರಜಾಮಿತ್ರ ಮಂಡಲಿಯು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾದ ಮೊಟ್ಟ ಮೊದಲ ಅಧಿಕೃತ ರಾಜಕೀಯ ಪಕ್ಷ.

ಹಿಂದುಳಿದ ವರ್ಗದವರ ಏಳಿಗೆಯನ್ನೇ ತಮ್ಮ ಪ್ರಮುಖ ಗುರಿಯನ್ನಾಗಿರಿಸಿಕೊಂಡ ಪ್ರಜಾಮಿತ್ರ ಮಂಡಲಿಯ ನಾಯಕರಾದ ಎಂ. ಬಸವಯ್ಯ, ಮಹಮ್ಮದ್ ಕಲಾಮಿ, ಎಚ್. ಚೆನ್ನಯ್ಯ, ಮಹಮ್ಮದ್ ಜಾಫರ್, ಎಂ. ಸುಬ್ಬಯ್ಯ, ಮಹಮ್ಮದ್ ಅಬ್ಬಾಸ್ ಖಾನ್, ಎ.ವಿ.ಯಂ. ನಂಜುಂಡ ಶೆಟ್ಟಿ, ಮೊಗಣ್ಣ, ಡಿ. ಬನುಮಯ್ಯ, ಎಂ. ನಾರಾಯಣಯ್ಯ, ಧನಕೋಟಿ ಶೆಟ್ಟಿ, ನಂಜಪ್ಪ, ತಿಮ್ಮಯ್ಯ, ಮಹಮ್ಮದ್ ಸೇಠ್ ಮುಂತಾದವರೊಡನೆ ಸೇರಿದ ಕೆ.ಸಿ. ರೆಡ್ಡಿ ಅವರು ಪ್ರಜಾಮಿತ್ರ ಮಂಡಲಿಯ ಧುರೀಣರಲ್ಲಿ ತಾವೂ ಒಬ್ಬರಾದರು. ಪ್ರಜಾಮಿತ್ರ ಮಂಡಲಿಯ ಸ್ಥಾಪಕ ಸದಸ್ಯರಾದ ಎಂ. ಬಸವಯ್ಯನವರ ನಿಧನಾ ನಂತರ ತಿಪಟೂರಿನ ಡಿ.ಎಸ್. ಮಲ್ಲಪ್ಪ, ಕೆ.ಸಿ. ರೆಡ್ಡಿ, ಎಸ್.ಎಲ್. ಮನ್ನಾಜಿರಾವ್, ಪಾಮಡಿ ಸುಬ್ಬರಾಮ ಶೆಟ್ಟಿ ಪಕ್ಷ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತರು.

ಪ್ರಜಾಮಿತ್ರ ಮಂಡಲಿಯ ಚಳವಳಿ ಹಾಗೂ ಸತತ ಪ್ರಯತ್ನದ ಫಲವಾಗಿ ಸರ್ಕಾರಿ ಹುದ್ದೆಗಳಲ್ಲಿ ಬ್ರಾಹ್ಮಣೇತರ ವರ್ಗದವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವ ಬಗ್ಗೆ

ಪರಿಶೀಲಿಸಲು ಮೈಸೂರಿನ ಮಹಾರಾಜರು "ಜಸ್ಟಿಸ್ ಮಿಲ್ಲರ್" ಸಮಿತಿಯನ್ನು ನೇಮಿಸಿದರು. ಆ ಸಮಿತಿಯು ಈ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿ ಒಂದು ವರದಿಯನ್ನು ಸಹ ಸಲ್ಲಿಸಿತು. ಈ ವರದಿಯ ಕೆಲವು ಸಲಹೆಗಳು ಜಾರಿಗೆ ಬಂದರೂ ಸಹಾ ಎಲ್ಲಾ ಸಲಹೆಗಳು ಸಂಪೂರ್ಣವಾಗಿ ಜಾರಿಗೆ ಬರಲಿಲ್ಲ.

ಪ್ರಜಾಮಿತ್ರ ಮಂಡಲಿಯ ಧ್ಯೇಯ–ಧೋರಣೆಗಳು, ಹೋರಾಟದ ರೀತಿನೀತಿ ಕೆ.ಸಿ. ರೆಡ್ಡಿ ಅವರಿಗೆ ಸಂಪೂರ್ಣ ತೃಪ್ತಿಯನ್ನುಂಟು ಮಾಡಲಿಲ್ಲ. ಕೇವಲ ಮಹಾರಾಜರಿಗೆ ಮನವಿ ಸಲ್ಲಿಸಿ ಆ ಮನವಿಗೆ ಉತ್ತರವಾಗಿ ಮಹಾರಾಜರು ಮಾಡಬಹುದಾದ ಸುಧಾರಣೆಗಳಿಗಾಗಿ ಕಾಯುತ್ತಾ ಕುಳಿತುಕೊಳ್ಳುವ ಪ್ರಜಾಮಿತ್ರ ಮಂಡಲಿಯ ಶೈಲಿ ಹೋರಾಟಗಾರರಾದ ಕೆ.ಸಿ. ರೆಡ್ಡಿ ಅವರಿಗೆ ಸರಿಹೊಂದಲಿಲ್ಲ. ಆದುದರಿಂದ ಪ್ರಜಾಮಿತ್ರ ಮಂಡಲಿಯನ್ನು ತೊರೆದು ಹೊರಬಂದರು.

ಪ್ರಜಾಪಕ್ಷ ಸ್ಥಾಪನೆ ಮತ್ತು ಕೆ.ಸಿ. ರೆಡ್ಡಿ

ಪ್ರಜಾಮಿತ್ರ ಮಂಡಲಿ ಪಕ್ಷದ ಮಿತಗಾಮಿ ಧೋರಣೆಗಳಿಂದ ಬೇಸತ್ತ ಕೆ.ಸಿ. ರೆಡ್ಡಿ ಅವರು ಪ್ರಜಾಮಿತ್ರ ಮಂಡಲಿಯಿಂದ ಹೊರಬಂದರು. ಕ್ರಿ.ಶ. 1930ರಲ್ಲಿ "ಪ್ರಜಾಪಕ್ಷ" ಎಂಬ ಹೊಸ ಪಕ್ಷವನ್ನು ಹುಟ್ಟು ಹಾಕಿದರು. ಎಚ್.ಬಿ. ಗುಂಡಪ್ಪಗೌಡ, ವಿ. ವೆಂಕಟಪ್ಪ, ಕೆ.ಸಿ. ರೆಡ್ಡಿ, ಬಿ.ಎನ್. ಗುಪ್ತ, ಹೆಚ್.ಸಿ. ದಾಸಪ್ಪ, ಡಿ.ಎಸ್. ಮಲ್ಲಪ್ಪ, ಡಿ.ಎಚ್. ಚಂದ್ರ ಶೇಖರಯ್ಯ, ರಾವ್‌ಸಾಹೇಬ್ ಚೆನ್ನಯ್ಯ, ಚಿಕ್ಕಮಗಳೂರಿನ ಬಾಗೇಮನೆ ದೇವೇಗೌಡ, ಶಿವಮೊಗ್ಗದ ಎಚ್. ಸಿದ್ದಯ್ಯ, ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದ ಸುಬ್ಬಯ್ಯ ಮೊದ ಲಾದವರು "ಪ್ರಜಾಪಕ್ಷ"ದ ಮುಖಂಡರಾಗಿದ್ದರು. ಈ ಪಕ್ಷ ಅನಾದಿ ಕಾಲದಿಂದ ಉಚ್ಚವರ್ಣ ದವರ ಶೋಷಣೆಗೆ ಒಳಗಾಗಿದ್ದ, ಮಹಾರಾಜರ ಆಳ್ವಿಕೆಯಲ್ಲಿ ಅಧಿಕಾರಗಳಿಂದ ವಂಚಿತ ರಾಗಿದ್ದವರಿಗೆ ಸಮಾಜದಲ್ಲಿ ಸರಿಸಮಾನವಾದ ಸ್ಥಾನ–ಮಾನಗಳನ್ನು ಪಡೆದುಕೊಳ್ಳಲು ಹೋರಾಡುವವರ ಪಕ್ಷವಾಗಿತ್ತು.

ಹೀಗೆ ಸ್ಥಾಪಿತವಾದ "ಪ್ರಜಾಪಕ್ಷ" ಹಿಂದುಳಿದ ವರ್ಗದ ಏಳಿಗೆಯನ್ನೇ ತಮ್ಮ ಪ್ರಪ್ರಥಮ ಗುರಿಯನ್ನಾಗಿಸಿಕೊಂಡು ತಮಗೆ ದೊರೆಯಬೇಕಾದ ಸವಲತ್ತುಗಳನ್ನು ದೊರಕಿಸಿ ಕೊಳ್ಳುವ ಛಲವನ್ನು ಹೊಂದಿದ್ದು ಅದಕ್ಕಾಗಿ ಹೋರಾಟ ನಡೆಸುವ ಮನೋಭಾವದಿಂದ ಕೂಡಿದ್ದು ಚುನಾವಣೆಗಳಲ್ಲಿ ಭಾಗವಹಿಸಿ ರಾಜಕೀಯ ಅಧಿಕಾರವನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿತ್ತು.

ಕ್ರಿ.ಶ. 1930ರಲ್ಲಿ ನಡೆದ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಪ್ರಜಾಪಕ್ಷದ ವತಿಯಿಂದ ಸ್ಪರ್ಧಿಸಿದ ಕೆ.ಸಿ. ರೆಡ್ಡಿ ಅವರು ಕೋಲಾರ ಜಿಲ್ಲೆಯ ಬಂಗಾರಪೇಟೆ

ಕ್ಷೇತ್ರದಿಂದ ಆರಿಸಿ ಬಂದರು. ಮೈಸೂರು ಸಂಸ್ಥಾನದ ಕಾರ್ಯ ನಿರ್ವಹಣೆಯಲ್ಲಿ ಹಾಗೂ ಸಂಸ್ಥಾನದ ಕಾನೂನು ರಚನೆಯ ಕಾರ್ಯದಲ್ಲಿ ಅಧಿಕಾರಿಗಳೊಡನೆ ಸಾರ್ವಜನಿಕ ಪ್ರತಿನಿಧಿಗಳು ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಕ್ರಮವಾಗಿ 1881 ಮತ್ತು 1907ರಲ್ಲಿ ಸ್ಥಾಪಿತವಾಗಿದ್ದ ಮೈಸೂರು ಪ್ರಜಾಪ್ರತಿನಿಧಿ ಸಭೆ ಹಾಗೂ ಮೈಸೂರು ನ್ಯಾಯವಿಧಾಯಕ ಸಭೆಗೆ ಕೆ.ಸಿ. ರೆಡ್ಡಿ ಅವರು 1930ರಲ್ಲಿ ಎರಡೂ ಸಭೆಗಳಿಗೆ ಒಮ್ಮೆಗೇ ಆಯ್ಕೆಯಾದರು. ಇದು ಕೆ.ಸಿ. ರೆಡ್ಡಿ ಅವರ ರಾಜಕೀಯ ಜೀವನದಲ್ಲಿ ಇಟ್ಟ ಮೊಟ್ಟ ಮೊದಲ ದೃಢವಾದ ಹೆಜ್ಜೆ ಎಂದು ಹೇಳಬಹುದು.

ಗ್ರಾಮೀಣ ಪ್ರದೇಶದಿಂದ ಶಾಸನಸಭೆಯ ಪ್ರತಿನಿಧಿಯಾಗಿ ಆಯ್ಕೆಯಾದ ಕೆ.ಸಿ. ರೆಡ್ಡಿ ಅವರಿಗೆ ಹಳ್ಳಿಗಳ ರೈತರ ಆರ್ಥಿಕ ಸಂಕಷ್ಟಗಳ ಬಗ್ಗೆ ಸ್ಪಷ್ಟ ಅರಿವಿತ್ತು. 1930ರಲ್ಲಿ ಇಡೀ ವಿಶ್ವದಲ್ಲಿ ಆವರಿಸಿದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೃಷಿ ಬೆಲೆಗಳು ಕುಸಿದು ರೈತರು ತೆರಿಗೆಯ ಹೊರೆಯಿಂದ ತತ್ತರಿಸುವಂತಾಯಿತು. ಗ್ರಾಮೀಣ ಪ್ರದೇಶದ ರೈತಾಪಿ ವರ್ಗದ ಸಂಕಷ್ಟಗಳ ಬಗ್ಗೆ ರೆಡ್ಡಿ ಅವರಿಗಿದ್ದ ಅಪಾರವಾದ ಜ್ಞಾನ ಹಾಗೂ ಕಾಳಜಿ ಅವರು ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಗಳಲ್ಲಿ ಅವರು ಮಾಡಿದ ಭಾಷಣಗಳಲ್ಲಿ ಕಾಣಬಹುದಾಗಿದೆ. ರೈತರ ಸಮಸ್ಯೆಗಳ ಪರವಾಗಿ ಧ್ವನಿ ಎತ್ತುವ ಮೂಲಕ ಕೆ.ಸಿ. ರೆಡ್ಡಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ್ದರು.

ಎಂ.ಆರ್.ಎ. ಹಾಗೂ ಎಂ.ಎಲ್.ಸಿ. ಸದಸ್ಯರು ಮತ್ತು ಕೆ.ಸಿ. ರೆಡ್ಡಿ

ಕ್ರಿ.ಶ. 1930 ರಿಂದ 1952 ರವರೆಗೆ ಬಂಗಾರಪೇಟೆ ಕ್ಷೇತ್ರದಿಂದ ನಿರಂತರವಾಗಿ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಆಯ್ಕೆಯಾಗುತ್ತಲೇ ಬಂದರು. ಆ ನಂತರದ ಕಾಲಘಟ್ಟದಲ್ಲಿ ರೆಡ್ಡಿ ಅವರು ಕೋಲಾರ ಜಿಲ್ಲೆಯ ಹಿಂದಿ ಪ್ರಚಾರ ಸಭೆ ಮತ್ತು ಭೂ ಅಡಮಾನ ಬ್ಯಾಂಕ್‌ನ ಅಧ್ಯಕ್ಷರಾಗಿಯೂ ಆಯ್ಕೆಯಾಗಿ ಸೇವೆ ಸಲ್ಲಿಸಿದರು.

ಕೆ.ಸಿ. ರೆಡ್ಡಿ ಅವರು ನ್ಯಾಯವಿಧಾಯಕ ಸಭೆಯಲ್ಲಿ 1930ರ ಮಹಾ ಆರ್ಥಿಕ ಬಿಕ್ಕಟ್ಟಿನಿಂದ ಪ್ರಪಂಚದ ಎಲ್ಲಾ ರಾಷ್ಟ್ರಗಳು ಹೇಗೆ ತತ್ತರಿಸವಂತಾಗಿದೆ ಎಂಬ ವಿಷಯದ ಬಗ್ಗೆ ಸಭೆಯ ಗಮನ ಸೆಳೆದರು. "ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಅಮೇರಿಕಾ ಹಾಗೂ ಬ್ರಿಟಿಷ್ ಸರ್ಕಾರಗಳು ಹಲವು ಯೋಜನೆಗಳನ್ನು ಹಮ್ಮಿಕೊಂಡು ಜನರ ಆರ್ಥಿಕ ಸಂಕಷ್ಟಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಬಂಗಾಳ ಹಾಗೂ ಬೊಂಬಾಯಿ ಪ್ರಾಂತ್ಯಗಳು ಈ ಸಮಸ್ಯೆಯ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಆದರೆ ದುರದೃಷ್ಟವಶಾತ್ ಮೈಸೂರು ಸರ್ಕಾರ ಈ ಬಗ್ಗೆ ಯಾವುದೇ

ಯೋಜನೆಗಳನ್ನು ಹಾಗೂ ಪರಿಹಾರ ಮಾರ್ಗಗಳನ್ನು ಹಾಕಿಕೊಳ್ಳುವುದರಲ್ಲಿ ವಿಫಲವಾಗಿವೆ" ಎಂದು ವಿಷಾದ ವ್ಯಕ್ತಪಡಿಸಿದರು. ಈ ಬಗ್ಗೆ ನ್ಯಾಯವಿಧಾಯಕ ಸಭೆಯಲ್ಲಿ ಡಿ.ಎಸ್. ಮಲ್ಲಪ್ಪನವರು ಚರ್ಚಿಸಿ ಸರ್ಕಾರ ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು ಹಾಗೂ ಕೃಷಿಕರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಬಗ್ಗೆ ಯೋಚಿಸಬೇಕೆಂದು ಸಲಹೆ ನೀಡಿದರು. ಈ ಸಮಸ್ಯೆಗೆ ಪರಿಹಾರ ಕೇವಲ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ ರಾಜ್ಯದ ಮೈಸೂರು ಬ್ಯಾಂಕು ಕೂಡ ಕಡಮೆ ಬಡ್ಡಿಗೆ ಸಾಲ ನೀಡುವ ಬಗ್ಗೆ ಚಿಂತಿಸಬೇಕೆಂದು ಕೋರಿದರು.[21]

1930ರ ಪ್ರಜಾಪ್ರತಿನಿಧಿ ಸಭೆಯ ಜೂನ್ ಅಧಿವೇಶನದಲ್ಲಿ ಸದಸ್ಯರಾದ ಎಂ. ರಾಮೇಗೌಡ ಅವರು ಕೋಲಾರ ಜಿಲ್ಲೆಯ ಒಣ ಭೂ ಕಂದಾಯ (DRY ASSESS-MENT) ಕುರಿತು ಚರ್ಚೆ ಪ್ರಾರಂಭಿಸಿದರು. ಚರ್ಚೆಯಲ್ಲಿ ಕೆ.ಸಿ. ರೆಡ್ಡಿ ಅವರು ಒಂದು ನಿರ್ಣಯ ಮಂಡಿಸಿ "ಒಣ ಭೂ ಕಂದಾಯ ಹಾಗೂ ಇತರೆ ತೆರಿಗೆಗಳನ್ನು ಹೆಚ್ಚಿಸುವ ಮುನ್ನ ವಿಷಯವನ್ನು ಶಾಸನಸಭೆಯಲ್ಲಿ ಮಂಡಿಸಿ ಸದಸ್ಯರ ಅಭಿಪ್ರಾಯ ಪಡೆಯಲು ಸೂಚಿಸಿದರು. ಇದರಿಂದ ಸದಸ್ಯರಿಗೆ ತೆರಿಗೆಯ ಪ್ರಮಾಣ ಹಾಗೂ ಸಾಮಾನ್ಯ ಜನ ಹೊರಬೇಕಾದ ತೆರಿಗೆಯ ಭಾರದ ಬಗ್ಗೆ ಚರ್ಚಿಸಲು ಹಾಗೂ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಭೂ ಕಂದಾಯ ನಿಷ್ಕರ್ಷೆ ಮಾಡುವ ಸಂದರ್ಭದಲ್ಲಿ ಒಂದು ಸಮಿತಿಯನ್ನು ರಚಿಸಿ ಆ ಸಮಿತಿಯಲ್ಲಿ ಚುನಾಯಿತ ಪ್ರತಿನಿಧಿಗಳು ಬಹು ಸಂಖ್ಯಾತರಾಗಿರುವಂತೆ ಆಗ್ರಹಿಸಿದರು".[22]

1930ರ ಮೊದಲ ಅಧಿವೇಶನದಲ್ಲಿಯೇ ಉತ್ತಮ ವಾಗ್ಮಿ ಎಂದು ಎಲ್ಲರ ಗಮನ ಸೆಳೆದ ಕೆ.ಸಿ. ರೆಡ್ಡಿ ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೂ ಆಯ್ಕೆಯಾದರು. ಡಿ.ಎಚ್. ಚಂದ್ರಶೇಖರಯ್ಯನವರು ರಾಜ್ಯದ ಭೂ ಕಂದಾಯ ಹೊರೆಯ ಬಗ್ಗೆ ಮಂಡಿಸಿದ ನಿಲುವಳಿ ಸೂಚನೆಯನ್ನು ಸಮರ್ಥಿಸಿ ಮಾತನಾಡಿದ ಕೆ.ಸಿ. ರೆಡ್ಡಿ ಕಳೆದ ಮೂವತ್ತು ವರ್ಷಗಳಲ್ಲಿ ಭೂ ಕಂದಾಯವು ಶೇಕಡ 30%ರಷ್ಟು ಹೆಚ್ಚಾಗಿದೆ. ಹಾಗೆಯೇ ತೆರಿಗೆ ಸಂಗ್ರಹಿಸುವ ವೆಚ್ಚವು ಕೂಡ ಹೆಚ್ಚಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಮೈಸೂರು ರಾಜ್ಯದ ಭೂ ಕಂದಾಯ ನೀತಿಯು ಮುಂಬೈ ಪ್ರಾಂತದ ಭೂ ಕಂದಾಯ ನೀತಿಯನ್ನು ಅನುಕರಣೆ ಮಾಡಿದ್ದು, ಮುಂಬೈ ಪ್ರಾಂತ್ಯದಲ್ಲಿ ಈ ಶಾಸನದ ಬಗ್ಗೆ ಸಾಕಷ್ಟು ಪ್ರತಿರೋಧ ವ್ಯಕ್ತವಾಗಿದ್ದು ಅದರ ಬದಲಾವಣೆಗೆ ಒತ್ತಡಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಮೈಸೂರು ರಾಜ್ಯದ ಭೂ ಕಂದಾಯ ನೀತಿಯನ್ನು ಪುನರ್ ವಿಮರ್ಶಿಸುವ ಅಗತ್ಯವಿದೆ ಎಂದು

21. ನಡಾವಳಿಗಳು : ಮೈಸೂರು ನ್ಯಾಯ ವಿಧಾಯಕ ಸಭೆ : ದಿನಾಂಕ : 17-12-1930, ಪುಟ-241.
22. ನಡಾವಳಿಗಳು : ಮೈಸೂರು ನ್ಯಾಯ ವಿಧಾಯಕ ಸಭೆ : ದಿನಾಂಕ : 17-06-1930, ಪುಟ-110.

ವಾದಿಸಿದರು. ಪ್ರಸ್ತುತ ಭೂ ಕಂದಾಯ ನೀತಿಯು ABSOLUTE ಆಗಿದ್ದು ಈ ವ್ಯವಸ್ಥೆಯಲ್ಲಿ ಭೂ ಕಂದಾಯ ವಿಧಿಸುವಲ್ಲಿ ಸರ್ಕಾರಕ್ಕೆ ಪರಮಾಧಿಕಾರವಿದೆ. ಬದಲಾಗುತ್ತಿರುವ ರಾಜಕೀಯ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೆ ತೆರಿಗೆ ವಿಷಯದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವ ಅಧಿಕಾರವಿರಬೇಕು ಎಂದು ಅಭಿಪ್ರಾಯ ಮಂಡಿಸಿರುವುದು ಗಮನಾರ್ಹ.

ಪ್ರಜಾಪ್ರತಿನಿಧಿ ಸಭೆಯ ಸಹಮತವಿಲ್ಲದೆ ತೆರಿಗೆಗಳನ್ನು ವಿಧಿಸುವ ಅಧಿಕಾರ ಸರ್ಕಾರಕ್ಕಿಲ್ಲ ಎಂದು ಅಭಿಪ್ರಾಯ ಮಂಡಿಸಿದರು. ಭೂ ಕಂದಾಯವನ್ನು ಕುರಿತಂತೆ ಖ್ಯಾತ ರಾಷ್ಟ್ರೀಯವಾದಿ ಹಾಗೂ ಅರ್ಥಶಾಸ್ತ್ರಜ್ಞ ಆರ್.ಸಿ. ದತ್ತರವರ ಅಭಿಪ್ರಾಯ ವ್ಯಕ್ತಪಡಿಸುತ್ತಾ ಕೆ.ಸಿ. ರೆಡ್ಡಿ ಅವರು "ಒಂದು ಖಾಯಂ ಭೂ ಕಂದಾಯ ನೀತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತವೇನೋ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತಿ ಮೂವತ್ತು ವರ್ಷಗಳಿಗೊಮ್ಮೆ ಭೂ ಕಂದಾಯ ಪುನರ್ ವಿಮರ್ಶೆ ಮಾಡಿದಾಗಲೂ ತೆರಿಗೆ ಹೆಚ್ಚಿಸಲಾಗಿದ್ದು ಇದರಿಂದ ರೈತರಿಗೆ ತೆರಿಗೆ ಹೊರೆ ಹೆಚ್ಚಾಗಿದೆ ಎಂಬುದನ್ನು ವಿವರಿಸಿದರು. ಈ ನೀತಿಯಿಂದಾಗಿ ಸರ್ಕಾರದ ಆದಾಯ ಹೆಚ್ಚಾಗಿದೆ. ಆದರೆ ರೈತರ ತೆರಿಗೆ ಹೊರೆ ಕೂಡ ಹೆಚ್ಚಾಗಿದೆ, ಸರ್ಕಾರದ ಭೂ ಕಂದಾಯ ನೀತಿಯಿಂದ ಸಣ್ಣ ಭೂ ಹಿಡುವಳಿದಾರರಿಗೆ ಭೂ ಕಂದಾಯದ ಹೊರೆ ಹೆಚ್ಚಾಗಿದೆ. ಇದು ಸಾಲದೆಂಬಂತೆ ಶೈಕ್ಷಣಿಕ ಶುಲ್ಕ, ನೀರಾವರಿ ಶುಲ್ಕ, ರೈಲ್ವೆ ಶುಲ್ಕ ಹೀಗೆ ಹತ್ತು ಹಲವು ತೆರಿಗೆಗಳು ಸಾಮಾನ್ಯ ರೈತರ ಮೇಲೆ ಬೀಳುತ್ತಿವೆ. ರೈತಾಪಿ ವರ್ಗದವರು ಏನೇ ಸೌಲಭ್ಯಕ್ಕೆ ಬೇಡಿಕೆ ಸಲ್ಲಿಸಿದರು ಅದಕ್ಕೆ ಶುಲ್ಕ ತೆರಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ. ಈ ಕಾರಣದಿಂದ ರಾಜ್ಯದ ಭೂ ಕಂದಾಯ ನೀತಿ ಅವೈಜ್ಞಾನಿಕ ಎಂಬುದಾಗಿ ವಾದಿಸಿದರು.

ಕೋಲಾರ ಜಿಲ್ಲೆಯ ಭೂ ಕಂದಾಯ ತೆರಿಗೆ ಬಗ್ಗೆ ತಾವು ಸರ್ಕಾರದ ನೀತಿಯನ್ನು ಟೀಕಿಸದೆ ಇರಲು ಸಾಧ್ಯವೇ ಇಲ್ಲ ಎಂದು ಹೇಳಿದ ಕೆ.ಸಿ. ರೆಡ್ಡಿ ಅವರು, ರಾಜ್ಯದ ಭೂ ಕಂದಾಯದ ಹೊರೆ ಹೆಚ್ಚು ವಿಶೇಷವಾಗಿ ಇದರ ಹೊರೆ ಕೋಲಾರ ಜಿಲ್ಲೆಯ ರೈತರ ಮೇಲೆ ಇನ್ನೂ ಹೆಚ್ಚಾಗಿದೆ, ಶಾಸನಸಭೆಗಳ ಮುಖಾಂತರ ಈ ಸಮಸ್ಯೆಯನ್ನು ಹಲವು ಬಾರಿ ಸರ್ಕಾರದ ಗಮನಕ್ಕೆ ತರಲಾಗಿದೆ, ಆದರೆ ರೈತರ ಕಷ್ಟಗಳ ಬಗ್ಗೆ ಸರ್ಕಾರದ ಹೃದಯ ಕರಗಿಲ್ಲ ಹಾಗೂ ಈ ಅಸಮಾನತೆಯನ್ನು ಸರಿಪಡಿಸಿ ಜಿಲ್ಲೆಯ ಜನರಿಗೆ ನ್ಯಾಯ ದೊರಕಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ತಮಗೆ ಅರಿವು ಇರುವ ಹಾಗೇ ಕೋಲಾರ ಜಿಲ್ಲೆಯಲ್ಲಿ ಹಿಂದೆ ಸೇವೆ ಸಲ್ಲಿಸಿದ ಹಲವು ಜಿಲ್ಲಾಧಿಕಾರಿಗಳು ಜಿಲ್ಲೆಯ ರೈತರ ಮೇಲೆ ಹೆಚ್ಚಿನ ಕಂದಾಯದ ಹೊರೆ ಇದೆ ಎಂಬುದಕ್ಕೆ ಸಹಮತ ಹೊಂದಿದ್ದಾರೆ ಎಂದು ನುಡಿದರು.

ಕೋಲಾರ ಜಿಲ್ಲೆಯ ರೈತರಿಗೆ ಭೂ ಕಂದಾಯ ವಿಷಯದಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸದಿದ್ದರೆ ಅದೊಂದು ದೊಡ್ಡ ಲೋಪವಾಗುತ್ತದೆ ಎಂದರು.

ತಾವು ಈ ಬಗ್ಗೆ HEROIC ಹಾಗೂ ANDACIOUS ಹಾಗೇ ಕಾಣಲು ಇಷ್ಟವಿಲ್ಲ. ಈ ಅಸಮಾನತೆ ಸರಿಪಡಿಸಿ ಇಲ್ಲವಾದರೆ ಸರ್ಕಾರ ಮುಂದೆ ಇಕ್ಕಟ್ಟಿನ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ತಾವು ಈ ಬಗ್ಗೆ ಮಾತನಾಡುವಾಗ ಹಗುರುವಾಗಿ ಮಾತನಾಡುತ್ತಿಲ್ಲ ತಮ್ಮ ಸ್ಥಾನದ ಜವಾಬ್ದಾರಿಯನ್ನು ಅರಿತೇ ಮಾತನಾಡುತ್ತಿದ್ದೇನೆ ಎಂದು ಹೇಳಿದರು. ಕೋಲಾರ ಜಿಲ್ಲೆಯ ರೈತರ ಪರವಾಗಿ ಕೆ.ಸಿ. ರೆಡ್ಡಿ ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿ ಈ ಸಮಸ್ಯೆಗೆ ಶೀಘ್ರ ಪರಿಹಾರ ಕೈಗೊಳ್ಳದಿದ್ದರೆ ಮುಂದೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಗುಡುಗಿ ಬಾರ್ಡೋಲಿ ರೈತರ ಹೋರಾಟದ ಉದಾಹರಣೆ ನೀಡುತ್ತಾ, ಕೋಲಾರ ಜಿಲ್ಲೆಯ ರೈತರು ಕೂಡ ಆ ಮಾರ್ಗ ಹಿಡಿಯುವ ದಿನಗಳು ದೂರವಿಲ್ಲ ಎಂದು ಸರ್ಕಾರಕ್ಕೆ ಸವಾಲು ಹಾಕಿದರು.

ಕೆ.ಸಿ. ರೆಡ್ಡಿ ಅವರ ಮಾತುಗಳು ಹಾಗೂ ಎಚ್ಚರಿಕೆಗೆ ಕುಪಿತರಾಗಿ ಪ್ರತಿಕ್ರಿಯಿಸಿದ ಅಧ್ಯಕ್ಷರಾದ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ಸಿಟ್ಟಿನಿಂದ ಆ ಸವಾಲನ್ನು ಎದುರಿಸಲು ಸರ್ಕಾರ ಸಿದ್ಧವಿದೆ ಎಂದು ಪ್ರತಿ ಸವಾಲು ಹಾಕಿದರು. ಮುಂದುವರೆದು ರೈತಾಪಿ ವರ್ಗದ ಸಮಸ್ಯೆಗಳಿದ್ದರೆ ಅದನ್ನು ಸದಸ್ಯರು ವ್ಯಕ್ತಪಡಿಸಲು ಅವಕಾಶವಿದೆ. ಆದರೆ ಸದಸ್ಯರು ಸರ್ಕಾರದ ವಿರುದ್ಧ ಸವಾಲು ಹಾಕಿದರೆ ಆ ಸವಾಲನ್ನು ಸ್ವೀಕರಿಸಲು ತಾವು ಸಿದ್ಧ ಎಂದು ಗುಡುಗಿದರು. ದಿವಾನರ ಸಿಟ್ಟಿಗೆ ಪ್ರತಿಕ್ರಿಯಿಸಿದ ಕೆ.ಸಿ. ರೆಡ್ಡಿ, ತಮ್ಮ ಸಿಟ್ಟನ್ನು ಸವಾಲೆಂದು ಪರಿಗಣಿಸಬಾರದೆಂದು ತಾವು ಈ ಬಗ್ಗೆ ಹಲವು ಬಾರಿ ಪ್ರಸ್ತಾಪಿಸಿದರೂ ಕೂಡ ಫಲಿತಾಂಶ ಶೂನ್ಯ. ಶಾಸನಸಭೆಯಲ್ಲಿ ಹಲವು ಸಂದರ್ಭದಲ್ಲಿ 'ಜಮಾ ಬಂದಿ ಸಮಿತಿ' (ASSESSMENT COMMITTEE) ವರದಿಗಳನ್ನು ಪ್ರಕಟಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಕೂಡ ಸರ್ಕಾರ ಕಾರ್ಯ ಪ್ರವೃತ್ತವಾಗದಿರುವುದು ವಿಷಾದಕರ ಎಂದರು.

ಚರ್ಚೆಯನ್ನು ಮುಂದುವರೆಸಿದ ವಿ. ವೆಂಕಟಪ್ಪನವರು, ಕೆ.ಸಿ. ರೆಡ್ಡಿ ಅವರ ಭಾಷಣದ ಬಗ್ಗೆ ಪ್ರಸ್ತಾಪಿಸುತ್ತಾ "ಕೆ.ಸಿ.ರೆಡ್ಡಿ ಅವರು (LAND REVENUE ASSESSMENT) ಭೂ ಕಂದಾಯ ಜಮಾ ಬಂದಿಯನ್ನು ಇಳಿಸುವಂತೆ ಮಾಡಿದ ಬೇಡಿಕೆ ಬಗ್ಗೆ ಸರ್ಕಾರ ತಪ್ಪು ಗ್ರಹಿಸಿದೆ ಎಂದು, ರೆಡ್ಡಿ ಅವರು ಪ್ರಸ್ತಾಪಿಸಿದ ವಿಷಯವು ಸವಾಲಲ್ಲವೆಂದು ಅದೊಂದು ಗಂಭೀರ ಸಮಸ್ಯೆ ಎಂದು ಸಹಮತ ವ್ಯಕ್ತಪಡಿಸಿದರು. ಈ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಅವರು ಕೋಲಾರದ ಯುವ ಸದಸ್ಯ ಭೂ ಕಂದಾಯ ವಿಷಯದ ಬಗ್ಗೆ ಮಂಡಿಸುವ ಸಂದರ್ಭದಲ್ಲಿ ಹೆಚ್ಚಿನ ಉತ್ಸಾಹ ಪ್ರದರ್ಶಿಸಿದ್ದಾರೆ, ಆದರೂ ಕೂಡ ಅವರ ವಾದದಲ್ಲಿ ಸತ್ಯಾಂಶವಿದೆ ಎಂದು ಹೇಳಿ ವಿವಿಧ ಜಿಲ್ಲೆಗಳ ಭೂ ಕಂದಾಯ ಅಂಕಿ- ಅಂಶಗಳನ್ನು ನೀಡುತ್ತ ಸರ್ಕಾರ ಜಮಾ ಬಂದಿ ಸಮಿತಿ ವರದಿಯನ್ನು ಪ್ರಕಟಿಸದಿರುವುದು ಸದಸ್ಯರ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ

ಹಾಗೂ ಭೂ ಕಂದಾಯ ಹೆಚ್ಚಾದ ವಿಷಯದಲ್ಲಿ ಕೋಲಾರ ಜಿಲ್ಲೆಗೆ ನ್ಯಾಯ ದೊರೆಯಬೇಕಾಗಿದೆ ಎಂದು ಹೇಳಿದರು.

ಡಿ.ಎಸ್. ಮಲ್ಲಪ್ಪನವರು ಚರ್ಚೆಯಲ್ಲಿ ಪಾಲ್ಗೊಂಡು ಕೆ.ಸಿ. ರೆಡ್ಡಿ ಅವರು ಭೂ ಕಂದಾಯ ಕುರಿತು ಮಂಡಿಸಿದ ವಿಷಯ ಸಹಜವಾದುದೆಂದು ಇದನ್ನು ಪುಷ್ಠಿಗೊಳಿಸಲು ಬೇಲೂರು ಶ್ರೀನಿವಾಸ ಅಯ್ಯಂಗಾರವರು ನೀಡಿರುವ ಅಂಕಿ – ಅಂಶಗಳು ಕೋಲಾರ ಜಿಲ್ಲೆಗೆ ನಿಗಧಿ ಪಡಿಸಲಾದ ಭೂ ಕಂದಾಯ ಪ್ರಮಾಣ, ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹೆಚ್ಚೆಂದು ಜಿಲ್ಲೆಯ ರೈತರಿಗೆ ಇದರಿಂದ ವಿನಾಯಿತಿ ನೀಡಬೇಕೆಂಬ ಕೂಗು ಸಹಜವಾದು ದೆಂದು ಹೇಳುತ್ತಾ, ಕೆ.ಸಿ. ರೆಡ್ಡಿ ಅವರು ರೈತಾಪಿ ವರ್ಗದ ಸಮಸ್ಯೆಗಳ ಬಗ್ಗೆ ಹಾಗೂ ಅವರ ಅಸಮಾಧಾನದ ಬಗ್ಗೆ ಬೆಳಕು ಚೆಲ್ಲಿದ್ದಾರೆಯೇ ಹೊರತು ಅವರು ಸರ್ಕಾರಕ್ಕೆ ಸವಾಲು ಹಾಕಿಲ್ಲ ಎಂದು ಹೇಳಿದರು. ಸರ್ಕಾರ ಈ ವಿಷಯದಲ್ಲಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಚರ್ಚೆಯಲ್ಲಿ ಭಾಗವಹಿಸಿದ ಪಿ.ಜಿ. ಡಿಸೋಜಾ ಬಹಳ ಹಿಂದಿನಿಂದಲೂ ಚಾರಿತ್ರಿಕ ಕಾರಣಗಳಿಗಾಗಿ ಕೋಲಾರ ಜಿಲ್ಲೆಯ ಭೂ ಕಂದಾಯ ಪ್ರಮಾಣ ಇತರ ಪ್ರದೇಶಗಳಿಗೆ ಹೋಲಿಸಿದರೆ ಹೆಚ್ಚಾಗಿದೆ, ಕೋಲಾರ ಜಿಲ್ಲೆ ಪದೇ ಪದೇ ಮಳೆ ಅಭಾವಕ್ಕೆ ಒಳಗಾಗಿ ಬರಗಾಲ ಎದುರಿಸುತ್ತಾ ಬಂದಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಹಲವು ರಿಯಾಯಿತಿಗಳನ್ನು ಘೋಷಿಸುತ್ತಾ ಬಂದಿದೆ. ಸರ್ಕಾರವು ರಾಜ್ಯದ ಬೇರೆ ಯಾವುದೇ ಪ್ರದೇಶಕ್ಕೆ ನೀಡದೆ ಇರುವಂತಹ ಗಮನವನ್ನು ಕೋಲಾರ ಜಿಲ್ಲೆಯ ಕೆರೆಗಳ ಪುನರ್ ಚೇತನಕ್ಕೆ ನೀಡುತ್ತಾ ಬಂದಿದೆ ಎಂದು ಹೇಳಿ, ಸರ್ಕಾರ ಕೋಲಾರ ಜಿಲ್ಲೆಯ ರೈತರ ಕಲ್ಯಾಣಕ್ಕಾಗಿ ಕೈಗೊಂಡ ಕ್ರಮಗಳನ್ನು ಪ್ರಸ್ತಾಪಿಸಿದರು. ಚರ್ಚೆ ಮುಂದುವರೆಸಿ ಪಿ.ಜಿ. ಡಿಸೋಜಾ ಅವರು ಕೆ.ಪಿ. ಪುಟ್ಟಣ್ಣ ಚೆಟ್ಟಿ ಕೋಲಾರ ಜಿಲ್ಲಾಧ್ಯಕ್ಷರಾಗಿದ್ದರು ಹಾಗೂ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಉಪ ವಿಭಾಗಾಧೀಕಾರಿಗಳಾಗಿದ್ದರು ಈ ಮಹನೀಯರು ಈಗ ಸಭೆಯ ಸದಸ್ಯರಾಗಿದ್ದಾರೆ, ಈ ಮಹನೀಯರಿಗೆ ಕೋಲಾರ ಜಿಲ್ಲೆಯ ರೈತರ ಸಮಸ್ಯೆಗಳ ಬಗ್ಗೆ ಅರಿವಿದೆ ಎಂದು ಹೇಳಿ ಈ ಬಗ್ಗೆ ಸಹಾನುಭೂತಿಯಿಂದ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಈ ದೀರ್ಘ ಚರ್ಚೆಗೆ ಉತ್ತರಿಸಿದ ಕೆ.ಸಿ. ರೆಡ್ಡಿ ತಮ್ಮ ಭಾಷಣದಲ್ಲಿ ತಾವು ಸರ್ಕಾರಕ್ಕೆ ಸವಾಲು ಹಾಕುವ ಉದ್ದೇಶವಿರಲಿಲ್ಲವೆಂದೂ, ಪರಿಸ್ಥಿತಿ ಹೀಗೆ ಮುಂದುವರೆದರೆ ಮುಂದಾಗಬಹುದಾದ ಪರಿಸ್ಥಿತಿಗಳ ಬಗ್ಗೆ ಸಭೆಯ ಗಮನಸೆಳೆದು ಅದನ್ನು ತಪ್ಪಿಸುವ ಉದ್ದೇಶ ತಮ್ಮದೆಂದು ಹೇಳಿದುದು ಗಮನಾರ್ಹ.[23]

---

23. ನಡಾವಳಿಗಳು: ಮೈಸೂರು ನ್ಯಾಯವಿಧಾಯಕ ಸಭೆ : ದಿನಾಂಕ : ಜೂನ್ 1930, ಪುಟ261–262.

1930ರ ಅಕ್ಟೋಬರ್ ಅಧಿವೇಶನದಲ್ಲಿ ಕೂಡ ಕೋಲಾರ ಜಿಲ್ಲೆಯ ಭೂ ಕಂದಾಯ 'ಜಮಾ ಬಂದಿ ಸಮಿತಿ' ವರದಿ ಪ್ರಕಟಿಸುವಂತೆ ಶ್ರೀನಿವಾಸಪುರ ತಾಲ್ಲೂಕು ಪ್ರತಿನಿಧಿ ಭಾಸ್ಕರಪ್ಪ ನಿರ್ಣಯ ಮಂಡಿಸಿ ಒತ್ತಾಯಿಸಿದರು. ವೇಮಾರೆಡ್ಡಿ ಅವರು ಚರ್ಚೆಯಲ್ಲಿ ಪಾಲ್ಗೊಂಡು ಕೋಲಾರ ಜಿಲ್ಲೆಯ ರೈತರ ತೆರಿಗೆಯ ಹೊರೆ ಬಹಳ ಹೆಚ್ಚೆಂದು 'ಜಮಾಬಂದಿ ಸಮಿತಿ' ವರದಿಯನ್ನು ಸದನದಲ್ಲಿ ಮಂಡಿಸಿ ಅದರ ಬಗ್ಗೆ ಸದಸ್ಯರ ಅಭಿಪ್ರಾಯ ಪಡೆಯು ಬೇಕೆಂದು ಒತ್ತಾಯಿಸಿದರು. ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಸ್ಥಿತಿ ಶೋಚನೀಯವಾಗಿದೆ ಎಂದು ಕಾಲ ಕಾಲಕ್ಕೆ ಮಳೆಯಾಗದೆ ಫಸಲು ಹಾಳಾಗುತ್ತಿರುವುದನ್ನು ಪ್ರಸ್ತಾಪಿಸಿದರು. ಪರಿಸ್ಥಿತಿ ಹೀಗಿರುವಾಗ ಭೂ ಕಂದಾಯ ಪ್ರಮಾಣ ಹೆಚ್ಚಿಸಿರುವುದನ್ನು ಪ್ರಶ್ನಿಸಿದರು. ಚರ್ಚೆಯಲ್ಲಿ ವೇಮಾರೆಡ್ಡಿ ಅವರ ಅಭಿಪ್ರಾಯವನ್ನು ಬೆಂಬಲಿಸಿ ಮಾತನಾಡಿದ ಕೆ.ಸಿ. ರೆಡ್ಡಿ ಸರ್ಕಾರ ತೆರಿಗೆ ನಿಗದಿಪಡಿಸುವಲ್ಲಿ ಯಾವುದೇ ಮಾನದಂಡ ಅನುಸರಿಸುತ್ತಿಲ್ಲ. ಮಳೆ ಅಭಾವ ಹಾಗೂ ಭೂಮಿ ಫಲವತ್ತಾಗಿಲ್ಲ, ಕೆರೆಗಳ ಸ್ಥಿತಿ ಶೋಚನೀಯವಾಗಿದೆ, ಇಂತಹ ಪರಿಸ್ಥಿತಿಯಲ್ಲಿ ತೆರಿಗೆ ಹೆಚ್ಚು ಮಾಡಿರುವುದು ನೋವಿನ ಸಂಗತಿ ಎಂದು ಹೇಳಿದರು. ಹಲವು ವರ್ಷಗಳಿಂದ ಹೆಚ್ಚಿನ ತೆರಿಗೆ ಹೊರೆ ಅನುಭವಿಸುತ್ತಿರುವ ಕೋಲಾರ ಜಿಲ್ಲೆಯ ರೈತರು ಸಹನೆ ಕಳೆದುಕೊಳ್ಳುವ ಮೊದಲು ಜಮಾ ಬಂದಿ ಸಮಿತಿ ವರದಿ ಬಹಿರಂಗಪಡಿಸಲು ಒತ್ತಾಯಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡ ಕೃಷ್ಣಮೂರ್ತಿ ಆಚಾರ್‌ರವರು ಮೊದಲೇ ಕೋಲಾರ ಜಿಲ್ಲೆಯ ಭೂ ಕಂದಾಯ ಹೊರೆ ಹೆಚ್ಚು ಅದನ್ನು ಪುನಃ ಹೆಚ್ಚಿಸಿರುವುದನ್ನು ಖಂಡಿಸಿದರು. ಜಿಲ್ಲೆಯ 4,000 ಕೆರೆಗಳು ದುರಸ್ಥಿಗಾಗಿ ಕಾಯುತ್ತಿವೆ, ಈ ಕೆರೆಯ ಅಚ್ಚುಕಟ್ಟಿನ ಪ್ರದೇಶದಲ್ಲೂ ಕೂಡ ಭೂ ಕಂದಾಯವನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು. ತೆರಿಗೆ ವಿನಾಯಿತಿ ನೀಡುವಲ್ಲೂ ಕೂಡ ಕೋಲಾರಕ್ಕಾದ ಅನ್ಯಾಯವನ್ನು ಪ್ರಸ್ತಾಪಿಸಿದರು. ಕೋಲಾರ ಜಿಲ್ಲೆಯ ನೆರೆಯ ಚಿತ್ತೂರು ಜಿಲ್ಲೆಯು ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿದ್ದು ಅಲ್ಲಿನ ಕೃಷಿ ಪರಿಸ್ಥಿತಿಗಳು ಕೋಲಾರದಂತೆಯೇ ಇವೆ, ಚಿತ್ತೂರಿನಲ್ಲಿ ಭೂ ಕಂದಾಯ ಎಕರೆಗೆ ಎರಡು ಆಣೆ ಇದ್ದು, ಕೋಲಾರ ಜಿಲ್ಲೆಯಲ್ಲಿ ಭೂ ಕಂದಾಯ ಎಕರೆಗೆ ಒಂದು ರೂಪಾಯಿ ಹನ್ನೆರಡು ಆಣೆ ಇದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.[24]

1930ರ ನ್ಯಾಯವಿಧಾಯಕ ಸಭೆಯ ಡಿಸೆಂಬರ್ ಅಧಿವೇಶನದಲ್ಲಿ ಒಂದು ನಿರ್ಣಯ ಮಂಡಿಸಿದ ಕೆ.ಸಿ. ರೆಡ್ಡಿ ಅವರು ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೃಷಿ ಬೆಳೆಗಳ ಬೆಲೆಯು ಇಳಿಮುಖವಾಗಿದ್ದು, ಇದನ್ನು ನಿಭಾಯಿಸಲು ಕೃಷಿಕರಿಗೆ ಪರಿಹಾರ ನೀಡುವಂತೆ ಆಗ್ರಹಿಸಿದರು. ಸಭೆಯಲ್ಲಿ ಕೆಲವು ಸದಸ್ಯರು ರಾಜ್ಯದ ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ

---

24. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ : ದಿನಾಂಕ : 06-10-1930, ಪುಟ-125.

ಎಂದು ಅವರ ಸಮಸ್ಯೆಗಳ ಬಗ್ಗೆ ಇಲ್ಲ ಸಲ್ಲದ ಊಹಾ ಪೋಹಗಳನ್ನು ಮಾಡಬಾರದೆಂದು ಸಭೆಯ ಸರ್ಕಾರದ ಸದಸ್ಯರಾದ ಡಾ. ಕೋಲ್‌ಮನ್‌ರ ಅಭಿಪ್ರಾಯಗಳನ್ನು ಟೀಕಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೋಲ್‌ಮನ್ ಇತರ ಪ್ರದೇಶಗಳ ರೈತ ಸಮಸ್ಯೆಗಳಿಗೆ ಹೋಲಿಸಿದರೆ ಮೈಸೂರು ರಾಜ್ಯದ ರೈತರ ಸ್ಥಿತಿ ಉತ್ತಮವೆಂದು ತಮ್ಮ ವಾದವನ್ನು ಸಮರ್ಥಿಸಿಕೊಂಡರು. ಚರ್ಚೆ ಮುಂದುವರೆಸಿದ ಕೆ.ಸಿ. ರೆಡ್ಡಿ ಭಾರತದ ರೈತರ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಇದಕ್ಕೆ ಮೈಸೂರು ಕೂಡ ಹೊರತಾಗಿಲ್ಲ, ಹಲವು ಅರ್ಥಶಾಸ್ತ್ರಜ್ಞರು ಈ ಸಮಸ್ಯೆಯ ಬಗ್ಗೆ ವಿಚಾರ ವಿಮರ್ಶೆ ನಡೆಸಿ ಈ ಪರಿಸ್ಥಿತಿಯು ಗಂಭೀರ ಹಾಗೂ ಅಪಾಯಕಾರಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಪ್ರಸ್ತಾಪಿಸಿದರು.

ಮಹಾ ಆರ್ಥಿಕ ಬಿಕ್ಕಟ್ಟಿಗೆ ಮುಂಚೆಯೇ ಪರಿಸ್ಥಿತಿ ಗಂಭೀರವಾಗಿತ್ತು. ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವ್ಯಾಪಾರ ಹಾಗೂ ಕೈಗಾರಿಕೆ ಕುಸಿದು ಬಿದ್ದು ನಾವೆಲ್ಲರೂ ಈ ಬಗ್ಗೆ ಚರ್ಚೆ ನಡೆಸಿ ಈ ಸಮಸ್ಯೆಯಿಂದ ರೈತಾಪಿ ವರ್ಗದವರನ್ನು ಮೇಲೆತ್ತಲು ಯೋಜನೆಗಳನ್ನು ರೂಪಿಸಬೇಕಾಗಿದೆ ಎಂದರು. ಅಂಕಿ–ಅಂಶಗಳ ಮೂಲಕ ತಮ್ಮ ವಾದವನ್ನು ಪುಷ್ಟೀಕರಿಸಿದ ಕೆ.ಸಿ. ರೆಡ್ಡಿ ಆಹಾರ ಬೆಳೆಗಳ ಬೆಲೆ ಶೇ. 50ರಷ್ಟು ಇಳಿಮುಖವಾಗಿದೆ. ಕೆಲವು ಸಂದರ್ಭದಲ್ಲಿ 50ಕ್ಕೂ ಹೆಚ್ಚು ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದನ್ನು ಯಾರು ಅಲ್ಲಗಳೆಯಲು ಸಾಧ್ಯವಿಲ್ಲ, ಇದು ಸಾಲದೆಂಬಂತೆ ರೈತ ನಿಗದಿತ ಕಂದಾಯವನ್ನು ಸರ್ಕಾರಕ್ಕೆ ನೀಡಬೇಕು, ಈ ಕಂದಾಯವನ್ನು ಹಿಂದೆ ಆಹಾರ ಧಾನ್ಯಗಳ ಬೆಳೆ ಹೆಚ್ಚಾಗಿದ್ದಾಗ ನಿಗದಿಪಡಿಸಲಾಗಿತ್ತು. ಕೆಲವು ಸಂದರ್ಭದಲ್ಲಿ ಕಂದಾಯವನ್ನು 1924–1928ರಲ್ಲಿ ನಿಗದಿಪಡಿಸಲಾಗಿತ್ತು ಎಂದು ಹೇಳಿದರು.

ರೈತರ ಜೀವನಮಟ್ಟವು ಕೂಡ ಬದಲಾಗಿದೆ. ಹಿಂದೆ ವೈಭೋಗ ಎಂದು ಪರಿಗಣಿಸಲ್ಪಡುತ್ತಿದ್ದವು ಈಗ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡುವುದು ಅಗತ್ಯ ಎಂದು ವಾದಿಸಿದರು. ಕೆ.ಸಿ.ರೆಡ್ಡಿ ಅವರು ರೈತರು ಬೆಳೆದ ಉತ್ಪನ್ನಗಳನ್ನು ಸಾಗಾಣೆ ಮಾಡುವ ಖರ್ಚಿನಲ್ಲಿ ರಿಯಾಯಿತಿ ನೀಡುವುದು ಸೂಕ್ತವೆಂದು ಹೇಳಿದರು. ನೆರೆಯ ರಾಜ್ಯಗಳಲ್ಲಿ ಆಹಾರ ವಸ್ತುಗಳನ್ನು ರೈಲಿನ ಮುಖಾಂತರ ಸಾಗಾಣೆ ಮಾಡುವಾಗ ರಿಯಾಯಿತಿ ನೀಡುತ್ತಿರುವುದನ್ನು ಪ್ರಸ್ತಾಪಿಸಿದರು. ಸರ್ಕಾರ ಆಹಾರ ವಸ್ತುಗಳ ಆಮದನ್ನು ನಿಲ್ಲಿಸುವುದು ಕೂಡ ಸೂಕ್ತಮಾರ್ಗ ಎಂದು ಸೂಚಿಸಿದರು. ಸಕ್ಕರೆಯನ್ನು ಆಮದು ಮಾಡಿಕೊಳ್ಳುವುದನ್ನು ನಿಷೇಧಿಸುವ ಕ್ರಮ ಅನುಸರಿಸಿ ಸ್ಥಳೀಯ ರೈತರು ಬೆಳೆಯುವ ಬೆಳೆಗೆ ನ್ಯಾಯಬೆಲೆ ದೊರಕಿಸಿ ಕೊಡಲು ಕೋರಿದರು.

ಬಿ.ಕೆ. ಗರುಡಾಚಾರ್‌ರವರು ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಭೂ ಕಂದಾಯವನ್ನು ಪ್ರಸ್ತುತ ಮೂರು ಕಂತಿಗೆ ಬದಲು, ಆರು ಅಥವಾ ಎಂಟು ಕಂತುಗಳಲ್ಲಿ ವಸೂಲು ಮಾಡಲು ಕ್ರಮ ಕೈಗೊಳ್ಳಬೇಕೆಂದು ಪ್ರಸ್ಥಾಪಿಸಿದುದ್ದನ್ನು ಕೆ.ಸಿ.

ರೆಡ್ಡಿ ಅವರು ಅನುಮೋದಿಸಿದರು. ಇದೆಲ್ಲಕ್ಕಿಂತ ಮುಖ್ಯ ವಿಚಾರವೆಂದರೆ ಕಂದಾಯದ ಪ್ರಮಾಣವನ್ನೇ ಶೇಕಡ 50ರಷ್ಟು ಇಳಿಕೆ ಮಾಡುವುದು ಸೂಕ್ತ, ಕಂದಾಯ ಇಳಿಕೆ ಬಗ್ಗೆ ದೇಶದ ಇತರೆಡೆಗಳಲ್ಲಿ ಕೂಡ ಚರ್ಚೆಗಳು ನಡೆಯುತ್ತಿವೆ, ಮದ್ರಾಸ್ ಪ್ರಾಂತದಲ್ಲಿ ನೆರೆಹಾವಳಿಯಿಂದ ರೈತರು ಸಂಕಷ್ಟಕ್ಕೆ ಒಳಗಾದಾಗ ಸರ್ಕಾರ ತೆರಿಗೆ ಮನ್ನಾ ಮಾಡಿದ್ದನ್ನು ಸಭೆಯ ಗಮನಕ್ಕೆ ತಂದರು. ಕೆಲವು ವಾಣಿಜ್ಯ ಬೆಳೆಗಳ ಬೆಳೆಗಾರರು ಉತ್ಪಾದನಾ ಹೆಚ್ಚಳ ಕಂಡು ಬಂದಿದ್ದು, ಅದನ್ನು ಕಠಾವು ಮಾಡುವ ಖರ್ಚು ರೈತನಿಗೆ ಮಾರುಕಟ್ಟೆಯಲ್ಲಿ ಮಾರಿದಾಗ ಬರುವ ಬೆಲೆಗಿಂತ ಹೆಚ್ಚಾಗಿದೆ ಎಂದು ಕಡಲೆಕಾಯಿ ಬಗ್ಗೆ ಉದಾಹರಣೆ ನೀಡಿದರು.

ತಮ್ಮ ಜಿಲ್ಲೆಯಲ್ಲಿ ಒಂದು ಕಂಡುಗ ಕಡಲೆಕಾಯಿಗೆ ಮೂರು ರೂಪಾಯಿ ಬೆಲೆ ಇದ್ದು, ಒಂದು ಕಂಡುಗ ಕಡಲೆಕಾಯಿ ಅಗೆದು ಗಿಡದಿಂದ ಬೇರ್ಪಡಿಸಲು ಎರಡು ರೂಪಾಯಿ ಕೂಲಿ ನೀಡಬೇಕಾಗಿದೆ. ಇದರಿಂದ ಬೆಳೆಗಾರನಿಗೆ ಬಂದ ಲಾಭವೇನು? ಎಂದು ಪ್ರಶ್ನಿಸಿದರು. ಪತ್ರಿಕೆಗಳಲ್ಲಿ ಪಂಜಾಬ್ ಸರ್ಕಾರ ಆರ್ಥಿಕ ಸಂಕಷ್ಟದಿಂದ ದುರ್ಬಲರಾದ ರೈತರಿಗೆ ಪರಿಹಾರ ರೂಪದಲ್ಲಿ ಹಲವು ರಿಯಾಯಿತಿಗಳನ್ನು ಪ್ರಕಟಿಸಿದೆ. ಇದರಿಂದ ಸರ್ಕಾರದ ಮೇಲೆ 67 ಲಕ್ಷ ರೂ. ಹೊರೆ ಬೀಳಲಿದೆ ಎಂದು ಹೇಳಿ ಮೈಸೂರು ಸರ್ಕಾರವು ಕೂಡ ಇಂತಹ ದಿಟ್ಟ ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಜರ್ಮನಿಯ ಪ್ರಧಾನಿ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ತಮ್ಮ ವೇತನದ ಒಂದು ಭಾಗವನ್ನು FOREGO ಮಾಡಿರುವುದನ್ನು ಇತರ ಸರ್ಕಾರಿ ನೌಕರರು ಅದನ್ನು ತಾವು ಅನುಸರಿಸಿದ್ದನ್ನು ಉದಾಹರಣೆಯನ್ನಾಗಿ ನೀಡಿ ತಮ್ಮ ರಾಜ್ಯದಲ್ಲೂ ಕೂಡ ಇಂತಹ ಔದಾರ್ಯ ತೋರಬೇಕೆಂದು ಮನವಿ ಮಾಡಿದರು.

ಕೆ.ಸಿ. ರೆಡ್ಡಿ ಅವರ ಚರ್ಚೆಗೆ ಧ್ವನಿಗೂಡಿಸಿದ ಜಿ. ಚನ್ನಪ್ಪ ಹಾಗೂ ವಿ. ವೆಂಕಟಪ್ಪನವರು ಕಂದಾಯ ಹೊರೆ ಕಡಿಮೆ ಮಾಡಬೇಕೆಂದು ಆಗ್ರಹಿಸಿದರು. ಚರ್ಚೆಯಲ್ಲಿ ಪಾಲ್ಗೊಂಡ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್, ಕೆ.ಸಿ. ರೆಡ್ಡಿ ಅವರ ನಿರ್ಣಯವನ್ನು ಬೆಂಬಲಿಸಿ ರಾಜ್ಯದ ಅಡಿಕೆ ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಅಡಿಕೆ ಬೆಳೆಗಾರರು ತಾವು ಬೆಳೆಯಲು ವೆಚ್ಚ ಮಾಡಿದ ಖರ್ಚು ಕೂಡ ಫಸಲು ಮಾರಾಟದಿಂದ ವಸೂಲಾಗುತ್ತಿಲ್ಲ, ಹೀಗಿರುವಾಗ ಭೂ ಕಂದಾಯ ನೀಡುವುದು ಹೇಗೆ ಸಾಧ್ಯ ಎಂದು ಹೇಳಿ ಈ ಪರಿಸ್ಥಿತಿ ಇತರ ಕೃಷಿ ಬೆಳೆಗಾರರು ಎದುರಿಸುತ್ತಿದ್ದಾರೆ ಎಂದರು. ಎಸ್.ಪಿ. ರಾಜಗೋಪಾಲಚಾರಿ, ಬಿ.ಕೆ. ಗರುಡಾಚಾರ್, ಬಿ. ಅಬ್ದುಲ್‌ರೆಹಮಾನ್, ಡಾ. ಕೋಲ್‌ಮೆನ್, ಡಿ.ಎಸ್. ರಾಮಚಂದ್ರರಾವ್ ಅವರುಗಳು ಕೆ.ಸಿ. ರೆಡ್ಡಿ ಹಾಗೂ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಅವರಿಗೆ ರೈತರ ಸಂಕಷ್ಟವನ್ನು ಸಮರ್ಥವಾಗಿ ಪ್ರತಿಬಿಂಬಿಸಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

ಕೆ.ಸಿ. ರೆಡ್ಡಿ ಅವರು ತಮ್ಮ ನಿಲುವಳಿ ಸೂಚನೆಗೆ ಬೆಂಬಲ ವ್ಯಕ್ತಪಡಿಸಿದ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸಿ ವಿಶೇಷವಾಗಿ ಕೆ.ಆರ್. ಶ್ರೀನಿವಾಸಯ್ಯ ಅಯ್ಯಂಗಾರ್ ಅವರು ತಮ್ಮ ಚರ್ಚೆಗೆ ಸಹಮತ ವ್ಯಕ್ತಪಡಿಸುವುದುದ್ದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಚರ್ಚೆಗೆ ಉತ್ತರಿಸಿದ ಅಧ್ಯಕ್ಷರಾದ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು, ಕೆ.ಸಿ. ರೆಡ್ಡಿ ಅವರ ನಿರ್ಣಯದ ಬಗ್ಗೆ ರಾಜ್ಯ ಎಲ್ಲಾ ಕೃಷಿಕರಿಗೂ ಸಂಕಷ್ಟ ಪರಿಹಾರ ನೀಡಲು ಪ್ರಸ್ತುತ ಸಂದರ್ಭದಲ್ಲಿ ಸರ್ಕಾರಕ್ಕೆ ಕಷ್ಟವಾಗುತ್ತದೆ, ವಿಶೇಷ ಸಂದರ್ಭದಲ್ಲಿ ಕೆಲವು ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು. ನಿರ್ಣಯ ಒಪ್ಪಿಗೆಯಾದುದಕ್ಕೆ ಪ್ರತಿಕ್ರಿಯಿಸಿದ ಕೆ.ಸಿ. ರೆಡ್ಡಿ ಅಧ್ಯಕ್ಷರಿಗೆ ವಂದನೆ ಸಲ್ಲಿಸಿದ ಬಗ್ಗೆ ವರದಿಯನ್ನು ಗಮನಿಸಬಹುದು.[25] ಇದರಿಂದ ರೈತರ ಸಮಸ್ಯೆಗಳ ಬಗ್ಗೆ ರೆಡ್ಡಿ ಅವರು ಸ್ಪಂದಿಸುತ್ತಿದ್ದ ರೀತಿಯನ್ನು ತಿಳಿಯಬಹುದು.

ರೈತರ ಪರ ಹೋರಾಟಗಳು ಮತ್ತು ಕೆ.ಸಿ. ರೆಡ್ಡಿ

1930ರ ಆರ್ಥಿಕ ಬಿಕ್ಕಟ್ಟು ಹಾಗೂ ಮಳೆ ಅಭಾವದಿಂದ ಬಿತ್ತಿದ ಬೆಳೆ ಸರಿಯಾಗಿ ಆಗದೆ ರೈತರ ಸ್ಥಿತಿ ಕಂಗಾಲಾಗಿತ್ತು. ರಾಜ್ಯಾದ್ಯಂತ ಕೆರೆ, ಬಾವಿಗಳಲ್ಲಿ ನೀರು ಬತ್ತಿ ಹೋಗಿ ಗ್ರಾಮೀಣ ಪ್ರದೇಶದ ರೈತಾಪಿ ವರ್ಗದ ಸ್ಥಿತಿ ಶೋಚನೀಯವಾಯಿತು. ಈ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶಗಳಿಂದ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಗೆ ಚುನಾಯಿತರಾದ ಪ್ರತಿನಿಧಿಗಳು ಶಾಸನಸಭೆಯಲ್ಲಿ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದರು. ಕರಾವಳಿ ಪ್ರದೇಶ, ಬೆಳಗಾವಿ, ಬಿಜಾಪುರ, ಶಿವಮೊಗ್ಗ, ಹುಬ್ಬಳ್ಳಿ, ಕೋಲಾರ, ಬಂಗಾರಪೇಟೆ, ಕೆ.ಜಿ.ಎಫ್., ದೊಡ್ಡಬಳ್ಳಾಪುರ, ಕನಕಪುರ, ಚಿತ್ರದುರ್ಗ ಮುಂತಾದ ಕಡೆ ರೈತಸಭೆಗಳು ನಡೆದವು. ಕೆ.ಸಿ.ರೆಡ್ಡಿ ಅವರು ಪ್ರಜಾಪಕ್ಷದ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ 'ಜಿಲ್ಲಾ ರೈತ ಸಮ್ಮೇಳನ'ವನ್ನು ಏರ್ಪಡಿಸಿ ಅದರ ಅಧ್ಯಕ್ಷತೆಯನ್ನು ವಹಿಸಿದ್ದರು.

ದಿನಾಂಕ : 10–12–1933ರಲ್ಲಿ ಕೆ.ಸಿ. ರೆಡ್ಡಿ ಅವರು ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ರೈತರ ಮಹಾಸಭೆಯನ್ನು ಏರ್ಪಡಿಸಿದ್ದರು. ಸಭೆಯಲ್ಲಿ ಸಬ್‌ಡಿವಿಷನ್ ಅಧಿಕಾರಿಗಳು ಹಾಗೂ ಎಚ್.ಬಿ. ಗುಂಡಪ್ಪಗೌಡರು ಹಾಜರಿದ್ದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಕೆ.ಸಿ.ರೆಡ್ಡಿ ತಮ್ಮ ಭಾಷಣದಲ್ಲಿ "ರೆವಿನ್ಯೂ ಕೋಡ್‌ನಲ್ಲಿ ರೈತರಿಗೆ ಇರುವ ಅನಾನುಕೂಲಗಳ ಬಗ್ಗೆ ಪ್ರಸ್ತಾಪಿಸಿದರು. ಸರ್ಕಾರಿ ಕಚೇರಿಗಳಲ್ಲಿ ರೈತರನ್ನು ಹದ್ದು–ಕಾಗೆಗಳಂತೆ ಕಿತ್ತು ತಿನ್ನುತ್ತಾರೆ ಎಂದು ದೂರಿದರು. ಸರ್ಕಾರದವರು ರೈತರನ್ನು ಬಹಳ ಹೀನಾಯವಾಗಿ ಕಾಣುತ್ತಾರೆಂದು ನುಡಿದು, ಪ್ರಸ್ತುತ ಸಂಕಷ್ಟದ ಪರಿಸ್ಥಿತಿಯಲ್ಲಿ ಸರ್ಕಾರ

---

25. ನಡಾವಳಿಗಳು : ಮೈಸೂರು ನ್ಯಾಯವಿಧಾಯಕ ಸಭೆ : ದಿನಾಂಕ : 18–10–1930, ಪುಟ–305.

ಕನಿಷ್ಟಪಕ್ಷ ಶೇಕಡ 25ರಷ್ಟು ಪ್ರತಿಶತ ಭೂ ಕಂದಾಯ ಕಡಿಮೆ ಮಾಡಬೇಕು. ಹೀಗೆ ಮಾಡಿದರೆ ಸಮಸ್ಯೆಗಳಿಗೆ ಸ್ವಲ್ಪಮಟ್ಟಿನ ಪರಿಹಾರ ದೊರಕಿದಂತಾಗುತ್ತದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.[26]

ಈ ಸಂದರ್ಭದಲ್ಲಿ 'ರೈತರ ಪರಿಹಾರ ವಿಚಾರಣಾ ಸಮಿತಿ'ಯನ್ನು ಸರ್ಕಾರವು ರಚಿಸಿ 29-07-1934 ರಂದು ಪ್ರಕಟಿಸಿತು. ಈ ಸಮಿತಿಯಲ್ಲಿ ಕೆ.ಸಿ. ರೆಡ್ಡಿ, ಬಿ.ಎಸ್. ಪುಟ್ಟಸ್ವಾಮಿ, ಬಿ.ಕೆ. ಗರುಡಾಚಾರ್, ಎನ್. ಮಾದವರಾವ್ ಪ್ರಮುಖರು. ಅಂದರೆ ರೈತ ಸಭೆಗಳು ಸರ್ಕಾರದ ಸೂಕ್ತ ಕ್ರಮಗಳಿಗೆ ಪ್ರೇರಣೆ ಒದಗಿಸಿರುವ ಪರೋಕ್ಷ ಚಳವಳಿಗಳಂತೆ ಕೆಲಸ ಮಾಡಿದವು ಎನ್ನಬೇಕು.[27]

ದಿನಾಂಕ 20-03-1935 ರಂದು ತುಮಕೂರಿನಲ್ಲಿ ನಡೆಯಬೇಕಾಗಿದ್ದ 'ರೈತ ಸಮ್ಮೇಳನ'ವನ್ನು ನಡೆಸಲಾಗದೆಂದು ತುಮಕೂರು ಸಬ್‌ಡಿವಿಷನ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ್ ಎಂ.ಪಿ.ಆರ್. 39 ಅನ್ವಯ 6 ತಿಂಗಳ ಕಾಲ ನಿಷೇಧಾಜ್ಞೆ ಜಾರಿ ಮಾಡಿ ದ್ದಾರೆ. ಭೂ ಕಂದಾಯವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಲು ರೈತರು ಬಯಸಿದ್ದರು. ಮಾರ್ಚ್ ಕಡೆಯವಾರ ಸುಗ್ಗನಹಳ್ಳಿ, ಕನಕಪುರ, ಅಕ್ಕೂರು ಮುಂತಾದ ಕಡೆಗಳಲ್ಲಿ ನಡೆಯಬೇಕಾಗಿದ್ದ ರೈತ ಸಮ್ಮೇಳವನ್ನು ಎಂ.ಪಿ.ಆರ್. 39ರ ಅನ್ವಯ ನಿಷೇಧಿಸಿ ಆಜ್ಞೆ ಜಾರಿ ಮಾಡಲಾಗಿದೆ. ಈ ಸಂಬಂಧವಾಗಿ ಪ್ರಜಾ ಸಂಯುಕ್ತ ಪಕ್ಷದ ಅಧ್ಯಕ್ಷರಾದ ಕೆ.ಸಿ. ರೆಡ್ಡಿಯವರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದನ್ನು ಪ್ರಸ್ತಾಪಿಸಲಾಗಿದೆ.[28]

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿನಾಂಕ 13-07-1935ರ ಚರ್ಚೆಯಲ್ಲಿ ಟಿ. ಮಾದಯ್ಯಗೌಡ, ವಿ. ವೆಂಕಟಪ್ಪ ಹಾಗೂ ಇತರರು ಪ್ರಜಾ ಸಂಯುಕ್ತ ಪಕ್ಷ ರೈತ ಸಭೆಗಳನ್ನು ನಡೆಸುವ ಸಂದರ್ಭದಲ್ಲಿ ಸರ್ಕಾರ ಅವುಗಳನ್ನು ತಡೆಹಿಡಿದ ಬಗ್ಗೆ ವಿವರಗಳನ್ನು ಕೇಳಿದರು. ಪ್ರಶ್ನೆಗೆ ಉತ್ತರಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿಯು ಮೈಸೂರು ಪ್ರಜಾ ಸಂಯುಕ್ತ ಪಕ್ಷ ತುಮಕೂರಿನ ನೆಲಪಟ್ಟಣ, ಮಾಗಡಿ ತಾಲ್ಲೂಕಿನ ಸುಗ್ಗನಹಳ್ಳಿ, ಕನಕಪುರ ತಾಲ್ಲೂಕಿನ ಹೊಲೆರೆ ಕೊತ್ತನೂರು, ಚನ್ನಪಟ್ಟಣ ತಾಲ್ಲೂಕಿನ ಅಕ್ಕೂರು ಹಾಗೂ ಹುಣಸನಹಳ್ಳಿಗಳಲ್ಲಿ ಸಭೆಗಳನ್ನು ನಡೆಸಲು ನಡೆದ ಪ್ರಯತ್ನಗಳನ್ನು ನಿರ್ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಯಿತೆಂದು ಹೇಳಿದರು.

ಚರ್ಚೆಯಲ್ಲಿ ಪಾಲ್ಗೊಂಡ ಕೆ.ಸಿ. ರೆಡ್ಡಿ ಪ್ರತಿಬಂಧಕಾಜ್ಞೆಯನ್ನು ವಿರೋಧಿಸಿ ಮಾತನಾಡಿ "ಈ ಸಭೆಗಳು ಶಾಂತಿಯುತವಾಗಿ ನಡೆಯುತ್ತಿವೆ ಎಂದೂ ಸರ್ಕಾರವ

26. ವಿಶ್ವ ಕರ್ನಾಟಕ ಪತ್ರಿಕೆ: ದಿನಾಂಕ : 17-12-1933.
27. ನಾಗರಾಜ್ .ಎಂ.ಜಿ. : ಕರ್ನಾಟಕ ರೈತ ಚಳವಳಿ – ಸತ್ಯಾಗ್ರಹಗಳು, ಸಂಪುಟ-1, ಪುಟ-119
28. ತಿರುಮಲೆ ಶ್ರೀ ರಂಗಾಚಾರ್ಯ, ಕುಮಾರಸ್ವಾಮಿ .ಎಂ : ತೀ.ತಾ. ಶರ್ಮರ ಮೈಸೂರು ಸಂಸ್ಥಾನದ ವೃತ್ತ ಪತ್ರಿಕಾ ಇತಿಹಾಸ (ಲೇಖನಗಳ ಸಂಕಲನ) ಪುಟ – 135.

ನಿಷೇಧಾಜ್ಞೆಗಳನ್ನು ಉಲ್ಲಂಘಿಸುವ ಉದ್ದೇಶ, ಸಭೆ ನಡೆಸುವ ಮುಖಂಡರಿಗೆ ಇಲ್ಲವೆಂದು ಹೇಳಿದರು. ಈ ಸಭೆಯನ್ನು ನಡೆಸುವ ಸಂಘಟನೆ ಹಾಗೂ ವ್ಯಕ್ತಿಗಳಿಗೆ ಸರ್ಕಾರ ಅನುಮಾನ ಪಡುವಂತೆ ಯಾವುದೇ ದುರುದ್ದೇಶಗಳು ಇಲ್ಲವೆಂದು ಸಭೆಯ ಉದ್ದೇಶಗಳನ್ನು ಕುರಿತು ಬಿತ್ತಿಪತ್ರಗಳಲ್ಲಿ ಸ್ಪಷ್ಟವಾಗಿ ಸಭೆಯ ಗುರಿ-ಉದ್ದೇಶಗಳನ್ನು ಹೇಳಿದೆ ಎಂದೂ, ಸಭೆಯ ತೀರ್ಮಾನಗಳು ಹಾಗೂ ಚರ್ಚೆಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದರಿಂದ ಸರ್ಕಾರ ಪ್ರಜಾ ಸಂಯುಕ್ತ ಪಕ್ಷ ಈ ಸಭೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದೆ ಎಂಬ ವಾದಕ್ಕೆ ಉರುಳಿಲ್ಲ ಎಂದು ಹೇಳಿದರು. ಸಭೆಗಳಿಗೆ ಮುನ್ನ ಪಕ್ಷವು ಹಂಚುತ್ತಿರುವ ಕರಪತ್ರಗಳಲ್ಲಿ ಸಭೆಯ ಉದ್ದೇಶ ಶಾಂತಿಯುತವಾಗಿ ಸರ್ಕಾರಕ್ಕೆ ಮಳೆಯ ಅಭಾವದಿಂದ ಉಂಟಾಗಿರುವ ರೈತರ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಡುವುದು ಹಾಗೂ ಸ್ಥಳೀಯ ಪ್ರದೇಶದಲ್ಲಿ ಸರ್ಕಾರ ಕೈಗೊಳ್ಳಬಹುದಾದ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಬೇಡಿಕೆಗಳಿವೆ" ಎಂದು ಸರ್ಕಾರಕ್ಕೆ ಸ್ಪಷ್ಟಪಡಿಸಿರುವುದು ಕಂಡು ಬರುತ್ತದೆ.[29]

5. ಗಣಿ ಕಾರ್ಮಿಕರ ಸಮಸ್ಯೆ ಹಾಗೂ ಸಂಘಟನೆ ಮತ್ತು ಕೆ.ಸಿ. ರೆಡ್ಡಿ

ಕೋಲಾರ ಚಿನ್ನದ ಗಣಿ ಪ್ರದೇಶದಿಂದ 8 ಕಿ.ಮೀ. ದೂರದಲ್ಲಿರುವ ಕ್ಯಾಸಂಬಳ್ಳಿ ಯವರಾದ ಕೆ.ಸಿ. ರೆಡ್ಡಿ ಅವರು ಆರಂಭದ ಶಿಕ್ಷಣ ಕೆ.ಜಿ.ಎಫ್.ನಲ್ಲಿ ಪಡೆದಿದುದ್ದರಿಂದ ಗಣಿ ಪ್ರದೇಶದಲ್ಲಿದ್ದ ಕಾರ್ಮಿಕರ ಸಮಸ್ಯೆಗಳು, ಗಣಿ ಮಾಲೀಕರ ಯಜಮಾನಿಕೆ, ದರ್ಪ, ಇವುಗಳ ಪರಿಚಯ ಕೆ.ಸಿ. ರೆಡ್ಡಿ ಅವರಿಗಿತ್ತು. 1930ರಲ್ಲಿ ಗಣಿ ಕಾರ್ಮಿಕರು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಂದ ರೋಸಿ ಹೋಗಿ ಗಣಿ ಮಾಲೀಕರಿಂದ ತಮಗಾಗುತ್ತಿದ್ದ ಕಿರುಕುಳ, ಅನ್ಯಾಯಗಳ ವಿರುದ್ಧ ಸಿಡಿದೆದ್ದರು. ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳಲು ಶಾಸನಗಳಲ್ಲಿ ಅವಕಾಶವಿಲ್ಲದ ಕಾರಣ ಕಾರ್ಮಿಕರಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿತ್ತು. ಇದೇ ವೇಳೆಗೆ ಉತ್ಸಾಹಿ ಜನಪ್ರತಿನಿಧಿಯಾಗಿ ಶಾಸನಸಭೆಗೆ ಆಯ್ಕೆಯಾಗಿದ್ದ ಕೆ.ಸಿ. ರೆಡ್ಡಿಯವರು ಕಾರ್ಮಿಕರ ಸಮಸ್ಯೆಗಳನ್ನು ದಿಟ್ಟವಾಗಿ ಸದನದಲ್ಲಿ ಮಂಡಿಸುವ ಮೂಲಕ ಗಣಿ ಕಾರ್ಮಿಕರ ಪಾಲಿಗೆ ಅಘೋಷಿತ ನಾಯಕರಾದರು. 1930ರಲ್ಲಿ ಪ್ರಾರಂಭವಾದ ಕೆ.ಸಿ. ರೆಡ್ಡಿ ಹಾಗೂ ಗಣಿ ಕಾರ್ಮಿಕರ ಈ ನಂಟು ನಿರಂತರವಾಗಿ ಮುಂದುವರೆಯಿತು.

ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದ ಕೋಲಾರದ ಚಿನ್ನದ ಗಣಿ ಉದ್ಯಮವು ಬ್ರಿಟಿಷ್ ಖಾಸಗಿ ಬಂಡವಾಳಗಾರರ ಒಡೆತನದಲ್ಲಿದ್ದು, ಸರ್ಕಾರ

---

29. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ : ದಿನಾಂಕ : 13-10-1935, ಪುಟ : 14-17.

ಗಣಿ ಮಾಲೀಕರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿತ್ತು. ಗಣಿ ಪ್ರದೇಶದಲ್ಲಿ ನಡೆಯುತ್ತಿದ್ದ ಸಣ್ಣ–ಪುಟ್ಟ ಗಣಿ ಕಳ್ಳತನಗಳನ್ನು ತಡೆಗಟ್ಟಲು ಸರ್ಕಾರ 1906ರಲ್ಲಿ 'ಮೈಸೂರು ಮೈನ್ಸ್ ರೇಗ್ಯುಲೇಷನ್ ಆಕ್ಟ್' ಎಂಬ ಶಾಸನವನ್ನು ಜಾರಿಗೊಳಿಸಿ ಗಣಿ ಪ್ರದೇಶದಲ್ಲಿ UNDESIRABLE ಎಂದು ಕಂಡು ಬಂದ ಯಾವುದೇ ವ್ಯಕ್ತಿಗಳನ್ನು ವಿಚಾರಣೆ ಇಲ್ಲದೆ ಜಿಲ್ಲೆಯಿಂದ ಆರು ತಿಂಗಳುಗಳ ಕಾಲ ಹೊರಗೆ ಗಡಿಪಾರು ಮಾಡುವ ಅಧಿಕಾರವನ್ನು ಜಿಲ್ಲಾ ಪೊಲೀಸ್ ಮುಖ್ಯಸ್ಥರಿಗೆ ನೀಡಲಾಗಿತ್ತು. ಈ ಶಾಸನ ಗಣಿ ಮಾಲೀಕರ ಒತ್ತಡಗಳಿಗೆ ಮಣಿದು ಸರ್ಕಾರ ಕೈಗೊಂಡಿದ್ದ ನಿರ್ಣಯವಾಗಿದ್ದು, ಇದಕ್ಕೆ ಸ್ಥಳೀಯರ ಪ್ರಬಲ ವಿರೋಧವಿತ್ತು. ಜೂನ್ 1925ರ ನ್ಯಾಯವಿಧಾಯಕ ಸಭೆಯಲ್ಲಿ ಈ ಬಗ್ಗೆ ಬಿ. ನರಸಿಂಗರಾವ್ ಒಂದು ನಿರ್ಣಯ ಮಂಡಿಸಿ ಇದು ಒಂದು ಕರಾಳ ಶಾಸನವೆಂದು ಮೈಸೂರು ಮೈನ್ಸ್ ರೇಗ್ಯುಲೇಷನ್ ಆಕ್ಟ್‌ನ ಸೆಕ್ಷನ್ 17ನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿದರು. ಚರ್ಚೆಯಲ್ಲಿ ಪಾಲ್ಗೊಂಡ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾಗಿದ್ದ ದಿವಾನರಾದ ಆಲ್ಬಿಯನ್ ಬ್ಯಾನರ್ಜಿಯವರು ಹೇಳಿಕೆ ನೀಡಿ ಎಲ್ಲರ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ನರಸಿಂಗರಾವ್ ತಮ್ಮ ನಿರ್ಣಯವನ್ನು ಹಿಂದಕ್ಕೆ ಪಡೆದಿದ್ದರು.

1928ರಲ್ಲಿ ಮೈಸೂರು ಮೈನ್ಸ್ ರೇಗ್ಯುಲೇಷನ್ ಆಕ್ಟ್ ಅನ್ನು ತಿದ್ದುಪಡಿ ಮಾಡಲು ಸರ್ಕಾರ ಕ್ರಮ ಕೈಗೊಂಡಿತು. ಇದಕ್ಕೆ ಸಂಬಂಧಪಟ್ಟಂತೆ ಜೂನ್ 1929ರಲ್ಲಿ ಒಂದು ಶಾಸನವನ್ನು ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಲಾಯಿತು. ಆದರೆ ಸಭೆಯ ಸದಸ್ಯರು ತಿದ್ದುಪಡಿ ಮಸೂದೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಶಾಸನವನ್ನು ಹಿಂದಕ್ಕೆ ಪಡೆಯಲಾಯಿತು. ಜೂನ್ 1930ರಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದ ಸಂದರ್ಭದಲ್ಲಿ ಕೆಲಸದಸ್ಯರು ಮೈಸೂರು ಮೈನ್ಸ್ ರೇಗ್ಯುಲೇಷನ್ ಆಕ್ಟ್ ಅನ್ನು ತಿದ್ದುಪಡಿ ಮಾಡುವ ಬಗ್ಗೆ ಸಹಮತ ವ್ಯಕ್ತಪಡಿಸಿ ಸಭೆಯ ಸದಸ್ಯರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಮುಂದುವರೆಯುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ದಿನಾಂಕ 02–11–1930ರಲ್ಲಿ ಕೆ.ಸಿ. ರೆಡ್ಡಿ ನ್ಯಾಯವಿಧಾಯಕ ಸಭೆಯ ಕಾರ್ಯದರ್ಶಿಗಳಿಗೆ ಒಂದು ಪತ್ರ ಬರೆದು ಶಾಸನದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಕರಡು ತಿದ್ದುಪಡಿ ಶಾಸನ ಗಣಿ ಕಾರ್ಮಿಕರ ನಿರೀಕ್ಷಿತ ಮಟ್ಟದಲ್ಲಿಲ್ಲವೆಂದು, ಪ್ರಸ್ತುತ ರೂಪದಲ್ಲಿ ತಿದ್ದುಪಡಿ ಶಾಸನ ಚುನಾಯಿತ ಪ್ರತಿನಿಧಿಗಳ ಒಪ್ಪಿಗೆ ಪಡೆಯಲು ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಹಳೆಯ ಶಾಸನಕ್ಕೆ ಹೋಲಿಸಿದರೆ ತಿದ್ದುಪಡಿ ಶಾಸನ ಉತ್ತಮವಾಗಿದ್ದರೂ ಕೂಡ ಸ್ಥಳೀಯರ ನಿರೀಕ್ಷೆಗಳನ್ನು ಮುಟ್ಟುವಲ್ಲಿ ಇದು ವಿಫಲವಾಗಿದೆ ಎಂದು ಹೇಳಿ ವಿಶೇಷವಾಗಿ ಸೆಕ್ಷನ್ 17ರ ಬಗ್ಗೆ ಪೂರ್ಣ ಚರ್ಚೆ ನಡೆದು

ಅದರ ಸ್ವರೂಪದಲ್ಲಿ ಅಮೂಲಾಗ್ರ ಬದಲಾವಣೆ ಆಗಬೇಕೆಂದು ಬಯಸಿದರು. ಸರ್ಕಾರವು ಈ ಬಗ್ಗೆ ನ್ಯಾಯವಿಧಾಯಕ ಸಭೆಯ ಸದಸ್ಯರ ಲಿಖಿತ ಟಿಪ್ಪಣಿಗಳನ್ನು ಕೇಳಿದಾಗ ಒಟ್ಟು 6 ಜನ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಲಿಖಿತರೂಪದಲ್ಲಿ ನೀಡಿದರು. ತಮ್ಮ ಟಿಪ್ಪಣಿಯಲ್ಲಿ ಕೆ.ಸಿ. ರೆಡ್ಡಿ ಸೆಕ್ಷನ್ 17ರ ಬಗ್ಗೆ ಸುದೀರ್ಘ ವಿಶ್ಲೇಷಣೆ ಮಾಡಿದರು. ರೆಡ್ಡಿ ಅವರ ಪ್ರಕಾರ ಸೆಕ್ಷನ್ 17 ಒಬ್ಬ ನಾಗರೀಕನ ಮೂಲಭೂತ ಹಕ್ಕಿಗೆ ಅಪಚಾರ ಎಸಗುವುದೆಂದು, ಚಾಲ್ತಿಯಲ್ಲಿರುವ ಕಾನೂನುಗಳು ಸಮಸ್ಯೆಯನ್ನು ಬಗೆಹರಿಸಲು ಸಾಕೆಂದು, ಅ ಸಮಸ್ಯೆಗೆ ವಿಶೇಷ ಶಾಸನ ಅಗತ್ಯವಿಲ್ಲವೆಂದು ಹೇಳಿದರು. ಯಾವುದೇ ವ್ಯಕ್ತಿಯನ್ನು UNDESIRABLE ಎಂದು ಪರಿಗಣಿಸುವ ಮೊದಲು UNDESIRABLE ಪದದ ಅರ್ಥವನ್ನು ಸುದೀರ್ಘವಾಗಿ ಅರ್ಥೈಸಬೇಕೆಂದು ಅಭಿಪ್ರಾಯಪಟ್ಟರು. ಈ ಶಾಸನ ಅನಿವಾರ್ಯ ಸಂದರ್ಭದಲ್ಲಿ ವಿಶೇಷವಾಗಿ ಗಣಿಯ ಅಪಾಯಕಾರಿ ಪ್ರದೇಶಗಳಲ್ಲಿ ಚಾಲನೆಯಲ್ಲಿರಬೇಕು. ಗಣಿಪ್ರದೇಶದಲ್ಲಿ ಆಸ್ತಿ-ಪಾಸ್ತಿ ಹೊಂದಿರುವ ವ್ಯಕ್ತಿಗಳಿಗೆ ಇದರಿಂದ ಸೂಕ್ತ ವಿನಾಯಿತಿ ಇರಬೇಕೆಂದು ಹೇಳಿದರು. ಮೈಸೂರು ಮೈನ್ಸ್ ರೇಗ್ಯುಲೇಷನ್ ಆಕ್ಟ್ ಒಂದು ತುರ್ತುಶಾಸನವೆಂದು ಈ ಶಾಸನ ಗಣಿ ಮಾಲೀಕರ OVER-SENSITIVE ಹಾಗೂ MISTAKEN SOLICITUDE FOR THE WELFARE OF THE MINING COMPANIES THAN FOR ANY OTHER RESON.[30]

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಜೂನ್ 1930ರ ಅಧಿವೇಶನದಲ್ಲಿ ಸದಸ್ಯರಾದ ಡಿ.ಎಸ್. ಮಲ್ಲಪ್ಪ ಹಾಗೂ ಎಂ. ಬಸವಯ್ಯ ಕೋಲಾರ ಚಿನ್ನದಗಣಿ ಕಾರ್ಮಿಕರ ಗಲಭೆ ನಂತರ ಉಂಟಾದ ಪೋಲೀಸ್ ಗೋಲಿಬಾರ್ ಬಗ್ಗೆ ಸದನದ ಗಮನ ಸೆಳೆದರು. 1930ರ ಏಪ್ರಿಲ್‌ನಲ್ಲಿ ನಡೆದ ಗಲಭೆಗಳಿಗೆ ಕಾರಣಗಳು, ಗಲಭೆಯನ್ನು ಹತ್ತಿಕ್ಕುವಲ್ಲಿ ಪೋಲೀಸರು ವರ್ತಿಸಿದ ರೀತಿಯನ್ನು ಕುರಿತು ಸರ್ಕಾರದ ಸ್ಪಷ್ಟೀಕರಣ ಕೋರಿದರು. ಈ ನಿಲುವಳಿ ಸೂಚನೆಗೆ ಉತ್ತರ ನೀಡಿದ ಸರ್ಕಾರದ ಕಾನೂನು ಇಲಾಖೆಯ ಕಾರ್ಯದರ್ಶಿಯು ಕೆ.ಜಿ.ಎಫ್. ಗಣಿ ಪ್ರದೇಶದಲ್ಲಿ ಗಣಿ ಕಂಪನಿಗಳು ಕೂಲಿಗಳನ್ನು ಗುರುತಿಸಲು ಬೆರಳು ಮುದ್ರೆಯನ್ನು ಸಂಗ್ರಹಿಸುವ ಕಾರ್ಯ ಪ್ರಾರಂಭಿಸಿದ ಸಂದರ್ಭದಲ್ಲಿ ಊರಿಗಾಂ ಹಾಗೂ ನಂದಿದುರ್ಗ ಗಣಿ ಕೂಲಿಕಾರರು ಏಪ್ರಿಲ್ 3ರಂದು ಚಳವಳಿ ಪ್ರಾರಂಭಿಸಿದರು. ಏಪ್ರಿಲ್ 7ರ ವೇಳೆಗೆ ಈ ಚಳವಳಿ ಇತರೆ ಗಣಿಗಳಿಗೂ ಹಬ್ಬಿತು. ಪರಿಸ್ಥಿತಿಯನ್ನು ಹತೋಟಿಗೆ ತರಲು ಏಪ್ರಿಲ್ 7ರಂದು ಮೈಸೂರು ಗಣಿ ಆವರಣದಲ್ಲಿ ಹಾಗೂ ಏಪ್ರಿಲ್ 24ರಂದು ಬಾಲಘಾಟ್ ಗಣಿ ಆವರಣದಲ್ಲಿ ಪೋಲೀಸರು ಗುಂಪುಗಟ್ಟಿ ಚಳವಳಿ ಪ್ರಾರಂಭಿಸಿದ ಕೂಲಿ ಕಾರ್ಮಿಕರನ್ನು ಚದುರಿಸಲು ಗೋಲಿಬಾರ್ ನಡೆಸಿದರು.

30. ನಡಾವಳಿಗಳು : ಮೈಸೂರು ನ್ಯಾಯವಿಧಾಯಕ ಸಭೆ : ದಿನಾಂಕ ಜೂನ್ 1930.

ಕೆಲವು ಚಳವಳಿಗಾರರು ಕೆಲಸಕ್ಕೆ ಹಾಜರಾಗುತ್ತಿದ್ದ ಕಾರ್ಮಿಕರನ್ನು ಬಲವಂತವಾಗಿ ತಡೆದು ತಮ್ಮ ಜೊತೆ ಚಳವಳಿಯಲ್ಲಿ ಭಾಗವಹಿಸುವಂತೆ ಒತ್ತಾಯಿಸಿದ ಕಾರಣ, ಗಣಿ ವ್ಯವಸ್ಥಾಪಕರು ಪರಿಸ್ಥಿತಿಯನ್ನು ಹತೋಟಿಗೆ ತರಲು ವಿಶೇಷ ಮ್ಯಾಜಿಸ್ಟ್ರೇಟರ್ ಅವರಿಗೆ ವಿಷಯ ಮುಟ್ಟಿಸಿದರು. ಗುಂಪುಗಟ್ಟಿದ ಚಳವಳಿಗಾರರು ಹಿಂಸೆಯಲ್ಲಿ ತೊಡಗಿದ ಕಾರಣ ಪೊಲೀಸರು ಗುಂಪನ್ನು ಚದುರಿಸಲು ಲಾಠಿಪ್ರಹಾರ ನಡೆಸಿದರು. ಇದರಿಂದ ರೊಚ್ಚಿಗೆದ್ದ ಚಳವಳಿಗಾರರು ತಾವು ಸಂಗ್ರಹಿಸಿದ್ದ ಕಲ್ಲುಗಳಿಂದ ಪೊಲೀಸರ ಮೇಲೆ ಆಕ್ರಮಣ ನಡೆಸಿದರು. ಈ ಕಲ್ಲಿನ ದಾಳಿಗೆ ಹಲವು ಪೊಲೀಸರು ಗಾಯಗೊಂಡರು. ಪರಿಸ್ಥಿತಿ ಹತೋಟಿ ಮೀರಿದ ಕಾರಣ ವಿಶೇಷ ಮ್ಯಾಜಿಸ್ಟ್ರೇಟರು ಚಳವಳಿಗಾರರಿಗೆ ಅಂತಿಮ ಎಚ್ಚರಿಕೆ ನೀಡಿ ಪರಿಸ್ಥಿತಿ ಹತೋಟಿ ಮೀರಿದಾಗ ಗೋಲಿಬಾರ್‌ಗೆ ಆಜ್ಞೆ ನೀಡಿದರು.

ಎರಡನೆಯ ಘಟನೆಯಲ್ಲಿ ದಿನಾಂಕ 24 ಏಪ್ರಿಲ್ ರಂದು ಬಾಲಘಾಟ್ ಗಣಿ ಆವರಣದಲ್ಲಿ ಜಮಾಯಿಸಿದ ಕೂಲಿ ಕಾರ್ಮಿಕರು ಕೆಲಸದಲ್ಲಿ ತೊಡಗಿದ್ದ ಕಾರ್ಮಿಕರನ್ನು ಬೆದರಿಸಿ ಅವರ ಮೇಲೆ ಹಿಂಸಾಚಾರದಲ್ಲಿ ತೊಡಗಿದ್ದ ಕಾರಣ ಮುನ್ಸಿಫ್ ಮ್ಯಾಜಿಸ್ಟ್ರೇಟ್‌ರು ಚಳವಳಿ ಸ್ಥಳಕ್ಕೆ ಧಾವಿಸಿ ಗಣಿ ಪ್ರದೇಶದಲ್ಲಿ ನಿಷೇಧಾಜ್ಞೆಯನ್ನು ಹೇರಿರುವುದನ್ನು ಸಭೆಗೆ ತಿಳಿಸಿ ಅಲ್ಲಿಂದ ಚದುರುವಂತೆ ಮನವಿ ಮಾಡಿದರು. ಎರಡು ಗಂಟೆಗಳ ಕಾಲ ಮುನ್ಸಿಫ್ ಮ್ಯಾಜಿಸ್ಟ್ರೇಟ್‌ರು ಚಳವಳಿ ನಿರತ ಗಣಿ ಕಾರ್ಮಿಕರನ್ನು ಶಾಂತಿಯುತವಾಗಿ ಚದುರುವಂತೆ ಮನವಿ ಮಾಡಿಕೊಂಡರೂ ಕೂಡ, ಫಲಕಾರಿಯಾಗದೆ ಅಂತಿಮ ಎಚ್ಚರಿಕೆ ನೀಡಿ ಗೋಲಿಬಾರ್‌ಗೆ ಆಜ್ಞೆ ನೀಡಲಾಯಿತು ಎಂದು ತಿಳಿಸಿದರು. ಈ ಚಳವಳಿ ಇಪ್ಪತ್ತೈದು ದಿನಗಳ ಕಾಲ ನಡೆದು ಈ ಅವಧಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ಸ್ಥಳದಲ್ಲಿ ವಾಸ್ತವ್ಯ ಹೂಡಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿಭಾಯಿಸಿದರು ಎಂದು ಹೇಳಿದರು. ಏಪ್ರಿಲ್ 7ರ ಗೋಲಿಬಾರ್‌ನಲ್ಲಿ ಆರು ಮಂದಿ ಪೊಲೀಸರು ಗಾಯಗೊಂಡು, ನಲವತ್ತೆಂಟು ಮಂದಿ ಚಳವಳಿಗಾರರು ಗಾಯಗಳಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಅವರಲ್ಲಿ ಇಬ್ಬರಿಗೆ ಗಂಭೀರ ಸ್ವರೂಪದ ಗಾಯಗಳಾದವು. ಏಪ್ರಿಲ್ 24 ರಂದು ನಡೆದ ಗೋಲಿಬಾರ್‌ನಲ್ಲಿ ಕೆಲವು ಪೊಲೀಸರು ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಗಾಯಗೊಂಡು, 24 ಮಂದಿ ಚಳವಳಿಗಾರರು ಗಾಯಗಳಿಂದ ಆಸ್ಪತ್ರೆಗೆ ದಾಖಲಾಗಿ ಇಬ್ಬರಿಗೆ ಗಂಭೀರ ಸ್ವರೂಪದ ಗಾಯಗಳಾದವು.

ಚರ್ಚೆಯಲ್ಲಿ ಪಾಲ್ಗೊಂಡ ಕೆ.ಸಿ.ರೆಡ್ಡಿ, ಕೂಲಿ ಕಾರ್ಮಿಕರ ಕೈ ಬೆರಳು ಮುದ್ರೆಗಳನ್ನು ಪಡೆಯಲು ಗಣಿ ಮಾಲೀಕರು ಬಲವಂತ ಪಡಿಸಿದ್ದು ಕಾರಣವೆಂದು, ಸ್ಕಾಟ್ಲೆಂಡ್‌ಯಾರ್ಡ್‌ನಲ್ಲಿ ಖೈದಿಗಳ ಬೆರಳು ಮುದ್ರೆಗಳನ್ನು ಪಡೆಯುವ ಪದ್ಧತಿ ಇದೆ. ಇದನ್ನು ಕೂಲಿ ಕಾರ್ಮಿಕರಿಗೆ ಅನ್ವಯಿಸಲು ಕಾರಣವೇನು ಎಂದು ಸರ್ಕಾರವನ್ನು ಪ್ರಶ್ನಿಸಿದರು. ಗಲಭೆ ನಿಯಂತ್ರಿಸುವಲ್ಲಿ ಸರ್ಕಾರದ ವೈಫಲ್ಯವನ್ನು ಟೀಕಿಸಿದರು.

ಮೈಸೂರು ಪ್ರಜಾಪ್ರತಿನಿದಿ ಸಭೆಯ ಜೂನ್ 1930ರ ಅಧಿವೇಶನದಲ್ಲಿ ಸರ್ಕಾರಕ್ಕೆ ಗಣಿ ಕಾರ್ಮಿಕರ ಮೇಲೆ ನಡೆಸಿದ ಗೋಲಿಬಾರ್ ಹಾಗೂ ಕಾರ್ಮಿಕರ ಸಮಸ್ಯೆಗಳನ್ನು ಕುರಿತು ಸರ್ಕಾರವನ್ನು ಪ್ರಶ್ನಿಸಿ ಚರ್ಚೆಗೆ ಎಡೆ ಮಾಡಿಕೊಟ್ಟರು. ಗಣಿ ಕಾರ್ಮಿಕರ ಮುಷ್ಕರಕ್ಕೆ ಕಾರಣಗಳು ಇದರಿಂದ ಸರ್ಕಾರಕ್ಕಾದ ಆರ್ಥಿಕನಷ್ಟ, ಗಲಭೆಯನ್ನು ಹತೋಟಿಗೆ ತರಲು ಸರ್ಕಾರ ಕೈಗೊಂಡ ಕ್ರಮ ಹಾಗೂ ಕಾರ್ಮಿಕರ ಬೆರಳು ಮುದ್ರೆ ಪಡೆಯಲು ಗಣಿ ಮಾಲೀಕರು ಬಳಸಿದ ಒತ್ತಡ ಮಾರ್ಗಗಳ ಬಗ್ಗೆ ಸರ್ಕಾರದ ಸ್ಪಷ್ಟ ಉತ್ತರ ಕೋರಿದರು. ಪ್ರಶ್ನೆಗೆ ಉತ್ತರಿಸಿದ ಕಾನೂನು ಇಲಾಖೆಯ ಕಾರ್ಯದರ್ಶಿ ಕಾರ್ಮಿಕರು ಬೆರಳು ಗುರುತು ಪಡೆಯಲು ಗಣಿ ಮಾಲೀಕರು ಒತ್ತಾಯ ಪೂರ್ವಕ ಕ್ರಮಕೈಗೊಂಡಿದ್ದನ್ನು ವಿರೋಧಿಸಿ ಪ್ರತಿಭಟಿಸಿದರು. ಈ ಗಲಭೆಯಿಂದ ಸರ್ಕಾರಕ್ಕೆ ರಾಯಲ್ಟಿ, ವಿದ್ಯುತ್‌ಶಕ್ತಿ, ಆದಾಯ ತೆರಿಗೆ ಹಾಗೂ ಎಕ್ಸೈಸ್ ತೆರಿಗೆ ರೂಪದಲ್ಲಿ ದಿನಕ್ಕೆ ಸುಮಾರು 10,000 ರೂಪಾಯಿ ಆದಾಯ ಖೋತಾ ಆಯಿತು ಎಂದು ತಿಳಿಸಿದರು. ಸರ್ಕಾರ ಹಾಗೂ ಗಣಿ ಮಾಲೀಕರು ಕುಳಿತು ಸಮಸ್ಯೆಗೆ ಪರಿಹಾರ ಕಂಡುಕೊಂಡರು. ಈ ಹಿನ್ನೆಲೆಯಲ್ಲಿ ಗಣಿ ಮಾಲೀಕರು ಬಲವಂತವಾಗಿ ಸಂಗ್ರಹಿಸಿದ್ದ ಕೂಲಿ ಕಾರ್ಮಿಕರ ಬೆರಳು ಗುರುತು ಚೀಟಿಗಳನ್ನು ಬೆಂಕಿಗೆ ಹಾಕಿ ನಾಶಪಡಿಸಿದರು ಎಂದು ಸ್ಪಷ್ಟಪಡಿಸಿದರು.[31]

ಜೂನ್ 1930ರ ನ್ಯಾಯವಿಧಾಯಕ ಸಭೆಯಲ್ಲಿ ಡಿ.ಎಸ್. ಮಲ್ಲಪ್ಪ ಒಂದು ನಿಲುವಳಿ ಸೂಚಿಸಿ ಮಂಡಿಸಿದ್ದ ಸಂದರ್ಭದಲ್ಲಿ ಗಣಿ ಕಾರ್ಮಿಕರ ಸಮಸ್ಯೆಗಳು ಸಭೆಯಲ್ಲಿ ಚರ್ಚೆಗೆ ಬಂದವು. ಚರ್ಚೆಯಲ್ಲಿ ಭಾಗವಹಿಸಿದ್ದ ಕೆ.ಸಿ. ರೆಡ್ಡಿ ಕೋಲಾರದ ಚಿನ್ನದ ಗಣಿ ಪ್ರದೇಶದ ಕಾರ್ಮಿಕರ ಸ್ಥಿತಿ–ಗತಿಗಳ ಬಗ್ಗೆ ತಮಗೆ ಅರಿವಿದೆ ಎಂದೂ, ಇತ್ತೀಚೆಗೆ ಗಣಿ ಪ್ರದೇಶದಲ್ಲಿ ನಡೆದ ಗಲಭೆಗಳು, ಸಮಸ್ಯೆಗಳನ್ನು ಎತ್ತಿ ತೋರುತ್ತವೆ ಎಂದು ಹೇಳಿ, ಗಣಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ವಿವರವಾಗಿ ಸಭೆಯ ಮುಂದಿಟ್ಟರು. "ಕಳೆದ ಐವತ್ತು ವರ್ಷಗಳಿಂದ ಕೆ.ಜಿ.ಎಫ್.ನಲ್ಲಿ ಗಣಿಗಳು ಕಾರ್ಯನಿರ್ವಹಿಸುತ್ತಿವೆ, ಇದುವರೆವಿಗೂ ಕೂಡ ಕಾರ್ಮಿಕರ ಬಗ್ಗೆ ಕಾಳಜಿವಹಿಸಿಲ್ಲ, ಆಡಳಿತ ವ್ಯವಸ್ಥೆ ಜಿಡ್ಡುಗಟ್ಟಿದ್ದು ಕಾರ್ಮಿಕರ ಸಮಸ್ಯೆ ಬಗ್ಗೆ ಒಂದೆರಡು ಉದಾಹರಣೆಗಳ ಮೂಲಕ ಸಭೆಯ ಗಮನಕ್ಕೆ ತಂದರು.

ಗಣಿ ಕಾರ್ಮಿಕರ ವಾಸಸ್ಥಳಗಳು ದನದ ಕೊಟ್ಟಿಗೆಗಳಿಗಿಂತ ಕಡೆ, ಚಿಕ್ಕ ಜಿಂಕ್‌ಶೀಟ್ ಹೊದಿಕೆಯ ಮನೆಗಳಲ್ಲಿ 12 ರಿಂದ 15 ಜನ ವಾಸಿಸುತ್ತಾರೆ, ಮನುಷ್ಯನ ಕನಿಷ್ಟ ಅಗತ್ಯವಾದ ವಸತಿಯ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತೋರಿದೆ ಎಂದು ದೂರಿದರು. ಗಣಿ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಂಘಗಳನ್ನು ಕಟ್ಟಿ ಸಂಘಟಿತರಾಗಲು ಹಲವು ಅಡ್ಡಿ ಏರಲಾಗಿದೆ, ಕಳೆದ ಐದಾರು ವರ್ಷಗಳಿಂದ ಸಾರ್ವಜನಿಕವಾಗಿ ಈ ಬಗ್ಗೆ

---

31. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ : ದಿನಾಂಕ : 20–06–1930, ಪುಟ 204–208.

ಚರ್ಚೆ ನಡೆಯುತ್ತಿದ್ದು ಹೊರಗಿನವರು ಗಣಿ ಕಾರ್ಮಿಕರ ಸಂಘಟನೆಗೆ ಮುಂದಾಗುವುದಕ್ಕೆ ಇರುವ ಅಡ್ಡಿಗಳನ್ನು ದೂರ ಮಾಡಬೇಕೆಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ. ಹೊರಗಿನ ವ್ಯಕ್ತಿಗಳು ಗಣಿ ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನ ಮಾಡಿದಾಗ ಸರ್ಕಾರ ಮತ್ತು ಗಣಿ ಮಾಲೀಕರು ಇದಕ್ಕೆ ಅವಕಾಶ ನೀಡುತ್ತಿಲ್ಲ ಎಂದು ದೂರಿದರು.

ಪ್ರಪಂಚದ ಎಲ್ಲೆಡೆ ಕಾರ್ಮಿಕ ಸಂಘಟನೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಕಾರ್ಮಿಕರ ಕಲ್ಯಾಣಕ್ಕಾಗಿ ದುಡಿಯುತ್ತಿವೆ. ದುರುದೃಷ್ಟವಶಾತ್ ಐವತ್ತುಸಾವಿರ ಕಾರ್ಮಿಕರಿರುವ ಗಣಿ ಉದ್ಯಮದಲ್ಲಿ ಕಾರ್ಮಿಕರು ಸಂಘಟಿತರಾಗಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅಡ್ಡಿಗಳು ಎದುರಾಗುತ್ತಿವೆ. ಮೈಸೂರು ಮೈನ್ಸ್ ರೇಗ್ಯುಲೇಷನ್ ಆಕ್ಟ್ ನಂತಹ ಕರಾಳ ಶಾಸನಗಳು ಗಣಿ ಮಾಲೀಕರ ಹಿತಾಸಕ್ತಿಗಳನ್ನು ಕಾಪಾಡಿ ಗಣಿ ಕಾರ್ಮಿಕರ ಪಾಲಿಗೆ ಒಂದು ಶಾಪವಾಗಿದೆ ಎಂದು ನುಡಿದು, ಇದಕ್ಕೆ ತಿದ್ದುಪಡಿತರಲು ಸರ್ಕಾರ ತುರ್ತುಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಗಣಿ ಪ್ರದೇಶದಲ್ಲಿ ನಡೆದ ಗಲಭೆ ಹಾಗೂ ಗೋಲಿಬಾರ್‌ನಿಂದ ಎಚ್ಚೆತ್ತ ಸರ್ಕಾರ, ಗಣಿ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಎಂ.ಎ. ಶ್ರೀನಿವಾಸನ್ ಅವರನ್ನು ನೇಮಿಸಿರುವುದನ್ನು ಕೆ.ಸಿ. ರೆಡ್ಡಿ ಸ್ವಾಗತಿಸಿದರು. ವಿಚಾರಣಾ ಅಧಿಕಾರಿಯು ಖುದ್ದು ಕಾರ್ಮಿಕರ ವಸತಿ ಪ್ರದೇಶಗಳಿಗೆ ಭೇಟಿ ನೀಡಿ ಅವರ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು ಎಂದು ಹೇಳಿ, ಅಧಿಕಾರಿ ಕೇವಲ ಗಣಿ ಮಾಲೀಕರು ಹಾಗೂ ಇತರ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿದರೆ ಸಾಲದು ಎಂಬ ಅಭಿಪ್ರಾಯವನ್ನು ಕೆ.ಸಿ. ರೆಡ್ಡಿ ವ್ಯಕ್ತಪಡಿಸಿದರು. ಅಲ್ಲದೆ ಚುನಾಯಿತ ಪ್ರತಿನಿಧಿಗಳನ್ನು ಭೇಟಿ ಮಾಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸೂಚಿಸಿದರು.

ಕೆ.ಸಿ. ರೆಡ್ಡಿ ಅವರ ಸಲಹೆಯಂತೆ ಎಂ.ಎ. ಶ್ರೀನಿವಾನ್ ಅವರು ತಮ್ಮ ಅಧ್ಯಯನದ ಸಂದರ್ಭದಲ್ಲಿ ಗಣಿ ಕಾರ್ಮಿಕರ ವಾಸಸ್ಥಳಗಳಿಗೆ ಭೇಟಿ ನೀಡಿ ಅವರ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳ ಬಗ್ಗೆ ಸಮೀಕ್ಷೆ ನಡೆಸಿ, ಗಣಿ ಅಧಿಕಾರಿಗಳು, ಮಾಲೀಕರು ಹಾಗೂ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಯ ಹಲವು ಸದಸ್ಯರಿಂದ ಮಾಹಿತಿ ಸಂಗ್ರಹಿಸಿದರು. ಕೋಲಾರ ಜಿಲ್ಲೆಯವರಾದ, ಗಣಿ ಕಾರ್ಮಿಕರ ಬಗ್ಗೆ ಶಾಸನಸಭೆಯಲ್ಲಿ ಅಧಿಕಾರಯುತವಾಗಿ ವಾದ ಮಂಡಿಸಿದ ಕೆ.ಸಿ. ರೆಡ್ಡಿ ಅವರನ್ನು ಕೂಡ ಭೇಟಿ ಮಾಡಿ ಅಭಿಪ್ರಾಯಗಳನ್ನು ಸಂಗ್ರಹಿಸಿದರು.[32]

ಹೀಗೆ ಕೆ.ಜಿ.ಎಫ್.ನ ಗಣಿ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ರೆಡ್ಡಿಯವರು ನಡೆಸಿದ ಹೋರಾಟ ಗಮನಾರ್ಹವಾದದ್ದು. ಈ ಹೋರಾಟಗಳ ಪರಿಣಾಮವಾಗಿ ಗಣಿ

---

32. ನಡಾವಳಿಗಳು: ಮೈಸೂರು ನ್ಯಾಯವಿಧಾಯಕ ಸಭೆ: ದಿನಾಂಕ : ಜೂನ್ 1930, ಪುಟ:420–423.

ಕಾರ್ಮಿಕರ ಸಂಘಟಕರಾಗಿ ಹೆಚ್ಚಿನ ಸಮಸ್ಯೆಗಳು ಪರಿಹಾರ ಕಂಡವು. ಅವರ ಬದುಕು ತಕ್ಕಮಟ್ಟಿಗೆ ಸುಧಾರಣೆ ಕಂಡದ್ದನ್ನು ಗುರುತಿಸಬಹುದು.

6. ಪತ್ರಿಕೋದ್ಯಮ ರಂಗ ಮತ್ತು ಕೆ.ಸಿ. ರೆಡ್ಡಿ

ಮದ್ರಾಸ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕೆ.ಸಿ. ರೆಡ್ಡಿ ಅವರಿಗೆ ಪತ್ರಿಕೆಗಳ ಮಹತ್ವದ ಅರಿವಿತ್ತು. ಆ ಕಾಲದಲ್ಲಿ ಮದ್ರಾಸ್‌ನಿಂದ ಪ್ರಕಟವಾಗುತ್ತಿದ್ದ 'ಹಿಂದೂ ಪತ್ರಿಕೆ'ಯ ಬರವಣಿಗೆಗಳಿಂದ ಕೆ.ಸಿ. ರೆಡ್ಡಿ ಬಹಳ ಪ್ರಭಾವಿತರಾಗಿ ತಾವು ಪತ್ರಕರ್ತರಾಗಬೇಕೆಂಬ ಬಯಕೆ ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನದ ರಾಜಕೀಯ ಕ್ಷೇತ್ರದಲ್ಲಿ ಪ್ರಾಬಲ್ಯಗಳಿಸಿ ಕೊಳ್ಳಲು ಕೆ.ಸಿ. ರೆಡ್ಡಿ ಹಾಗೂ ಅವರ ಇತರ ಸ್ನೇಹಿತರು ಪತ್ರಿಕಾ ರಂಗಕ್ಕೆ ಕಾಲಿಟ್ಟರು. ಈ ರೀತಿ ರಾಜಕೀಯ ಪ್ರಾಬಲ್ಯಗಳಿಸಿ ಕೊಳ್ಳುವಲ್ಲಿ ಪತ್ರಿಕೆಗಳನ್ನು ಬಳಸಿಕೊಂಡವರಲ್ಲಿ ಬಿ.ಎನ್. ಗುಪ್ತ, ಕೆ.ಸಿ. ರೆಡ್ಡಿ, ಕೆ. ವೀರಣ್ಣಗೌಡ, ವಿ. ವೆಂಕಟಪ್ಪ ಹಾಗೂ ನೀಲಗಿರಿ ಸಂಜೀವಯ್ಯ ಪ್ರಮುಖರು.

ಮೂಲತಃ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯವರಾದ ಬಿ.ಎನ್. ಗುಪ್ತ ಶಿಕ್ಷಣ ಮುಂದುವರೆಸುವ ಉದ್ದೇಶದಿಂದ ಮದ್ರಾಸ್‌ಗೆ ಬಂದು ಕೆ.ಸಿ. ರೆಡ್ಡಿ ಅವರಂತೆ ಅನಿಬೆಸೆಂಟರ ಪ್ರಭಾವಕ್ಕೆ ಒಳಗಾದರು. ಅನಿಬೆಸೆಂಟರ ಪತ್ರಿಕಾ ಶಿಕ್ಷಣ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿ ಮದ್ರಾಸ್‌ನಲ್ಲಿ ಪತ್ರಕರ್ತರಾಗಿ ಉದ್ಯೋಗ ಪ್ರಾರಂಭಿಸಿದರು. ಮೊದಲಿನಿಂದಲೂ ಮದ್ರಾಸ್‌ನ ಜಸ್ಟೀಸ್ ಪಾರ್ಟಿಯ ರಾಜಕೀಯ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಬಿ.ಎನ್. ಗುಪ್ತರವರಿಗೆ ಮೈಸೂರಿನ ಹಲವು ರಾಜಕೀಯ ಯುವ ನಾಯಕರ ಸಂಪರ್ಕವಿತ್ತು. 1928ರಲ್ಲಿ ಬೆಂಗಳೂರಿಗೆ ಬಂದ ಬಿ.ಎನ್. ಗುಪ್ತ, ಎಚ್.ಕೆ. ವೀರಣ್ಣಗೌಡ, ನೀಲಗಿರಿ ಸಂಜೀವಯ್ಯನವರ ಸ್ನೇಹ ಗುಪ್ತರವರಿಗೆ ದೊರೆಯಿತು. ಈ ಮೂವರ ಪ್ರಯತ್ನದಿಂದಾಗಿ 1928ರ ಡಿಸೆಂಬರ್ ತಿಂಗಳಲ್ಲಿ ಚಿತ್ರಗುಪ್ತ ಪತ್ರಿಕೆ ಪ್ರಕಟಣೆ ಆರಂಭಿಸಿತು.

ಸರ್ಕಾರ 1928ರ ಗಣಪತಿ ಗಲಭೆಗೆ ಸಂಬಂಧಿಸಿದಂತೆ ವಿಶ್ವೇಶ್ವರಯ್ಯನವರ ಸಮಿತಿಯ ವರದಿ ಸರ್ಕಾರ ಪ್ರಕಟಿಸಲು ಹಿಂದೇಟು ಹೊಡೆದ ಸಮಯದಲ್ಲಿ ಎಚ್.ಕೆ. ವೀರಣ್ಣಗೌಡ, ಬಿ.ಎನ್. ಗುಪ್ತ ಹಾಗೂ ವಿ. ವೆಂಕಟಪ್ಪ ವರದಿಯ ಪ್ರತಿಯನ್ನು ವಿಚಾರಣಾ ಸಮಿತಿಯ ಸದಸ್ಯರೊಬ್ಬರಿಂದ ಸಂಪಾದಿಸಿ ತಮ್ಮ ಪತ್ರಿಕೆ ಚಿತ್ರಗುಪ್ತದಲ್ಲಿ ಪ್ರಕಟಿಸಿ ರಾಜಕೀಯ ಕ್ಷೇತ್ರದಲ್ಲಿ ಅಲ್ಲೋಲ-ಕಲ್ಲೋಲ ಉಂಟಾಗುವಂತೆ ಮಾಡಿದರು.[33]

ಕೆ.ಸಿ. ರೆಡ್ಡಿ ಅವರ ಪ್ರತಿಭೆಯನ್ನು ಬೆಳೆಸಿದುದೆಂದರೆ ಪತ್ರಿಕೋದ್ಯಮ. 1937ರಲ್ಲಿ ಬಿ.ಎನ್. ಗುಪ್ತ ಹಾಗೂ ಇತರ ಹಿಂದುಳಿದ ವರ್ಗದ ಯುವ ನಾಯಕರುಗಳು ಬ್ರಾಹ್ಮಣೇತರರ ರಾಜಕೀಯ ಉದ್ದೇಶಗಳನ್ನು ಪ್ರಚಾರ ಮಾಡುವ ಹಿನ್ನೆಲೆಯಲ್ಲಿ ಜನವಾಣಿ ಪತ್ರಿಕೆಯ

---

33. ವೀರಣ್ಣಗೌಡ .ಎಚ್.ಕೆ : ಬದುಕು-ಮೆಲುಕು : ಪುಟ-117.

ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಅಲ್ಪಕಾಲವಾದರೂ ಕೆ.ಸಿ. ರೆಡ್ಡಿ ಅವರು ಸಂಪಾದಕರಾಗಿದ್ದ ಸಂದರ್ಭದಲ್ಲಿ ಜನವಾಣಿಯು ಪ್ರಜೆಗಳ ಹಕ್ಕು ಬಾಧ್ಯತೆಗಳಿಗಾಗಿ ಹೊಡೆದಾಡುವ, ಸರ್ಕಾರದ ಅಧಿಕಾರಿಗಳಲ್ಲಿ ಕಂಡು ಬರುತ್ತಿದ್ದ ಲೋಪಗಳನ್ನು, ಅಸಭ್ಯ, ಅನ್ಯಾಯ ವರ್ತನೆಗಳನ್ನು ಉಗ್ರವಾಗಿ ಟೀಕಿಸಿತು. ಜನವಾಣಿ ಪತ್ರಿಕೆಯ ಪ್ರಾಬಲ್ಯದ ಬಗ್ಗೆ ಚರ್ಚಿಸುವ ಸಮಕಾಲೀನ ನಾಯಕರೊಬ್ಬರು 'ಸರ್ಕಾರದ ಉನ್ನತಾಧಿಕಾರಿಗಳು ಪ್ರತಿದಿನ ಜನವಾಣಿ ಪತ್ರಿಕೆಯನ್ನು ಓದದೇ ಮಲಗುತ್ತಿರಲಿಲ್ಲ' ಎಂದು ನೆನಪಿಸಿಕೊಳ್ಳುತ್ತಾರೆ.[34] ಜನವಾಣಿ ಪತ್ರಿಕೆಯು ಒಂದು ಸಂಜೆ ಪತ್ರಿಕೆಯಾಗಿದ್ದು ಅದರ ಬೆಲೆ ಕಡಿಮೆ. ಅದರಲ್ಲಿ ಸ್ಥಳೀಯ ವರ್ತಮಾನವೇ ಹೆಚ್ಚು ಅದರ ಧೋರಣೆ ಸ್ವತಂತ್ರವಾಗಿತ್ತು.[35]

ಬಿ.ಎನ್. ಗುಪ್ತರವರು ಜನವಾಣಿ ಪತ್ರಿಕೆಯನ್ನು ಹೊರಡಿಸಿದರು. ಈ ಪತ್ರಿಕೆಗೆ ತಂತಿ ವಾರ್ತೆಗಳು ಅನೇಕ ಕಡೆಗಳಲ್ಲಿ ಪ್ರತಿನಿಧಿಗಳು, ನವೀನ ಕಾಲದ ಸ್ವರೂಪವೆಲ್ಲವೂ ಇದ್ದಿತ್ತು. ಗುಪ್ತರವರ ಸ್ನೇಹ ಬಾಂಧವ್ಯಗಳೆಲ್ಲ ಪ್ರಜಾಪಕ್ಷದವರ ಕಡೆಗೆ ಇದ್ದಾಗ್ಯೂ ಈ ಪತ್ರಿಕೆ ಮಾತ್ರ ರಾಷ್ಟ್ರೀಯ ಪತ್ರಿಕೆಯಾಗಿಯೇ ನಡೆಸಲ್ಪಡುತ್ತಿತ್ತು. ಕೆ.ಸಿ. ರೆಡ್ಡಿ ಕೆಲವು ತಿಂಗಳುಗಳು ಈ ಪತ್ರಿಕೆಯ ಸಂಪಾದಕರಾಗಿದ್ದರು. "ಈ ಸಂಪಾದಕತ್ವವು ಹೆಸರಿಗೆ ಮಾತ್ರವಲ್ಲ ಪತ್ರಿಕಾಲಯದಲ್ಲಿ ಕುಳಿತು ಶ್ರೀ ರೆಡ್ಡಿ ಅವರು ರಾತ್ರಿ–ಹಗಲು ಕೆಲಸ ಮಾಡುತ್ತಿದ್ದರು" ಎಂದು ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ತಮ್ಮ ಲೇಖನದಲ್ಲಿ ದಾಖಲಿಸಿದ್ದಾರೆ.[36]

ಬಿ.ಎನ್. ಗುಪ್ತ ತನ್ನ ಸಂದರ್ಶನದಲ್ಲಿ ತಿಳಿಸಿರುವಂತೆ "ಆಗ ಕೆ.ಸಿ. ರೆಡ್ಡಿ ಅವರು ಮೈಸೂರು ರಾಜಕೀಯದಲ್ಲಿ ಏರುತ್ತಿದ್ದ ಮೂಡಲತಾರೆ". ಮದ್ರಾಸ್‌ನಲ್ಲಿ B.L., ಓದಿದ್ದು, ಆ ಕಾಲದಲ್ಲಿ ಅವರು ಡಾಕ್ಟರ್ ಅನಿಬೆಸೆಂಟರೇ ಮೊದಲಾಗಿ ಮದ್ರಾಸ್‌ನ ಗಣ್ಯ ನಾಯಕರನೇಕರ ಭಾಷಣ ಕೇಳಿದವರು, ಬರಹಗಳನ್ನು ಓದಿದಂಥವರು, ಥಿಯೋಸಾಫಿಸ್ಟರು ಮಿತ್ರರು, ಅಂದಿನ ಗಣ್ಯರನೇಕರ ಪ್ರಭಾವಕ್ಕೆ ಒಳಗಾದವರು, ಅವರಲ್ಲಿ ರಾಷ್ಟ್ರೀಯ ಭಾವನೆ ವಿದ್ಯಾರ್ಥಿದೆಸೆಯಿಂದಲೇ ಜಾಗೃತವಾಗಿದ್ದಿತು. ಅವರ ತಂದೆ ಕೋಲಾರ ಜಿಲ್ಲೆಯಲ್ಲಿ ಸಾವಿರದ ನಾಲ್ಕು ನೂರು ಎಕರೆ ಜಮೀನ್ದಾರರು. ಆದರೆ ಅಣ್ಣ ವೆಂಕಟರಾಮರೆಡ್ಡಿ ಮಾತ್ರ ಬಹಳ ದೊಡ್ಡ ಗಾಂಧೀವಾದಿ. ಇಂದು ವಿನೋಬಾ ಜೀ ಅವರಿಗೆ ಅಖಿಲ ಭಾರತ ಮಟ್ಟದಲ್ಲಿರುವ ಗೌರವದಲ್ಲಿ ಅಂದು ಕೋಲಾರ ಜಿಲ್ಲೆಯ ಜನಗಳು ಅವರನ್ನು ಕಾಣುತ್ತಿದ್ದರು. ಹೀಗಾಗಿ ಮನೆಯಲ್ಲಿ ಚಂಗಲರಾಯರ ಮೇಲೆ ಸಾಕಷ್ಟು ರಾಷ್ಟ್ರೀಯ ವಾತಾವರಣದ ವರ್ಚಸ್ಸಿದ್ದಿತು. ಅದರ ಜೊತೆಗೆ ಬ್ರಾಹ್ಮಣೇತರ ಚಳವಳಿ ಮತ್ತು ಅದರ ನಾಯಕರ

34. ಆರಾಧ್ಯ .ಆರ್.ಎಸ್. : ತುಮಕೂರು ವಿಶೇಷಾಧಿವೇಶನ –1946, ಪುಟ–79–80.
35. ನಾಡಿಗ್ ಕೃಷ್ಣಮೂರ್ತಿ, (ಅನು), ಸಿದ್ದವನಹಳ್ಳಿ ಕೃಷ್ಣಶರ್ಮ : ಕರ್ನಾಟಕ ಪರಂಪರೆ ಸಂ.2.
36. ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘ, ರಜತಮಹೋತ್ಸವ: 1959, ಪುಟ.26–31

ಸಂಪರ್ಕವೂ ರೆಡ್ಡಿ ಅವರಿಗಿದ್ದಿತು. ಮದ್ರಾಸ್‌ನಲ್ಲಿ ಅವರ ಬ್ರಾಹ್ಮಣೇತರ ಚಳವಳಿಯ ಪಕ್ಷವಾದ ಜಸ್ಟೀಸ್ ಪಾರ್ಟಿಯ ಗಣ್ಯರನೇಕರ ಭಾಷಣ, ಲೇಖನಗಳ ಅಧ್ಯಯನದೊಂದಿಗೆ ಆ ಚಳವಳಿಯ ಸ್ವರೂಪವನ್ನು ಕಂಡಿದ್ದರು.

ಚಂಗಲರಾಯರೆಡ್ಡಿ ಅವರ ಬಗ್ಗೆ ಸರ್ ಮಿರ್ಜಾ ಇಸ್ಮಾಯಿಲ್‌ಗೆ ಮೆಚ್ಚುಗೆಯಿದ್ದಿರಲು ಕಾರಣ ಅವರು ಮೇಲೇರುತ್ತಿರುವ ಮೂಡಲ ತಾರೆಯೆಂಬುದೇ. ಅಷ್ಟು ಹೊತ್ತಿಗಾಗಲೇ ಪ್ರಜಾಮತವು ಹೆಸರು ಮಾಡಿಕೊಂಡಿದ್ದನ್ನು ನೋಡಿ ಮಿರ್ಜಾರು ಯೋಜಿಸಿದರು. ನಾನು (ಬಿ.ಎನ್.ಗುಪ್ತ) ಮದ್ರಾಸಿನಲ್ಲೇಕೆ ಪತ್ರಿಕೆ ನಡೆಸಬೇಕು ಮೈಸೂರು ಸಂಸ್ಥಾನಕ್ಕೆ ಬಂದು ನಡೆಸುವುದಿದ್ದರೂ ಅದಕ್ಕೆಲ್ಲ ತಾನೇ ಮುಂದಾಗಿ ಅನುಮತಿ ಮತ್ತು ಬೇಕಾದ ಅನುಕೂಲತೆಗಳನ್ನೆಲ್ಲ ದೊರಕಿಸಿ ಕೊಡುವೆ ಎಂದು ರೆಡ್ಡಿ ಅವರಿಗೆ ಹೇಳಿದರು. ರೆಡ್ಡಿ ಅವರೂ ನನಗೂ ಆಗಲೇ ಚೆನ್ನಾಗಿ ಪರಿಚಿತರು. ಅವರಿಂದ ಸರ್ ಮಿರ್ಜಾ ಇಸ್ಮಾಯಿಲ್‌ರ ಸಂದೇಶ ನನಗೆ ಮುಟ್ಟಿತು. ಕೂಡಲೇ ನಾನು ಅನುಮತಿಗಾಗಿ ಅರ್ಜಿ ಹಾಕಿದೆ. ಸರ್ ಮಿರ್ಜಾರು ತಕ್ಷಣ ಅನುಮತಿಯನ್ನು ಕೊಟ್ಟರಲ್ಲದೆ ಕೆಲ ಅನುಕೂಲತೆಗಳನ್ನು ಮಾಡಿ ಕೊಟ್ಟರು. ಪತ್ರಿಕಾ ಸಂಸ್ಥೆಯನ್ನು ಲಿಮಿಟೆಡ್ ಕಂಪನಿಯನ್ನಾಗಿ ಮಾಡಬೇಕೆಂದು ರೆಡ್ಡಿ ಅವರೇ ಮೊದಲಾದ ಸ್ನೇಹಿತರೆಲ್ಲರ ಒತ್ತಾಯವಾಗಿದ್ದಿತು. ಆದುದರಿಂದ ಎರಡು ಪ್ರೆಸ್‌ಗಳನ್ನು ಬೆಂಗಳೂರಿನಲ್ಲಿ ನೆಲೆ ಹಾಕಲಾಯಿತು. ಒಂದು ಪ್ರಜಾಮತದ ಸಲುವಾಗಿ, ಇನ್ನೊಂದು ಜನವಾಣಿ ಸಲುವಾಗಿ, ಜನವಾಣಿಯದು ಲಿಮಿಟೆಡ್ ಕಂಪನಿ, ಪ್ರಜಾಮತವು ಅದರ ಮೊದಲಿನ ರೀತಿಯಲ್ಲಿಯೇ ನನ್ನ ಮಾಲೀಕತ್ವದ್ದು. ಮೈಸೂರು ಸಂಸ್ಥಾನಕ್ಕೆ ಬಂದಿದ್ದರಿಂದ ಪತ್ರಿಕೆಗಳ ಪ್ರಸಾರ ಹೆಚ್ಚುವುದರ ಜೊತೆಗೆ ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿವಹಿಸುವುದು ಶಕ್ತವಾಯಿತು. ಇದು ಮೈಸೂರು ಸಂಸ್ಥಾನದ ಜನತಾ ಚಳವಳಿಗೆ ವಿಶೇಷ ಚೈತನ್ಯ ತರಲು ಕಾರಣವಾಯಿತು.[37]

ಇದೇ ಅವಧಿಯಲ್ಲಿ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಪತ್ರಿಕೆಗಳ ಟೀಕೆಗಳಿಂದ ಸರ್ಕಾರವನ್ನು ಪಾರು ಮಾಡಲು ಹಾಗೂ ವೈಯಕ್ತಿಕ ಕಾರಣಗಳಿಂದ ಪತ್ರಿಕೆಗಳ ಮೇಲೆ ಕಡಿವಾಣ ಹಾಕುವ ಹಲವು ಕ್ರಮಗಳನ್ನು ಕೈಗೊಂಡರು.

ಮೈಸೂರು ರಾಜ್ಯದಲ್ಲಿ ಪ್ರಚಲಿತವಿದ್ದ ಪತ್ರಿಕಾ ಕಾನೂನಿನ ಪ್ರಕಾರ ಕೇವಲ ಒಬ್ಬ ಪತ್ರಕರ್ತರಿಗೆ ಮಾತ್ರ ಶಿಕ್ಷೆಯಾದದ್ದು ಒಂದು ಗಮನಾರ್ಹವಾದ ಬೆಳವಣಿಗೆ. "1937 ರಲ್ಲಿ ಪ್ರಜಾಮತ ಮತ್ತು ಜನವಾಣಿ ಪತ್ರಿಕೆಗಳ ಸಂಪಾದಕರಾಗಿದ್ದ ಬಿ.ಎನ್. ಗುಪ್ತ ಅವರನ್ನು ರಾಜ್ಯದಿಂದ ಗಡೀಪಾರು ಮಾಡಲಾಯಿತು. ಗುಪ್ತರ ಪ್ರಜಾಮತ ಪತ್ರಿಕೆಯು ಒಂದು ಶುದ್ಧಾಂಗ ರಾಜಕೀಯ ಪತ್ರಿಕೆಯೆಂದು 1930ರಲ್ಲೇ ಸರ್ಕಾರಕ್ಕೆ ತಿಳಿದಿತ್ತು ಹಾಗೂ

---

37. ಜನಪ್ರಗತಿ : ಬಿ.ಎನ್. ಗುಪ್ತ ಆತ್ಮಚರಿತ್ರೆ, ದಿನಾಂಕ : 07–01–1973.

ಸಂಪಾದಕರು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವ ಸಂಗತಿಯೂ ಅದರ ಗಮನಕ್ಕೆ ಬಂದಿತ್ತು. ರಾಜಕೀಯ ಚಟುವಟಿಕೆಗಳಲ್ಲಿ ತೊಡಗಬಾರದೆಂದು ಗುಪ್ತರಿಗೆ ನೀಡಿದ ಎಚ್ಚರಿಕೆ ಪ್ರಯೋಜನಕ್ಕೆಬಾರದಾಗ, ಅನಿವಾರ್ಯವಾಗಿ ಅವರನ್ನು ರಾಜ್ಯದಿಂದ ಹೊರ ಹಾಕಬೇಕಾಯಿತು" ಎಂದು ಆರ್. ರಾಮಕೃಷ್ಣನ್ ತಮ್ಮ ಲೇಖನದಲ್ಲಿ ನಮೂದಿಸಿದ್ದಾರೆ.[38]

1937ರ ನ್ಯಾಯವಿಧಾಯಕ ಸಭೆಯಲ್ಲಿ ಕೆ.ಸಿ. ರೆಡ್ಡಿ ಅವರು ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸದಸ್ಯರಾದ ಗಿರಿಮಾಜಿರಾವ್ ಸರ್ಕಾರದ ಸ್ಪಷ್ಟೀಕರಣ ಕೇಳಿದರು. ಗಿರಿಮಾಜಿರಾವ್, "ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿರುವ ಕೆ.ಸಿ. ರೆಡ್ಡಿ ಅವರು ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ಜನವಾಣಿ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ, ಸರ್ಕಾರ ಇದಕ್ಕೆ ಅನುಮತಿ ನೀಡಿದೆಯೇ, ಇದರಿಂದ ಜಿಲ್ಲಾಬೋರ್ಡ್ ಕಾರ್ಯ ಕಲಾಪಗಳಿಗೆ ಅಡಚಣೆ ಉಂಟಾಗುವುದಿಲ್ಲವೆ ಎಂದು ಪ್ರಶ್ನಿಸಿದರು. ಪ್ರಶ್ನೆಗಳಿಗೆ ಉತ್ತರಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕೆ.ಸಿ. ರೆಡ್ಡಿ ಅವರು ಜನವಾಣಿ ಪತ್ರಿಕೆಯ ಸಂಪಾದಕರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದೂ, ಸರ್ಕಾರದ ಅನುಮತಿ ಕೋರುವ ಅಗತ್ಯವಿಲ್ಲವೆಂದೂ ಉತ್ತರಿಸಿದರು.

26–06–1937ರಂದು ಇದೇ ವಿಷಯ ಮತ್ತೆ ಚರ್ಚೆಗೆ ಬಂದು ಗಿರಿಮಾಜಿ ರಾವ್ 'ಜನವಾಣಿ ಪತ್ರಿಕೆ' ಒಂದು ರಾಜಕೀಯ ಪತ್ರಿಕೆ ಎಂಬುದು ಸರ್ಕಾರಕ್ಕೆ ಅರಿವಿಲ್ಲವೆ ಎಂಬ ಪ್ರಶ್ನೆಗೆ ಉತ್ತರಿಸಿದ ಎನ್. ಮಾಧವರಾವ್ ಇಲ್ಲ ಎಂದು ಉತ್ತರ ಹೇಳಿದರು. ಚರ್ಚೆಯಲ್ಲಿ ಪಾಲ್ಗೊಂಡ ಎಚ್. ಸಿದ್ದಯ್ಯ ಜನವಾಣಿ ಪತ್ರಿಕೆಯ ಸಂಪಾದಕರು ಜಿಲ್ಲಾ ಬೋರ್ಡ್ ಅಧ್ಯಕ್ಷರು ಹೌದು, ಹಾಗೆಯೇ ಬುದ್ಧಿವಂತ, ಚತುರ, ಉತ್ತಮ ನ್ಯಾಯವಾದಿ, ಸಮರ್ಥ ಹಾಗೂ ಈ ಸಭೆಯ ಸದಸ್ಯರೂ ಹೌದು ಎಂದಾಗ ಸಭೆ ನಗೆಗಡಲಲ್ಲಿ ಮುಳುಗಿತು".[39] ಹೀಗೆ ಜನಪ್ರತಿನಿಧಿಯಾಗಿ ಸಕ್ರಿಯ ರಾಜಕಾರಣಿಯಾಗಿದ್ದು ರೆಡ್ಡಿ ಅವರು ಪತ್ರಿಕಾರಂಗದಲ್ಲಿ ಅನುಪಮ ಸೇವೆ ಸಲ್ಲಿಸಿದ್ದುದ್ದನ್ನು, ಪತ್ರಿಕಾರಂಗವನ್ನು ತಮ್ಮ ರಾಜಕೀಯ ಹೋರಾಟಕ್ಕೂ ಸಹಾ ಅತ್ಯುತ್ತಮವಾಗಿ ಬಳಸಿಕೊಂಡಿದ್ದುದನ್ನು ಮೇಲಿನ ವಿವರಗಳಿಂದ ಗುರುತಿಸಬಹುದು.

7. ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷತೆ ಮತ್ತು ಕೆ.ಸಿ. ರೆಡ್ಡಿ

1860ರಲ್ಲಿ ಮೈಸೂರು ರಾಜ್ಯದಲ್ಲಿ ಜಿಲ್ಲಾ ಬೋರ್ಡುಗಳು ಅಸ್ತಿತ್ವಕ್ಕೆ ಬಂದವು. ಗ್ರಾಮದ ಪ್ರತಿಯೊಂದು ನೇಗಿಲಿನ ಮೇಲೆ 2 ರಿಂದ 6 ಆಣೆಯವರೆಗೆ ತೆರಿಗೆ ಸಂಗ್ರಹಿಸಿ,

---

38. RAMAKRISHNA R. : The Rule of the Press in Princely Mysore, P-219-228.
39. C.B. FILE No : 45/36-12 : Date : June, 1937.

ಹೀಗೆ ಸಂಗ್ರಹವಾದ ತೆರಿಗೆಯಿಂದ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗೆ ಬಳಸಲು ತೀರ್ಮಾನಿಸಲಾಯಿತು. 1874ರ ವೇಳೆಗೆ ರಾಜ್ಯದ ಎಲ್ಲಾ 8 ಜಿಲ್ಲೆಗಳಲ್ಲಿ ಜಿಲ್ಲಾ ಬೋರ್ಡುಗಳು ಅಸ್ತಿತ್ವಕ್ಕೆ ಬಂದವು. ಅಖಿಲ ಭಾರತ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸುಧಾರಣೆಗಳನ್ನು ತರುವ ಮೂಲಕ ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸುವ ಹಿನ್ನೆಲೆಯಲ್ಲಿ ಜಾರಿಗೆ ಬಂದವು. ಆರಂಭದಲ್ಲಿ ಈ ರೀತಿ ಸಂಗ್ರಹವಾದ ಹಣವನ್ನು ಜಿಲ್ಲಾಧಿಕಾರಿಗಳು ಸೂಕ್ತರೀತಿಯಲ್ಲಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಕ್ರಮೇಣ ಜಿಲ್ಲಾ ಬೋರ್ಡ್‌ಗಳಲ್ಲಿ ಸರ್ಕಾರೇತರರಿಗೂ ಅವಕಾಶ ಕಲ್ಪಿಸಲು ಸೂಕ್ತ ತಿದ್ದುಪಡಿ ಜಾರಿಗೊಳಿಸಲಾಯಿತು.

1902ರ ನಂತರ ಜಿಲ್ಲಾ ಬೋರ್ಡ್‌ಗಳ ಸ್ವರೂಪದಲ್ಲಿ ಹಾಗೂ ಅದರ ರಚನೆಯಲ್ಲಿ ವ್ಯಾಪಕ ಬದಲಾವಣೆಗಳಾದವು. ಇಷ್ಟಾದರೂ ಕೂಡ ಜಿಲ್ಲಾ ಬೋರ್ಡ್‌ಗಳು ಅಧಿಕಾರಿಶಾಹಿ ಬಿಗಿಮುಷ್ಠಿಯಿಂದ ಪೂರ್ಣವಾಗಿ ಹೊರಬರಲು ಸಾಧ್ಯವಾಗಲಿಲ್ಲ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಸಂದರ್ಭದಲ್ಲಿ ಜಿಲ್ಲಾ ಬೋರ್ಡ್‌ಗಳ ಸುಧಾರಣೆ ಕುರಿತು ಕಾಂತರಾಜ ಅರಸ್ ಹಾಗೂ ಶ್ರೀನಿವಾಸ ಅಯ್ಯಂಗಾರ್ ನೇತೃತ್ವದಲ್ಲಿ ಎರಡು ಪ್ರತ್ಯೇಕ ಸಮಿತಿಗಳನ್ನು ರಚಿಸಲಾಯಿತು. ಸರ್ಕಾರ ಈ ಬಗ್ಗೆ ದೀರ್ಘ ಚಿಂತನೆ ನಡೆಸಿ 1919ರಲ್ಲಿ ಬೆಂಗಳೂರು ಜಿಲ್ಲಾ ಬೋರ್ಡ್‌ಗೆ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಅವಕಾಶ ನೀಡಲಾಯಿತು.

1930 ರ ವೇಳೆಗೆ ಜಿಲ್ಲಾ ಬೋರ್ಡ್‌ಗಳ ಕಾರ್ಯವೈಖರಿಯಲ್ಲಿ ಹಲವು ಬದಲಾವಣೆಗಳು ಉಂಟಾದವು. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ವಿಸ್ತರಣೆ ಯೋಜನೆ ಹಣಕಾಸಿನ ಕೊರತೆಯಿಂದ ಕುಂಠಿತಗೊಂಡಿದೆ ಎಂಬ ಟೀಕೆಗಳ ಹಿನ್ನೆಲೆಯಲ್ಲಿ ಒಂದು ಶಾಸನವನ್ನು ಜಾರಿಗೊಳಿಸಿ ಗ್ರಾಮೀಣ ಪ್ರದೇಶದ ಶಿಕ್ಷಣದ ಉಸ್ತುವಾರಿಯನ್ನು ಜಿಲ್ಲಾ ಬೋರ್ಡುಗಳಿಗೆ ವಹಿಸಲಾಯಿತು. ಇದಕ್ಕೆ ರಾಜ್ಯದಾದ್ಯಂತ ಪ್ರಬಲ ಟೀಕೆಗಳು ಎದುರಾದವು. ಸಾರ್ವಜನಿಕರು ಜಿಲ್ಲಾ ಬೋರ್ಡ್‌ಗಳ ಸಂಪನ್ಮೂಲಗಳನ್ನು ಹೆಚ್ಚಿಸದೆ ಅವುಗಳ ಜವಾಬ್ದಾರಿಯನ್ನು ಹೆಚ್ಚಿಸಿದ ಸರ್ಕಾರದ ನೀತಿಯನ್ನು ಟೀಕಿಸಿದರು. ಪರಿಸ್ಥಿತಿ ಸುಧಾರಿಸಲು ಗ್ರಾಮೀಣ ಪ್ರದೇಶದ ರೈತರಿಂದ ಹೆಚ್ಚಿನ ತೆರಿಗೆ ವಸೂಲಿ ಮಾಡಲು ಜಿಲ್ಲಾ ಬೋರ್ಡುಗಳು ಪ್ರಯತ್ನಿಸಿದಾಗ, ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಇದು ಸಾಧ್ಯವಾಗದಾಯಿತು.

ಬೇರೆ ದಾರಿಯಿಲ್ಲದೆ ಜಿಲ್ಲಾ ಬೋರ್ಡುಗಳು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಲ ಎತ್ತಬೇಕಾಯಿತು. ಪರಿಸ್ಥಿತಿ ಹೀಗಿದ್ದರೂ ಕೂಡ ಜಿಲ್ಲಾ ಬೋರ್ಡ್‌ನ ಸ್ವರೂಪದಲ್ಲಾದ ಬದಲಾವಣೆಗಳು ಸ್ಥಳೀಯ ಜನರಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು, ಸ್ಥಳೀಯ ಸಂಸ್ಥೆಗಳನ್ನು ಜಾಣ್ಮೆಯಿಂದ ನಿಭಾಯಿಸಲು, ಆರ್ಥಿಕ, ಮಿತ–ವ್ಯಯ ಸಾಧಿಸಲು ಪ್ರೇರಣೆ ನೀಡಿತು. ಜಿಲ್ಲಾ ಬೋರ್ಡ್‌ಗಳು ತಮ್ಮ ವ್ಯಾಪ್ತಿಯಲ್ಲಿ ಶಿಕ್ಷಣ, ರಸ್ತೆ ಕಾಮಗಾರಿ, ಆರೋಗ್ಯ ಕೇಂದ್ರಗಳು, ಗ್ರಾಮಾಭಿವೃದ್ಧಿ, ಸಂತೆ ಮಾರುಕಟ್ಟೆಗಳ ಅಭಿವೃದ್ಧಿ, ಸಾಂಕ್ರಾಮಿಕ ರೋಗಗಳನ್ನು

ತಡೆಯುವುದು, ಕುಡಿಯುವ ನೀರು, ಗ್ರಾಮೀಣ ನೈರ್ಮಲ್ಯ, ಪಶುವೈದ್ಯಶಾಲೆಗಳು ಹೀಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡವು.[40]

ಬಹಳ ಮುಖ್ಯವಾಗಿ ಜಿಲ್ಲಾ ಬೋರ್ಡ್‌ಗಳು ಸ್ಥಳೀಯರಿಗೆ ರಾಜಕೀಯ ತರಭೇತಿ ನೀಡುವ ಹಾಗೂ ರಾಜಕೀಯ ನಾಯಕತ್ವ ಬಳಸಿಕೊಳ್ಳುವ ಒಂದು ಸಾಧನವಾಯಿತು. ಮುಂದೆ ಮೈಸೂರಿನ ರಾಜಕೀಯದಲ್ಲಿ ಖ್ಯಾತಿಗಳಿಸಿದ ಅನೇಕ ರಾಜಕೀಯ ಮುಖಂಡರು ತಮ್ಮ ಆರಂಭದ ರಾಜಕೀಯವನ್ನು ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಸ್ಪರ್ಧಿಸುವ ಮುಖಾಂತರ, ಜಿಲ್ಲಾ ಬೋರ್ಡ್ ಸದಸ್ಯರಾಗಿ, ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಆಯ್ಕೆಗೊಂಡು ಜನಪರ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಮುಖಾಂತರ ಗ್ರಾಮೀಣ ಪ್ರದೇಶದಲ್ಲಿ ಭದ್ರ ರಾಜಕೀಯ ನೆಲೆ ಕಂಡುಕೊಂಡರು. ಇಂತಹ ಹಲವು ನಾಯಕರುಗಳಲ್ಲಿ ವಿ. ವೆಂಕಟಪ್ಪ, ಎಚ್.ಬಿ. ಗುಂಡಪ್ಪಗೌಡ, ಬಾಗೇಮನೆ ದೇವೇಗೌಡ, ಹೆಚ್.ಸಿ. ದಾಸಪ್ಪ, ಎಚ್. ಸಿದ್ದಯ್ಯ, ಡಿ.ಎಸ್. ಮಲ್ಲಪ್ಪ, ಹೆಚ್.ಆರ್. ಗುರುವಾರೆಡ್ಡಿ, ಕೆ.ಸಿ. ರೆಡ್ಡಿ ಪ್ರಮುಖರು.

ಕೆ.ಸಿ. ರೆಡ್ಡಿ 1933ರಲ್ಲಿ ಮೊದಲ ಬಾರಿಗೆ ಕೋಲಾರ ಜಿಲ್ಲಾ ಬೋರ್ಡ್ ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ಚುನಾಯಿತರಾದರು. ನಂತರ 1936 ರಲ್ಲಿ ಎರಡನೆಯ ಬಾರಿ ಸದಸ್ಯರಾಗಿ ನಂತರ ಅಧ್ಯಕ್ಷರಾಗಿ ಚುನಾಯಿತಗೊಂಡರು. ಅವರು ಅಧ್ಯಕ್ಷರಾಗಿದ್ದ ಅವಧಿಗಳಲ್ಲಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣ ಹಾಗೂ ದುರಸ್ಥಿಗೆ ವಿಶೇಷ ಆದ್ಯತೆ ನೀಡಿದರು. ಇವರ ಪ್ರೇರಣೆಯಿಂದ ಬೌರಿಂಗ್‌ಪೇಟೆ – ಟೇಕಲ್ ರಸ್ತೆ,[41] ತಾಯಲ್ಲೂರು – ಸುಂದರಪಾಳ್ಯ ರಸ್ತೆ,[42] ಅಡ್ಡಗಲ್–ಕೂರಿಗೇಪಲ್ಲಿ ರಸ್ತೆ,[43] ದಿಗುವಚಿಂತಪಲ್ಲಿ–ರಾಯಲ್ಪಾಡುರಸ್ತೆ,[44] ಕೀರ್ತಿಹಳ್ಳಿ–ಚಿಂತಾಮಣಿ ರಸ್ತೆ,[45] ಕ್ಯಾಲನೂರು–ಕೋಲಾರ ರಸ್ತೆ,[46]

---

40. Report of the Committee Appointed to Examine the Finance of District Boards in Mysore - 1938.
41. L.B. File : ಬೌರಿಂಗ್‌ಪೇಟೆ – ಟೇಕಲ್ ರಸ್ತೆ : Letter No : A.6-L.A. 24/34-35, Dated : August 1935.
42. L.B. File : ತಾಯಲೂರು–ಸುಂದರಪಾಳ್ಯ ರಸ್ತೆ : Letter No : A.6. L.A. 5/33-34. Dated : 04-05-1934
43. L.B. File : ಅಡ್ಡಗಲ್ – ಕೂರಿಗೆಪಲ್ಲಿ ರಸ್ತೆ : Letter No : A.6-L.A. 47/36-37, Dated : 14-07-1937
44. L.B. File : ದಿಗುವಚಿಂತಲಪಲ್ಲಿ–ರಾಯಲ್ಪಾಡು ರಸ್ತೆ : Letter No : A.6-L.A. 47/36-37, Dated : 14-07-1937
45. L.B. File : ಕುರ್ತಿಹಳ್ಳಿ – ಚಿಂತಾಮಣಿ ರಸ್ತೆ : Letter No : A.6-L.A. 38/32-33, Dated : 22-05-1934
46. L.B. File : ಕ್ಯಾಲನೂರು–ಕೋಲಾರ ರಸ್ತೆ : L.No : L5910, Dated : 03-02-1934

ಯಲ್ದೂರು–ಅಗರ ರಸ್ತೆ,[47] ಗೌರಿಬಿದನೂರು–ದಡಿನಾಯಕನಪಾಳ್ಯ ರಸ್ತೆ,[48] ಕೈವಾರ ಸಂಪರ್ಕ ರಸ್ತೆ,[49] ಕ್ಯಾಲನೂರು ರಸ್ತೆ,[50] ಬೇತಮಂಗಲ–ಕ್ಯಾಸಂಬಳ್ಳಿ ರಸ್ತೆ,[51] ಮುಳಬಾಗಲು–ರಾಮಸಂದ್ರ ರಸ್ತೆ,[52] ಗೊರವನಹಳ್ಳಿ–ಬಂಗಾರಪೇಟೆ–ಟೇಕಲ್‌ರಸ್ತೆ,[53] ರಘುಪತಿ ಅಗ್ರಹಾರ–ಕ್ಯಾಲನೂರು ರಸ್ತೆ,[54] ಕುರ್ತಿಹಳ್ಳಿ–ಚಿಂತಾಮಣಿ,[55] ಕೋಲಾರ ರಸ್ತೆ, (ಬಾಗೇಪಲ್ಲಿ ತಾಲ್ಲೂಕಿನ ಮೂರು ರಸ್ತೆಗಳ ದುರಸ್ತಿ) ಗೂಳೂರು–ಕೊತ್ತಕೋಟೆ ರಸ್ತೆ, ನಲ್ಲಚೆರುವು– ರಾಸಚೆರುವು ರಸ್ತೆ, ನಲ್ಲಚರುವು– ಪುಲಿಗಲ್ ರಸ್ತೆ[56] ಕಾಮಗಾರಿಗಳು ಪೂರ್ಣಗೊಂಡವು.

1935 ರಲ್ಲಿ ಮಹಾರಾಜರ ಬೆಳ್ಳಿಹಬ್ಬದ ಆಚರಣೆ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳಿಂದ ದೇಣಿಗೆ ಸಂಗ್ರಹಿಸಿ ಅದನ್ನು ಅನ್ನಛತ್ರ ನಿರ್ವಹಣೆ, ವೈದ್ಯಕೀಯ ಸೇವೆಗಳನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಕೆ.ಸಿ. ರೆಡ್ಡಿ ಅವರು ನಿಧಿಗೆ ಕೋಲಾರ ಜಿಲ್ಲಾ ಬೋರ್ಡ್‌ನಿಂದ 250–00 ರೂ. ದೇಣಿಗೆ ನೀಡಲು ಕ್ರಮ ಕೈಗೊಂಡರು.[57] ಕೋಲಾರ ಜಿಲ್ಲೆಯಾದ್ಯಂತ ಹತ್ತು ಹಲವು ಆಸ್ಪತ್ರೆಗಳನ್ನು ಸ್ಥಾಪಿಸುವ ಹಾಗೂ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮವನ್ನು ಕೆ.ಸಿ. ರೆಡ್ಡಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಕೈಗೊಂಡರು. ಕೋಲಾರದಲ್ಲಿ ಜಿಲ್ಲಾ ಆಸ್ಪತ್ರೆ ಹಾಗೂ ಹೆರಿಗೆ ಆಸ್ಪತ್ರೆ ಸ್ಥಾಪಿಸಲು ಸುಮಾರು 85,000 ರೂಪಾಯಿಗಳ ಒಂದು ಯೋಜನೆ ಕೈಗೆತ್ತಿಕೊಂಡರು.

ಕೋಲಾರ ಜಿಲ್ಲಾ ಬೋರ್ಡ್, ಪುರಸಭೆ ಹಾಗೂ ಮಹಾರಾಜರ ಬೆಳ್ಳಿಹಬ್ಬದ ಆಚರಣೆ ನಿಧಿಯಿಂದ ಹಣವನ್ನು ಕ್ರೋಢೀಕರಿಸಿದ್ದಲ್ಲದೆ, ಖಾಸಗಿ ವ್ಯಕ್ತಿಗಳಿಂದ 25,000

47. L.B. File : ಯಲ್ದೂರು–ಅಗರ ರಸ್ತೆ : L.No.: R.3.C. 1386/35-36, Dt:30-09-1936
48. L.B. File : ಗೌರಿಬಿದನೂರು–ದಡಿನಾಯಕನಪಾಳ್ಯ ರಸ್ತೆ :L.A. 3/32-33, Dt:14-09-1933.
49. L.B. File : ಕೈವಾರ ರಸ್ತೆ : L.A. 47/31-32, Dated : 13-07-1933
50. L.B. File : ಕ್ಯಾಲನೂರು ರಸ್ತೆ : L.A. 5909/LB 10-33-37
51. L.B. File : ಬೇತಮಂಗಲ – ಕ್ಯಾಸಂಬಳ್ಳಿ ರಸ್ತೆ : No. L. 2925/L.B. 10-3-25, Dated : 06-03-1934
52. L.B. File : ಮಳಬಾಗಲು–ರಾಮಸಂದ್ರ ರಸ್ತೆ : Letter No. : A.6 L.A. 9/36-37, Dated : 26-04-1937.
53. L.B. File : ಗೊರವನಹಳ್ಳಿ – ಬಂಗಾರಪೇಟೆ – ಟೇಕಲ್ ರಸ್ತೆ : L.B. 10-35-1, Dated : 12-08-1935
54. L.B. File : ರಘುಪತಿ ಅಗ್ರಹಾರ–ಕ್ಯಾಲನೂರು ರಸ್ತೆ : L.B. 10-33-34, Dt : 09-06-1934
55. L.B. File : ಕುರ್ತಿಹಳ್ಳಿ – ಚಿಂತಾಮಣಿ : L.B. 10-33, Dated : 21-06-1934
56. L.B. File : ಗೂಳೂರು–ಕೊತ್ತಕೋಟೆ ರಸ್ತೆ, ನಲ್ಲಚರುವು–ರಾಸಚೆರುವು ರಸ್ತೆ, ನಲ್ಲಚರುವು – ಪುಲಿಗಲ್ ರಸ್ತೆ : L.B. 122-36, Dated : 24-05-1936.
57. L.B. File : A5-C, 2692/34-35, Dated : 27-03-1935.

ರೂಪಾಯಿಗಳನ್ನು ಸಂಗ್ರಹಿಸಿ ಒಂದು ಆಧುನಿಕ ಆಸ್ಪತ್ರೆ ನಿರ್ಮಾಣವಾಗಲು ಕಾರಣಕರ್ತರಾದರು.[58] ಮಂಚೇನಹಳ್ಳಿಯಲ್ಲಿ ಜಿಲ್ಲಾ ಬೋರ್ಡ್ ಆಸ್ಪತ್ರೆಯನ್ನು ಸ್ಥಾಪಿಸಲು ಕ್ರಮ ಕೈಗೊಂಡರು.[59] ಚಿಕ್ಕಬಳ್ಳಾಪುರದಲ್ಲಿ ಕಿಂಗ್‌ಜಾರ್ಜ್ ಐದನೆಯವರ ಸ್ಮರಣಾರ್ಥ ಮಕ್ಕಳ ಆರೋಗ್ಯ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಂಡರು.[60] ಶ್ರೀನಿವಾಸಪುರದ ಶ್ರೀಮಂತ ವರ್ತಕರಾದ ದೇವತ ಕೃಷ್ಣಯ್ಯಶೆಟ್ಟಿ ಅವರು ಸರ್ಕಾರ ಭೂಮಿ ಒದಗಿಸಿದರೆ ತಾವು ಶ್ರೀನಿವಾಸಪುರ ತಾಲ್ಲೂಕಿನ ಎರುಕಾಲುವೆ ಗ್ರಾಮದಲ್ಲಿ ಸ್ವತಃ ಖರ್ಚಿನಲ್ಲಿ ಆಸ್ಪತ್ರೆ ಕಟ್ಟಿಸಲು ಮುಂದೆ ಬಂದಾಗ ಕೆ.ಸಿ. ರೆಡ್ಡಿ ಆಸ್ಪತ್ರೆ ಕಟ್ಟಡಕ್ಕೆ ನಿವೇಶನ ದೊರಕಿಸಿಕೊಡಲು ಕ್ರಮ ಕೈಗೊಂಡರು.[61] ಚಿಕ್ಕಬಳ್ಳಾಪುರದಲ್ಲಿ ಕೆಲವು ಹರಿಜನರು ತಮಗೆ ವಾಸಕ್ಕೆ ನಿವೇಶನಗಳ ಕೋರಿ ಮನವಿ ಬಂದ ಹಿನ್ನೆಲೆಯಲ್ಲಿ ಕೆ.ಸಿ. ರೆಡ್ಡಿಯವರು ಚಿಕ್ಕಬಳ್ಳಾಪುರ ಪಟ್ಟಣದಲ್ಲಿ 'ಹರಿಜನ ಕಾಲೋನಿ' ಸ್ಥಾಪಿಸಲು ಜಮೀನನ್ನು ಒದಗಿಸಿಕೊಟ್ಟರು.[62]

ಕೋಲಾರ ಜಿಲ್ಲೆಯ ಮಣ್ಣು ಹಾಗೂ ಹವಾಗುಣ ರೇಷ್ಮೆ ಬೆಳೆಗೆ ಅನುಕೂಲಕರ ವಾಗಿದೆ ಎಂಬುದನ್ನು ಮನಗೊಂಡ ಕೆ.ಸಿ. ರೆಡ್ಡಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಸಂದರ್ಭದಲ್ಲಿ ರೇಷ್ಮೆಕೃಷಿಗೆ ಹಲವು ಪ್ರೋತ್ಸಾಹದಾಯಕ ಕ್ರಮಗಳನ್ನು ಕೈಗೊಂಡರು. 22–12–1934 ರಲ್ಲಿ FIRST MEMBER OF THE COUNCIL ಕೋಲಾರ ಜಿಲ್ಲಾಧಿಕಾರಿ ಹಾಗೂ ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಸ್ಥಳೀಯ ರೇಷ್ಮೆ ಬೆಳೆಗಾರರು ಒಂದು ಮನವಿಪತ್ರ ಸಲ್ಲಿಸಿ ರೇಷ್ಮೆಬಿತ್ತನೆ ಮೊಟ್ಟೆ ಅಭಾವ ತಲೆದೋರಿರುವುದಾ ಗಿಯೂ ಇದನ್ನು ಸರಿಪಡಿಸಲು ಚಿಂತಾಮಣಿ ತಾಲ್ಲೂಕಿನ ತಳಗವಾರದಲ್ಲಿ ಒಂದು ಬಿತ್ತನೆಕೋಠಿ ಸ್ಥಾಪಿಸಲು ಕೋರಿಕೆ ಸಲ್ಲಿಸಿದರು. ಜಿಲ್ಲಾಧಿಕಾರಿಯವರು ಮನವಿಗೆ ಸ್ಪಂದಿಸುತ್ತಾ ತಳಗವಾರ ಪ್ರವಾಸಿ ಮಂದಿರ ಉಪಯೋಗವಿಲ್ಲದೆ ಖಾಲಿ ಇರುವುದರಿಂದ ಅದನ್ನು ಜಿಲ್ಲಾ ಬೋರ್ಡ್‌ಗೆ ವಹಿಸಿಕೊಟ್ಟು ಅಲ್ಲಿ ಒಂದು ರೇಷ್ಮೆ ಬಿತ್ತನೆಕೋಠಿಯನ್ನು ಸ್ಥಾಪಿಸಲು ತೀರ್ಮಾನಿಸಿದರು. First Member of the Council ತಳಗವಾರದ ರೇಷ್ಮೆಕೋಠಿಗೆ ಅಗತ್ಯವಿರುವ ಸಿಬ್ಬಂದಿ ಹಾಗೂ ಹಣಕಾಸಿನ ನೆರವು ನೀಡುವ ಭರವಸೆ ನೀಡಿದರು. ಈ ಸಂಬಂಧ ಕೆ.ಸಿ.ರೆಡ್ಡಿ ಅವರು ಬಿತ್ತನೆಕೋಠಿ ಸ್ಥಾಪಿಸಲು ಜಿಲ್ಲಾ ಬೋರ್ಡ್‌ನಿಂದ 3,850 ರೂ.ಗಳನ್ನು ಬಿಡುಗಡೆ ಮಾಡಲು ತೀರ್ಮಾನ ಕೈಗೊಂಡರು.[63]

58. L.B. File : No. G, 103/65, 131-134-1, Dated : 21-05-1935.
59. L.B. File : F.No : 6-35 (1, 3, 5, 6) No. G. 7992-5, Med : 98-33-14, Dated : 03-07-1935.
60. L.B. File : C.C. / 84/36-37, Dated : 02-01-1937.
61. L.B. File : A.S.C. 3424/36-37, Dated :12-03-1937.
62. L.B. File : o. A5, LA- 125-35-36, Dated : 14-05-1936.
63. L.B. File : F.No. : 74-34 (1, 2, 3, 4) L.B. 1934-35, Dated : 04-01-1935.

1930ರ ದಶಕದಲ್ಲಿ ಗಾಂಧೀಜಿಯವರ ಖಾದಿ ಪ್ರಚಾರ ಮೈಸೂರು ರಾಜ್ಯದಲ್ಲಿ ಸಾಕಷ್ಟು ಪ್ರಚಾರ ಪಡೆಯಿತು. ಇದಕ್ಕೆ ಸರ್ಕಾರದ ಸಂಪೂರ್ಣ ಬೆಂಬಲವು ಕಾರಣವಾಗಿತ್ತು. ಮೈಸೂರು ಬಳಿಯ ಬದನವಾಳು ಖಾದಿ ಕೇಂದ್ರ ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಗಾಂಧೀಜಿಯವರ ಕಾರ್ಯಕ್ರಮಗಳಲ್ಲಿ ಅಪಾರ ಆಸಕ್ತಿ ಇದ್ದ ಕೆ.ಸಿ. ರೆಡ್ಡಿ ದಿನಾಂಕ 28–07–1934ರಲ್ಲಿ ನಡೆದ ಕೋಲಾರ ಜಿಲ್ಲಾ ಬೋರ್ಡ್ ಸಭೆಯಲ್ಲಿ ಒಂದು ಖಾದಿ ಕೇಂದ್ರವನ್ನು ಸ್ಥಾಪಿಸಲು ನಿರ್ಣಯ ಕೈಗೊಂಡರು. ಇದಕ್ಕೆ ಸಂಬಂಧಿಸಿದಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ನೆರವು ಪಡೆಯಲು ತೀರ್ಮಾನಿಸಲಾಯಿತು. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಈಗಾಗಲೇ ಯಶಸ್ವಿಯಾಗಿ ಕಾರ್ಯ ನಡೆಸುತ್ತಿರುವ ಬದನವಾಳು ಖಾದಿ ಕೇಂದ್ರ ವ್ಯವಸ್ಥಾಪಕರ ಸಹಾಯ ಪಡೆದು ಕೋಲಾರ ಜಿಲ್ಲೆಯಲ್ಲಿ ಖಾದಿ ಕೇಂದ್ರಕ್ಕೆ ಸೂಕ್ತ ಸ್ಥಳ ಪರಿಶೀಲನೆ ನಡೆಸಲು ತೀರ್ಮಾನಿಸಲಾಯಿತು.

ಬದನವಾಳು ಖಾದಿ ಕೇಂದ್ರದ ವ್ಯವಸ್ಥಾಪಕರು ಹಾಗೂ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಅವರು ಈ ಸಂಬಂಧ ಕೋಲಾರ ಜಿಲ್ಲೆಯ ಪ್ರವಾಸ ಮಾಡಿ ಮೂರು ಸ್ಥಳಗಳ ಪರಿಶೀಲನೆ ನಡೆಸಿದರು. ಅವುಗಳೆಂದರೆ ಗೌರಿಬಿದನೂರು ಬಳಿಯ ಹೊಸೂರು, ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಹಾಗೂ ಮುಳಬಾಗಿಲು ತಾಲ್ಲೂಕಿನ ತಾಯಲೂರು.

ಬದನವಾಳು ಖಾದಿ ಕೇಂದ್ರದ ವ್ಯವಸ್ಥಾಪಕರು ಹಾಗೂ ಕೆ.ಸಿ. ರೆಡ್ಡಿ ಅವರು ಗೌರಿಬಿದನೂರಿನ ಹೊಸೂರಿಗೆ ಭೇಟಿ ನೀಡಿ ಅಲ್ಲಿ ಖಾದಿ ಕೇಂದ್ರ ಸ್ಥಾಪಿಸಲು ಇರುವ ಸಂಪನ್ಮೂಲಗಳ ಸಮೀಕ್ಷೆ ನಡೆಸಿದರು. ಸಮೀಕ್ಷೆ ಸಂದರ್ಭದಲ್ಲಿ ಹೊಸೂರಿನ ಸಮೀಪದ ದೊಡ್ಡಹಟ್ಟಿ ಹಾಗೂ ಸಣ್ಣಹಟ್ಟಿ ಗ್ರಾಮಗಳಲ್ಲಿ ಹತ್ತಿಯನ್ನು ಬೆಳೆಯುತ್ತಿರುವುದನ್ನು ಗಮನಿಸಿದರು. ಹಳೆಯ ಕಾಲದ ಮಗ್ಗಗಳನ್ನು ಗ್ರಾಮಗಳಲ್ಲಿ ಸಂರಕ್ಷಿಸಲ್ಪಟ್ಟಿದ್ದನ್ನು ಗಮನಿಸಿದರು. ಮಹಿಳೆಯರು ನೂಲುವ ಕಲೆಯಲ್ಲಿ ಪರಿಣಿತಿ ಹೊಂದಿದ್ದರು. ಹೊಸೂರು ಗ್ರಾಮದಲ್ಲಿ ಇಪ್ಪತ್ತು ಆದಿ ಕರ್ನಾಟಕ ಕುಟುಂಬದವರ ಮಗ್ಗಗಳು ಅಸ್ತಿತ್ವದಲ್ಲಿದ್ದವು. ಇವರು ಮಿಲ್‌ನಿಂದ ತಯಾರಾದ ನೂಲನ್ನು ಬಳಸುತ್ತಿದ್ದರು. ಮಿಲ್‌ನಿಂದ ತಯಾರಾದ ಬಟ್ಟೆಗಳ ಪ್ರಾಬಲ್ಯದಿಂದಾಗಿ ಕೈಯಿಂದ ನೇಯ್ದ ದುಪ್ಪಟ ಹಾಗೂ ಹಚ್ಚಡಗಳಿಗೆ ಬೇಡಿಕೆ ಕಡಿಮೆಯಾಗಿರುವುದನ್ನು ಗಮನಿಸಿದರು. ಭೇಟಿಯ ಸಂದರ್ಭದಲ್ಲಿ ನೇಯ್ಗೆಯವರು (WEAVERS) ಹಿಂದೆ ಕೈಮಗ್ಗ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಸ್ಥಳೀಯ ರೈತಾಪಿ ವರ್ಗದವರು ನೇಕಾರರಿಂದ ಬಟ್ಟೆಕೊಂಡು ಪ್ರತಿಯಾಗಿ ಧಾನ್ಯವನ್ನು ನೀಡುತ್ತಿದ್ದರು. ಆಗ ನೇಕಾರರಿಗೆ ಕೈ ತುಂಬಾ ಕೆಲಸವಿತ್ತು ಎಂಬುದನ್ನು ನೆನಸಿಕೊಂಡರು. ಇತ್ತೀಚಿನ ವರ್ಷಗಳಲ್ಲಿ ಕೈಮಗ್ಗ ಉದ್ಯಮ ಇಳಿಮುಖವಾಗಿದೆ ಎಂದು ವಿಷಾದದಿಂದ ತಮ್ಮ ದುಃಖ ತೋಡಿಕೊಂಡರು.

ಇಬ್ಬರು ಸದಸ್ಯರು ನೆರೆಯ ಉಪ್ಪಾರಹಳ್ಳಿ ಗ್ರಾಮದಲ್ಲಿ ಒಂದು ಕುಟುಂಬ ಚರಕದಿಂದ ನೂಲುವುದನ್ನು ಪ್ರತ್ಯೇಕ್ಷವಾಗಿ ನೋಡಿದರು. ಆ ಕುಟುಂಬದ ವಯಸ್ಸಾದ ಮಹಿಳೆ ಕೂಡ ನೇಯ್ಗೆಯಲ್ಲಿ ಪರಿಣತೆ ಹೊಂದಿರುವುದು ಸದಸ್ಯರ ಗಮನಕ್ಕೆ ಬಂತು.

ಸ್ಥಳೀಯ ಶಿಕ್ಷಿತ ಯುವಕರು ಹೊಸೂರಿನಲ್ಲಿ ಒಂದು 'ಚರಕ ಸಂಸ್ಥೆ'ಯನ್ನು ಸ್ಥಾಪಿಸಿ ಖಾದಿ ಪ್ರಚಾರದಲ್ಲಿ ತೊಡಗಿರುವುದು ಕಂಡುಬಂತು. ಈ ಸಂಸ್ಥೆಯು ಚರಕದಿಂದ ನೂಲನ್ನು ತೆಗೆದು ಬದನವಾಳು ಖಾದಿ ಕೇಂದ್ರಕ್ಕೆ ಕಳುಹಿಸಿ ಅಲ್ಲಿ ಖಾದಿ ಬಟ್ಟೆ ತಯಾರಿಸಲು ಪ್ರಯತ್ನ ನಡೆಸಿತ್ತು. ಸಮಿತಿಯು ಹೊಸೂರು ಖಾದಿ ಕೇಂದ್ರ ಸ್ಥಾಪಿಸಲು ಎಲ್ಲಾ ಅನುಕೂಲಗಳನ್ನು ಹೊಂದಿದೆ ಎಂಬ ತೀರ್ಮಾನಕ್ಕೆ ಬಂದಿತು.

ಸಮಿತಿಯ ಇಬ್ಬರು ಸದಸ್ಯರು ಹೊಸೂರಿನಿಂದ ಬಾಗೇಪಲ್ಲಿಯ ಪಾತಪಾಳ್ಯಕ್ಕೆ ಭೇಟಿ ನೀಡಿದರು. ಪಾತಪಾಳ್ಯದಲ್ಲಿ ಹತ್ತಿ ಬೆಳೆಯುತ್ತಿಲ್ಲ ಹಾಗೂ ನೇಯ್ಗೆ ಉದ್ಯಮ ಪೂರ್ತಿ ನಶಿಸಿ ಹೋಗಿರುವುದನ್ನು ಮನಗೊಂಡರು. ಸ್ಥಳೀಯ ಕೆಲವು ವೈಶ್ಯ ಯುವಕರು ಕೈಮಗ್ಗ ಉದ್ಯಮವನ್ನು ಪುನಃಶ್ಚೇತನಗೊಳಿಸಲು ಪ್ರಯತ್ನ ನಡೆಸಿದ್ದರು. ಈ ಯುವಕರು ಒಂದು ಸಂಘ ಸ್ಥಾಪಿಸಿಕೊಂಡು ಸ್ವದೇಶಿ ಮಿಲ್‌ಗಳಲ್ಲಿ ತಯಾರಾದ ಕೈಮಗ್ಗದ ಬಟ್ಟೆಗಳನ್ನು ಮಾರಾಟ ಮಾಡುವ ಮಳಿಗೆ ತೆರೆದಿದ್ದರು. ಈ ವಸ್ತುಗಳಿಗೆ ಬೇಡಿಕೆ ಸಾಲದು ಎಂಬುದು ಅವರ ಅಭಿಪ್ರಾಯವಾಗಿತ್ತು.

ಸಮಿತಿಯು ಮುಳಬಾಗಿಲು ತಾಲ್ಲೂಕಿನ ತಾಯಲ್ಲೂರಿಗೆ ಭೇಟಿ ನೀಡಿ ಅಲ್ಲಿ ಖಾದಿ ಕೇಂದ್ರ ಸ್ಥಾಪಿಸಲು ಇರುವ ಅವಕಾಶಗಳ ಬಗ್ಗೆ ಸಮೀಕ್ಷೆ ನಡೆಸಿದರು. ತಾಯಲೂರು ಹಿಂದೆ ಒಂದು ದೊಡ್ಡ ನೇಯ್ಗೆ ಕೇಂದ್ರವಾಗಿದ್ದು ನೂರಕ್ಕೂ ಹೆಚ್ಚು ದೇವಾಂಗ ಕುಟುಂಬಗಳು ನೇಯ್ಗೆ ಉದ್ಯಮದಲ್ಲಿ ತೊಡಗಿದ್ದರು. ಸಮಿತಿ ಭೇಟಿ ನೀಡಿದ ಸಂದರ್ಭದಲ್ಲಿ ಕೈಮಗ್ಗ ಉದ್ಯಮವು ಸಂಪೂರ್ಣವಾಗಿ ಕ್ಷೀಣಿಸಿತ್ತು. ಸ್ಥಳೀಯ ಗ್ರಾಮಗಳಲ್ಲಿ ಹತ್ತಿಯನ್ನು ಕೂಡ ಬೆಳೆಯುತ್ತಿರಲಿಲ್ಲ. ಕೆಲವು ಯುವಕರು ಕೈಮಗ್ಗದಿಂದ ನೂಲುವ ಹಾಗೂ ಖಾದಿಬಟ್ಟೆ ಧರಿಸುವ ಸಂಕಲ್ಪ ತೊಟ್ಟಿರುವುದು ಗಮನಿಸಿದರು.

ಈ ಸಮೀಕ್ಷೆಯಿಂದ ಸಮಿತಿಯು ಖಾದಿ ಕೇಂದ್ರ ಸ್ಥಾಪಿಸಲು ಹೊಸೂರು ಸೂಕ್ತ ಸ್ಥಳವೆಂದು, ಹೊಸೂರಿಗೆ ರೈಲ್ವೆ ಸಂಪರ್ಕ ಹಾಗೂ ರಸ್ತೆ ಸಂಪರ್ಕ ಚೆನ್ನಾಗಿರುವುದು ಅನುಕೂಲಕರವಾಗಿದೆ ಎಂಬ ಅಭಿಪ್ರಾಯಕ್ಕೆ ಬಂದಿತು. ಹೊಸೂರು, ಉಪ್ಪಾರಹಳ್ಳಿ, ಯರ್ರಪೊತೇನಹಳ್ಳಿ, ಬೋನಸಂದ್ರ, ಭಕ್ತರಹಳ್ಳಿ, ಕೆಂಮ್ಮುಕೆರೆ, ಮೂಡಿಗೆರೆ, ಹೊಸಕೋಟೆ, ಕುರುಡಿ, ಚಂದ್ರನಾಗೂರು (ಚಂದ್ರನಾದೂರು) ಗ್ರಾಮಗಳಲ್ಲಿ ಖಾದಿ ಚಟುವಟಿಕೆಗಳನ್ನು ಪ್ರಾರಂಭಿಸಬಹುದು ಹಾಗೂ ಮೊದಲ ವರ್ಷದಲ್ಲಿ 300 ಚರಕಗಳನ್ನು ಪ್ರಾರಂಭಿಸಲು ಯೋಜನೆ ಹಾಕಿಕೊಳ್ಳಲಾಯಿತು. ಇದರ ಒಟ್ಟು ಅಂದಾಜು ವೆಚ್ಚ 3,600 ರೂಪಾಯಿಗಳು

ಎಂದು ತೀರ್ಮಾನಿಸಲಾಯಿತು. ಇಡೀ ಮೊತ್ತವನ್ನು ಭರಿಸಲು ಕೋಲಾರ ಜಿಲ್ಲಾ ಬೋರ್ಡ್ ಮುಂದೆ ಬಂದಿತು.[64]

1936ರ ನವೆಂಬರ್ 21 ರಿಂದ 23 ರವರೆಗೆ ಹನ್ನೊಂದನೆಯ ಮೈಸೂರು ರಾಜ್ಯಮಟ್ಟದ ಮಹಿಳಾ ಸಮ್ಮೇಳನ ಕೋಲಾರದಲ್ಲಿ ನಡೆಯಿತು. ಈ ಸಮ್ಮೇಳನವನ್ನು ಕೋಲಾರ ಜಿಲ್ಲೆಯ 'ಮಹಿಳಾ ಸೇವಾ ಸಮಾಜ'ವು ಆಯೋಜಿಸಿತ್ತು. ಮಹಿಳಾ ಸೇವಾ ಸಮಾಜವು ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಒಂದು ಮನವಿ ಸಲ್ಲಿಸಿ ಸಮ್ಮೇಳನ ಯಶಸ್ವಿಯಾಗಿ ನಡೆಸಲು ಹಣಕಾಸಿನ ನೆರವನ್ನು ಕೋರಿದರು. ಇದಕ್ಕೆ ಸ್ಪಂದಿಸಿದ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಅವರು ಜಿಲ್ಲಾ ಬೋರ್ಡ್‌ನ ವತಿಯಿಂದ ದೇಣಿಗೆ ನೀಡುದದಲ್ಲದೆ, ಕೆ.ಜಿ.ಎಫ್. ಸ್ಯಾನಿಟರಿಬೋರ್ಡ್‌ರವರ ಮೇಲೆ ಪ್ರಭಾವ ಬೀರಿ ಹಣಕಾಸಿನ ನೆರವು ದೊರಕಿಸಿ ಕೊಡಲು ಪ್ರಯತ್ನಿಸಿದರು. ಅತ್ಯಂತ ಯಶಸ್ವಿಯಾಗಿ ನಡೆದ ಮೂರುದಿವಸದ ಸಮ್ಮೇಳನದ ಖರ್ಚು–ವೆಚ್ಚಗಳನ್ನು ಭರಿಸಿ ಉಳಿದ ಹಣದಿಂದ 'ಕೋಲಾರ ಜಿಲ್ಲಾ ಮಹಿಳಾ ಸಮಾಜ' ತನ್ನದೇ ಆದ ಸ್ವಂತ ಕಟ್ಟಡ ಹೊಂದಲು ಸಾಧ್ಯವಾಯಿತು.[65] ಈ ಕಟ್ಟಡ ಇಂದಿನ ಕೋಲಾರದ ಸರ್ಕಾರಿ ಬಾಲಕರ ಕಾಲೇಜಿನ ಆವರಣದಲ್ಲಿದ್ದು, ಇದನ್ನು ಭಾಗೀರಥಮ್ಮ ಅಪ್ಪಾಜಿಗೌಡ ಅವರ ಅಧ್ಯಕ್ಷತೆಯಲ್ಲಿ, ದಿವಾನ್ ಮಿರ್ಜಾಇಸ್ಮಾಯಿಲ್ ಅವರ ಪತ್ನಿ ಲೇಡಿ ಮಿರ್ಜಾ ಇಸ್ಮಾಯಿಲ್ ಅವರು ದಿನಾಂಕ 22–11–1936 ರಂದು ಶಂಕುಸ್ಥಾಪನೆ ನೆರವೇರಿಸಿದ್ದಾರೆ.

ಜಿಲ್ಲಾ ಬೋರ್ಡ್‌ಗಳು ಗ್ರಾಮೀಣ ಪ್ರದೇಶದಲ್ಲಿ ಸಂತೆಗಳನ್ನು ಪ್ರಾರಂಭಿಸುವ ಮೂಲಕ ಸ್ಥಳೀಯ ಸರಕುಗಳು ಹಾಗೂ ಉತ್ಪನ್ನಗಳಿಗೆ ಪ್ರಾಥಮಿಕ ಮಾರುಕಟ್ಟೆಯ ಸೌಲಭ್ಯ ಒದಗಿಸುತ್ತಿದ್ದವು. ಈ ಸಂತೆಗಳು ಗ್ರಾಮೀಣ ಪ್ರದೇಶದ ರೈತರಿಗೆ, ಕುಶಲಕರ್ಮಿಗಳಿಗೆ ಹಾಗೂ ಬಳಕೆದಾರರಿಗೆ ಉತ್ಪನ್ನಗಳನ್ನು ಮಾರಲು ಹಾಗೂ ಕೊಳ್ಳಲು ಒಂದು ಉತ್ತಮ ವೇದಿಕೆಯಾಗಿತ್ತು. ಕೆ.ಸಿ. ರೆಡ್ಡಿ ಅವರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಅವಧಿಯಲ್ಲಿ ತಮ್ಮ ಸ್ವಂತ ಗ್ರಾಮವಾದ ಕ್ಯಾಸಂಬಳ್ಳಿ ಸಂತೆ,[66] ಬಂಗಾರಪೇಟೆ ತಾಲ್ಲೂಕಿನ ಬೇತಮಂಗಲ ಸಂತೆ[67] ಹಾಗೂ ಚಿಂತಾಮಣಿ ತಾಲ್ಲೂಕಿನ ಈರಗಂಪಲ್ಲಿ ಸಂತೆಗಳನ್ನು[68] ಸ್ಥಾಪಿಸಲು ಕ್ರಮ ಕೈಗೊಂಡು ಗ್ರಾಮೀಣ ಆರ್ಥಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದುದಲ್ಲದೆ ಜಿಲ್ಲಾ ಬೋರ್ಡ್‌ಗೆ ಆದಾಯ ಬರಲು ಕ್ರಮ ಕೈಗೊಂಡರು. ಈ ಎಲ್ಲಾ ಸಾಧನೆಗಳು ಕೆ.ಸಿ.ರೆಡ್ಡಿ ಅವರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದಾಗ ಘಟಿಸಿದುದನ್ನು ಗಮನಿಸಿದರೆ

---

64. L.B. File : F.No. : 18/34-35, Dated : 08-07-1935.
65. L.B. File : L.B. 73-36, Dated : 02-11-1936.
66. L.B. File : ಕ್ಯಾಸಂಬಳ್ಳಿ ಸಂತೆ : L.B. 34-37-36, Dated : 09-11-1937.
67. L.B. File : ಬೇತಮಂಗಲ ಸಂತೆ : L.B. 10-33, Dated : 01-03-1934.
68. L.B. File : ಈರಗಂಪಲ್ಲಿ ಸಂತೆ : L.B. 28-36 (1 to 2), Dated : 13-07-1936.

ರೆಡ್ಡಿ ಅವರ ಪ್ರತಿಫಲಾಪೇಕ್ಷೆ ಇಲ್ಲದ ನಿಸ್ವಾರ್ಥ ಸೇವೆಯ ಪರಿಣಾಮದಿಂದ ಆದ ಸಾಧನೆಗಳೆಂದು ಗುರುತಿಸಬಹುದು.

8. ಸ್ಥಳೀಯ ಸಂಸ್ಥೆಗಳ ಸುಧಾರಣೆ ಮತ್ತು ಕೆ.ಸಿ. ರೆಡ್ಡಿ

ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಕೆ.ಸಿ. ರೆಡ್ಡಿ ಅವರು ಪಡೆದ ಅನುಭವ, ಸ್ಥಳೀಯ ಸಂಸ್ಥೆಗಳನ್ನು ಕುರಿತು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅಧಿಕೃತವಾಗಿ ಮಾತನಾಡಲು ಹಾಗೂ ಸುಧಾರಣೆಗಳನ್ನು ಕೈಗೊಳ್ಳಲು ಸಹಕಾರಿಯಾಯಿತು.

ಮೈಸೂರು ಸರ್ಕಾರವು 1906ರಲ್ಲಿ ಜಾರಿಗೊಳಿಸಿದ 'ಮೈನರ್ ಮುನ್ಸಿಪಾಲಿಟಿ ಕಾಯಿದೆ' ಯನ್ನು ಮಾರ್ಪಾಡು ಮಾಡಿ, ಸ್ಥಳೀಯ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಒಂದು ತಿದ್ದುಪಡಿ ಮಸೂದೆಯನ್ನು 1933ರಲ್ಲಿ ತರಲು ತೀರ್ಮಾನಿಸಿ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು. ಕೆ. ಮ್ಯಾಥನ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ಕೆ.ಸಿ. ರೆಡ್ಡಿ ಒಳಗೊಂಡಂತೆ ಹನ್ನೆರಡು ಜನ ಸದಸ್ಯರಿದ್ದರು. ಈ ಸಮಿತಿಯು ನಗರ ಮುನ್ಸಿಪಾಲಿಟಿ, ಪಟ್ಟಣ ಮುನ್ಸಿಪಾಲಿಟಿ ಹಾಗೂ ಮೈನರ್ ಮುನ್ಸಿಪಾಲಿಟಿಗಳಿಗೆ ಪ್ರತ್ಯೇಕ ಕಾಯಿದೆಗಳನ್ನು ರೂಪಿಸಿ 25–06–1933ರಲ್ಲಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತು. ವರದಿಯನ್ನು ಒಪ್ಪಿದ ಸರ್ಕಾರವು 01–08–1933ರಂದು ಶಾಸನ ರೂಪದಲ್ಲಿ ಜಾರಿಗೆ ತಂದಿತು.[69]

1936 ರಲ್ಲಿ ಅಖಿಲ ಭಾರತ ಸ್ಥಳೀಯ ಸರ್ಕಾರಗಳ ಸಮ್ಮೇಳನವು ದೆಹಲಿಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಅವರು ಭಾಗವಹಿಸಿದ್ದರು.[70] ಕೋಲಾರ ಜಿಲ್ಲಾ ಬೋರ್ಡ್ ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ಮಹಾಸಂಘದ ಸದಸ್ಯತ್ವ ಪಡೆದುಕೊಳ್ಳುವಲ್ಲಿ ಯಶಸ್ವಿಯಾಯಿತು.[71]

1937ರಲ್ಲಿ 'ಹಿಂದೂ ಪತ್ರಿಕೆ'ಯ 'ಮಹಾರಾಜರ ಆಡಳಿತ ಸುಧಾರಣೆ'ಗಳ ಕುರಿತು ಒಂದು ಕೃತಿಯನ್ನು ಹೊರತಂದಿತ್ತು. ಆ ಕೃತಿಯಲ್ಲಿ ಹಲವು ಗಣ್ಯರು ಮೈಸೂರು ರಾಜ್ಯದಲ್ಲಿ ಮಹಾರಾಜರ ಆಳ್ವಿಕೆ ಸಂದರ್ಭದಲ್ಲಿ ಆದ ಆರ್ಥಿಕ, ಸಾಮಾಜಿಕ ಹಾಗೂ ಆಡಳಿತಾತ್ಮಕ ಸುಧಾರಣೆಗಳ ಬಗ್ಗೆ ಲೇಖನಗಳನ್ನು ಪ್ರಕಟಿಸಿತು. ಈ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿ 'ಸ್ಥಳೀಯ ಸಂಸ್ಥೆಗಳ ಕಾರ್ಯವೈಖರಿಗಳ' ಬಗ್ಗೆ ಕೆ.ಸಿ. ರೆಡ್ಡಿ ಅವರ ಒಂದು ವಿಚಾರ ಪೂರಿತ ಲೇಖನವಿದೆ. ಈ ಲೇಖನದಲ್ಲಿ ರೆಡ್ಡಿ ಅವರು ಸ್ಥಳೀಯ ಸಂಸ್ಥೆಗಳ ಉಗಮ, ವಿಕಾಸ ಹಾಗೂ ಕಾರ್ಯವೈಖರಿಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ.

---

69. BASAVARAJ. N. AKKI : Municipal Administration in Princely State of Mysore : 1862 - 1956, P-87.
70. L.B. File : 83-35/36 (3 to 12), Dated : 30-12-1935.
71. L.B. File : 56-36 (1, 2, 3, 4), Dated : 18-06-1936.

ಸ್ಥಳೀಯ ಸಂಸ್ಥೆಗಳ ಮಹತ್ವವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ರೆಡ್ಡಿ ಅವರು 1909ರ ವಿಕೇಂದ್ರಿಕರಣ ಸಮಿತಿ ಹಾಗೂ ಗೋಖಲೆ ಅವರ ಅಭಿಪ್ರಾಯಗಳನ್ನು ಸ್ಮರಿಸುತ್ತಾರೆ. "ರಾಷ್ಟ್ರ ನಾಯಕ ಗೋಪಾಲಕೃಷ್ಣ ಗೋಖಲೆ ಅವರು ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮದ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಗ್ರಾಮಗಳು ಅತ್ಯಂತ ಪ್ರಾಚೀನ ಆಡಳಿತ ಘಟಕಗಳೆಂದು, ಗ್ರಾಮವಾಸಿಗಳು ಒಬ್ಬರಿಗೊಬ್ಬರು ಪರಿಚಯವಿರುವ ಕಾರಣ ಹಾಗೂ ಅವರೆಲ್ಲರ ಮೂಲಭೂತ ಅಗತ್ಯಗಳು ಒಂದೇ ಆಗಿರುವುದರಿಂದ ಗ್ರಾಮಾಡಳಿತ ವ್ಯವಸ್ಥೆಯನ್ನು ಪೋಷಿಸಿ, ಬೆಳೆಸಿ, ಭದ್ರಪಡಿಸಬೇಕೆಂದು ಪ್ರತಿಪಾದಿಸಿದರು.

1912ರಲ್ಲಿ ಕೇಂದ್ರ ಶಾಸನಸಭೆಯಲ್ಲಿ ಭಾಷಣ ಮಾಡಿದ ಗೋಖಲೆ ಅವರ ಅಭಿಪ್ರಾಯವನ್ನು ಸ್ಮರಿಸುವ ಕೆ.ಸಿ. ರೆಡ್ಡಿ ಅವರು ಸ್ಥಳೀಯ ಆಡಳಿತ ಜವಾಬ್ದಾರಿ ಹೊತ್ತಿರುವ ವ್ಯಕ್ತಿಗಳಿಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅನುಭವವಿರಬೇಕು ಎಂಬುದಾಗಿ ಪ್ರತಿಪಾದಿಸಿದರು. ಹೀಗೆ ಗ್ರಾಮಗಳ ಬುನಾದಿಯ ಮೇಲೆ ಸ್ಥಾಪನೆಯಾದ ಸ್ಥಳೀಯ ಆಡಳಿತ ವ್ಯವಸ್ಥೆ ಹಂತ ಹಂತವಾಗಿ ವಿಕಸನಗೊಂಡು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಬೋರ್ಡ್ ಸ್ಥಾಪನೆಯಾಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಜಿಲ್ಲಾ ಬೋರ್ಡ್ ಕೇವಲ ಮೇಲ್ವಿಚಾರಣೆ ಹಾಗೂ ಸಮನ್ವಯ (Co-Ordinating) ಕಾರ್ಯಗಳನ್ನು ನಿರ್ವಹಿಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದುದನ್ನು ಗಮನಿಸಬಹುದು.

ಮೈಸೂರು ರಾಜ್ಯದಲ್ಲಿ ಸ್ಥಳೀಯ ಸರ್ಕಾರಗಳ ಸ್ವರೂಪ, ಸಾಧನೆ ಹಾಗೂ ವೈಫಲ್ಯಗಳನ್ನು ಕುರಿತು ಕೆ.ಸಿ. ರೆಡ್ಡಿ ಲೇಖನದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ 17,000 ಗ್ರಾಮಗಳಿದ್ದು, ಒಟ್ಟು 11,257 ಗ್ರಾಮ ಪಂಚಾಯಿತಿಗಳಿರುವುದಾಗಿ ಕೆ.ಸಿ. ರೆಡ್ಡಿ ಪ್ರಸ್ತಾಪಿಸುತ್ತಾರೆ. ರಾಜ್ಯದ ಗ್ರಾಮ ಪಂಚಾಯಿತಿಗಳು ನಿಯಮಾನುಸಾರ ಸಭೆಗಳನ್ನು ನಡೆಸುವುದು, ತೆರಿಗೆ ಸಂಗ್ರಹಣೆ ಹಾಗೂ ಸ್ಥಳೀಯ ವ್ಯವಹಾರಗಳನ್ನು ನಿಭಾಯಿಸುವಲ್ಲಿ ಅವು ತೋರುವ ದಕ್ಷತೆಯನ್ನು ಆಧರಿಸಿ ಗ್ರಾಮ ಪಂಚಾಯಿತಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸುತ್ತಾರೆ. ಅವುಗಳಲ್ಲಿ 3,295 ಉತ್ತಮ ಪಂಚಾಯಿತಿಗಳೆಂದು, 4,320 INDIFERENT ಪಂಚಾಯಿತಿಗಳೆಂದು ಹಾಗೂ 3,642 BAD ಪಂಚಾಯಿತಿಗಳೆಂದು ವಿಭಜಿಸುತ್ತಾರೆ. ಮೈಸೂರು ಸಂಸ್ಥಾನದ ಗ್ರಾಮ ಪಂಚಾಯಿತಿಗಳ ಸಾಧನೆಗಳ ಬಗ್ಗೆ ಕೆ.ಸಿ. ರೆಡ್ಡಿ ಅಂಕಿ-ಅಂಶಗಳನ್ನ ನೀಡುತ್ತಾರೆ. 'ಮೈಸೂರು ರಾಜ್ಯದ ಗ್ರಾಮ ಪಂಚಾಯಿತಿಗಳ ವಾರ್ಷಿಕ ಆಯ-ವ್ಯಯ 1934-35ನೇ ಸಾಲಿಗೆ ಸುಮಾರು 9 ಲಕ್ಷ ರೂ. ಇತ್ತು. ಪಂಚಾಯಿತಿಗಳ ನಗದು ಮೊಬಲಗು 30 ಲಕ್ಷಕ್ಕೂ ಮೀರಿತ್ತು. ಗ್ರಾಮ ಪಂಚಾಯಿತಿಗಳು ಗ್ರಾಮಸ್ಥರಿಂದ 40 ಲಕ್ಷದಷ್ಟು ತೆರಿಗೆಯನ್ನು ಬಾಕಿ ವಸೂಲು ಮಾಡಬೇಕಾಗಿತ್ತು ಎಂದಿದ್ದಾರೆ.

ಮೈಸೂರು ಸಂಸ್ಥಾನದ ಗ್ರಾಮ ಪಂಚಾಯಿತಿಗಳು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರವಾದ ಪಟ್ಟಿಯನ್ನು ಕೆ.ಸಿ. ರೆಡ್ಡಿ ತಮ್ಮ ಲೇಖನದಲ್ಲಿ ನೀಡುತ್ತಾರೆ.

1 ಗ್ರಾಮ ಚಾವಡಿಗಳ ನಿರ್ಮಾಣ
2 ಗ್ರಾಮ ದ್ವಾರಗಳ ನಿರ್ಮಾಣ
3 ಕುಡಿಯುವ ನೀರಿನ ಬಾವಿಗಳನ್ನು ತೋಡುವುದು
4 ಗ್ರಾಮಸ್ಥರಿಗೆ ವೈದ್ಯಕೀಯ ಸೇವೆ
5 ಒಳ ಚರಂಡಿ ವ್ಯವಸ್ಥೆ
6 ರಸ್ತೆಗಳ ನಿರ್ಮಾಣ
7 ಉತ್ತಮ ತಳಿಯ ಹೋರಿಗಳನ್ನು ಸಾಕುವುದು
8 ರೈತರಿಗೆ ಆಧುನಿಕ ನೇಗಿಲುಗಳನ್ನು ಹಾಗೂ ಇತರೆ ಕೃಷಿ ಉಪಕರಣಗಳನ್ನು ವಿತರಿಸುವುದು
9 ಅಂಚೆ ವ್ಯವಸ್ಥೆ
10 ಗ್ರಾಮ ಅರಣ್ಯಗಳ ಸಂರಕ್ಷಣೆ
11 ಗ್ರಾಮ ಕೆರೆಗಳ ಉಸ್ತುವಾರಿ
12 ಗ್ರಾಮ ಶಾಲೆಗಳ ನಿರ್ವಹಣೆ
13 ಗ್ರಂಥಾಲಯಗಳ ನಿರ್ವಹಣೆ ....ಇತ್ಯಾದಿಗಳು.

ತಮ್ಮ ಲೇಖನದಲ್ಲಿ ಗ್ರಾಮದ ಪಂಚಾಯಿತಿ ವ್ಯವಸ್ಥೆಯ ಯಶಸ್ಸಿಗೆ ಗ್ರಾಮಸ್ಥರ ನಾಗರೀಕ ಪ್ರಜ್ಞೆ ಅಗತ್ಯ ಹಾಗೂ ಅನಿವಾರ್ಯ ಎಂಬ ಅಂಶಗಳನ್ನು ಪ್ರತಿಪಾದಿಸುತ್ತಾರೆ. ಮೈಸೂರು ರಾಜ್ಯದ ಗ್ರಾಮ ಪಂಚಾಯಿತಿ ವ್ಯವಸ್ಥೆ ನಿರೀಕ್ಷಿತ ಫಲ ನೀಡದೆ ಇರಲು ಸ್ಥಳೀಯ ಗ್ರಾಮಸ್ಥರಲ್ಲಿ ನಾಗರೀಕ ಪ್ರಜ್ಞೆ ಕೊರತೆ ಬಹಳ ಮುಖ್ಯ ಕಾರಣ ಎಂದು ಕೆ.ಸಿ. ರೆಡ್ಡಿ ಅಭಿಪ್ರಾಯ ಪಡುತ್ತಾರೆ. ಗ್ರಾಮೀಣ ಪ್ರದೇಶದ ರೈತರ ಬಡತನ IGNORANCE ಹಾಗೂ ಅನಕ್ಷರತೆ ಬಹುಮುಖ್ಯ ಸಮಸ್ಯೆಗಳು ಎಂದು ಪ್ರತಿಪಾದಿಸುತ್ತಾರೆ. ಹಾಗೆಯೇ ಆಡಳಿತ ವ್ಯವಸ್ಥೆಯಲ್ಲಿ ಪಂಚಾಯಿತಿಗಳಿಗೆ ಸಾಕಷ್ಟು ಅಧಿಕಾರ, ಸ್ವಾಯತ್ತತೆ ಹಾಗೂ ಸಂಪನ್ಮೂಲಗಳ ಕೊರತೆಯಿಂದಾಗಿ ಗ್ರಾಮ ಪಂಚಾಯಿತಿ ವ್ಯವಸ್ಥೆ ಸೊರಗಿದೆ. ಪಂಚಾಯಿತಿಗಳ ನಿಷ್ಕ್ರಿಯತೆಗೆ ಸರ್ಕಾರ ಕೂಡ ಕಾರಣ ಎಂಬುದಾಗಿ ಕೆ.ಸಿ. ರೆಡ್ಡಿ ದೂರುತ್ತಾರೆ. ಮೈಸೂರು ರಾಜ್ಯದ ಪ್ರಥಮ ದಿವಾನರಾಗಿದ್ದ ಸಿ. ರಂಗಾಚಾರ್ಲು ಬಹಳ ಹಿಂದೆಯೇ ಗ್ರಾಮಾಡಳಿತ ವ್ಯವಸ್ಥೆಗೆ ವಿಶೇಷ ಆದ್ಯತೆ ನೀಡಿದ್ದರು. ಸ್ಥಳೀಯ ಸಂಸ್ಥೆಯ ಸದಸ್ಯರು ನೇರವಾಗಿ ಪ್ರಜೆಗಳಿಂದ ಚುನಾಯಿತರಾಗಬೇಕೆಂಬುದು ಅವರ ಆಶಯವಾಗಿತ್ತು. ಸ್ಥಳೀಯ ಸಂಸ್ಥೆಗಳಿಗೆ ಅರ್ಧದಷ್ಟು ಅಥವಾ 1/3ರಷ್ಟು ಸದಸ್ಯರು ಸರ್ಕಾರ ನಾಮಕರಣ ಮಾಡುವ ಪದ್ಧತಿಯನ್ನು ದಿವಾನರು ಅನವಶ್ಯಕ ಹಾಗೂ ಒಪ್ಪಲಾಗದು ಎಂಬ ಅಭಿಪ್ರಾಯ

ವ್ಯಕ್ತಪಡಿಸಿರುತ್ತಾರೆ. ರಂಗಾಚಾರ್ಲು ಅವರ ಆಶಯಗಳು ನನಸಾಗದಿದ್ದುದಕ್ಕೆ ಕೆ.ಸಿ. ರೆಡ್ಡಿ ಅವರು ನೋವನ್ನು ವ್ಯಕ್ತಪಡಿಸುತ್ತಾರೆ.

1885ರಲ್ಲಿ ಮೈಸೂರು ಲೋಕಲ್‌ಬೋರ್ಡ್ ಮಸೂದೆ ಜಾರಿಗೆ ಬಂದ ಸಂದರ್ಭದಲ್ಲಿ ಬ್ರಿಟಿಷ್ ರೆಸಿಡೆಂಟ್ GIRDLE STONE ರವರು ಬರೆದ ಟಿಪ್ಪಣಿಯನ್ನು ಕೆ.ಸಿ.ರೆಡ್ಡಿ ಅವರು ಉದಾಹರಿಸುತ್ತಾರೆ. "ಪ್ರಸ್ತುತ ಮಸೂದೆಯಲ್ಲಿ ಸ್ಥಳೀಯ ಸರ್ಕಾರಗಳು ಕೇವಲ ತೋರಿಕೆಗೆ ಮಾತ್ರ ಸ್ಥಳೀಯವಾಗಿದ್ದು, ಈ ಸಮಿತಿಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೇ ತುಂಬಿದ್ದಾರೆ. ಚುನಾಯಿತ ಪ್ರತಿನಿಧಿಗಳು ಅಧಿಕಾರಿಗಳ ತೀರ್ಮಾನಗಳಿಗೆ ತಲೆಯಾಡಿಸುವುದಲ್ಲದೆ, ಅನ್ಯಮಾರ್ಗವಿಲ್ಲದಂತಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಅಧಿಕಾರಿಗಳೇ ತುಂಬಿರುವ ಈ ವ್ಯವಸ್ಥೆ ಸ್ಥಳೀಯ ಸಂಸ್ಥೆಗಳ ಸಿದ್ಧಾಂತ ಹಾಗೂ ವ್ಯವಸ್ಥೆಗೆ ಅಪಚಾರ. ಇಂತಹ ಪರಿಸ್ಥಿತಿಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ಹೆಚ್ಚಿನದೇನನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ" ಎಂಬ ಅಭಿಪ್ರಾಯವ್ಯಕ್ತಪಡಿಸುತ್ತಾರೆ. ಕೆ.ಸಿ.ರೆಡ್ಡಿ ಅವರು ಸರ್ಕಾರದ ಹಸ್ತಕ್ಷೇಪ, ಅಧಿಕಾರಿಗಳ ಬಿಗಿಮುಷ್ಠಿಯಿಂದ ಹೊರಬರುವವರೆಗೂ ಸ್ಥಳೀಯ ಸಂಸ್ಥೆಗಳು ನಿರೀಕ್ಷಿತ ಸಾಧನೆ ಮಾಡಲು ಸಾಧ್ಯವಿಲ್ಲವೆಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

1917ರಲ್ಲಿ ಸರ್. ಎ.ಆರ್. ಬ್ಯಾನರ್ಜಿ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಾ "ಚುನಾಯಿತ ಸದಸ್ಯರು ಸರ್ಕಾರಿ ಅಧಿಕಾರಿಗಳ ಅಧೀನದಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಇಡೀ ವ್ಯವಸ್ಥೆ ಸೊರಗಿದೆ" ಎಂಬ ನಿಲುವನ್ನು ತಿಳಿಯುತ್ತಾರೆ. ಪ್ರಪಂಚದ ಎಲ್ಲೆಡೆ ಹಾಗೂ ಭಾರತದ ಇತರೆ ರಾಜ್ಯಗಳಲ್ಲೂ ಕೂಡ ಸ್ಥಳೀಯ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿ ಇರುವುದು ನಿಜವಾದರೂ ಕೂಡ ಇದು ಕಡಮೆಯಾಗದ ಹೊರತು ಸ್ಥಳೀಯ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ಕೆ.ಸಿ. ರೆಡ್ಡಿ ಅಭಿಪ್ರಾಯ ಪಡುತ್ತಾರೆ. ಅಧಿಕಾರಿಗಳು ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನ ಮಾಡಿ ಅವರಲ್ಲಿ ನಾಗರೀಕ ಪ್ರಜ್ಞೆ ಜಾಗೃತಿಗೊಳಿಸುವ ಕಾರ್ಯ ಆಗಬೇಕಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ತಮ್ಮ ಲೇಖನದಲ್ಲಿ ಮೈಸೂರು ಸಂಸ್ಥಾನದ ಸ್ವಯಂ ಆಡಳಿತ ವ್ಯವಸ್ಥೆಯಲ್ಲಿ ಇರುವ ಮತ್ತೊಂದು ಲೋಪವನ್ನು ಸ್ವತಃ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದು, ಅನುಭವ ಇರುವ ಕೆ.ಸಿ. ರೆಡ್ಡಿ ಪ್ರಸ್ತಾಪಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಸ್ವಯಂ ಆಡಳಿತ ವ್ಯವಸ್ಥೆಯನ್ನು ಎರಡು ಹಂತಗಳಲ್ಲಿ ಆಯೋಜಿಸಲಾಗಿದೆ. ಗ್ರಾಮ ಪಂಚಾಯಿತಿ ಮೊದಲ ಹಂತವಾದರೆ, ಜಿಲ್ಲಾ ಬೋರ್ಡ್ ಎರಡನೆಯ ಹಂತವಾಗಿದೆ. ಈ ಎರಡು ಹಂತಗಳ ನಡುವೆ ಸೂಕ್ತ ಹೊಂದಾಣಿಕೆ ಇಲ್ಲ. ಕೆಲವರು ಗ್ರಾಮ ಪಂಚಾಯಿತಿಗಳು ಜಿಲ್ಲಾಬೋರ್ಡ್ ಅಧೀನದಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಆಗ್ರಹ ಮಂಡಿಸುತ್ತಾರೆ, ಇದು ಕೂಡ ಸರಿಯಲ್ಲ. ಗ್ರಾಮ ಪಂಚಾಯಿತಿಗಳು ಹೇಗೆ ಸರ್ಕಾರದ ಅಧಿಕಾರಿಗಳ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕೊ ಹಾಗೆಯೇ ಜಿಲ್ಲಾ ಬೋರ್ಡ್ ಕೂಡ ಗ್ರಾಮ ಪಂಚಾಯಿತಿಗಳ

ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂಬ ಸ್ಪಷ್ಟ ಅಭಿಪ್ರಾಯ ಕೆ.ಸಿ.ರೆಡ್ಡಿ ಅವರದಾಗಿತ್ತು. ಸ್ವತಃ ಎರಡು ಬಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಜಿಲ್ಲಾ ಬೋರ್ಡ್, ಗ್ರಾಮ ಪಂಚಾಯಿತಿ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ನಿಲುವು ತಳೆದಿದುದು ಪ್ರಶಂಸಾರ್ಹ.

ಸ್ಥಳೀಯ ಆಡಳಿತ ವ್ಯವಸ್ಥೆಯ ಮತ್ತೊಂದು ಸಮಸ್ಯೆಯ ಬಗ್ಗೆ ಕೆ.ಸಿ. ರೆಡ್ಡಿ ಪ್ರಸ್ತಾಪಿಸುತ್ತಾರೆ. ಗ್ರಾಮ ಪಂಚಾಯಿತಿ ಹಂತದಲ್ಲಿ ಕೋಮು ವಿಚಾರಗಳು ಪ್ರಧಾನ ವಾಗಿಲ್ಲವಾದರು, ಜಿಲ್ಲಾ ಬೋರ್ಡ್ ಹಂತದಲ್ಲಿ ವಿಶೇಷವಾಗಿ ಚುನಾವಣೆಗಳ ಸಂದರ್ಭ ದಲ್ಲಿ ಕೋಮುಭಾವನೆಗಳು ಕಾಣಿಸಿಕೊಂಡರು ಕೂಡ, ಚುನಾವಣೆ ಮುಗಿದ ನಂತರ ಈ ಭಾವನೆಗಳು ಮಾಯವಾಗಿ ಸದಸ್ಯರು ಪಕ್ಷಭೇದ ಮರೆತು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗುವುದನ್ನು ಮೈಸೂರು ಸಂಸ್ಥಾನದಲ್ಲಿ ನೋಡಬಹುದು ಎಂಬುದಾಗಿ ಕೆ.ಸಿ. ರೆಡ್ಡಿ ಹೇಳುತ್ತಾರೆ. ಮೈಸೂರು ಸಂಸ್ಥಾನದ ಸ್ಥಳೀಯ ಸಂಸ್ಥೆಗಳ ಸದಸ್ಯರ ಪ್ರಾಮಾಣಿಕತೆ, INTEGRITY ಗುಣವನ್ನು ಕೆ.ಸಿ. ರೆಡ್ಡಿ ತಮ್ಮ ಲೇಖನದಲ್ಲಿ ಕೊಂಡಾಡಿದ್ದಾರೆ.[72]

ಒಟ್ಟಾರೆ ಈ ಎಲ್ಲಾ ವಿವರಗಳನ್ನು ಗಮನಿಸಿದರೆ ಸ್ಥಳೀಯ ಸಂಸ್ಥೆಗಳ ಸುಧಾರಣೆಯಲ್ಲಿ ಕೆ.ಸಿ. ರೆಡ್ಡಿಯವರ ಮಹತ್ವದ ಸಾಧನೆಯನ್ನು ಗುರುತಿಸಬಹುದು.

♦♦

72. K.C. REDDY : Local Self Government in Mysore, The Village Panchayat P. 92-103, The Hindu - 1937.

ಅಧ್ಯಾಯ – 3

ಬ್ರಾಹ್ಮಣೇತರ ಚಳವಳಿ ಮತ್ತು ಕೆ.ಸಿ. ರೆಡ್ಡಿ

1. ಹಿನ್ನೆಲೆ

ಕ್ರಿ.ಶ. 1881ರಲ್ಲಿ ಮೈಸೂರು ಮಹಾರಾಜರಿಗೆ ಸಂಸ್ಥಾನದ ಸರ್ವಾಧಿಕಾರತ್ವ ಲಭಿಸಿದ ನಂತರ ಮಹಾರಾಜರ ಅಧೀನದಲ್ಲಿ ಹಾಗೂ ಅವರ ನಿರ್ದೇಶನಕ್ಕೆ ಅನುಗುಣವಾಗಿ ಆಡಳಿತ ನಡೆಸಲು ಕಾರ್ಯಾಂಗ ಸಮಿತಿ ರಚಿತವಾಯಿತು. ಈ ಸಮಿತಿಯ ಮುಖ್ಯಸ್ಥರಾಗಿ ದಿವಾನರು ಆಡಳಿತ ಜವಾಬ್ದಾರಿ ನಿರ್ವಹಿಸಿದರು. ಅವರ ನೆರವಿಗೆ ಕೌನ್ಸಿಲರ್‌ಗಳೆಂಬ ಇಬ್ಬರು ಸದಸ್ಯರಿರುತ್ತಿದ್ದರು. ಜನಾಭಿಪ್ರಾಯ ಪ್ರತಿಬಿಂಬಿಸಿ ಆಡಳಿತ ವಿಷಯಗಳಲ್ಲಿ ಸಲಹೆ ನೀಡಲು ಮೈಸೂರು ಪ್ರಜಾಪ್ರತಿನಿಧಿ ಸಭೆ 1881ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಂಸ್ಥಾನಗಳಲ್ಲೆಲ್ಲ ಪ್ರಥಮವಾಗಿ ಸ್ಥಾಪನೆಯಾದ ಪ್ರಜಾಪ್ರತಿನಿಧಿ ಸಭೆ ಇದಾಗಿತ್ತು. ವರ್ಷಕ್ಕೆ ಒಮ್ಮೆ ಸಭೆ ಸೇರುತ್ತಿದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಶೇಷವಾಗಿ ನಾಮಕರಣಗೊಂಡ ಭೂ ಹಿಡುವಳಿದಾರರು, ವ್ಯಾಪಾರಸ್ಥರು, ಪ್ಲಾಂಟರುಗಳು ಸದಸ್ಯರಾಗಿದ್ದು ಹಿಂದಿನ ಸಾಲಿನ ಆಡಳಿತ ಹಾಗೂ ಯೋಜನೆಗಳ ಬಗ್ಗೆ ಚರ್ಚಿಸಿ, ಮುಂದಿನ ಸಾಲಿಗೆ ಕೈಗೊಳ್ಳಬೇಕಾದ ಆಡಳಿತಾತ್ಮಕ ಸುಧಾರಣೆಗಳ ಬಗ್ಗೆ ಸಲಹೆ, ಸೂಚನೆ ನೀಡುವುದು ಈ ಸಭೆಯ ಉದ್ದೇಶವಾಗಿತ್ತು.

ಮಹಾರಾಜರ ಅಭಿಪ್ರಾಯದಂತೆ ಜನ ಪ್ರತಿನಿಧಿಗಳು ಸಂಸ್ಥಾನದ ಜನರ ಸಮಸ್ಯೆಗಳನ್ನು ಹಾಗೂ ಕುಂದು ಕೊರತೆಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶ ಸಭೆ ಹೊಂದಿತ್ತು. ಸಭೆಯಲ್ಲಿ ಚರ್ಚಿತ ವಿಷಯಗಳ ಬಗ್ಗೆ ಮತ ಹಾಕಲು ಅವಕಾಶವಿರಬೇಕೆಂಬ ಬೇಡಿಕೆ ಸಭೆಯಲ್ಲಿ ಹಲವು ಬಾರಿ ವ್ಯಕ್ತವಾದರೂ ಕೂಡ ದಿವಾನರು ಇದರ ಅಗತ್ಯವಿಲ್ಲ ಎಂದು ತಮ್ಮ ತೀರ್ಮಾನ ಪ್ರಕಟಿಸಿದರು. 1907ರಲ್ಲಿ ವಿ.ಪಿ. ಮಾಧವ ರಾಯರು ದಿವಾನರಾಗಿದ್ದಾಗ ಮೈಸೂರು ನ್ಯಾಯವಿಧಾಯಕ ಸಭೆ ಆರಂಭವಾಯಿತು. ಆದರೆ ಈ ಎರಡು ಸಭೆಗಳು ಸ್ವತಂತ್ರವಾಗಿ ಯಾವ ಕಾರ್ಯವನ್ನು ಮಾಡಲಾಗದೆ ಕೇವಲ ತೋರಿಕೆಗೆ ಮಾತ್ರ ಪ್ರಜಾಪ್ರತಿನಿಧಿ ಸಂಸ್ಥೆಗಳಾಗಿದ್ದವು.

1919ರಲ್ಲಿ ಮಾಂಟೆಗೊ–ಚೆಲ್ಮ್ಸ್‌ಫರ್ಡ್ ಸುಧಾರಣೆಗಳ ಮೂಲಕ ದ್ವಿಮುಖ ಸರ್ಕಾರ ಪದ್ಧತಿ ಜಾರಿಗೆ ಬಂದ ಸಂದರ್ಭದಲ್ಲಿ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ಜವಾಬ್ದಾರಿ ಸರ್ಕಾರದ ಅಂಕುರವಾಯಿತು. ಈ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದಲ್ಲೂ

ಕೂಡ ರಾಜಕೀಯ ಸುಧಾರಣೆಗಳ ಬಗ್ಗೆ ಚರ್ಚೆ, ಕೂಗು ಕಂಡುಬಂದಿತು. ಬ್ರಜೇಂದ್ರನಾಥ್ ಸೀಲ್‌ರವರ ಅಧ್ಯಕ್ಷತೆಯಲ್ಲಿ ರಾಜಕೀಯ ಸುಧಾರಣಾ ಸಮಿತಿಯೊಂದನ್ನು 1923ರಲ್ಲಿ ಸರ್ಕಾರ ರಚಿಸಿತು. ಇದರ ಅನ್ವಯ ಪ್ರಜಾಪ್ರತಿನಿಧಿ ಸಭೆಗೆ ನ್ಯಾಯಬದ್ಧ ಸ್ಥಿರೀಕರಣ ಲಭ್ಯವಾಯಿತು. ಅದರ ಅಂಗರಚನೆ, ಅಧಿಕಾರ ಹಾಗೂ ಕರ್ತವ್ಯಗಳು ನಿರ್ಧರಿಸಲ್ಪಟ್ಟವು.

1923ರಲ್ಲಿ ಭಾರತದ ವೈಸ್ರಾಯ್ ಲಾರ್ಡ್ ರೀಡಿಂಗ್ ಮೈಸೂರಿಗೆ ಭೇಟಿ ನೀಡಿದಾಗ ಏರ್ಪಡಿಸಿದ್ದ ಸಮಾರಂಭದಲ್ಲಿ ರಾಜಕೀಯ ಸುಧಾರಣೆಗಳ ಪ್ರಾಮುಖ್ಯತೆ ಯನ್ನು ಕುರಿತು ಮಹಾರಾಜರು ಮಾತನಾಡಿ "ಅನೇಕಾನೇಕ ಪ್ರಜಾಪ್ರತಿನಿಧಿಗಳು ಸರ್ಕಾರಿ ಅಧಿಕಾರಿಗಳೊಂದಿಗೆ ಕಲೆತು, ರಾಜ್ಯಾಡಳಿತದ ಏರ್ಪಾಡುಗಳಲ್ಲಿ ಭಾಗಿಗಳಾಗು ವಂತೆ ಮಾಡಬೇಕೆಂಬುದೆ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ ಉದ್ದೇಶ..... ಈಚೆಗೆ ನಡೆದ ಬದಲಾವಣೆಗಳು ರಾಜಕೀಯ ಸುಧಾರಣೆಗಳ ದೃಷ್ಟಿಯಿದ ಬಹುಗಣ್ಯವುಗಳಾಗಿವೆ. ಅವುಗಳು ಆಚರಣೆಗೆ ಬಂದರೆ, ಹೆಚ್ಚು ಹೆಚ್ಚಾಗಿ ಪ್ರಜೆಗಳ ಆಕಾಂಕ್ಷೆಗಳಿಗೆ ಅನುಸಾರ ವಾಗಿಯೇ ಸರ್ಕಾರದ ಆಡಳಿತವು ನಡೆಯುವಂತಾಗುತ್ತದೆ. ಈ ಸುಧಾರಣೆಗಳ ಫಲಿತಾಂಶವಾಗಿ ರಾಜ್ಯಾಡಳಿತದಲ್ಲಿ ದಕ್ಷತೆ ಹೆಚ್ಚಿ, ನಮ್ಮ ಪ್ರಜೆಗಳಲ್ಲಿ ಇತೋಪ್ಯತಿಶಯವಾದ ತೃಪ್ತಿಯು, ಅಭ್ಯುದಯವು ಉಂಟಾಗುವುದೆಂದು ನಾವು ದೃಢವಾಗಿ ನಂಬುತ್ತೇವೆ" ಎಂದು ವಿವರಿಸಿದರು.[1] ಈ ಹಿನ್ನೆಯಲ್ಲಿ ಮೈಸೂರು ರಾಜ್ಯದಲ್ಲಿ ಉಂಟಾದ ಜಾತಿ ರಾಜಕೀಯ ಜಾಗೃತಿ, ರಾಜಕೀಯ ಪಕ್ಷಗಳ ಹುಟ್ಟು, ಚುನಾವಣಾ ರಾಜಕೀಯ ಹಾಗೂ ರಾಜಕೀಯ ಸಂಘಟನೆಯ ಪ್ರಯತ್ನಗಳನ್ನು ಕಾಣಬಹುದಾಗಿದೆ.

2. ಪ್ರಜಾಮಿತ್ರ ಮಂಡಲಿ ಮತ್ತು ಕೆ.ಸಿ. ರೆಡ್ಡಿ

19ನೆಯ ಶತಮಾನದ ಪ್ರಾರಂಭದಲ್ಲಿ ಜಾತಿ ರಾಜಕೀಯ ಆಕಾಂಕ್ಷೆಗಳು ಕಾಣಿಸಿಕೊಂಡವು ಎಂದು ಹೇಳಬಹುದು. ಇದಕ್ಕೆ ಪುಷ್ಟಿಕೊಡುವಂತೆ ಒಕ್ಕಲಿಗರ ಸಂಘ, ಕೇಂದ್ರೀಯ ಮಹಮಡನ್ ಅಸೋಸಿಯೇಷನ್, ಲಿಂಗಾಯತ ಎಜುಕೇಶನ್ ಫಂಡ್, ಆರ್ಯವೈಶ್ಯ ಮಹಾಸಭೆ, ಆದಿ ದ್ರಾವಿಡ ಸಂಘ, ಜೈನ್ ಎಜುಕೇಶನ್ ಫಂಡ್ ಅಸೋಸಿಯೇಷನ್, ಇಂಡಿಯನ್ ಕ್ರಿಶ್ಚಿಯನ್ ಅಸೋಸಿಯೇಷನ್ ಮತ್ತು ಕುರುಬರ ಸಂಘ ಸ್ಥಾಪನೆ ಪ್ರಮುಖವು. ಈ ಎಲ್ಲಾ ಜಾತಿ ಸಂಘಗಳು ಸಂಸ್ಥಾನದ ಬ್ರಾಹ್ಮಣರ ವಿರುದ್ಧ ಹೋರಾಟ ಮಾಡಲು ಹಾಗೂ ಬ್ರಾಹ್ಮಣೇತರರಿಗೆ ಸರ್ಕಾರದಿಂದ ಸಿಗಬೇಕಾದ ಎಲ್ಲಾ ಅನುಕೂಲಗಳನ್ನು ಪಡೆದುಕೊಳ್ಳಲು ಒಗ್ಗಟ್ಟಾದವು.

---

1. SPEECHES : Sri Krishnaraja Wadiyar Bahadur 1902-1933. Vol-1, P-217-220.

ಅದರಂತೆ 1916ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಹುಟ್ಟಿಕೊಂಡ ಬ್ರಾಹ್ಮಣೇತರ ಸಂಘಟನೆಯಾದ 'ಜಸ್ಟೀಸ್ ಪಾರ್ಟಿ' ತನ್ನ ಪ್ರಭಾವವನ್ನು ಮೈಸೂರು ಸಂಸ್ಥಾನದ ಮೇಲೆ ಪರಿಣಾಮಕಾರಿಯಾಗಿ ಬೀರಿದುದು ಸ್ಪಷ್ಟವಾಗಿ ಕಂಡುಬರುತ್ತದೆ. ಸಂಸ್ಥಾನದ ವಿದ್ಯಾವಂತ ಮತ್ತು ಬುದ್ಧಿವಂತ ವಕೀಲರು, ವ್ಯಾಪಾರಸ್ಥರು, ಜಮೀನ್ದಾರರು ಹಾಗೂ ಅಧಿಕಾರಿಗಳ ಬೆಂಬಲದಿಂದ 1917ರ ಡಿಸೆಂಬರ್ 6ರಂದು ಎಂ. ಬಸವಯ್ಯ ಅವರ ನಾಯಕತ್ವದಲ್ಲಿ ಪ್ರಜಾಮಿತ್ರ ಮಂಡಲಿ ಸ್ಥಾಪನೆಯಾಯಿತು. ಇದೇ ಸಂಸ್ಥಾನದ ಮೊದಲ ರಾಜಕೀಯ ಪಕ್ಷ. ಆದರೆ ಇದನ್ನು ವ್ಯವಸ್ಥಿತವಾಗಿ ಹುಟ್ಟು ಹಾಕಿದವರು ಸಿ.ಆರ್. ರೆಡ್ಡಿ. ಈ ಪಕ್ಷ ಬ್ರಾಹ್ಮಣೇತರರ ಮುಖವಾಣಿಯಾಗಿ ಕೆಲಸ ಮಾಡತೊಡಗಿ ಆ ನಂತರ ಸಾಂಸ್ಥಿಕ ರೂಪ ತಳೆಯಿತು. ಆದ್ದರಿಂದಲೇ ಈ ಪಕ್ಷವನ್ನು ಮೈಸೂರು ಸಂಸ್ಥಾನದ ಮೊದಲ ಸಂಘಟಿತ ರಾಜಕೀಯ ಪಕ್ಷ ಎಂದು ಕರೆಯಲಾಗಿದೆ.[2]

1917ರಲ್ಲಿ ಪ್ರಾರಂಭವಾದ ಮತ್ತೊಂದು ರಾಜಕೀಯ ಪಕ್ಷ ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಪ್ರೋಗ್ರೆಸ್ ಅಸೋಸಿಯೇಷನ್. ಕೆಲವು ವಿದ್ಯಾವಂತ, ಪ್ರಜ್ಞಾವಂತ ನಾಗರೀಕರ ಪ್ರಯತ್ನದ ಫಲವಾಗಿ ಇದು ಅಸ್ತಿತ್ವಕ್ಕೆ ಬಂದಿತು.[3]

ಪ್ರಜಾಮಿತ್ರ ಮಂಡಲಿ ಪಕ್ಷದ ಪ್ರಮುಖ ಉದ್ದೇಶ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಏಳಿಗೆಯನ್ನು ಸಾಧಿಸುವುದಾಗಿತ್ತು. ಈ ಪಕ್ಷದ ಮಹಮದ್ ಕಲಾಮಿ, ಎಂ. ಸುಬ್ಬಯ್ಯ, ಎ.ವಿ.ಎಂ. ನಂಜುಂಡ ಶೆಟ್ಟಿ, ಡಿ. ಬನುಮಯ್ಯ, ನಂಜಪ್ಪ, ಮಹಮದ್ ಸೇಠ್, ಎಂ. ನಾರಾಯಣಯ್ಯ, ಮಹಮದ್ ಅಬ್ಬಾಸ್‌ಖಾನ್, ಮೊಗಣ್ಣ, ಎಚ್. ಚನ್ನಯ್ಯ, ಮಹಮದ್ ಜಾಫರ್, ಧನಕೋಟಿ ಶೆಟ್ಟಿ, ತಿಮ್ಮಯ್ಯ ಮುಂತಾದವರು. ಈ ಸದಸ್ಯರಲ್ಲಿ ಕೆಲವರು ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಯ ಪ್ರಭಾವಿ ವ್ಯಕ್ತಿಗಳಾಗಿದ್ದರು. ಸಂಸ್ಥಾನದ ಮೈಸೂರು ಸ್ಟಾರ್ ಪತ್ರಿಕೆ. 1918ರಲ್ಲಿ ದಿವಾನರಾದ ಎಂ. ಕಾಂತರಾಜ್ ಅರಸ್ ನೇಮಕ ಪ್ರಜಾಮಿತ್ರ ಮಂಡಲಿಯ ಬೆಳವಣಿಗೆಗೆ ಕಾರಣವಾಗಿ, ಮುಂದೆ ಸರ್ಕಾರಿ ಹುದ್ದೆಗಳಲ್ಲಿ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಪ್ರಾತಿನಿಧ್ಯತೆ ಕಲ್ಪಿಸಲು 'ಜಸ್ಟೀಸ್ ಮಿಲ್ಲರ್ ಸಮಿತಿ' ನೇಮಿಸಲು ಬಹುದೊಡ್ಡ ಕಾರಣವಾಯಿತು.[4]

ಮದ್ರಾಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕೆ.ಸಿ. ರೆಡ್ಡಿ ಅವರ ಮೇಲೆ ಬಹುದೊಡ್ಡ ಬ್ರಾಹ್ಮಣೇತರ ರಾಜಕೀಯ ಪಕ್ಷವಾದ ಜಸ್ಟೀಸ್ ಪಾರ್ಟಿಯ ಉದ್ದೇಶ, ಗುರಿ ಸಾಧನೆಗಾಗಿ

---

2. ಲಕ್ಷ್ಮಣ್ ತೆಲಗಾವಿ : ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಪುಟ–27.
3. ಪೂರ್ವೋಕ್ತ : ಪುಟ–28.
4. ವೀರತಪ್ಪ .ಕೆ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ಪುಟ–8.

ಅವರು ಅನುಸರಿಸುತ್ತಿದ್ದ ಮಾರ್ಗಗಳು ಹಾಗೂ ನಾಯಕರಿಂದ ತುಂಬಾ ಪ್ರಭಾವಿತ ಗೊಂಡಿದ್ದು ಸ್ಪಷ್ಟವಾಗುತ್ತದೆ. ಕೆ.ಸಿ.ರೆಡ್ಡಿ ಅವರು ಕ್ಯಾಸಂಬಳ್ಳಿಯಿಂದ ಕೋಲಾರ ನಗರಕ್ಕೆ ಬಂದು ತನ್ನ ಅಣ್ಣ ವೆಂಕಟರಾಮರೆಡ್ಡಿ ಅವರ ಮಕ್ಕಳಾದ ರಾಮಕೃಷ್ಣಪ್ರಸಾದ್ ರೆಡ್ಡಿ ಮತ್ತು ಸುಶೀಲಮ್ಮನವರಿಗೆ ಉತ್ತಮ ಶಿಕ್ಷಣ ಕೊಡಿಸುವ ಉದ್ದೇಶದಿಂದ ಹಾಗೂ ತಾವು ವಕೀಲರ ವೃತ್ತಿಯನ್ನು ಪ್ರಾರಂಭಿಸಲು ಯೋಜಿಸಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.[5]

1927ರಲ್ಲಿ ಗಾಂಧೀಜಿಯವರು ವಿಶ್ರಾಂತಿಗಾಗಿ ಮೈಸೂರು ಸಂಸ್ಥಾನದ ನಂದಿಬೆಟ್ಟಕ್ಕೆ ಆಗಮಿಸಿದ ಸಂದರ್ಭದಲ್ಲಿ ಕೆ.ಸಿ. ರೆಡ್ಡಿ ಅವರು ಗಾಂಧೀಜಿ ಅವರನ್ನು ಭೇಟಿ ಮಾಡಿ ವಿಚಾರ ವಿನಿಮಯ ಮಾಡಿಕೊಂಡ ನಂತರ ದೃಢಮನಸ್ಕರಾಗಿ ವಕೀಲ ವೃತ್ತಿಯನ್ನು ಬಿಟ್ಟು ದೀನ-ದಲಿತರ ಉದ್ಧಾರಕ್ಕಾಗಿ ಶ್ರಮಿಸಲು ಪಣತೊಟ್ಟರು. ಅದರಂತೆ ಪ್ರೋಗ್ರೇಸೀವ್ ಪಾರ್ಟಿ ಎಂಬ ರಾಜಕೀಯ ಪಕ್ಷವನ್ನು ಸೇರಿದರು. ಆದರೆ ಅಲ್ಲಿ ಹೆಚ್ಚು ದಿನಗಳ ಕಾಲ ಇರದೇ ಹಿಂದುಳಿದ ವರ್ಗಗಳ ಏಳಿಗೆಗಾಗಿ ದುಡಿಯುತ್ತಿದ್ದ ಸಂಸ್ಥಾನದ ಬ್ರಾಹ್ಮಣೇತರ ಪಕ್ಷವಾಗಿದ್ದ ಪ್ರಜಾಮಿತ್ರ ಮಂಡಲಿಯನ್ನು ಸೇರಿ ಅದರ ಬೆಳವಣಿಗೆಗೆ ಕಾರಣವಾದರು.

ಪ್ರಜಾಮಿತ್ರ ಮಂಡಲಿ ಸ್ಥಾಪಕರಾದ ಎಂ. ಬಸವಯ್ಯನವರು ನಿಧನ ಹೊಂದಿದ್ದರಿಂದ ಡಿ.ಎಸ್. ಮಲ್ಲಪ್ಪ, ಕೆ.ಸಿ. ರೆಡ್ಡಿ, ಪಾಮಡಿ ಸುಬ್ಬರಾಮ ಚೆಟ್ಟಿ, ಎಸ್.ಎಲ್. ಮನ್ನಾಜಿರಾವ್ ಖದಮ್ ಮುಂತಾದವರು ಈ ಪಕ್ಷದ ಸಂಪೂರ್ಣ ಜವಾಬ್ದಾರಿ ಹೊತ್ತು ಕೊಂಡರು. ಆದರೆ 1928ರ ಸುಲ್ತಾನಪೇಟೆ ಗಣಪತಿ ಗಲಭೆ, ಪಕ್ಷದಲ್ಲಿದ್ದ ಮುಸಲ್ಮಾನ ಸದಸ್ಯರು ಪಕ್ಷದಿಂದ ದೂರವಾಗಲು ಕಾರಣವಾಯಿತು.

1928ರ ನಂತರ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಪರಿಸ್ಥಿತಿ ಹಲವು ಮಹತ್ತರ ತಿರುವುಗಳನ್ನು ಪಡೆಯಿತು. ಬೆಂಗಳೂರಿನಲ್ಲಿ ಸಂಭವಿಸಿದ ಸುಲ್ತಾನ ಪೇಟೆಯ ಗಣಪತಿ ಗಲಭೆಯ ಪರಿಣಾಮದಿಂದಾಗಿ ಮೈಸೂರು ಸಂಸ್ಥಾನದಲ್ಲಿ ಒಂದು ರೀತಿಯ ರಾಜಕೀಯ ಧೃವೀಕರಣ ಉಂಟಾಯಿತು. ಮೊದಲನೆಯದಾಗಿ ಬ್ರಾಹ್ಮಣೇತರ ನಾಯಕರು ಗಳಿಗೆ ಈ ಘಟನೆಯಿಂದ ದಿವಾನರ ಬಗ್ಗೆ ವಿಶ್ವಾಸ ಕಡಮೆಯಾಯಿತು. ಎರಡನೆಯದಾಗಿ ಮಿಲ್ಲರ್ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಒಂದು ದಶಕದ ನಂತರವೂ ಕೂಡ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ತಮ್ಮ ಸ್ಥಿತಿ ಗಮನಾರ್ಹವಾಗಿ ಉತ್ತಮ ಗೊಂಡಿಲ್ಲ ಎಂಬುದನ್ನು ಬ್ರಾಹ್ಮಣೇತರ ನಾಯಕರು ಅರಿತುಕೊಂಡರು. ರಾಷ್ಟ್ರಮಟ್ಟದಲ್ಲಿ ಗಾಂಧೀಜಿಯವರ ಚಳುವಳಿಯಿಂದ ಪ್ರಭಾವಿತರಾದ ಯುವ ಬ್ರಾಹ್ಮಣೇತರ ನಾಯಕರು ಸಾರ್ವಜನಿಕ ಜೀವನದಲ್ಲಿ ಲಭ್ಯವಿರುವ ವಿಪುಲ ಅವಕಾಶಗಳನ್ನು ಬಳಸಿಕೊಳ್ಳಲು ಆಸಕ್ತಿ ತೋರಿದರು.

---

5. Kysamballi Chengalaraya Reddy : ಕೆ.ಸಿ.ರೆಡ್ಡಿ ಸಂಬಂಧಿಕರು ರಚಿಸಿರುವ ಕೈಪಿಡಿ, ಪುಟ-1.

ಮುಂದೆ ಈ ಪಕ್ಷದ ಹಿರಿಯ ಸದಸ್ಯರ ಮಂದಗಾಮಿ ಧೋರಣೆಗಳಿಂದ ಬೇಸತ್ತ ಯುವ ವಿದ್ಯಾವಂತ, ಬುದ್ಧಿವಂತ, ಚಿಂತನಶೀಲ ಮತ್ತು ರಾಷ್ಟ್ರೀಯವಾದಿ ನಾಯಕರು ಪಕ್ಷದಿಂದ ಹೊರಬಂದು 'ಪ್ರಜಾಪಕ್ಷ' ಎಂಬ ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಿಕೊಂಡು ಹೋರಾಟ ಮುಂದುವರಿಸಿದರು.

3. ಪ್ರಜಾಪಕ್ಷ ಸ್ಥಾಪನೆ ಮತ್ತು ಕೆ.ಸಿ. ರೆಡ್ಡಿ 1930

1930ರಲ್ಲಿ ಡಿ.ಎಸ್. ಮಲ್ಲಪ್ಪನವರ ನೇತೃತ್ವದಲ್ಲಿ ಪ್ರಜಾಪಕ್ಷ ಎಂಬ ಒಂದು ಹೊಸ ರಾಜಕೀಯ ಪಕ್ಷ ಉದಯವಾಯಿತು. ಈ ಪಕ್ಷ ಸ್ಥಾಪನೆಯಲ್ಲಿ ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ, ಬಿ.ಎನ್. ಗುಪ್ತ, ಹೆಚ್.ಬಿ. ಗುಂಡಪ್ಪಗೌಡ, ಡಿ.ಎಚ್. ಚಂದ್ರಶೇಖರಯ್ಯ, ಬಾಗೇಮನೆ ದೇವೇಗೌಡ, ಎಸ್. ಚನ್ನಂಯ್ಯ, ಎಚ್. ಸಿದ್ಧಂಯ್ಯ, ಎನ್.ವಿ. ನಾರಾಯಣಮೂರ್ತಿ, ಎಸ್.ಎಲ್. ಮನ್ನಾಜಿರಾವ್ ಖದಮ್, ಜಿ. ಚನ್ನಪ್ಪ, ಟಿ.ಎಸ್. ಕೆಂಪಹೊನ್ನಯ್ಯ, ಸುಬ್ಬಯ್ಯ ಪ್ರಮುಖ ಪಾತ್ರವಹಿಸಿದರು.[6] ಅಲ್ಲದೆ ಸಂಸ್ಥಾನದಲ್ಲಿದ್ದ ಮೈಸೂರು ಸ್ಟೇಟ್ ಕಾಂಗ್ರೆಸ್ ಪಕ್ಷದಲ್ಲಿದ್ದ ಬ್ರಾಹ್ಮಣೇತರ ನಾಯಕರಾದ ಹೆಚ್.ಆರ್. ಗುರುವಾರೆಡ್ಡಿ. ವಿ. ವೆಂಕಟಪ್ಪ, ಕೆ.ಟಿ. ಸತ್ಯ ನಾರಾಯಣಶೆಟ್ಟಿ ಮತ್ತು ಪಾಮಡಿ ಸುಬ್ಬರಾಮ ಶೆಟ್ಟಿ ಮುಂತಾದವರು ಬಂದು ಸೇರಿಕೊಳ್ಳುವ ಮೂಲಕ ಪಕ್ಷದ ಬೆಳವಣಿಗೆಗೆ ಕಾರಣರಾದರು.[7]

ಪ್ರಜಾಪಕ್ಷದ ಸದಸ್ಯರು ಗ್ರಾಮೀಣ ಪ್ರದೇಶದ ರೈತರ ಜೊತೆ ಸಂಪರ್ಕ ಏರ್ಪಡಿಸಿಕೊಂಡು 1930ರಲ್ಲಿ ಜಿಲ್ಲಾ ಬೋರ್ಡ್‌ಗೆ ನಡೆದ ಚುನಾವಣೆಗಳಲ್ಲಿ ಪ್ರಜಾಪಕ್ಷದ ಸದಸ್ಯರು ಅಭೂತಪೂರ್ವ ಯಶಸ್ಸುಗಳಿಸಿದರು. ಎಂಟು ಜಿಲ್ಲೆಗಳಲ್ಲಿ ಏಳು ಜಿಲ್ಲೆಗಳ ಜಿಲ್ಲಾ ಬೋರ್ಡ್ ಅಧ್ಯಕ್ಷರ ಸ್ಥಾನಗಳು ಪ್ರಜಾಪಕ್ಷದ ಸದಸ್ಯರ ಪಾಲಾಯಿತು. ಆ ಸದಸ್ಯರುಗಳೆಂದರೆ ವಿ. ವೆಂಕಟಪ್ಪ – ಬೆಂಗಳೂರು, ಎಲ್. ವೇಮಾರೆಡ್ಡಿ–ಕೋಲಾರ, ಡಿ.ಎಸ್. ಮಲ್ಲಪ್ಪ–ತುಮಕೂರು, ಬಿ.ಎಸ್. ಪುಟ್ಟಸ್ವಾಮಿ–ಮೈಸೂರು, ಎಚ್.ಬಿ. ಗುಂಡಪ್ಪಗೌಡ–ಹಾಸನ, ಎಚ್. ಸಿದ್ದಯ್ಯ–ಶಿವಮೊಗ್ಗ ಮತ್ತು ಜಿ. ಚನ್ನಪ್ಪ–ಚಿತ್ರದುರ್ಗ.[8]

ಬಿ.ಎನ್. ಗುಪ್ತ ಅವರು ಪ್ರಜಾಪಕ್ಷದ ಧ್ಯೇಯ, ಧೋರಣೆಗಳ ಪ್ರಚಾರಕ್ಕೆಂದೇ ಪ್ರಜಾಮತ ಪತ್ರಿಕೆ ಆರಂಭಿಸಲು ಸರ್ಕಾರದ ಅನುಮತಿ ಕೋರಿದರು. ಆದರೆ ಸರ್ಕಾರ ಅನುಮತಿ ನಿರಾಕರಿಸಿದ ಕಾರಣ ಮದ್ರಾಸ್‌ನಿಂದ ಪ್ರಜಾಮತದ ಪ್ರಥಮ ಸಂಚಿಕೆಯನ್ನು

6. ಪ್ರಕಟನೆ : ಪ್ರಜಾಪಕ್ಷದ ಪತ್ರ, 1930.
7. ಪ್ರಕಟನೆ : ಮೈಸೂರು ಸ್ಟೇಟ್ ಕಾಂಗ್ರೆಸ್‌ನ ಎರಡನೆಯ ಅಧಿವೇಶನ, ದಿನಾಂಕ : 05–05–1929.
8. The Mysore Gazette : Bangalore, 1930.

ಹೊರತಂದರು. ಇದರ ಜೊತೆಗೆ ಜನವಾಣಿ ದಿನಪತ್ರಿಕೆ ಮದ್ರಾಸ್‌ನಿಂದ ಪ್ರಕಟಣೆ ಆರಂಭಿಸಿತು. ಈ ಎರಡು ಪತ್ರಿಕೆಗಳು ಪ್ರಜಾಪಕ್ಷದ ಧ್ಯೇಯ, ಧೋರಣೆಗಳನ್ನು ಜನ ಸಾಮಾನ್ಯರ ಬಳಿ ಕೊಂಡೊಯ್ದವು ಎಂಬುದನ್ನು ಗಮನಿಸಬಹುದು.[9]

4. ಪ್ರಜಾಪಕ್ಷದ ಅಧಿವೇಶನಗಳು

ಮೊದಲನೆಯ ಅಧಿವೇಶನ – ಚನ್ನಪಟ್ಟಣ 1931

ಪ್ರಜಾಪಕ್ಷದ ಮೊದಲನೆಯ ಅಧಿವೇಶನವು 1931ರ ಸೆಪ್ಟೆಂಬರ್‌ನಲ್ಲಿ ಚನ್ನಪಟ್ಟಣದಲ್ಲಿ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಪ್ರಜಾಪಕ್ಷದ ಅಧ್ಯಕ್ಷರಾಗಿದ್ದ ಡಿ.ಎಸ್. ಮಲ್ಲಪ್ಪನವರು ವಹಿಸಿದ್ದರು. ಸಭೆಯಲ್ಲಿ ಭಾಗವಹಿಸಿದ ಬ್ರಾಹ್ಮಣೇತರ ಯುವ ನಾಯಕರಾದ ವಿ. ವೆಂಕಟಪ್ಪ, ಪಾಮಡಿ ಸುಬ್ಬರಾಮ ಶೆಟ್ಟಿ, ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ ಹಾಗೂ ಇತರರು ಸರ್ಕಾರದ ಆಡಳಿತ ಯಂತ್ರವನ್ನು ಟೀಕಿಸಿ ಅದರ ಲೋಪ–ದೋಷಗಳನ್ನು ಎತ್ತಿ ತೋರುವ ಮುಖಾಂತರ ಮೈಸೂರಿನಲ್ಲಿ ಪ್ರಜಾಸರ್ಕಾರ ಸ್ಥಾಪನೆಯಾಗಬೇಕೆಂದು ಆಗ್ರಹಿಸಿದರು. "ಮೈಸೂರು ಸಂಸ್ಥಾನದ ಆರ್ಥಿಕ ಸಂಕಷ್ಟ, ಜನತೆಯ ಜಡನಿದ್ರಾವಸ್ಥೆ ಹಾಗೂ ಮೈಸೂರು ಪ್ರಜಾಪ್ರತಿನಿಧಿ ಸಂಸ್ಥೆಗಳ ಟೊಳ್ಳುತನವನ್ನು ತಮ್ಮ ಭಾಷಣದಲ್ಲಿ ಟೀಕಿಸಿದರು. ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು 'ಅರ್ಜಿದಾರರ ಗೋಷ್ಠಿ' ಎಂದೂ, ನ್ಯಾಯವಿಧಾಯಕ ಸಭೆಯನ್ನು 'ಕೀಲುಗೊಂಬೆಗಳ ಕೂಟ' ಎಂದು ವ್ಯಾಖ್ಯಾನಿಸಿದರು. ಈ ಸಭೆಗಳ ಅಭಿಪ್ರಾಯದಂತೆ ಕಾನೂನು ರಚಿಸುವ, ತಿದ್ದುವ ಮತ್ತು ರದ್ದು ಮಾಡುವ ಅಧಿಕಾರ ಶೀಘ್ರವಾಗಿ ಲಭಿಸದಿದ್ದಲ್ಲಿ ಈ ಸಭೆಗಳು ನಾಮಾವಶೇಷವಾದರೂ ಯಾರು ಚಿಂತಿಸಲಾರರು" ಎಂದು ಸಭೆಯ ಅಧ್ಯಕ್ಷತೆವಹಿಸಿದ್ದ ಡಿ.ಎಸ್. ಮಲ್ಲಪ್ಪ ಕಿಡಿಕಾರಿದರು.

ಪ್ರಜಾಪಕ್ಷದ ಸ್ವರೂಪ, ರಚನೆ ಹಾಗೂ ಹೋರಾಟದ ಬಗ್ಗೆ ವಿಶ್ಲೇಷಿಸುವ ವಿಶ್ವ ಕರ್ನಾಟಕ ಪತ್ರಿಕೆಯು, ಪ್ರಜಾಪಕ್ಷವು ಮೈಸೂರು ರಾಜ್ಯದಲ್ಲಿ ಒಂದು ಸಜೀವ ರಾಜಕೀಯ ಸಂಸ್ಥೆಯಾಗಿ ತನ್ನ ಶಕ್ತಿಯಿಂದ ಜನತೆಯಲ್ಲಿ ಎಚ್ಚರಿಕೆಯನ್ನು, ಕರ್ತವ್ಯ ದಕ್ಷತೆಯನ್ನು ಹುಟ್ಟಿಸಬೇಕಾದರೆ ಆ ಪಕ್ಷ ಒಂದೆರಡು ಲೋಪಗಳಿಂದ ಮುಕ್ತವಾಗಬೇಕು. ಪ್ರಜಾಪಕ್ಷವು ಬ್ರಾಹ್ಮಣೇತರ ಯುವ ನಾಯಕರ ಪಕ್ಷ ಎಂಬ ಅಣೆಪಟ್ಟಿಯನ್ನು ತೊಡೆದು ಹಾಕಿ ಎಲ್ಲಾ ಪ್ರಜೆಗಳ ಹಾಗೂ ವರ್ಗಗಳ ಪಕ್ಷವಾಗಬೇಕೆಂಬ ಆಶಯ ವ್ಯಕ್ತಪಡಿಸಿತು.[10]

---

9. ವೀರತಪ್ಪ .ಕೆ. : ಮೈಸೂರು ಸಂಸ್ಥಾನದ ಸ್ವಾತಂತ್ರ್ಯದ ಚಳವಳಿ, ಪುಟ–21.
10. ವಿಶ್ವ ಕರ್ನಾಟಕ ಪತ್ರಿಕೆ : 20–09–1931.

ಪ್ರಜಾಪಕ್ಷದ ರಾಜಕೀಯ ಚಳವಳಿಗಳಿಂದ ಗ್ರಾಮೀಣ ಪ್ರದೇಶದ ಜನರಲ್ಲಿ ರಾಜಕೀಯ ಜಾಗೃತಿ ಉಂಟಾದ ಬಗೆಯನ್ನು ವಿಶ್ವ ಕರ್ನಾಟಕ ಪತ್ರಿಕೆ ತನ್ನ 01–05–1932ರ ಸಂಚಿಕೆಯಲ್ಲಿ ಪ್ರಸ್ತಾಪಿಸಿದೆ. ಮೈಸೂರಿನಲ್ಲಿ ಜನಜೀವನವು ಈಗ – ಲಿಗ ತನ್ನ ಆಳ–ನೀಳ ಗಳನ್ನು ಕಂಡುಕೊಳ್ಳುತ್ತಿದೆ, ಮುಖ್ಯವಾಗಿ ಬೋರೆಗೌಡನೂ ನನಗೆ ಬಾಯಿ ಇದೆ, ವಾಣಿ ಇದೆ ಎಂದು ಅಂದುಕೊಳ್ಳುವಷ್ಟು ಎಚ್ಚರವಾಗಿದ್ದಾನೆ. ಅವನಿಗೆ ಈಗ ಗ್ರಾಮ ಪಂಚಾಯಿತಿ ಅಲ್ಲ, ಜಿಲ್ಲಾ ಬೋರ್ಡ್ ಅಲ್ಲ, ಪ್ರಜಾಪ್ರತಿನಿಧಿ ಸಭೆ ಅಲ್ಲ, ಚಕ್ರಗೋಷ್ಠಿಯವರೆಗೂ ಶ್ರದ್ಧಾಸಕ್ತಿ ಹುಟ್ಟಿದೆ, ಕುತೂಹಲ ಉಂಟಾಗಿದೆ. ಅಲ್ಲೇನಾಗುತ್ತದೆ, ಇಲ್ಲೇನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಅವನು ಆತುರನಾಗಿದ್ದಾನೆ. ಸುಲ್ತಾನಪೇಟೆ ಗಲಾಟೆ, ಶಿರಾಳಕೊಪ್ಪದ ಗಲಾಟೆ, ಇರ್ವಿನ್ ನಾಲಾ ರೈತರ ಯಾತ್ರೆ ಇವೇ ಮೊದಲಾದ ಪ್ರಸಂಗಗಳು ಅವನಲ್ಲಿ ಭಯಂಕರ ಪರಿವರ್ತನೆಯನ್ನುಂಟು ಮಾಡಿದೆ. ಅಲ್ಲಲ್ಲಿ ಆಗುತ್ತಿರುವ ರೈತರ ಸಮ್ಮೇಳನಗಳ ಪರಿಚಯವಿರುವವರಿಗೆ ನಮ್ಮ ಮಾತಿನ ನಿಜವಾದ ಅರ್ಥವು ಅನುಭವಕ್ಕೆ ಬರುತ್ತದೆ.

ಮಾಗಡಿಯಲ್ಲಿ ರೈತಸಭೆ ನಡೆಸಿದ ಪ್ರಜಾಪಕ್ಷದ ನಾಯಕರುಗಳು ತಮ್ಮ ಪಕ್ಷದ ಧ್ಯೇಯ, ಉದ್ದೇಶ, ಗುರಿಗಳನ್ನು ಸ್ಪಷ್ಟಪಡಿಸಿದರು.

1. ಶ್ರೀಮಾನ್ ಮಹಾರಾಜರು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವನ್ನು ಶೀಘ್ರದಲ್ಲಿ ಸ್ಥಾಪಿಸಬೇಕೆಂದು ಸಭೆ ಶ್ರೀಮಾನ್ ಮಹಾರಾಜರನ್ನು, ಅವರ ಸರ್ಕಾರದಲ್ಲೂ ಪ್ರಾರ್ಥಿಸುತ್ತದೆ.
2. ಅಖಿಲ ಭಾರತದ ಮುಂದಿನ ರಾಜಕೀಯ ಸುಧಾರಣೆಗಳ ಸಂಬಂಧದಲ್ಲಿ ಪ್ರತಿ ಸಮಿತಿಯಲ್ಲೂ ಸಂಸ್ಥಾನ ಪ್ರಜೆಗಳ ಅಭಿಪ್ರಾಯವನ್ನು ತಿಳಿಸಲು ಸಾಕಷ್ಟು ಅವಕಾಶವಿರಬೇಕು.
3. ಸಂಸ್ಥಾನ ಪ್ರಜೆಗಳ ಆ ಜನ್ಮ ಸಿದ್ಧವಾದ ಹಕ್ಕುಗಳು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲೇ ಅಡಕವಾಗಬೇಕು. ಅವುಗಳಿಗೆ ಸಂಬಂಧಿಸಿದ ವಿವಾದಗಳ ತೀರ್ಮಾನವೆಲ್ಲಾ ಸುಪ್ರೀಂಕೋರ್ಟ್‌ನಲ್ಲೇ ಆಗಬೇಕು.
4. ಸಂಸ್ಥಾನದ ಏಳಿಗೆಗೆಂದು ಸ್ಥಾಪಿತವಾಗಿರುವ ಪ್ರಜಾಪಕ್ಷ ಸಂಸ್ಥೆಯಲ್ಲಿ ಜಾತಿ, ಭೇದಕ್ಕೆ ಅವಕಾಶವಿಲ್ಲದಂತೆಯೇ ಎಲ್ಲಾ ಜನಾಂಗವರು ಅದಕ್ಕೆ ಸದಸ್ಯರಾಗುವಂತೆಯೂ ಅವಕಾಶ ಕಲ್ಪಿಸಬೇಕೆಂದು ಪ್ರಜಾಪಕ್ಷದ ಅಧ್ಯಕ್ಷರನ್ನು ಈ ಸಭೆ ಪ್ರಾರ್ಥಿಸುತ್ತದೆ.[11]

ತಮ್ಮ ಉದ್ದೇಶಗಳನ್ನು ಕುರಿತು ಮಾತನಾಡಿರುದನ್ನು ಗಮನಿಸಬಹುದು.

---

11. ವಿಶ್ವ ಕರ್ನಾಟಕ ಪತ್ರಿಕೆ : 01–05–1932.

ಎರಡನೆಯ ಅಧಿವೇಶನ – ಮೈಸೂರು 1932

ಪ್ರಜಾಪಕ್ಷದ ಎರಡನೆಯ ಅಧಿವೇಶನ ಮೈಸೂರಿನಲ್ಲಿ ಅಕ್ಟೋಬರ್ 1932ರಲ್ಲಿ ನಡೆಯಿತು. ಪ್ರಜಾಪಕ್ಷದ ಉಪಾಧ್ಯಕ್ಷರು ಆಗಿದ್ದ ಎಚ್.ಬಿ. ಗುಂಡಪ್ಪಗೌಡರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅಧಿವೇಶನದಲ್ಲಿ ಡಿ.ಎಸ್. ಮಲ್ಲಪ್ಪ, ವಿ. ವೆಂಕಟಪ್ಪ, ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ, ಪಾಮಡಿ ಸುಬ್ಬರಾಮ ಶೆಟ್ಟಿ ಹಾಗೂ ಇತರರು ಪಾಲ್ಗೊಂಡಿದ್ದರು. ಅಧಿವೇಶನದಲ್ಲಿ ಒಂದು ನಿರ್ಣಯ ಕೈಗೊಂಡು "ಮೈಸೂರು ರಾಜ್ಯದಲ್ಲಿ ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವುದು, ಸಮಾಜದ ಎಲ್ಲಾ ಜಾತಿ ವರ್ಗಗಳ ಏಳಿಗೆಗಾಗಿ ಶ್ರಮಿಸುವುದಾಗಿ ಘೋಷಿಸಿದರು. ಈ ಉದ್ದೇಶಗಳ ಈಡೇರಿಕೆಗಾಗಿ ಚುನಾವಣೆಗಳಲ್ಲಿ ಭಾಗವಹಿಸಿ ರಾಜಕೀಯ ಅಧಿಕಾರ ಗಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲು ತೀರ್ಮಾನಿಸಲಾಯಿತು"[12].

ಮೂರನೆಯ ಅಧಿವೇಶನ – ತುಮಕೂರು, 1933

ಪ್ರಜಾಪಕ್ಷದ ಮೂರನೆಯ ಅಧಿವೇಶನ ತುಮಕೂರಿನಲ್ಲಿ 1933ರಲ್ಲಿ ನಡೆಯಿತು. ಪ್ರಜಾಪಕ್ಷದ ಉಪಾಧ್ಯಕ್ಷರಾಗಿದ್ದ ಪಾಮಡಿ ಸುಬ್ಬರಾಮ ಶೆಟ್ಟಿಯವರು ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಕೆ.ಸಿ. ರೆಡ್ಡಿ ಒಳಗೊಂಡಂತೆ ಹಲವು ಬ್ರಾಹ್ಮಣೇತರ ಯುವ ನಾಯಕರು ಈ ಸಭೆಯಲ್ಲಿ ಭಾಗವಹಿಸಿ ಭಾಷಣ ಮಾಡಿದರು. ಈ ಅಧಿವೇಶನದಲ್ಲಿ ಒಂದು ನಿರ್ಣಯ ಕೈಗೊಂಡು "ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸುವುದೇ ಅಲ್ಲದೆ, ನ್ಯಾಯವಿಧಾಯಕ ಸಭೆಯ ಅಧ್ಯಕ್ಷರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಲು ಅವಕಾಶ ನೀಡಬೇಕೆಂದು ಆಗ್ರಹಿಸಿದರು. ಪ್ರಜಾಪಕ್ಷದ ಪ್ರಾಬಲ್ಯವನ್ನು ಹೆಚ್ಚಿಸಲು ಹಾಗೂ ಹೋರಾಟವನ್ನು ವ್ಯಾಪಕಗೊಳಿಸಲು ಪ್ರಜಾಪಕ್ಷದ ಸದಸ್ಯತ್ವವನ್ನು ಎಲ್ಲಾ ಜಾತಿ ವರ್ಗಗಳಿಗೂ ವಿಸ್ತರಿಸಬೇಕೆಂಬ ಆಶಯ ವ್ಯಕ್ತಪಡಿಸಿದರು. ಈ ಕಾರ್ಯವನ್ನು ಸಾಧಿಸದಿದ್ದಲ್ಲಿ ಪಕ್ಷ ರಾಜಕೀಯವಾಗಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ" ಎಂದು ನುಡಿದರು.[13] ಆದರೆ ಇದಕ್ಕೆ ಸಮ್ಮೇಳನದಲ್ಲಿ ಬೆಂಬಲ ದೊರೆಯಲಿಲ್ಲ.

ಪ್ರಜಾಪಕ್ಷದ ಅಧ್ಯಕ್ಷರು– ಡಿ.ಎಸ್. ಮಲ್ಲಪ್ಪ, ಉಪಾಧ್ಯಕ್ಷರು – ಎಚ್.ಬಿ. ಗುಂಡಪ್ಪ ಗೌಡ ಮತ್ತು ಪಾಮಡಿ ಸುಬ್ಬರಾಮಶೆಟ್ಟಿ, ಕಾರ್ಯದರ್ಶಿ – ಬಿ.ಎನ್. ಗುಪ್ತ, ಸಹಾಯಕ ಕಾರ್ಯದರ್ಶಿ – ಎನ್.ವಿ. ನಾರಾಯಣಮೂರ್ತಿ ಮತ್ತು ಹೆಚ್.ಆರ್. ಗುರುವಾರೆಡ್ಡಿ, ಖಜಾಂಚಿ – ಎಸ್.ಎಲ್. ಮನ್ನಾಜಿರಾವ್ ಖದಮ್ ಅವರುಗಳು ಪಕ್ಷವನ್ನು ಸಂಘಟಿಸಿ

---

12. VEERATHAPPA .K : Reading in Modern History of Mysore, 1985.
13. VEERATHAPPA .K : Reading in Modern History of Mysore, 1985.

ದರು. ನ್ಯಾಯವಿಧಾಯಕ ಸಭೆಯಲ್ಲಿ ಡಿ.ಎಚ್. ಚಂದ್ರಶೇಖರಯ್ಯ ಹಾಗೂ ಕೆ.ಸಿ. ರೆಡ್ಡಿ ಪ್ರಜಾಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಜಾಪಕ್ಷದ ಮುಖಂಡರಾಗಿ ಎಚ್.ಬಿ. ಗುಂಡಪ್ಪಗೌಡ ಹಾಗೂ ಜಿ. ಚನ್ನಪ್ಪ ಕಾರ್ಯ ನಿರ್ವಹಿಸಿದರು. ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ವಿ. ವೆಂಕಟಪ್ಪ ಪ್ರಜಾಪಕ್ಷದ ಮುಖಂಡರಾಗಿ ಜವಾಬ್ದಾರಿ ನಿರ್ವಹಿಸಿದರು.[14] ಹೀಗೆ ಪ್ರಜಾಪಕ್ಷದ ವತಿಯಿಂದ ನಡೆದ ಮೂರು ಅಧಿವೇಶನ ಗಳ ಮೂಲಕ ಸಂಸ್ಥಾನದಾದ್ಯಂತ ತಮ್ಮ ಜನಪರ ಕಾಳಜಿಯ ಮೂಲಕ ಜನರ ಗಮನ ಸೆಳೆಯುವಲ್ಲಿ ಯಶಸ್ವಿಯಾದವು.

5. ಪ್ರಜಾಪಕ್ಷದ ಸಾಮಾಜಿಕ ಕಾರ್ಯಕ್ರಮಗಳು

ಪ್ರಜಾಪಕ್ಷದ ಸದಸ್ಯರು ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಯಲ್ಲಿ ರಾಜ್ಯದ ರೈತರ ಆರ್ಥಿಕ ಸಂಕಷ್ಟ, ಭೂ ಕಂದಾಯದ ಹೊರೆ, ಗಣಿ ಪ್ರದೇಶದ ಕಾರ್ಮಿಕರ ಸಮಸ್ಯೆಗಳು ಮುಂತಾದ ವಿಷಯಗಳನ್ನು ಕುರಿತು ಚರ್ಚೆ ನಡೆಸಿ ಸರ್ಕಾರದ ನೀತಿಗಳನ್ನು ಖಂಡಿಸಿದರು. ರಾಜ್ಯದ ಸಮಸ್ಯೆಗಳಿಗೆ ಜವಾಬ್ದಾರಿ ಸರ್ಕಾರ ಸ್ಥಾಪನೆ ಒಂದೇ ಪರಿಹಾರ ವೆಂದು ಅದರ ಸ್ಥಾಪನೆಗಾಗಿ ಆಗ್ರಹಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ರೈತರ ಆರ್ಥಿಕ ಸಂಕಷ್ಟದ ಬಗ್ಗೆ ಚರ್ಚಿಸಿ ರೈತರ ಮೇಲಿನ ಭೂಕಂದಾಯದ ಹೊರೆ ಯನ್ನು ಕಡಿಮೆ ಮಾಡಬೇಕೆಂದು ಪ್ರಜಾಪಕ್ಷದ ನಾಯಕರಾದ ಡಿ.ಎಸ್.ಮಲ್ಲಪ್ಪ ಒಂದು ನಿರ್ಣಯ ಮಂಡಿಸಿದರು. ಸರ್ಕಾರ ಈ ಬೇಡಿಕೆಗೆ ಸೂಕ್ತ ರೀತಿಯಲ್ಲಿ ಸ್ಪಂದಿಸದ ಕಾರಣ ಮಲ್ಲಪ್ಪನವ ರನ್ನು ಒಳಗೊಂಡಂತೆ ಪ್ರಜಾಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು. ಈ ರೀತಿ ಸಾಮೂಹಿಕ ಸಭಾತ್ಯಾಗ ಮಾಡಿದ ಘಟನೆ ಶಾಸನಸಭೆಯ ಇತಿಹಾಸದಲ್ಲಿಯೇ ಮೊದಲನೆಯದಾಗಿದೆ.

ಪ್ರಜಾಪಕ್ಷ ನಾಯಕರುಗಳು ಆಡಳಿತ ಯಂತ್ರವನ್ನು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರ ನೀತಿಗಳನ್ನು ಕಟುವಾಗಿ ಟೀಕಿಸುತ್ತಿದ್ದರು. ಆದರೆ ಟೀಕೆಗಳು ರಚನಾತ್ಮಕವಾಗಿರುತ್ತಿದ್ದವು. ಶಾಸನಸಭೆಯಲ್ಲಿ ಸರ್ಕಾರದ ನೀತಿಗಳನ್ನು ಎಷ್ಟೇ ಟೀಕಿಸಿದರೂ ಕೂಡ ವೈಯಕ್ತಿಕವಾಗಿ ಯಾರಿಗೂ ದ್ವೇಷ, ಅಸಮಾಧಾನವಿರಲಿಲ್ಲ. ಸರ್ಕಾರ ಹಾಗೂ ಪ್ರಜಾಪಕ್ಷದ ಸದಸ್ಯರ ನಡುವೆ ಮಧುರ ಬಾಂಧವ್ಯವಿದ್ದಿತು. ಸರ್ಕಾರದ ರೈತ ವಿರೋಧಿ ನೀತಿಯ ಬಗ್ಗೆ ಕಟುವಾಗಿ ಟೀಕಿಸಿ ಸಭಾತ್ಯಾಗ ಮಾಡಿದ ಡಿ.ಎಸ್. ಮಲ್ಲಪ್ಪ ಮರುದಿವಸವೇ ಮಿರ್ಜಾರವರ ಗೌರವಾರ್ಥವಗಿ ಒಂದು ಸತ್ಕಾರ ಕೂಟ ಏರ್ಪಡಿಸಿ ಅವರ ವೈಯಕ್ತಿಕ ಅಭಿಮಾನವನ್ನು ವ್ಯಕ್ತಪಡಿಸಿ, ಗುಣಗಾನ ಮಾಡಿದುದನ್ನು ಗಮನಿಸಬಹುದು.[15]

14. ಪ್ರಕಟನೆ : ಪ್ರಜಾಪಕ್ಷದ ಪ್ರಕಟನೆ ಪತ್ರ – 1931.
15. ಜನಪ್ರಗತಿ : ಬಿ.ಎನ್. ಗುಪ್ತರ ಆತ್ಮಚರಿತ್ರೆ, ದಿನಾಂಕ : 07–12–1972.

1930ರಲ್ಲಿ ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಆರು ಜನ ಸದಸ್ಯರನ್ನು ಆಯ್ಕೆ ಮಾಡಲು ಚುನಾವಣೆಗಳು ನಡೆದವು. ಚುನಾವಣೆಗಳಲ್ಲಿ ಪ್ರಜಾಪಕ್ಷದ ಅಭ್ಯರ್ಥಿಗಳು ಜಯಗಳಿಸಿದರು. ಈ ಮೂಲಕ ಪ್ರಜಾಪಕ್ಷದ ಸದಸ್ಯರು ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಗಳಲ್ಲಿ ಪ್ರಾಬಲ್ಯ ಸ್ಥಾಪಿಸಿದರಲ್ಲದೆ ರಾಜ್ಯದ ಬಹುತೇಕ ಜಿಲ್ಲಾ ಬೋರ್ಡ್‌ಗಳ ಅಧ್ಯಕ್ಷ ಸ್ಥಾನಗಳನ್ನು ಕೂಡ ತಮ್ಮದಾಗಿಸಿಕೊಂಡರು. ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು ಗ್ರಾಮೀಣ ಜನರ ಸಂಪರ್ಕ ಏರ್ಪಡಿಸಿಕೊಂಡರು.

ಪ್ರಜಾಪಕ್ಷ ರಾಜಕೀಯ ಪ್ರಾಬಲ್ಯ ವೃದ್ಧಿಸಿಕೊಂಡ ಹಿನ್ನೆಲೆಯಲ್ಲಿ ಪಕ್ಷ ಸ್ಥಾಪನೆ ಸಂದರ್ಭದಲ್ಲಿ ಇದನ್ನು ವಿರೋಧಿಸಿದ ಹೆಚ್.ಸಿ. ದಾಸಪ್ಪ, ಸಾಹುಕಾರ ಚನ್ನಯ್ಯ, ನೀಲಗಿರಿ ಸಂಜೀವಯ್ಯ ಮೊದಲಾದವರು ಪಕ್ಷಕ್ಕೆ ಸೇರ್ಪಡೆಯಾದರು. ಪ್ರಜಾಪಕ್ಷದ ನಾಯಕರ ಪ್ರಾಬಲ್ಯದ ಬಗ್ಗೆ ಪ್ರಸ್ತಾಪಿಸಿರುವ ಬಿ.ಎನ್. ಗುಪ್ತ "ಅಂದಿನ ಬ್ರಾಹ್ಮಣೇತರ ನಾಯಕರು ಜನ ಸಾಮಾನ್ಯರ ಹಿತವನ್ನು ಗಮನದಲ್ಲಿಟ್ಟುಕೊಂಡು ಹೋರಾಡಿದರು. ಅವರು ಸಾಕಷ್ಟು ಎತ್ತರದ ಸಮರ್ಥರು ಆಗಿದುದ್ದರಿಂದ ಎಂತಹವರಿಗೂ ತಲೆಬಾಗುತ್ತಿರಲಿಲ್ಲ, ತಗ್ಗುತ್ತಿರಲಿಲ್ಲ ಹಾಗೂ ಜಗ್ಗುತ್ತಿರಲಿಲ್ಲ" ಎಂದು ಅಂದಿನ ವಾಸ್ತವದ ಚಿತ್ರಣ ನೀಡಿದ್ದಾರೆ.[16]

ಮದ್ರಾಸ್‌ನ ಜಸ್ಟೀಸ್ ಪಾರ್ಟಿಯ ಪ್ರಭಾವ ಹೊಂದಿದ್ದ ಬಿ.ಎನ್. ಗುಪ್ತ ಪ್ರಜಾಪಕ್ಷದ ಸ್ಥಾಪನೆಯಲ್ಲಿ ಪ್ರಮುಖರು. ಪ್ರಜಾಪಕ್ಷದ ಮುಖ್ಯವಾಣಿಯಾಗಿ ಒಂದು ಪತ್ರಿಕೆಯನ್ನು ಪ್ರಾರಂಭಿಸುವ ಉದ್ದೇಶದಿಂದ ಬಿ.ಎನ್. ಗುಪ್ತ ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರು. ಅರ್ಜಿಗೆ ಹಲವು ತಿಂಗಳಾದರೂ ಉತ್ತರ ದೊರೆಯಲಿಲ್ಲ. ಮದ್ರಾಸ್‌ನ ಜಸ್ಟೀಸ್ ಪಾರ್ಟಿಯ ಚಳವಳಿಯಂತೆ ಮೈಸೂರಿನ ಬ್ರಾಹ್ಮಣೇತರರ ರಾಜಕೀಯ ಹೋರಾಟವು ದೊಡ್ಡ ಪ್ರಮಾಣದಲ್ಲಿ ನಡೆದೀತು ಎಂಬ ಭಯದ ಕಾರಣ ಗುಪ್ತರವರ ಅರ್ಜಿಯನ್ನು ಸರ್ಕಾರ ತಡೆ ಹಿಡಿಯಿತು. ಇದರಿಂದ ವಿಚಲಿತರಾಗದ ಬಿ.ಎನ್. ಗುಪ್ತ ಪ್ರಜಾಮತ ಪತ್ರಿಕೆಯನ್ನು ಮದ್ರಾಸ್‌ನಿಂದ ಪ್ರಕಟಿಸತೊಡಗಿದರು.

ಕೆಲವು ವರ್ಷಗಳ ನಂತರ ಬಿ.ಎನ್. ಗುಪ್ತ ಪತ್ರಿಕೆಯನ್ನು ಮೈಸೂರಿನಿಂದಲೇ ಪ್ರಕಟಿಸಲು ಅನುಮತಿ ಪಡೆಯಲು ಕೆ.ಸಿ. ರೆಡ್ಡಿ ಅವರ ಸಹಾಯ ಕೋರಿದರು. ಈ ಸಂದರ್ಭದಲ್ಲಿ ಬಿ.ಎನ್. ಗುಪ್ತ, ಕೆ.ಸಿ. ರೆಡ್ಡಿ ಹಾಗೂ ಮಿರ್ಜಾ ಇಸ್ಮಾಯಿಲ್ ಅವರ ಸಂಬಂಧಗಳ ಬಗ್ಗೆ ಚರ್ಚಿಸುತ್ತಾರೆ. "ಕೆ.ಸಿ. ರೆಡ್ಡಿ ಅವರು ಬ್ರಾಹ್ಮಣೇತರ ಯುವ ನಾಯಕರಲ್ಲಿ ಮೇಲೇರುತ್ತಿರುವ ಮೂಡಲತಾರೆ ಎಂಬುದನ್ನು ಅರಿತಿದ್ದ ಮಿರ್ಜಾ ಇಸ್ಮಾಯಿಲ್ ಅವರು ರೆಡ್ಡಿ ಅವರ ಬಗ್ಗೆ ಸ್ನೇಹ, ಸಲುಗೆ ಹೊಂದಿದ್ದರು. ಪತ್ರಿಕೆಯನ್ನು ಮೈಸೂರಿನಿಂದ ಪ್ರಕಟಿಸಲು

16. ಜನಪ್ರಗತಿ : ಬಿ.ಎನ್. ಗುಪ್ತರ ಆತ್ಮಚರಿತ್ರೆ, ದಿನಾಂಕ : 07-12-1972.

ಇರುವ ತೊಂದರೆಯ ಬಗ್ಗೆ ಗುಪ್ತ ಅವರು ಕೆ.ಸಿ. ರೆಡ್ಡಿ ಅವರ ಬಳಿ ಚರ್ಚಿಸಿದ ಸಂದರ್ಭದಲ್ಲಿ, ಕೆ.ಸಿ. ರೆಡ್ಡಿ ಅವರು ತಾವು ಮುಂದೆ ನಿಂತು ಮಿರ್ಜಾ ಇಸ್ಮಾಯಿಲ್‌ರೊಂದಿಗೆ ವಿಷಯ ಪ್ರಸ್ತಾಪಿಸಿ ಪತ್ರಿಕೆಯನ್ನು ಬೆಂಗಳೂರಿನಿಂದ ಪ್ರಕಟಿಸಲು ಸರ್ಕಾರದ ಅನುಮತಿ ದೊರಕಿಸಿ ಕೊಡುವುದಾಗಿ ಭರವಸೆ ನೀಡಿದರು. ಈ ತೊಡಕಿನ ಬಗ್ಗೆ ಮಿರ್ಜಾ ಇಸ್ಮಾಯಿಲ್‌ರೊಂದಿಗೆ ಚರ್ಚಿಸಿದ ಕೆ.ಸಿ. ರೆಡ್ಡಿ ಅನುಮತಿ ಕೊಡಿಸುವಲ್ಲಿ ಯಶಸ್ವಿಯದರು".[17]

ಪ್ರಜಾಮತ ಪತ್ರಿಕೆ ಬೆಂಗಳೂರಿನಿಂದ ಪ್ರಕಟವಾಗುವುದರೊಂದಿಗೆ ಸಂಸ್ಥಾನದಲ್ಲೆಡೆ ಹಾಗೂ ಬ್ರಿಟಿಷ್ ಪ್ರಾಂತ್ಯಗಳಲ್ಲೂ ಉತ್ತಮ ಪ್ರಸಾರ ಪಡೆಯಿತು. ಇದಕ್ಕೆ ಪ್ರಜಾಪಕ್ಷದ ನಾಯಕರುಗಳು ಬಹಳ ಮಟ್ಟಿಗೆ ಕಾರಣ. ಬಿ.ಎನ್. ಗುಪ್ತರವರು ತಾವು ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪತ್ರಿಕೆಯ ವಿಚಾರದಲ್ಲಿ ಪ್ರಚಾರ ಮಾಡಿದ ಸಂದರ್ಭದಲ್ಲಿ ತಿಪಟೂರಿನ ಡಿ.ಎಸ್. ಮಲ್ಲಪ್ಪ, ಹಾಸನದ ಹೆಚ್.ಬಿ. ಗುಂಡಪ್ಪಗೌಡ, ಕೋಲಾರದ ಕೆ.ಸಿ. ರೆಡ್ಡಿ, ಚಿತ್ರದುರ್ಗದ ಜಿ. ಚನ್ನಪ್ಪ ಹಾಗೂ ಶಿವಮೊಗ್ಗದ ಎಚ್. ಸಿದ್ದಯ್ಯನವರು ಸಹಾಯ ಮಾಡಿದರೆಂದು ಬಹುವಾಗಿ ಸ್ಮರಿಸುತ್ತಾರೆ.[18]

ಪ್ರಜಾಪಕ್ಷದ ನಾಯಕರು ಗಾಂಧೀಜಿ ಅವರ ವಿಚಾರಧಾರೆಗಳಿಂದ, ಕಾರ್ಯಕ್ರಮ ಗಳಿಂದ ಪ್ರಭಾವಿತರಾಗಿದ್ದರು. ಇವರಲ್ಲಿ ಕೆಲವರು 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹಾಜರಾಗಿದ್ದು, ಗಾಂಧೀಜಿ ಅವರ ಭಾಷಣಗಳಿಂದ ರಾಷ್ಟ್ರೀಯ ಚಳವಳಿಯ ಬಗ್ಗೆ ಅಭಿಮಾನ ಮೂಡಿಸಿಕೊಂಡಿದ್ದರು. ಗಾಂಧೀಜಿ ಅವರು ಆರೋಗ್ಯ ಸುಧಾರಿಸಿ ಕೊಳ್ಳಲು ನಂದಿಬೆಟ್ಟದಲ್ಲಿ ತಂಗಿದ್ದ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದ ಕೆ.ಸಿ. ರೆಡ್ಡಿ ತಾವು ಸಾರ್ವಜನಿಕ ಜೀವನ ಪ್ರವೇಶಿಸಲು ಪ್ರೇರಣೆ ಪಡೆದರು. ಅಂದಿನಿಂದ ಕೆ.ಸಿ. ರೆಡ್ಡಿ ಹಾಗೂ ಅವರ ಅಣ್ಣ ಕೆ. ವೆಂಕಟರಾಮರೆಡ್ಡಿ ಖಾದಿ ಧರಿಸುತ್ತಿದ್ದರು.[19]

1934ರಲ್ಲಿ ಗಾಂಧೀಜಿಯವರು ಹರಿಜನ ಕಲ್ಯಾಣ ಪ್ರಚಾರ ಪ್ರಯುಕ್ತ ದಕ್ಷಿಣ ಭಾರತದ ವಿವಿಧೆಡೆ ಪ್ರವಾಸ ಕೈಗೊಂಡರು. 1934ರ ಜನವರಿ 4ರಂದು ಹಿಂದೂಪುರಕ್ಕೆ ಆಗಮಿಸಿದ ಗಾಂಧೀಜಿ ಅವರನ್ನು ಸ್ವಾಗತಿಸಲು ಒಂದು ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಪ್ರಜಾಪಕ್ಷದ ಪಾಮಡಿ ಸುಬ್ಬರಾಮ ಶೆಟ್ಟಿ ಅವರು ಸಮಿತಿಯ ಅಧ್ಯಕ್ಷರಾಗಿದ್ದು, ವಿ. ವೆಂಕಟಪ್ಪ ಹಾಗೂ ಕೆ.ಸಿ. ರೆಡ್ಡಿ ಸಮಿತಿಯ ಸದಸ್ಯರಾಗಿದ್ದರು. ಹಿಂದೂಪುರದಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ಗಾಂಧೀಜಿ ಅವರನ್ನು ವಿಧುರಾಶ್ವತ್ಥದಲ್ಲಿ ಕೋಲಾರ ಜಿಲ್ಲಾ ಬೋರ್ಡ್ ಹಾಗೂ ಗೌರಿಬಿದನೂರಿನ ಪುರಸಭೆ ಸಂಯುಕ್ತವಾಗಿ ಒಂದು ಸಭೆ ಏರ್ಪಡಿಸಿ

17. ಜನಪ್ರಗತಿ : ಬಿ.ಎನ್. ಗುಪ್ತರ ಆತ್ಮಚರಿತ್ರೆ, ದಿನಾಂಕ : 07-01-1973, ಪುಟ-22.
18. ಜನಪ್ರಗತಿ : ಬಿ.ಎನ್. ಗುಪ್ತರ ಆತ್ಮಚರಿತ್ರೆ, ದಿನಾಂಕ : 07-01-1972.
19. ಸರ್ದಾರ್ ವೆಂಕಟರಾಮಯ್ಯ :ಸತ್ಯಾಗ್ರಹಿ ಒಂದು ಜೀವನ ಕಥೆ : ಪುಟ-362.

ಸನ್ಮಾನಿಸಿದರು. ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಗಾಂಧೀಜಿ ಅವರಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಿ, ಜಿಲ್ಲಾ ಬೋರ್ಡ್ ಹರಿಜನರ ಉದ್ಧಾರಕ್ಕಾಗಿ ಕೈಗೊಂಡಿರುವ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಗಾಂಧೀಜಿ ಅವರ ಗಮನ ಸೆಳೆದರು.

ಹರಿಜನರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದು, ಗ್ರಾಮದ ಕುಡಿಯುವ ನೀರಿನ ಬಾವಿಗಳಲ್ಲಿ ಹರಿಜನರು ನೀರು ಸಂಗ್ರಹಿಸಲು, ದೇವಾಲಯಗಳನ್ನು ಪ್ರವೇಶಿಸಲು ಹಾಗೂ ತಾಂತ್ರಿಕ ಶಿಕ್ಷಣ ಪಡೆಯಲು ಹರಿಜನರಿಗೆ ಪ್ರೋತ್ಸಾಹ ನೀಡಿ ಹಮ್ಮಿಕೊಳ್ಳಲಾಗಿದ್ದ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದರು. ಪುರಸಭೆಯವರು ನೀಡಿದ ಸನ್ಮಾನಕ್ಕೆ ಆತ್ಮೀಯತೆಯಿಂದ ಉತ್ತರಿಸಿದ ಗಾಂಧೀಜಿ ಅವರು "ಮೈಸೂರು ಸಂಸ್ಥಾನದಲ್ಲಿ ಹರಿಜನರ ಉದ್ಧಾರಕ್ಕಾಗಿ ಹಾಕಿಕೊಂಡ ಕಾರ್ಯಕ್ರಮಗಳ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು". ಈ ಸಂದರ್ಭದಲ್ಲಿ ಕೋಲಾರದ ಜಿಲ್ಲಾ ಬೋರ್ಡ್ ಹಾಗೂ ಗೌರಿಬಿದನೂರು ಪುರಸಭೆಯವರು 560 ರೂ.ಗಳನ್ನು ಹರಿಜನ ಕಲ್ಯಾಣ ನಿಧಿಗೆ ಅರ್ಪಿಸಿದರು.[20]

ಅಖಿಲ ಭಾರತ ಮಟ್ಟದಲ್ಲಿ ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಅಸ್ಪೃಶ್ಯತಾ ನಿವಾರಣಾ ಚಳವಳಿಯ ಬಗ್ಗೆ ಪ್ರಜಾಪಕ್ಷದ ಸದಸ್ಯರು ಕಾಳಜಿ ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಕಾನೂನನ್ನು ಜಾರಿಗೊಳಿಸಲು ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ರಚಿಸಲಾಯಿತು. ಪ್ರಜಾಪಕ್ಷದ ನಾಯಕರಾದ ಪಾಮಡಿ ಸುಬ್ಬರಾಮ ಶೆಟ್ಟಿ ಉಪಾಧ್ಯಕ್ಷರಾಗಿ, ವಿ. ವೆಂಕಟಪ್ಪ ಕಾರ್ಯದರ್ಶಿಯಾಗಿ ಉಪಸಮಿತಿಯಲ್ಲಿ ಕರ್ತವ್ಯ ನಿರ್ವಹಿಸಿದರು. ಸಮಿತಿಯು ತನ್ನ ವರದಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಹರಿಜನರ ಶೋಚನೀಯ ಸ್ಥಿತಿಯ ಬಗ್ಗೆ ಪ್ರಸ್ತಾಪಿಸಿದೆ.

ಮೈಸೂರು ರಾಜ್ಯದಲ್ಲಿ ಹತ್ತಾರು ವರ್ಷಗಳಿಮದ ಹರಿಜನರಿಗೆ ದೇವಾಲಯದ ಪ್ರವೇಶ ಕುರಿತು ಆಂದೋಲನಗಳು ನಡೆಯುತ್ತಿವೆ, ಟಿ. ನರಸೀಪುರದ ಜನರು ಹರಿಜನ ದೇವಾಲಯ ಪ್ರವೇಶಕ್ಕಾಗಿ ಚಳವಳಿ, ಸತ್ಯಾಗ್ರಹವನ್ನು ಹೂಡಿದ ಸಂದರ್ಭದಲ್ಲಿ ಸಂಪ್ರದಾಯಸ್ಥರ ವಿರೋಧದಿಂದ ಅವರಿಗೆ ನ್ಯಾಯ ದೊರೆಯದೆ ಹೋಯಿತು. ನಂಜನಗೂಡಿನಲ್ಲಿಯೂ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳವಳಿ ಮೇಲ್ಜಾತಿಯವರ ಸಂಕುಚಿತ ಮನೋಭಾವದಿಂದ ಯಶಸ್ವಿಯಾಗಲಿಲ್ಲ. ದೇಶವ್ಯಾಪ್ತಿ ಅಸ್ಪೃಶ್ಯತಾ ನಿವಾರಣಾ ಹಾಗೂ ಹರಿಜನರಿಗೆ ದೇವಾಲಯ ಪ್ರವೇಶ ಕುರಿತು ವ್ಯಾಪಕ ಚಳವಳಿಗಳು ನಡೆದು ಅದರ ಪ್ರತಿಧ್ವನಿ ಮೈಸೂರಿನಲ್ಲೂ ವ್ಯಕ್ತವಾಯಿತು.

---

20. ವೇಮಗಲ್ ಸೋಮಶೇಖರ್ : ಕೋಲಾರ ಜಿಲ್ಲೆಯಲ್ಲಿ ಮಹಾತ್ಮಗಾಂಧಿ, ಪುಟ : 30–32.

ಈ ಹಿನ್ನೆಲೆಯಲ್ಲಿ ರಚನೆಯಾದ ಮೈಸೂರು ಅಸ್ಪೃಶ್ಯತಾ ನಿವಾರಣಾ ಕಾನೂನು ರಚನೆ ಉಪಸಮಿತಿಯು ಸಂಸ್ಥಾನದಾದ್ಯಂತ ಪ್ರವಾಸ ಕೈಗೊಂಡು ಒಂದು ಮಸೂದೆ ಸಿದ್ಧಗೊಳಿಸಿತು. ಸಮಿತಿಯು ಗಾಂಧೀಜಿ ಅವರಿಗೂ ಕೂಡ ಒಂದು ಪತ್ರ ಬರೆದು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಅವರ ಮಾರ್ಗದರ್ಶನ ಕೋರಿದರು. ಸಮಿತಿಯ ಪತ್ರಕ್ಕೆ ಉತ್ತರಿಸಿದ ಗಾಂಧೀಜಿ ಅವರು ಅಸ್ಪೃಶ್ಯತಾ ನಿವಾರಣೆ ಕುರಿತು ಶಾಸನಸಭೆಯಲ್ಲಿ ಒಂದು ಶಾಸನ ಮಾಡಿದ್ದೆ ಆದರೆ ಮೈಸೂರು ಮಟ್ಟಿಗೆ ದೇವಾಲಯ ಪ್ರವೇಶದ ಮಸೂದೆಯನ್ನು ಒತ್ತಾಯಪಡಿಸುವ ಅವಶ್ಯಕತೆ ಇಲ್ಲ ಎಂಬ ಸಲಹೆ ನೀಡಿದರು.

ಈ ಹಿನ್ನೆಲೆಯಲ್ಲಿ ಬೇಲೂರು ಶ್ರೀನಿವಾಸ ಅಯ್ಯಂಗಾರ್, ಪಾಮಡಿ ಸುಬ್ಬರಾಮ ಶೆಟ್ಟಿ, ಡಿ.ವಿ. ಗುಂಡಪ್ಪ, ವಿ. ವೆಂಕಟಪ್ಪ, ಎಂ.ವಿ. ಗೋಪಾಲಸ್ವಾಮಿ ಅಯ್ಯಂಗಾರ್ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ "ಮಹಾತ್ಮ ಗಾಂಧೀಜಿ ಅವರು ಮೈಸೂರು ಶಾಸನಸಭೆಯಲ್ಲಿ ದೇವಾಲಯ ಪ್ರವೇಶದ ಕಾನೂನನ್ನು ಜಾರಿಗೆ ತರದೆ, ಅಸ್ಪೃಶ್ಯತಾ ನಿವಾರಣೆಯ ಮಸೂದೆ ತರುವುದೇ ಒಳ್ಳೆಯದು ಎಂಬ ಅಭಿಪ್ರಾಯವನ್ನು ಪುಷ್ಠೀಕರಿಸಿ ತಮ್ಮ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣೆ ಮಸೂದೆ ಸಿದ್ಧಪಡಿಸುವಲ್ಲಿ ಹಾಗೂ ಅದರ ಪರವಾಗಿ ಜನಾಭಿಪ್ರಾಯ ರೂಪಿಸುವಲ್ಲಿ ಪ್ರಜಾಪಕ್ಷದ ಸದಸ್ಯರಾದ ಪಾಮಡಿ ಸುಬ್ಬರಾಮ ಶೆಟ್ಟಿ, ವಿ. ವೆಂಕಟಪ್ಪ, ಡಿ.ಎಸ್. ಮಲ್ಲಪ್ಪ, ಹೆಚ್.ಬಿ. ಗುಂಡಪ್ಪಗೌಡ, ಕೆ.ಸಿ. ರೆಡ್ಡಿ, ಡಿ.ಎಸ್. ಚನ್ನಪ್ಪ, ಬಾಗೇಮನೆ ದೇವೇಗೌಡ, ಡಿ.ಹೆಚ್. ಚಂದ್ರಶೇಖರಯ್ಯ ಮುಂತಾದವರು ಪ್ರಮುಖ ಪಾತ್ರ ವಹಿಸಿದರು. ತುಮಕೂರಿನಲ್ಲಿ ನಡೆದ ಪ್ರಜಾಪಕ್ಷದ ಮೂರನೆಯ ಅಧಿವೇಶನದಲ್ಲಿ ಈ ಮಸೂದೆಯ ಬಗ್ಗೆ ವಿಶೇಷವಾಗಿ ಚರ್ಚಿಸಿದ ಪ್ರಜಾಪಕ್ಷದ ನಾಯಕರು ಹಾಗೂ ಸದಸ್ಯರುಗಳು ಮಸೂದೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು"[21]

1934ರ ವೇಳೆಗೆ ಪ್ರಜಾಪಕ್ಷ ಸಂಸ್ಥಾನದಲ್ಲೆಡೆ ಪ್ರಭಾವಶಾಲಿ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿತು. 1933–34ರಲ್ಲಿ ರಾಜ್ಯದ ಜಿಲ್ಲಾ ಬೋರ್ಡ್‌ಗಳಿಗೆ ನಡೆದ ಚುನಾವಣೆಗಳಲ್ಲಿ ಪ್ರಜಾಪಕ್ಷದ ಅಭ್ಯರ್ಥಿಗಳು ಪ್ರಚಂಡ ಗೆಲುವು ಸಾಧಿಸಿದರು. ರಾಜ್ಯದ ಎಲ್ಲಾ ಎಂಟು ಜಿಲ್ಲಾ ಬೋರ್ಡ್ ಅಧ್ಯಕ್ಷರ ಸ್ಥಾನಗಳು ಪ್ರಜಾಪಕ್ಷದ ಅಭ್ಯರ್ಥಿಗಳ ಪಾಲಾದವು. ವಿ. ವೆಂಕಟಪ್ಪ – ಬೆಂಗಳೂರು, ಹೆಚ್. ವೆಂಕಟರಾಮಯ್ಯ – ತುಮಕೂರು, ಬಿ.ಎಸ್. ಪುಟ್ಟಸ್ವಾಮಿ – ಮೈಸೂರು, ಹೆಚ್.ಬಿ. ಗುಂಡಪ್ಪಗೌಡ – ಹಾಸನ, ಕೆ.ಹೆಚ್. ಹಾಲಪ್ಪ –

---

21. ಮೈಸೂರು ಅಸ್ಪೃಶ್ಯತಾ ನಿವಾರಣಾ ಕಾನೂನಿನ ಉಪಸಮಿತಿ ವರದಿ: ದಿನಾಂಕ 03–04–1933.

ಶಿವಮೊಗ್ಗ, ಬಾಗೇಮನೆ ದೇವೇಗೌಡ – ಕಡೂರು, ಜಿ. ಚನ್ನಪ್ಪ – ಚಿತ್ರದುರ್ಗ, ಕೆ.ಸಿ. ರೆಡ್ಡಿ –ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಆಯ್ಕೆಯಾದರು.[22]

ಪ್ರಜಾಪಕ್ಷದ ಈ ರಾಜಕಿಯ ಪ್ರಾಬಲ್ಯದಿಂದ ಕುಪಿತಗೊಂಡ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ಪ್ರಜಾಪಕ್ಷದ ಬೇಡಿಕೆ ಹಾಗೂ ಅವರ ರಾಜಕೀಯ ಹೋರಾಟವನ್ನು ಟೀಕಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಷಣ ಮಾಡಿದ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು "ಪ್ರಜಾಪ್ರಭುತ್ವ ಪದ್ಧತಿಯನ್ನು ಅಲ್ಲಗೆಳೆದು, ರಾಜಕೀಯ ಸುಧಾರಣೆ ಬಯಸುವವರನ್ನು ಅಪಹಾಸ್ಯ ಮಾಡಿದರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆ ಕೊನೆಗೊಳ್ಳುತ್ತಿರುವಾಗ ಪ್ರಜಾಪಕ್ಷದ ನಾಯಕರು ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಪರವಾಗಿ ಹೋರಾಟ ನಡೆಸುತ್ತಿರುವುದನ್ನು ಲೇವಡಿ ಮಾಡಿದರು". ಇದರಿಂದ ಕುಪಿತಗೊಂಡ ಪ್ರಜಾಪಕ್ಷದ ನಾಯಕರು ಮೈಸೂರು ಸಂಸ್ಥಾನದಾದ್ಯಂತ ರೈತಸಭೆಗಳನ್ನು ಆಯೋಜಿಸುವ ಮುಖಾಂತರ ಸರ್ಕಾರದ ವಿರುದ್ಧ ಚಳವಳಿ ಹಮ್ಮಿಕೊಂಡರು.[23] ಹೀಗೆ ತಮ್ಮ ಜನಪರ ಕಾರ್ಯಕ್ರಮಗಳ ಮೂಲಕ ಪ್ರಜಾಪಕ್ಷವು ಸಂಸ್ಥಾನದಾದ್ಯಂತ ಜನಪ್ರಿಯ ರಾಜಕೀಯ ಪಕ್ಷವಾಗಿ ಹೊರಹೊಮ್ಮಿತು.

6. ಪ್ರಜಾ ಸಂಯುಕ್ತ ಪಕ್ಷ ಸ್ಥಾಪನೆ ಮತ್ತು ಕೆ.ಸಿ. ರೆಡ್ಡಿ 1934

1934ರಲ್ಲಿ ಆದ ಕೆಲವು ರಾಜಕೀಯ ಬದಲಾವಣೆಗಳು ಪ್ರಜಾಮಿತ್ರ ಮಂಡಲಿ ಹಾಗೂ ಪ್ರಜಾಪಕ್ಷ ಒಂದಾಗಲು ಕಾರಣವಾದವು. ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ನಡೆದ ಮಾತುಕತೆಗಳ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರ ಪ್ರಾಂತಮಟ್ಟದಲ್ಲಿ ವ್ಯಾಪಕ ಸುಧಾರಣೆಗಳನ್ನು ತರಲು ಸಿದ್ಧತೆಗಳನ್ನು ನಡೆಸಿತು. ಮೈಸೂರು ಸಂಸ್ಥಾನದ ಶಾಸನಸಭೆ ಹಾಗೂ ಜಿಲ್ಲಾ ಬೋರ್ಡ್‌ಗಳಲ್ಲಿ ಚುನಾಯಿತರಾದ ಪ್ರಜಾಪಕ್ಷದ ಸದಸ್ಯರು ಸರ್ಕಾರ ತಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂಬುದನ್ನು ಮನಗೊಂಡರು. ವಿಶೇಷವಾಗಿ ಜಿಲ್ಲಾ ಬೋರ್ಡ್‌ಗಳಲ್ಲಿ ಅಧ್ಯಕ್ಷರಾಗಿದ್ದ ಪ್ರಜಾಪಕ್ಷದ ನಾಯಕರು ಸ್ಥಳೀಯ ಆಡಳಿತ ವಿಷಯದಲ್ಲಿ ಸರ್ಕಾರ ಸ್ಥಳೀಯ ಪ್ರತಿನಿಧಿಗಳಿಗೆ ಸೂಕ್ತ ಅಧಿಕಾರ ನೀಡದೆ ಆಡಳಿತಶಾಹಿ ವ್ಯವಸ್ಥೆ ಮುಂದುವರೆದುದರ ಬಗ್ಗೆ ಅಸಮಾಧಾನಗೊಂಡರು. ಇದರಿಂದ ಜಿಲ್ಲಾ ಬೋರ್ಡ್‌ಗಳ ಕಾರ್ಯಭಾರ ಹೆಚ್ಚಾಯಿತೆ ಹೊರತು, ಸರ್ಕಾರದ ಅನುದಾನವಾಗಲಿ, ಸ್ವಯಂ ಆಡಳಿತವಾಗಲಿ ಲಭ್ಯವಾಗದಿದ್ದ ಬಗ್ಗೆ ಕ್ರೋಧಗೊಂಡರು.

---

22. The Mysore Gazette : Bangalore, 1934.
23. ದೊರೆಸ್ವಾಮಿ .ಎಚ್.ಎಸ್: ಹೋರಾಟದ ದಿಟ್ಟ ಹೆಜ್ಜೆಗಳು : ಪುಟ 14–15.

ಇದು ಸಾಲದೆಂಬಂತೆ 1934ರ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಲೇವಡಿ ಮಾಡಿ ಅದರ ಪರವಾಗಿ ಹೋರಾಟ ನಡೆಸುತ್ತಿರುವ ಪ್ರಜಾಪಕ್ಷದ ನಾಯಕರ ಬಗ್ಗೆ ಅಪಹಾಸ್ಯ ಮಾಡಿದುದಲ್ಲದೆ. ಅವರು ಹಮ್ಮಿಕೊಳ್ಳುತ್ತಿದ್ದ ರೈತ ಸಭೆಗಳನ್ನು ನಿಷೇಧಿಸಲು ಕಾನೂನು ಕ್ರಮ ಕೈಗೊಂಡರು.[24] ಇದೇ ಹಿನ್ನೆಲೆ ಪ್ರಜಾಪಕ್ಷದ ನಾಯಕರೂ ಕೂಡ ಪಕ್ಷವನ್ನು ಸಂಘಟಿಸುವ ಹಾಗೂ ಹೋರಾಟವನ್ನು ವ್ಯಾಪಕಗೊಳಿಸುವ ಅಗತ್ಯವನ್ನು ಮನಗೊಂಡರು.

ಈ ರೀತಿಯ ರಾಜಕೀಯ ಬೆಳವಣಿಗೆಗಳಿಂದ ಬೇಸರಗೊಂಡ ಕಾಂಗ್ರೆಸ್‌ನ ಪ್ರಮುಖ ನಾಯಕ ಎಚ್.ಕೆ. ವೀರಣ್ಣಗೌಡ ಪತ್ರಿಕೆಯಲ್ಲಿ 'ಪ್ರಜಾಪಕ್ಷ ಮತ್ತು ಬ್ರಾಹ್ಮಣರು' ಎಂಬ ಲೇಖನ ಬರೆದು ಅದರಲ್ಲಿ ನಾವು ಜವಾಬ್ದಾರಿ ಸರ್ಕಾರದ ಗುರಿಯನ್ನು ಸಾಧಿಸಬೇಕಾದರೆ ದೇಶ ಪ್ರೇಮ ಮತ್ತು ಜಾತಿ ಪ್ರೇಮ ಎರಡನ್ನು ಹೊಂದಿದ್ದರೆ ಸಾಧ್ಯವಿಲ್ಲ. ಆದುದರಿಂದ ಪಕ್ಷ ಜಾತಿ ಸೌಹಾರ್ದತೆಯನ್ನು ಬೆಳೆಸಬೇಕು ಮತ್ತು ಹೊಂದಬೇಕು ಎಂದು ತಿಳಿಸಿದರು. ಈ ವಿಚಾರಧಾರೆ ಹಲವು ಪ್ರಜಾಮಿತ್ರ ಮಂಡಲಿ ಹಾಗೂ ಪ್ರಜಾಪಕ್ಷದ ನಾಯಕರುಗಳ ಕಣ್ಣು ತೆರೆಸಿತು.[25]

ಇದರ ಫಲವಾಗಿ ಹಲವು ವರ್ಷಗಳಿಂದ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡು ರಾಜಕೀಯ ಹೋರಾಟ ನಡೆಸುತ್ತಿದ್ದ ಪ್ರಜಾಮಿತ್ರ ಮಂಡಲಿ ಹಾಗೂ ಪ್ರಜಾಪಕ್ಷಗಳು ಒಂದಾಗುವ ಸಂದರ್ಭಗಳು ಒದಗಿ ಬಂದವು. ಎರಡು ಪಕ್ಷಗಳ ಅಂತಿಮ ಗುರಿ ಜವಾಬ್ದಾರಿ ಸರ್ಕಾರ ಸ್ಥಾಪನೆಯೇ ಆಗಿರುವುದರಿಂದ ಎರಡೂ ಪಕ್ಷದ ನಾಯಕರು ತಾವು ಒಗ್ಗಟ್ಟಾಗಿ ಹೋರಾಟ ನಡೆಸಬೇಕಾದ ಅಗತ್ಯವನ್ನು ಮನಗೊಂಡು 1934ರ ನವೆಂಬರ್ – ಡಿಸೆಂಬರ್‌ನಲ್ಲಿ ಪ್ರಜಾ ಸಂಯುಕ್ತ ಪಕ್ಷ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಈ ಪಕ್ಷ ರಾಜ್ಯದ ಬ್ರಾಹ್ಮಣರನ್ನೂ ಒಳಗೊಂಡಂತೆ ಎಲ್ಲಾ ಜಾತಿ– ವರ್ಗಗಳಿಗೆ ಸದಸ್ಯತ್ವ ನೀಡಿತು. ರಾಜ್ಯದ ಜನಗಳಿಗೆ ರಾಜಕೀಯ ಹಕ್ಕುಗಳನ್ನು ದೊರಕಿಸಿಕೊಡುವುದು ಹಾಗೂ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವುದು ಪ್ರಜಾ ಸಂಯುಕ್ತ ಪಕ್ಷದ ಗುರಿಯಾಗಿತ್ತು.

---

24. ಪೂರ್ವೋಕ್ತ : ಪುಟ – 15.
25. ವೀರಣ್ಣಗೌಡ .ಎಚ್.ಕೆ : ಬದುಕು – ಮೆಲುಕು, ಪುಟ.

7. ಪ್ರಜಾ ಸಂಯುಕ್ತ ಪಕ್ಷದ ಅಧಿವೇಶನಗಳು

ಮೊದಲನೆಯ ಅಧಿವೇಶನ – ಹಾಸನ. 1935

ಪ್ರಜಾ ಸಂಯುಕ್ತ ಪಕ್ಷದ ಮೊದಲನೆಯ ಅಧಿವೇಶನವು ಜನವರಿ 4, 1935 ರಂದು ಹಾಸನದಲ್ಲಿ ನಡೆಯಿತು. ಅಧಿವೇಶನವನ್ನು ಮದ್ರಾಸ್‌ನ ಶಾಸನಸಭೆಯ ಸದಸ್ಯರಾಗಿದ್ದ ಸ್ವಾಮಿ ವೆಂಕಟಾಚಲ ಚೆಟ್ಟಿಯವರು ಉದ್ಘಾಟಿಸಿದರು. ಹೆಚ್.ಬಿ. ಗುಂಡಪ್ಪಗೌಡ ಸ್ವಾಗತಾಧ್ಯಕ್ಷರಾಗಿದ್ದರು. ಅಧಿವೇಶನದ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರು, ಪ್ರಜಾ ಸಂಯುಕ್ತ ಪಕ್ಷದ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಅವರು ವಹಿಸಿದ್ದರು. ಈ ಅಧಿವೇಶನದಲ್ಲಿ ಎರಡು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮೊದಲನೆಯದಾಗಿ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಸೂಕ್ತ ಪ್ರಾತಿನಿಧ್ಯ ನೀಡುವುದು, ಎರಡನೆಯದಾಗಿ ತಕ್ಷಣವೇ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಆಗ್ರಹಿಸಲಾಯಿತು.

ತಮ್ಮ ಅಧ್ಯಕ್ಷರ ಭಾಷಣದಲ್ಲಿ ಕೆ.ಸಿ. ರೆಡ್ಡಿ ಅವರು ಪ್ರಜಾಮಿತ್ರ ಮಂಡಲಿ ಮತ್ತು ಪ್ರಜಾಪಕ್ಷಗಳು ಒಂದಾದ ಸಂದರ್ಭ. ಪ್ರಜಾ ಸಂಯುಕ್ತ ಪಕ್ಷದ ಗುರಿ, ಉದ್ದೇಶಗಳ ಬಗ್ಗೆ ಪ್ರಸ್ತಾಪಿಸಿದರು. "ರಾಜ್ಯದಲ್ಲಿ ಮಹಾರಾಜರ ಕೃಪಾಶ್ರಯದಲ್ಲಿ ಶಾಂತಿಯುತವಾಗಿ, ನ್ಯಾಯಬದ್ಧವಾಗಿ ಹಾಗೂ ಸಂವಿಧಾನ ಮಾರ್ಗಗಳ ಮುಖಾಂತರ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವುದು ಪ್ರಜಾ ಸಂಯುಕ್ತ ಪಕ್ಷದ ಗುರಿ" ಎಂದು ಘೋಷಿಸಿದರು. ಪ್ರಜಾ ಸಂಯುಕ್ತ ಪಕ್ಷದಡಿಯಲ್ಲಿ ಬ್ರಾಹ್ಮಣರನ್ನು ಒಳಗೊಂಡಂತೆ ಎಲ್ಲಾ ಜಾತಿ – ವರ್ಗಗಳಿಗೆ ಅವಕಾಶವಿದೆಯೆಂದು, ರಾಜ್ಯದ ಎಲ್ಲಾ ಜನರು ಒಂದೇ ರಾಜಕೀಯ ವೇದಿಕೆಯಡಿ ಹೋರಾಟ ನಡೆಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಮೈಸೂರು ಸಂಸ್ಥಾನದ ನೆರೆಯ ಹೈದರಾಬಾದ್, ತಿರುವಾಂಕೂರ್, ಕೊಚ್ಚಿನ್, ಬರೋಡ ಹಾಗೂ ಇತರ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಪ್ರಸ್ತಾಪಿಸಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ಶಾಸನಸಭೆಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕುರಿತು ಮಾಡಿದ ಟೀಕೆಗಳನ್ನು ಖಂಡಿಸಿದರು.

ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳಿಗೆ ಸಾಕಷ್ಟು ರಾಜಕೀಯ ಸ್ವಾತಂತ್ರ ನೀಡಲಾಗಿದೆ, ಸದ್ಯದ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚಿನ ಸಂವಿಧಾನ ಸುಧಾರಣೆಗಳನ್ನು ತರುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂಬ ದಿವಾನರ ಅಭಿಪ್ರಾಯವನ್ನು ಟೀಕಿಸಿದ ಕೆ.ಸಿ. ರೆಡ್ಡಿ, ಪ್ರಜಾಪ್ರತಿನಿಧಿ ಸಭೆ ನಿಜವಾದ ಅರ್ಥದಲ್ಲಿ ಪ್ರಜೆಗಳನ್ನು ಪ್ರತಿನಿಧಿಸುತ್ತಿಲ್ಲ ಎಂಬ ವಿಷಾದ ವ್ಯಕ್ತಪಡಿಸಿದರು. ಶಾಸನಸಭೆಗಳಲ್ಲಿ ವಿಷಯವನ್ನು ಚರ್ಚಿಸಲು ಮಾತ್ರ ಅವಕಾಶವಿದ್ದು, ಅಂತಿಮ ತೀರ್ಮಾನ

ಸರ್ಕಾರದ್ದಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು. ರಾಜ್ಯದಲ್ಲಿ ತೆರಿಗೆ ಪಾವತಿ ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಆಡಳಿತಾತ್ಮಕ ವಿಷಯಗಳಲ್ಲಿ ಸೂಕ್ತ ಪ್ರಾತಿನಿಧ್ಯವಿರಬೇಕು ಎಂದು ಭಾವಿಸುವುದು ಸಹಜ, ಪ್ರಜಾಪ್ರತಿನಿಧಿಗಳು ಸಭೆಯಲ್ಲಿ ಮಂಡಿಸಿದ ಜನಪರವಾದ ಮನವಿಗಳನ್ನು ಅನೇಕ ಬಾರಿ ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿರುವುದನ್ನು ಪ್ರಸ್ತಾಪಿಸಿದರು.

ಇದಕ್ಕೆ ಉದಾಹರಣೆಯಾಗಿ ಭೂ ಕಂದಾಯವನ್ನು ಮರು ನಿಷ್ಕರ್ಷೆ ಮಾಡುವುದು, ಆಡಳಿತಯಂತ್ರದ ವೆಚ್ಚವನ್ನು ತಗ್ಗಿಸಿ ಜನಸಾಮಾನ್ಯರ ತೆರಿಗೆಯ ಹೊರೆ ಕಡಮೆ ಮಾಡಲು ಶಾಸನಸಭೆಯಲ್ಲಿ ಸದಸ್ಯರು ಮಂಡಿಸಿದ ಹಲವು ನಿಲುವಳಿಗಳನ್ನು ಸರ್ಕಾರ ತಳ್ಳಿಹಾಕಿರುವುದನ್ನು ಪ್ರಸ್ತಾಪಿಸಿದರು. ಇದಕ್ಕೆ ವ್ಯತಿರಿಕ್ತವಾಗಿ ತೆರಿಗೆ ಹೆಚ್ಚಿಸುವ ಅನೇಕ ಮಸೂದೆಗಳನ್ನು ಸದಸ್ಯರು ವಿರೋಧಿಸಿದರೂ ಕೂಡ ಸರ್ಕಾರ ಶಾಸನ ರೂಪದಲ್ಲಿ ಕಾರ್ಯರೂಪಕ್ಕೆ ತಂದಿರುವುದನ್ನು ತೀವ್ರವಾಗಿ ಖಂಡಿಸಿದರು. ಶಾಸನಸಭೆಯ ರಚನೆಯ ಬಗ್ಗೆ ಪ್ರಸ್ತಾಪಿಸಿ ನ್ಯಾಯವಿಧಾಯಕ ಸಭೆಯಲ್ಲಿ 22 ಮಂದಿ ಚುನಾಯಿತ ಪ್ರತಿನಿಧಿಗಳು, 8 ಮಂದಿ ನಾಮಕರಣಗೊಂಡ ಸದಸ್ಯರು, 20 ಮಂದಿ ಸರ್ಕಾರಿ ನಾಮಕರಣಗೊಂಡ ಅಧಿಕಾರಿಗಳು ಇದ್ದು, ಈ ವ್ಯವಸ್ಥೆ ಯಲ್ಲಿ ಚುನಾಯಿತ ಪ್ರತಿನಿಧಿಗಳು ಬಹುಮತವಿಲ್ಲದೆ ಹತಾಶಸ್ಥಿತಿಯನ್ನು ಎದುರಿಸುವಂತಾಗಿದೆ ಎಂದು ನೊಂದು ನುಡಿದರು. ಯಾವುದೇ ವಿಷಯಗಳ ಬಗ್ಗೆ ಚರ್ಚೆ ನಡೆದ ಸಂದರ್ಭದಲ್ಲಿ ಅಥವಾ ಆಯ-ವ್ಯಯ ಮಂಡಿಸುವ ಸಂದರ್ಭದಲ್ಲಿ ಅಧಿಕಾರಿಗಳೇ ಬಹು ಸಂಖ್ಯಾತರಾಗಿರುವ ನ್ಯಾಯವಿಧಾಯಕ ಸಭೆಯಲ್ಲಿ ನಿರ್ಣಯಗಳು ಯಾವಾಗಲು ಸಹ ಸರ್ಕಾರದ ಪರವಾಗಿಯೇ ಇರುತ್ತವೆ.

ಇಲ್ಲಿ ಚುನಾಯಿತ ಪ್ರತಿನಿಧಿಗಳ ಸಲಹೆ, ಸೂಚನೆ, ಟೀಕೆಗಳಿಗೆ ಯಾವುದೇ ಬೆಲೆಯಿಲ್ಲ. ಕಳೆದ 10 ವರ್ಷಗಳಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಗಳಲ್ಲಿ ಒಮ್ಮೆಯೂ ಕೂಡ ಚುನಾಯಿತ ಪ್ರತಿನಿಧಿಗಳು ಮಂಡಿಸಿದ ಅಭಿಪ್ರಾಯಗಳನ್ನು ಪುರಸ್ಕರಿಸಲಾಗಿಲ್ಲ. ಪ್ರಜಾಪ್ರತಿನಿಧಿ ಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳೇ ಬಹುಸಂಖ್ಯಾತರು. ಆದರೆ ಈ ಸಭೆಗೆ ಹೆಚ್ಚಿನ ಅಧಿಕಾರವಿಲ್ಲ, ನ್ಯಾಯ ವಿಧಾಯಕ ಸಭೆಗೆ ಹೆಚ್ಚಿನ ಅಧಿಕಾರವಿದೆ, ಆದರೆ ಅಧಿಕಾರಿಗಳೇ ಬಹುಸಂಖ್ಯಾತರಾದ ಕಾರಣ ಇಲ್ಲಿ ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಬೆಲೆಯಿಲ್ಲ ಎಂದು ನುಡಿದರು.

ಈ ರೀತಿ ರಾಜ್ಯದ ಪ್ರಜಾಪ್ರತಿನಿಧಿ ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ತೋರಿಸುವ ಮುಖಾಂತರ ಕೆ.ಸಿ.ರೆಡ್ಡಿ ಅವರು, ದಿವಾನರು ತಮ್ಮ ಭಾಷಣದಲ್ಲಿ ರಾಜ್ಯಕ್ಕೆ ಹೆಚ್ಚಿನ ರಾಜಕೀಯ ಸುಧಾರಣೆಗಳ ಅಗತ್ಯವಿಲ್ಲವೆಂಬ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದರು.

ಮಹಾರಾಜರು ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆ ಉದ್ಘಾಟನೆ ಮಾಡಿದ ಭಾಷಣದಲ್ಲಿ ರಾಜ್ಯದ ಜನ ಹೆಚ್ಚಿನ ರಾಜಕೀಯ ಬದಲಾವಣೆಗಳಿಗಾಗಿ ಒತ್ತಾಯಿಸುತ್ತಿದ್ದು, ಶಾಸನಸಭೆಗಳಿಗೆ ಮತ ಹಾಕಲು ಹೆಚ್ಚಿನ ಜನರಿಗೆ ಅವಕಾಶ ನೀಡಬೇಕು, ಶಾಸನಸಭೆ ಸದಸ್ಯರಿಗೆ ಹೆಚ್ಚಿನ ಅಧಿಕಾರವಿರಬೇಕು ಎಂಬ ಮಹದಾಸೆಯನ್ನು ಪ್ರಸ್ತಾಪಿಸಿ ಹಂತ ಹಂತವಾಗಿ ರಾಜಕೀಯ ಬದಲಾವಣೆಗಳನ್ನು ಜಾರಿಗೆ ತರುವುದಾಗಿ ನೀಡಿದ ಆಶ್ವಾಸನೆಯನ್ನು ಕೆ.ಸಿ. ರೆಡ್ಡಿ ಪ್ರಸ್ಥಾಪಿಸಿ ಮಹಾರಾಜರ ಮಾತುಗಳು ರಾಜ್ಯದ ಜನರ ಆಶೋತ್ತರಗಳಿಗೆ ಪೂರಕವಾಗಿದೆ ಎಂದು ಹೇಳಿದರು.

ರಾಜ್ಯದ ಜನರ ಸಂಕಷ್ಟಗಳ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಕೆ.ಸಿ. ರೆಡ್ಡಿ ಅವರು ಹದಿಮೂರು ವರ್ಷಗಳ ಹಿಂದೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ರಚಿಸಲಾದ ಮಿಲ್ಲರ್ ಆಯೋಗ ನೀಡಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ವೈಫಲ್ಯತೆಯನ್ನು ಖಂಡಿಸಿದರು. ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಕೃಷಿ ಬೆಳೆಗಳ ಬೆಲೆಗಳು ಇಳಿಮುಖವಾಗಿದ್ದು ಭಾರತದ ಇತರೆಡೆ ಸರ್ಕಾರಗಳು ರೈತರ ಸಂಕಷ್ಟಗಳಿಗೆ ಪರಿಹಾರ ಮಾರ್ಗಗಳನ್ನು ಕೈಗೊಳ್ಳುವ ಪ್ರಯತ್ನ ನಡೆಸಿವೆ. ಆದರೆ ಮೈಸೂರು ಸರ್ಕಾರ ಈ ಬಗ್ಗೆ ಕಾರ್ಯ ಪ್ರವೃತ್ತರಾಗದಿರುವುದು ವಿಷಾದಕರ ಎಂದು ನುಡಿದರು.

ಭಾರತದೆಲ್ಲೆಡೆ ಸರ್ಕಾರಗಳೂ ಭೂ ಕಂದಾಯವನ್ನು ಕಡಿತಗೊಳಿಸಿದ ಉದಾಹರಣೆಗಳನ್ನು ನೀಡಿ ಮೈಸೂರು ಸರ್ಕಾರ ಶಾಸನಸಭೆಯಲ್ಲಿ ಹಲವು ಮನವಿಗಳನ್ನು ಮಾಡಿದರೂ ಕೂಡ ಸ್ಪಂದಿಸದಿರುವುದನ್ನು ಟೀಕಿಸಿದರು. ರಾಜ್ಯದ ವಿವಿಧ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಕಲ್ಯಾಣಕ್ಕಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಆಗ್ರಹಿಸಿದರು. ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಲು ಕಾರ್ಮಿಕ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಶಾಸನದಲ್ಲಿ ಅನುಕೂಲ ಮಾಡಿಕೊಡ ಬೇಕೆಂದು ಒತ್ತಾಯಿಸಿದರು. ರಾಜ್ಯದ ಹರಿಜನರ ಬಗ್ಗೆ ಪ್ರಸ್ತಾಪಿಸಿದ ಕೆ.ಸಿ. ರೆಡ್ಡಿ ಅವರು ಅವರ ಜೀವನಮಟ್ಟ ಅತ್ಯಂತ ಶೋಚನೀಯವಾಗಿದೆ, ಭಾರತದೆಲ್ಲೆಡೆ ಗಾಂಧೀಜಿ ಅವರ ಮಾರ್ಗದರ್ಶನದಲ್ಲಿ ಹಲವು ಅಸ್ಪೃಶ್ಯತಾ ಸುಧಾರಣಾ ಕಾರ್ಯಕ್ರಮಗಳು ಜಾರಿಗೊಳಿಸಲಾಗುತ್ತಿದೆ, ಮಹಾರಾಜರ ಸರ್ಕಾರವು ಕೂಡ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕಾಗಿದೆ ಎಂದು ಹೇಳಿದರು.[26]

---

26. First Conference of the Mysore People's Federation : Chengalaraya Reddy .K, Hassan, Date : 04-01-1935.

ಎರಡನೆಯ ಅಧಿವೇಶನ – ಕೋಲಾರ. 1937

ಪ್ರಜಾ ಸಂಯುಕ್ತ ಪಕ್ಷದ ಎರಡನೆಯ ಅಧಿವೇಶನವು ಜನವರಿ 23 ಮತ್ತು 24, 1937ರಲ್ಲಿ ಕೋಲಾರ ನಗರದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಪ್ರಜಾ ಸಂಯುಕ್ತ ಪಕ್ಷದ ಮುಂಚೂಣಿ ನಾಯಕರಾಗಿದ್ದಂತಹ ವಿ. ವೆಂಕಟಪ್ಪನವರು ವಹಿಸಿದ್ದರು. ಅಧಿವೇಶನವನ್ನು ಆಯೋಜಿಸಿದ ಕೆ.ಸಿ. ರೆಡ್ಡಿ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಅಧಿವೇಶನಕ್ಕೆ ರಾಜ್ಯದ ವಿವಿಧೆಡೆಯಿಂದ 50ಕ್ಕೂ ಹೆಚ್ಚು ಸದಸ್ಯರು ಆಗಮಿಸಿ, ಕೋಲಾರ ಜಿಲ್ಲೆಯ ವಿವಿಧ ಭಾಗಗಳಿಂದ 150 ಜನ ಪ್ರಜಾ ಸಂಯುಕ್ತ ಪಕ್ಷದ ಸದಸ್ಯರು ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಪ್ರಜಾ ಸಂಯುಕ್ತ ಪಕ್ಷದ ಪ್ರಮುಖ ನಾಯಕರಾದ ವಿ. ವೆಂಕಟಪ್ಪ, ಹೆಚ್.ಬಿ. ಗುಂಡಪ್ಪಗೌಡ, ಡಿ.ಎಸ್. ಮಲ್ಲಪ್ಪ, ಹೆಚ್.ಸಿ. ದಾಸಪ್ಪ, ಪಾಮಡಿ ಸುಬ್ಬರಾಮ ಶೆಟ್ಟಿ, ಎನ್. ಬಾಲಕೃಷ್ಣಯ್ಯ, ಎಚ್. ಸಿದ್ದಯ್ಯ, ಹನುಮಂತಪ್ಪ, ಟಿ. ಮರಿಯಪ್ಪ, ಎಲ್. ವೇಮಾರೆಡ್ಡಿ, ಹೆಚ್.ಆರ್. ಗುರುವಾರೆಡ್ಡಿ, ಬಾಗೇಮನೆ ದೇವೇಗೌಡ, ವೆಂಕಟಸ್ವಾಮಿ ಶೆಟ್ಟಿ, ಕೆ.ಪಿ. ರಾಮನ್, ಗೋವಿಂದರಾವ್ ಮುಂತಾದವರು ಆಗಮಿಸಿದ್ದರು.[27]

ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಪಕ್ಷದ ಸದಸ್ಯರನ್ನು ಸ್ವಾಗತಿಸಿ ಮೈಸೂರು ಸಂಸ್ಥಾನದ ಪ್ರಚಲಿತ ವಿದ್ಯಮಾನಗಳನ್ನು ಸಮೀಕ್ಷಿಸಿದರು. "ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ರಾಜ್ಯದ ಹಲವೆಡೆ ಮಾಡಿದ ಭಾಷಣಗಳಿಂದ ಕ್ರೋಧಗೊಂಡು ಸರ್ಕಾರ ಅವರನ್ನು ಆರು ತಿಂಗಳ ಕಾಲ ಸಂಸ್ಥಾನದ ಯಾವ ಭಾಗದಲ್ಲೂ ಕೂಡ ಭಾಷಣ ಮಾಡಬಾರದು ಎಂಬ ಆಜ್ಞೆಯನ್ನು ಹೊರಡಿಸಿದರು. ಕೆ.ಸಿ. ರೆಡ್ಡಿ ಈ ಆಜ್ಞೆಯನ್ನು ಟೀಕಿಸಿದರು. ಮೈಸೂರು ಸಂಸ್ಥಾನ ಈ ಆಜ್ಞೆಯನ್ನು ಹೊರಡಿಸಿದ ಕಾರಣ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯುಳ್ಳಂತಹ ಜನ ತಲೆ ತಗ್ಗಿಸುವಂತಾಗಿದೆ ಎಂದರು.

ಹೊರಗಿನವರು ಬಂದು ಮೈಸೂರಿನ ರಾಜಕೀಯದಲ್ಲಿ ಮಾರ್ಗದರ್ಶಕರಾಗಲು ಅವಕಾಶ ಕೊಡುವುದು ನಮ್ಮ ಸರ್ಕಾರದ ನೀತಿಯಲ್ಲ ಎಂಬ ದಿವಾನರ ಹೇಳಿಕೆಯನ್ನು ಖಂಡಿಸಿದರು. ಇದೇ ರೀತಿ ಕೆ.ಟಿ. ಭಾಷ್ಯಂ ಹಾಗೂ ತಗಡೂರು ರಾಮಚಂದ್ರರಾಯರ ಮೇಲೂ ವಿಧಿಸಿರುವುದನ್ನು ಖಂಡಿಸಿದರು. ಸಂಸ್ಥಾನದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಮಸ್ಯೆಗಳನ್ನು ಅವರ ಕಷ್ಟ ಪರಿಸ್ಥಿತಿಯ ವಾಸ್ತವ ನಿಜಾಂಶವನ್ನು ತಿಳಿಯುವ ಉದ್ದೇಶದಿಂದ ಪ್ರಜಾ ಸಂಯುಕ್ತ ಪಕ್ಷ ಸಂಸ್ಥಾನದೆಲ್ಲೆಡೆ ರೈತ ಸಭೆಗಳನ್ನು ಏರ್ಪಡಿಸಿದ

27. Procedings of the Second Mysore State Peoples Federation at Kolar : C.B. File No : 139-1936-37 (1 to 6), Date : 23-01-1937 to 24-01-1937.

ಸಂದರ್ಭದಲ್ಲಿ ಸರ್ಕಾರ ರೈತ ಸಭೆಗಳ ಮೇಲೂ ಕೂಡ ಪ್ರತಿಬಂಧಕಾಜ್ಞೆ ಹೊರಡಿಸಿದುದನ್ನು ಸಭೆಯ ಗಮನಕ್ಕೆ ತಂದರು.

ರೈತರ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ, ಅವರು ಅಧಿಕವಾದ ಋಣಭಾರ ದಿಂದ ಪೀಡಿತರಾಗಿದ್ದಾರೆ. ಅವರನ್ನು ಉದ್ಧರಿಸುವ ಪರಿಹಾರ ಕಾರ್ಯಗಳನ್ನು ಕೂಡಲೇ ಕೈಗೊಳ್ಳದೇ ಹೋದರೆ ಅವರು ಸಂಪೂರ್ಣವಾಗಿ ನಾಶ ಹೊಂದುವುದರಲ್ಲಿ ಸಂದೇಹವೇ ಇಲ್ಲ. ರೈತರ ಕಂದಾಯದ ಹೊರೆಯ ಬಗ್ಗೆ ಶಾಸನಸಭೆಗಳಲ್ಲಿ ಹಲವು ಬಾರಿ ಪ್ರಸ್ತಾಪಿಸ ಲಾಗಿದೆ. ತಾವು ಕೋಲಾರ ಜಿಲ್ಲೆಯ ಭೂ ಕಂದಾಯ ಹೊರೆಯ ಬಗ್ಗೆ ಚರ್ಚಿಸಿದ ಸಂದರ್ಭದಲ್ಲಿ ಸಭೆಯ ಎಲ್ಲಾ ಸದಸ್ಯರು ತಮಗೆ ಬೆಂಬಲ ವ್ಯಕ್ತಪಡಿಸಿದ್ದಾರೆ, ಇಷ್ಟಾದರೂ ಕೂಡ ಸರ್ಕಾರ ರೈತರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಅವರ ಭೂ ಕಂದಾಯ ತೆರಿಗೆಯನ್ನು ಇಳಿಸುವ ಬಗ್ಗೆ ಚಿಂತಿಸಲಿಲ್ಲ ಎಂದು ವಿಷಾದದಿಂದ ನುಡಿದರು. ರೈತರ ಭೂ ಕಂದಾಯ ಸಮಸ್ಯೆ ಕುರಿತು ಒಂದು ಸಭೆಯ ಸಮಿತಿ ರಚಿಸಿ ವಿಷಯವನ್ನು ಚರ್ಚಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂದು ನಾವು ನಡೆಸಿದ ಹೋರಾಟ ವಿಫಲವಾದುದ್ದನ್ನು ನೆನಪಿಸಿಕೊಂಡರು.

ಗ್ರಾಮೀಣ ಹಳ್ಳಿಗಳ ಪುನರುದ್ಧಾರದ ಬಗ್ಗೆ ಚರ್ಚಿಸಿದ ಕೆ.ಸಿ. ರೆಡ್ಡಿ ಹಳ್ಳಿಗಳಲ್ಲಿ ವಿದ್ಯಾಭ್ಯಾಸ, ವೈದ್ಯಕೀಯ ಸೇವೆ, ಕುಡಿಯುವ ನೀರಿನ ಬಾವಿ ತೋಡಿಸುವುದು, ಸಂಚಾರ ಸಾರಿಗೆಯ ಸೌಕರ್ಯ ಮತ್ತು ಗ್ರಾಮೀಣ ರೈತರಿಗೆ ಸುಲಭ ದರದಲ್ಲಿ ಸಾಲದ ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿದರು. ಪ್ರಜಾಪ್ರತಿನಿಧಿಗಳ ವಾಗ್ದಂಡನೆಗೆ ಹೆದರಿದ ಸರ್ಕಾರ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ, ಜಿಲ್ಲಾ ಬೋರ್ಡ್ ಹಾಗೂ ಮುನ್ಸಿಪಾಲಿಟಿಗಳ ಅಧಿಕಾರವನ್ನು ಮೊಟಕುಗೊಳಿಸುವ ತಂತ್ರಗಳನ್ನು ಟೀಕಿಸಿದರು. ಪ್ರಜಾ ಸಂಯುಕ್ತ ಪಕ್ಷದ ಧ್ಯೇಯದ ಬಗ್ಗೆ ಪ್ರಸ್ತಾಪಿಸಿದ ಕೆ.ಸಿ. ರೆಡ್ಡಿ, ಶ್ರೀಮಾನ್ ಮಹಾರಾಜರ ಆಶ್ರಯದಲ್ಲಿ ಆದಷ್ಟು ಶೀಘ್ರವಾಗಿ ಶಾಂತಿಯುತ, ನ್ಯಾಯಯುತ ಹಾಗೂ ಶಾಸನಬದ್ಧ ಮಾರ್ಗದಿಂದ ಜವಾಬ್ದಾರಿ ಸರ್ಕಾರ ಗಳಿಸಿಕೊಳ್ಳುವುದು ಪಕ್ಷದ ಧ್ಯೇಯವಾಗಿದೆ ಎಂದು ಹೇಳಿದರು. ಈ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿ ಮುಂಬರುವ ಶಾಸನಸಭಾ ಚುನಾವಣೆಯಲ್ಲಿ ಪ್ರಜಾ ಸಂಯುಕ್ತ ಪಕ್ಷ ಸ್ಪರ್ಧಿಸುವುದಾಗಿ ನಿರ್ಣಯ ಅಂಗೀಕರಿಸಲಾಯಿತು.

ಪ್ರಜಾ ಸಂಯುಕ್ತ ಪಕ್ಷವನ್ನು ಕೆಲವರು ಕೋಮುವಾದಿ ಪಕ್ಷದವರು ಎಂದು ಜರಿಯುವುದನ್ನು ಕೆ.ಸಿ. ರೆಡ್ಡಿ ವಿರೋಧಿಸಿದರು. ಮೈಸೂರು ಸಂಸ್ಥಾನದ ವಿವಿಧ ಕೋಮುಗಳಲ್ಲಿ ಹಾಗೂ ಜಾತಿಗಳಲ್ಲಿ ಸೌಹಾರ್ದತೆ ಹಾಗೂ ಐಕ್ಯಮತ್ಯವನ್ನು ಸಾಧಿಸುವುದು ತಮ್ಮ ಪಕ್ಷದ ಧ್ಯೇಯ ಎಂದು ಹೇಳಿದರು. ಸರ್ಕಾರಿ ನೌಕರಿಗಳಲ್ಲೂ ಕೂಡ ಆಯಾ ಕೋಮುಗಳ ಒಟ್ಟು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ದೊರೆತು ಸಮಾಜದಲ್ಲಿ ಹಿಂದುಳಿದ

ಹಾಗೂ ದುರ್ಬಲ ವರ್ಗದವರ ಹಿತವನ್ನು ರಕ್ಷಿಸುವ ಮಾರ್ಗವನ್ನು ಪಕ್ಷ ಅನುಸರಿಸುವುದಾಗಿ ಹೇಳಿದರು. ಪ್ರಜಾ ಸಂಯುಕ್ತ ಪಕ್ಷದಲ್ಲಿ ಹಿಂದೂಗಳು, ಮಹಮದೀಯರು, ಬ್ರಾಹ್ಮಣರು, ಬ್ರಾಹ್ಮಣೇತರರು, ಕ್ರೈಸ್ತರು, ಹರಿಜನರು ಎಲ್ಲರೂ ಕೂಡ ಸದಸ್ಯತ್ವ ಹೊಂದಿದ್ದಾರೆಂದು, ಪ್ರಜಾ ಸಂಯುಕ್ತ ಪಕ್ಷದ ಜಾತ್ಯಾತೀತ ಲಕ್ಷಣವನ್ನು ಕೆ.ಸಿ. ರೆಡ್ಡಿ ಒತ್ತಿ ಹೇಳಿದರು. ಈ ಹಿನ್ನೆಲೆಯಲ್ಲಿ ಪ್ರಜಾ ಸಂಯುಕ್ತ ಪಕ್ಷವನ್ನು ಕೋಮುವಾದಿ ಪಕ್ಷ ಎಂದು ಟೀಕಿಸುವವರನ್ನು ಖಂಡಿಸಿದರು.

ಸರ್ಕಾರದ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ದಿಟ್ಟ ರಾಜಕೀಯ ಮುಖಂಡತ್ವದ ಅಗತ್ಯ ಹಾಗೂ ಶಿಸ್ತು, ಸಂಘಟನೆಯ ಅಗತ್ಯವನ್ನು ಪ್ರತಿಪಾದಿಸಿದರು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಯಶಸ್ವಿಯಾಗಿ ರಾಷ್ಟ್ರವ್ಯಾಪ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪಕ್ಷದ ಶಿಸ್ತೇ ಕಾರಣ, ಭಾರತೀಯರಲ್ಲಿ ಈ ಶಿಸ್ತನ್ನು ಮೂಡಿಸಿದ ಕೀರ್ತಿ ರಾಷ್ಟ್ರೀಯ ಕಾಂಗ್ರೆಸ್‌ಗೆ ಸಲ್ಲುತ್ತದೆ ಎಂದು ಕೆ.ಸಿ. ರೆಡ್ಡಿ ಹೇಳಿದರು. ದೇಶದ ಹಿತಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ದರಾಗಿ ದೊಡ್ಡವರು, ಚಿಕ್ಕವರು ಎಂಬ ಬೇಧ ಭಾವವಿಲ್ಲದೆ ಶಿಸ್ತಿನಿಂದ ಹೋರಾಟ ನಡೆಸುತ್ತಿರುವುದರಿಂದ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಕಾರ್ಯಕ್ರಮಗಳು ಯಶಸ್ವಿಯಾಗಿವೆ ಎಂದು ಹೇಳಿ, ಮೈಸೂರಿನ ಜನ ಕೂಡ ಶಿಸ್ತು ಹಾಗೂ ಸಂಘಟನೆಯ ಮಹತ್ವ ಅರಿತು ಅಳವಡಿಸಿಕೊಂಡರೆ ಹೋರಾಟ ಫಲಪ್ರದವಾಗುತ್ತದೆ" ಎಂದು ಹೇಳಿದರು.[28]

ಅಧಿವೇಶನದ ಅಧ್ಯಕ್ಷತೆವಹಿಸಿದ್ದ ವಿ. ವೆಂಕಟಪ್ಪ ತಮ್ಮ ಭಾಷಣದಲ್ಲಿ ಬ್ರಿಟಿಷ್ ಇಂಡಿಯಾ ಪ್ರಾಂತಗಳಲ್ಲಿ ರಾಜ್ಯಾಂಗ ಸುಧಾರಣಾ ಪ್ರಕ್ರಿಯೆ ಚಾಲನೆಯಲ್ಲಿದ್ದು, ಪ್ರಾಂತೀಯ ಶಾಸನಸಭೆಗಳಿಗೆ ಬ್ರಿಟಿಷ್ ಆಡಳಿತ ಹೆಚ್ಚಿನ ಅಧಿಕಾರ ಕೊಟ್ಟು ಪ್ರಾಂತ್ಯಗಳಲ್ಲಿ ಅಧಿಕಾರಿಗಳ ಪಾತ್ರವನ್ನು ಹೋಗಲಾಡಿಸಿ ನೂತನ ಕಾನೂನು ಜಾರಿಗೆ ತಂದಿದೆ. ಈ ಹಿನ್ನೆಲೆಯಲ್ಲಿ ಪ್ರಾಂತೀಯ ಶಾಸನಸಭೆಗಳಿಗೆ ಚುನಾವಣೆಗಳು ಈಗಾಗಲೇ ನಡೆದಿವೆ, ಇದರ ಫಲಾಫಲಗಳ ವಿಷಯದಲ್ಲಿ ಮೈಸೂರಿನಂತಹ ದೇಶೀಯ ಸಂಸ್ಥಾನದ ಜನರು ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಹೊಸ ಶಾಸನದ ಪ್ರಕಾರ ಬ್ರಿಟಿಷ್ ಪ್ರಾಂತಗಳು ಹಾಗೂ ದೇಶೀಯ ಸಂಸ್ಥಾನಗಳು ಜೊತೆಯಾಗಿ ಸೇರಿ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಸ್ಥಾಪಿಸುವ ಪ್ರಯೋಗ ನಡೆದಿದ್ದು ಇದು ಯಶಸ್ವಿಯಾಗುವುದು ಎಂಬ ನಂಬಿಕೆ ವ್ಯಕ್ತಪಡಿಸಿದರು.

---

28. ಪ್ರಕಟಣೆ: ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆಯ ಎರಡನೆಯ ಅಧಿವೇಶನ: ಚಂಗಲರಾಯ ರೆಡ್ಡಿ ಕೆ., ಕೋಲಾರ, ದಿನಾಂಕ : 23-01-1937.

ಪ್ರಜಾ ಸಂಯುಕ್ತ ಪಕ್ಷವು ಶ್ರೀಮಾನ್ ಮಹಾರಾಜರ ಕೃಪಾಶ್ರಯದಲ್ಲಿ ಶಾಂತಿಯುತವಾದ ಮತ್ತು ನ್ಯಾಯಬದ್ಧವಾದ ಮಾರ್ಗದಿಂದ ಆದಷ್ಟು ಬೇಗನೆ ಜವಾಬ್ದಾರಿ ಸರ್ಕಾರ ಪಡೆಯಬೇಕೆಂದು ಹೋರಾಟ ನಡೆಯುತ್ತಿದೆ, ಈ ಧ್ಯೇಯವನ್ನು ಸಾಧಿಸಲು ದೇಶದಲ್ಲಿ ಪ್ರಗತಿ ಮಾರ್ಗವನ್ನು ಅನುಸರಿಸುವ ಎಲ್ಲಾ ಸಂಸ್ಥೆಗಳ ಸಹಾಯ, ಸಹಾನುಭೂತಿ ಪಡೆಯಲಿಚ್ಛಿಸುತ್ತೇವೆ. ರಾಜ್ಯದ ಎಲ್ಲಾ ಕೋಮಿನವರಿಗೂ ಮುಕ್ತ ಹಾಗೂ ಸಮಾನವಾದ ಅನುಕೂಲಗಳನ್ನು ದೊರಕಿಸಿಕೊಡಲು ಹೋರಾಡುತ್ತೇವೆ ಎಂದು ವಿ. ವೆಂಕಟಪ್ಪ ಘೋಷಿಸಿದರು. ತಿರುವಾಂಕೂರಿನ ಅನಂತಪದ್ಮನಾಭಸ್ವಾಮಿ ದೇವಾಲಯಕ್ಕೆ ಹರಿಜನರ ಪ್ರವೇಶಾವಕಾಶ ಕಲ್ಪಿಸಿದ ತಿರುವಾಂಕೂರಿನ ಮಹಾರಾಜರ ಕಾರ್ಯವನ್ನು ಸ್ವಾಗತಿಸಿದ ವಿ. ವೆಂಕಟಪ್ಪನವರು, ಮಾದರಿ ಸಂಸ್ಥಾನ ಎಂಬ ಹೆಗ್ಗಳಿಕೆ ಪಡೆದಿರುವ ಮೈಸೂರು ಸಂಸ್ಥಾನವೂ ಕೂಡ ಈ ನಿಟ್ಟಿನಲ್ಲಿ ಮುಂದಾಗಬೇಕೆಂದು ಪ್ರಾರ್ಥಿಸಿದರು.

ಮೈಸೂರು ರಾಜ್ಯದ ರೈತರ ಆರ್ಥಿಕ ಸಂಕಷ್ಟ ಹಾಗೂ ಸಕಾಲದಲ್ಲಿ ಮಳೆಯಾಗದೆ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿ. ವೆಂಕಟಪ್ಪನವರು ಪ್ರಸ್ತಾಪಿಸಿದರು. ಈ ಕಷ್ಟಗಳ ನಿವಾರಣೆಗೆ ಪ್ರಜಾ ಸಂಯುಕ್ತ ಪಕ್ಷದ ನಾಯಕರು ಶಾಸನಸಭೆಯ ಹೊರಗೆ ಮತ್ತು ಒಳಗೆ ಮಾಡಿದ ಪ್ರಯತ್ನಗಳು ನಿರೀಕ್ಷಿತ ಫಲ ನೀಡಿಲ್ಲ ಎಂದು ವಿಷಾದಿಸಿದರು. ರೈತರ ಸ್ಥಿತಿಗತಿಗಳನ್ನು ಸರ್ಕಾರದ ಗಮನಕ್ಕೆ ತರಬೇಕಂಬ ಸದುದ್ದೇಶದಿಂದ ಪ್ರಜಾ ಸಂಯುಕ್ತ ಪಕ್ಷ ರಾಜ್ಯದ ವಿವಿಧೆಡೆಗಳಲ್ಲಿ ರೈತಸಭೆಗಳನ್ನು ಏರ್ಪಡಿಸಿತು. ಸರ್ಕಾರದ ಗಮನಕ್ಕೆ ಜನರ ಕಷ್ಟಗಳನ್ನು ತಂದು, ಅದಕ್ಕೆ ಬೇಕಾದ ಸಹಾಯವನ್ನು ಕಲ್ಪಿಸುವಂತೆ ಮಾಡಿ ಸರ್ಕಾರದ ಕೀರ್ತಿಯನ್ನು ಹೆಚ್ಚಿಸಬೇಕೆಂಬುದೇ ಪ್ರಜಾ ಸಂಯುಕ್ತ ಪಕ್ಷದ ಆಶಯ, ಇದನ್ನು ಅರ್ಥ ಮಾಡಿಕೊಳ್ಳದೆ ರೈತಸಭೆಗಳನ್ನು ರಾಜಕೀಯ ಸಭೆಗಳು ಎಂದು ದೂರಿ ಅವುಗಳನ್ನು ನಿಷೇಧಿಸುವುದು ವಿಷಾದನೀಯ ಎಂದು ಹೇಳಿದರು.

ಸರ್ಕಾರ ಜನಪರವಾದ ಚಳವಳಿಗಳನ್ನು ಹತ್ತಿಕ್ಕಲು ತೀರ್ಮಾನಿಸಿ ಈ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಂಡಿರುವುದನ್ನು ಅಧಿವೇಶನದ ಅಧ್ಯಕ್ಷರಾಗಿದ್ದ ವಿ. ವೆಂಕಟಪ್ಪ ಉದಾಹರಿಸಿದರು. ಪತ್ರಿಕೆಗಳ ಮೇಲೆ ನಿರ್ಬಂಧ ಹೇರಿ ಪತ್ರಿಕಾ ಸ್ವಾತಂತ್ರ್ಯವನ್ನು ಧಮನ ಮಾಡಲಾಗಿದೆ. ರೈತರ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಆಯೋಜಿಸಿದ್ದ ರೈತಸಭೆಗಳನ್ನು ನಿರ್ಬಂಧಿಸಲಾಗಿದೆ. ಶಾಸನಸಭೆಗಳಲ್ಲಿ ಚುನಾಯಿತ ಪ್ರತಿನಿಧಿಗಳ ಯಾವುದೇ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಹೇಳಿ ಪ್ರಜಾಸತ್ತಾತ್ಮಕ ಯಾವುದೇ ಲಕ್ಷಣಗಳು ರಾಜ್ಯ ಆಡಳಿತದಲ್ಲಿ ಕಾಣಸಿಗುವುದಿಲ್ಲ ಎಂದು ಹೇಳಿದರು. ಬ್ರಿಟಿಷ್ ಇಂಡಿಯಾ ಪ್ರಾಂತಗಳಲ್ಲೂ ಜವಾಬ್ದಾರಿ ಸರ್ಕಾರ ಕೆಲವು ಅಂಶಗಳನ್ನು ಪ್ರಾಂತಮಟ್ಟದಲ್ಲಿ ಅಳವಡಿಸಿ ಕೊಂಡಿರುವಾಗ

ಮೈಸೂರು ಸಂಸ್ಥಾನದ ಜನರಿಂದ ಐವತ್ತು ವರ್ಷಕ್ಕೂ ಹಿಂದೆ ಸ್ಥಾಪನೆಯಾದ ಪ್ರಜಾಪ್ರತಿನಿಧಿ ಸಭೆ ಅದೇ ಮಟ್ಟದಲ್ಲಿಯೇ ಇದೆ ಎಂದು ವಿಷಾದಿಸಿದರು.

ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಂತೆ ಪ್ರಜಾ ಸಂಯುಕ್ತ ಪಕ್ಷವೂ ಕೂಡ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಕರೆಕೊಟ್ಟರು. ಪ್ರಜಾ ಸಂಯುಕ್ತ ಪಕ್ಷದ ಸದಸ್ಯರು ಅಸ್ಪೃಶ್ಯತಾ ನಿವಾರಣೆ, ಸ್ವದೇಶಿ ವಸ್ತು ಹಾಗೂ ಖಾದಿ ಪ್ರಚಾರ, ಗ್ರಾಮೀಣ ಪುನರುದ್ಧಾರ ಕಾರ್ಯಕ್ರಮಗಳಲ್ಲಿ ಹೆಚ್ಚಿಗೆ ತೊಡಗಿಸಿ ಕೊಳ್ಳಬೇಕೆಂದು ಕರೆಕೊಟ್ಟರು. ವಿಶೇಷವಾಗಿ ಗ್ರಾಮೀಣ ಪ್ರದೇಶದ ಸದಸ್ಯರೇ ಹೆಚ್ಚಿರುವ ಪ್ರಜಾ ಸಂಯುಕ್ತ ಪಕ್ಷಕ್ಕೆ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಹೆಚ್ಚಿನ ಕಷ್ಟವೇನು ಆಗದು ಎಂದು ಹೇಳಿದರು.[29]

8. ಪ್ರಜಾ ಸಂಯುಕ್ತ ಪಕ್ಷದ ಸಾಮಾಜಿಕ ಕಾರ್ಯಕ್ರಮಗಳು

ಕೋಲಾರದಲ್ಲಿ ನಡೆದ ಪ್ರಜಾ ಸಂಯುಕ್ತ ಪಕ್ಷದ ಅಧಿವೇಶನದಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪಾಮಡಿ ಸುಬ್ಬರಾಮ ಶೆಟ್ಟಿ ಒಂದು ನಿರ್ಣಯ ಮಂಡಿಸಿ "ತಿರುವಾಂಕೂರು ಸರ್ಕಾರ ಹರಿಜನರು ದೇವಾಲಯ ಪ್ರವೇಶಕ್ಕೆ ಮುಕ್ತ ಅವಕಾಶ ಕಲ್ಪಿಸಿ ಹೊರಡಿಸಿದ ಆದೇಶದಂತೆಯೇ ಮೈಸೂರು ಸಂಸ್ಥಾನದಲ್ಲೂ ಕೂಡ ಹರಿಜನರ ದೇವಾಲಯ ಪ್ರವೇಶಕ್ಕೆ ಅವಕಾಶ ಮಾಡಿಕೊಡುವಂತಹ ಒಂದು ಶಾಸನ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು". ಎನ್. ಬಾಲಕೃಷ್ಣಯ್ಯ ಒಂದು ನಿರ್ಣಯ ಮಂಡಿಸಿ "ಪ್ರಜಾ ಸಂಯುಕ್ತ ಪಕ್ಷವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಜೊತೆಗೂಡಿ ಅಸ್ಪೃಶ್ಯತಾ ನಿವಾರಣೆ ಹಾಗೂ ಪಾನನಿರೋಧ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕೆಂದು ಕರೆಕೊಟ್ಟರು".

ಡಿ.ಎಸ್. ಮಲ್ಲಯ್ಯ ಒಂದು ನಿರ್ಣಯ ಮಂಡಿಸಿ "ಹರಿಜನರು ಗ್ರಾಮಗಳ ಸಾರ್ವಜನಿಕ ಬಾವಿಗಳಿಂದ ನೀರು ಸಂಗ್ರಹಿಸಲು ಅವಕಾಶವಾಗುವಂತೆ ಒಂದು ಶಾಸನ ಹೊರಡಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದರು". ಎಚ್. ಸಿದ್ದಯ್ಯ ಒಂದು ನಿರ್ಣಯ ಮಂಡಿಸಿ "ಬಡರೈತ ಕೊಡುವ ತೆರಿಗೆಯಿಂದ ಅಧಿಕಾರಿಗಳು ವೈಭೋಗದ ಜೀವನ ನಡೆಸುತ್ತಿದ್ದಾರೆ, ರಾಜ್ಯ ಶೈಕ್ಷಣಿಕ ಕ್ಷೇತ್ರದಲ್ಲಿ ಬಹಳ ಹಿಂದುಳಿದಿದೆ, ವಿಶೇಷವಾಗಿ ಗಾಮೀಣ ಪ್ರದೇಶದ ಜನ ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದೂ, ಅಲ್ಲದೆ ದಿವಾನರ

29. ಪ್ರಕಟಣೆ :ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆಯ ಎರಡನೆಯ ಅಧಿವೇಶನ : ವೆಂಕಟಪ್ಪ ವಿ. ಕೋಲಾರ, ದಿನಾಂಕ : 23-01-1937.

ಕಾರ್ಯಾವಧಿ ಐದು ವರ್ಷಗಳಿಗೆ ಸೀಮಿತಗೊಳಿಸಬೇಕೆಂದು ಆಗ್ರಹಿಸಿದರು". ಹೆಚ್.ಸಿ. ದಾಸಪ್ಪ ಒಂದು ನಿರ್ಣಯ ಮಂಡಿಸಿ "ದಿವಾನರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆಯುತ್ತಿರುವ ಚಳವಳಿಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆಂದು ದೂರಿದರು". ಕೆ.ಸಿ. ರೆಡ್ಡಿ ಅವರು ಒಂದು ನಿರ್ಣಯ ಮಂಡಿಸಿ "ಮೈಸೂರು ಸರ್ಕಾರ ಬ್ರಿಟಿಷ್ ಸರ್ಕಾರಕ್ಕೆ ನೀಡುತ್ತಿರುವ ಸಬ್ಸಿಡಿ ಒಂದು ದೊಡ್ಡ ಆರ್ಥಿಕ ಹೊರೆ ಎಂದು ಹೇಳಿ ಅದನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿದರು"[30]

ಪ್ರಜಾ ಸಂಯುಕ್ತ ಪಕ್ಷವು ಅಖಿಲ ಭಾರತ ಮಟ್ಟದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಹಾಕಿಕೊಂಡ ಸಾಮಾಜಿಕ ಕಾರ್ಯಕ್ರಮಗಳಿಂದ ಬಹಳ ಪ್ರಭಾವಿತವಾದುದು ಕಂಡು ಬರುತ್ತದೆ. ಬೆಂಗಳೂರಿನ ಬಳಿಯ ಕೆಂಗೇರಿ ಆಶ್ರಮದಲ್ಲಿ ದಕ್ಷಿಣ ಭಾರತದ ಹರಿಜನ ಕಾರ್ಯಕರ್ತರ ಸಮ್ಮೇಳನದಲ್ಲಿ ಭಾಗವಹಿಸಲು ಗಾಂಧೀಜಿ ಅವರು 1936ರಲ್ಲಿ ಮೈಸೂರು ಸಂಸ್ಥಾನಕ್ಕೆ ಆಗಮಿಸಿದರು. ಕೆ.ಸಿ. ರೆಡ್ಡಿ ಅವರು ಗಾಂಧೀಜಿ ಅವರನ್ನು ಭೇಟಿ ಮಾಡಿ ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಬೇಕೆಂದು ವಿನಂತಿಸಿ ಕೊಂಡರು. ಗಾಂಧೀಜಿ ಅವರು ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ, ಚಿನ್ನದಗಣಿ ಪ್ರದೇಶಗಳಿಗೆ ಭೇಟಿ ನೀಡಿದರು.

ದಿನಾಂಕ 31-05-1936 ರಲ್ಲಿ ಕೋಲಾರ ಚಿನ್ನದ ಗಣಿ ಪ್ರದೇಶದ ಕಾರ್ಮಿಕರು ವಾಸಿಸುವ ಪ್ರದೇಶಗಳಿಗೆ ಭೇಟಿ ನೀಡಿದ ಗಾಂಧೀಜಿ, ಅವರ ವಾಸ ಸ್ಥಳಗಳನ್ನು ಹಾಗೂ ಕಡು ಬಡತನವನ್ನು ಕಂಡು ನೋವನ್ನು ವ್ಯಕ್ತಪಡಿಸಿದರು. ಕಾರ್ಮಿಕರು ವಾಸಿಸುವ ಗುಡಿಸಲುಗಳು ಬಹುಚಿಕ್ಕವು, ಚಾವಣಿ ತುಂಬಾ ತಗ್ಗು, ಸಾಕಷ್ಟು ಬೆಳಕಿಲ್ಲ, ಮನುಷ್ಯರ ವಾಸಕ್ಕೆ ಯೋಗ್ಯವಲ್ಲ ಎಂದು ನೋವಿನಿಂದ ನುಡಿದರು. ಕೆಲಸಗಾರರು ಹೆಚ್ಚಿನ ತರಬೇತಿ ಪಡೆದು ಜಾಣತನದಿಂದ ಒಟ್ಟಾಗಿ ಕೆಲಸ ಮಾಡಿದರೆ ಅವರ ಸ್ಥಿತಿ ಉತ್ತಮವಾಗುತ್ತದೆ ಎಂದು ಕಾರ್ಮಿಕರಿಗೆ ಬುದ್ಧಿ ಹೇಳಿದರು. ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಎಷ್ಟೇ ಒತ್ತಾಯ ಮಾಡಿದರೂ, ತಮ್ಮ ಕರ್ತವ್ಯವನ್ನು ಮರೆಯಬಾರದು. ಈ ಗಣಿಗಳು ತಮ್ಮ ಸ್ವಂತದ್ದು ಎಂಬ ಮನೋಭಾವದಿಂದ ದುಡಿಯಬೇಕೆಂದು ಕರೆ ಕೊಟ್ಟರು. ಹೆಂಡ, ಜೂಜು ಮುಂತಾದ ದುಶ್ಚಟಗಳನ್ನು ಬಿಡಬೇಕೆಂದು ಕಾರ್ಮಿಕರಿಗೆ ಕಿವಿಮಾತು ಹೇಳಿದರು.[31]

---

30. Procedings of the Second Mysore State Peoples Federation at Kolar : C.B. File No. : 139-1936-37 (1 to 6), Date : 20-01-1937 to 24-01-1937.
31. ಗಾಂಧಿ ಮತ್ತು ಕರ್ನಾಟಕ : ಹರಿಜನ ಪತ್ರಿಕೆ : ದಿನಾಂಕ : 13-06-1936, ಪುಟ 290-293.

ಗಾಂಧೀಜಿ ಅವರು ಬಂಗಾರಪೇಟೆಗೆ ಆಗಮಿಸಿದ ಸಂದರ್ಭವಲ್ಲಿ ಪುರದ ನಿವಾಸಿಗಳು ಗಾಂಧೀಜಿ ಅವರಿಗೆ ಒಂದು ಭಿನ್ನವತ್ತಳೆ ಅರ್ಪಿಸಿದರು. ಭಿನ್ನವತ್ತಳೆಯಲ್ಲಿ "ಭಾರತದ ಜನರ ಏಳಿಗೆಗಾಗಿ ಗಾಂಧೀಜಿ ಅವರು ಹಾಕಿಕೊಂಡಿರುವ ಕಾರ್ಯಕ್ರಮಗಳು ಹಾಗೂ ನಡೆಸುತ್ತಿರುವ ಹೋರಾಟಗಳ ಬಗ್ಗೆ ತಾವು ಬಹಳ ಕುತೂಹಲದಿಂದ ಗಮನಿಸುತ್ತಿದ್ದೇವೆಂದು, ಗಾಂಧೀಜಿ ಅವರಿಗೆ ಪ್ರಿಯವಾದ ಖಾದಿ, ಹಿಂದಿಪ್ರಚಾರ, ಹರಿಜನೋದ್ಧಾರ ಮತ್ತು ಗ್ರಾಮ ಕೈಗಾರಿಕೆಗಳ ಪುನಃಶ್ಚೇತನ ಕಾರ್ಯಕ್ರಮಗಳು ತಮ್ಮ ಮನಸ್ಸಿಗೆ ಹಿಡಿಸಿವೆ ಎಂದು ಹೇಳಿದರು. ಗಾಂಧೀಜಿ ಅವರಿಗೆ ಪ್ರಿಯವಾದ ಹರಿಜನೋದ್ಧಾರ ಕಾರ್ಯದಲ್ಲಿ ತಮಗೆ ಸ್ಥಿರವಾದ ಅಭಿರುಚಿ ಇದ್ದು, ಇದಕ್ಕಾಗಿ ಶ್ರಮಿಸುತ್ತೇವೆಂದು ಗಾಂಧೀಜಿ ಅವರಿಗೆ ಭರವಸೆ ಇತ್ತರು. ಬಂಗಾರಪೇಟೆಯ ಪುರಸಭೆಯ ಸೇವೆಯಲ್ಲಿ ನಿರತರಾಗಿರುವ ಹರಿಜನರಿಗೆ ಆರೋಗ್ಯಕರವಾದ ವಸತಿಗಳನ್ನು ಒದಗಿಸಲು 1,600 ರೂಪಾಯಿಗಳನ್ನು ಖರ್ಚು ಮಾಡಲು ತೀರ್ಮಾನ ಕೈಗೊಂಡಿರುವುದಾಗಿ ತಿಳಿಸಿದರು. ಪಟ್ಟಣದಲ್ಲಿ ಸುಮಾರು 400 ಮಂದಿ ಹರಿಜನರು ವಾಸಿಸುತ್ತಾರೆ, ಇವರಿಗೆ ನಿವೇಶನಗಳನ್ನು ಒದಗಿಸಿರುವುದಲ್ಲದೆ, ಅನೇಕ ಸಂದರ್ಭಗಳಲ್ಲಿ ಕಟ್ಟಡ ಸಾಮಾನುಗಳನ್ನು ಉಚಿತವಾಗಿ ಪುರಸಭೆಯ ವತಿಯಿಂದ ನೀಡಲಾಗಿದೆ ಎಂದು ತಿಳಿಸಿದರು. ಇತರ ಪುರ ಜನರಂತೆಯೇ ಹರಿಜನರಿಗೂ ಕೂಡ ವಿದ್ಯುತ್ ದೀಪ, ಕುಡಿಯುವ ನೀರಿನ ಬಾವಿಗಳು, ರಸ್ತೆಗಳು ಹಾಗೂ ಆಸ್ಪತ್ರೆ ಅನುಕೂಲಗಳನ್ನು ಪುರಸಭೆ ಕಲ್ಪಿಸಿದೆ ಎಂದು ಭಿನ್ನವತ್ತಳೆಯಲ್ಲಿ ಪ್ರಸ್ತಾಪಿಸಲಾಗಿದೆ. ಹರಿಜನರ ಸ್ಥಿತಿಗಳನ್ನು ಉತ್ತಮಪಡಿಸಲು ಇನ್ನೂ ಹೆಚ್ಚಿನ ಪ್ರಯತ್ನ ಮಾಡುವುದಾಗಿ ಭಿನ್ನವತ್ತಳೆಯಲ್ಲಿ ಭರವಸೆ ನೀಡಲಾಯಿತು. ಈ ಸಂದರ್ಭದಲ್ಲಿ 285 ರೂ.ಗಳನ್ನು ಗಾಂಧೀಜಿಯವರ ಹರಿಜನರ ಕಲ್ಯಾಣ ನಿಧಿಗೆ ಅರ್ಪಿಸಲಾಯಿತು"[32].

ಇದೇ ಸಂದರ್ಭದಲ್ಲಿ ವರ್ತಕರಾದ ರಾಜಾ ಆದಿನಾರಾಯಣ ಶೆಟ್ಟಿಯವರು ಬಂಗಾರಪೇಟೆಯಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿರುವುದನ್ನು ಈಗಲೂ ಕಾಣಬಹುದು.

"ಗಾಂಧೀಜಿ ಅವರ ಕೋಲಾರ ಜಿಲ್ಲೆ ಪ್ರವಾಸ ಆಯೋಜಕರಾಗಿದ್ದ ಕೆ.ಸಿ. ರೆಡ್ಡಿ ಅವರು ಈ ಸಂದರ್ಭದಲ್ಲಿ 1,000 ರೂಪಾಯಿಗಳನ್ನು ಗಾಂಧೀಜಿಯವರು ಹರಿಜನ ಕಲ್ಯಾಣನಿಧಿಗೆ ಸಂಗ್ರಹಿಸುವ ಯೋಜನೆ ಇಟ್ಟುಕೊಂಡಿದ್ದರು. ಆದರೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ 1,600 ರೂಪಾಯಿಗಳು ನಿಧಿಗೆ ಸಂಗ್ರಹಿಸಲಾಯಿತು. ತಮ್ಮ ಪ್ರವಾಸ ಸಂದರ್ಭದಲ್ಲಿ ಗಾಂಧೀಜಿ ಖಾದಿ ಪ್ರಚಾರಕ್ಕೆ ಒತ್ತುಕೊಟ್ಟರು. ಸರ್ಕಾರ ಖಾದಿ ಉತ್ಪಾದನೆಗೆ

32. ಭಿನ್ನವತ್ತಳೆ : ಮಹಾತ್ಮ ಮೋಹನದಾಸ್ ಕರಮ್‌ಚಂದ್ ಗಾಂಧೀಜಿಯವರ ಸಮಕ್ಷಮದಲ್ಲಿ ಬೌರಿಂಗ್‌ಪೇಟೆ ಪುರನಿವಾಸಿಗಳು ಅರ್ಪಿಸಿದ ಭಿನ್ನವತ್ತಳೆ, ಕೋಲಾರ. ದಿ : 31–05–1936.

ಪ್ರೋತ್ಸಾಹ ನೀಡಿ ಬದನವಾಳದಲ್ಲಿ ಖಾದಿ ಕೇಂದ್ರ ನಡೆಸುತ್ತಿರುವ ಬಗ್ಗೆ ಸಂತೋಷ ವ್ಯಕ್ತಪಡಿಸಿದ ಗಾಂಧೀಜಿ ಇಷ್ಟಾದರೂ ಕೂಡ ಮೈಸೂರು ರಾಜ್ಯದಲ್ಲಿ ಖಾದಿ ಸರ್ವವ್ಯಾಪ್ತಿ ಆಗಿಲ್ಲ ಎಂಬುದಾಗಿ ಹೇಳಿದರು. ಸರ್ಕಾರದ ನೌಕರರು ಶಾಸನಸಭೆ ಸದಸ್ಯರು, ಪುರಸಭೆ ಸದಸ್ಯರು ಖಾದಿ ತೊಡುವ ಮೂಲಕ ಇತರರಿಗೆ ಉದಾಹರಣೆಯಾಗಬೇಕೆಂದು ಕರೆಕೊಟ್ಟರು"[33]

ಜಿಲ್ಲಾ ಬೋರ್ಡ್‌ಗಳ ಅಧ್ಯಕ್ಷರಾಗಿ ಗ್ರಾಮೀಣ ಪ್ರದೇಶದ ಜನಗಳ ನೇರ ಸಂಪರ್ಕ ಸ್ಥಾಪಿಸಿಕೊಂಡಿದ್ದ ಪ್ರಜಾ ಸಂಯುಕ್ತ ಪಕ್ಷದ ನಾಯಕರುಗಳು ಗಾಂಧೀಜಿ ಅವರ ಗ್ರಾಮೋದ್ಧಾರದ ಕಲ್ಪನೆ ಸಾಕಾರಗೊಳಿಸಲು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡರು. "ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಅವರು ಹೊಸೂರಿನಲ್ಲಿ ಖಾದಿ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಂಡರು. ಚಿಕ್ಕಮಗಳೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಕೆ.ಟಿ. ಸತ್ಯನಾರಾಯಣಶೆಟ್ಟಿ ಅಜ್ಜಂಪುರದಲ್ಲಿ ಖಾದಿ ಕೇಂದ್ರ ತೆರೆಯಲು ಕ್ರಮ ಕೈಗೊಂಡರು"[34]. ಹೀಗೆ ಪ್ರಜಾಸಂಯುಕ್ತ ಪಕ್ಷದ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕ್ರಮಗಳು ಸಂಸ್ಥಾನದಲ್ಲಿ ಜನತೆಯ ಅಪಾರ ಬೆಂಬಲವನ್ನು ಗಳಿಸಿದುದನ್ನು ಗಮನಿಸಬಹುದು.

9. ಪ್ರಜಾ ಸಂಯುಕ್ತ ಪಕ್ಷ ಹಾಗೂ ಕಾಂಗ್ರೆಸ್ ವಿಲೀನ ಮತ್ತು ಕೆ.ಸಿ. ರೆಡ್ಡಿ

1937ರ ಜನವರಿ ತಿಂಗಳಿನಲ್ಲಿ ಕೋಲಾರದಲ್ಲಿ ನಡೆದ ಪ್ರಜಾ ಸಂಯುಕ್ತ ಪಕ್ಷದ ಎರಡನೆಯ ಅಧಿವೇಶನದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಪ್ರಜಾ ಸಂಯುಕ್ತ ಪಕ್ಷವನ್ನು ಕೆಲವರು ಕೋಮುವಾದಿ ಪಕ್ಷ ಎಂದು ಟೀಕೆ ಮಾಡುವುದನ್ನು ಆಕ್ಷೇಪಿಸಿದ್ದರು. "ಪ್ರಜಾ ಸಂಯುಕ್ತ ಪಕ್ಷದಲ್ಲಿ ಹಿಂದೂಗಳು, ಮಹಮದೀಯರು, ಬ್ರಾಹ್ಮಣರು, ಹಿಂದುಳಿದ ವರ್ಗದವರು, ಕ್ರೈಸ್ತರು ಹಾಗೂ ಹರಿಜನರು ಎಲ್ಲರೂ ಸದಸ್ಯತ್ವ ಹೊಂದಿದ್ದಾರೆ ಎಂದು, ತಮ್ಮ ಪಕ್ಷವು ಸಂಸ್ಥಾನದ ಎಲ್ಲರ ಹಿತಕ್ಕಾಗಿ ಹೋರಾಟ ನಡೆಸುವುದಾಗಿ ಘೋಷಿಸಿದರು. ಅಖಿಲ ಭಾರತ ಮಟ್ಟದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆ ಪಕ್ಷದಲ್ಲಿನ ಶಿಸ್ತು ಹಾಗೂ ಸೇವಾ ಮನೋಭಾವ ಕಾರಣವಾಗಿದೆ, ಮೈಸೂರು ಸಂಸ್ಥಾನದ ಜನತೆಯೂ ಕೂಡ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸರ್ವತ್ಯಾಗವನ್ನು ಮಾಡಲು ಕೂಡ ಸಿದ್ಧರಿರಬೇಕೆಂದು ಕರೆಕೊಟ್ಟರು"[35].

---

33. ಗಾಂಧಿ ಮತ್ತು ಕರ್ನಾಟಕ : ಹರಿಜನ ಪತ್ರಿಕೆ : ದಿನಾಂಕ : 13-06-1936, ಪುಟ 292-293.
34. ಸರ್ದಾರ್ ವೆಂಕಟರಾಮಯ್ಯ : ಸತ್ಯಾಗ್ರಹಿ ಒಂದು ಜೀವನ ಕಥೆ : ಪುಟ 362-363.
35. ಪ್ರಕಟಣೆ: ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆಯ ಎರಡನೆಯ ಅಧಿವೇಶನ: ಚಂಗಲರಾಯರೆಡ್ಡಿ,ಕೆ. ಕೋಲಾರ, ದಿನಾಂಕ : 23-01-1937.

ಅಧಿವೇಶನದ ಅಧ್ಯಕ್ಷತೆ ವಹಿಸಿದ ವಿ. ವೆಂಕಟಪ್ಪನವರು ಅಖಿಲ ಭಾರತ ಮಟ್ಟದಲ್ಲಿ ನಡೆಯುತ್ತಿರುವ ರಾಜಕೀಯ ಬದಲಾವಣೆಗಳನ್ನು ಅಧಿವೇಶನದ ಗಮನಕ್ಕೆ ತಂದು "ಶ್ರೀಮಾನ್ ಮಹಾರಾಜರ ಕೃಪಾಶ್ರಯದಲ್ಲಿ ಶಾಂತಿಯುತವಾದ ಮತ್ತು ನ್ಯಾಯಬದ್ಧವಾದ ಮಾರ್ಗದಿಂದ ಆದಷ್ಟು ಜಾಗ್ರತೆ ಜವಾಬ್ದಾರಿ ಸರ್ಕಾರವನ್ನು ಪಡೆಯಬೇಕೆಂಬುದೇ ಪ್ರಜಾ ಸಂಯುಕ್ತ ಪಕ್ಷದ ಧ್ಯೇಯವಾಗಿದೆ. ಈ ಧ್ಯೇಯವನ್ನು ಸಾಧಿಸುವಲ್ಲಿ ಸಂಸ್ಥಾನವು ಪ್ರಗತಿ ಮಾರ್ಗವನ್ನು ಅನುಸರಿಸುವ ಎಲ್ಲಾ ಸಂಸ್ಥೆಗಳ ಸಹಾಯ, ಸಹಾನುಭೂತಿ ಪಡೆಯಲಿಚ್ಛಿಸುತ್ತೇವೆ ಎಂದು ಘೋಷಿಸಿದರು"[36]. ಈ ಹಿನ್ನೆಲೆಯಲ್ಲಿ ಪ್ರಜಾ ಸಂಯುಕ್ತ ಪಕ್ಷ ಹಾಗೂ ಕಾಂಗ್ರೆಸ್ ವಿಲೀನ ಪ್ರಕ್ರಿಯೆಗೆ ಚಾಲನೆ ದೊರೆಯಿತು.

ಈ ಅಧಿವೇಶನದಲ್ಲಿ ಹಲವು ಕಾಂಗ್ರೆಸ್ಸಿಗರು ಪಾಲ್ಗೊಂಡಿದ್ದರು. ಈ ಬಗ್ಗೆ ಚರ್ಚಿಸುವ ಎಚ್.ಕೆ. ವೀರಣ್ಣಗೌಡ "ತಾವು, ವೀರಕೇಸರಿ ಸೀತಾರಾಮಶಾಸ್ತ್ರಿ, ವಿ.ಎಸ್. ನಾರಾಯಣರಾಯರು ಹಾಗೂ ತಗಡೂರು ರಾಮಚಂದ್ರರಾಯರು, ಆಹ್ವಾನವಿಲ್ಲದಿದ್ದರೂ ಕೂಡ ಪ್ರಜಾ ಸಂಯುಕ್ತ ಪಕ್ಷದ ಕೋಲಾರ ಅಧಿವೇಶನಕ್ಕೆ ಹೋದದ್ದಾಗಿಯೂ, ಅಧಿವೇಶನದ ಸಂದರ್ಭದಲ್ಲಿ ಕೆ.ಸಿ. ರೆಡ್ಡಿ ಅವರನ್ನು ಭೇಟಿ ಮಾಡಿ ಪ್ರಜಾ ಸಂಯುಕ್ತ ಪಕ್ಷ ಹಾಗೂ ಕಾಂಗ್ರೆಸ್ ವಿಲೀನಗೊಳ್ಳಲು ಅನುಕೂಲವಾಗುವಂತೆ ಅಧಿವೇಶನದಲ್ಲಿ ನಿರ್ಣಯವನ್ನು ಅಂಗೀಕರಿಸಬೇಕೆಂದು ಮಾತನಾಡಿದೆವು ಎಂದು ನೆನಪಿಸಿಕೊಳ್ಳುತ್ತಾರೆ. ಮುಂದುವರೆದು, ಪ್ರಜಾ ಸಂಯುಕ್ತ ಪಕ್ಷ ಹಾಗೂ ಕಾಂಗ್ರೆಸ್ ಎರಡೂ ಪಕ್ಷಗಳು ಒಂದೇ ಧ್ಯೇಯವನ್ನು ಹೊಂದಿವೆ, ಆದುದರಿಂದ ಎರಡು ಪಕ್ಷಗಳು ಏಕೆ ಒಂದಾಗಬಾರದು ಎಂಬ ಕಾಂಗ್ರೆಸ್ಸಿಗರ ಪ್ರಸ್ತಾಪಕ್ಕೆ ಕೆ.ಸಿ. ರೆಡ್ಡಿ ಅವರು ವಿಲೀನ ಕುರಿತು ಸ್ವಲ್ಪ ನಿಧಾನವಾಗಿ ಪರ್ಯಾಲೋಚಿಸಬೇಕಾಗಿದೆ, ಆದರೆ ವಿಲೀನಕಾಲ ಬಹುದೂರವಿರಲಾರದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು".[37] ಈ ಬೆಳವಣಿಗೆಗಳ ಬಗ್ಗೆ ತಮ್ಮ ಕೃತಿಯಲ್ಲಿ ಚರ್ಚಿಸಿರುವ ಸರ್ದಾರ್ ವೆಂಕಟರಾಮಯ್ಯ "ತಾವು ಕೂಡ ಪ್ರಜಾ ಸಂಯುಕ್ತ ಪಕ್ಷದ ಕೋಲಾರ ಅಧಿವೇಶನಕ್ಕೆ ಹೋದುದ್ದಾಗಿಯೂ, ಆ ಸಭೆ ಸರ್ಕಾರದ ವಿರುದ್ಧ ಸಾಕಷ್ಟು ಅಸಂತೋಷವನ್ನು ವ್ಯಕ್ತಗೊಳಿಸಿದುದಲ್ಲದೆ, ಪ್ರಜಾ ಸಂಯುಕ್ತ ಪಕ್ಷವು ಕಾಂಗ್ರೆಸ್‌ನೊಡನೆ ಸೇರುವ ಹಿಂಗಿತವನ್ನು ನೀಡಿತೆಂದು ಪ್ರಸ್ತಾಪಿಸುತ್ತಾರೆ"[38].

---

36. ಪ್ರಕಟಣೆ : ಮೈಸೂರು ಪ್ರಜಾ ಸಂಯುಕ್ತ ಸಂಸ್ಥೆಯ ಎರಡನೆಯ ಅಧಿವೇಶನ : ವೆಂಕಟಪ್ಪ, ವಿ. ಕೋಲಾರ, ದಿನಾಂಕ: 23–01–1937.
37. ವೀರಣ್ಣಗೌಡ .ಎಚ್.ಕೆ. : ಬದುಕು–ಮೆಲುಕು, ಪುಟ 158–159.
38. ಸರ್ದಾರ್ ವೆಂಕಟರಾಮಯ್ಯ : ಸತ್ಯಾಗ್ರಹಿ ಒಂದು ಜೀವನ ಕಥೆ : ಪುಟ 372–373.

1937ರ ಮಾರ್ಚ್ ತಿಂಗಳಲ್ಲಿ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಗೆ ಚುನಾವಣೆಗಳು ನಡೆದವು. ಚುನಾವಣೆಗಳಲ್ಲಿ ಭಾಗವಹಿಸಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮೈಸೂರು ಕಾಂಗ್ರೆಸ್ಸಿಗರಿಗೆ ಹಸಿರು ನಿಶಾನೆ ತೋರಿಸಿತು. ಈ ಚುನಾವಣೆಗಳಲ್ಲಿ ಪ್ರಜಾ ಸಂಯುಕ್ತ ಪಕ್ಷ ಹಾಗೂ ಕಾಂಗ್ರೆಸ್ ಪ್ರತ್ಯೇಕವಾಗಿ ಚುನಾವಣೆಗಳನ್ನು ಎದುರಿಸಿದವು. ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಾಯಕರ ಹೆಸರು, ಬೆಂಬಲ, ಚಿಹ್ನೆ, ಆಶೀರ್ವಾದ ಪಡೆದು ಕಾಂಗ್ರೆಸ್ಸಿಗರು ಚುನಾವಣಾ ಪ್ರಚಾರ ಪ್ರಾರಂಭಿಸಿದರು. ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಮಾತ್ರ ಕಾಂಗ್ರೆಸ್ ಪಕ್ಷದ ಸದಸ್ಯರ ಸಂಖ್ಯೆ ಹಾಗೂ ಸಂಘಟನೆ ಚುರುಕಾಗಿದ್ದು, ಸಂಸ್ಥಾನದ ಇತರೆಡೆ ಪಕ್ಷ ಬಲಗೊಂಡಿಲ್ಲದುದ್ದು ಕಾಂಗ್ರೆಸ್ಸಿಗರಿಗೆ ಒಂದು ದೊಡ್ಡ ತೊಡಕಾಯಿತು. ನ್ಯಾಯವಿಧಾಯಕ ಸಭೆಗೆ ನಡೆದ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ 10 ಜನ ಕಾಂಗ್ರೆಸ್ಸಿಗರ ಪೈಕಿ 4 ಜನ ಮಾತ್ರ ಚುನಾವಣೆಯಲ್ಲಿ ಜಯಶೀಲರಾದರು. ಇದಕ್ಕೆ ವ್ಯತಿರಿಕ್ತವಾಗಿ ಪ್ರಜಾ ಸಂಯುಕ್ತ ಪಕ್ಷದ 16 ಸ್ಪರ್ಧಿಗಳಲ್ಲಿ 13 ಮಂದಿ ಜಯಗಳಿಸಿದರು.

ಈ ಚುನಾವಣಾ ಫಲಿತಾಂಶ ಕಾಂಗ್ರೆಸ್ಸಿಗರ ಆತ್ಮಾವಲೋಕನಕ್ಕೆ ಎಡೆ ಮಾಡಿಕೊಟ್ಟಿತು. ಚುನಾವಣೆಯ ನಂತರ ನಡೆದ ಸಭೆಯಲ್ಲಿ ಸರ್ದಾರ್ ವೆಂಕಟರಾಮಯ್ಯ ಚುನಾವಣಾ ಪರಿಣಾಮ ಕುರಿತು ಚರ್ಚಿಸುತ್ತಾ "ಕಾಂಗ್ರೆಸ್ ಶಕ್ತಿಶಾಲಿಯಾಗಿ ಬೆಳೆಯಲು ಹಲವು ತುರ್ತುಕ್ರಮಗಳನ್ನು ಸೂಚಿಸಿದರು. ನಮ್ಮಲ್ಲಿ ಬಹುಮಂದಿ ದೇಶಕ್ಕಾಗಿ ತ್ಯಾಗ ಮಾಡಿದವರಿದ್ದೇವೆ, ಸೆರೆಮನೆ ಶಿಕ್ಷೆ ಅನುಭವಿಸುವವರಿದ್ದೇವೆ, ರಾಜ್ಯದ ಹೊರಗೆ ಹೋಗಿ ಕೆಲಸ ಮಾಡಿ ಬಂದಿದ್ದೇವೆ, ನಮ್ಮ ಸೇವೆ ಹಾಗೂ ತ್ಯಾಗದ ಬಗ್ಗೆ ಜನರು ಪ್ರಶಂಸೆ ವ್ಯಕ್ತಪಡಿಸುತ್ತಾರೆ, ಅವರು ನಮ್ಮನ್ನು ಗೌರವಿಸುತ್ತಾರೆ, ಆದರೆ ನಮ್ಮಲ್ಲಿ ಯಾರಿಗೂ ರಾಜಕೀಯ ಬೆಂಬಲವಿಲ್ಲ, ಹಿಂಬಾಲಕರಿಲ್ಲ, ಜನಸಮುದಾಯದಲ್ಲಿ ನಮಗೆ ಬೇರು ಇಲ್ಲ. ಇದಕ್ಕೆ ಬದಲಾಗಿ ಪ್ರಜಾ ಸಂಯುಕ್ತ ಪಕ್ಷದ ಯುವ ನಾಯಕರಿಗೆಲ್ಲ ಜನಸಮುದಾಯದ ಬೆಂಬಲವಿದೆ. ವಾಸ್ತವವಾಗಿ ಜನತೆಯ ಪ್ರತಿನಿಧಿಗಳು ಅವರೇ, ಅವರೆಲ್ಲ ಜಸ್ಟೀಸ್ ಪಾರ್ಟಿಯ ಚಿಂತನೆ ಹಾಗೂ ಸಿದ್ಧಾಂತಕ್ಕೆ ಒಲಿದಿದ್ದಾರೆಂಬುದನ್ನು ಬಿಟ್ಟರೆ, ಅವರಲ್ಲಿ ಯಾರೊಬ್ಬರು ನಮಗಿಂತ ಭಿನ್ನವಾದವರಲ್ಲ, ಅವರು ಕೂಡ ನಮ್ಮಂತೆಯೇ ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾದವರೇ, ಅವರ ಪೈಕಿ ಹಲವರು ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹಾಜರಾಗಿದ್ದವರಿದ್ದಾರೆ, ಖಾದಿಧಾರಣೆ ಮಾಡುತ್ತಾರೆ, ಯುವಕರಿರುವಾಗಲೇ ಗಾಂಧೀ ತತ್ವವನ್ನು ಮೈಗೂಡಿಸಿ ಕೊಂಡವರಾಗಿದ್ದಾರೆ, ಈ ಜನರನ್ನು ಕಾಂಗ್ರೆಸ್ಸಿಗೆ ಸೇರುವಂತೆ ಒಲಿಸಿಕೊಳ್ಳುವುದರಲ್ಲಿ ತಾವು ಸಫಲರಾದರೆ, ಇಡೀ ಗ್ರಾಮಾಂತರ ಪ್ರದೇಶವನ್ನು ಕಾಂಗ್ರೆಸ್ಸಿಗೆ ಒಲಿಸಿಕೊಂಡಂತಾಗುತ್ತದೆ ಮತ್ತು ಇದರಿಂದ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ನೆಲೆಗೊಳಿಸಬೇಕೆಂಬ ಹೋರಾಟಕ್ಕೆ ತೀವ್ರತೆ ಉಂಟಾಗುತ್ತದೆ. ಆದುದರಿಂದ ಕಾಂಗ್ರೆಸ್ಸಿಗೆ ಬಂದು ಸೇರುವಂತೆ ಮತ್ತು ಸ್ವಾತಂತ್ರ ಹೋರಾಟ ನಡೆಯುವಲ್ಲಿ ಜೊತೆ ಹೆಜ್ಜೆ ಇಡುವಂತೆ

ಪ್ರಜಾ ಸಂಯುಕ್ತ ಪಕ್ಷದವರನ್ನು ಬಳಸಿಕೊಳ್ಳಲು ನಮ್ಮೆಲ್ಲರ ಕ್ರೋಢೀಕೃತ ಪ್ರಯತ್ನ ನಡೆಯಬೇಕಾಗಿದೆ ಎಂದು ಹೇಳಿದರು. ಪಕ್ಷ ಅನುಮತಿ ಕೊಟ್ಟರೆ ತಾವು ಪ್ರಜಾ ಸಂಯುಕ್ತ ಪಕ್ಷ ಹಾಗೂ ಕಾಂಗ್ರೆಸ್ ಸಮ್ಮಿಲನಕ್ಕೆ ಪ್ರಯತ್ನಗಳನ್ನು ಮಾಡುವುದಾಗಿ ಸಭೆಗೆ ತಿಳಿಸಿದರು. ಸಭೆಯಲ್ಲಿ ಸರ್ದಾರ್ ವೆಂಕಟ ರಾಮಯ್ಯನವರ ಅಭಿಪ್ರಾಯಕ್ಕೆ ಸಹಮತ ದೊರೆಯಿತು"[39].

ಕಾಂಗ್ರೆಸ್ ಮತ್ತು ಪ್ರಜಾ ಸಂಯುಕ್ತ ಪಕ್ಷದ ವಿಲೀನ ಕಾರ್ಯದಲ್ಲಿ ಬಿ.ಎನ್. ಗುಪ್ತರವರ ಪಾತ್ರ ಬಹಳ ಮುಖ್ಯವಾದುದು. ಪ್ರಜಾಪಕ್ಷದ ಸ್ಥಾಪನೆಯಲ್ಲಿ ಬಿ.ಎನ್. ಗುಪ್ತರವರ ಪಾತ್ರವಿತ್ತು ಹಾಗೂ ಅವರು ಪ್ರಜಾಪಕ್ಷದ ಧ್ಯೇಯ, ಉದ್ದೇಶಗಳ್ನು ಪ್ರಚಾರ ಮಾಡಲು ಪ್ರಜಾಮತ ಮತ್ತು ಜನವಾಣಿ ಪತ್ರಿಕೆಗಳನ್ನು ಪ್ರಾರಂಭಿಸಿದ್ದರು. ಆರಂಭದಲ್ಲಿ ಪ್ರಜಾಪಕ್ಷದ ಸಕ್ರಿಯ ನಾಯಕರಾಗಿದ್ದ ಬಿ.ಎನ್. ಗುಪ್ತ ಕ್ರಮೇಣ ಪ್ರಜಾಪಕ್ಷದಲ್ಲಿ ಒಕ್ಕಲಿಗರ ಹಾಗೂ ಲಿಂಗಾಯುತ ನಾಯುಕರುಗಳ ಪ್ರಾಬಲ್ಯಗಳಿಸಿಕೊಂಡ ಕಾರಣ ಹಿಂದಕ್ಕೆ ಸರಿಯಲ್ಪಟ್ಟರು. ಕಾಂಗ್ರೆಸ್‌ನ ಖಾದಿಪ್ರಚಾರ ಹಾಗೂ ಹರಿಜನ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ತೊಡಗಿಸಿ ಕೊಂಡಿದ್ದ ಬಿ.ಎನ್. ಗುಪ್ತ, ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷದ ಸಮ್ಮಿಲನದಿಂದ ತಾವು ರಾಜಕೀಯವಾಗಿ ಭದ್ರ ನೆಲಗಟ್ಟುಗಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಮನಗೊಂಡಿದ್ದರು. ಬಿ.ಎನ್. ಗುಪ್ತರವರಿಗೆ ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷದ ಪ್ರಮುಖ ನಾಯಕರುಗಳ ಸ್ನೇಹ ಹಾಗೂ ಒಡನಾಟವಿತ್ತು. ಇದು ಎರಡು ಪಕ್ಷಗಳ ಸಮ್ಮಿಲನಕ್ಕೆ ಬಿ.ಎನ್. ಗುಪ್ತ ಮಧ್ಯಸ್ಥಿಕೆ ವಹಿಸಲು ಸಹಕಾರಿಯಾಯಿತು.

ಸರ್ದಾರ್ ವೆಂಕಟರಾಮಯ್ಯ ತಮ್ಮ ಆತ್ಮಚರಿತ್ರೆಯಲ್ಲಿ ತಾವು ಹಾಗೂ ಬಿ.ಎನ್. ಗುಪ್ತರವರು ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷದ ಸಮ್ಮಿಲನ ಏರ್ಪಡಿಸಲು ಮಾಡಿದ ಪ್ರಯತ್ನಗಳನ್ನು ಕುರಿತು ಚರ್ಚಿಸಿದ್ದಾರೆ "ಬಿ.ಎನ್. ಗುಪ್ತರೊಂದಿಗೆ ಈ ಬಗ್ಗೆ ಚರ್ಚಿಸಿದ ವೆಂಕಟರಾಮಯ್ಯ ಪ್ರಜಾ ಸಂಯುಕ್ತ ಪಕ್ಷದ ಧುರೀಣರೆಲ್ಲ ಮೂಲತಃ ಕಾಂಗ್ರೆಸ್ಸಿಗರಾಗಿದ್ದರೆ, ಅವರೆಲ್ಲ ಬಹುಮಟ್ಟಿಗೆ ಗಾಂಧೀಜಿ ಅವರ ಪ್ರಭಾವಕ್ಕೆ ಒಳಪಟ್ಟಿದ್ದಾರೆ, ಸ್ವರಾಜ್ಯ ಸಾಧನೆಯ ಗುರಿ ತುಂಬಾ ದೂರವೆನಿಲ್ಲ, ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಜಾತಿ - ವರ್ಗ ಭೇದವಿಲ್ಲದೆ ಹೋರಾಡುತ್ತಿರುವ ಪ್ರಜಾ ಸಂಯುಕ್ತ ಪಕ್ಷ ನಾಯಕರು ಜಾತಿವಾದಿಗಳೆಂಬ ಕಳಂಕಕ್ಕೇಕೆ ಒಳಗಾಗಬೇಕು? ಅವರೆಲ್ಲ ಕೇವಲ ಸ್ಥಾನೀಯ ಮುಂದಾಳುಗಳಾಗಿಯೇ ಇರುವುದರಲ್ಲಿ ಏಕೆ ತೃಪ್ತಿ ಪಡಬೇಕು? ಅವರೆಲ್ಲರಿಗೂ ಜನ ಬೆಂಬಲವಿದೆ. ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಹಿಂಬಾಲಕರಿದ್ದಾರೆ, ಅವಳೆಲ್ಲ ಕಾಂಗ್ರೆಸ್ಸಿಗೆ ಸೇರುವುದರಿಂದ ಸಮಗ್ರ ಭಾರತ ಅವರ ಕಾರ್ಯ ಕ್ಷೇತ್ರವಾಗುತ್ತದೆ, ಅವರ ಪೈಕಿ

---

39. ಸರ್ದಾರ್ ವೆಂಕಟರಾಮಯ್ಯ : ಸತ್ಯಾಗ್ರಹಿ ಒಂದು ಜೀವನ ಕಥೆ, ಪುಟ-367-368.

ಕೆಲವರಾದರು ರಾಷ್ಟ್ರಮಟ್ಟದ ನಾಯಕರಾಗುವ ನಂಬಿಕೆ ತಳೆಯಬಹುದು. ಆದ್ದರಿಂದ ಅವರೆಲ್ಲರೂ ರಾಷ್ಟ್ರೀಯ ಜೀವವಾಹಿನಿಯ ಮಧ್ಯಧಾರೆಯಲ್ಲಿ ಬೆರೆಯಲು ಕಾಂಗ್ರೆಸ್‌ನೊಂದಿಗೆ ಕೈ ಜೋಡಿಸಬೇಕೆಂದು ಹೇಳಿ, ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ಬಿ.ಎನ್. ಗುಪ್ತರವರನ್ನು ಕೋರಿದರು"[40].

ಸರ್ದಾರ್ ವೆಂಕಟರಾಮಯ್ಯನವರು ಪ್ರಜಾ ಸಂಯುಕ್ತ ಪಕ್ಷದ ಅಧ್ಯಕ್ಷರಾಗಿದ್ದ "ಕೆ.ಸಿ. ರೆಡ್ಡಿ ಅವರನ್ನು ಭೇಟಿ ಮಾಡಿ ಸವಿಸ್ತಾರವಾಗಿ ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷದ ಸಮ್ಮಿಲನದ ಬಗ್ಗೆ ಚರ್ಚಿಸಿದರು. ತಾಳ್ಮೆಯಿಂದ ಸರ್ದಾರ್‌ರವರ ಮಾತುಗಳನ್ನು ಆಲಿಸಿದ ಕೆ.ಸಿ. ರೆಡ್ಡಿ ಪ್ರಜಾ ಸಂಯುಕ್ತ ಪಕ್ಷವನ್ನು ವಿಸರ್ಜಿಸಿ ಎಲ್ಲಾ ಸದಸ್ಯರು ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸೇರಬೇಕೆಂಬುದಕ್ಕೆ ಪ್ರಜಾ ಸಂಯುಕ್ತ ಪಕ್ಷದ ಸಭೆಯಲ್ಲಿ ಒಂದು ನಿರ್ಣಯ ಮಂಡಿಸುವುದಾಗಿ ಕೆ.ಸಿ. ರೆಡ್ಡಿ ಭರವಸೆ ನೀಡಿದರು" ಎಂದಿದ್ದಾರೆ.[41]

ಆಗಸ್ಟ್ 13, 1937ರಂದು ಪ್ರಜಾ ಸಂಯುಕ್ತ ಪಕ್ಷ ಕಾರ್ಯಕಾರಿ ಸಮಿತಿಯ ಸಭೆ ವಿ. ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಬಿ.ಎನ್. ಗುಪ್ತರವರ ಜನವಾಣಿ ಕಚೇರಿಯಲ್ಲಿ ನಡೆಯಿತು. "ಈ ಸಭೆಯಲ್ಲಿ ಡಾ. ನಾ.ಸು. ಹರ್ಡಿಕರ್‌ರವರು ಪ್ರಜಾ ಸಂಯುಕ್ತ ಪಕ್ಷ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಅದನ್ನು ಬಲಪಡಿಸಿ, ದೇಶದ ಸ್ವಾತಂತ್ರ್ಯ ಸಾಧನೆಗೆ ಎಲ್ಲರ ಸಹಕಾರ ಕೋರಿ ಬರೆದ ಮನವಿ ಪತ್ರವನ್ನು ಓದಲಾಯಿತು. ಆ ನಂತರ ಕೆ.ಸಿ. ರೆಡ್ಡಿ ಸಭೆಯ ಮುಂದೆ ಒಂದು ನಿರ್ಣಯ ಮಂಡಿಸಿ ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷದ ಗುರಿ ಒಂದೇ ಆಗಿದೆ, ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಇವೆರಡು ಪಕ್ಷಗಳು ಒಂದಾಗಿ ದುಡಿಯತಕ್ಕದೆಂದು" ನಿರ್ಣಯ ಮಂಡಿಸಿದರು. ಸಭೆ ಅಕ್ಟೋಬರ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆಯಲ್ಲಿರುವ ಪ್ರಜಾ ಸಂಯುಕ್ತ ಪಕ್ಷದ ಅಧಿವೇಶನದಲ್ಲಿ ಕೆ.ಸಿ. ರೆಡ್ಡಿ ಅವರ ನಿರ್ಣಯವನ್ನು ಮಂಡಿಸಲು ತೀರ್ಮಾನ ಕೈಗೊಂಡಿತು"[42].

ಪ್ರಜಾ ಸಂಯುಕ್ತ ಪಕ್ಷ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಸಾಮೂಹಿಕವಾಗಿ ಕಾಂಗ್ರೆಸನ್ನು ಸೇರುವ ನಿರ್ಧಾರ ಮಾಡಬೇಕಾದಾಗ ಹಲವು ಪ್ರಶ್ನೆಗಳು ಎದುರಾದವು. "ಬಹಳಷ್ಟು ಪ್ರಜಾ ಸಂಯುಕ್ತ ಪಕ್ಷದ ನಾಯಕರು ತಾವು ಮುಂದೆ ಸೇರಲಿರುವ ಹೊಸ ಪಕ್ಷದಲ್ಲಿ ನಮಗೆ ದೊರೆಯಲಿರುವ ಸ್ಥಾನಮಾನದ ಬಗ್ಗೆ ಸಂಶಯ ಹಾಗೂ ಅನುಮಾನಗಳನ್ನು ಹೊಂದಿದ್ದರು. ಕಾಂಗ್ರೆಸ್ ಸೇರಿದ ಮೇಲೆ ಅವರು ಹಿಂದೆ ಜಾತಿವಾದಿ

---

40. ಸರ್ದಾರ್ ವೆಂಕಟರಾಮಯ್ಯ : ಸತ್ಯಾಗ್ರಹಿ ಒಂದು ಜೀವನ ಕಥೆ, ಪುಟ–370.
41. ಸರ್ದಾರ್ ವೆಂಕಟರಾಮಯ್ಯ : ಸತ್ಯಾಗ್ರಹಿ ಒಂದು ಜೀವನ ಕಥೆ, ಪುಟ–373.
42. ವಿಶ್ವಕರ್ನಾಟಕ ಪತ್ರಿಕೆ : ದಿನಾಂಕ : 13–08–1937.

ಪಕ್ಷದೊಡನೆ ಸಂಬಂಧ ಹೊಂದಿದ್ದಾರೆಂಬುದಕ್ಕಾಗಿ ಅವರನ್ನು ಎರಡನೆಯ ದರ್ಜೆಯ ಕಾಂಗ್ರೆಸ್ಸಿಗರನ್ನಾಗಿ ಪರಿಗಣಿಸಲಾಗುವುದೆ? ಪರಿಪೂರ್ಣತೆ ಪಡೆದ ಕಾಂಗ್ರೆಸ್ ಸದಸ್ಯರನ್ನು ನಂಬುವಂತೆ ಹೊಸಬರನ್ನು ನಂಬಲಾಗುತ್ತದೆಯೇ? ಕಾಂಗ್ರೆಸ್ಸಿಗೆ ಹೋಗಿ ಅಲ್ಲಿ ಒಂದು ಹೀನಶ್ರೇಣಿಯಲ್ಲಿ ಇದ್ದುಕೊಂಡಿರುವುದಕ್ಕೆ ಬದಲಾಗಿ ಹೀಗಿರುವ ಪಕ್ಷದಲ್ಲೇ ಯಜಮಾನರಂತೆ ಇರಬಹುದಲ್ಲವೇ? ಎಂಬ ಸಂದೇಹಗಳು ಹಾಗೂ ಅನುಮಾನಗಳನ್ನು ಬಗೆಹರಿಸಲು ಪ್ರಜಾ ಸಂಯುಕ್ತ ಪಕ್ಷದ ನಾಯಕರುಗಳಿಗೆ ಸರ್ದಾರ್ ವೆಂಕಟರಾಮಯ್ಯ ಒಂದು ಸೂಕ್ತ ಸ್ಪಷ್ಟೀಕರಣ ನೀಡಿದರು.

ಪ್ರಜಾ ಸಂಯುಕ್ತ ಪಕ್ಷದ ನಾಯಕರು ಕಾಂಗ್ರೆಸ್ ಸೇರಿದ ನಂತರ ಅವರನ್ನು ಕಾಂಗ್ರೆಸ್ಸಿಗರೆಂದು ಕಾಣಲಾಗುತ್ತದೆಯೇ ಹೊರತು ಅದರಲ್ಲಿ ಬೇರೆ ದೃಷ್ಟಿಗೆ ಎಡೆ ಇಲ್ಲ. ಹಳೆಯ ಸಂಬಂಧಗಳನ್ನು ಮರೆತು ಬಿಡಲಾಗತ್ತದೆ. ಕಾಂಗ್ರೆಸ್ಸೇತರರನ್ನೆಲ್ಲ ತನ್ನ ಕಕ್ಷೆಯಲ್ಲಿ ತಂದುಕೊಳ್ಳಲು ಕಾಂಗ್ರೆಸ್ ಎಡೆಬಿಡದೆ ಪ್ರಯತ್ನಿಸುತ್ತಲೇ ಇರುತ್ತದೆ. ಯಾರೊಬ್ಬರನ್ನು ದ್ವಿತೀಯ ಶ್ರೇಣಿ ಸದಸ್ಯರೆಂದು ಪರಿಗಣಿಸಲು ಸಾಧ್ಯವಿಲ್ಲ, ಆ ಪ್ರಶ್ನೆಯೇ ಬರುವುದಿಲ್ಲ. ಇದರಲ್ಲಿ ನನಗೆ ಸ್ವಲ್ಪವಾದರೂ ಸಂದೇಹವಿಲ್ಲ. ಇಷ್ಟು ನಾನು ಹೇಳಿದ ಮೇಲೂ ನಿಮಗೆ ಯಾರಾದರೂ ಮನಸ್ಸಿಗೆ ತೃಪ್ತಿಯಾಗುವ ಉತ್ತರ ಕೊಡಬಲ್ಲವರಿದ್ದರೆ ಅದು ಮಹಾತ್ಮ ಗಾಂಧೀಜಿಯವರೊಬ್ಬರೆ, ಈ ಪ್ರಶ್ನೆಗಳನ್ನೆಲ್ಲಾ ಅವರ ಮುಂದಿಡಬಹುದು" ಎಂದು ಹೇಳಿದರು[43].

"ಸ್ವಲ್ಪ ದಿನಗಳ ನಂತರ ಪ್ರಜಾ ಸಂಯುಕ್ತ ಪಕ್ಷದ ನಾಯಕರು ಗಾಂಧೀಜಿ ಅವರನ್ನು ಭೇಟಿ ಮಾಡಿ ತಮ್ಮ ಸಂಶಯವನ್ನು ತೋಡಿಕೊಂಡಾಗ ಗಾಂಧೀಜಿ ಅವರು ಕೆ.ಸಿ. ರೆಡ್ಡಿ ಅವರನ್ನು ಆಲಂಗಿಸಿಕೊಂಡು ತಮ್ಮ ಮಕ್ಕಳನ್ನು ಬರಮಾಡಿಕೊಳ್ಳುವಂತೆಯೇ ಪ್ರಜಾ ಸಂಯುಕ್ತ ಪಕ್ಷದ ಎಲ್ಲರನ್ನೂ ಕಾಂಗ್ರೆಸ್ ಕಕ್ಷೆಯೊಳಗೆ ಬರಮಾಡಿಕೊಳ್ಳುವುದಾಗಿ ಹೇಳಿದರು. ಮಹಾತ್ಮರ ಈ ಮಾತುಗಳು ಪ್ರಜಾ ಸಂಯುಕ್ತ ಪಕ್ಷದ ಪ್ರಮುಖ ನಾಯಕರ ಸಂದೇಹಗಳನ್ನೆಲ್ಲಾ ಬದಿಗೆ ಸರಿಸಿದಲ್ಲದೆ ಅವರು ಕಾಂಗ್ರೆಸ್‌ನಲ್ಲಿ ಸೇರುವ ನಿರ್ಧಾರಕ್ಕೆ ವೇಗ ತಂದುಕೊಟ್ಟಿತು"[44].

ಪ್ರಜಾಪ್ರತಿನಿಧಿ ಸಭೆಯ 1937 ಅಕ್ಟೋಬರ್ 16ರ ದಸರಾ ಅಧಿವೇಶನ ಚರಿತ್ರಾರ್ಹ ವಾಯಿತು. ಕಾಂಗ್ರೆಸ್ ಪಕ್ಷದ ಹಲವು ನಾಯಕರು ಜೈಲಿನಲ್ಲಿ ಕೊಳೆಯುತ್ತಿದ್ದು ಪಕ್ಷದ ಸದಸ್ಯರಲ್ಲಿ ಅತೃಪ್ತಿ, ಅಸಮಾಧಾನ, ಅಸಹಾಯಕತೆಗೆ ಎಡೆ ಮಾಡಿಕೊಟ್ಟಿತು. ಸಭೆ ಪ್ರಾರಂಭವಾಗಿ ದಿವಾನರು ಎದ್ದು ನಿಂತು ತಮ್ಮ ಭಾಷಣ ಓದಲು ಪ್ರಾರಂಭಿಸಿದರು.

---

43. ಸರ್ದಾರ್ ವೆಂಕಟರಾಮಯ್ಯ : ಸತ್ಯಾಗ್ರಹಿ ಒಂದು ಜೀವನ ಕಥೆ : ಪುಟ 374.
44. ಪೂರ್ವೋಕ್ತ : ಪುಟ 374–375.

ಸಭೆಯಲ್ಲಿ ಕುಳಿತಿದ್ದ ಎಚ್.ಕೆ. ವೀರಣ್ಣಗೌಡ ಎದ್ದು ನಿಂತು "ದಿವಾನರ ದುರಾಡಳಿತ ನೀತಿಯ ಪ್ರತಿಭಟಿಸುವುದಕ್ಕಾಗಿ ಕಾಂಗ್ರೆಸ್ ಪಕ್ಷದವರಾದ ನಾವು ಹೊರಗಡೆ ಹೋಗುತ್ತೇವೆ ಎಂದು ಘೋಷಣೆಗಳೊಂದಿಗೆ ಹೊರ ಹೊರಟರು. ಮತ್ತೊಬ್ಬ ಸದಸ್ಯ ಟಿ. ಮಾದಯ್ಯಗೌಡರು ಎದ್ದು ನಿಂತು 'ದಿವಾನ್ ಸಾಹೇಬರೇ ನಿಮ್ಮ ನಿರಂಕುಶಾಧಿಕಾರದ ಆಡಳಿತವನ್ನು ಧಿಕ್ಕರಿಸುವುದಕ್ಕಾಗಿ ನಾವು ಹೊರಗೆ ಹೋಗುತ್ತೇವೆ' ಎಂದು ಕೂಗಿದರು. ಇತರ ಕಾಂಗ್ರೆಸೇತರ ಸದಸ್ಯರು ಕೂಡ ಸಭೆಯನ್ನು ಬಹಿಷ್ಕರಿಸಿದರು. ಎಸ್. ರಂಗರಾಮಯ್ಯನವರು ಮಹಾತ್ಮ ಗಾಂಧಿಜೀ ಕೀ ಜೈ, ಪ್ರಜಾಪ್ರತಿನಿಧಿ ಸರ್ಕಾರ ಬರಲಿ! ಎಂದು ಘೋಷಣೆ ಕೂಗಿ ಸಭೆಯಿಂದ ಹೊರನಡೆದರು.

ದಿನಾಂಕ 1937ರ ಅಕ್ಟೋಬರ್ 16 ರಂದು ರಾತ್ರಿ 12–00 ಘಂಟೆಗೆ ಸರ್ಕಾರ ಕಾಂಗ್ರೆಸ್ ಮುಖಂಡರಾದ ಕೆ.ಟಿ. ಭಾಷ್ಯಂ ಹಾಗೂ ಎಸ್.ಸಿ. ತಿಮ್ಮಾರೆಡ್ಡಿ ಅವರನ್ನು ಬಂಧಿಸಿದರು. ಇದರಿಂದ ಪ್ರಜಾ ಸಂಯುಕ್ತ ಪಕ್ಷ ಮತ್ತು ಕಾಂಗ್ರೆಸ್ ಸಮ್ಮಿಲನವಾಗುವ ಚಟುವಟಿಕೆಗಳು ತೀವ್ರಗೊಂಡವು. ಕಾಂಗ್ರೆಸ್ ನಾಯಕರು, ಪ್ರಜಾ ಸಂಯುಕ್ತ ಪಕ್ಷದ ನಾಯಕರು ವಾಸ್ತವ್ಯ ಹೂಡಿದ್ದ ಕ್ಯಾಂಪ್‌ಗಳಿಗೆ ಭೇಟಿ ನೀಡಿ ಮುಂದಿನ ರಾಜಕೀಯ ಬದಲಾವಣೆಗಳ ಬಗ್ಗೆ ಚರ್ಚೆಗಳು ನಡೆದವು. ಇನ್ನು ತಡಮಾಡಬಾರದೆಂದು ಮಾರನೆಯ ದಿನ ಅಕ್ಟೋಬರ್ 16ರಂದು ಬೆಳಗ್ಗೆ 9–30 ಘಂಟೆಗೆ ಒಂದು ಕಡೆ ಸಭೆ ಸೇರಿ ಪರ್ಯಾಲೋಚಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಯಿತು".[45]

1937 ಅಕ್ಟೋಬರ್ 16ರಂದು ಮೈಸೂರಿನ ಕಾಳಮ್ಮನಗುಡಿ ಬೀದಿಯಲ್ಲಿರುವ ಯಾಲಕಪ್ಪಛತ್ರದಲ್ಲಿ ಕಾಂಗ್ರೆಸ್ ಹಾಗೂ ಪ್ರಜಾ ಸಂಯುಕ್ತ ಪಕ್ಷದ ಸಮ್ಮಿಲನ ಸಭೆ ಏರ್ಪಾಡಾಯಿತು. ಸುಮಾರು ಐದುನೂರು ಮಂದಿ ಸದಸ್ಯರು ಈ ಸಭೆಯಲ್ಲಿ ಹಾಜರಿದ್ದರು. ಹೆಚ್.ಸಿ. ದಾಸಪ್ಪನವರು ಸ್ವಾಗತ ಅಧ್ಯಕ್ಷರಾಗಿದ್ದರು, ಕೆ.ಸಿ. ರೆಡ್ಡಿ ಅವರು ನಿರ್ಣಯಗಳನ್ನು ಮಂಡಿಸಿದರು. ಸಭೆಯಲ್ಲಿ ಎರಡೂ ಪಕ್ಷಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ಪ್ರಜಾ ಸಂಯುಕ್ತ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ಟೋಪಿ ಧರಿಸುವ ಮೂಲಕ ಕಾಂಗ್ರೆಸ್ಸಿಗರಾದರು. ಸ್ವಾಗತಾಧ್ಯಕ್ಷರಾಗಿದ್ದ ಹೆಚ್.ಸಿ. ದಾಸಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡಿ. "ಪ್ರಸಕ್ತ ಸನ್ನಿವೇಶದಲ್ಲಿ ಪ್ರತ್ಯೇಕ ರಾಜಕೀಯ ಸಂಸ್ಥೆಯ ಅವಶ್ಯಕತೆ ಇಲ್ಲವೆಂದು, ನಮ್ಮ ಸಂಸ್ಥೆಯು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನೊಡನೆ ಒಂದಾಗುವುದು ಸೂಕ್ತವೆಂದು ನಮ್ಮ ಪಕ್ಷದ ಕಾರ್ಯ ನಿರ್ವಾಹಕ ಸಮಿತಿಯು ಅಂಗೀಕರಿಸಿದ ನಿರ್ಧಾರಕ್ಕೆ ತಮ್ಮ ಸಮ್ಮತಿಯನ್ನು ಪಡೆಯುವ ಉದ್ದೇಶದಿಂದ ಈ

---

45. ವೀರಣ್ಣಗೌಡ .ಎಚ್.ಕೆ : ಬದುಕು–ಮೆಲುಕು, ಪುಟ 162–163.

ಅಧಿವೇಶನವನ್ನು ಸೇರಿಸಲಾಗಿದೆ...... ಭಾರತ ಭೂಮಿಯು ಸ್ವಾತಂತ್ರ್ಯವನ್ನು ಗಳಿಸಲು ಉದ್ಯುಕ್ತರಾಗಿರುವವರೊಡನೆ ನಾವು ಸೇರಲೇಬೇಕು" ಎಂದು ಹೇಳಿದರು.

"ಶ್ರೀಮಾನ್ ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿವುದು ನಮ್ಮ ಸದ್ಯದ ರಾಜಕೀಯ ಗುರಿ ಈ ವಿಚಾರದಲ್ಲಿ ನಮ್ಮ ಪಕ್ಷಕ್ಕೂ ಹಾಗೂ ಕಾಂಗ್ರೆಸ್‌ಗೂ ಗುರಿಯಲ್ಲಾಗಲಿ, ಕಾರ್ಯಕ್ರಮಗಳಲ್ಲಾಗಲಿ ವ್ಯತ್ಯಾಸವಿಲ್ಲ. ಹೀಗಿರುವಾಗ ನಾವು ಪ್ರತ್ಯೇಕವಾಗಿ ನಿಲ್ಲುವ ಪ್ರಮೇಯವು ಲವಲೇಶವೂ ಇಲ್ಲ. ಅಂದ ಮೇಲೆ ಕಾಂಗ್ರೆಸ್‌ನೊಡನೆ ಸಮ್ಮಿಲಿತವಾಗುವುದು ನಮ್ಮಗಳ ಕರ್ತವ್ಯವೆಂದು ವ್ಯಕ್ತಪಡುತ್ತದೆ. ಇದರಿಂದ ಇಡೀ ಭಾರತ ಭೂಮಿಯ ಹೋರಾಟದಲ್ಲಿ ಭಾಗವಹಿಸಲು ಅವಕಾಶ ದೊರೆತಂತಾಗಿ ಮಾತೃಭೂಮಿಯಲ್ಲಿ ನಮ್ಮ ಕಾಣಿಕೆಯನ್ನು ಸಲ್ಲಿಸಿದ್ದೇವೆಂಬ ಸಂತೃಪ್ತ ಭಾವನೆಯು ನಮ್ಮಲ್ಲಿ ಮೂಡುತ್ತದೆ. ಬಹುಕಾಲ ಯಶಸ್ವಿಯಾಗಿ ಶ್ರಮಿಸಿದ ನಮ್ಮ ಸಂಸ್ಥೆಯನ್ನು ಮುಕ್ತಾಯಗೊಳಿಸುವುದೆಂದರೆ ಸ್ವಲ್ಪ ವಿಷಾದಕರವಾಗುವುದು ಸಹಜ. ಆದರೆ ಕಾಂಗ್ರೆಸ್‌ನೊಂದಿಗೆ ಸಮ್ಮಿಲಿತವಾಗುವೆವು ಎಂಬ ಭಾವನೆಯು ನಮ್ಮಲ್ಲಿ ಮೂಡಿ ಆನಂದಾಹ್ಲಾದವನ್ನು ಉಂಟು ಮಾಡಿರುತ್ತದೆ, ಇದೆಲ್ಲ ದೈವಿಕವಾದುದು".

"ಬ್ರಿಟಿಷ್ ಭಾರತ ಮತ್ತು ದೇಶೀಯ ಸಂಸ್ಥಾನಗಳು ಸಮ್ಮಿಲಿತವಾಗಿ ಒಂದೇ ಒಂದು ಸಂಸ್ಥೆಯೆಂದು ತೋರಿಸಲೂ, ಭಾರತವು ಅವಿಭಕ್ತ, ಒಂದೇ ಒಂದು ಜನತೆ, ಒಂದೇ ಒಂದು ಪಕ್ಷವೆಂದು ತೋರಿಸಲೂ, ರಾಷ್ಟ್ರೀಯ ಮಹಾಸಭೆ ಮತ್ತು ಪ್ರಜಾ ಸಂಯುಕ್ತ ಪಕ್ಷ ಕಾರ್ಯಕ್ರಮಗಳೊಂದೇ ಎಂಬುದನ್ನು ತೋರಿಸಲೂ, ಪ್ರಜಾ ಸಂಯುಕ್ತ ಪಕ್ಷವು ಕಾಂಗ್ರೆಸ್‌ನಿಂದ ಬೇರೆಯಾಗಿರದೆ ಕಾಂಗ್ರೆಸ್ಸನ್ನು ಬಲಪಡಿಸಲು, ಕಾಂಗ್ರೆಸ್ಸನ್ನು ಸೇರುತ್ತದೆ" ಎಂದಿದ್ದಾರೆ.[46]

ಹೀಗೆ 1917 ರಿಂದ 1937ರಲ್ಲಿ ವಿಲೀನಗೊಳ್ಳುವವರೆಗೆ ಸಂಸ್ಥಾನದಲ್ಲಿದ್ದ ಬ್ರಾಹ್ಮಣೇತರ ಪಕ್ಷಗಳು, ನಾಯಕರು ಹಿಂದುಳಿದ ವರ್ಗಗಳ ಏಳಿಗೆಗೆ ಮಾಡಿರುವ ಸೇವೆಯನ್ನು ಇತಿಹಾಸದಲ್ಲಿ ಯಾರು ಕಡೆಗಣಿಸಲು ಸಾಧ್ಯವಿಲ್ಲ. ಏಕೆಂದರೆ ವಿಲೀನಗೊಳ್ಳುವ ಕಾಲಕ್ಕೆ ಇಡೀ ಸಂಸ್ಥಾನದಾದ್ಯಂತ ತನ್ನ ಕಬಂಧಬಾಹುಗಳನ್ನು ವಿಶಾಲವಾಗಿ ಬೆಳೆಸಿಕೊಂಡು ಪ್ರಬಲ ರಾಜಕೀಯ ಪಕ್ಷವಾಗಿ ರೂಪಿತಗೊಂಡಾಗಿತ್ತು. ಗಾಂಧೀಜಿ ಅವರ ರಚನಾತ್ಮಕ ಕಾರ್ಯಕ್ರಮಗಳಿಂದ ಪ್ರಭಾವಿತಗೊಂಡ ಈ ಪಕ್ಷದ ನಾಯಕರು ಖಾದಿ ಪ್ರಚಾರ, ಹರಿಜನ ನಿಧಿ ಸಂಗ್ರಹಣೆ, ಹರಿಜನರ ಹಕ್ಕುಗಳಿಗಾಗಿ ಹೋರಾಟ, ಹರಿಜನರಿಗೆ ಮನೆಗಳ ನಿರ್ಮಾಣ, ಹರಿಜನರಿಗೆ ಪ್ರತ್ಯೇಕ ಶಾಲೆಗಳ ಸ್ಥಾಪನೆ, ಬಾಲ್ಯವಿವಾಹ ನಿಷೇಧ, ವಿಧವಾ

---

46. ಲಿಂಗಯ್ಯ ಡಿ : ಶಿವಪುರ ಧ್ವಜ ಸತ್ಯಾಗ್ರಹ, ಪುಟ 49-52.

ವಿವಾಹಕ್ಕೆ ಪ್ರೋತ್ಸಾಹ, ಸ್ತ್ರೀಯರ ಆಸ್ತಿರಕ್ಷಣೆ ಹಕ್ಕು, ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ, ಹರಿಜನರ ದೇವಾಲಯ ಪ್ರವೇಶ, ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ವ್ಯವಸ್ಥಿತವಾಗಿ ರೂಪಿಸಿದರು.

ಅದಕ್ಕಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ, ಜಿಲ್ಲಾ ಬೋರ್ಡ್, ತಾಲ್ಲೂಕು ಪಂಚಾಯಿತಿ, ಮುನ್ಸಿಪಾಲಿಟಿ, ಕಾರ್ಪೋರೇಷನ್‌ಗಳಿಗೆ ತನ್ನ ಸದಸ್ಯರನ್ನು ಚುನಾಯಿಸುವ ಮೂಲಕ ಸರ್ಕಾರವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತ್ತು. ಇದು ಪಕ್ಷದ ನಾಯಕರುಗಳು ಸಂಸ್ಥಾನದಲ್ಲಿ ವಿಶೇಷ ಗೌರವವನ್ನು ಹೊಂದಲು ಕಾರಣವಾಗಿತ್ತು. ಸಂಸ್ಥಾನದ ಕಾಂಗ್ರೆಸ್ ನಾಯಕರು ರಾಷ್ಟ್ರೀಯ ಹೋರಾಟಕ್ಕೆ ಬಲ ತುಂಬಲು ಕೆ.ಸಿ. ರೆಡ್ಡಿ ಅವರನ್ನು ಅವಲಂಬಿಸಿದ್ದು ಇದೇ ಕಾರಣಕ್ಕೆ. ಮುಂದೆ ಬ್ರಾಹ್ಮಣೇತರ ನಾಯಕ ಕೆ.ಸಿ. ರೆಡ್ಡಿ, ಗಾಂಧೀಜಿ ಅವರ ಆಶ್ವಾಸನೆಯಂತೆ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿ ರಾಷ್ಟ್ರೀಯ ಪಕ್ಷದ ಚಿಹ್ನೆ, ಸಂಕೇತ ಮತ್ತು ತತ್ವಗಳನ್ನು ಇಟ್ಟುಕೊಂಡು ಹೋರಾಟ ಮಾಡಿ ರಾಷ್ಟ್ರಮಟ್ಟದ ನಾಯಕರಾಗಿ ರೂಪಿತಗೊಂಡಿದ್ದು ಈಗ ಇತಿಹಾಸವಾಗಿರುವುದನ್ನು ಗಮನಿಸಬಹುದು.

ಒಟ್ಟಾರೆ ಈ ಎಲ್ಲಾ ಬೆಳವಣಿಗೆ, ಮಹತ್ಸಾಧನೆಗೆ ಕಾರಣಕರ್ತರಾದ ಕೆ.ಸಿ. ರೆಡ್ಡಿ ಅವರು ನಂತರದ ಕಾಲಘಟ್ಟದಲ್ಲಿ ಮೈಸೂರು ಕಾಂಗ್ರೆಸ್ ರಾಜಕೀಯ ನಾಯಕರಲ್ಲಿ ಅಗ್ರಗಣ್ಯರಾಗಿ ರೂಪುಗೊಂಡು, ರಾಷ್ಟ್ರಮಟ್ಟದ ನಾಯಕರಿಂದ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಲು ಕಾರಣವಾಯಿತು.

♦♦

ಅಧ್ಯಾಯ – 4

ಸ್ವಾತಂತ್ರ್ಯ ಹೋರಾಟದ ಸಂಕೀರ್ಣತೆ ಮತ್ತು ಕೆ.ಸಿ. ರೆಡ್ಡಿ

1. ಹಿನ್ನೆಲೆ

ಭಾರತದ ಸ್ವಾತಂತ್ರ್ಯಕ್ಕಾಗಿ ಅಖಿಲ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಹೋರಾಟವನ್ನು ಹೆಚ್ಚಿಸುತ್ತ ಬಂದಂತೆ ಮೈಸೂರು ಸಂಸ್ಥಾನದಲ್ಲಿನ ಜನರು ತಾವೂ ಈ ಹೋರಾಟದ ಕಣಕ್ಕಿಳಿಯಲು ಹಂಬಲಿಸುತ್ತಿದ್ದರು. ಭಾರತದ ಬೇರೆ ಯಾವ ಸಂಸ್ಥಾನಗಳು ರಾಷ್ಟ್ರದ ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯುವ ಮೊದಲೇ ಮೈಸೂರು ಸಂಸ್ಥಾನವು ಹೋರಾಟಕ್ಕಿಳಿದು ಇತರೆ ಸಂಸ್ಥಾನಗಳಿಗೆ ಮಾರ್ಗದರ್ಶಿಯಾಯಿತು. ಅಂದಿನ ಬ್ರಿಟಿಷ್ ಸರ್ಕಾರ ತನ್ನ ರೆಸಿಡೆಂಟ್ (British Political Agent) ಗಳ ಮೂಲಕ ತಮ್ಮ ಅಧೀನ ಸಂಸ್ಥಾನಗಳಲ್ಲಿ ರಾಷ್ಟ್ರೀಯತೆಯ ಭಾವನೆ, ಸ್ವಾತಂತ್ರ್ಯದ ಪರಿಕಲ್ಪನೆ ಹರಡುವುದನ್ನು ತಡೆಗಟ್ಟಲು ಹೆಚ್ಚಿನ ಪ್ರಯತ್ನ ಮಾಡಿದರು. ಮೈಸೂರು ಸಂಸ್ಥಾನದ ವಿದ್ಯಾವಂತರು, ವಿಚಾರವಂತರು ಭಾರತದಾದ್ಯಂತ ನಡೆಯುತ್ತಿದ್ದ ವಿದ್ಯಮಾನಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲು ಆರಂಭಿಸಿದರು.

ಮೈಸೂರು ಸಂಸ್ಥಾನದಲ್ಲಿ ಮಹಾತ್ಮಗಾಂಧಿ ಅವರ ಆಗಮನಕ್ಕಿಂತ ಮೊದಲೇ ಬಾಲಗಂಗಾಧರ ತಿಲಕರ ಪ್ರಭಾವದಿಂದ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಯು ಮೂಡಿದುದ್ದನ್ನು ಗುರುತಿಸಬಹುದು. ಮದ್ರಾಸ್‌ನ ಪತ್ರಕರ್ತರಾದ ಜಿ.ಎ. ನಟೇಶ್ ಅವರ ಮೂಲಕ ಗಾಂಧೀಜಿ ಅವರು ಮೊಟ್ಟ ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸಿದರು. ಗಾಂಧೀಜಿ ಅವರ ಆಗಮನಕ್ಕೆ ಕಾರಣಕರ್ತರಾದ ಮತ್ತೊಬ್ಬರೆಂದರೆ ಹಿರಿಯ ಸಾಹಿತಿ ಮತ್ತು ಪತ್ರಕರ್ತರಾಗಿದ್ದ ಡಿ.ವಿ. ಗುಂಡಪ್ಪನವರು. 1915 ಮೇ 8ರಂದು ಸಂಜೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆದ ಭಾರೀ ಬಹಿರಂಗಸಭೆಯಲ್ಲಿ ಮಹಾತ್ಮ ಗಾಂಧೀಜಿ ಭಾಷಣ ಮಾಡುತ್ತಾ 'ಭಾರತವು ಒಂದು ದೊಡ್ಡ ವಸಾಹತು ರಾಷ್ಟ್ರ. ಅದರಲ್ಲಿ ಮೈಸೂರು ಒಂದು ಶ್ರೇಷ್ಠ ಸಂಸ್ಥಾನ, ಮೈಸೂರಿನಲ್ಲಿ ರಾಮರಾಜ್ಯವನ್ನು ಸ್ಥಾಪಿಸಿ, ಜನರು ಯಾರ ಅಪ್ಪಣೆಯನ್ನು ಒಪ್ಪಿಕೊಳ್ಳುತ್ತಾರೋ ಅಂತಹ ವರಿಷ್ಠ ನಿಮ್ಮ ಮಂತ್ರಿಯಾಗಲಿ. ಹಾಗಾದರೆ ನೀವು ನಿಮ್ಮನ್ನು ಆಳುತ್ತಿರುವವರನ್ನು ಅಪ್ಪಣೆ ಮಾಡಿ ನಡೆಸಿಕೊಳ್ಳಬಹುದು' ಎಂದು ಕರೆ ನೀಡಿದರು.[1]

---

1. ವೇಮಗಲ್ ಸೋಮಶೇಖರ್ : ಬೆಂಗಳೂರಿನಲ್ಲಿ ಮಹಾತ್ಮಾಗಾಂಧಿ ಪುಟ19.

2. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸ್ಥಾಪನೆ. 1921

ಬಾಲಗಂಗಾಧರ ತಿಲಕ್, ಅನಿಬೆಸೆಂಟ್ ಮುಂತಾದ ಹಿರಿಯ ಚಿಂತಕರು ಮತ್ತು ಕೆಲವು ವೃತ್ತ ಪತ್ರಿಕೆಗಳ ಪ್ರೇರಣೆ ಮತ್ತು ಪ್ರಭಾವಗಳಿಂದಾಗಿ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ, ರಾಜಕೀಯ ಪರಿಜ್ಞಾನ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಯು ಉಂಟಾಗಲು ಕಾರಣವಾಯಿತು. 1920ರಲ್ಲಿ ವಿಜಯ ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ 'ದೇಶೀಯ ಸಂಸ್ಥಾನಗಳಲ್ಲೂ ಕಾಂಗ್ರೆಸ್ ಸಮಿತಿ'ಗಳನ್ನು ರಚಿಸಲು ಅನುಮತಿ ನೀಡಲಾಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಶಾಖೆಯಾದ 'ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆ' (ಕೆ.ಪಿ.ಸಿ.ಸಿ.)ಯಲ್ಲಿ, ಮೈಸೂರು ಸಂಸ್ಥಾನದ ಕಾಂಗ್ರೆಸ್ ಶಾಖೆಯಾದ 'ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ'(ಎಂ.ಪಿ.ಸಿ.ಸಿ.) ಯನ್ನು 1921ರಲ್ಲಿ ನಿವೃತ್ತ ನ್ಯಾಯಾಧೀಶರಾದ ಎಸ್.ಎಸ್. ಸೆಟ್ಲೂರ್ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.[2]

ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆ. 1928

ಮೈಸೂರು ಜಿಲ್ಲಾ ಕಾಂಗ್ರೆಸ್ ಬಹಳ ಬೇಗ ಅಭಿವೃದ್ಧಿ ಹೊಂದಿ ಸಂಸ್ಥಾನದಾದ್ಯಂತ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸುವಂತೆ ದಾಪುಗಾಲು ಹಾಕತೊಡಗಿತು. ಅದರ ಪರಿಣಾಮವಾಗಿ ಮೈಸೂರು ಸ್ಟೇಟ್ ಕಾಂಗ್ರೆಸ್ ಎಂ. ವೆಂಕಟಕೃಷ್ಣಯ್ಯ ಅವರ ನೇತೃತ್ವದಲ್ಲಿ ಉದಯಿಸಿತು. ಮೈಸೂರು ಸ್ಟೇಟ್ ಕಾಂಗ್ರೆಸ್‌ನ ಮೊಟ್ಟ ಮೊದಲನೆಯ ಅಧಿವೇಶನ ಮಾಣಿಕ್ಯವೇಲು ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಮೈಸೂರು ನಗರದಲ್ಲಿ 1928ರ ಜೂನ್‌ನಲ್ಲಿ ನಡೆಯಿತು. ಈ ಅಧಿವೇಶನವನ್ನು ಮದ್ರಾಸ್ ಕಾಂಗ್ರೆಸ್ ಅಧ್ಯಕ್ಷರಾದ ಎಸ್. ಸತ್ಯಮೂರ್ತಿ ಅವರು ಉದ್ಘಾಟಿಸಿದರು. ಎರಡನೆಯ ಅಧಿವೇಶನವು 1929ರ ಮೇ 5 ರಲ್ಲಿ ಬೆಂಗಳೂರಿನಲ್ಲಿ ಎಂ. ವೆಂಕಟಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೂರನೆಯ ಅಧಿವೇಶನವು 1933ರ ಮೇ 10ರಂದು ಬೆಂಗಳೂರಿನಲ್ಲಿ ಕೆ.ಟಿ. ಸತ್ಯನಾರಾಯಣ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಹೀಗಾಗಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಚಟುವಟಿಕೆಗಳ ಮೂಲಕ ರಾಷ್ಟ್ರೀಯತೆ ಭಾವನೆ ಹಾಗೂ ಸ್ವಾತಂತ್ರ್ಯದ ಹಂಬಲ ಬೆಳೆಯಲು ಪ್ರೇರೇಪಣೆ ನೀಡಲಾರಂಭಿಸಿತು.[3]

---

2. ದೊರೆಸ್ವಾಮಿ .ಎಚ್.ಎಸ್. : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–2.
3. CONGRESS SOURVENIR : 1960, The Indian National Congress, P-14.

ಮೈಸೂರು ಕಾಂಗ್ರೆಸ್ ಬೋರ್ಡ್ ಸ್ಥಾಪನೆ. 1937

1937ರ ಮೇ ತಿಂಗಳಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡ್ ಅನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಈ ಬೋರ್ಡ್‌ನ ಮೊಟ್ಟ ಮೊದಲ ಅಧ್ಯಕ್ಷರಾಗಿ ಟಿ. ಸಿದ್ಧಲಿಂಗಯ್ಯ ಅವರು ಆಯ್ಕೆ ಆದರು. ಇವರು ಸ್ಥಾಪಿಸಿದ 'ಕೌನ್ಸಿಲ್ ಆಫ್ ಆಕ್ಷನ್' ಎಂಬ ಕ್ರಿಯಾ ಸಮಿತಿಯಲ್ಲಿ ಸಿದ್ಧಲಿಂಗಯ್ಯ ಅವರು ಸೇರಿದಂತೆ ವೀರಕೇಸರಿ ಸೀತಾರಾಮಶಾಸ್ತ್ರಿ, ತಗಡೂರು ರಾಮಚಂದ್ರರಾವ್ ಇದ್ದರು. ಈ ಮೂವರು ಮೈಸೂರು ಸಂಸ್ಥಾನದಲ್ಲೆಲ್ಲ ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸುತ್ತಾ ಜವಾಬ್ದಾರಿ ಸರ್ಕಾರ ಪಡೆಯಲು ಹೋರಾಟಕ್ಕೆ ಜನತೆಯನ್ನು ಪ್ರೇರೇಪಿಸಲು ಆರಂಭಿಸಿದರು. ತತ್ಪರಿಣಾಮವಾಗಿ ಅಂದಿನ ಸರ್ಕಾರವು ಇವರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿತು.[4]

ಕಾಂಗ್ರೆಸ್ ನಾಯಕರಾದ ಕೆ.ಟಿ. ಭಾಷ್ಯಂ ಹಾಗೂ ಎನ್.ಸಿ. ತಿಮ್ಮಾರೆಡ್ಡಿ ಅವರನ್ನು 1937ರ ಅಕ್ಟೋಬರ್ 16ರಂದು ರಾತ್ರಿ ಪೊಲೀಸರು ಬಂದಿಸಿ ಸೆರೆಮನೆಗೆ ಕಳುಹಿಸಿದರು. ಇದರಿಂದಾಗಿ ಕಾಂಗ್ರೆಸ್ ಚಳವಳಿಗಳನ್ನು ಹಾಗೂ ಕಾರ್ಯಚಟುವಟಿಕೆಗಳನ್ನು ಮುನ್ನಡೆಸ ಬಲ್ಲ ಬೇರೊಬ್ಬ ಧೀಮಂತ ನಾಯಕರ ಅವಶ್ಯಕತೆ ಉಂಟಾಯಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಪ್ರಜಾ ಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್ ಬೋರ್ಡ್‌ಗಳು ತಮ್ಮ ಧ್ಯೇಯೋದ್ದೇಶ ಮತ್ತು ಗುರಿಗಳು ಒಂದೇ ಆಗಿರುವುದರಿಂದ ಎರಡೂ ಸಂಸ್ಥೆಗಳು ಒಗ್ಗೂಡಿ ಹೋರಾಟ ನಡೆಸುವುದರಿಂದ ತಮ್ಮ ಹೋರಾಟಕ್ಕೆ ಹೆಚ್ಚಿನ ಬಲ ಬರುತ್ತದೆ ಹಾಗೂ ತಮ್ಮ ಗುರಿಯು ಬೇಗನೆ ಈಡೇರುತ್ತದೆಂದು ಮನಗಂಡು ಒಗ್ಗೂಡಲು ನಿರ್ಧರಿಸಿದವು. ತತ್ಪರಿಣಾಮವಾಗಿ ಪ್ರಜಾ ಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್ ಬೋರ್ಡ್ 1937ರ ಅಕ್ಟೋಬರ್ 16ರಂದು ವಿಲೀನಗೊಂಡವು. ಇದರಿಂದಾಗಿ ಕೆ.ಸಿ. ರೆಡ್ಡಿ ಅವರು ಮೈಸೂರು ಕಾಂಗ್ರೆಸ್ ಬೋರ್ಡ್‌ನ ಮೊದಲನೆಯ ಅಧ್ಯಕ್ಷರಾಗಿ ಆಯ್ಕೆಗೊಂಡರು.

"1937ರ ಅಕ್ಟೋಬರ್ 16ರ ದಿನವನ್ನು ಮೈಸೂರು ಕಾಂಗ್ರೆಸ್‌ನ ಮುಂದಾಳುಗಳು ಮರೆಯಲು ಸಾಧ್ಯವಿಲ್ಲ. ಇದು ಮೈಸೂರು ಕಾಂಗ್ರೆಸ್‌ನ ಭವ್ಯಭವನದ ಗೋಪುರಕ್ಕೆ ಕಳಶವಿಟ್ಟ ದಿನ. ಮೈಸೂರು ಕಾಂಗ್ರೆಸ್ ಅನ್ನು ಉರುಳಿಸಬಲ್ಲ ಬಲವಾದ ರಾಜಕೀಯ ಸಂಸ್ಥೆಯೊಂದು ಮೈಸೂರಿನಲ್ಲಿ ಬೆಳಗುತ್ತಿತ್ತು. ಮೈಸೂರಿನ ಮಹಾ ಮುಖಂಡರು ಪ್ರಜಾ ಸಂಯುಕ್ತ ಪಕ್ಷವೆಂಬ ಸಂಸ್ಥೆಯಲ್ಲಿ ಸೇರಿ ಮೈಸೂರು ಸರ್ಕಾರವನ್ನೂ ಸಹ ಬೆದರಿಸುತ್ತಿದ್ದರು. ಮೈಸೂರು ಜನತೆಗೆ ಪ್ರಜಾ ಸಂಯುಕ್ತ ಪಕ್ಷದ ಮುಖಂಡರ ಮೇಲೆ ಹೆಚ್ಚು

---

4. CONGRESS SOURVENIR : 1960, The Indian National Congress, P-209.

ಮಮತೆ, ವಿಶ್ವಾಸಗಳಿತ್ತೇ ಹೊರತು ಮೈಸೂರು ಕಾಂಗ್ರೆಸ್‌ನ ಮುಂದಾಳುಗಳ ಮೇಲಲ್ಲ. ಈ ಎರಡೂ ಸಂಸ್ಥೆಗಳ ಧ್ಯೇಯ ಸಾಧನೆಗಳ ಒಂದೇ ಆಗಿದ್ದರು ಸಹ ಎರಡೂ ಸಂಸ್ಥೆಗಳ ವಿಲೀನವಾಗುವಂತಿರಲಿಲ್ಲ. ಅಂತಹ ಸಂಧಿಗ್ಧ ಸಮಯದಲ್ಲಿ ಈ ಎರಡೂ ಪಕ್ಷಗಳ ಏಕೀಕರಣಕ್ಕೆ ಅವಿಶ್ರಾಂತವಾಗಿ ದುಡಿದ ಮಹಾವ್ಯಕ್ತಿ ಎಂದರೆ ಕೆ.ಸಿ. ರೆಡ್ಡಿ ಅವರು. ಇವರು ಮಾಡಿದ ಈ ಮಹತ್ಕಾರ್ಯಕ್ಕೆ ಮೈಸೂರು ಕಾಂಗ್ರೆಸ್ ಚಿರಋಣಿ ಯಾಗಿದೆ. ಅನೇಕ ಮಹನೀಯರು ಈ ವಿಲೀನ ಕಾರ್ಯಕ್ಕೆ ಕೈ ಹಾಕಿದ್ದರೂ ಸಹ ಅವರು ಜಯಶೀಲರಾಗಿರಲಿಲ್ಲ. ಎರಡೂ ಪಂಗಡಗಳಲ್ಲೂ ಪೂರ್ಣ ವಿಶ್ವಾಸಗಳಿಸಿ ಕೊಂಡಿದ್ದವರೆಂದರೆ ಕೆ.ಸಿ. ರೆಡ್ಡಿ ಅವರೊಬ್ಬರೆ. ಪ್ರಜಾ ಸಂಯುಕ್ತ ಪಕ್ಷದ ಅಧ್ಯಕ್ಷರಾಗಿದ್ದರೂ ಸಹ ಅವರ ಹೃದಯ, ಮನಸ್ಸು ಕಾಂಗ್ರೆಸ್‌ನ ಕಡೆಯೇ ಇತ್ತು. ಆದ್ದರಿಂದಲೇ ಕೆ.ಸಿ.ರೆಡ್ಡಿ ಅವರು ಬಹು ಶ್ರಮಪಟ್ಟು ಪ್ರಜಾ ಸಂಯುಕ್ತ ಪಕ್ಷವನ್ನು ಮೈಸೂರು ಕಾಂಗ್ರೆಸ್‌ನೊಂದಿಗೆ ಬೆರೆಸಿ ಮೈಸೂರು ಕಾಂಗ್ರೆಸ್ ಉನ್ನತಿಗೆ ಕಾರಣೀಭೂತರಾದರು" ಎಂದು ಜಿ.ಎಸ್. ಗುಪ್ತ ಅವರು ದಾಖಲಿಸಿದ್ದಾರೆ.[5]

ಒಟ್ಟಾರೆ ಈ ವಿಲೀನದ ಸಂಪೂರ್ಣ ಯಶಸ್ವಿ ಕೆ.ಸಿ. ರೆಡ್ಡಿ ಅವರಿಗೆ ಸಲ್ಲಬೇಕು. ಈ ವಿಲೀನದಿಂದಲೇ ಕಾಂಗ್ರೆಸ್ ಸ್ವಾತಂತ್ರ್ಯ ಚಳವಳಿಯಲ್ಲಿ ಯಶಸ್ಸನ್ನು ಪಡೆಯಿತು. ಈ ಎಲ್ಲಾ ಸಾಧನೆಗಳ ಹಿಂದೆ ಕೆ.ಸಿ. ರೆಡ್ಡಿ ಅವರ ನಾಯಕತ್ವವು ನಿಸ್ಸಂಶಯವಾಗಿ ಕೆಲಸ ಮಾಡಿದೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

ಮೈಸೂರು ಕಾಂಗ್ರೆಸ್ ಬೋರ್ಡ್ ಸಂಸ್ಥಾನದ ಏಕೈಕ ಪ್ರಬಲ ರಾಜಕೀಯ ಪಕ್ಷವಾಗಿ ಹೊರ ಹೊಮ್ಮುವ ಮೂಲಕ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ ಮತ್ತು ಜಿಲ್ಲಾ ಕೇಂದ್ರಗಳ ಎಲ್ಲಾ ಕಾಂಗ್ರೆಸ್ ಘಟಕಗಳು, ಕರಪತ್ರಗಳ ಮೂಲಕ ಮತ್ತು ಭಾಷಣಗಳ ಮೂಲಕ ಕಾಂಗ್ರೆಸ್‌ನ ಧ್ಯೇಯ ಧೋರಣೆಗಳನ್ನು ಮತ್ತು ಜವಾಬ್ದಾರಿ ಸರ್ಕಾರದ ಅವಶ್ಯಕತೆಯನ್ನು ಜನತೆಗೆ ತಿಳಿಸಲು ಕಾರ್ಯೋನ್ಮುಕವಾಯಿತು. ಕೆ.ಟಿ. ಭಾಷ್ಯಂ ಮತ್ತು ಎಸ್.ಸಿ. ತಿಮ್ಮಾರೆಡ್ಡಿ ಅವರು ಸರ್ಕಾರದಿಂದ ಬಂಧಿಸಲ್ಪಟ್ಟು ರಾಜದ್ರೋಹದ ಆಪಾದನೆಯ ಮೇಲೆ 18 ತಿಂಗಳ ಕಠಿಣ ಸಜೆ ಮತ್ತು ಒಂದು ಸಾವಿರ ರೂ. ದಂಡ, ದಂಡ ಕೊಡಲು ತಪ್ಪಿದರೆ ಮತ್ತೆ ಮೂರು ತಿಂಗಳು ಕಠಿಣ ಸಜೆ ಅನುಭವಿಸಬೇಕೆಂಬ ಶಿಕ್ಷೆಗೆ ಗುರಿಯಾದರು. ಈ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡ್‌ನ ಸರ್ವಾಧಿಕಾರಿಯಾಗಿ ಕೆ.ಸಿ. ರೆಡ್ಡಿ ಅವರು ಆಯ್ಕೆಯಾದರು.[6]

---

5. ಆರಾಧ್ಯ .ಆರ್.ಎಸ್ : ತುಮಕೂರು ವಿಶೇಷಾಧಿವೇಶನ 1946, ಪುಟ–72.
6. ವಿಶ್ವ ಕರ್ನಾಟಕ ಪತ್ರಿಕೆ : ದಿನಾಂಕ : 16–10–1937, ಪುಟ–141.

ಕೆ.ಎಫ್. ನಾರಿಮನ್ ಪ್ರಕರಣ ಮತ್ತು ಬೆಳವಣಿಗೆ ಹಾಗೂ ಕೆ.ಸಿ. ರೆಡ್ಡಿ

ಮುಂಬಯಿನ ಪ್ರಸಿದ್ಧ ಕಾಂಗ್ರೆಸ್ ನಾಯಕರಾದ ಕೆ.ಎಫ್. ನಾರಿಮನ್ ಅವರು ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ಸಮ್ಮೇಳನದ ಅಧ್ಯಕ್ಷತೆವಹಿಸಲು ಮೈಸೂರು ಸಂಸ್ಥಾನಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ನಾರಿಮನ್ ಅವರ ಭಾಷಣಗಳನ್ನು ಮೈಸೂರು ಕಾಂಗ್ರೆಸ್ ಬೋರ್ಡ್‌ನ ಅಧ್ಯಕ್ಷರು ಮತ್ತು ಸರ್ವಾಧಿಕಾರಿಗಳಾಗಿದ್ದ ಕೆ.ಸಿ. ರೆಡ್ಡಿ ಅವರು ಆಯೋಜಿಸಿದ್ದರು. 1937ರ ಅಕ್ಟೋಬರ್ 20ರ ಸಂಜೆ ಬೆಂಗಳೂರಿನ ಬನಪ್ಪಪಾರ್ಕ್‌ನಲ್ಲಿ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಜನರು ಆಗಮಿಸಿದ್ದರು. ನಾರಿಮನ್ ಅವರು ಭಾಷಣ ಆರಂಭಿಸಿದ ಸ್ವಲ್ಪ ಸಮಯದಲ್ಲಿಯೇ ಪೊಲೀಸ್ ಇನ್ಸ್‌ಪೆಕ್ಟರ್ ಬಸಪ್ಪ ಎಂಬುವರು ನಾರಿಮನ್ ಅವರನ್ನು ಭಾಷಣ ಮಾಡದಂತೆ ಬಲವಂತವಾಗಿ ತಡೆದು ದಸ್ತಗಿರಿ ಮಾಡಿದರು. ದಿನಾಂಕ 25–10–1937ರ ಸಂಜೆ ಜೈಲಿನಿಂದ ಬಿಡುಗಡೆ ಮಾಡಿ ಆ ನಂತರ ಸಂಸ್ಥಾನದಿಂದ ಗಡೀಪಾರು ಮಾಡಿದರು.[7]

ನಾರಿಮನ್ ಅವರ ಗಡೀಪಾರು ಘಟನೆಯನ್ನು ಪ್ರತಿಭಟಿಸಲು 1937ರ ಅಕ್ಟೋಬರ್ 25ರಂದು ಬೆಂಗಳೂರಿನಲ್ಲಿ ಬೃಹತ್ ಹರತಾಳ ನಡೆದ ಸಂದರ್ಭದಲ್ಲಿ ಮೈಸೂರಿನ ಅಧಿಕಾರಿ ಹ್ಯಾಮಿಲ್ಟನ್ ಗೋಲಿಬಾರ್ ಮಾಡಿಸಿದ್ದರಿಂದ ಗುಂಡಪ್ಪ ಎಂಬ ವ್ಯಕ್ತಿಯು ಗುಂಡೇಟಿಗೆ ಬಲಿಯಾದನು. ನೂರಾರು ಜನ ಗಾಯಗೊಂಡರು. ಪೋಲೀಸರು ಹಲವರನ್ನು ಬಂಧಿಸಿ ಮೊಕದ್ದಮೆ ದಾಖಲಿಸಿದರು.

1937ರ ಅಕ್ಟೋಬರ್ 29ರಂದು ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕೆ.ಸಿ. ರೆಡ್ಡಿ ಅವರ ನಾಯಕತ್ವದ ಕಾಂಗ್ರೆಸ್ ನಾಯಕರು ಪಾಲ್ಗೊಂಡು ಮೈಸೂರು ಸರ್ಕಾರದ ದಮನಕಾರಿ ನೀತಿಯನ್ನು ವಿವರಿಸಿದರು. ಅಖಿಲ ಭಾರತ ಕಾಂಗ್ರೆಸ್ ಸಭೆಯು ಜವಾಬ್ದಾರಿ ಸರ್ಕಾರದ ಸ್ಥಾಪನೆ ಮತ್ತು ಜನತೆಯ ಆ ಜನ್ಮಸಿದ್ಧ ಹಕ್ಕು ಬಾಧ್ಯತೆಗಳಿಗಾಗಿ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಚಳವಳಿಯ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿನ ಮೈಸೂರು ಕಾಂಗ್ರೆಸ್ ಬೋರ್ಡ್‌ನ ಕಾರ್ಯವನ್ನು ಪ್ರಶಂಸಿಸಿ ಅದರ ಪರವಾಗಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಹೀಗೆ ಸಂಸ್ಥಾನಗಳ ರಾಜಕೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರವೇಶವು ರಾಷ್ಟ್ರೀಯ ಕಾಂಗ್ರೆಸ್‌ನ ಇತಿಹಾಸದಲ್ಲಿ ಹೊಸ ಅಧ್ಯಾಯವು ಪ್ರಾರಂಭವಾಗಲು ಕಾರಣವಾಯಿತು. ಪ್ರಾರಂಭದಲ್ಲಿ ಮಹಾತ್ಮ ಗಾಂಧೀಜಿ ಅವರು ಇದನ್ನು ವಿರೋಧಿಸಿದರು ಸಹ ಕಾಲಾಂತರದಲ್ಲಿ ಇದಕ್ಕೆ ಬೆಂಬಲ ವ್ಯಕ್ತಪಡಿಸಿದರು.[8]

---

7. Political and Private Meetings held by the congress Party. Bangalore City. Date : 09-08-1937 to 29-12-1937.
8. ವೀರತಪ್ಪ .ಕೆ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಪುಟ–41.

ಕಲ್ಕತ್ತಾ ಅಧಿವೇಶನದಿಂದ ಹಿಂದಿರುಗಿದ ಕೆ.ಸಿ. ರೆಡ್ಡಿ ಅವರು ಮದ್ರಾಸ್‌ನಿಂದ ಹೊರಡಿಸಿದ ಪತ್ರಿಕಾ ಹೇಳಿಕೆಯು ಆ ಕಾಲಘಟ್ಟದ ಮೈಸೂರು ಕಾಂಗ್ರೆಸ್ ಬೋರ್ಡ್‌ನ ಚಟುವಟಿಕೆಗಳು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಕೆ.ಸಿ. ರೆಡ್ಡಿ ಅವರು ತೆಗೆದುಕೊಂಡಿದ್ದ ನಿರ್ಧಾರಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕೆ.ಸಿ. ರೆಡ್ಡಿ ಅವರು ಮೈಸೂರಿನಲ್ಲಿ ಕಾಂಗ್ರೆಸ್ ಚಳವಳಿಯ ಇತಿಹಾಸ, ಮೈಸೂರು ಪ್ರಜೆಗಳಲ್ಲಿ ಉಂಟಾದ ಹೊಸ ಚೈತನ್ಯವನ್ನು ಅಡಗಿಸಲು ಸರ್ಕಾರದವರು ನಡೆಸಿರುವ ಮತ್ತು ನಡೆಸುತ್ತಿರುವ ದಬ್ಬಾಳಿಕೆ ಕಾರ್ಯಕ್ರಮಗಳು ಎಂದು ವರ್ಣಿಸಿದ್ದಾರೆ.

ಎ.ಐ.ಸಿ.ಸಿ. ಮತ್ತು ಕೆ.ಪಿ.ಸಿ.ಸಿ. ಸಮಿತಿಗಳ ನಿರ್ಣಯಗಳನ್ನು ವಿಮರ್ಶಿಸುತ್ತಾ "ಭಾರತ ಎಲ್ಲೆಡೆಗಳಲ್ಲೂ ವಿಶೇಷತಃ ಇತರ ಸಂಸ್ಥಾನಗಳಲ್ಲೂ ಮೈಸೂರಿಗೆ ಅಪಾರ ಬೆಂಬಲ ವಿದೆ. ಸದ್ಯಕ್ಕಾದರೂ ಸಂಸ್ಥಾನಗಳಲ್ಲಿ ಅಲ್ಲಿನ ಪ್ರಜೆಗಳೆ ತಮ್ಮ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಬೇಕು. ಇತರರು ಬಂದು ತಮ್ಮ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಬೇಕೆಂದು ಸಂಸ್ಥಾನದ ಪ್ರಜೆಗಳು ನಿರೀಕ್ಷಿಸಲಾರರು, ಹಾಗೇ ನಿರೀಕ್ಷಿಸಲೂ ಆಗದು. ನಮ್ಮ ಬಲದಲ್ಲಿ ನಂಬಿಕೆ ಇಲ್ಲದವರ ಭ್ರಾಂತಿಯನ್ನೋಡಿಸಿ ಅವರನ್ನು ನಮ್ಮ ಕಡೆಗೆ ಪರಿವರ್ತನೆ ಮಾಡಿಕೊಳ್ಳುವುದು ಸಹ ನಮ್ಮ ಕೆಲಸ ಎಂದು ಎಚ್ಚರಿಸಿದ್ದಾರೆ.

ಸಂಸ್ಥಾನದಲ್ಲಿ ಕಾಂಗ್ರೆಸ್‌ನ ಸಾಮಾನ್ಯ ಕಾರ್ಯಕ್ರಮವನ್ನು ಚುರುಕಿನಿಂದ ಆರಂಭಿಸ ಬೇಕು. ಕಾಂಗ್ರೆಸ್ ಸಮಿತಿಗಳನ್ನು ಹೊಸದಾಗಿ ಸ್ಥಾಪಿಸುವುದೂ, ಈಗಿರುವ ಸಮಿತಿಗಳನ್ನು ಬಲಪಡಿಸುವುದೂ ನಡೆಯಬೇಕು. ಕಾಂಗ್ರೆಸ್‌ನ ಸಾಮಾನ್ಯ ಕಾರ್ಯಕ್ರಮವನ್ನು ನಡೆಸುತ್ತಿ ರುವ ಕಾಲದಲ್ಲಿ ದಸ್ತಗಿರಿಗಳಾದರೆ ಆಗಲಿ, ಉದ್ದೇಶಪೂರ್ವಕವಾಗಿ ಯಾರೂ ಸರ್ಕಾರದ ನಿಷೇಧಾಜ್ಞೆಗಳನ್ನು ಮುರಿಯಲಾಗದು. ಶ್ರೀಮನ್ಮಹಾರಾಜರಲ್ಲಿ ನಮಗೆ ಅಪಾರ ಭಕ್ತಿ ಇದೆ. ಆ ಭಕ್ತಿಯು ಪರಿಶುದ್ಧವಾದುದು ನಮ್ಮ ಟೀಕಾಕಾರರು ನಮ್ಮ ಮೇಲೆ ಅನ್ಯಾಯವಾದ ದೋಷಾರೋಪಣೆಗಳನ್ನು ಮಾಡಿ ನಮ್ಮ ರಾಜಭಕ್ತಿಯ ನಿಜಾಂಶವನ್ನು ಪ್ರಶ್ನಿಸಬಾರದೆಂದು ಮೊಣಕಾಲೂರಿ ಪ್ರಾರ್ಥಿಸುತ್ತೇವೆ" ಎಂದ ಹೇಳಿಕೆ ನೀಡಿದ್ದಾರೆ.[9]

ಕೆ.ಸಿ. ರೆಡ್ಡಿ ಅವರ ಈ ಹೇಳಿಕೆಯ ಪ್ರತಿವಾಕ್ಯದ ಹಿಂದೆಯೂ ಸದ್ಭಾವನೆ ಇದೆ, ಸತ್ಯ ಮತ್ತು ಅಹಿಂಸಾ ಆದರ್ಶಗಳಿವೆ. ಅಲ್ಲಲ್ಲಿ ಉಂಟಾಗಿರಬಹುದಾದ ಭಯ ಮತ್ತು ಸಂಶಯಗಳನ್ನು ದೂರ ಮಾಡುವ ಒಲವಿದೆ. ನ್ಯಾಯವಾದ, ಗೌರವಯುತವಾದ ಷರತ್ತುಗಳ ಮೇಲೆ ಶಾಂತಿಗೆ ಕೆ.ಸಿ. ರೆಡ್ಡಿ ಅವರು ಸಿದ್ಧರಾಗಿರುವ ಬಗ್ಗೆ ತಿಳಿದು ಬರುತ್ತದೆ. ಅಲ್ಲದೇ ಇದರಿಂದ ಕೆ.ಸಿ. ರೆಡ್ಡಿ ಅವರ ಧೀಮಂತ ವ್ಯಕ್ತಿತ್ವ ಮತ್ತು ಅವರ ನಾಯಕತ್ವದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಬೋರ್ಡ್‌ನ ಕಾರ್ಯ ಚಟುವಟಿಕೆಗಳು ಹಾಗೂ ಹೋರಾಟಗಳ ಮಹತ್ವವನ್ನು ತಿಳಿಯಬಹುದು.

---

9. ವಿಶ್ವ ಕರ್ನಾಟಕ ಪತ್ರಿಕೆ : ದಿನಾಂಕ : 06-11-1937, ಪುಟ-145.

ಕೆ.ಸಿ. ರೆಡ್ಡಿ ಅವರು ಮದ್ರಾಸ್‌ನಲ್ಲಿ ನೀಡಿದ ದೀರ್ಘವಾದ ಪತ್ರಿಕಾ ಹೇಳಿಕೆಯನ್ನು ಓದಿದ ಬಳಿಕ ಜವಹರಲಾಲ್ ನೆಹರೂ ಅವರು ರೆಡ್ಡಿ ಅವರನ್ನು ಭೇಟಿಯಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಾಮಾನ್ಯ ನೀತಿಯನ್ನು ವಿವರಿಸಿ ಮೈಸೂರು ಸರ್ಕಾರದಲ್ಲಿ ತೀವ್ರತರವಾದ ಚಳವಳಿಯ ಅವಶ್ಯಕತೆಯು ಇಲ್ಲದಿರುವುದರಿಂದ ಕಾನೂನುಭಂಗ ಚಳವಳಿಯನ್ನು ಸಾಧಾರಣ ರೂಪದಲ್ಲಿ ಮಾಡಲು ಸಲಹೆ ನೀಡಿರುವುದಾಗಿ ಅವರು ಕೆ.ಪಿ.ಸಿ.ಸಿ. ಕಾರ್ಯದರ್ಶಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.[10]

ಕೆ.ಸಿ. ರೆಡ್ಡಿ ಅವರು ಕಾಂಗ್ರೆಸ್ ಒಂದು ಸಭೆಯಲ್ಲಿ ಕೆ.ಟಿ. ಭಾಷ್ಯಂ ಮತ್ತು ಎನ್.ಸಿ. ತಿಮ್ಮಾರೆಡ್ಡಿ ಅವರಿಗೆ ಸರ್ಕಾರವು ವಿಧಿಸಿದ್ದ ಕಠಿಣ ಶಿಕ್ಷೆಯ ಬಗ್ಗೆ ಪ್ರಸ್ತಾಪಿಸಿ ಮಾತನಾಡುತ್ತಾ "ಇಂತಹ ಶಿಕ್ಷೆಗಳನ್ನು ವಿಧಿಸುವುದರಿಂದ ಎಂತಹ ಪರಿಣಾಮಗಳು ಉಂಟಾಗುತ್ತವೆ? ಹಾಗೆ ಪರಿಣಾಮ ಉಂಟಾಗದಿರಲು ಸಾಧ್ಯವೇ? ಪರಿಣಾಮವು ಹಿತದಾಯಕವು, ಸಮಾಧಾನಕರವೂ ಆಗದೆ, ರೋಷಾವೇಷಕಾರವೂ ಅಶಾಂತಿ ಕಾರಣವೂ ಆಗುವುದಿಲ್ಲವೇ? ಇಂತಹ ಪರಿಸ್ಥಿತಿಯನ್ನು ಯಾರು ಬಯಸುವುದಿಲ್ಲ. ಸಾಧ್ಯವಾದ ಮಟ್ಟಿಗೆ ಜನಸಮುದಾಯದ ಮನಸ್ಸು ನೆಮ್ಮದಿಗೊಳ್ಳುವಂತಹ ವಾತಾವರಣವನ್ನೇ ಕಲ್ಪಿಸುತ್ತಾ ಹೋಗುವುದು ಒಳ್ಳೆಯದು. ಶಾಂತಿ ಸ್ಥಾಪನೆಗಾಗಿ ಉಗ್ರಶಿಕ್ಷೆಗಳನ್ನು, ಶಸ್ತ್ರಾಸ್ತ್ರಗಳನ್ನು ಆಶ್ರಯಿಸುವುದರಿಂದ ಪ್ರಯೋಜನವಿಲ್ಲವೆಂಬುದು ಸರ್ಕಾರದವರಿಗೆ ಚೆನ್ನಾಗಿ ಗೊತ್ತಿದೆ. ಶಿಕ್ಷೆಗಳಿಗೂ ಶಸ್ತ್ರಪ್ರಯೋಗಗಳಿಗೂ ಒಂದು ಮಿತಿ ಇದೆ. ಅದನ್ನು ಸಂಪೂರ್ಣವಾಗಿ ನಿರಾಕರಿಸುವುದಕ್ಕೆ ಆಗುವುದಿಲ್ಲ. ಇವು ಅನಿವಾರ್ಯವಾದಂತಹವು" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[11]

ಅಂದಿನ ಮೈಸೂರು ಸರ್ಕಾರಕ್ಕೆ ಕೆ.ಸಿ. ರೆಡ್ಡಿ ಅವರು ನೀಡಿದ ಸಲಹೆಯ ರೂಪದ ಈ ಎಚ್ಚರಿಕೆಯು ಗಮನಾರ್ಹವಾದುದು. ಯಾವುದೇ ಒಂದು ಸರ್ಕಾರವು ನಡೆದುಕೊಳ್ಳಬೇಕಾದ ರೀತಿ ನೀತಿಯ ಬಗ್ಗೆ ಈ ಸಲಹೆಯು ಬೆಳಕು ಚೆಲ್ಲುವಂತಿದೆ. ಕೆ.ಸಿ. ರೆಡ್ಡಿ ಅವರ ಚಿಂತನೆಯ ಔನ್ನತ್ಯವನ್ನು ಇದು ತೋರಿಸುತ್ತದೆ.

ಇದೇ ಸಂದರ್ಭದಲ್ಲಿ 1937ರ ಡಿಸೆಂಬರ್ 6ರಂದು "ನ್ಯಾಯವಿಧಾಯಕ ಸಭೆಯ ಎನ್. ಬಾಲಕೃಷ್ಣಯ್ಯ, ವಿ. ವೆಂಕಟಪ್ಪ, ಹೆಚ್.ಸಿ. ದಾಸಪ್ಪ, ಹೆಚ್.ಬಿ. ಗುಂಡಪ್ಪಗೌಡ, ಕೆ.ಸಿ. ರೆಡ್ಡಿ, ಡಿ.ಎಸ್. ಮಲ್ಲಪ್ಪ, ಹೆಂಜೇರಪ್ಪ, ಕೆ.ಟಿ. ಸತ್ಯನಾರಾಯಣಶೆಟ್ಟಿ, ಭೂಪಾಳಂ

---

10. NEHRU LETTERS : Date : 11-11-1937, Selected Works of Jawarlal Nehru, Vol- VIII, P-566.
11. ವಿಶ್ವ ಕರ್ನಾಟಕ ಪತ್ರಿಕೆ : ದಿನಾಂಕ : 09–11–1937, ಪುಟ–146.

ಪುಟ್ಟನಂಜಪ್ಪ, ಎಚ್. ಸಿದ್ಧಯ್ಯ, ಡಿ.ಹೆಚ್. ಚಂದ್ರಶೇಖರಯ್ಯ ಮುಂತಾದ ಹನ್ನೊಂದು ಮಂದಿ ಕಾಂಗ್ರೆಸ್ ಸದಸ್ಯರು ಸರ್ಕಾರದವರು ಈಗ ಅನುಸರಿಸುತ್ತಿರುವ ದಬ್ಬಾಳಿಕೆಯನ್ನು ಪ್ರತಿಭಟಿಸುವುದಕ್ಕೂ ಮತ್ತು ಪುನಃ ಕಾಂಗ್ರೆಸ್ ಹೆಸರಿನಲ್ಲಿ ಚುನಾವಣೆಗೆ ನಿಂತ್ತು ಮೈಸೂರು ದೇಶವು ಕಾಂಗ್ರೆಸ್ಸಿನ ಹಿಂದಿರುವುದೆಂಬುದನ್ನು ತೋರಿಸಿ ಕೊಡುವುದಕ್ಕೂ ನಾವು ರಾಜೀನಾಮೆ ಕೊಟ್ಟಿದ್ದೇವೆ" ಎಂದು ಸರ್ಕಾರಕ್ಕೆ ತಿಳಿಸಿ ರಾಜೀನಾಮೆ ಕೊಟ್ಟರು.[12] ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಇದೊಂದು ಅಪೂರ್ವ ಘಟನೆಯಾಗಿದೆ. ಈ ಘಟನೆಯಿಂದಾಗಿ ಮೈಸೂರಿನ ಸರ್ಕಾರದಲ್ಲಿ ಹೆಚ್ಚಿನ ಬದಲಾವಣೆಗಳೇನು ಘಟಿಸದಿದ್ದರೂ ಸರ್ಕಾರದ ಆಡಳಿತದಲ್ಲಿ ಸ್ವಲ್ಪ ಬದಲಾವಣೆಗಳು ಕಂಡು ಬಂದವು. ದಬ್ಬಾಳಿಕೆಗಳು ಸ್ವಲ್ಪ ಕಡಿಮೆಯಾದರೂ ಪೂರ್ಣ ನಿಲ್ಲಲಿಲ್ಲ.

ಆ ನಂತರ 1938ರ ಜನವರಿಯಲ್ಲಿ ಚಿತ್ರದುರ್ಗದಲ್ಲಿ ಮೈಸೂರು ಕಾಂಗ್ರೆಸ್ ಬೋರ್ಡ್‌ನ ಸದಸ್ಯರ ಮಹಾಸಮ್ಮೇಳನ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಕೆ.ಸಿ. ರೆಡ್ಡಿ ಅವರು ಈ ಕೆಳಕಂಡ ಅಂಶಗಳನ್ನು ಸೂಚಿಸಿದರು.

1. ಬ್ರಿಟಿಷ್ ಭಾರತದಲ್ಲಿ ಇರುವಂತೆ ಮೈಸೂರು ಸಂಸ್ಥಾನದಲ್ಲಿಯೂ ವೋಟು ಮಾಡುವ ಅಧಿಕಾರ ನೀಡಬೇಕು.
2. ನ್ಯಾಯವಿಧಾಯಕ ಸಭೆಯಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕು.
3. ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ಚುನಾಯಿತ ಅಧ್ಯಕ್ಷರನ್ನು ಆಯ್ಕೆ ಮಾಡಬೇಕು.
4. ಶಾಸನಸಭೆಗೆ ಜವಾಬ್ದಾರರಾಗಿರುವಂತೆ ನಾಲ್ಕೈದು ಮಂತ್ರಿಗಳನ್ನು ಮಹಾರಾಜರು ನೇಮಿಸಬೇಕು ಎಂದು ಸೂಚಿಸಿದರು.

ಅಲ್ಲದೆ ಭೂ ಸುಧಾರಣೆ, ರೈತರ ಋಣ ಪರಿಹಾರ, ಸರ್ಕಾರದಲ್ಲಿ ಅಕ್ರಮ ವ್ಯವಹಾರಗಳನ್ನು ಹೋಗಲಾಡಿಸುವುದು, ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಪ್ರೋತ್ಸಾಹ ನೀಡುವುದು, ಶ್ರಮಜೀವಿಗಳ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದು, ಸರ್ಕಾರಿ ನೌಕರರ ಸಂಬಳ ಇಳಿಸುವುದು, ಪಾನ ನಿರೋಧ ಜಾರಿಗೆ ತರುವುದು, ಗ್ರಾಮಗಳ ಪುನರುದ್ಧಾರಕ್ಕೆ ಪ್ರಭಾವಯುತ ಕ್ರಮಕೈಗೊಳ್ಳುವುದು ಮುಂತಾದ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವಂತೆ ಕೆ.ಸಿ. ರೆಡ್ಡಿ ಅವರು ಸರ್ಕಾರವನ್ನು ಆಗ್ರಹ ಪೂರ್ವಕವಾಗಿ ಕೋರಿದರು.[13]

---

12. ವಿಶ್ವ ಕರ್ನಾಟಕ ಪತ್ರಿಕೆ : ದಿನಾಂಕ : 07–12–1937, ಪುಟ–151.
13. ನಾರಾಯಣರಾವ್ .ವಿ.ಎಸ್: ಮಿರ್ಜಾ ಇಸ್ಮಾಯಿಸ್ ಅವರ ಜೀವನ ಚರಿತ್ರೆ, ಪುಟ–68.

ಈ ಸಂದರ್ಭದಲ್ಲಿ ಸರ್ಕಾರವು ತಾನು ಬಂಧಿಸಿದ್ದ ಎಲ್ಲ ಕಾಂಗ್ರೆಸ್ ನಾಯಕರನ್ನು 12-02-1938ರಂದು ಬಿಡುಗಡೆ ಮಾಡಿತು. 1938ರ ಫೆಬ್ರವರಿ 19, 20, 21 ರಂದು ಗುಜರಾತ್‌ನ ಹರಿಪುರದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 51ನೆಯ ಅಧಿವೇಶನ ಸುಭಾಷ್ ಚಂದ್ರಬೋಸ್‌ರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಕಾಂಗ್ರೆಸ್ ಬೋರ್ಡ್‌ನ ನಾಯಕರಾದ ಕೆ.ಸಿ. ರೆಡ್ಡಿ, ಟಿ. ಸಿದ್ದಲಿಂಗಯ್ಯ, ಕೆ. ಹನುಮಂತಯ್ಯ, ಭೂಪಾಳಂ ಚಂದ್ರಶೇಖರಯ್ಯ, ವಿ. ವೆಂಕಟಪ್ಪ, ಬಿ.ಎಸ್. ಗುಪ್ತ ಮುಂತಾದವರು ಈ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಇದು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟ ಐತಿಹಾಸಿಕ ಅಧಿವೇಶನವಾಗಿ ಚರಿತ್ರಾರ್ಹವಾಗಿದೆ.

ಈ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲಿನ ರಾಜಕೀಯ ಚಟುವಟಿಕೆಗಳಿಗೆ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹೆಸರನ್ನು ಬಳಸಬಾರದು ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಆಗ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳೆಲ್ಲರು ಸಂಘಟಿತರಾಗಿ ಈ ನಿರ್ಣಯವನ್ನು ವಿರೋಧಿಸಿದರು. ಈ ನಿರ್ಣಯದಿಂದ ತೀವ್ರವಾಗಿ ಕೋಪಗೊಂಡ ಕೆ.ಸಿ. ರೆಡ್ಡಿ ಅವರು ಸಂಸ್ಥಾನಗಳ ಜನರ ಉದ್ದೇಶವನ್ನು ಪ್ರಬಲವಾಗಿ ಸಮರ್ಥಿಸಿಕೊಂಡರು. ಆಗ ಅಧಿವೇಶನದ ಅಧ್ಯಕ್ಷರಾಗಿದ್ದ ಸುಭಾಷ್ ಚಂದ್ರ ಬೋಸ್ ಅವರ ಸೂಚನೆಯಂತೆ ನಿರ್ಣಯಕ್ಕೆ ತಿದ್ದುಪಡಿತರಲಾಯಿತು. "ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯು ಪ್ರತ್ಯೇಕವಾಗಿ ದೇಶೀಯ ಸಂಸ್ಥಾನಗಳ ರಾಜಕೀಯದಲ್ಲಿ ಕೈ ಹಾಕುವುದಿಲ್ಲ. ಆದರೆ ಕಾಂಗ್ರೆಸ್ ಸದಸ್ಯರು ವೈಯಕ್ತಿಕವಾಗಿ ಭಾಗವಹಿಸಬಹುದು. ದೇಶೀಯ ಸಂಸ್ಥಾನಗಳು ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಸ್ವತಂತ್ರ ರಾಜಕೀಯ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬಹುದು" ಎಂದು ಒಪ್ಪಿಗೆ ನೀಡಿತು.[14]

ರಾಷ್ಟ್ರೀಯ ಕಾಂಗ್ರೆಸ್ ಈ ರೀತಿ ತನ್ನ ನಿರ್ಣಯವನ್ನು ಬದಲಿಸಿ ದೇಶೀಯ ಸಂಸ್ಥಾನಗಳ ಚಳವಳಿಯಲ್ಲಿ ಕಾಂಗ್ರೆಸ್ ಸದಸ್ಯರು ಪಾಲ್ಗೊಳ್ಳಲು ಒಪ್ಪಿಗೆ ನೀಡಲು ಕೆ.ಸಿ. ರೆಡ್ಡಿ ಅವರ ಸಮರ್ಥವಾದ ವಾದ ಮಂಡನೆಯೇ ಕಾರಣವೆಂಬುದು ಗಮನಾರ್ಹ ಅಂಶ. ಆ ಅಧಿವೇಶನದ ಅಧ್ಯಕ್ಷತೆವಹಿಸಿದ್ದ ಸುಭಾಷ್ ಚಂದ್ರ ಬೋಸರು ಸ್ವತಃ ತಾವೇ ನಿರ್ಣಯಕ್ಕೆ ತಿದ್ದುಪಡಿ ಸೂಚಿಸಿದುದು ಕೆ.ಸಿ. ರೆಡ್ಡಿ ಅವರ ಸಮರ್ಥನೆಯಿಂದ ಎಂಬುದು ಮಹತ್ವದ ಅಂಶವಾಗಿದೆ. ಹೀಗಾಗಿ ಕೆ.ಸಿ. ರೆಡ್ಡಿ ಅವರು ತಮ್ಮ ನಾಯಕತ್ವ ಗುಣದಿಂದ ಬಹುಬೇಗ ರಾಷ್ಟ್ರೀಯ ಕಾಂಗ್ರೆಸ್‌ನ ಹಿರಿಯ ನಾಯಕರ ಗಮನ ಸೆಳೆಯುವಂತಹ ಪ್ರಮುಖ ನಾಯಕರಾಗಿ ಬೆಳೆದಿದ್ದರೆಂದು ಹೇಳಬಹುದು.

---

14. ವೀರತಪ್ಪ .ಕೆ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ಪುಟ-43.

ಈ ಅಧಿವೇಶನದಲ್ಲಿ ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದಂತೆ ಮೈಸೂರು ಕಾಂಗ್ರೆಸ್ ಬೋರ್ಡ್ ಸದಸ್ಯರ ಅಭಿಪ್ರಾಯದಂತೆ ನಿರ್ಣಯ ಅಂಗೀಕಾರ ಪಡೆದಿದ್ದರಿಂದ ಕೋಪಗೊಂಡ ಗಾಂಧೀಜಿ ಅವರು ಇದನ್ನು ಟೀಕಿಸಿದರು. ಇದಕ್ಕೆ ಸಂಬಂಧಿಸಿದಂತೆ ನೆಹರು ಅವರು ಕೆ.ಸಿ. ರೆಡ್ಡಿ ಅವರಿಗೆ ಬರೆದ ಪತ್ರದಲ್ಲಿ "ಮಹಾತ್ಮ ಗಾಂಧೀಜಿ ಅವರು ಎ.ಐ.ಸಿ.ಸಿ.ಯಲ್ಲಿ ಮೈಸೂರು ನಿರ್ಣಯದ ಬಗ್ಗೆ ಟೀಕಿಸುದುದನ್ನು ಓದಿ ಬೇಸರವಾಯಿತು. ಮಹಾತ್ಮ ಗಾಂಧೀಜಿ ಅವರಿಗೆ ಈ ವಿಷಯದ ಬಗ್ಗೆ ಪೂರ್ಣ ಮಾಹಿತಿ ಇದ್ದಿದ್ದರೆ ಈ ರೀತಿ ಟೀಕಿಸುತ್ತಿರಲಿಲ್ಲ. ನಾನು ಅವರಿಗೆ ಈ ಬಗ್ಗೆ ಪತ್ರ ಬರೆದು ಮಾಹಿತಿ ನೀಡುತ್ತೇನೆ. ಈ ವಿಷಯದ ಬಗ್ಗೆ ನಮ್ಮ ಭಿನ್ನಾಭಿಪ್ರಾಯಗಳು ಸಾರ್ವಜನಿಕ ಚರ್ಚೆಗೆ ವಸ್ತುವಾಗಬಾರದು. ನೀವು ಮತ್ತು ಹುಕ್ಕೇರಿಕರ್ ಅವರು ಸರಿಯಾದ ಸಂವಿಧಾನಾತ್ಮಕ ದಾರಿಯಲ್ಲಿ ಸಾಗುತ್ತಿದ್ದೀರಿ. ಈ ಬಗ್ಗೆ ಗಾಂಧೀಜಿ ಅವರಿಗೆ ಪೂರ್ಣಮಾಹಿತಿ ಇದ್ದಿದ್ದರೆ ಅವರು ಖಂಡಿತ ಹೀಗೆ ಟೀಕಿಸುತ್ತಿರಲಿಲ್ಲ ಎಂಬ ನಂಬಿಕೆ ನನಗಿದೆ" ಎಂದು ತಿಳಿಸಿದ್ದಾರೆ.[15]

ಮುಂದೆ ಕೆ.ಸಿ. ರೆಡ್ಡಿ ಹಾಗೂ ಇತರ ನಾಯಕರು ಗಾಂಧೀಜಿ ಅವರನ್ನು ಭೇಟಿಯಾಗಿ ಸಂಸ್ಥಾನದ ಪೂರ್ಣಚಿತ್ರಣವನ್ನು ವಿವರಿಸಿದ ನಂತರ ಗಾಂಧೀಜಿ ಅವರು ಹರಿಪುರ ಕಾಂಗ್ರೆಸ್ ನಿರ್ಣಯವನ್ನು ಒಪ್ಪಿಕೊಂಡರು.

ಕೆ.ಸಿ. ರೆಡ್ಡಿ ಅವರಿಗೆ 1938ರ ಜನವರಿ 4ರಂದು ನೆಹರು ಅವರು ಬರೆದ ಪತ್ರದಲ್ಲಿ "ನಾನು ಈ ಹಿಂದೆಯೇ ನಿಮಗೆ ತಿಳಿಸಿದಂತೆ ಮೈಸೂರು ಸರ್ಕಾರದೊಡನೆ ಬಹಿರಂಗವಾದ ಜಗಳ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಅವರ ಆದೇಶವನ್ನು ಧಿಕ್ಕರಿಸುವ ಮೂಲಕ ಸರ್ಕಾರದೊಡನೆ ಯಾವ ಕಾರಣಕ್ಕೂ ದ್ವೇಷ ಕಟ್ಟಿಕೊಳ್ಳಬೇಡಿ. ನೀವು ಮೈಸೂರು ಸರ್ಕಾರದೊಡನೆ ಸೌಹಾರ್ದಯುತ ಸಂಬಂಧವನ್ನು ಬೆಳೆಸಿಕೊಳ್ಳುವ ಮೂಲಕ ಪ್ರಸ್ತುತ ಪರಿಸ್ಥಿತಿಯನ್ನು ಸುಧಾರಿಸಬಹುದು. ಆದರೆ ಮೈಸೂರು ಸರ್ಕಾರದೊಡನೆ ಸೌಹಾರ್ದಯುತ ಸಂಬಂಧ ಬೆಳೆಸಿಕೊಳ್ಳಲು ನೀವು ಸರ್ಕಾರದ ಬಾಗಿಲುತಟ್ಟುವ ಅವಶ್ಯಕತೆಇಲ್ಲ" ಎಂಬ ಸಲಹೆ ನೀಡಿದರು.[16] ನೆಹರು ಅವರ ಸಲಹೆಯನ್ನು ಅಂಗೀಕರಿಸಿದ ರೆಡ್ಡಿ ಅವರು ಅದರಂತೆ ತಮ್ಮ ಹೋರಾಟದ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಪರಿವರ್ತಿಸಿಕೊಂಡದ್ದನ್ನು ಗುರುತಿಸಬಹುದು.

---

15. NEHRU LETTERS : Date : 19-11-1937, Selected Works of Jawarlal Nehru, Vol- VIII, P-570.
16. NEHRU LETTERS : Date : 04-01-1938, Selected Works of Jawarlal Nehru, Vol-VIII, P-575.

3. ಮೈಸೂರು ಕಾಂಗ್ರೆಸ್ ಸ್ಥಾಪನೆ ಮತ್ತು ಕೆ.ಸಿ. ರೆಡ್ಡಿ. 1938

ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ನಿರ್ಣಯದಂತೆ ಮೈಸೂರು ಸಂಸ್ಥಾನದಲ್ಲಿ ಒಂದು ಹೊಸ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಲು ಮೈಸೂರು ಕಾಂಗ್ರೆಸ್ ಬೋರ್ಡ್ ಸದಸ್ಯರು ಮೈಸೂರಿನಲ್ಲಿ ಮಿರ್ಲೆ ಲಕ್ಷ್ಮೀನಾರಾಯಣರಾವ್ ಅವರ ಮನೆಯಲ್ಲಿ ದಿ: 28–02–1938ರಂದು ಸಭೆ ಸೇರಿದ್ದರು. ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯ ಫಲಿತವಾಗಿ 'ಮೈಸೂರು ಕಾಂಗ್ರೆಸ್' ಸ್ಥಾಪನೆಯಾಯಿತು. ಅಧ್ಯಕ್ಷರಾಗಿ ಟಿ. ಸಿದ್ಧಲಿಂಗಯ್ಯ, ಕಾರ್ಯದರ್ಶಿಯಾಗಿ ವಿ.ಎಸ್. ನಾರಾಯಣರಾವ್ ಚುನಾಯಿತರಾದರು. ಈ ಸಂಸ್ಥೆಯ ಪ್ರಾರಂಭೋತ್ಸವವನ್ನು ಸೇಲಂನ ವೆಂಕಟಪ್ಪ ಚೆಟ್ಟಿಯಾರ್ ಅವರು ನೆರವೇರಿಸಿದರು. ಮೈಸೂರು ಕಾಂಗ್ರೆಸ್‌ನ ನಿರ್ಣಯದಂತೆ "ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ತನ್ನ ಮುಖ್ಯ ಗುರಿ ಹಾಗೂ ರಾಷ್ಟ್ರೀಯ ಕಾಂಗ್ರೆಸ್‌ನ ತ್ರಿವರ್ಣಧ್ವಜವನ್ನೇ ತನ್ನ ಧ್ವಜವನ್ನಾಗಿ ಸಭೆ ಅಂಗೀಕರಿಸಿತು.

1938ರ ಮಾರ್ಚ್ 10, 11, 12 ರ ತ್ರಿಪುರದಲ್ಲಿ ನಡೆದ 52ನೆಯ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನ ಸುಭಾಷ್ ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಮೈಸೂರು ಕಾಂಗ್ರೆಸ್‌ನ ಗೌರವ ಕಾರ್ಯದರ್ಶಿ ಕೆ.ಸಿ. ರೆಡ್ಡಿ ಅವರು ಮೈಸೂರು ಸರ್ಕಾರದ ತಂತ್ರಗಳನ್ನು ರಾಷ್ಟ್ರೀಯ ನಾಯಕರುಗಳಿಗೆ ಬಹಿರಂಗಪಡಿಸಿದರು. ಅದರಂತೆ "ಮೈಸೂರು ಸರ್ಕಾರವು ಸರ್ದಾರ್ ಪಟೇಲ್ ಮತ್ತು ಆಚಾರ್ಯ ಕೃಪಲಾನಿ ಅವರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಸಂಪೂರ್ಣ ಉಲ್ಲಂಘಿಸಿದೆ ಎಂದೂ, ಒಪ್ಪಂದದ ಸಹಿಯ ಮಸಿಯು ಆರುವ ಮೊದಲೇ ಸರ್ಕಾರವು ಒಪ್ಪಂದವನ್ನು ಮುರಿದಿದೆ. ಸರ್ಕಾರವು ಈ ಹಿಂದೆ ವಿಧಿಸಿದ್ದ ನಿಷೇಧಗಳನ್ನು ಒಪ್ಪಂದದ ಪ್ರಕಾರ ಹಿಂತೆಗೆದುಕೊಂಡಿಲ್ಲ, ರಾಜಕೀಯ ಬಂಧಿಗಳನ್ನು ಪೂರ್ಣವಾಗಿ ಬಿಡುಗಡೆ ಮಾಡಿಲ್ಲ. ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದನ್ನು ತಡೆಯಲಾಗುತ್ತಿದೆ, ನಾವು ಮೈಸೂರು ಸರ್ಕಾರಕ್ಕೆ ಹಲವು ಅವಕಾಶಗಳನ್ನು ನೀಡಿದರೂ ಅದು ತನ್ನ ಮಾತನ್ನು ಉಳಿಸಿಕೊಂಡಿಲ್ಲ. ಆದ್ದರಿಂದ ನಾವು ಸರ್ಕಾರದೊಡನೆ ಅಸಹಕಾರ ಚಳವಳಿಯನ್ನು ಹೂಡಲು ನಿರ್ಧರಿಸಿದ್ದೇವೆ. ಇದು ನಮ್ಮ ಕೊನೆಯ ಹೋರಾಟವಾಗಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.[17] ಹೀಗಾಗಿ ಅಸಹಕಾರ ಚಳವಳಿಯನ್ನು ಸಂಸ್ಥಾನದಲ್ಲಿ ಆರಂಭಿಸಲು ಯೋಜಿಸುದುದನ್ನು ಗಮನಿಸಬಹುದು.

---

17. INDIAN NATIONAL CONGRESS : Fifty Second Session, Tripuri, March 10-12, 1939, P-115.

ಮಿರ್ಜಾ ರಾಜಕೀಯ – ಸಮಿತಿ ಮತ್ತು ಕೆ.ಸಿ. ರೆಡ್ಡಿ

ಮೈಸೂರು ಕಾಂಗ್ರೆಸ್ ಸ್ಥಾಪನೆಯಾದ ನಂತರವು ಕೂಡ ಸರ್ಕಾರವು ಮೈಸೂರು ಕಾಂಗ್ರೆಸ್ ಅನ್ನು ಅಧಿಕೃತವಾಗಿ ರಾಜಕೀಯ ಸಂಸ್ಥೆ ಎಂದು ಮಾನ್ಯ ಮಾಡದ ಕಾರಣ ಸಂಸ್ಥಾನದ ಪ್ರಮುಖ ಕಾಂಗ್ರೆಸ್ ನಾಯಕರು ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿ ಸಂಸ್ಥಾನ ದಾದ್ಯಂತ ಪ್ರವಾಸ ಮಾಡಿ ಸರ್ಕಾರದ ಧೋರಣೆಗಳನ್ನು ಅದರಲ್ಲೂ ನೇರವಾಗಿ ಮಿರ್ಜಾಇಸ್ಮಾಯಿಲ್ ಅವರನ್ನು ಕಟುವಾಗಿ ಟೀಕಿಸಲಾರಂಭಿಸಿದರು.

ಇದರಿಂದ ವಿಚಲಿತಗೊಂಡ ದಿವಾನ್ ಮಿರ್ಜಾಇಸ್ಮಾಯಿಲ್ ಅವರು ಆತುರಾತುರ ವಾಗಿ ನ್ಯಾಯವಿಧಾಯಕ ಸಭೆಯಲ್ಲಿ ಮೈಸೂರು ಕಾಂಗ್ರೆಸ್ ಪ್ರತಿನಿಧಿಗಳ ಜೊತೆ ಚರ್ಚಿಸದೆಯೇ, ಸಂಪರ್ಕಿಸದೆಯೇ ರಾಜಕೀಯ ಸುಧಾರಣಾ ಸಮಿತಿಯೊಂದನ್ನು ಕೆ.ಆರ್. ಶ್ರೀನಿವಾಸಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 01–04–1938ರಂದು ನೇಮಿಸಿರು ವುದಾಗಿ ಪ್ರಕಟಿಸಿತು. ಈ ಸಮಿತಿಯು 20 ಸದಸ್ಯರಿಂದ ಕೂಡಿದ್ದು, ಮೈಸೂರು ಕಾಂಗ್ರೆಸ್‌ನ ಕೆ.ಸಿ. ರೆಡ್ಡಿ, ಡಿ.ಎಚ್. ಚಂದ್ರಶೇಖರಯ್ಯ, ಭೂಪಾಳಂ ಚಂದ್ರಶೇಖರ ಶೆಟ್ಟಿ ಮತ್ತು ವಿ.ವೆಂಕಟಪ್ಪ ಈ ನಾಲ್ವರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಗಿತ್ತು.

ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಗಳ ಅಧಿಕಾರ, ಕಾರ್ಯವ್ಯಾಪ್ತಿ, ಕಾಲಾವಧಿ, ಮತದಾನ, ಮತದಾರರು, ಸದಸ್ಯರ ಸೌಲಭ್ಯಗಳು, ಸದನಗಳ ಸಂಬಂಧ, ಅಲ್ಪ ಸಂಖ್ಯಾತರ ಹಿತರಕ್ಷಣೆ ಇತ್ಯಾದಿಗಳು ಸಮಿತಿಯ ಉದ್ದೇಶಗಳಾಗಿದ್ದವು.

"ಈ ರಾಜಕೀಯ ಸುಧಾರಣಾ ಸಮಿತಿಯಲ್ಲಿ ಹೆಚ್ಚಿನ ಸದಸ್ಯರು ಸರ್ಕಾರದ ಪರವಾದವರೇ ಇರುವುದರಿಂದ ನ್ಯಾಯ ದೊರೆಯುವುದಿಲ್ಲ ಎಂದು ಮೈಸೂರು ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿ ಸರ್ಕಾರದ ಮುಂದೆ ಮೂರು ಬೇಡಿಕೆಗಳನ್ನು ಮಂಡಿಸಿದರು. ಅವುಗಳೆಂದರೆ

1. ಮೈಸೂರು ಕಾಂಗ್ರೆಸ್ ಅನ್ನು ರಾಜಕೀಯ ಪಕ್ಷ ಎಂದು ಮಾನ್ಯ ಮಾಡಬೇಕು.
2. ರಾಜಕೀಯ ಸುಧಾರಣಾ ಸಮಿತಿಯಲ್ಲಿ ಕಾಂಗ್ರೆಸ್ ಸದಸ್ಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವುದು.
3. ಜವಾಬ್ದಾರಿ ಸರ್ಕಾರದ ಸ್ಥಾಪನೆಯೇ ರಾಜಕೀಯ ಸುಧಾರಣಾ ಸಮಿತಿ ಗುರಿಯಾಗಿರಬೇಕು.

ಆದರೆ ದಿವಾನರಾಗಿದ್ದ ಮಿರ್ಜಾಇಸ್ಮಾಯಿಲ್ ಅವರು ಈ ಬೇಡಿಕೆಗಳನ್ನು ತಿರಸ್ಕರಿಸಿದ್ದರಿಂದ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್

ರಾಜಕೀಯ ಸುಧಾರಣಾ ಸಮಿತಿಗೆ ಅಸಹಕಾರ ಮತ್ತು ಧ್ವಜ ಸತ್ಯಾಗ್ರಹ ಚಳುವಳಿ ಪ್ರಾರಂಭಿಸಲು ತೀರ್ಮಾನಿಸಲಾಯಿತು"[18]

ರಾಜಕೀಯ ಸುಧಾರಣಾ ಸಮಿತಿಯಲ್ಲಿ ಮೈಸೂರು ಕಾಂಗ್ರೆಸ್‌ನ ಹೆಚ್ಚಿನ ಸದಸ್ಯರಿಗೆ ಪ್ರಾತಿನಿಧ್ಯಸಿಗದ ಕಾರಣದಿಂದ ಕೆ.ಸಿ. ರೆಡ್ಡಿ ಅವರಿಗೆ ಬೇಸರದೊಂದಿಗೆ ಹೆಚ್ಚಿನ ಕೋಪವು ಬಂದಿತು.

1938ರ ಏಪ್ರಿಲ್‌ನಲ್ಲಿ ಕನಕಪುರದಲ್ಲಿ ನಡೆದ ಕಾಂಗ್ರೆಸ್ ಸಭೆಯೊಂದರಲ್ಲಿ ಕೆ.ಸಿ. ರೆಡ್ಡಿ ಅವರು "ಸರ್ಕಾರದವರು ನಮ್ಮ ಐಕ್ಯಮತ್ಯವನ್ನು ಒಡೆದು ತಮ್ಮ ಅಭೀಷ್ಟವನ್ನು ನೆರವೇರಿಸಿಕೊಳ್ಳಬೇಕೆಂದು ಪ್ರಯತ್ನಪಡುವುದಾದರೆ ಅದು ಅವರ ಕನಸ್ಸೆಂದು ಹೇಳ ಬೇಕಾಗುತ್ತದೆ. ರಾಜಕೀಯ ಸುಧಾರಣಾ ಸಮಿತಿಯಲ್ಲಿ ಸಹಕರಿಸಬೇಕೆಂದು ನನಗೂ ಮತ್ತೇ ಕೆಲವರಿಗೂ ಸರ್ಕಾರದಿಂದ ಪತ್ರಗಳು ಬಂದಿವೆ. ಶಿವಪುರ ಅಧಿವೇಶನದಲ್ಲಿ ನಿರ್ಣಯವಾಗುವವರೆಗೆ ಸಮಿತಿಯಲ್ಲಿ ಕಾಂಗ್ರೆಸ್‌ನ ಪರವಾಗಿ ಯಾರೂ ಭಾಗವಹಿಸುವುದಿಲ್ಲ. ಜವಾಬ್ದಾರಿ ಸರ್ಕಾರ ಸ್ಥಾಪನೆಯ ಸೂಚನೆ ಕಂಡು ಬರುವವರೆಗೂ ಈ ಚಳವಳಿ ನಿಲ್ಲುವುದಿಲ್ಲ" ಎಂದು ಸರ್ಕಾರಕ್ಕೆ ಸ್ಪಷ್ಟ ಮಾತುಗಳಲ್ಲಿ ಸೂಚಿಸಿದರು.[19]

ಜವಾಬ್ದಾರಿ ಸರ್ಕಾರ ರಚನೆಯನ್ನು ಪಡೆಯುವ ಬಗ್ಗೆ ಕೆ.ಸಿ. ರೆಡ್ಡಿ ಅವರ ಅಭಿಲಾಷೆ, ತಮ್ಮ ಗುರಿಯ ಬಗೆಗಿನ ಸ್ಪಷ್ಟ ನಿಲುವು, ಕಾರ್ಯಸಾಧನೆಯ ಬಗೆಗಿನ ಛಲ, ಸರ್ಕಾರದ ಧೋರಣೆಯ ಬಗ್ಗೆ ನಿಷ್ಠೂರತೆ ಮುಂತಾದವುಗಳನ್ನು ಕೆ.ಸಿ. ರೆಡ್ಡಿ ಅವರ ಈ ಮಾತುಗಳಲ್ಲಿ ಗ್ರಹಿಸಬಹುದು.

4. ಮೈಸೂರು ಕಾಂಗ್ರೆಸ್ ಅಧಿವೇಶನಗಳು ಮತ್ತು ಕೆ.ಸಿ. ರೆಡ್ಡಿ

ಮೊದಲನೆಯ ಮೈಸೂರು ಕಾಂಗ್ರೆಸ್ ಅಧಿವೇಶನ : ಶಿವಪುರ–1938

ಮೈಸೂರು ಕಾಂಗ್ರೆಸ್‌ನ ವತಿಯಿಂದ 1938 ರಿಂದ 1947ರವರೆಗೆ ಆರು ಅಧಿವೇಶನಗಳನ್ನು ಸಂಸ್ಥಾನದಾದ್ಯಂತ ನಡೆಸಲಾಯಿತು. ಮೈಸೂರು ಸಂಸ್ಥಾನದಲ್ಲಿ ನಡೆದ ರಾಷ್ಟ್ರೀಯ ಚಳವಳಿಯಲ್ಲಿ ಈ ಅಧಿವೇಶನಗಳು ಮಹತ್ವದ ಪಾತ್ರವಹಿಸಿದ್ದವು. ಮೊಟ್ಟ ಮೊದಲನೆಯ ಅಧಿವೇಶನವು ಈಗಿನ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆಯಿತು. ಈ ಅಧಿವೇಶನವು 'ಶಿವಪುರ ಧ್ವಜ ಸತ್ಯಾಗ್ರಹ' ಎಂದೇ ಪ್ರಸಿದ್ಧವಾಗಿದೆ.

---

18. ದೇವೇಗೌಡ .ಟಿ.ಡಿ : ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆ ಮತ್ತು ರಾಜಕೀಯ, ಪುಟ–179.
19. ವಿಶ್ವಕರ್ನಾಟಕ ಪತ್ರಿಕೆ : ದಿನಾಂಕ : 09–04–1938, ಪುಟ–162.

ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ 'ಮೈಸೂರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ'ಯು ಶಿವಪುರ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಟಿ. ಸಿದ್ಧಲಿಂಗಯ್ಯನವರನ್ನು ಒರಿಸ್ಸಾದ ಡೆಲಾಂಗ್‌ಗೆ ಹೋಗಿ ಗಾಂಧೀಜಿ ಅವರಿಂದ ಶಿವಪುರ ಅಧಿವೇಶನಕ್ಕೆ ಒಂದು ಸಂದೇಶವನ್ನು ತರಬೇಕೆಂದು ಹಾಗೂ ಮಹಾತ್ಮಗಾಂಧೀಜಿ ಅವರಿಗೆ ಮೈಸೂರು ಸಂಸ್ಥಾನದ ರಾಜಕೀಯ ವಿದ್ಯಮಾನಗಳನ್ನು ತಿಳಿಸಬೇಕೆಂದು ತೀರ್ಮಾನಿಸಿತು. ಅದರಂತೆ ಟಿ. ಸಿದ್ಧಲಿಂಗಯ್ಯನವರು ಡೆಲಾಂಗ್‌ನಲ್ಲಿ 1938ರ ಮಾರ್ಚ್ 22 ರಂದು ಗಾಂಧೀಜಿ ಅವರನ್ನು ಭೇಟಿ ಮಾಡಿದರು. ಅದೇ ಸಂದರ್ಭದಲ್ಲಿ ಸರ್ದಾರ್ ಪಟೇಲ್, ಆಚಾರ್ಯ ಕೃಪಲಾನಿ, ಬಾಬುರಾಜೇಂದ್ರಪ್ರಸಾದ್, ಮಹದೇವದೇಸಾಯಿ ಮುಂತಾದವರನ್ನು ಸಹ ಭೇಟಿ ಮಾಡಿ ಮಾತುಕತೆ ನಡೆಸಿದರು.

ಈ ಸಂದರ್ಭದಲ್ಲಿ ಗಾಂಧೀಜಿ ಅವರು ಶಿವಪುರ ಅಧಿವೇಶನಕ್ಕೆಂದು ಒಂದು ಸಂದೇಶವನ್ನು ನೀಡಿದರು. 'ಮೈಸೂರಿನಲ್ಲಿ ನಿಮ್ಮ ಸಹಕಾರವು ಅವಶ್ಯಕವೆಂದು, ಅತಿಮೌಲ್ಯವೆಂದು ಸರ್ಕಾರವು ಕೂಡ ಭಾವಿಸುವಂತ್ತಾಗಬೇಕು. ಸರ್ಕಾರವು ನಿಮ್ಮ ಸಹಾಯ ಸಹಕಾರಗಳಿಲ್ಲದೆ ಏಕಾ–ಏಕಿಯಾಗಿ ಏನನ್ನೂ ಮಾಡಲು ಸಾಧ್ಯವಿಲ್ಲವೆಂಬುದನ್ನು ನಿಮ್ಮ ಕಾರ್ಯದಿಂದ ನೀವು ತೋರಿಸಬೇಕು' ಎಂಬ ಸಂದೇಶವನ್ನು ನೀಡಿದರು.

ಶಿವಪುರ ಧ್ವಜ ಸತ್ಯಾಗ್ರಹ

1938ರ ಏಪ್ರಿಲ್ 11, 12 ಮತ್ತು 13ರಂದು ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನ ಮೊದಲ ಅಧಿವೇಶನವು ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಎಸ್. ಚನ್ನಯ್ಯ ಹಾಗೂ ಕಾರ್ಯದರ್ಶಿಯಾಗಿ ಎಚ್.ಕೆ. ವೀರಣ್ಣಗೌಡರು ಕಾರ್ಯನಿರ್ವಹಿಸಿದರು. ದಿವಾನ್ ಮಿರ್ಜಾಇಸ್ಮಾಯಿಲ್ ಅವರು ಈ ಅಧಿವೇಶನವನ್ನು ವಿಫಲಗೊಳಿಸಲು ಇನ್ಸ್‌ಪೆಕ್ಟರ್ ಜನರಲ್ ಹ್ಯಾಮಿಲ್ಟನ್ ಅವರನ್ನು ನಿಯೋಜಿಸಿದ್ದರು. ಮಂಡ್ಯ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಮೇಕ್ರಿಯವರು ಶಿವಪುರದ ಸುತ್ತಮುತ್ತಲಿನ ಐದು ಮೈಲಿ ವಿಸ್ತೀರ್ಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಏಪ್ರಿಲ್ 10 ರಿಂದ ಒಂದು ತಿಂಗಳ ಕಾಲ ಆ ಪ್ರದೇಶದಲ್ಲಿ ಯಾರು ಧ್ವಜಾರೋಹಣ ಮಾಡಬಾರದೆಂದು ಆದೇಶಿಸಿದರು. ಕಾಂಗ್ರೆಸ್‌ನ 25 ಜನ ಪ್ರಮುಖ ನಾಯಕರ ಮೇಲೆ ನಿರ್ಬಂಧವನ್ನು ಹೇರಿದರು. 600 ಮಂದಿ ಸಶಸ್ತ್ರ ಪೊಲೀಸ್‌ಪಡೆಯನ್ನು ಶಿವಪುರದಲ್ಲಿ ನಿಯೋಜಿಸಲಾಗಿತ್ತು.

ಏಪ್ರಿಲ್ 10 ರಂದು ಸಂಜೆ ಅಧಿವೇಶನದ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯ ಅವರನ್ನು ಎಂಟು ಜೊತೆ ಎತ್ತುಗಳನ್ನು ಹೂಡಿ ಅಲಂಕರಿಸಲಾಗಿದ್ದ ಗಾಡಿಯಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಏಪ್ರಿಲ್ 11ರಂದು ಬೆಳಗ್ಗೆ ಧ್ವಜಾರೋಪಣ ಮಾಡುವ ಸಂದರ್ಭದಲ್ಲಿ ಟಿ. ಸಿದ್ಧಲಿಂಗಯ್ಯನವರನ್ನು ಪೊಲೀಸರು ಬಂಧಿಸಿದರು. ನಂತರ ಎಂ.ಎಸ್. ಜೋಯಿಸರು ಕೂಡ ಧ್ವಜಾರೋಹಣ ಮಾಡಿ ಬಂಧಿಸಲ್ಪಟ್ಟರು. ತದನಂತರ ಅಧಿವೇಶನದ ಎರಡನೆಯ ಅಧ್ಯಕ್ಷರಾಗಿ ಆಯ್ಕೆಯಾದ ಹೆಚ್.ಸಿ. ದಾಸಪ್ಪನವರು ಏಪ್ರಿಲ್ 12ರಂದು ಬಂಧಿಸಲ್ಪಟ್ಟರು. ಅವರ ಸ್ಥಾನಕ್ಕೆ ಆಯ್ಕೆಯಾದ ವಿ. ವೆಂಕಟಪ್ಪನವರು ಸಹ ಬಂಧಿತರಾದರು. ತಮ್ಮ ಬಂಧನಕ್ಕೆ ಮೊದಲು ವಿ. ವೆಂಕಟಪ್ಪನವರು ತಮ್ಮ ಸ್ಥಾನಕ್ಕೆ ಕೆ.ಸಿ. ರೆಡ್ಡಿಯವರನ್ನು ನೇಮಿಸಿದರು.

ಆ ನಂತರ ಕೆ.ಸಿ. ರೆಡ್ಡಿಯವರು ವೇದಿಕೆಗೆ ಆಗಮಿಸಿ ತಾವು ಧ್ವಜಾರೋಹಣ ಮಾಡುವುದಾಗಿ ಘೋಷಿಸಿ ಧ್ವಜಾರೋಹಣವನ್ನು ಮಾಡಿದರು. ಧ್ವಜದಲ್ಲಿ ಕಟ್ಟಲಾಗಿದ್ದ ಬಣ್ಣ ಬಣ್ಣದ ಹೂಗಳು ಚೆಲ್ಲಿ ತ್ರಿವರ್ಣಧ್ವಜವು ಹಾರಾಡಿದ ತಕ್ಷಣ ಜನಸ್ತೋಮವು ಹರ್ಷದಿಂದ ಕರತಾಡನ ಮಾಡಿದರು. ಜಯಘೋಷಗಳು ಮೊಳಗಿದವು. ಟಿ. ಸುನಂದಮ್ಮ ಅವರು ವಂದೇ ಮಾತರಂ ಗೀತೆ ಹಾ[illegible]ರು. 'ಆಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದ್ದಕ್ಕಾಗಿ ಕೆ.ಸಿ.ರೆಡ್ಡಿ ಅವರನ್ನು ದಸ್ತಗಿರಿ ಮಾಡಿದ್ದೇವೆ' ಎಂದು ಪೊಲೀಸ್ ಅಧಿಕಾರಿಗಳು ಹೇಳಿದಾಗ ಕೆ.ಸಿ. ರೆಡ್ಡಿ ಅವರು ಆಗಬಹುದು ಎಂದು ಹೇಳಿ ತಮ್ಮ ಸ್ಥಾನಕ್ಕೆ ಕೆ.ಟಿ.ಭಾಷ್ಯಂ ಅವರನ್ನು ನೇಮಿಸಿ ತಾವು ಪೊಲೀಸರ ವಶವಾದರು. ಕೆ.ಸಿ. ರೆಡ್ಡಿ ಅವರಿಗೆ ಮೂರು ತಿಂಗಳು ಸಾದಾ ಸಜೆ ಹಾಗೂ 200 ರೂ.ಗಳ ದಂಡವನ್ನು ವಿಧಿಸಲಾಯಿತು. ದಂಡ ಕೊಡಲು ತಪ್ಪಿದರೆ 20 ದಿನಗಳ ಹೆಚ್ಚಿನ ಶಿಕ್ಷೆಯನ್ನು ಅನುಭವಿಸುವಂತೆ ಆದೇಶಿಸಲಾಯಿತು.

ಜೈಲಿಗೆ ತೆರಳಿದ್ದ ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ ಹಾಗೂ ವಿ. ವೆಂಕಟಪ್ಪ ಅವರು ಕಳುಹಿಸಿಕೊಟ್ಟಿದ್ದ ಹೇಳಿಕೆಯನ್ನು ಕೆ.ಟಿ. ಭಾಷ್ಯಂ ಅವರು ಬಹಿರಂಗ ಸಭೆಯಲ್ಲಿ ಓದಿದರು. "ಇಂದು ಬೆಳಗ್ಗೆ ಧ್ವಜಾರೋಹಣ ಸಂದರ್ಭದಲ್ಲಿ ಸಾಕ್ಷಿಯಾಗಿದ್ದ ಸಾವಿರಾರು ಜನರು ತೋರಿಸಿದ ಶಿಸ್ತು, ಸಂಯಮಗಳಿಗೆ ನಾವು ಕೃತಜ್ಞರಾಗಿದ್ದೇವೆ. ಕಾಂಗ್ರೆಸ್ ಗೌರವಿಸುತ್ತಿರುವ ರಾಷ್ಟ್ರಧ್ವಜವು ಮೈಸೂರಿನದು ಮಾತ್ರವಲ್ಲ ಅದು ಭಾರತದ ಧ್ವಜವೂ ಆಗಿದೆ. ಎಷ್ಟೇ ಕಷ್ಟ ಬಂದರೂ ಸಹಿಸಿಕೊಂಡು ಜನರು ರಾಷ್ಟ್ರಧ್ವಜದ ಗೌರವವನ್ನು ಕಾಪಾಡಬೇಕು. ಉತ್ಸಾಹ ಶಿಸ್ತುಗಳಿಂದ ಅಹಿಂಸಾತ್ಮಕವಾಗಿ ನಮ್ಮ ಜನರು ಹೋರಾಟವನ್ನು ಮುಂದುವರೆಸಬೇಕೆಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ಅಂತಿಮ ಜಯ ನಮ್ಮದೇ ಶುಭಾಶಯಗಳು"[20]

---

20. MYSORE CONGRESS CONVENTION : Shivapura, 1938.

ನಂತರ ಏಪ್ರಿಲ್ 13ರಂದು ಕೆ.ಟಿ. ಭಾಷ್ಯಂ, ಎಚ್. ಸಿದ್ಧಯ್ಯ ಮತ್ತು ಬಳ್ಳಾರಿ ಸಿದ್ಧಮ್ಮ ಶಿವಪುರದಲ್ಲಿ ಬಂಧಿಸಲ್ಪಟ್ಟರು. ಬಳ್ಳಾರಿ ಸಿದ್ದಮ್ಮನವರು ತಮ್ಮ ಬಂಧನಕ್ಕೆ ಮೊದಲು ಹೆಚ್.ಬಿ. ಗುಂಡಪ್ಪ ಗೌಡರನ್ನು ತಮ್ಮ ಸ್ಥಾನಕ್ಕೆ ನೇಮಿಸಿದರು. ಹೀಗೆಯೇ ಶಿವಪುರ ಧ್ವಜ ಸತ್ಯಾಗ್ರಹವು ಒಂದು ತಿಂಗಳ ಕಾಲ ನಡೆಯಿತು.

ಶಿವಪುರ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳ ಎಪ್ಪತ್ತು ತಾಲ್ಲೂಕುಗಳಿಂದ ಅಲ್ಲದೆ ಇನ್ನಿತರ ಸಂಸ್ಥಾನಗಳಿಂದಲೂ ಹಾಗೂ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳಿಂದಲೂ ಸುಮಾರು ಮೂವತ್ತು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಪ್ರತಿನಿಧಿಗಳು ಆಗಮಿಸಿದ್ದರು. ಇದು ಸಂಸ್ಥಾನವು ಕಂಡ ಅತ್ಯಂತ ಬೃಹತ್ ರಾಜಕೀಯ ಸಮಾವೇಶವಾಗಿತ್ತು. ಅಲ್ಲದೇ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನಗಳಷ್ಟೇ ಮಹತ್ವಪೂರ್ಣ ಅಧಿವೇಶನವೆನಿಸಿತ್ತು.

ಮಹತ್ವದ ಮತ್ತೊಂದು ಅಂಶವೆಂದರೆ ಮೈಸೂರು ಸಂಸ್ಥಾನದಲ್ಲಿ 16–17 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ ಕಾಂಗ್ರೆಸ್ ಸಂಸ್ಥೆಯು ಈ ಹಿಂದೆ ಮಾಡಿರದಂತಹ ಕೆಲಸವನ್ನು ಪ್ರಜಾ ಸಂಯುಕ್ತ ಪಕ್ಷದ ನಾಯಕರು ಕಾಂಗ್ರೆಸ್‌ನೊಡನೆ ವಿಲೀನಗೊಂಡ ಕೇವಲ ಆರು–ಏಳು ತಿಂಗಳಲ್ಲಿ ಬೃಹತ್ ಪ್ರಮಾಣದಲ್ಲಿ ಸದಸ್ಯರನ್ನು ಸಮಾವೇಶಗೊಳಿಸಿ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಿ ರಾಷ್ಟ್ರನಾಯಕರಿಂದಲೂ ಮೆಚ್ಚುಗೆ ಪಡೆಯಿತೆಂದರೆ ಅದಕ್ಕೆ ಕಾರಣ ಕೆ.ಸಿ.ರೆಡ್ಡಿ ಅವರ ಧೀಮಂತ ನಾಯಕತ್ವ, ರಾಷ್ಟ್ರಪ್ರೇಮವೆಂದು ಹೇಳಬಹುದು.

ಶಿವಪುರ ಅಧಿವೇಶನದ ಯಶಸ್ಸಿನ ಪೂರ್ಣ ಗೌರವವು ಕೆ.ಸಿ. ರೆಡ್ಡಿ ಅವರಿಗೆ ಸಲ್ಲಬೇಕು, ಇದಕ್ಕೆ ಪೂರಕವಾಗಿ 1938ರ ಅಕ್ಟೋಬರ್ 10 ರಂದು ಖ್ಯಾತ ವಕೀಲರಾದ ಎಲ್.ಎಸ್. ರಾಜು ಅವರು ಕೆ.ಸಿ. ರೆಡ್ಡಿ ಅವರ ಬಗ್ಗೆ ಹೇಳಿರುವ ಮಾತುಗಳನ್ನು ಗಮನಿಸಬಹುದು "ಕೆ.ಸಿ. ರೆಡ್ಡಿ ಅವರು ಕಾಂಗ್ರೆಸ್‌ಗೆ ಅದ್ಭುತವಾದ ಸೇವೆ ಮಾಡಿದ್ದಾರೆ. ಅವರು ಮಾಡಿರುವ ಇನ್ನೊಂದು ದೊಡ್ಡ ಸೇವೆಗಾಗಿ ಮೈಸೂರು ರಾಜಕೀಯ ಇತಿಹಾಸದಲ್ಲಿ ಅವರ ಹೆಸರು ಬಹುಕಾಲ ಸ್ಮರಣೆಯಲ್ಲಿರುವುದು ಖಂಡಿತ. ಮೈಸೂರು ಸಂಸ್ಥಾನದ ಪ್ರಜಾ ಸಂಯುಕ್ತ ಪಕ್ಷವನ್ನು ಮೈಸೂರು ಸ್ಟೇಟ್ ಕಾಂಗ್ರೆಸ್‌ನೊಡನೆ ಸಂಗಮ ಮಾಡಿಸಿದವರೇ ಅವರು. ಈ ಸಂಗಮವು ಮೈಸೂರು ಸಂಸ್ಥಾನದಲ್ಲಿ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಸ್ಥಾಪನೆಯಾಗಬೇಕಾದ ಜವಾಬ್ದಾರಿ ಸರ್ಕಾರದ ಚಳವಳಿಗೆ ಒಂದು ನೂತನ ರೂಪವನ್ನೂ, ಹುರುಪನ್ನು ಕೊಟ್ಟಿತ್ತು" ಎಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.[21]

---

21. ಮಾನಪತ್ರ : ಗೌರಿಬಿದನೂರು ತಾಲ್ಲೂಕು ಸಾರ್ವಜನಿಕರ ಮಾನಪತ್ರಕ್ಕೆ ಎಲ್.ಎಸ್. ರಾಜುರವರ ಉತ್ತರ : ದಿನಾಂಕ : 10–10–1938.

ಎಲ್.ಎಸ್. ರಾಜು ಅವರ ಅಭಿಪ್ರಾಯ ಸಂಪೂರ್ಣವಾಗಿ ಕೆ.ಸಿ. ರೆಡ್ಡಿ ಅವರ ನಾಯಕತ್ವದ ಪರಿಣಾಮವಾಗಿ ನಡೆದ ಈ ರಾಜಕೀಯ ಐಕ್ಯತೆಯು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದ ದಿಕ್ಕನ್ನು ಸಂಪೂರ್ಣವಾಗಿ ಬದಲಿಸಲು ಕಾರಣವಾಯಿತು.

ವಿದುರಾಶ್ವತ್ಥ ದುರಂತ

ಮೈಸೂರು ಕಾಂಗ್ರೆಸ್‌ನ ವತಿಯಿಂದ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದ ಯಶಸ್ಸಿನಿಂದ ಸ್ಫೂರ್ತಿ ಪಡೆದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್‌ನ ಸದಸ್ಯರು ಪುರಾಣ ಪ್ರಸಿದ್ಧ ವಿದುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹ ಮಾಡಲು ಕ್ರಮ ಕೈಗೊಂಡರು. ಅದರಂತೆ ಕಲ್ಲೂರು ಸುಬ್ಬರಾಯರು, ನಾಗಯ್ಯರೆಡ್ಡಿ, ಜ್ವಾಲನಯ್ಯ ಇತರರು ಧ್ವಜ ಸತ್ಯಾಗ್ರಹ ಮಾಡಿ ದಸ್ತಗಿರಿಯಾದರು.

ದಿನಾಂಕ : 25–04–1938ರಲ್ಲಿ ಟಿ. ರಾಮಾಚಾರ್ ಅವರ ನೇತೃತ್ವದಲ್ಲಿ ಸುಮಾರು ಇಪ್ಪತ್ತು ಸಾವಿರ ಮಂದಿ ವಿದುರಾಶ್ವತ್ಥದಲ್ಲಿ ಸೇರಿದ್ದರು. ಟಿ. ರಾಮಾಚಾರ್ ಅವರು ರಾಷ್ಟ್ರ ಧ್ವಜಾರೋಹಣ ಮಾಡಿದ ನಂತರ ಪೋಲೀಸ್ ಅಧಿಕಾರಿಗಳು ಈ ದಿನಕ್ಕೆ ಇಷ್ಟೇ ಸಾಕು, ಇನ್ನು ಕಾನೂನು ಉಲ್ಲಂಘನೆಯನ್ನು ಮುಂದುವರೆಸಬೇಡಿ, ನೀವು ಇಲ್ಲಿಂದ ಹೊರಟು ಹೋದರೆ ಜನರು ತಾವಾಗಿಯೇ ಹೊರಟು ಹೋಗುತ್ತಾರೆ ಎಂದು ಹೇಳಿದ್ದರಿಂದ ಟಿ. ರಾಮಾಚಾರ್ ಅವರು ಸತ್ಯಾಗ್ರಹಿಗಳೊಡನೆ ತೋಪಿನ ಕಡೆಗೆ ಹೊರಟು ಹೋದರು.

ಅಷ್ಟರಲ್ಲಿಯೇ ಅಮಲ್ದಾರ್ ರಾಜಶೇಖರ್ ಒಡೆಯರ್ ಅವರು ಇದು ಅಕ್ರಮಕೂಟ ನೀವು ಇಲ್ಲಿದ ಐದು ನಿಮಿಷಗಳೊಳಗಾಗಿ ಚದುರಬೇಕು ಎಂದಾಗ ಜನರು ಸ್ವಾಮಿ ಬಿಸಿಲು ಹೆಚ್ಚಾಗಿದೆ ಬಿಸಿಲು ಇಳಿದ ನಂತರ ಹೊರಟು ಹೋಗುತ್ತೇವೆ ಎಂದರೂ ಕೇಳದೆ ಅಮಲ್ದಾರರು ಲಾಠಿಪ್ರಹಾರ ಮಾಡಿಸಿದ್ದರಿಂದ ಗಲಭೆ ಪ್ರಾರಂಭವಾಯಿತು. ನಂತರ ಪೊಲೀಸರು ಗೋಲಿಬಾರ್ ಮಾಡಿದರು.

B.B.C.ಪ್ರಕಾರ ಈ ಗೋಲಿಬಾರ್‌ನಿಂದ ಸತ್ತವರು 32 ಮಂದಿ, ಗಾಯಗೊಂಡರು 48 ಮಂದಿ. ಜಗತ್ತಿನ ಎಲ್ಲಾ ಮುಖ್ಯ ಪತ್ರಿಕೆಗಳು ಈ ವಾರ್ತೆಯನ್ನು ಪ್ರಕಟಿಸಿದವು. ಈ ದುರಂತದ ಸುದ್ದಿ ಹರಡುತ್ತಿದ್ದಂತೆ ದೊಡ್ಡ ಆಂದೋಲನವೇ ಆಯಿತು.

ವಿದುರಾಶ್ವತ್ಥ ದುರಂತಕ್ಕೆ ಸಂಬಂಧಿಸಿದಂತೆ ಮಹಾತ್ಮ ಗಾಂಧೀಜಿ ಅವರು ಮೈಸೂರು ಸರ್ಕಾರಕ್ಕೆ ಬರೆದ ಪತ್ರದಲ್ಲಿ "ಮೈಸೂರು ಸರ್ಕಾರಕ್ಕೆ ಈಗಿನ ನಿರಂಕುಶಾಧಿಕಾರವನ್ನು ಹಿಂದೆಗೆದು ಆಡಳಿತದ ಜವಾಬ್ದಾರಿಯನ್ನೂ ಜನತಾ ಪ್ರತಿನಿಧಿಗಳಿಗೆ

ಒಪ್ಪಿಸುವುದೇ ಉತ್ಕೃಷ್ಟ ಹಾಗೂ ಏಕಮಾತ್ರ ಪರಿಹಾರವೆಂದೂ, ಮಹಾರಾಜರಿಗೂ, ಅವರ ಸಲಹೆಗಾರ ಮಿರ್ಜಾ ಇಸ್ಮಾಯಿಲ್ ಅವರಿಗೂ ಈ ಪ್ರಸಂಗದಲ್ಲಿ ನನ್ನ ಸೂಚನೆ, ಸಂಸ್ಥಾನಗಳ ಜನರು ಸ್ವಾತಂತ್ರ್ಯದ ಹೊಸ ಕನಸನ್ನು ಕಾಣತೊಡಗಿದ್ದಾರೆ. ಯಾವುದು ಅವರಿಗೆ ದೂರದ ಗುರಿ ಎಂದು ಕಾಣುತಿತ್ತೋ, ಅದು ಈಗ ಅವರಿಗೆ ವಿಳಂಬವಿಲ್ಲದೆ ಸಾಧಿತವಾಗುವ ಸಂಗತಿ ಎನಿಸುತ್ತಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[22]

ಮೈಸೂರು ಕಾಂಗ್ರೆಸ್ ಪಕ್ಷವು ವಿದುರಾಶ್ವತ್ಥ ದುರಂತದ ವಿಚಾರಣೆಗಾಗಿ ಎಂ. ಲಕ್ಷ್ಮೀನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು. ಆದರೆ ಸರ್ಕಾರದ ವತಿಯಿಂದ ಸಮಿತಿ ನೇಮಕಗೊಂಡಿದ್ದರಿಂದ ಕಾಂಗ್ರೆಸ್ ವಾಪಸ್ಸು ಪಡೆಯಿತು. ಸರ್ಕಾರವು ದಿನಾಂಕ: 06–05–1938ರಲ್ಲಿ ವೇಪಾ ರಮೇಶಂ ಅವರ ಅಧ್ಯಕ್ಷತೆಯಲ್ಲಿ, ನಾಗೇಶ್ವರ್‌ಅಯ್ಯರ್ ಮತ್ತು ಡಾ. ಡಿಸೋಜಾ ಒಳಗೊಂಡ ಸಮಿತಿಯೊಂದನ್ನು ನೇಮಿಸಿತು.

ವಿದುರಾಶ್ವತ್ಥ ದುರಂತವು ಮೈಸೂರು ಸಂಸ್ಥಾನದಲ್ಲಿ ಅಷ್ಟೇ ಅಲ್ಲದೆ ಭಾರತದ ಉದ್ದಗಲ ಮತ್ತು ವಿದೇಶಗಳಲ್ಲೂ ಹರಡಿದುದಲ್ಲದೆ, ಸಂಸ್ಥಾನದಾದ್ಯಂತ ಸ್ವಾತಂತ್ರ್ಯದ ಕಿಚ್ಚು ಹಚ್ಚಿತು. ಹೀಗೆ ಸಂಸ್ಥಾನದಲ್ಲಿ ರಾಜಕೀಯ ಅಶಾಂತಿ ಉದ್ಭವಿಸಿತ್ತು. ಇದನ್ನು ಪರಿಹರಿಸಲು ಗಾಂಧೀಜಿ ಅವರ ಸಲಹೆಯಂತೆ ಸರ್ದಾರ ಪಟೇಲ್ ಮತ್ತು ಕೃಪಲಾನಿ ನೇತೃತ್ವದಲ್ಲಿ ನಡೆದ ಒಪ್ಪಂದದಂತೆ ಮೈಸೂರು ಸರ್ಕಾರ ಮೈಸೂರು ಕಾಂಗ್ರೆಸ್ ಅನ್ನು ರಾಜಕೀಯಪಕ್ಷ ಎಂದೂ ಹಾಗೂ ರಾಜಕೀಯ ಸುಧಾರಣಾ ಸಮಿತಿಗೆ ಹೊಸದಾಗಿ ಕೆ.ಟಿ. ಭಾಷ್ಯಂ, ಹೆಚ್.ಸಿ. ದಾಸಪ್ಪ ಮತ್ತು ಆರ್. ಚೆನ್ನಿಗರಾಮಯ್ಯ ಅವರನ್ನು ಸೇರ್ಪಡೆ ಮಾಡಿಕೊಂಡಿತು. ಇದರಿಂದ ಕಾಂಗ್ರೆಸ್ ಸಂಖ್ಯೆ ಸಮಿತಿಯಲ್ಲಿ ಏಳು ಆಯಿತು. ಹೀಗೆ ಸರ್ಕಾರ ಮತ್ತು ಕಾಂಗ್ರೆಸ್ ನಡುವೆ ತಾತ್ಕಾಲಿಕ ಶಾಂತಿ ಸ್ಥಾಪಿತವಾಯಿತು.

ಆದರೆ 1938ರ ನವೆಂಬರ್‌ನಲ್ಲಿ ಪ್ರಕಟವಾದ ವಿದುರಾಶ್ವತ್ಥ ದುರಂತದ ಬಗೆಗಿನ ವೇಪಾ ರಮೇಶಂ ವರದಿ ಮೈಸೂರು ಕಾಂಗ್ರೆಸ್ ನಾಯಕರ ಕೋಪಕ್ಕೆ ಕಾರಣವಾಯಿತು. ಏಕೆಂದರೆ ಶಿವಪುರ ಧ್ವಜ ಸತ್ಯಾಗ್ರಹ ಸಂದರ್ಭದಲ್ಲಿ ದಸ್ತಗಿರಿಯಾಗಿ ಸೆರೆಮನೆಯಲ್ಲಿದ್ದಾಗ, ನಡೆದ ವಿದುರಾಶ್ವತ್ಥ ದುರಂತಕ್ಕೆ ಪ್ರಮುಖವಾಗಿ ಕೆ.ಸಿ. ರೆಡ್ಡಿ ಹಾಗೂ ಇತರ ನಾಯಕರೇ ಕಾರಣವೆಂದೂ ಗಂಭೀರ ಆರೋಪ ಮಾಡಿದ್ದು ಹಾಗೂ ದುರಂತದಲ್ಲಿ ಕೇವಲ ಹತ್ತು ಜನರು ಗುಂಡಿಗೆ ಬಲಿಯಾಗಿ ಎಂಟು ಮಂದಿ ಗಾಯಗೊಂಡರೆಂದೂ ತಿಳಿಸಿ, ಗೋಲಿಬಾರ್ ನಡೆಸಿದ್ದನ್ನು ಸಮರ್ಥಿಸಿಕೊಂಡಿತು.

22. THE MYSORE CONGRESS : Date : 24-01-1938 to 29-12-1938.

ಕೆ.ಸಿ. ರೆಡ್ಡಿ ಅವರು ವೇಪಾ ರಮೇಶಂ ವಿಚಾರಣಾ ಸಮಿತಿಯು ಕಾರ್ಯಾರಂಭ ಮಾಡಿದ ಹೊಸದರಲ್ಲೇ "ವೇಪಾ ರಮೇಶಂ ಅವರು ಸರ್ಕಾರವನ್ನು ಈ ದೂರಿನಿಂದ ಪಾರು ಮಾಡುವ ಭರವಸೆಯನ್ನು ವಿಚಾರಣೆ ಪ್ರಾರಂಭದಲ್ಲಿಯೇ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಿಗೆ ನೀಡಿದ್ದಾರೆ" ಎಂದು ಆಪಾದಿಸಿದ್ದರು.[23] ಅದು ಈ ವರದಿಯೊಂದಿಗೆ ನಿಜವಾಯಿತು.

ವೇಪಾ ರಮೇಶಂ ವರದಿ ಮತ್ತು ಮೈಸೂರು ಕಾಂಗ್ರೆಸ್

ವೇಪಾ ರಮೇಶಂ ಅವರ ವರದಿಯಲ್ಲಿ ಕೆ.ಸಿ. ರೆಡ್ಡಿ ಅವರು ಈಗಿನ ನೂತನ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ, ಗೌರಿಬಿದನೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಯ ಮಾಲೂರು ಮತ್ತು ಕೋಲಾರ ನಗರಗಳಲ್ಲಿ ದಿನಾಂಕ 03–11–1937 ರಿಂದ 03–04–1938ರ ವರೆಗೆ ಸರ್ಕಾರದ ವಿರುದ್ಧ ಮಾಡಿರುವ ಪ್ರಚೋದನಕಾರಿ ಭಾಷಣಗಳಿಂದ ಪ್ರೇರಿತಗೊಂಡ ಈ ಜಿಲ್ಲೆಗಳ ಜನತೆಯು ಈ ದುರಂತ ನಡೆಸಲು ಕಾರಣವಾಯಿತು ಎಂದು ಆಪಾದಿಸಲಾಗಿದೆ. ಕೆ.ಸಿ. ರೆಡ್ಡಿ ಅವರು ಜಿಲ್ಲೆಗಳಾದ್ಯಂತ ಹಲವಾರು ಸಭೆಗಳಲ್ಲಿ ಮಾಡಿದ ಭಾಷಣಗಳನ್ನು ಯಥಾವತ್ತಾಗಿ ಉಲ್ಲೇಖಿಸಿರುವುದನ್ನು ಗಮನಿಸಿದರೆ ಕೆ.ಸಿ. ರೆಡ್ಡಿ ಅವರ ಸಭೆಗಳಿಗೆ ಸರ್ಕಾರದ ಗುಪ್ತಚಾರ ವಿಭಾಗದ ಪೊಲೀಸರು ಮಾಹಿತಿ ಸಂಗ್ರಹಿಸಲು ಹೋಗುತ್ತಿದ್ದರೆಂಬುದು ಖಚಿತವಾಗುತ್ತದೆ. ಸರ್ಕಾರಕ್ಕೆ ರೆಡ್ಡಿ ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ಅಷ್ಟೊಂದು ಭಯವಿದ್ದುದು ಈ ವರದಿಯಿಂದ ತಿಳಿದು ಬರುತ್ತದೆ.

ವೇಪಾ ರಮೇಶಂ ವರದಿಯಲ್ಲಿ ದಾಖಲಾಗಿರುವಂತೆ ಕೆ.ಸಿ. ರೆಡ್ಡಿ ಅವರು ದಿನಾಂಕ: 03–11–1937ರಲ್ಲಿ ಚಿಂತಾಮಣಿಯಲ್ಲಿ ಮಾಡಿದ ಭಾಷಣದ ಸಾರಾಂಶ :– "ಸ್ವರಾಜ್ಯವನ್ನು ಪಡೆಯುವುದಕ್ಕಾಗಿ ಪ್ರಜೆಗಳು ತಮ್ಮ ಕುಂದು ಕೊರತೆಗಳನ್ನು ಮುಂದಿಡುವುದು ಸರ್ಕಾರದವರಿಗೆ ಇಷ್ಟವಿಲ್ಲ. ಲಾಠಿ ಪ್ರಹಾರಗಳಾಗಿವೆ, ದಬ್ಬಾಳಿಕೆ ಹುಕುಮುಗಳಾಗಿವೆ, ಕಂದಾಯವನ್ನು ಕಡಮೆ ಮಾಡಿಲ್ಲ. ಹೆಂಡದ ಅಂಗಡಿಗಳನ್ನು ಮುಚ್ಚಿಲ್ಲ, ಸಂಬಳಗಳನ್ನು ಕಡಮೆ ಮಾಡಿಲ್ಲ, ಸರ್ಕಾರದವರು ಈ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಿಲ್ಲ. ರೈತರ ಹಣವು ನಗರ ಶೃಂಗಾರಕ್ಕೂ, ಸರ್ಕಲ್‌ಗಳಿಗೂ, ಉದ್ಯಾನಗಳಿಗೂ ಮತ್ತು ಕಟ್ಟಡಗಳಿಗೂ ವೆಚ್ಚವಾಗುತ್ತಿದೆ. ಗ್ರಾಮಗಳ ವಿಷಯದಲ್ಲಿ ಅಲಕ್ಷ್ಯ, ಬಾವಿಗಳಿಲ್ಲ, ಸ್ಕೂಲುಗಳಿಲ್ಲ ಮತ್ತು ಆಸ್ಪತ್ರೆಗಳಿಲ್ಲ. ನಮ್ಮ ಕೊರತೆಗಳನ್ನು ಹೇಳುವುದು ರಾಜದ್ರೋಹ, ಮುಂದಾಳುಗಳು ಜೈಲಿಗೆ ಹೋದರು. ಕಾಂಗ್ರೆಸ್ಸಿಗೆ ಸೇರಬೇಡಿರೆಂದು ಸರ್ಕಾರದವರು

---

23. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–30.

ಜನರಿಗೆ ಹೇಳುತ್ತಾರೆ. ಜನರು ಹಿಂಸೆಯ ಕೃತ್ಯಗಳನ್ನು ಮಾಡಕೂಡದು. ತೆರಿಗೆಗಳು ಹೊರಲಾರದ ಹೊರೆಯಾಗಿವೆ. ತೆರಿಗೆಗಳ ದೆಸೆಯಿಂದ ರೈತರು ಬಡವರಾಗಿದ್ದಾರೆ ಮತ್ತು ಅರೆಹೊಟ್ಟೆ ತಿನ್ನುತ್ತಿದ್ದಾರೆ. ಸಂಬಳ ಗಳು ಕಡಿಮೆಯಾಗಬೇಕು, ಜವಾಬ್ದಾರಿ ಸರ್ಕಾರವನ್ನು ಕೊಡಬೇಕು".

ದಿನಾಂಕ : 24-11-1937 ರಲ್ಲಿ ಗೌರಿಬಿದನೂರಿನಲ್ಲಿ ಕೆ.ಸಿ. ರೆಡ್ಡಿ ಅವರು ಮಾಡಿದ ಭಾಷಣದ ಸಾರಾಂಶ:- "ನಮ್ಮ ಗ್ರಾಮ ನಿವಾಸಿಗಳಲ್ಲಿ ಶೇಕಡ 99% ಮಂದಿ ಅನಕ್ಷರಸ್ಥರು, ಸರ್ಕಾರದವರು ಉದ್ದೇಶ ಪೂರ್ವಕವಾಗಿ ಅವರನ್ನು ಅಜ್ಞಾನಂದಕಾರದಲ್ಲಿ ಉಳಿಸಿದ್ದಾರೆ. ನಾವು ಹೆಚ್ಚಾಗಿ ಮಾತನಾಡಿದರೆ ರಾಜದ್ರೋಹದ ಅಪರಾಧದ ವಿಚಾರಣೆಗೆ ನಮ್ಮನ್ನು ಗುರಿಪಡಿಸುತ್ತಾರೆ. ಮುಂದಾಳುಗಳು ಕಾಂಗ್ರೆಸ್ಸಿಗಾಗಿ ಕೆಲಸ ಮಾಡಿ ಕಂದಾಯವನ್ನು ತಗ್ಗಿಸಿ ರೈತರ ಸಾಲದ ಹೊರೆಯನ್ನು ಕಡಮೆ ಮಾಡಿಸುವುದಕ್ಕಾಗಿ ಪ್ರಯತ್ನಿಸಿದರು. ಅವರನ್ನು ಜೈಲಿಗೆ ಕಳುಹಿಸಿದರು. ಸತ್ಯವೆಲ್ಲಿ? ಧರ್ಮವೆಲ್ಲಿ? ಕಾಂಗ್ರೆಸ್‌ನವರಾದ ನಾವು 25 ಲಕ್ಷ ರೂಪಾಯಿಗಳ ಪೊಗದಿ ಹಣವನ್ನು ಬಹು ಬೇಗ ಮಾಫಿ ಬಿಡಿಸಬಲ್ಲೆವು. ಆ ಹಣವನ್ನು ಸಂಸ್ಥಾನವನ್ನು ಉತ್ತಮ ಸ್ಥಿತಿಗೆ ತರುವುದಕ್ಕಾಗಿ ವೆಚ್ಚ ಮಾಡಲಾಗುವುದು. ಕಂದಾಯವು ಕಡಮೆಯಾಗುವುದು. ರೈತರ ಸಾಲದ ಹೊರೆಯು ಅಡಗಿ ಹೋಗುವಂತೆ ಮಾಡುವೆವು".

ದಿನಾಂಕ : 25-11-1937 ರಂದು ಚಿಕ್ಕಬಳ್ಳಾಪುರದಲ್ಲಿ ಕೆ.ಸಿ. ರೆಡ್ಡಿ ಅವರು ಮಾಡಿದ ಭಾಷಣದ ಸಾರಾಂಶ :- "ತೆರಿಗೆಗಳು ಹೊರಲಾರದ ಹೊರೆಯಾಗಿದೆ. ರೈತರಿಗೆ ಪ್ರತಿಫಲವಾಗಿ ಏನೂ ದೊರೆಯುತ್ತಿಲ್ಲ. ದಿವಾನ್‌ರವರೂ ಮತ್ತು ಇತರ ಅಧಿಕಾರಿಗಳೂ ಇಲ್ಲವೆನ್ನುವುದನ್ನು, ಮದ್ಯವನ್ನು ಕುಡಿಯುವುದೂ, ಹೊಗೆಬತ್ತಿಯನ್ನು ಸೇದುವುದೂ ಅಭ್ಯಾಸವಾಗಿರುವ ಜನರು ಅವುಗಳನ್ನು ಹೇಗೆ ಬಿಡಲಾರರೋ ಅದರಂತೆ ಬಿಡಲಾರರು. ಸರ್ಕಾರದವರು ಕೊಟ್ಟಿರುವ ಕಂದಾಯ ಮಾಫಿಯು ಅಸಮರ್ಪಕವಾಗಿದೆ. ಅದು ದೊರೆತರೂ ಕೂಡ ಕಾಂಗ್ರೆಸ್ಸಿನ ಚಳವಳಿಯ ಫಲಿತಾಂಶ, ಈಗಿರುವ ಬಗೆಯ ಸರ್ಕಾರದ ಶಿಸ್ತನ್ನು ಮಹಾಜನರು ಖಂಡಿಸುತ್ತಾರೆ. ಅದನ್ನು ಬದಲಾಯಿಸಿ ಜವಾಬ್ದಾರಿ ಸರ್ಕಾರವನ್ನೇಕೆ ಏರ್ಪಡಿಸಕೂಡದು? ಗಾಂಧೀಜಿ ಅವರು ಮೈಸೂರು ಸಂಸ್ಥಾನವನ್ನು ಹೊಗಳಿದುದಕ್ಕಾಗಿ ಸರ್ಕಾರದವರು ಹೆಮ್ಮೆಪಡಬಾರದು. ಗಾಂಧೀಜಿಯವರು ಪರಿಸ್ಥಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಿದರೆ ಖಂಡಿತವಾಗಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವರು".

ದಿನಾಂಕ : 25-11-1937ರಂದು ಮಾಲೂರಿನಲ್ಲಿ ಕೆ.ಸಿ. ರೆಡ್ಡಿ ಅವರು ಮಾಡಿದ ಭಾಷಣ ಸಾರಾಂಶ :- "ಜಮೀನು ಕಂದಾಯವು ನೆರೆಹೊರೆಯ ಬ್ರಿಟಿಷ್ ಪ್ರಾಂತ್ಯಗಳ ಲ್ಲಿರುವುದಕ್ಕಿಂತ ಬಹಳ ಹೆಚ್ಚಾಗಿದೆ. ಮದ್ಯಪಾನವನ್ನು ಮಾಡಕೂಡದೆಂದು, ನಿಷೇಧಿಸ

ಬೇಕೆಂದು ನಾವು ಕೇಳುತ್ತೇವೆ. ನಗರಗಳನ್ನು ಶೃಂಗರಿಸುವುದಕ್ಕಿಂತ ಮುಂಚೆ ಗ್ರಾಮಗಳಿಗೆ ಸೌಕರ್ಯಗಳನ್ನೆಲ್ಲ ಒದಗಿಸಬೇಕೆಂದು ನಾವು ಕೇಳುತ್ತೇವೆ. ಸಂಬಳಗಳನ್ನು ಕಡಮೆ ಮಾಡಬೇಕು. ನಾವು ಹೇಳುವುದನ್ನು ಸರ್ಕಾರದವರು ಕೇಳುವುದಿಲ್ಲ".

ದಿನಾಂಕ : 03–04–1938 ರಂದು ಕೋಲಾರದಲ್ಲಿ ಕೆ.ಸಿ. ರೆಡ್ಡಿ ಅವರು ಮಾಡಿದ ಭಾಷಣದ ಸಾರಾಂಶ :– "ಸರ್ಕಾರದವರು ದಬ್ಬಾಳಿಕೆಯ ಕಾಯನೀತಿಯನ್ನು ಅನುಸರಿಸಿದ ರೆಂಬ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ. ಅವರು ನಮ್ಮನ್ನೆಲ್ಲಾ ಬಿಡುಗಡೆ ಮಾಡಿರುವುದರಿಂದ, ಸರ್ಕಾರದವರು ಅವರ ತಪ್ಪನ್ನು ಒಪ್ಪಿಕೊಂಡರೆಂಬುದು ವ್ಯಕ್ತಪಡುತ್ತದೆ. ಅವರು ತಮ್ಮ ತಿಳಿಗೇಡಿತನವನ್ನು ಒಪ್ಪಿಕೊಂಡುದರಿಂದ, ಅವರು ವಿವೇಕವನ್ನು ತಂದು ಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನು ಕೊಡೋಣ. ಪ್ರತಿಯೊಬ್ಬರು ಬಡ ರೈತರ ರಕ್ತವನ್ನು ಹೀರುತ್ತಾರೆ"[24].

ಈ ವರದಿಯಲ್ಲಿ ಉಲ್ಲೇಖಿಸಲಾಗಿರುವ ಕೆ.ಸಿ. ರೆಡ್ಡಿ ಅವರ ಭಾಷಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಂದಿನ ಮೈಸೂರು ಸರ್ಕಾರದ ಆಡಳಿತದಲ್ಲಿನ ಲೋಪದೋಷಗಳು, ದೌರ್ಜನ್ಯಗಳು ಮುಂತಾದವುಗಳ ಬಗ್ಗೆ ಜನರನ್ನು ಎಚ್ಚರಿಸುವುದರೊಂದಿಗೆ, ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಜನರಲ್ಲಿ ಮೂಡಿಸಲು ಹಾಗೂ ಜವಾಬ್ದಾರಿ ಸರ್ಕಾರ ರಚನೆಯ ಬಗ್ಗೆ ಹೋರಾಟಕ್ಕೆ ಪ್ರೇರೇಪಿಸುವಂತಹ ಮಾತುಗಳು ಕಂಡುಬರುತ್ತವೆಯೇ ಹೊರತು, ಜನರು ಗಲಭೆ ಮಾಡಲು ಪ್ರೇರೇಪಿಸುವಂತಹ, ಉದ್ರೇಕಕಾರಿಯಾದ ಭಾಷಣವನ್ನು ಕೆ.ಸಿ. ರೆಡ್ಡಿ ಅವರು ಯಾವ ಸಂದರ್ಭದಲ್ಲೂ ಯಾವ ಊರಿನಲ್ಲಿಯೂ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ವಿದುರಾಶ್ವತ್ಥ ಗಲಭೆಯಲ್ಲಿ ಕೆ.ಸಿ. ರೆಡ್ಡಿ ಅವರ ಪರವಾಗಿ ವಾದಿಸಿದ ವಕೀಲರಾದ ಎಲ್.ಎಸ್. ರಾಜು ಅವರು "ಕೆ.ಸಿ. ರೆಡ್ಡಿ ಅವರ ಭಾಷಣಗಳನ್ನು ಆಯಾ ಸನ್ನಿವೇಶಗಳಿಂದ ಪ್ರತ್ಯೇಕಿಸಿ ತೆಗೆದಿರುವುದರಿಂದ ಅವಕ್ಕೆ ಭಾಷಣಕಾರರ ಉದ್ದೇಶವಿಲ್ಲದ ಅರ್ಥಗಳು ಬರುವಂತೆ ವರದಿಯಲ್ಲಿ ಮಾಡಿರುವುದು ಸ್ಪಷ್ಟವಾಗಿದೆ" ಎಂದು ಸರ್ಕಾರವನ್ನು ದೋಷಿಸಿರುವುದನ್ನು ಗಮನಿಸಬಹುದು.[25]

ವೇಪಾ ರಮೇಶಂ ವರದಿಯಲ್ಲಿ 'ಕೋಲಾರ ಜಿಲ್ಲೆಯ ಅಧಿಕಾರಿ ವರ್ಗದವರು ಕೆ.ಸಿ. ರೆಡ್ಡಿ ಅವರ ವಿರುದ್ಧ ಸಾಕ್ಷಿ ನುಡಿದಿದ್ದಾರೆಂದು ಪ್ರಸ್ತಾಪಿಸಲಾಗಿದೆ. ಅದರಂತೆ

---

24. ವೇಪಾ ರಮೇಶಂ : 1938 ನೆಯ ವಿದುರಾಶ್ವತ್ಥದ ಗಲಭೆಯ ವಿಚಾರಣಾ ಸಮಿತಿಯವರ ವರದಿ, 1938, ಪುಟ–92.
25. ಪೂರ್ವೋಕ್ತ : 1938, ಪುಟ–96.

"ಕೆ.ಸಿ.ರೆಡ್ಡಿ ಅವರು 1937ರ ಅಕ್ಟೋಬರ್‌ನಲ್ಲಿ ಮೊಟ್ಟ ಮೊದಲ ಕಾಂಗ್ರೆಸ್ ಅಧ್ಯಕ್ಷರಾದರು. ಅವರು ಕೋಲಾರ ಜಿಲ್ಲೆಯಾದ್ಯಂತ ತೀವ್ರ ಪ್ರಚಾರ ಕಾರ್ಯವನ್ನು ನಡೆಸಲಾರಂಭಿಸಿದರು. ಆ ಜಿಲ್ಲೆಯಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಗಳನ್ನು, ಗ್ರಾಮ ಕಾಂಗ್ರೆಸ್ ಸಮಿತಿಗಳನ್ನೂ ಏರ್ಪಡಿಸುವ ವ್ಯವಸ್ಥೆಯನ್ನು ಮಾಡಿದರು. ಅವರೂ ಮತ್ತು ಇತರ ಕಾಂಗ್ರೆಸ್ ಕೆಲಸಗಾರರೂ ಸರ್ಕಾರದವರ ಉದ್ದೇಶಗಳನ್ನೂ, ಕಾರ್ಯನೀತಿಯನ್ನು, ವಾಸ್ತವಸ್ಥಿತಿಗೆ ತುಂಬಾ ವಿರುದ್ಧವಾಗಿ ಭಾಷಣಗಳನ್ನು ಮಾಡಿ ಜನರಿಗೆ ಅಪ ತಿಳುವಳಿಕೆಯನ್ನುಂಟು ಮಾಡಿದರು" ಎಂದು ಆರೋಪ ಮಾಡಲಾಗಿದೆ.[26]

ರಾಜಕೀಯ ಸುಧಾರಣಾ ಸಮಿತಿಗೆ ಮೈಸೂರು ಕಾಂಗ್ರೆಸ್‌ನ ಗೌರವ ಕಾರ್ಯದರ್ಶಿ ಕೆ.ಸಿ. ರೆಡ್ಡಿ ಅವರು 1938ರ ಆಗಸ್ಟ್ 5 ರಂದು ಬರೆದ ಪತ್ರದಲ್ಲಿ ""ಮೈಸೂರು ಕಾಂಗ್ರೆಸ್, ಮೈಸೂರು ಸರ್ಕಾರವು ಸ್ಥಾಪಿಸಿರುವ ರಾಜಕೀಯ ಸುಧಾರಣಾ ಸಮಿತಿಗೆ ಸಹಕಾರ ನೀಡಲು ಸಂಪೂರ್ಣವಾಗಿ ಒಪ್ಪಿಕೊಂಡಿದೆ. ಈ ಸಮಿತಿಯು ರಾಜಕೀಯ ಸುಧಾರಣೆಗಳನ್ನು ಮಾಡಲು ಸಲಹೆಗಳನ್ನು ನೀಡುವುದರೊಂದಿಗೆ ಮೈಸೂರು ಮಹಾರಾಜರ ಅಧೀನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಲಹೆ ನೀಡುವುದೆಂದು ನಂಬಿದ್ದೇವೆ.

1938ರ ಜುಲೈನಲ್ಲಿ ನಡೆದ ಎ.ಎಂ.ಸಿ.ಸಿ. ಸಭೆಯಲ್ಲಿ ಹಲವು ನಿರ್ಣಯಗಳನ್ನು ಅಂಗೀಕರಿಸಲಾಗಿದೆ.

1. ಮೈಸೂರು ಸಂಸ್ಥಾನದಲ್ಲಿ ಸಂವಿಧಾನಾತ್ಮಕ ಸಂಸದೀಯ ಜವಾಬ್ದಾರಿ ಸರ್ಕಾರವನ್ನು ಮೈಸೂರು ಮಹಾರಾಜರ ವಂಶಪಾರಂಪರ್ಯ ಅಧೀನದಲ್ಲಿ ಸ್ಥಾಪನೆಯಾಗಬೇಕು. ಈ ಸರ್ಕಾರದಲ್ಲಿ ಮಹಾರಾಜರ ಹಕ್ಕುಗಳು ಮತ್ತು ಅಧಿಕಾರಗಳನ್ನು ಹಾಗೂ ಉತ್ತರಾಧಿಕಾರವನ್ನು ಖಚಿತಪಡಿಸಬೇಕು.
2. ಮಹಾರಾಜರಿಗೆ ಸಲಹೆ ನೀಡಲು ಮಂತ್ರಿಮಂಡಲದ ರಚನೆಯಾಗಬೇಕು.
3. ಮಂತ್ರಿಮಂಡಲದಲ್ಲಿ ಪ್ರಧಾನಮಂತ್ರಿ ಮತ್ತು ನಾಲ್ಕುಮಂದಿ ಮಾತ್ರ ಮಂತ್ರಿಗಳಿರಬೇಕು. ಈ ಮಂತ್ರಿಮಂಡಲವು ವಿಧಾನಸಭೆಗೆ ಜವಾಬ್ದಾರರಾಗಿರಬೇಕು.
4. ವಿಧಾನಸಭೆಯು 250 ಮಂದಿ ವಯಸ್ಕ ಮತದಾರರಿಂದ ಚುನಾಯಿತ ಸದಸ್ಯರನ್ನು ಹೊಂದಿರಬೇಕು.
5. ನಾಗರೀಕರಿಗೆ ಅವರ ಮೂಲಭೂತ ಹಕ್ಕುಗಳ ಬಗ್ಗೆ ಪ್ರಕಟಣೆ ಹೊರಡಿಸಬೇಕು.

---

26. ವೇಪಾ ರಮೇಶಂ : 1938 ನೆಯ ವಿದುರಾಶ್ವತ್ಥದ ಗಲಭೆಯ ವಿಚಾರಣಾ ಸಮಿತಿಯವರ ವರದಿ, 1938, ಪುಟ–76.

6. ವಿಧಾನಸಭೆಯಲ್ಲಿ ವಾರ್ಷಿಕ ಆಯ-ವ್ಯಯವನ್ನು ಮಂಡಿಸಿ, ಚರ್ಚಿಸಿ ಅನುಮೋದನೆ ಪಡೆಯಬೇಕು.

7. ಸರ್ಕಾರದಲ್ಲಿ ಒಬ್ಬ ಸ್ವತಂತ್ರ ಆಡಿಟರ್ ಜನರಲ್ ಮತ್ತು ಕಂಟ್ರೋಲರ್ ಇದ್ದು ಅವರು ಲೆಕ್ಕಪತ್ರಗಳನ್ನು ಪರಿಶೀಲಿಸಲು ಹಾಗೂ ಆಯ-ವ್ಯಯ ಜಾರಿಗೆ ತರುವ ಕೆಲಸವನ್ನು ನಿರ್ವಹಿಸಬೇಕು.

8. ಸಾರ್ವಜನಿಕ ಸೇವೆಗಳಿಗೆ ನೇಮಕಾತಿ ಮಾಡಲು ಲೋಕಸೇವಾ ಆಯೋಗವನ್ನು ಸ್ಥಾಪಿಸಬೇಕು.

9. ಬ್ರಿಟಿಷ್ ಇಂಡಿಯಾದ ಸಂವಿಧಾನದಂತೆ ಸಂಪೂರ್ಣ ಅಧಿಕಾರವನ್ನು ಹೊಂದಿರುವಂತಹ ಹೈಕೋರ್ಟ್ ಅನ್ನು ಸ್ಥಾಪಿಸಬೇಕು. ಈ ಹೈಕೋರ್ಟ್ ಸಂಪೂರ್ಣ ಸ್ವತಂತ್ರ ನ್ಯಾಯಾಂಗ ಅಧಿಕಾರ ಹೊಂದಿರಬೇಕು. ಸಂವಿಧಾನಕ್ಕೆ ತಿದ್ದುಪಡಿ ಹಾಗೂ ಸೇರ್ಪಡೆಯ ಅವಕಾಶವನ್ನು ಹೊಂದಿರಬೇಕು.

10. ವಿಧಾನಸಭೆಯ ಸ್ಥಾಪನೆ ಚುನಾವಣೆಯ ರೀತಿ ನೀತಿಗಳು, ಮತದಾನದ ಸ್ವರೂಪ, ಮತದಾರರ ಹಕ್ಕುಗಳು ಮುಂತಾದವುಗಳ ಬಗ್ಗೆ ಪ್ರತ್ಯೇಕ ನಿಯಮಾವಳಿಯನ್ನು ರೂಪಿಸಿ ಅಖಿಲ ಭಾರತ ಸರ್ಕಾರದ ಅಧೀನದಲ್ಲಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ರಚಿಸಬೇಕು" ಎಂದು ಸಲಹೆಗಳನ್ನು ನೀಡಿದರು.[27]

ಮೈಸೂರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯವರು ವೇಪಾ ರಮೇಶಂ ವರದಿಯ ಸಂಬಂಧವಾಗಿ ಈ ನಿರ್ಣಯವನ್ನು ಅಂಗೀಕರಿಸಿತು.

"ರಮೇಶಂ ವರದಿಯ ತೀರ್ಮಾನಕ್ಕೆ ಸಂಪೂರ್ಣ ವಿರುದ್ಧವಾದ ನಿರ್ಧಾರಕ್ಕೆ ಬರಲು ಸಾಕಾದಷ್ಟು ನಿಸ್ಸಂಶಯವಾದ ರುಜುವಾತು ಬಂದಿದರೂ, ರಮೇಶಂ ಸಮಿತಿಯವರು ಅಂಥಾ ತೀರ್ವಾನಕ್ಕೆ ಬಾರದಿರುವುದನ್ನು ನೋಡಿದರೆ ಅವರ ತೀರ್ವಾನವು ನಿಷ್ಪಕ್ಷಪಾತವಾದುದೆಂದಾಗಲೀ, ನ್ಯಾಯವಾದುದೆಂದಾಗಲೀ, ಸ್ವತಂತ್ರವಾದುದೆಂದಾಗಲೀ ಹೇಳುವುದಕ್ಕೆ ಸಾಧ್ಯವಿಲ್ಲ. ಈ ವರದಿಯು ಕಾಂಗ್ರೆಸ್ಸನ್ನು ಮರೆಮಾಚಿ ತಿವಿಯುವಂಥಾ ಪ್ರಯತ್ನವೆಂದೂ, ಮೈಸೂರು ಸರ್ಕಾರ ಮತ್ತು ಮೈಸೂರು ಕಾಂಗ್ರೆಸ್‌ನೊಡನೆ ಮಾಡಿಕೊಂಡ ಒಪ್ಪಂದದ ಮನೋಭಾವನೆಗೆ ತೀರಾ ವಿರೋಧಭಾವ ದಿಂದ ಕೂಡಿದೆ" ಎಂದು ಹೆಚ್.ಸಿ. ದಾಸಪ್ಪ ತಿಳಿಸಿದ್ದಾರೆ.[28]

---

27. SRINIVASAINGAR .K.R : Constitutional Reform in Mysore : Date : 05-08-1938, P-22.
28. THE MYSORE CONGRESS CONVENTION - Viduraswatta, President H.C. Dasappa Speeche, Date : 15-04-1939, P-12.

ಕೆ.ಸಿ.ರೆಡ್ಡಿ ಅವರು 1939ರ ಜನವರಿ 17ರಂದು ರಾಜಕೀಯ ಸುಧಾರಣಾ ಸಮಿತಿಗೆ ಬರೆದ ಪತ್ರದಲ್ಲಿ "ರಾಜಕೀಯ ಸುಧಾರಣಾ ಸಮಿತಿಯ ಸದಸ್ಯರಾಗಿ ಮೈಸೂರು ಕಾಂಗ್ರೆಸ್‌ವತಿಯಿಂದ ವಿ. ವೆಂಕಟಪ್ಪ, ಡಿ.ಹೆಚ್. ಚಂದ್ರಶೇಖರಯ್ಯ, ಭೂಪಾಳಂ ಚಂದ್ರಶೇಖರಯ್ಯ ಮತ್ತು ತಾವು (ಕೆ.ಸಿ.ರೆಡ್ಡಿ) ಇದ್ದೆವು. ಆದರೆ ಭೂಪಾಳಂ ಚಂದ್ರಶೇಖರಯ್ಯನವರನ್ನು ಕಾಂಗ್ರೆಸ್ ಸದಸ್ಯತ್ವದಿಂದ ಉಚ್ಚಾಟನೆ ಮಾಡಿರುವುದರಿಂದಾಗಿ ಅವರ ಸ್ಥಾನಕ್ಕೆ ಶಿವಮೊಗ್ಗದ ಎಚ್. ಸಿದ್ಧಯ್ಯ ಅವರನ್ನು ಸೇರಿಸಿಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ".[29]

ಇದಕ್ಕೆ ಪ್ರತಿಯಾಗಿ ಸರ್ಕಾರ, ಕಾಂಗ್ರೆಸ್ ನಾಯಕರ ಬಂಧನ, ಕೆಲವು ಪತ್ರಿಕೆಗಳ ಮೇಲೆ ನಿಷೇಧಾಜ್ಞೆ ಕಾಂಗ್ರೆಸ್‌ಕಚೇರಿ ಮೇಲೆ ದಾಳಿ, ಕಾಂಗ್ರೆಸ್‌ಗೆ ಭೂಪಾಳಂ ಚಂದ್ರ ಶೇಖರಯ್ಯನವರ ರಾಜೀನಾಮೆ, ಇವರ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಎಚ್. ಸಿದ್ಧಯ್ಯನವರ ನೇಮಕ, ಮಿರ್ಜಾ ಇಸ್ಮಾಯಿಲ್‌ರಿಂದ ಒಪ್ಪಂದದ ಉಲ್ಲಂಘನೆ ಇತ್ಯಾದಿಗಳು ನಡೆದಿದುದ್ದನ್ನು ಗಮನಿಸಿದರೆ ಈ ಹೋರಾಟವನ್ನು ಹತ್ತಿಕ್ಕಲು ಸರ್ಕಾರವು ನಡೆಸಿದ ಕುತಂತ್ರಗಳು ಸ್ಪಷ್ಟವಾಗಿ ತಿಳಿಯುತ್ತವೆ.

ಎರಡನೆಯ ಮೈಸೂರು ಕಾಂಗ್ರೆಸ್ ಅಧಿವೇಶನ : ವಿದುರಾಶ್ವತ್ಥ–1939

ವಿದುರನಗರ ಧ್ವಜ ಸತ್ಯಾಗ್ರಹ

1939ರ ಏಪ್ರಿಲ್ 15, 16 ಮತ್ತು 17ರಂದು ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಮೈಸೂರು ಕಾಂಗ್ರೆಸ್‌ನ ಎರಡನೆಯ ಅಧಿವೇಶನವು ಹೆಚ್.ಸಿ. ದಾಸಪ್ಪ ಅವರ ಅದ್ಯಕ್ಷತೆಯಲ್ಲಿ ನಡೆಯಿತು. ಸ್ವಾಗತಾಧ್ಯಕ್ಷರಾಗಿ ಎಸ್.ಸಿ. ತಿಮ್ಮಾರೆಡ್ಡಿ ಅವರು ಕಾರ್ಯನಿರ್ವಹಿಸಿದರು. ಮೈಸೂರು ಕಾಂಗ್ರೆಸ್ ಪಕ್ಷವು ಉದ್ದೇಶ ಪೂರ್ವಕವಾಗಿ ವಿದುರಾಶ್ವತ್ಥದಲ್ಲಿಯೇ ನಡೆಸಲು ತೀರ್ಮಾನಿಸಿತು. ಈ ಅಧಿವೇಶನಕ್ಕೆ ಮೂವತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಜನರು ಪಾಲ್ಗೊಂಡಿದ್ದರು.

ಈ ಅಧಿವೇಶನದಲ್ಲಿ 'ಕಾಂಗ್ರೆಸ್ಸಿಗರು ಜವಾಬ್ದಾರಿ ಸರ್ಕಾರಕ್ಕಾಗಿ ನಡೆಸುವ ಅಹಿಂಸಾತ್ಮಕ ಹೋರಾಟವನ್ನು ಹತ್ತಿಕ್ಕಲು ಮೈಸೂರು ಸರ್ಕಾರವು ಅನುಸರಿಸುತ್ತಿರುವ ಧಮನಕಾರಿ ನೀತಿಯನ್ನು ಖಂಡಿಸಿತಲ್ಲದೆ, ಜವಾಬ್ಧಾರಿ ಸರ್ಕಾರದ ಕೋರಿಕೆ ಜನತೆಯ ಆ ಜನ್ಮಸಿದ್ಧ ಹಕ್ಕು ಎಂದೂ, ರಾಜಕೀಯ ಹೋರಾಟಗಳ ಕ್ಷೇತ್ರವು ಬ್ರಿಟಿಷ್ ಇಂಡಿಯಾ

---

29. SRINIVASAINGAR .K.R : Constitutional Reform in Mysore: Dt : 17-01-1939, P-11.

ದಿಂದ ದೇಶೀಯ ಸಂಸ್ಥಾನಗಳಿಗೆ ಸರಿಯುತ್ತಿದೆ ಎಂದೂ, ಸರ್ಕಾರವು ಕಾಂಗ್ರೆಸ್ ಕಾರ್ಯಕರ್ತರನ್ನು ದಸ್ತಗಿರಿ ಮಾಡಿ ನಿಷೇದಾಜ್ಞೆ ಜಾರಿಗೆ ತಂದಿರುವುದರಿಂದ ಸರ್ಕಾರದ ವಿರುದ್ಧ ಹೋರಾಟಕ್ಕೆ ಸಿದ್ಧವಾಗಿರಬೇಕೆಂದು' ನಿರ್ಣಯವನ್ನು ಅಂಗೀಕರಿಸಿತು.[30]

ಈ ಅಧಿವೇಶನದಲ್ಲಿ ಹದಿಮೂರು ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದವು. ಅದರಲ್ಲಿ 7 ನೆಯ ಮತ್ತು 13 ನೆಯ ನಿರ್ಣಯಗಳನ್ನು ಕೆ.ಸಿ. ರೆಡ್ಡಿ ಅವರು ಸೂಚಿಸಿದ್ದಾರೆ.

7ನೆಯ ನಿರ್ಣಯದಂತೆ "ಮಹಾತ್ಮಾಗಾಂಧೀಜಿ ಅವರು ದೇಶೀಯ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚಳವಳಿಯ ಮಾರ್ಗದರ್ಶತ್ವವನ್ನು ವಹಿಸಿಕೊಂಡಿರುವುದು ಬಹಳ ಉತ್ತೇಜಕರವಾದುದೆಂದು ಈ ಅಧಿವೇಶನವು ಭಾವಿಸುತ್ತದೆ. ಅವರ ಮಾರ್ಗದರ್ಶಕತ್ವ ದಲ್ಲಿ ಶೀಘ್ರದಲ್ಲಿಯೇ ದೇಶೀಯ ಸಂಸ್ಥಾನಗಳಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪನೆಯಾಗಿ ಸ್ವತಂತ್ರ ಭಾರತೋದಯಕ್ಕೆ ಸಹಾಯಕವಾಗುವುದೆಂದು ಈ ಅಧಿವೇಶನವು ಭರವಸೆಯುಳ್ಳದಾಗಿದೆ" ಎಂದು ಕೆ.ಸಿ. ರೆಡ್ಡಿ ಅವರು ತಿಳಿಸಿದರು.[31]

13ನೆಯ ನಿರ್ಣಯದಂತೆ ಜನಸಾಮಾನ್ಯರ ಸ್ಥಿತಿಗತಿಗಳು ಉತ್ತಮವಾಗಬೇಕಾದರೆ ಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪಿತವಾಗಬೇಕೆಂದು, ಜವಾಬ್ದಾರಿ ಸರ್ಕಾರವು ಸ್ಥಾಪಿತವಾದಾಗ ಕೈಗೊಳ್ಳಬೇಕಾದ ಅನೇಕ ಮುಖ್ಯ ಕಾರ್ಯಗಳಲ್ಲಿ ಈ ಹನ್ನೆರಡು ಅಂಶಗಳು ಪ್ರಮುಖವಾದವುಗಳು.

1. ಶಕ್ತ್ಯಾನುಸಾರವೂ, ನ್ಯಾಯವೂ ಆದ ತೆರಿಗೆಗಳ ಪದ್ಧತಿಯನ್ನು ಏರ್ಪಡಿಸುವುದು ಮತ್ತು ಆಡಳಿತ ವೆಚ್ಚವನ್ನು ವಿಚಕ್ಷಣೆಗೊಳಿಸುವುದು.

2 ಭೂ–ಕಂದಾಯವನ್ನೂ ತತ್ಸಂಬಂಧವಾದ ತೆರಿಗೆಗಳನ್ನು ಸೂಕ್ತವಾದ ರೀತಿಯಲ್ಲಿ ಕಡಮೆ ಮಾಡುವುದು ಮತ್ತು ಸಾಕಾದಷ್ಟು ಉತ್ಪನ್ನವಿಲ್ಲದ ಜಮೀನಿನ ಕಂದಾಯ ವನ್ನು ಮನ್ನಾ ಮಾಡುವುದು.

3 ಮದ್ಯಪಾನ ನಿರೋಧ ಕಾರ್ಯವನ್ನು ಕೈಗೊಳ್ಳುವುದು.

4 ಸಾಧ್ಯವಾದ ಎಲ್ಲಾ ವಿಧದಲ್ಲಿಯೂ ವ್ಯವಸಾಯವನ್ನು ಅಭಿವೃದ್ಧಿಗೊಳಿಸವುದು; ನಶಿಸಿ ಹೋಗಿಯೂ, ಹೋಗುತ್ತಲೂ ಇರುವ ಗ್ರಾಮ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು, ಹಾಗೆಯೇ ಮೂಲ ಕೈಗಾರಿಕೆಗಳನ್ನು ವೃದ್ಧಿಪಡಿಸುವುದು.

---

30. THE MYSORE CONGRESS CONVENTION - Viduraswatta. President H.C. Dasappa Speeche, 1939.

31. ಕಾಂಗ್ರೆಸ್ ಪ್ರಕಟನೆ : ಮೈಸೂರು ಕಾಂಗ್ರೆಸ್ : ಮೇ 1939, ಪುಟ–05.

5 ಹಳ್ಳಿಗಾಡಿನ ಜನರ ಮೇಲ್ಮೆಗಾಗಿ ಅನ್ಯಾಯವೂ, ಲಾಭದಾಯಕವಲ್ಲದ್ದೂ ಆದ ನಾನಾ ತರಹವಾದ ಅರಣ್ಯಶಾಖೆಯನ್ನು ರುಸುಂ(ಶುಲ್ಕ)ಗಳನ್ನು ಮನ್ನಾ ಮಾಡುವುದಲ್ಲದೆ, ಕಿರುಕುಳಗಳನ್ನು ಕೊಡುವ ನಿರ್ಬಂಧವನ್ನು ತೆಗೆದು ಹಾಕುವುದು.

6 ಅತ್ಯಗತ್ಯವಾಗಿ ಕಂಡು ಬರುವ ಸಂದರ್ಭಗಳಲ್ಲಿ ಸಾಲಗಾರರನ್ನು ಋಣ ಮುಕ್ತರನ್ನಾಗಿ ಮಾಡುವುದು, ಸಾಲಗಳ ಮೊತ್ತವನ್ನು ಯೋಗ್ಯ ರೀತಿಯಲ್ಲಿ ಕಡಮೆ ಮಾಡಿ ಆ ಕಡಮೆಯಾದ ಸಾಲದ ಮೊತ್ತವನ್ನು ತೀರಿಸುವ ಬಗ್ಗೆ ತೃಪ್ತಿಕರವಾದ ಏರ್ಪಾಟುಗಳನ್ನು ಮಾಡುವುದು ಮತ್ತು ಸುಲಭ ದರದಲ್ಲಿ ಸಾಲ ದೊರೆಯುವಂತೆ ಅನುಕೂಲಗಳನ್ನು ಒದಗಿಸುವುದು.

7 ಯಾರೊಬ್ಬ ಸರ್ಕಾರಿ ನೌಕರರಿಗೂ ತಿಂಗಳಿಗೆ 500 ರೂಪಾಯಿಗಳ ಸಂಬಳಕ್ಕೆ ಹೆಚ್ಚಿಲ್ಲದಂತೆ ನಿಗದಿ ಮಾಡುವುದು ಮತ್ತು ಆಡಳಿತದ ಖರ್ಚನ್ನು ದಕ್ಷತೆಗೆ ಲೋಪಬಾರದಂತೆ ಕಡಿಮೆ ಮಾಡುವುದು.

8 ದೇಶಾದ್ಯಂತವೂ ಪ್ರಾಥಮಿಕ ಶಿಕ್ಷಣವನ್ನು ಬಲಾತ್ಕಾರದಿಂದ ಏರ್ಪಡಿಸುವುದು ಮತ್ತು ಪ್ರಾಪ್ತವಯಸ್ಕರ ನಿರಕ್ಷರತೆಯನ್ನು ನಿರ್ಮೂಲಗೊಳಿಸುವುದು.

9 ಎಲ್ಲಾ ಆಡಳಿತ ಶಾಖೆಗಳಲ್ಲಿಯೂ ಲಂಚ ಋಷುವತ್ತುಗಳನ್ನು ತೊಡೆದು ಹಾಕುವುದು.

10 ಗ್ರಾಮಾಂತರಗಳಲ್ಲಿ ಎ) ಆರೋಗ್ಯ ಮತ್ತು ನೈರ್ಮಲ್ಯ, ಬಿ) ವೈದ್ಯ ಸಹಾಯ, ಸಿ) ನೀರಿನ ಸಹಾಯ, ಡಿ) ದೀಪದ ಸೌಕರ್ಯ, ಇ) ರಸ್ತೆಗಳು, ಎಫ್) ಅಂಚೆ ಮತ್ತು ತಂತಿ ಸೌಕರ್ಯ, ಜಿ) ವಿಹಾರ ಇತ್ಯಾದಿ ಬೇಕಾಗಿರುವುದ ಅನುಕೂಲಗಳನ್ನು ಕಲ್ಪಿಸುವುದು.

11 ಕೂಲಿಗಾರರಿಗೆ ಜೀವನಕ್ಕೆ ಸಾಕಾಗುವಷ್ಟು ಕೂಲಿಯನ್ನು ಪಡೆಯುವಂತೆ ಭರವಸೆ ಕೊಡುವುದು ಮತ್ತು ಕೂಲಿಗಾರರ ಸಂಸ್ಥೆಗಳನ್ನು (TRADE UNION) ಏರ್ಪಡಿಸಿಕೊಳ್ಳಲು ಸ್ವತಂತ್ರವಿರತಕ್ಕದ್ದು ಮತ್ತು ಇತರೇ ವಿಚಾರಗಳಲ್ಲಿ ಶಾಸನ ಮಾಡತಕ್ಕದ್ದು.

12 ಆಡಳಿತ ಸ್ವಾತಂತ್ರ್ಯವುಳ್ಳ ಗ್ರಾಮ ಪಂಚಾಯಿತಿಗಳನ್ನು ಏರ್ಪಡಿಸುವುದು ಮತ್ತು ಅವುಗಳಿಗೆ ವಿಶೇಷ ಅಧಿಕಾರಗಳನ್ನು, ಸಾಕಾದಷ್ಟು ಹಣಕಾಸಿನ ಅನುಕೂಲಗಳನ್ನು ಕಲ್ಪಿಸುವುದು.

ಈ ಮೇಲಿನ ಎಲ್ಲಾ ಅಂಶಗಳು ಕೆ.ಸಿ. ರೆಡ್ಡಿ ಅವರಿಂದ ಸೂಚಿಸಲ್ಪಟ್ಟು, ಸರ್ವಾನುಮತದಿಂದ ಅಂಗೀಕೃತವಾಗಿದೆ.[32]

1939ರ ಮೇ ತಿಂಗಳಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ "ಸರ್ಕಾರದ ವಿರುದ್ಧ ಅಸಹಕಾರ ತೋರಲು ಕಾಂಗ್ರೆಸ್‌ನ ಪ್ರಜಾಪ್ರತಿನಿಧಿ ಸಭೆಯ 66 ಸದಸ್ಯರು, ನ್ಯಾಯವಿಧಾಯಕ ಸಭೆಯ 9 ಸದಸ್ಯರು, ಜಿಲ್ಲಾ ಬೋರ್ಡ್ ಮತ್ತು ಪುರಸಭೆಗಳ 150 ಜನ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ರಾಜೀನಾಮೆಯನ್ನು ನೀಡಿದರು. ಅಲ್ಲದೆ ಕಾಂಗ್ರೆಸ್ ಬಗ್ಗೆ ತಮಗಿರುವ ಸಹಾನುಭೂತಿಯನ್ನು ವ್ಯಕ್ತಪಡಿಸಲು ಕಾಂಗ್ರೆಸ್ ಸದಸ್ಯರಲ್ಲದವರೂ ರಾಜೀನಾಮೆ ನೀಡಿದರು".[33]

1939ರ ಜುಲೈ 8 ಮತ್ತು 9 ರಂದು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಹೆಚ್.ಸಿ. ದಾಸಪ್ಪ ಅವರ ಅಧ್ಯಕ್ಷತೆಯಲ್ಲಿ ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ನಡೆಯಿತು. ಈ ಸಭೆಯು 'ಶ್ರೀ ಮನ್ಮಹಾರಾಜರ ಆಶ್ರಯದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವು ಕೂಡಲೇ ಸ್ಥಾಪಿಸಲ್ಪಡಬೇಕು ಎಂಬ ಮೈಸೂರು ಕಾಂಗ್ರೆಸ್ಸಿಗರ ಬೇಡಿಕೆಯನ್ನು ಒತ್ತಿ ಹೇಳಿತು'. ಆದರೆ ಸರ್ಕಾರ ಚರ್ಚಿಸಲು ಸಾಧ್ಯವಿಲ್ಲವೆಂದು ಉತ್ತರ ನೀಡಿತ್ತು. ಈ ಸಭೆಯಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ನಡೆಸಲು ಕಾಂಗ್ರೆಸ್ ಧುರೀಣರಾದ ಕೆ.ಟಿ. ಭಾಷ್ಯಂ, ಕೆ.ಸಿ. ರೆಡ್ಡಿ, ಬಿ.ಎನ್. ಗುಪ್ತ, ಎಚ್.ಕೆ. ವೀರಣ್ಣಗೌಡ, ಎಚ್. ಸಿದ್ದಯ್ಯ ಮುಂತಾದವರ ಸಮ್ಮುಖದಲ್ಲಿ ನಿರ್ಧರಿಸಲಾಯಿತು. ಅಲ್ಲದೆ 1939ರ ಜುಲೈ 30ರ ಭಾನುವಾರ ಸಂಸ್ಥಾನದಾದ್ಯಂತ ಕಾಂಗ್ರೆಸ್ 'ಜವಾಬ್ಧಾರಿ ಸರ್ಕಾರ ದಿನಾಚರಣೆ' ಆಚರಿಸಲು ನಿರ್ಧರಿಸಿತು.[34]

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಂತೆ 1939ರ ಆಗಸ್ಟ್ 1 ರಂದು ಕಾಂಗ್ರೆಸ್ ಸದಸ್ಯರು ಸಂಸ್ಥಾನದ ನಾನಾ ಕಡೆ ಪ್ರಚಾರ ಕಾರ್ಯಕ್ರಮ ನಡೆಸಲು ತೀರ್ಮಾನಿಸಿ ಮೂರು ಗುಂಪುಗಳಾಗಿ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ನೂರಾರು ಸಭೆಗಳನ್ನು ನಡೆಸಿದರು. ಚಳ್ಳಕೆರೆಯಲ್ಲಿ ರೈತರ ಸಮ್ಮೇಳನವನ್ನು ನಡೆಸಬೇಕೆಂದು ಏರ್ಪಾಟು ಮಾಡಿದ್ದ ವೇಳೆ ಕೆ.ಸಿ. ರೆಡ್ಡಿ, ಕೆ. ಸಂಪಂಗಿರಾಮಯ್ಯ ಮತ್ತು ಕೆ. ಹೆಂಜೇರಪ್ಪ ಮುಂತಾದ ಮುಖಂಡರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಗದಂತೆ ಪ್ರತಿಬಂಧಕಾಜ್ಞೆಯನ್ನು ಹಾಕಿದ್ದರು. ಆದರೆ ಬಾಜಾ

---

32. ಕಾಂಗ್ರೆಸ್ ಪ್ರಕಟನೆ : ಮೈಸೂರು ಕಾಂಗ್ರೆಸ್ : ಮೇ 1939, ಪುಟ–09.
33. ವೀರತಪ್ಪ .ಕೆ : ಮೈಸೂರು ಸಂಸ್ಥಾದ ಸ್ವಾತಂತ್ರ್ಯ ಚಳುವಳಿ, ಪುಟ–62.
34. THE MYSORE CONGRESS CONVENTION - Viduraswatta-1939.

ಭಜಂತ್ರಿಗಳೊಂದಿಗೆ ಕರೆದೊಯ್ಯಲಾಯಿತು. ಆದರೆ ಸರ್ಕಾರ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.[35]

ಕೆ.ಜಿ.ಎಫ್. ಸತ್ಯಾಗ್ರಹ

ಮೈಸೂರು ಕಾಂಗ್ರೆಸ್ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕೆ.ಜಿ.ಎಫ್.ನಲ್ಲಿ 1939ರ ಆಗಸ್ಟ್ 14ರಂದು ಸಭೆ ನಡೆಸಲು ನಿರ್ಧರಿಸಿತ್ತು. ಅದರಂತೆ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ ಮೂರು ಕಾರುಗಳಲ್ಲಿ ಪ್ರಯಾಣ ಮಾಡಿ ಕೆ.ಸಿ. ರೆಡ್ಡಿ ಅವರ ಊರಾದ ಕ್ಯಾಸಂಬಳ್ಳಿ ಮನೆಯಲ್ಲಿ ಊಟ ಮಾಡಿ ಸ್ವರ್ಣಕುಪ್ಪಂಗೆ ಹೊರಟರು. ಇದರ ಉದ್ದೇಶ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿ, ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಜನರ ಬೆಂಬಲವನ್ನು ಗಳಿಸುವುದೇ ಆಗಿತ್ತು. ಅಷ್ಟರಲ್ಲಿ ಜಿಲ್ಲಾ ನ್ಯಾಯಾಧೀಶರು ರಾಬರ್ಟ್‌ಸನ್‌ಪೇಟೆಯ ಐದು ಮೈಲಿ ಸರಹದ್ದಿನೊಳಗೆ ಯಾವುದೇ ಸಭೆ ನಡೆಯ ಕೂಡದೆಂದು ಪ್ರತಿಬಂಧಕಾಜ್ಞೆ ಜಾರಿ ಮಾಡಿದರು. ಈ ಆಜ್ಞೆಯನ್ನು ಹದಿಮೂರು ಮಂದಿ ಉಲ್ಲಂಘಿಸಿದುದರಿಂದ ದಸ್ತಗಿರಿ ಮಾಡಿ ಸೆರೆಮನೆಗೆ ಕಳುಹಿಸಲಾಯಿತು. ಕೆ.ಸಿ. ರೆಡ್ಡಿ, ಎಚ್.ಕೆ. ವೀರಣ್ಣಗೌಡ, ಹೆಚ್.ಸಿ. ದಾಸಪ್ಪ, ವಿ. ವೆಂಕಟಪ್ಪ, ಹೆಂಜೇರಪ್ಪ, ಟಿ. ಸುಬ್ರಮ್ಮಣ್ಯ, ಎಂ.ಸಿ. ಪೆರುಮಾಳ್, ಗಂಗಿರೆಡ್ಡಿ, ವಿಷಕಂಠರಾವ್ ಮುಂತಾದವರಿಗೆ ಮೂರು ತಿಂಗಳು ಕಠಿಣ ಸಜೆಯನ್ನು ವಿಧಿಸಲಾಯಿತು.

ಮೈಸೂರು ಕಾಂಗ್ರೆಸ್‌ನ ಮುಖಂಡರ ಶಿಕ್ಷೆಯ ಸಂಬಂಧವಾಗಿ ಸಂಸ್ಥಾನದೊಳಗಿನ ಮತ್ತು ಹೊರಗಿನ ಪತ್ರಿಕೆಗಳಾದ ಹಿಂದೂ, ವಿಶ್ವ ಕರ್ನಾಟಕ, ತಾಯಿನಾಡು, ಸಂಯುಕ್ತ ಕರ್ನಾಟಕ ಉಗ್ರವಾಗಿ ಮೈಸೂರು ಸರ್ಕಾರದ ಕ್ರಮವನ್ನು ಟೀಕಿಸಿದ್ದಾರೆ.[36]

ಕೆ.ಜಿ.ಎಫ್.ನಲ್ಲಿ ಬಂಧನಕ್ಕೊಳಗಾದ ಕೆ.ಸಿ. ರೆಡ್ಡಿಯವರು ಸೆರೆಮನೆಯಿಂದಲೇ ಕೆಂಗಲ್ ಹನುಮಂತಯ್ಯ ಅವರಿಗೆ ಪತ್ರ ಬರೆದಿದ್ದರು. ಅದರಂತೆ "ಶ್ರೀ ಹನುಮಂತಯ್ಯನವರೇ ನಾವೆಲ್ಲ ಅಂದರೆ ಹೆಚ್.ಸಿ. ದಾಸಪ್ಪ, ಟಿ. ಸಿದ್ಧಲಿಂಗಯ್ಯ, ಎಚ್. ಸಿದ್ಧಯ್ಯ, ಕೆ.ಟಿ. ಭಾಷ್ಯಂ, ವಿ. ವೆಂಕಟಪ್ಪ, ಟಿ. ಸುಬ್ರಮ್ಮಣ್ಯ, ಎಚ್.ಕೆ. ವೀರಣ್ಣಗೌಡ, ಹೆಂಜೇರಪ್ಪ, ಎಂ.ಸಿ. ಪೆರುಮಾಳ್ ಮುಂತಾದ ನಾಯಕರೆಲ್ಲ ಪ್ರತಿಬಂಧಕಾಜ್ಞೆ ಉಲ್ಲಂಘಿಸಿ ಕೆ.ಜಿ.ಎಫ್.ನಲ್ಲಿ ಬಂಧಿತರಾಗಿದ್ದೇವೆ. ಈಗ ನೀವು ಹೊರಗೆ ಉಳಿದನಾಯಕರು. ನೀವು ದೇಶದ ದೃಷ್ಟಿಯಿಂದ ನಾಯಕತ್ವ ವಹಿಸಬೇಕು" ಎಂದು ಸೂಚಿಸಿದ್ದರು.[37]

35. THE MYSORE CONGRESS CONVENTION - Shimoga-1940.
36. THE MYSORE CONGRESS CONVENTION - Shimoga-1940.
37. ಕೋಣಂದೂರು ವೆಂಕಪ್ಪಗೌಡ : ನವ ಮೈಸೂರು ಶಿಲ್ಪಿ, ಪುಟ–82.

ಕೆ.ಜಿ.ಎಫ್. ಘಟನೆಯಿಂದ ಬಂಧಿತರಾಗಿ ಜೈಲು ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರೂ 1939 ನವೆಂಬರ್ 17ರಂದು ಬಿಡುಗಡೆ ಹೊಂದಿದ್ದರು. ಆ ವೇಳಗೆ ಸರ್ಕಾರವು ಪ್ರಕಟಿಸಿದ್ದ ರಾಜಕೀಯ ಸುಧಾರಣಾ ಸಮಿತಿ ವರದಿಯನ್ನು ಸಮಗ್ರವಾಗಿ ಪರಿಶೀಲಿಸಿ ಜನರ ಆಶೋತ್ತರಗಳಿಗೆ ಅನುಗುಣವಾಗಿಲ್ಲ, ಕೆಲವು ವಿಚಾರಗಳಲ್ಲಿ ಇದು ಸದ್ಯದಲ್ಲಿ ಜಾರಿಯಲ್ಲಿರುವ ಪದ್ಧತಿಗಿಂತಲೂ ಪ್ರಗತಿ ವಿರೋಧಿಯಾಗಿದೆ. ಆದ್ದರಿಂದ ಈ ಸುಧಾರಣೆಗಳು ತೀರ ಅಸಮರ್ಪಕ ಎಂದು ನಿರ್ಣಯ ಅಂಗೀಕರಿಸಿತು.

ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ವರದಿಯನ್ನು ಟೀಕಿಸುತ್ತಾ ವಿಶ್ವ ಕರ್ನಾಟಕ ಪತ್ರಿಕೆಯಲ್ಲಿ ಡಿ.ವಿ. ಗುಂಡಪ್ಪನವರು "ಜವಾಬ್ದಾರಿ ಅಪೇಕ್ಷಿಸುವ ಜನರು ಆ ಧ್ಯೇಯಕ್ಕಾಗಿ ತಾವೇ ಪ್ರಯತ್ನಿಸಿ ಸಂಪಾದಿಸಿ ಕೊಳ್ಳಬೇಕಾದ ಅರ್ಹತೆಗಳು ಕೆಲವು ಉಂಟೆಂಬುದನ್ನು, ಯಾವ ಗುಣಶಕ್ತಿಗಳು ಮೈಸೂರು ಪ್ರಜೆಗಳಲ್ಲಿ ಇಲ್ಲವೆಂಬ ಕಾರಣದಿಂದ ಜವಾಬ್ದಾರಿ ಸರ್ಕಾರ ಧ್ಯೇಯ ಘೋಷಣೆಯನ್ನು ಮಾಡಲು ಕೂಡ ಸರ್ಕಾರವು ಒಪ್ಪದೆ ಹೋಗಿದೆಯೋ, ಆ ಗುಣ ಶಕ್ತಿಗಳನ್ನು ಸ್ವಪ್ರಯತ್ನದಿಂದ ಆದಷ್ಟು ಹೆಚ್ಚಾಗಿ ಗಳಿಸುವುದು ಈಗ ಜನಪ್ರಮುಖರ ಮುಖ್ಯ ಕರ್ತವ್ಯವಾಗಿದೆ. ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ದೇಶದಲ್ಲಿ ಪ್ರಜಾಪ್ರಯತ್ನವು ಇನ್ನೂ ಬಹುಮಟ್ಟಿಗೆ ನಡೆಯಬೇಕಾಗಿದೆ. ಅವರು ಇನ್ನೂ ಬಹುದೂರ ಸಾಗಬೇಕಾಗಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[38]

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸೂಚನೆಯಂತೆ ಹೆಚ್.ಸಿ. ದಾಸಪ್ಪ, ಕೆ.ಸಿ. ರೆಡ್ಡಿ, ಕೆ.ಟಿ. ಭಾಷ್ಯಂರವರು ಗಾಂಧೀಜಿಯ ಸಲಹೆ ಪಡೆಯಲು ವಾರ್ಧಾಕ್ಕೆ ಭೇಟಿ ನೀಡಿ "ಸಂಸ್ಥಾನದ ರಾಜಕೀಯ ಬದಲಾವಣೆಗಳನ್ನು ವಿವರಿಸಿದರೂ ಕೂಡ, ಮೈಸೂರು ಕಾಂಗ್ರೆಸ್ ನಾಯಕರ ಮಾತುಗಳನ್ನು ಒಪ್ಪದೆ, ತನ್ನ ಕಾರ್ಯದರ್ಶಿ ಮಹದೇವ ದೇಸಾಯಿ ಅವರನ್ನು ಮೈಸೂರು ಸಂಸ್ಥಾನಕ್ಕೆ ಕಳುಹಿಸಿ 'ನಿಜ ಸ್ಥಿತಿಗಳನ್ನು ಅರಿತು ನನಗೆ ವರದಿ ಮಾಡಿ' ಎಂದು ಸೂಚಿಸಿದರು. ಅದರಂತೆ ಸಂಸ್ಥಾನದಾದ್ಯಂತ ಸಂಚರಿಸಿ ಪ್ರತ್ಯೇಕ್ಷ ವರದಿಯನ್ನು ಗಾಂಧೀಜಿ ಅವರಿಗೆ ಸಲ್ಲಿಸಿದರು. ವರದಿಯಂತೆ ಮೈಸೂರು ಕಾಂಗ್ರೆಸ್ ನಾಯಕರ ಮಾತನ್ನು ಒಪ್ಪಿದ ಗಾಂಧೀಜಿ ಅವರು 'ಮೈಸೂರು ಕಾಂಗ್ರೆಸ್‌ಗೆ ಜನ ಬೆಂಬಲ ಇಲ್ಲವೆಂದು ಸರ್ಕಾರದವರು ತಿಳಿದಿರುವುದರಿಂದ, ಸತ್ಯಾಗ್ರಹ ಯಶಸ್ವಿಯಾಗಿ ನಡೆದಿರುವುದರಿಂದ ಅದನ್ನು ನಿಲ್ಲಿಸಿ ಚುನಾವಣೆಗಳಲ್ಲಿ ಭಾಗವಹಿಸುವುದು ಸೂಕ್ತವೆಂದು ಸಲಹೆ ಮಾಡಿದರು".[39]

---

38. ಶೀ.ತಾ.ಶರ್ಮ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, ಪುಟ–26.
39. ಶೀ.ತಾ. ಶರ್ಮ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, ಪುಟ–27.

ಮೂರನೆಯ ಮೈಸೂರು ಕಾಂಗ್ರೆಸ್ ಅಧಿವೇಶನ : ಶಿವಮೊಗ್ಗ–1940

ಆಜಾದ್‌ನಗರ ಧ್ವಜ ಸತ್ಯಾಗ್ರಹ

1940ರ ಏಪ್ರಿಲ್ 10ರಂದು ಮೈಸೂರು ಕಾಂಗ್ರೆಸ್‌ನ ಮೂರನೆಯ ಅಧಿವೇಶನ ಶಿವಮೊಗ್ಗದಲ್ಲಿ ಆರಂಭವಾಯಿತು. ಆ ಅಧಿವೇಶನದಲ್ಲಿ ಕೆ.ಸಿ. ರೆಡ್ಡಿ ಅವರು "ಮೈಸೂರು ಕಾಂಗ್ರೆಸ್ ಸಮಿತಿಯು ಮೂರು ವರ್ಷಗಳ ಹಿಂದೆ ಆರಂಭವಾಗಿದೆ. ಈ ಸಮಿತಿಯು ಅಂದಿನಿಂದಲೂ ಒಬ್ಬರ ನಂತರ ಮತ್ತೊಬ್ಬರು ಸಮರ್ಥ ಅಧ್ಯಕ್ಷರನ್ನು ಪಡೆಯುತ್ತಾ ಬಂದಿದೆ. ಮೊಟ್ಟ ಮೊದಲ ಅಧ್ಯಕ್ಷರು ಟಿ. ಸಿದ್ದಲಿಂಗಯ್ಯ, ಎರಡನೆಯ ಅಧ್ಯಕ್ಷರು ಹೆಚ್.ಸಿ. ದಾಸಪ್ಪ. ಈ ಇಬ್ಬರು ಅಧ್ಯಕ್ಷರು ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ಮತ್ತು ಸೌಹಾರ್ದಯುತವಾಗಿ ನಿರ್ವಹಿಸಿದ್ದಾರೆ, ಮೈಸೂರು ಕಾಂಗ್ರೆಸನ್ನು ಉನ್ನತಮಟ್ಟಕ್ಕೆ ಏರಿಸಿದ್ದಾರೆ" ಎಂದರು.

ಮುಂದುವರೆದು "ಗಾಂಧೀಜಿ ಅವರ ಸಲಹೆಯಂತೆ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಸಂಸದೀಯ ಚಟುವಟಿಕೆಗಳನ್ನು ಹಾಗೂ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು ಸರ್ಕಾರವು ಕಾಂಗ್ರೆಸ್ ಬಗೆಗಿನ ಧೋರಣೆಯನ್ನು ಬದಲಿಸದಿರುವುದರಿಂದ ಕಾಂಗ್ರೆಸ್ ತನ್ನ ಹೋರಾಟವನ್ನು ಮುಂದುವರೆಸಬೇಕಾಗಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಕಾಂಗ್ರೆಸ್ ಅನ್ನು ಸಮರ್ಥವಾಗಿ ಮುನ್ನಡೆಸಬಲ್ಲ, ಕಾಂಗ್ರೆಸ್‌ನ ಜವಾಬ್ದಾರಿಯನ್ನು ಹೊರಬಲ್ಲವರೆಂದರೆ ಕೆ.ಟಿ. ಭಾಷ್ಯಂ ಅವರೊಬ್ಬರೇ ಆದ್ದರಿಂದ ಕಾಂಗ್ರೆಸ್‌ನ ಅಧ್ಯಕ್ಷರ ಸ್ಥಾನಕ್ಕೆ ನಾನು (ಕೆ.ಸಿ. ರೆಡ್ಡಿ) ಕೆ.ಟಿ. ಭಾಷ್ಯಂ ಅವರ ಹೆಸರನ್ನು ಸೂಚಿಸುತ್ತೇನೆ" ಎಂದು ಹೇಳಿದರು.[40]

ಮೈಸೂರು ಕಾಂಗ್ರೆಸ್‌ನ ಮೂರನೆಯ ಅಧಿವೇಶನ ಏಪ್ರಿಲ್ 10, 11 ಮತ್ತು 12 ರಂದು ಶಿವಮೊಗ್ಗದಲ್ಲಿ ಕೆ.ಟಿ. ಭಾಷ್ಯಂ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧಿವೇಶನ ನಡೆಯುವ ಸ್ಥಳಕ್ಕೆ 'ಆಜಾದ್‌ನಗರ' ಎಂದು ಹೆಸರಿಡಲಾಗಿತ್ತು. ಅಧ್ಯಕ್ಷರನ್ನು ಸಾಲಂಕೃತ ಎತ್ತಿನ ಗಾಡಿಯಲ್ಲಿ ರೈಲ್ವೆ ಸ್ಟೇಷನ್‌ನಿಂದ ಮೆರವಣಿಗೆಯಲ್ಲಿ ವಾದ್ಯಗಳೊಂದಿಗೆ ಸಭಾ ಮಂಟಪಕ್ಕೆ ಕರೆದೊಯ್ಯಲಾಯಿತು. ಕೆ.ಟಿ. ಭಾಷ್ಯಂ ತಮ್ಮ ಅಧ್ಯಕ್ಷರ ಭಾಷಣದಲ್ಲಿ "ತಮ್ಮನ್ನು ಸರ್ವಾನುಮತದಿಂದ ಚುನಾಯಿಸಿದ್ದಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿದರು. 1938 ರಿಂದ ಅಂದಿನವರೆಗೆ ಸರ್ಕಾರದ ದಬ್ಬಾಳಿಕೆಯನ್ನು ವಿವರಿಸಿ, ದಿವಾನ ಮಿರ್ಜಾ ಇಸ್ಮಾಯಿಲ್ ಅವರ ನಡೆಯನ್ನು ಕಟುವಾಗಿ ಟೀಕಿಸಿದರು. ಬ್ರಿಟಿಷ್ ಭಾರತದ ಪ್ರದೇಶಗಳಲ್ಲಿ ಸ್ವಯಂ

---

40. THE MYSORE CONGRESS CONVENTION - Shimoga-1940.

ಆಡಳಿತ ಬರುವುದರ ಪ್ರಭಾವದಿಂದ ಮೈಸೂರು ಸಂಸ್ಥಾನದಲ್ಲಿಯ ಜವಾಬ್ದಾರಿ ಸರ್ಕಾರದ ಬೇಡಿಕೆಯು ಹೆಚ್ಚಿದೆ" ಎಂದು ಹೇಳಿದರು.[41]

ಅಧಿವೇಶನದಲ್ಲಿ ಕಾರ್ಯಕಾರಿ ಸಮಿತಿ ಈ ನಿರ್ಣಯಗಳನ್ನು ಅಂಗೀಕರಿಸಿತು. "ಜಯಚಾಮರಾಜ ಒಡೆಯರಿಗೆ ಅಭಿನಂದನೆ. ಸರ್ಕಾರದ ಕ್ರೂರ ನಡೆತೆಯಿಂದ ದಬ್ಬಾಳಿಕೆಗೆ ಒಳಗಾದ ಸಂಸ್ಥಾನದ ಜನತೆಗೆ ಅಭಿನಂದನೆ ಮತ್ತು ಅನುಕಂಪ, ರಾಜಕೀಯ ಬಂಧಿಗಳ ಮೇಲಿನ ಸರ್ಕಾರದ ದೌರ್ಜನ್ಯ, ಖಂಡನೆ, ಸನ್ನದುಗಳನ್ನು ಕಳೆದುಕೊಂಡ ವಕೀಲರ ಅಭಿನಂದನೆ, ಮೈಸೂರು ವೃತ್ತಪತ್ರಿಕಾ ಕಾನೂನು, ಸಾರ್ವಜನಿಕ ಕಾನೂನುಭಕ್ಕೆಗೆ ಖಂಡನೆ, ರಾಜಕೀಯ ಸುಧಾರಣಾ ವರದಿ ಖಂಡನೆ, ಸಂಸ್ಥಾನದಾದ್ಯಂತ ಕಾಂಗ್ರೆಸ್ ಸಮಿತಿಗಳ ರಚನೆಗೆ ಅನುಮೋದನೆ"[42] ಇತ್ಯಾದಿಗಳು.

ಶಿವಮೊಗ್ಗ ಅಧಿವೇಶನ ಮುಗಿದ ನಂತರ ಮೈಸೂರು ಕಾಂಗ್ರೆಸ್ ಕೆ.ಟಿ. ಭಾಷ್ಯಂ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿ ಅವರ ಸಲಹೆಯಂತೆ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್ ಸದಸ್ಯರು ಸ್ಪರ್ಧಿಸಲು ಸೂಕ್ತವ್ಯವಸ್ಥೆ ಮಾಡಿದರು. ಅಲ್ಲದೆ ಸಂಸ್ಥಾನದಾದ್ಯಂತ ಕಾಂಗ್ರೆಸ್ ನಾಯಕರೊಡನೆ ಸಂಚರಿಸಿ ಜನಜಾಗೃತಿ ಉಂಟು ಮಾಡಿದರು. "ಸರ್ಕಾರ ಹೆಜ್ಜೆ ಹೆಜ್ಜೆಗೂ ತೊಂದರೆಯನ್ನುಂಟು ಮಾಡಿದರೂ ಒಟ್ಟು 173 ಸ್ಥಾನಗಳ ಪೈಕಿ 133 ಸ್ಥಾನಗಳಿಗೆ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸಿ 119 ಸ್ಥಾನಗಳನ್ನು ಗೆದ್ದುಕೊಂಡಿತು. 39 ಸ್ಥಾನಗಳಿಗೆ ಪ್ರತಿಸ್ಪರ್ಧಿಗಳೇ ಇರಲಿಲ್ಲ. ನಂತರ ನಡೆದ ಪುರಸಭಾ ಚುನಾವಣೆಗಳ ಪ್ರಚಾರಕ್ಕೆ ಮುಂಬಯಿ ಮತ್ತು ಮದ್ರಾಸ್ ಪ್ರಾಂತಗಳಿಂದ ಕಾಂಗ್ರೆಸ್ ನಾಯಕರನ್ನು ಕರೆಯಿಸಿ ಭಾಷಣ ಮಾಡಿಸಿದರು. ಇದರಿಂದ ಕಾಂಗ್ರೆಸ್ ಹೆಚ್ಚಿನ ಸ್ಥಾನ ಪಡೆಯಲು ಸಾಧ್ಯವಾಯಿತು"[43].

ಇದರಿಂದ ದೇಶಕ್ಕೆ ದೇಶವೇ ಕಾಂಗ್ರೆಸ್‌ನ ಹಿಂದಿದೆಯೆಂಬುದು ದೃಢವಾಯಿತು. ಈ ಫಲಿತಾಂಶಗಳಿಂದ ಕೋಪಗೊಂಡ ದಿವಾನ್ ಮಿರ್ಜಾಇಸ್ಮಾಯಿಲ್ ಅವರು ಗ್ರಾಮಾಧಿಕಾರಿಗಳಾದ ಶಾನುಭೋಗರು, ಪಟೇಲರು, ಕೆಲವು ಅಧಿಕಾರಿಗಳನ್ನು ಕಾಂಗ್ರೆಸ್‌ಗೆ ಬೆಂಬಲ ನೀಡಿದರೆಂದು ಅವರ ವಿರುದ್ಧ ಅನೇಕ ಕಠಿಣ ಕ್ರಮಗಳನ್ನು ಕೈಗೊಂಡರು.[44]

---

41. ಕಾಂಗ್ರೆಸ್ ಪ್ರಕಟಣೆ : ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನ ನಿರ್ಣಯಗಳು, ಆಜಾದ್‌ನಗರ, ಶಿವಮೊಗ್ಗ – 1940.
42. ಕಾಂಗ್ರೆಸ್ ಪ್ರಕಟಣೆ : ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನ ನಿರ್ಣಯಗಳು, ಆಜಾದ್‌ನಗರ, ಶಿವಮೊಗ್ಗ – 1940.
43. ತೀ.ತಾ. ಶರ್ಮ: ಮೈಸೂರು ಸಂಸ್ಥಾನದ ಸ್ವಾತಂತ್ರ್ಯದ ಸಂಗ್ರಾಮೇತಿಹಾಸ ಸಂಗ್ರಹ, ಪುಟ–29.
44. ತೀ.ತಾ. ಶರ್ಮ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, ಪುಟ–31.

ಕಾಂಗ್ರೆಸ್ ವಕೀಲರ ಸನ್ನದುಗಳ ರದ್ದು

ಮೈಸೂರು ಸರ್ಕಾರ ಚುನಾವಣೆಗಳಲ್ಲಿ ತನಗುಂಟಾದ ಸೋಲಿನಿಂದ ಕೋಪಗೊಂಡು ಮೈಸೂರು ಕಾಂಗ್ರೆಸ್‌ನ ಮುಂಚೂಣಿ ನಾಯಕರ ಸನ್ನದುಗಳನ್ನು ರದ್ದು ಮಾಡಿತು. ಅವರೆಂದರೆ ಕೆ.ಸಿ.ರೆಡ್ಡಿ, ಹೆಚ್.ಸಿ. ದಾಸಪ್ಪ, ಕೆ.ಟಿ. ಭಾಷ್ಯಂ, ಎಸ್. ರಂಗ ರಾಮಯ್ಯ, ಕೆ. ಸಂಪಂಗಿರಾಮ್ಯಯ, ಕೆ. ಪಟ್ಟಾಭಿರಾಮನ್, ಎಂ. ಗೋವಿಂದರೆಡ್ಡಿ. ಟಿ. ರಾಮಾಚಾರ್, ಕೆ. ಹೆಂಜೇರಪ್ಪ ಮುಂತಾದ 9 ಮಂದಿ ವಕೀಲರ ಸನ್ನದುಗಳನ್ನು 'ಲೀಗಲ್ ಪ್ರಾಕ್ಟಿಷನರ್ ಕಾಯಿದೆ' ಪ್ರಕಾರ ಇವರನ್ನು ವಕೀಲರ ಪಟ್ಟಿಯಿಂದ ತೆಗೆಯಬೇಕೆಂದೂ, ಇವರು ಸಂಸ್ಥಾನದ ಯಾವ ನ್ಯಾಯಾಲಯದಲ್ಲಿಯೂ ಯಾವುದೇ ವಕಾಲತ್ತು ವಹಿಸಕೂಡದೆಂದೂ ಹೈಕೋರ್ಟ್ ತೀರ್ಮಾನಿಸಿತು. ಈ ಬಗ್ಗೆ ಹೈಕೋರ್ಟ್‌ನ ಶ್ರೇಷ್ಠ ನ್ಯಾಯಾಧೀಶರಾದ ಸರ್.ಡಿ. ಅರ್ಸಿರೈಲಿ ಅವರು ಆದೇಶ ಹೊರಡಿಸಿದರು".[45]

ಈ ಪ್ರಕರಣವು ದೇಶಾದ್ಯಂತ ಸಂಚಲನವನ್ನುಂಟು ಮಾಡಿತು. ಮೈಸೂರುಸರ್ಕಾರದ ಈ ಧಮನಕಾರಿ ನೀತಿಯನ್ನು ದೇಶಾದ್ಯಂತ ಹಲವಾರು ವೃತ್ತಪತ್ರಿಕೆಗಳಲ್ಲಿ ಖಂಡಿಸಲಾಯಿತು. ಮಹಾತ್ಮ ಗಾಂಧೀಜಿ ಅವರು ಸಹ ಈ ಬಗ್ಗೆ ದಿನಾಂಕ:13–07–1940ರಲ್ಲಿ ಹರಿಜನ ಪತ್ರಿಕೆಯಲ್ಲಿ "ಮೈಸೂರು ವಕೀಲರ ಮೇಲೆ ಬಿದ್ದ 'ಗದಾಪ್ರಹಾರ' ಎಂಬ ಲೇಖನವನ್ನು ಬರೆದರು. ಆ ಲೇಖನದಲ್ಲಿ 'ಮೈಸೂರು ನ್ಯಾಯಸ್ಥಾನದ ನ್ಯಾಯಮೂರ್ತಿಗಳು ಮೈಮೇಲೆ ಪ್ರಜ್ಞೆಇಲ್ಲದೆ ತೀರ್ಮಾನ ಕೊಟ್ಟಿದ್ದಾರೆ. ಇದರಿಂದಾಗಿ ಮೈಸೂರು ಪ್ರಜೆಗಳ ದೃಷ್ಟಿಯಲ್ಲಿ ವಕೀಲರು ಮತ್ತಷ್ಟು ದೊಡ್ಡವರೆನಿಸಿಕೊಂಡಿದ್ದಾರೆ. ಪೂರ್ವಗ್ರಹಪೀಡಿತರಾದ ನ್ಯಾಯಮೂರ್ತಿಗಳ ಘನತೆಗೆ ನಷ್ಟವಾಗಿದೆ ಎಂದು ಧೈರ್ಯವಾಗಿ ಹೇಳುತ್ತೇನೆ" ಎಂದು ಬರೆದರು.[46]

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು 1940ರಲ್ಲಿ ಕೆ.ಸಿ. ರೆಡ್ಡಿ ಅವರನ್ನು, ಸಂಸ್ಥಾನದಲ್ಲಿ ದಿವಾನ್ ಮಿರ್ಜಾಇಸ್ಮಾಯಿಲ್ ಅವರಿಂದ ಉಂಟಾಗಿರುವ ರಾಜಕೀಯ ಉದ್ರಿಗ್ಧ ಪರಿಸ್ಥಿತಿಯನ್ನು ಗಾಂಧೀಜಿ ಅವರಿಗೆ ಕೂಲಂಕುಷವಾಗಿ ತಿಳಿಸಲು ಕಳುಹಿಸಿದರು. ಕೆ.ಸಿ. ರೆಡ್ಡಿ ಅವರೇ ಹೇಳಿರುವಂತೆ "ನಾನು ಗಾಂಧೀಜಿಯ ಆಶ್ರಮದಲ್ಲಿ ಎರಡು ತಿಂಗಳು ಕಾಲ ಇದ್ದು ಮಿರ್ಜಾಇಸ್ಮಾಯಿಲ್ ಅವರು ಗಾಂಧೀಜಿ ಅವರಲ್ಲಿ ಉಂಟು ಮಾಡಿದ್ದ ಅಭಿಪ್ರಾಯವನ್ನು ಬದಲಾಯಿಸಲು ಸಾಧ್ಯವಾಯಿತು" ಎಂದಿದ್ದಾರೆ.[47]

---

45. ಕಾಂಗ್ರೆಸ್ ಪ್ರಕಟಣೆ : ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನ ನಿರ್ಣಯಗಳು, ಆಜಾದ್‌ನಗರ, ಶಿವಮೊಗ್ಗ – 1940.
46. ಕಾಂಗ್ರೆಸ್ ಪ್ರಕಟಣೆ : ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನ ನಿರ್ಣಯಗಳು, ಆಜಾದ್‌ನಗರ, ಶಿವಮೊಗ್ಗ – 1940.
47. ಆಕಾಶವಾಣಿ ಪ್ರಕಟಣೆ: ಬಾಪೂದರ್ಶನ, ಭಾಷಣ ಕವನ, ನಾಟಕಗಳ ಸಂಗ್ರಹ, 1949, ಪುಟ–38.

ಮೈಸೂರು ಕಾಂಗ್ರೆಸ್ 1941ರಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳಲ್ಲಿ ತನ್ನ ಉಮೇದುವಾರಿಕೆಯನ್ನು ಸಲ್ಲಿಸಿತು. "ಪ್ರಜಾಪ್ರತಿನಿಧಿ ಸಭೆಯ 298 ಸ್ಥಾನಗಳಲ್ಲಿ 232 ಸ್ಥಾನಗಳಿಗೆ ಅರ್ಜಿಗಳನ್ನು ಸಲ್ಲಿಸಿತು. ಇದರಲ್ಲಿ 72 ಅರ್ಜಿಗಳು ತಿರಸ್ಕೃತಗೊಂಡು 160 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 106 ಸ್ಥಾನಗಳನ್ನು ಗೆದ್ದುಕೊಂಡಿತು. ನ್ಯಾಯವಿಧಾಯಕ ಸಭೆಯ 44 ಸ್ಥಾನಗಳಲ್ಲಿ 30 ಸ್ಥಾನಗಳಿಗೆ ಅರ್ಜಿಗಳನ್ನು ಸಲ್ಲಿಸಿತು. ಇದರಲ್ಲಿ 10 ಅರ್ಜಿಗಳು ತಿರಸ್ಕೃತಗೊಂಡು 20 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 18 ಸ್ಥಾನಗಳಲ್ಲಿ ಕಾಂಗ್ರೆಸ್ ಉಮೇದುವಾರರು ಚುನಾಯಿತರಾದರು. ಇದರಿಂದ ಪ್ರಜಾಪ್ರತಿನಿಧಿ ಸಭೆಗೆ ಕೆ.ಸಿ. ರೆಡ್ಡಿ, ನ್ಯಾಯವಿಧಾಯಕ ಸಭೆಗೆ ಟಿ. ಮರಿಯಪ್ಪ ಅವರನ್ನು ಕಾಂಗ್ರೆಸ್ ಪಕ್ಷದ ನಾಯಕರನ್ನಾಗಿ ಪಕ್ಷದ ಸದಸ್ಯರು ಆಯ್ಕೆ ಮಾಡಿದರು"[48].

ಹೀಗೆ ಸರ್ಕಾರ ಎಷ್ಟೇ ತೊಂದರೆ, ಅಡ್ಡಿ, ಆತಂಕ, ಅನ್ಯಾಯ ಮಾಡಿದರೂ ಮೈಸೂರು ಕಾಂಗ್ರೆಸ್ ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿ, ಮೈಸೂರು ಸರ್ಕಾರಕ್ಕೆ ತನ್ನ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮರಣಾ ನಂತರ ಪಟ್ಟಾಭಿಷಕ್ತರಾದ ಜಯ ಚಾಮರಾಜ ಒಡೆಯರ್ ನೂತನವಾಗಿ ಚುನಾಯಿತರಾದ ಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ ತಮ್ಮ ಸಂಸ್ಥಾನದಲ್ಲಿನ ರಾಜಕೀಯ ಸಂಸ್ಥೆಗಳ ಪ್ರಗತಿಯ ಬಗ್ಗೆ ಹೆಮ್ಮೆಯಿಂದ ಮಾತನಾಡಿರುವುದು ಗಮನಾರ್ಹ. ಮಹಾರಾಜರ ಚಿಂತನೆಯು ಪ್ರಜಾಸತ್ತಾತ್ಮಕ ದೃಷ್ಟಿಕೋನವನ್ನು ಹೊಂದಿದ್ದರು. ಜವಾಬ್ದಾರಿ ಸರ್ಕಾರ ರಚನೆಯ ಬಗ್ಗೆ ಒಲವು ಹೊಂದಿಲ್ಲದಿರುವುದನ್ನು ಗಮನಿಸಬಹುದು.

ಆದರೆ ಹೋರಾಟದ ಆರಂಭದಿಂದಲೇ ಸ್ವಾತಂತ್ರ್ಯವನ್ನೂ, ಜವಾಬ್ದಾರಿ ಸರ್ಕಾರ ವನ್ನೂ ಪಡೆಯಬೇಕಾದ ಅನಿವಾರ್ಯತೆಯ ಬಗ್ಗೆ ಕೆ.ಸಿ. ರೆಡ್ಡಿ ಮತ್ತಿತರ ಕಾಂಗ್ರೆಸ್ ನಾಯಕರು ಸ್ಪಷ್ಟವಾಗಿ ಅರಿತಿದ್ದರು. ಈ ಹಿನ್ನೆಲೆಯಲ್ಲಿ 1941ರಲ್ಲಿ ಮೈಸೂರು ಕಾಂಗ್ರೆಸ್‌ನ ಮತ್ತೊಂದು ಅಧಿವೇಶನವನ್ನು ಏರ್ಪಡಿಸಲು ಕಾಂಗ್ರೆಸ್ ನಾಯಕರು ನಿರ್ಧರಿಸಿದರು.

ನಾಲ್ಕನೆಯ ಮೈಸೂರು ಕಾಂಗ್ರೆಸ್ ಅಧಿವೇಶನ : ಹರಿಹರ-1941

ವಿನೋಬಾನಗರ ಧ್ವಜ ಸತ್ಯಾಗ್ರಹ

ಮೈಸೂರು ಕಾಂಗ್ರೆಸ್‌ನ ನಾಲ್ಕನೆಯ ಅಧಿವೇಶನ ಹರಿಹರದ ಬಳಿ ನಿರ್ಮಿತವಾಗಿದ್ದ ವಿನೋಬಾ ನಗರದಲ್ಲಿ 1941ರ ಏಪ್ರಿಲ್ 7, 8 ಮತ್ತ 9ರಂದು ನಡೆಯಿತು. ಎಚ್.

48. ದೇವೇಗೌಡ .ಟಿ.ಡಿ : ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆ ಮತ್ತು ರಾಜಕೀಯ, ಪುಟ-189.

ಸಿದ್ಧಯ್ಯನವರು ಅಧ್ಯಕ್ಷತೆವಹಿಸಿದ್ದರು. ಸ್ವಾಗತಾಧ್ಯಕ್ಷರಾಗಿ ಎಸ್. ನಿಜಲಿಂಗಪ್ಪನವರು ಕಾರ್ಯನಿರ್ವಹಿಸಿದರು. ಈ ಅಧಿವೇಶನಕ್ಕೆ ಬಾಬು ರಾಜೇಂದ್ರಪ್ರಸಾದ್‌ರು ಆಗಮಿಸಿದ್ದರು. ಈ ಅಧಿವೇಶನದಲ್ಲಿ "ಮೈಸೂರು ಕಾಂಗ್ರೆಸ್ ಚುನಾವಣೆಗಳಲ್ಲಿ ಭಾಗವಹಿಸಿ, ಶಾಸನ ಸಭೆಗಳನ್ನು ಪ್ರವೇಶಿಸಿರುವ ಉದ್ದೇಶವೆಂದರೆ ಸಂಸ್ಥಾನದ ಜನತೆಗೆ ಸಾಧ್ಯವಾದಷ್ಟು ಉಪಕಾರ ವನ್ನು ಮಾಡುವುದು. ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯ ಕಡೆ ಗಮನಕೊಡುವುದು. ಇವುಗಳನ್ನು ಸಾಧಿಸಬೇಕಾದರೆ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು" ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.[49]

1941ರ ಮೇ 31ರಂದು ಮೈಸೂರು ಸಂಸ್ಥಾನದ ದಿವಾನರಾಗಿ 15 ವರ್ಷಗಳ ಕಾಲ ಅಧಿಕಾರ ನಡೆಸಿದ ಮಿರ್ಜಾ ಇಸ್ಮಾಯಿಲ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರ ನ್ಯಾಮತಿ ಮಾಧವರಾಯರು ದಿವಾನರಾಗಿ ಅಧಿಕಾರ ವಹಿಸಿಕೊಂಡರು. ಈ ಬದಲಾವಣೆ ದೇಶದ ರಾಜಕೀಯ ಪರಿಸ್ಥಿತಿ ತಿಳಿಗೊಳ್ಳಬಹುದೆಂದು ಮೈಸೂರು ಕಾಂಗ್ರೆಸ್ ಭಾವಿಸಿತು. ಆದರೆ ದಿವಾನರು ಮೈಸೂರು ಕಾಂಗ್ರೆಸ್‌ನ ಮನವಿಗಳನ್ನು ಧಿಕ್ಕರಿಸಿ ಅಧಿಕಾರ ಚಲಾಯಿಸಲಾರಂಭಿಸಿದ್ದು ಕಾಂಗ್ರೆಸ್ ನಾಯಕರನ್ನು ಚಕಿತಗೊಳಿಸಿತು.

ಕ್ರಿಪ್ಸ್ ರಾಯಭಾರ ಮತ್ತು ಮೈಸೂರು ಕಾಂಗ್ರೆಸ್

1939ರಲ್ಲಿ ಪ್ರಾರಂಭವಾಗಿದ್ದ ಎರಡನೆಯ ವಿಶ್ವಯುದ್ಧಕ್ಕೆ ಭಾರತೀಯರ ಅನುಮತಿ ಪಡೆಯದೆ ಭಾರತವು ಕೂಡ ಎಳೆಯಲ್ಪಟ್ಟಿತ್ತು. ಇದರಿಂದ ಕೋಪಗೊಂಡ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 'ಯುದ್ಧದ ಗುರಿಗಳೇನು? ಅವುಗಳನ್ನು ಭಾರತಕ್ಕೆ ಹೇಗೆ ಅನ್ವಯಿಸುವಿರಿ' ಎಂದು ಕೇಳಿತು. ಅದಕ್ಕೆ ಬ್ರಿಟನ್ ಯುದ್ಧದಲ್ಲಿ ಜಯಗಳಿಸಲು ಭಾರತದ ಪೂರ್ಣ ಸಹಕಾರ ಕೇಳಿತು. ಇದೇ ಕಾಲಕ್ಕೆ ಮಿತ್ರ ರಾಷ್ಟ್ರಗಳು ಪ್ರಧಾನಿ ಚರ್ಚಿಲ್ ಮೇಲೆ ಭಾರತದೊಡನೆ ರಾಜಕೀಯ ಒಪ್ಪಂದ ಮಾಡಿಕೊಳ್ಳಲು ಒತ್ತಡ ತಂದವು.

ಅದರಂತೆ ಬ್ರಿಟನ್ ಸರ್ ಸ್ಟಾಫರ್ಡ್ ಕ್ರಿಪ್ಸ್‌ರನ್ನು ಭಾರತದ ರಾಜಕೀಯ ಪಕ್ಷಗಳ ನೆರವನ್ನು ಪಡೆಯಲು ಕಳುಹಿಸಿತು. ಕ್ರಿಪ್ಸ್ ಮಾತುಕತೆಯಲ್ಲಿ "ದೇಶೀಯ ಸಂಸ್ಥಾನಗಳ ಪ್ರಸ್ತಾಪ ಬರದೆ ಇದ್ದ ಕಾರಣ ಸಂಸ್ಥಾನಗಳ ಪ್ರಜೆಗಳಿಗೆ ಇದರಿಂದಾಗುವ ಕಳವಳವನ್ನು ಕುರಿತು ಮೈಸೂರು ಕಾಂಗ್ರೆಸ್ ನಾಯಕರು ಗಾಂಧೀಜಿ ಅವರಲ್ಲಿ ಪ್ರಸ್ತಾಪ ಮಾಡಿದರು. ಆಗ ಗಾಂಧೀಜಿ ದೆಹಲಿಯಲ್ಲಿ ನಡೆಯುವ ಮಾತುಕತೆಗಳ ಕಾಲಕ್ಕೆ ಸಂಸ್ಥಾನ ಪ್ರಜೆಗಳ

49. THE MYSORE CONGRESS CONVENTION - Harihara-1941.

ಹಿತರಕ್ಷಣೆಯ ಪ್ರಸ್ತಾಪ ಮಾಡುವುದಾಗಿ ಭರವಸೆ ನೀಡಿದರು. ಆದರೆ ಮಾತುಕತೆಗಳು ತೃಪ್ತಿಕರವಾಗದೇ ಕ್ರಿಪ್ಸ್ ಬರಿಗೈಯಲ್ಲಿ ಬ್ರಿಟನ್‌ಗೆ ವಾಪಸ್ಸಾದರು".[50]

ಐದನೆಯ ಮೈಸೂರು ಕಾಂಗ್ರೆಸ್ ಅಧಿವೇಶನ : ಚನ್ನಪಟ್ಟಣ–1942

ನೆಹರುನಗರ ಧ್ವಜ ಸತ್ಯಾಗ್ರಹ

ಮೈಸೂರು ಕಾಂಗ್ರೆಸ್‌ನ ಐದನೆಯ ಅಧಿವೇಶನವು 1942ರ ಏಪ್ರಿಲ್ 12ರಂದು ಚನ್ನಪಟ್ಟಣದಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಟಿ. ಸುಬ್ರಮಣ್ಯಂ ವಹಿಸಿದ್ದರು. ಅಧಿವೇಶನ ನಡೆಯುವ ಸ್ಥಳಕ್ಕೆ ನೆಹರುನಗರ ಎಂದು ನಾಮಕರಣ ಮಾಡಲಾಗಿತ್ತು. ಟಿ. ಸುಬ್ರಮಣ್ಯಂ ಅವರು ಅಧ್ಯಕ್ಷ ಭಾಷಣದಲ್ಲಿ "ಸಂಸ್ಥಾನದಲ್ಲಿ ಇಲ್ಲಿಯವರೆಗೆ ನಡೆದ ಘಟನೆಗಳನ್ನು, ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಕಾಂಗ್ರೆಸ್ ಪ್ರಯತ್ನ, ಅಸ್ಪೃಶ್ಯತೆ ನಿವಾರಣೆ, ಪಾನನಿರೋಧ, ಹಿಂದಿ ಭಾಷಾ ಪ್ರಚಾರ, ಖಾದಿ ಪ್ರಚಾರ, ಭಾರತದ ಸ್ವಾತಂತ್ರ್ಯ ಮತ್ತು ದೇಶೀಯ ಸಂಸ್ಥಾನಗಳ ಪರಿಸ್ಥಿತಿ, ಸರ್ ಸ್ಟಾಪರ್ಡ್‌ಕ್ರಿಪ್ಸ್ ಸಲಹೆಗಳು, ಸರ್ಕಾರದಿಂದ ಕೋಮುವಾರು ಗಲಭೆಗಳಿಗೆ ಪ್ರೇರಣೆಗೆ ಟೀಕೆ, ಪ್ರತ್ಯೇಕ ಚುನಾವಣಾ ಪದ್ಧತಿಗೆ ವಿರೋಧ, ಕಾರ್ಯಕರ್ತರ ಮೇಲೆ ಪೊಲೀಸ್ ದೌರ್ಜನ್ಯ ಖಂಡನೆ, ಗ್ರಾಮ ಕೈಗಾರಿಕೆಗಳ ಬಗ್ಗೆ ಪ್ರಸ್ತಾಪ, ನಿರುದ್ಯೋಗದ ಸಮಸ್ಯೆ ದಿವಾನ್ ನ್ಯಾಮತಿಮಾಧವರಾಯರ ಬಗ್ಗೆ ಟೀಕೆ ಇತ್ಯಾದಿಗಳನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಕಾರ್ಯಕರ್ತರು ಎಲ್ಲಾ ತ್ಯಾಗಕ್ಕೂ ಸಿದ್ಧರಿರಬೇಕೆಂದು" ಕರೆ ನೀಡಿದರು.[51]

ಟಿ. ಸುಬ್ರಮಣ್ಯಂ ಅವರು 1942 ರಿಂದ 1946ರವರೆಗೂ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ಬುಗಿಲೆದಿದ್ದರಿಂದ 1942ರ ನಂತರ ಮೈಸೂರು ಕಾಂಗ್ರೆಸ್‌ನ ಅಧಿವೇಶನಗಳು ಸಂಸ್ಥಾನದಲ್ಲಿ ನಡೆಯಲಿಲ್ಲ.

ಕ್ವಿಟ್ ಇಂಡಿಯಾ ಚಳವಳಿ ಮತ್ತು ಮೈಸೂರು ಕಾಂಗ್ರೆಸ್

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ವತಿಯಿಂದ 1942ರ ಆಗಸ್ಟ್ 7 ಮತ್ತು 8 ರಂದು ಮುಂಬಯಿ 'ಗವಾಲಿಯಾ ಬ್ಯಾಂಕ್' ಎಂಬಲ್ಲಿ ಸಭೆ ನಡೆಯಿತು. ಮೌಲಾನಾ ಆಜಾದ್ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕ್ರಿಪ್ಸ್ ನಿಯೋಗದ ವೈಫಲ್ಯದಿಂದ

---

50. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–53.
51. THE MYSORE CONGRESS CONVENTION - Chennapattna-1942.

ಬೇಸರಗೊಂಡಿದ್ದ ಮಹಾತ್ಮ ಗಾಂಧೀಜಿ ಅವರು ಬ್ರಿಟಿಷ್‌ರನ್ನು ಭಾರತ ಬಿಟ್ಟು ತೊಲಗುವಂತೆ ಒತ್ತಾಯಿಸುವ ಹಾಗೂ ಪ್ರತಿಯೊಬ್ಬ ಭಾರತೀಯನಿಗೂ ಯಾವುದೇ ನಾಯಕನ ಅಥವಾ ಸಂಸ್ಥೆಯ ಮಾರ್ಗದರ್ಶನಕ್ಕೆ ಕಾಯದೆ ಭಾರತದ ಸ್ವಾತಂತ್ರ್ಯಕ್ಕಾಗಿ 'ಮಾಡು ಇಲ್ಲವೆ ಮಡಿ' ಎಂಬ ಠರಾವನ್ನು ಮಂಡಿಸಿದರು. ಇದು ಅಹಿಂಸಾತ್ಮಕ ದಂಗೆ ಅಥವಾ ಆಯುಧ ರಹಿತ ಕ್ರಾಂತಿ. ಅದಕ್ಕಾಗಿ ಅಹಿಂಸೆಯ ಎಲ್ಲ ಬಲವನ್ನು ಜನ ಸಮುದಾಯವು ಬಳಸಬೇಕೆಂದು ಗಾಂಧೀಜಿ ಅವರು ಕರೆ ನೀಡಿದರು.

ಬ್ರಿಟಿಷರೇ 'ಭಾರತ ಬಿಟ್ಟು ತೊಲಗಿ' ಎಂದು ಗಾಂಧೀಜಿ ಅವರು ಕರೆ ನೀಡಿದುದಕ್ಕೆ ಪ್ರತಿಯಾಗಿ 1942ರ ಆಗಸ್ಟ್ 8ರಂದು ಬಂಧಿಸಲಾಯಿತು. ಮುಂದಿನ ಒಂದೆರಡು ದಿನಗಳಲ್ಲಿಯೇ ಭಾರತದಾದ್ಯಂತ ಪ್ರಮುಖ ಕಾಂಗ್ರೆಸ್ ನಾಯಕರನ್ನು ಬಂಧಿಸಲಾಯಿತು. ಅದರಂತೆ 1942 ಆಗಸ್ಟ್ 12ರಂದು ಮೈಸೂರು ಸಂಸ್ಥಾನದ ಮೈಸೂರು ಕಾಂಗ್ರೆಸ್‌ನ ಕೆ.ಸಿ. ರೆಡ್ಡಿ ಹಾಗೂ ಇತರ ನಾಯಕರನ್ನು ಬಂಧಿಸಲಾಯಿತು.

ಭಾರತ ಬಿಟ್ಟು ತೊಲಗಿ ಚಳವಳಿಯಿಂದ ಪ್ರೇರಣೆಗೊಂಡ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಪುಟ್ಟ ಗ್ರಾಮವಾದ ಈಸೂರಿನಲ್ಲಿ ಸರ್ಕಾರದ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಮಾಡಿ ತಮ್ಮ ಊರಿಗೆ ಪ್ರವೇಶಿಸದಂತೆ ತಡೆಯೊಡ್ಡಿದ್ದರು. ಈ ಗಲಭೆಯಲ್ಲಿ ಅಮಲ್ದಾರ್ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಕೊಲೆಯಾದರು. ಈ ಕೊಲೆಯ ಆರೋಪದಲ್ಲಿ ಈಸೂರಿನ ಗುರಪ್ಪ, ಮಲ್ಲಪ್ಪ, ಹಾಲಪ್ಪ, ಶಂಕರಪ್ಪ, ಸೂರ್ಯನಾರಾಯಣಾಚಾರ್ ಈ ಐವರಿಗೆ ಶಿವಮೊಗ್ಗ ನ್ಯಾಯಾಲಯದಿಂದ ಮರಣ ದಂಡನೆ ಶಿಕ್ಷೆ ವಿಧಿಸಲಾಯಿತು. ಆಗ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದ ಕೆ.ಸಿ. ರೆಡ್ಡಿ ಮತ್ತಿತರರು ಈಸೂರು ಗಲಭೆಯ ಆರೋಪಿಗಳಿಂದ ಹೈಕೋರ್ಟ್‌ಗೆ ಅಪೀಲು ಹಾಕಿಸಿದರು. ಆದರೂ ಐವರನ್ನು ಗಲ್ಲು ಶಿಕ್ಷೆಯಿಂದ ಪಾರು ಮಾಡಲಾಗಲಿಲ್ಲ.

ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳ ಕಾಂಗ್ರೆಸ್‌ನ ಪ್ರಮುಖ ನಾಯಕರ ಬಂಧನಗಳಾದವು. ಅದೇ ರೀತಿ ಸಂಸ್ಥಾನದಲ್ಲಿದ್ದ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಚಿನ್ನದ ಗಣಿ ಪ್ರದೇಶಗಳಲ್ಲಿದ್ದ ಆಜಾದ್ ಯುತ್ ಲೀಗ್, ಕೆ.ಸಿ.ಆರ್. ಯುತ್ ಲೀಗ್, ತಿಲಕ್ ವಾಲಿಬನ್ ಸಂಘಗಳನ್ನ ಪ್ರತಿಬಂಧಿಸಲಾಯಿತು. ದಾವಣಗೆರೆ, ಶ್ರವಣಬೆಳಗೊಳಗಳಲ್ಲಿ ನಡೆದ ಗೋಲಿಬಾರ್‌ನಲ್ಲಿ ಹಲವರು ಮರಣ ಹೊಂದಿದರು.

ಮೈಸೂರು ಸಂಸ್ಥಾನದಾದ್ಯಂತ ನಡೆದ ಈ ಚಳವಳಿ ಜನಸಾಮಾನ್ಯರು ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಕಾರ್ಮಿಕರು, ವಕೀಲರು, ಉಪಾಧ್ಯಾಯರು, ರೈತರು, ವ್ಯಾಪಾರಿಗಳು, ಸ್ವಯಂ ಪ್ರೇರಿತರಾಗಿ ಪಾಲ್ಗೊಂಡಿದ್ದರು. ಇವರು ಸರ್ಕಾರಿ ಕಟ್ಟಡಗಳ ನಾಶ, ಅಂಚೆ ಕಚೇರಿಗಳ ಲೂಟಿ, ರೈಲುಹಳಿಗಳ ನಾಶ, ವಿದ್ಯುತ್ ತಂತಿನಾಶ, ದೂರವಾಣಿ ತಂತಿ

ಕತ್ತರಿಸುವುದು, ಈಚಲು ಮರಗಳನ್ನು ಕಡಿಯುವುದು, ಸರ್ಕಾರಿ ವಾಹನಗಳಿಗೆ ಬೆಂಕಿ ಇಡುವುದು, ಭೂ ಕಂದಾಯ ಹಣ ಲೂಟಿ, ಸೇತುವೆಗಳ ನಾಶ, ಗ್ರಾಮಗಳ ದಾಖಲೆ ಕಟ್ಟಡದ ಮೇಲೆ ದಾಳಿ ಮುಂತಾದವುಗಳನ್ನು ನಡೆಸಿದರು.

ಈ ಚಳವಳಿಯಲ್ಲಿ ನೂರಕ್ಕೂ ಹೆಚ್ಚು ಜನರು ಪೊಲೀಸರ ಗುಂಡಿಗೆ ಬಲಿಯಾದರು, ಏಳು ಸಾವಿರಕ್ಕೂ ಹೆಚ್ಚು ಜನರ ಬಂಧನವಾಯಿತು. 23 ರೈಲು ನಿಲ್ದಾಣಗಳು, 35 ಅಂಚೆ ಕಚೇರಿಗಳು, 200ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಸರ್ಕಾರಿ ದಾಖಲೆಗಳ ನಾಶ, ಮೂರು ಲಕ್ಷಕ್ಕೂ ಹೆಚ್ಚು ಜುಲ್ಮಾನೆ ಹಾಕಲಾಯಿತು. ಈ ಮಧ್ಯೆ 1943ರ ಜನವರಿ 24ರಂದು ಕೆ.ಸಿ. ರೆಡ್ಡಿ ಅವರನ್ನು ಬಿಡುಗಡೆ ಮಾಡಲಾಯಿತು. ಕಾರಣವೇನೆಂದರೆ ಕೆ.ಸಿ. ರೆಡ್ಡಿ ಅವರು ಜೈಲಿನಲ್ಲಿ ಕಿವಿನೋವಿನ ಬಾಧೆಗೆ ಒಳಗಾಗಿ ಸರಿಯಾಗಿ ಚಿಕಿತ್ಸೆಯಾಗದೆ ಒಂದು ಕಿವಿ ಕಿವುಡಾಯಿತು.[52]

1943ರಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದ ಕೆ.ಸಿ. ರೆಡ್ಡಿ ಅವರು ಬೆಂಗಳೂರಿನಲ್ಲಿ ಬಹಳ ಕಷ್ಟದ ದಿನಗಳನ್ನು ಕಳೆದರು. ಪ್ರತಿದಿನ ಕಾಂಗ್ರೆಸ್ ಕಚೇರಿಗೆ ಬರುತ್ತಿದ್ದರು. ಅನುಯಾಯಿಗಳನ್ನು ಜೊತೆಗೆ ಸದಾ ಹಿಡಿದಿಟ್ಟುಕೊಳ್ಳುವ ಕಷ್ಟದ ಕೆಲಸವನ್ನು ಕೆ.ಸಿ. ರೆಡ್ಡಿ ಮಾಡಿದರು. 1943ರ ಡಿಸೆಂಬರ್‌ನಲ್ಲಿ ಸರ್ಕಾರ ಮೈಸೂರು ಕಾಂಗ್ರೆಸ್ ನಾಯಕರನ್ನು ಬಿಡುಗಡೆ ಮಾಡಿತು. 1944ರ ಮೇ 9ರಂದು ಮಹಾತ್ಮ ಗಾಂಧೀಜಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದ ನಂತರ ಕ್ವಿಟ್ ಇಂಡಿಯಾ ಚಳುವಳಿಯು ಅಂತ್ಯಗೊಂಡಿತು.

1945ರ ಫೆಬ್ರವರಿಯಲ್ಲಿ ಪ್ರಜಾಪ್ರತಿನಿಧಿ ಸಭೆಗೆ ನಡೆದ ಚುನಾವಣೆಯಲ್ಲಿ ಮೈಸೂರು ಕಾಂಗ್ರೆಸ್‌ನ 202 ಉಮೇದುವಾರರಲ್ಲಿ 130 ಸ್ಥಾನಗಳನ್ನು, ನ್ಯಾಯವಿಧಾಯಕ ಸಭೆಗೆ ನಡೆದ ಚುನಾವಣೆಯಲ್ಲಿ 26 ಸ್ಥಾನಗಳಿಗೆ ಸ್ಪರ್ಧಿಸಿ 20 ಸ್ಥಾನಗಳನ್ನು ಪಡೆಯಿತು. ನ್ಯಾಯ ವಿಧಾಯಕ ಸಭೆಗೆ ಕಾಂಗ್ರೆಸ್ ನಾಯಕರಾಗಿ ಕೆ.ಸಿ. ರೆಡ್ಡಿ, ಪ್ರಜಾಪ್ರತಿನಿಧಿ ಸಭೆಗೆ ಕೆ. ಹನುಮಂತಯ್ಯನವರನ್ನು ಕಾಂಗ್ರೆಸ್ ನಾಯಕರಾಗಿ ಆಯ್ಕೆ ಮಾಡಿದರು.[53]

1946ರ ಜುಲೈನಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದ ಅಮೇರಿಕಾದ ಪತ್ರಿಕೋದ್ಯೋಗಿ ಮಿ॥ ಬ್ರೈಸ್‌ಫರ್ಡ್ ಅವರು 'ಸಂಸ್ಥಾನದ ಕ್ಷಾಮಪ್ರದೇಶಗಳ ಪ್ರವಾಸ ಮಾಡಿ ಬಂದು ಮೈಸೂರು ಆಡಳಿತ ಮುರಿದು ಬಿದ್ದಿದೆ' ಎಂದು ಟೀಕೆ ಮಾಡಿದರು. ಆದರೆ ಸರ್ಕಾರದ ಆಹಾರಾಧಿಕಾರಿ ಜಿ. ಸುಂದರರಾಯರು 'ಶುದ್ಧ ಅಸಂಭವ, ಅನೃತ ಮತ್ತು ಅನ್ಯಾಯ ಎಂದು ನ್ಯಾಯವಿಧಾಯಕ ಸಭೆಯಲ್ಲಿ ಆರೋಪವನ್ನು ಅಲ್ಲಗಳೆದರು.

---

52. ಸೂರ್ಯನಾಥ ಕಾಂತ್ : ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ, ಪುಟ–181.
53. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–77.

ಆಗ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ನಾಯಕರಾದ ಕೆ.ಸಿ.ರೆಡ್ಡಿ ಅವರು 'ಮಿ॥ ಬ್ರೈಸ್‌ಫರ್ಡ್ ರಂತಹ ಮಹನೀಯರನ್ನೇ ಸರ್ಕಾರ ಅಲ್ಲಗಳೆಯುವುದು ಸರಿಯಲ್ಲ' ಎಂದು ಹೇಳಿದರು.[54]

1946ರ ಆಗಸ್ಟ್ 1 ರಂದು ಮೈಸೂರು ಸಂಸ್ಥಾನದ ದಿವಾನರಾಗಿ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ನೇಮಕಗೊಂಡರು. ಇದೇ ಸಮಯದಲ್ಲಿ ಮೈಸೂರು ಕಾಂಗ್ರೆಸ್ ಕೆ.ಸಿ. ರೆಡ್ಡಿ ಅವರನ್ನು ಸಂಸ್ಥಾನದ 'ರಾಜಕೀಯ ಸುಧಾರಣೆ'ಯ ಬಗ್ಗೆ ದಿವಾನ್‌ರೊಡನೆ ಚರ್ಚಿಸಲು ಆಯ್ಕೆ ಮಾಡಿತು. ಕೇಂದ್ರದಲ್ಲಿ ಭಾರತೀಯರ ನಾಯಕರಿಂದ ಕೂಡಿದ ಮಧ್ಯಂತರ ಸರ್ಕಾರದ ರಚನೆಗೆ ಬ್ರಿಟಿಷ್ ಸರ್ಕಾರ ಅವಕಾಶ ಕಲ್ಪಿಸಿತ್ತು. ಇದರಿಂದಾಗಿ ಮೈಸೂರು ಕಾಂಗ್ರೆಸ್ ಚಳವಳಿಯ ಮಾರ್ಗವನ್ನು ಬಿಟ್ಟು ಸಂಸ್ಥಾನದ ಸರ್ಕಾರದ ಮೇಲೆ ಒತ್ತಡ ಹೇರುವ ತಂತ್ರವನ್ನು ಅಳವಡಿಸಿಕೊಂಡರು. ಸ್ವಾತಂತ್ರ್ಯದ ನಿರೀಕ್ಷೆಯಲ್ಲಿದ್ದ ಮೈಸೂರು ಕಾಂಗ್ರೆಸ್ ನಾಯಕರು ತಾವು ಭಾಗವಹಿಸುವ ಸಭೆ ಸಮಾರಂಭಗಳಲ್ಲೆಲ್ಲಾ ಜನರನ್ನು ಉದ್ದೇಶಿಸಿ ಸ್ವಾತಂತ್ರ್ಯದ ಅವಶ್ಯಕತೆ, ಸ್ವಾತಂತ್ರ್ಯದ ಹೋರಾಟದಲ್ಲಿ ಎಲ್ಲರೂ ಪಾಲ್ಗೊಳ್ಳ ಬೇಕಾದ ಅವಶ್ಯಕತೆಯನ್ನು ಮನದಟ್ಟಾಗುವಂತೆ ತಿಳಿಸುತ್ತಿದ್ದರು.

ಮೈಸೂರಿನ ವಾಣಿವಿಲಾಸ ಮೊಹಲ್ಲಾದಲ್ಲಿ 'ತಿಲಕ ಸಂಘ'ದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಗಾಂಧೀಜಿ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ಕೆ.ಸಿ. ರೆಡ್ಡಿ ಅವರು ಮುಖ್ಯ ಅತಿಥಿಯಾಗಿ ಆಹ್ವಾನಿತರಾಗಿದ್ದರು. ಆ ಸಮಾರಂಭದಲ್ಲಿ ರೆಡ್ಡಿ ಅವರು ಅಲ್ಲಿ ನೆರೆದಿದ್ದ ತರುಣ ವಿದ್ಯಾರ್ಥಿಗಳನ್ನು ಕುರಿತು "ಮೈಸೂರು ದೇಶದಲ್ಲಿ ನಿರಂಕುಶಾಧಿಕಾರ ಮಿತಿಮೀರಿ ಹೋಗುತ್ತಿದೆ, ಇನ್ನು ಸಹಿಸುವುದಕ್ಕಾಗುವುದಿಲ್ಲ. ಬಹುಬೇಗ ಇಲ್ಲಿ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಗುತ್ತದೆ, ಅದಕ್ಕೆ ತಾವೆಲ್ಲ ನೆರವಾಗಬೇಕು. ಶೀಲ, ಶೌರ್ಯ, ತ್ಯಾಗ ತೋರಿಸಬೇಕು, ಈ ಅಪೂರ್ವ ದೇಶಸೇವೆಗಾಗಿ ನಿಮಗೆಲ್ಲ ಸ್ವಾಗತ ಕೋರುತ್ತಿದ್ದೇನೆ" ಎಂದು ಹೇಳಿದರು.[55]

ಹೀಗೆ ತಾವು ಪಾಲ್ಗೊಳ್ಳುವ ಕಾರ್ಯಕ್ರಮಗಳಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳಲು ಜನರನ್ನು ಹಾಗೂ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಪ್ರಯತ್ನಿಸುತ್ತಿದ್ದರು. ಸ್ವಾತಂತ್ರ್ಯವನ್ನು ಗಳಿಸುವುದು ಅವರ ಜೀವನದ ಮಹೋನ್ನತ ಗುರಿಯಂತಾಗಿತ್ತು ಎಂಬುದು ಇದರಿಂದ ತಿಳಿಯುತ್ತದೆ.

---

54. ಸತ್ಯವಾದಿ ಪತ್ರಿಕೆ : ದಿನಾಂಕ : 08-07-1946.
55. ವಿಶ್ವ ಕರ್ನಾಟಕ ಪತ್ರಿಕೆ : ದಿನಾಂಕ : 13-10-1946.

ಆರನೆಯ ಮೈಸೂರು ಕಾಂಗ್ರೆಸ್ ಅಧಿವೇಶನ : ಬೆಂಗಳೂರು–1946

ಸುಭಾಷ್‌ನಗರ ಧ್ವಜ ಸತ್ಯಾಗ್ರಹ

ಮೈಸೂರು ಕಾಂಗ್ರೆಸ್‌ನ ಆರನೆಯ ಅಧಿವೇಶನವು 1946ರ ನವೆಂಬರ್ 2 ಮತ್ತು 3ರಂದು ಬೆಂಗಳೂರಿನಲ್ಲಿ ನಡೆಯಿತು. ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಅಧಿವೇಶನವು ಅವರ ರಾಜಕೀಯ ಜೀವನದ ಬಹುಪ್ರಮುಖ ಮೈಲಿಗಲ್ಲೆಂದು ಹೇಳಬಹುದು. ಹಲವಾರು ವರ್ಷಗಳ ನಿರಂತರ ಹೋರಾಟದ ಸಾಧನೆಗಾಗಿ ದೊರೆತ ಈ ಗೌರವವು ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಅತ್ಯಂತ ಪ್ರಮುಖ ಐತಿಹಾಸಿಕ ಘಟನೆಯಾಗಿದೆ. ಬೆಂಗಳೂರಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುವ ಕೆಲವೇ ದಿನಗಳಿಗೆ ಮೊದಲು ನೇತಾಜಿ ಸುಭಾಷ್ ಚಂದ್ರ ಭೋಸರ ಮರಣವಾಗಿದ್ದುದರಿಂದ ಅವರ ಗೌರವಾರ್ಥ ಅಧಿವೇಶನ ನಡೆಯುವ ಸ್ಥಳಕ್ಕೆ 'ಸುಭಾಷ್‌ನಗರ' ಎಂದು ನಾಮಕರಣ ಮಾಡಲಾಗಿತ್ತು. ಆ ಪ್ರದೇಶವೇ ಇಂದಿನ ಕೆಂಪೇಗೌಡ ಬಸ್ ನಿಲ್ದಾಣವಾಗಿರುವುದು.

ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಕೆ.ಸಿ. ರೆಡ್ಡಿ ಅವರು ಸಂಸ್ಥಾನದ ಪ್ರಜೆಗಳ ನ್ಯಾಯವಾದ ಬೇಡಿಕೆಗಳ ಬಗ್ಗೆ, ಮಹಾರಾಜರು ಮತ್ತು ಅಧಿಕಾರಿಗಳಿಗಿರುವ ಔದಾಸೀನ್ಯ ವನ್ನು ಖಂಡಿಸಿದರು. "ನಮ್ಮ ಧ್ಯೇಯ ಫಲಿಸುವವರೆಗೆ ಶಾಸನಸಭೆಗಳಲ್ಲಿ ಆಯಾಕಟ್ಟು ಸ್ಥಾನಗಳನ್ನು ನಾವು ಆಕ್ರಮಿಸಿಕೊಂಡು ಸಭೆಗಳ ಮುಖಾಂತರವಾಗಿಯೂ ನಮ್ಮ ಹೋರಾಟವನ್ನು ಮುಂದುವರೆಸುವುದು ಸೂಕ್ತವಾದ ಮಾರ್ಗ. ನಮ್ಮ ಚಳವಳಿ ಉಗ್ರವಾಗಬೇಕು, ನಮ್ಮ ಧ್ಯೇಯ ಸಾಧನೆಗಾಗಿ ಅಹಿಂಸೆಯ ಅಡಿಗಲ್ಲಿನ ಮೇಲೆ ಎಲ್ಲಾ ವಿಧವಾದ ತ್ಯಾಗ ಸಂಕಟಗಳಿಗೆ ನಾವು ಸಿದ್ಧರಾಗಬೇಕು, ಭಾರತದಲ್ಲಿ ಆಗುತ್ತಿರುವ ಕ್ರಾಂತಿಕಾರಕ ಬದಲಾವಣೆ ಗಳನ್ನು ಮೈಸೂರು ಪ್ರಜೆಗಳು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಸ್ವತಂತ್ರ ಭಾರತದಲ್ಲಿ ಮೈಸೂರು ಸಹಾ ಸ್ವತಂತ್ರವಾಗಲು ಶ್ರಮಿಸಬೇಕು, ನಾವು ನೋವುಗಳನ್ನು ಸಹಿಸಬೇಕು, ಬಲಿದಾನಕ್ಕೆ ಸಿದ್ಧರಾಗಬೇಕು, ಸಂಸ್ಥಾನದ ಮಂತ್ರಿಮಂಡಲವು ಬೇಜವಾಬ್ದಾರಿಯಿಂದ ಕೂಡಿದ್ದು ಪ್ರಜೆಗಳಿಗೆ ಅದರಲ್ಲಿ ನಂಬಿಕೆ ಇಲ್ಲವೆಂದೂ ಅದನ್ನು ಕೊನೆಗಾಣಿಸಲು ಸತ್ಯಾಗ್ರಹ ಚಳವಳಿ ಅವಶ್ಯಕವೆಂದೂ" ಘೋಷಿಸಿದರು.[56]

---

56. ವೀರತಪ್ಪ .ಕೆ: ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಪುಟ–113.

ಮೈಸೂರು ಸಂಸ್ಥಾನದಲ್ಲಿ ಕೆ.ಸಿ. ರೆಡ್ಡಿ ಪ್ರವಾಸ

ಮೈಸೂರು ಕಾಂಗ್ರೆಸ್ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದು ಮೇಲಿಂದ ಮೇಲೆ ಕೇಳುತ್ತಲೇ ಇದೆ. ದೀರ್ಘಕಾಲವಾದರೂ ಈ ಬೇಡಿಕೆಯನ್ನು ಪೂರೈಸಲಿಲ್ಲ. ಇನ್ನು ಸಾವಕಾಶ ಮಾಡಿದರೆ ಸಹಿಸುವುದಕ್ಕಾಗುವುದಿಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಹುರುಪಿನಿಂದ ಚಟುವಟಿಕೆಗಳನ್ನು ನಡೆಸತೊಡಗಿದರು.

1946ರ ನವೆಂಬರ್ 8ರಂದು ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು "ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಜನತೆಯನ್ನು ಸತ್ಯಾಗ್ರಹಕ್ಕಾಗಿ ಸಂಘಟನೆ ಮಾಡಬೇಕೆಂದು ನಿರ್ಧರಿಸಿತು. ಅದರಂತೆ ಕೆ.ಸಿ. ರೆಡ್ಡಿ ಅವರು 1946ರ ನವೆಂಬರ್, ಡಿಸೆಂಬರ್ ಹಾಗೂ 1947ರ ಜನವರಿ ತಿಂಗಳಲ್ಲಿ ಒಟ್ಟು ಮೂರು ತಿಂಗಳುಗಳ ಕಾಲ ಸಂಸ್ಥಾನದಾದ್ಯಂತ ಪ್ರವಾಸ ಕೈಗೊಂಡರು. ಈ ಅವಧಿಯಲ್ಲಿ ರೆಡ್ಡಿ ಅವರು ಸುಮಾರು 170ಕ್ಕೂ ಹೆಚ್ಚು ಊರುಗಳಿಗೆ ಭೇಟಿ ನೀಡಿದ್ದರು. ತುಮಕೂರು, ಚಿಕ್ಕನಾಯಕನಹಳ್ಳಿ, ಚಿಕ್ಕಮಗಳೂರು, ಹಾಸನ ಮುಂತಾದ ಪುರಸಭೆಗಳವರು, ಕಡೂರು, ಶಿವಮೊಗ್ಗ ಜಿಲ್ಲಾ ಬೋರ್ಡುಗಳವರು ಕೆ.ಸಿ. ರೆಡ್ಡಿ ಅವರಿಗೆ ಮಾನಪತ್ರಗಳನ್ನು ಅರ್ಪಿಸಿ ಮೈಸೂರು ಕಾಂಗ್ರೆಸ್‌ನ ಬಗ್ಗೆ ತಮ್ಮ ವಿಶ್ವಾಸವನ್ನು ಸೂಚಿಸಿದರು.

ಕೆ.ಸಿ. ರೆಡ್ಡಿ ಅವರು ತಮ್ಮ ಪ್ರವಾಸದ ಸಂದರ್ಭದಲ್ಲಿ ಸಂಸ್ಥಾನದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಸಭೆಗಳನ್ನು ನಡೆಸಿದರಲ್ಲದೆ ಹರಿಜನ ಕೇರಿ, ಖಾದಿ ಕೇಂದ್ರಗಳು, ಕಸ್ತೂರ ಬಾ ಶಿಬಿರ, ಚರಕ ಸಂಘ ಹಾಗೂ ಹಲವಾರು ಕಾರ್ಮಿಕ ಸಂಘಗಳಿಗೂ ಭೇಟಿ ನೀಡಿದ್ದರು".[57]

ಕೋಮು ಗಲಭೆಗಳು

ಕೆ.ಸಿ. ರೆಡ್ಡಿಯವರು ಸಂಸ್ಥಾನದಾದ್ಯಂತ ಪ್ರವಾಸ ಮಾಡುತ್ತಿದ್ದ ಸಂದರ್ಭದಲ್ಲಿ 1946 ಡಿಸೆಂಬರ್ 5ರಂದು ಇಂದಿನ ರಾಮನಗರ ಜಿಲ್ಲೆಯ (ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ) ಚನ್ನಪಟ್ಟಣಕ್ಕೂ ಭೇಟಿ ನೀಡಿದ್ದರು. ಅವರನ್ನು ಸಂಭ್ರಮದಿಂದ ಸ್ವಾಗತಿಸಿದ ಸ್ಥಳೀಯ ಜನರು ಚನ್ನಪಟ್ಟಣದ ಕೊಲ್ಲಾಪುರದಮ್ಮನ ದೇವಾಲಯದಿಂದ ಅಲಂಕೃತ 40 ಜೊತೆ ಎತ್ತುಗಳೊಂದಿಗೆ ಭಾರೀ ಮೆರವಣಿಗೆಯಲ್ಲಿ ರೆಡ್ಡಿ ಅವರನ್ನು ಕರೆದೊಯ್ದರು. ಈ ಮೆರವಣಿಗೆಯೂ ಮುಸ್ಲಿಂ ಬೀದಿಯಲ್ಲಿ ಹೋಗುತ್ತಿದ್ದಾಗ ಕೆಲವು

57. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–80.

ಮುಸ್ಲಿಂ ಯುವಕರ ಕಿಡಿಗೇಡಿತನದಿಂದ ಗಲಾಟೆಯಾಯಿತು. ದುಷ್ಟನೊಬ್ಬನು ರಥಕ್ಕೆ ಕಟ್ಟಲಾಗಿದ್ದ ಎತ್ತಿಗೆ ಚಾಕು ಹಾಕಿದುದರಿಂದ ಪರಿಸ್ಥಿತಿ ಪ್ರಕ್ಷುಬ್ಧಗೊಂಡಿತು. ಪರಿಣಾಮ ವಾಗಿ ನಡೆದ ಹಿಂದೂ ಮುಸ್ಲಿಂ ಗಲಭೆಯಲ್ಲಿ ಚನ್ನಪಟ್ಟಣದ ಹೈಸ್ಕೂಲ್ ಹೆಡ್‌ಮಾಸ್ಟರ್ ಅವರ ಕೊಲೆಯಾಯಿತು. ಗಲಭೆಯು ಹೆಚ್ಚಾದುದರಿಂದ ಗಲಭೆಯನ್ನು ತಡೆಯುವ ನೆಪದಿಂದ ಪೊಲೀಸರು ಹಾರಿಸಿದ ಗುಂಡಿನಿಂದ ಇಬ್ಬರು ಮೃತಪಟ್ಟು ಅನೇಕರು ಗಾಯಗೊಂಡರು. ಈ ಗಲಭೆಯಲ್ಲಿ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಎಚ್.ಕೆ. ವೀರಣ್ಣಗೌಡರು ಮುಸ್ಲಿಂರ ಹಲ್ಲೆಗೆ ತುತ್ತಾದರು.[58]

ಚನ್ನಪಟ್ಟಣದ ಗಲಭೆಯ ಸಂದರ್ಭದಲ್ಲಿಯೇ ಕೋಲಾರದ ಚಿನ್ನದ ಗಣಿ ಕಾರ್ಮಿಕರಲ್ಲಿ ಘರ್ಷಣೆ ಸಂಭವಿಸಿ ಕಾರ್ಮಿಕರು 78 ದಿನಗಳ ಕಾಲ ಮುಷ್ಕರ ನಡೆಸಿದರು. ಈ ಸಂದರ್ಭದಲ್ಲಿ ಸಂಭವಿಸಿದ ಸಂಘರ್ಷವನ್ನು ನಿಯಂತ್ರಿಸಲು ಪೊಲೀಸರು ನಡೆಸಿದ ಗೋಲಿಬಾರ್‌ನಿಂದ ಆರು ಜನರು ಮೃತಪಟ್ಟರು. ಅನೇಕರು ಗಾಯಗೊಂಡರು. ಈ ಗಲಭೆಯ ನೆಪದಿಂದ ಸರ್ಕಾರ ಸಂಸ್ಥಾನದಾದ್ಯಂತ ಸಭೆಗಳು ಹಾಗೂ ಮೆರವಣಿಗೆಗಳು ನಡೆಯದಂತೆ ನಿಷೇಧಾಜ್ಞೆ ಜಾರಿ ಮಾಡಿದರು. ಈ ಮೂಲಕ ಸಂಸ್ಥಾನದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯನ್ನು ನಿಲ್ಲಿಸಬಹುದೆಂಬ ಹಂಚಿಕೆಯಿಂದ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿತು.

ಆದರೆ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷತೆಯ ಜವಾಬ್ದಾರಿಯನ್ನು ಹೊತ್ತಿದ್ದ ಕೆ.ಸಿ. ರೆಡ್ಡಿ ಅವರು ಸರ್ಕಾರದ ಹುನ್ನಾರವನ್ನು ಸ್ಪಷ್ಟವಾಗಿ ತಿಳಿದುಕೊಂಡು ಕಾಂಗ್ರೆಸ್‌ನ ಹೋರಾಟವನ್ನು ಮುಂದುವರೆಸುವಲ್ಲಿ ಸಫಲರಾದರು.

ಕಾಂಗ್ರೆಸ್‌ನ ಒಗ್ಗಟ್ಟನ್ನು ಮುರಿಯಲು ಸರ್ಕಾರವು ಹಲವು ಕುತಂತ್ರಗಳನ್ನು ಮಾಡಿ ಕಾಂಗ್ರೆಸ್‌ನ ಸದಸ್ಯರಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿ ಒಡಕನ್ನುಂಟು ಮಾಡಲು ಪ್ರಯತ್ನಿಸುತ್ತಿತ್ತು ಹಾಗೂ ಕಾಂಗ್ರೆಸ್‌ನ ಪದಾಧಿಕಾರಿಗಳು ಮಂತ್ರಿಪದವಿಗಾಗಿ ಪ್ರಯತ್ನಿಸುತ್ತಿದ್ದಾರೆಂದು ಸುದ್ದಿ ಹುಟ್ಟಿಸಿತ್ತು. ಸರ್ಕಾರದ ಈ ಸಂಚುಗಳನ್ನು ಗ್ರಹಿಸಿದ ಕೆ.ಸಿ. ರೆಡ್ಡಿ ಅವರು "ಸಂಸ್ಥಾನದಲ್ಲಿ ಕೆಲ ಸ್ವಾರ್ಥಿಗಳು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿ ಭೇದಕಲ್ಪಿಸಲು ಮತ್ತು ಕಾಂಗ್ರೆಸ್‌ನವರು ಮಂತ್ರಿಪದವಿ ಪಡೆಯಲು ಆಶಿಸುತ್ತಿರುವರೆಂದು ಹೇಳುತ್ತಿದ್ದು, ಇದು ಸಾಧ್ಯವಿಲ್ಲವೆಂದೂ, ಜನರೆಲ್ಲ ಒಗ್ಗಟ್ಟಿನಿಂದ,ಸೌಹಾರ್ದದಿಂದ ಬಾಳ ಬೇಕೆಂದು ಕಾಂಗ್ರೆಸ್, ಮೈಸೂರಿನ 73 ಲಕ್ಷ ಪ್ರಜೆಗಳಿಗೂ ಸುಖ-ಶಾಂತಿ ದೊರೆಯುವಂತೆ ಸಾಧಿಸುವುದೆಂದು" ಸಭೆಯೊಂದರಲ್ಲಿ ಮಾರ್ಮಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[59]

58. ಕೋಣಂದೂರು ವೆಂಕಪ್ಪಗೌಡ : ನವ-ಮೈಸೂರು ಶಿಲ್ಪಿ, ಪುಟ-99.
59. ಸತ್ಯವಾದಿ ಪತ್ರಿಕೆ : ದಿನಾಂಕ : 07-12-1946.

ಕೆ.ಸಿ. ರೆಡ್ಡಿ ಅವರ ಈ ಅಭಿಪ್ರಾಯವನ್ನು ಗಮನಿಸಿದರೆ ಕಾಂಗ್ರೆಸ್‌ನ ಒಗ್ಗಟ್ಟನ್ನು ಮುರಿಯಲು ಸರ್ಕಾರದ ವತಿಯಿಂದ ನಡೆಯುತ್ತಿದ್ದ ಸಂಚುಗಳನ್ನು ರೆಡ್ಡಿ ಅವರು ಸರಿಯಾಗಿ ಗ್ರಹಿಸಿ ಅಷ್ಟೇ ಚಾತುರ್ಯದಿಂದ ಸಂಚಿಗೆ ಪ್ರತ್ಯುತ್ತರ ನೀಡಿರುವುದನ್ನು ತಿಳಿಯಬಹುದಾಗಿದೆ. ಈ ಒಂದು ಪ್ರಸಂಗದಿಂದಲೇ ರೆಡ್ಡಿ ಅವರ ನಿಪುಣ ರಾಜತಂತ್ರಜ್ಞತೆ ತಿಳಿದು ಬರುತ್ತದೆ.

1947ರ ಜನವರಿ 1 ಮತ್ತು 2ರಂದು ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಮೈಸೂರಿನ ಮಹಾರಾಜರಿಗೆ ಒಂದು ವಿಜ್ಞಾಪನಾ ಪತ್ರವನ್ನು ಕೊಡಲು ತೀರ್ಮಾನಿಸಿದರು. ಆ ಪತ್ರದಲ್ಲಿ "ಕ್ಯಾಬಿನೆಟ್ ಮಿಷನ್ ಸಂಸ್ಥಾನಗಳಿಗೆ ಸಂಬಂಧಪಟ್ಟಂತೆ ಮಾಡಿರುವ ಸಲಹೆಗಳು ತೃಪ್ತಿಕರವಾಗಿಲ್ಲ. ರಾಷ್ಟ್ರದ ಐಕ್ಯತೆಗೆ ಭಂಗ ತರುವಂತಿವೆ. ಭಾರತದ ಒಕ್ಕೂಟದಲ್ಲಿ ಸಂಸ್ಥಾನಗಳು ಸೇರಲೇಬೇಕು. ಅವು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಬೇಕು. ಈ ಪ್ರಾತಿನಿಧ್ಯ ಸಂಸ್ಥಾನದ ಪ್ರಜೆಗಳಿಗೆ ಇರಬೇಕು. ಚುನಾಯಿತ ಸದಸ್ಯರೇ ರಾಜ್ಯಾಂಗ ಸಭೆಯ ಸದಸ್ಯರಾಗಬೇಕು. ಈ ರೀತಿ ಶಿಫಾರಸ್ಸುಗಳ ತಿದ್ದುಪಡಿಯಾಗದೆ ಹೋದರೆ ಕ್ಯಾಬಿನೆಟ್ ಮಿಷನ್ ಸಲಹೆಗಳು ಅಂಗೀಕಾರ ಅರ್ಹವಲ್ಲ" ಎಂದು ತಿಳಿಸಲಾಗಿತ್ತು.[60]

ಮೈಸೂರು ಸಂಸ್ಥಾನವು ಭಾರತ ಒಕ್ಕೂಟದಲ್ಲಿ ಸೇರಲೇಬೇಕೆಂಬ ಹಂಬಲ ಕೆ.ಸಿ. ರೆಡ್ಡಿ ಅವರಿಗೆ ಎಷ್ಟು ತೀವ್ರವಾಗಿತ್ತು ಎನ್ನುವುದನ್ನು ಈ ವಿಜ್ಞಾಪನ ಪತ್ರದಿಂದ ತಿಳಿಯಬಹುದು. ಚುನಾಯಿತ ಸದಸ್ಯರು ಮಾತ್ರವೇ ರಾಜ್ಯಾಂಗ ಸಭೆಯ ಸದಸ್ಯರಾದರೆ ಮಾತ್ರ ಜನರ ನಿಜವಾದ ಪ್ರತಿನಿಧಿಗಳಾಗಿ ಅವರು ಕಾರ್ಯನಿರ್ವಹಿಸುವರು ಎಂಬ ರೆಡ್ಡಿ ಅವರ ಗ್ರಹಿಕೆಯನ್ನು ಇದು ಸಮರ್ಥವಾಗಿ ಬಿಂಬಿಸುತ್ತದೆ. ರೆಡ್ಡಿ ಅವರ ಪ್ರಜಾಪ್ರಭುತ್ವವಾದಿ ಚಿಂತನೆಯನ್ನು ಪ್ರತಿಫಲಿಸುತ್ತದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೀಡಿದ ವಿಜ್ಞಾಪನಾ ಪತ್ರಕ್ಕೆ ಉತ್ತರವಾಗಿ ಮೈಸೂರಿನ ಮಹಾರಾಜ ಜಯಚಾಮರಾಜ ಒಡೆಯರ್ ಅವರು 1947ರ ಜನವರಿ 8ರಂದು "ರಾಜಕೀಯ ಪಕ್ಷಗಳೊಡನೆ ಚರ್ಚಿಸಿ ಪರಿಸ್ಥಿತಿಯನ್ನು ವಿಮರ್ಶೆ ಮಾಡಿ ಪರಿವರ್ತನೆಯಾಗುತ್ತಿರುವ ಭಾರತದ ರಾಜ್ಯಾಂಗದಲ್ಲಿ ಮೈಸೂರು ಹೇಗೆ ವರ್ತಿಸಬೇಕೆಂಬ ವಿಚಾರವಾಗಿ ಸೂಕ್ತ ಸಲಹೆಗಳನ್ನು ನೀಡಲು ದಿವಾನರಿಗೆ ಸೂಚಿಸಿರುವುದುದಾಗಿ" ಹೇಳಿಕೆಯನ್ನು ನೀಡಿದರು.[61]

---

60. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–81.
61. ವೀರತಪ್ಪ .ಕೆ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಪುಟ–114.

ಮಹಾರಾಜರ ಈ ಹೇಳಿಕೆಯು ಕಾಂಗ್ರೆಸ್ ಕಾರ್ಯಕರ್ತರಲ್ಲಿ ತಮ್ಮ ಚಳವಳಿಯನ್ನು ತೀವ್ರಗೊಳಿಸಬೇಕೆಂಬ ಕೆಚ್ಚುಮೂಡಲು ಕಾರಣವಾಯಿತು. ಈ ಮಧ್ಯೆ ಬ್ರಿಟನ್‌ನ ಪ್ರಧಾನಿ ಕ್ಲೆಮೆಂಟ್‌ಆಟ್ಲೆ "ಬ್ರಿಟಿಷರು ಆಡಳಿತಾಧಿಕಾರವನ್ನು ಭಾರತೀಯರಿಗೆ ವಹಿಸಿ ಭಾರತದಿಂದ ತೆರಳುವುದಾಗಿ 1947ರ ಫೆಬ್ರವರಿ 20ರಂದು ಘೋಷಿಸಿ ನೂತನ ನೀತಿಯನ್ನು ಹಾಗೂ ಬದಲಾವಣೆಗಳನ್ನು ಹೊಸ ವೈಸ್‌ರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅವರು ಜಾರಿಗೆ ತರುತ್ತಾರೆಂದು ತಿಳಿಸಿದರು". ಈ ಹೇಳಿಕೆಯನ್ನು ಭಾರತೀಯರೆಲ್ಲರೂ ಸಂತೋಷದಿಂದ ಸ್ವಾಗತಿಸಿದರು.

ಇದನ್ನು ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಹಾಗೂ ಇತರ ನಾಯಕರು ಕೂಡ ಕ್ಲೆಮೆಂಟ್‌ಆಟ್ಲೆ ಅವರ ಹೇಳಿಕೆಯನ್ನು ಸ್ವಾಗತಿಸಿದರು. ಈಗಲಾದರೂ ಮೈಸೂರು ಮಹಾರಾಜರು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಜಾರಿಗೆ ತರುತ್ತಾರೆಂದು ಆಶಿಸಿದರು. ಅಲ್ಲದೆ ಕೆಲವು ಸಂಸ್ಥಾನಗಳು ಭಾರತದ ರಾಜ್ಯಾಂಗ ರಚನಾ ಸಭೆಗೆ ಸದಸ್ಯರನ್ನು ಕಳುಹಿಸಿರುವಾಗ ಮೈಸೂರು ಸರ್ಕಾರವು ಕಳಿಸದಿರುವುದಕ್ಕೆ ಕಾಂಗ್ರೆಸ್ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು. ಅಲ್ಲದೆ ಮೊದಲೇ ತೀರ್ಮಾನಿಸಿದಂತೆ ಸತ್ಯಾಗ್ರಹ ಚಳವಳಿಯನ್ನು 1947ರ ಮೇ 1ರಂದು ಆರಂಭಿಸಲು ತೀರ್ಮಾನಿಸಿ ಸಾರ್ವಜನಿಕರ ಸಹಕಾರವನ್ನು ಕೋರಿತು.[62]

"ಮೈಸೂರು ಸಂಸ್ಥಾನದಿಂದ ಕಾಂಗ್ರೆಸ್ ಸದಸ್ಯರು ಭಾರತದ ರಾಜ್ಯಾಂಗ ರಚನಾ ಸಭೆಗೆ ಹೋದರೆ ಅಲ್ಲಿ ಇತರೇ ಸಂಸ್ಥಾನಗಳ ಸದಸ್ಯರು ಹಾಗೂ ನಾಯಕರನ್ನು ಭೇಟಿಯಾಗಿ ಅವರಿಂದ ಪ್ರೇರಿತರಾಗಿ ಸಂಸ್ಥಾನದಲ್ಲಿಯೂ ಚಳವಳಿಗಳು ಹೆಚ್ಚಬಹುದೆಂಬ ಭೀತಿಯಿಂದ ಮೈಸೂರು ಸರ್ಕಾರವು ರಾಜ್ಯಾಂಗ ರಚನಾ ಸಭೆಗೆ ಸದಸ್ಯರನ್ನು ಕಳುಹಿಸಲಿಲ್ಲ" ಎಂಬುದನ್ನು ಗ್ರಹಿಸಿದ ಕೆ.ಸಿ. ರೆಡ್ಡಿ ಅವರು ಚಳವಳಿಯನ್ನು ಆರಂಭಿಸಲು ತೀರ್ಮಾನಿಸಿದರು.

1947ರ ಮಾರ್ಚ್ 19 ಮತ್ತು 20ರಂದು ರಾಷ್ಟ್ರಪತಿ ಆಚಾರ್ಯ ಕೃಪಲಾನಿ ಮತ್ತು ಶ್ರೀಮತಿ ಸುಚೇತ ಕೃಪಲಾನಿ ಅವರು ಮೈಸೂರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಹಲವಾರು ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡಿದ್ದರು. ಇವರ ಜೊತೆಯಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಮುಂತಾದ ನಾಯಕರು ಸಹ ಪಾಲ್ಗೊಂಡಿದ್ದರು. ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಲ್ಲಿ ಏರ್ಪಡಿಸಿದ್ದ ಭಾರೀ ಬಹಿರಂಗಸಭೆಯಲ್ಲಿ ಆಚಾರ್ಯ ಕೃಪಲಾನಿ ಮತ್ತು ಸುಚೇತ ಕೃಪಲಾನಿ ಭಾಷಣ ಮಾಡಿದ ಈ ಸಂದರ್ಭದಲ್ಲಿ ಕೆ.ಸಿ. ರೆಡ್ಡಿ ಅವರು ಸಂಸ್ಥಾನದ ಜನತೆಯ ವಂತಿಗೆಯಿಂದ ಸಂಗ್ರಹಿಸಿದ್ದ 10,233 (ಹತ್ತು ಸಾವಿರದ

62. ವೀರತಪ್ಪ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ಪುಟ–115.

ಇನ್ನೂರ ಮೂವತ್ತು ಮೂರು) ರೂಪಾಯಿಗಳ ನಿಧಿಯನ್ನು ಕೃಪಲಾನಿಯವರಿಗೆ 'ಕಾಂಗ್ರೆಸ್ ಪಕ್ಷದ ನಿಧಿ'ಗೆ ಕೊಡುಗೆಯಾಗಿ ಅರ್ಪಿಸಿದರು.[63]

ಸಂಸ್ಥಾನದಲ್ಲಿ ಮೈಸೂರು ಕಾಂಗ್ರೆಸ್‌ವತಿಯಿಂದ ನಡೆಸುತ್ತಿದ್ದ ಚಳವಳಿಗಳ ನಡುವೆಯೂ ರೆಡ್ಡಿ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಚುವಟಿಕೆಗಳ ಆಗಾಧ ವೆಚ್ಚಗಳಿಗೋಸ್ಕರ ತಮ್ಮ ಕೈಲಾದ ನೆರವು ನೀಡುವುದಕ್ಕೋಸ್ಕರ ಜನಸಾಮಾನ್ಯರಿಂದ ದೇಣಿಗೆ ಸಂಗ್ರಹಿಸಿ ಕೊಡುವ ಕಾರ್ಯ ಮಾಡುತ್ತಿದ್ದುದು ಪ್ರಶಂಸನೀಯ. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್‌ನ ಚಳವಳಿಗಳು ಎಷ್ಟು ಮುಖ್ಯವೋ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಚಳವಳಿಗಳು ಇನ್ನೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿವೆ. ಈ ಚಳವಳಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಯಶಸ್ಸನ್ನು ಪಡೆದರೆ, ಮೈಸೂರು ಕಾಂಗ್ರೆಸ್ ಸಹ ಯಶಸ್ಸನ್ನು ಪಡೆದಂತೆ ಎಂಬುದಾಗಿ ಸರಿಯಾಗಿ ಗ್ರಹಿಸಿದ್ದ ಕೆ.ಸಿ. ರೆಡ್ಡಿ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳಿಗೆ ನೆರವು ನೀಡುವುದಕ್ಕೋಸ್ಕರ ನಿಧಿ ಸಂಗ್ರಹಣೆ ಹಾಗೂ ಅರ್ಪಣೆಯಂತಹ ಕೆಲಸದಲ್ಲಿ ತೊಡಗುತ್ತಿದ್ದರು. ಇಂತಹ ನಿದರ್ಶನಗಳಿಂದ ರೆಡ್ಡಿ ಅವರ ದೂರಾಲೋಚನೆ ಹಾಗೂ ರಾಜಕೀಯ ಮುತ್ಸದ್ದಿತನವನ್ನು ಕಾಣಬಹುದು.

ನಿರ್ಣಾಯಕ ಬಂಗಾರಪೇಟೆ ಸಭೆ

ಇದೇ ಸಂದರ್ಭದಲ್ಲಿಯೇ ಮೈಸೂರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಕೆ.ಸಿ. ರೆಡ್ಡಿ ಅವರ ಸ್ವಂತ ಕಾರ್ಯಕ್ಷೇತ್ರವಾದ ಕೋಲಾರ ಜಿಲ್ಲೆಯಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸಬೇಕೆಂದು ತೀರ್ಮಾನಿಸಿದರು.

1947ರ ಮಾರ್ಚ್ 29 ಮತ್ತು 30ರಂದು ಕೋಲಾರ ಜಿಲ್ಲೆಯ ಬೌರಿಂಗ್‌ಪೇಟೆ (ಇಂದಿನ ಬಂಗಾರಪೇಟೆ) ಯಲ್ಲಿ ಮೈಸೂರು ಕಾಂಗ್ರೆಸ್‌ನ ಅಧಿವೇಶನವು ನಡೆಯಿತು. ಈ ಅಧಿವೇಶನವು ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಅತ್ಯಂತ ಮಹತ್ವದ ಅಧಿವೇಶನವೆಂದು ಹೇಳಬಹುದು. ಈ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ದಾನಿಗಳು ಆದ ರಾಜಾ ಆದಿ ನಾರಾಯಣ ಶೆಟ್ಟಿ ವಹಿಸಿದ್ದರು. ಬೆಂಗಳೂರಿನಿಂದ 29ರಂದು ಬೆಳಗ್ಗೆ ರೈಲಿನಲ್ಲಿ ಬಂದಿಳಿದ ಕೆ.ಸಿ. ರೆಡ್ಡಿ ಅವರನ್ನು ಅಭೂತಪೂರ್ವ ಸ್ವಾಗತದೊಂದಿಗೆ ರೈಲು ನಿಲ್ದಾಣದಿಂದ ಸ್ವಾಗತ ಸಮಿತಿಯವರು ಕರೆದೊಯ್ದರು. ಸಂಜೆ 4–15ಕ್ಕೆ ಆರಂಭವಾದ ಅಧಿವೇಶನದ ವೇದಿಕೆಯಲ್ಲಿ

63. ಪ್ರಕಟಣೆ : ಮೈಸೂರು ಕಾಂಗ್ರೆಸ್ : ಮಾರ್ಚ್ 1947.

ಕೆ.ಸಿ. ರೆಡ್ಡಿ ಅವರೊಡನೆ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಹೆಚ್.ಸಿ. ದಾಸಪ್ಪ, ಕೆ.ಟಿ. ಭಾಷ್ಯಂ ಹಾಗೂ ಎಂ.ವಿ. ಕೃಷ್ಣಪ್ಪ ಮುಂತಾದ ನಾಯಕರಿದ್ದರು.

ಅಧ್ಯಕ್ಷರ ಪೀಠದಿಂದ ಕೆ.ಸಿ. ರೆಡ್ಡಿ ಅವರು ಸುಭಾಷ್ ನಗರದ ಅಧಿವೇಶನದಿಂದೀಚೆಗೆ ದೇಶದಲ್ಲಿ ಮಹತ್ವಪೂರಿತ ಬದಲಾವಣೆಗಳಾಗಿವೆ. ಬ್ರಿಟಿಷರು 1948ನೇ ಜೂನ್ ತಿಂಗಳೊಳಗೆ ಭಾರತ ಬಿಟ್ಟು ಹೊರಡುವುದಾಗಿ ಘೋಷಿಸಿದ್ದಾರೆ. ಈ ಪ್ರಚಂಡ ಸಾಧನೆಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಾರಣವಾಗಿದೆ. ಈ ಹರ್ಷಸಂಗತಿಯ ನಡುವೆ ವಿಷಾದ ವಿಚಾರವೊಂದಿದೆ, ದೇಶದಲ್ಲಿ ಅಲ್ಲಲ್ಲಿ ಆಗುತ್ತಿರುವ ಕೋಮುವಾರು ಘರ್ಷಣೆಗಳಿಗಾಗಿ ನಾವೆಲ್ಲ ದುಃಖಿಸಬೇಕಾಗಿದೆ. ಇಂತಹ ಪರ್ವ ಸಮಯದಲ್ಲಿ ಸರ್ವರೂ ಭ್ರಾತೃಭಾವದಿಂದ ಇರಬೇಕಾದುದು ಅವಶ್ಯಕ. ಗಾಂಧೀಜಿ ಅವರು ಗ್ರಾಮ ಗ್ರಾಮಗಳಿಗೂ ಹೋಗಿ ಎಲ್ಲರ ಅನ್ಯೋನ್ಯತೆಗಾಗಿ ದುಡಿಯುತ್ತಿದ್ದಾರೆ.

ಬ್ರಿಟಿಷರು ಭಾರತ ಬಿಟ್ಟು ಹೊರಟ ಕೂಡಲೇ 'ಪ್ಯಾರ ಮೌಂಟ್‌ಸಿ' (ಇಂಡಿಯಾ ಸರ್ಕಾರ ಸಂಸ್ಥಾನಗಳ ಮೇಲೆ ಹೊಂದಿದ್ದ ಪರಮಾಧಿಕಾರ) ಕೊನೆಗಾಣುತ್ತದೆ. ಇಲ್ಲಿಯವರೆಗೆ ಬ್ರಿಟಿಷರ ಅಧೀನದಲ್ಲಿದ್ದ ರಾಜರುಗಳಿಗೆ ಸ್ವಾತಂತ್ರ್ಯ ದೊರಕಿದಂತಾಗುತ್ತದೆ. ಇದೆಲ್ಲ ಜನತೆಯು ಹೂಡಿದ ಹೋರಾಟದ ಫಲ. ರಾಜರಿಗೆ ಈ ಸ್ವಾತಂತ್ರ್ಯವನ್ನು ಪ್ರಜೆಗಳು ಸಂಪಾದಿಸಿ ಕೊಟ್ಟಿದ್ದಾರೆ. ಆದರೆ ಜನತೆಯ ನಿತ್ಯಜೀವನ ದುರ್ಭರವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ವಿಶೇಷ ಅವಶ್ಯಕತೆಯಿದೆ. ಸುಭಾಷ್ ನಗರದ ನಿರ್ಣಯಾನುಸಾರ ಜವಾಬ್ದಾರಿ ಸರ್ಕಾರಕ್ಕಾಗಿ ಅವಶ್ಯಕವಿದ್ದರೆ ಸತ್ಯಾಗ್ರಹ ಕೂಡ ಹೂಡಬೇಕಾಗಿದೆ ಎಂಬುದು ನಿಮಗೆಲ್ಲ ತಿಳಿದ ವಿಷಯ. ಕಾರ್ಯಕಾರಿ ಸಮಿತಿಯವರು ಸರ್ಕಾರಕ್ಕೆ ಮೂರು ವಿಚಾರಗಳನ್ನು ಕುರಿತು ಸ್ಪಷ್ಟನೆಯನ್ನು ಕೇಳಿದ್ದರು.

1. ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುತ್ತದೆ.
2. ದಿವಾನರು ರಾಜಕೀಯ ಪರಿಪಾಲನೆ ವೈಯಕ್ತಿಕವಾಗಿ ನಡೆಸಬಾರದು. ಈ ಕೆಲಸ ರಾಜ್ಯಾಂಗ ರಚನಾ ಸಭೆಯ ಕೈಯಲ್ಲಿರಬೇಕು.
3. ಈ ಸುಧಾರಣೆಗಳ ನಿರ್ಧಾರಕ್ಕೆ ಎಷ್ಟು ಕಾಲ ಬೇಕು? ಎಂಬ ಸ್ಪಷ್ಟನೆಯನ್ನು ಬಯಸಿದೆ.

ಇವುಗಳಿಗೆ ಸರ್ಕಾರದಿಂದ ಈವರೆಗೂ ಉತ್ತರವೇನೂ ಬಂದಿಲ್ಲ. ದಿವಾನರ ವಿಳಂಬ ನೀತಿ, ಬುದ್ಧಿವಂತಿಕೆ ಮಾತುಗಳಿಂದ ರಾಜಕೀಯ ಸುಧಾರಣೆಗಳೇನೂ ಸಾಧ್ಯವಿಲ್ಲ. ಈ ಮಧ್ಯೆ ಸರ್ಕಾರದ ಆಡಳಿತಯಂತ್ರ ತೀರಕೆಟ್ಟಿದೆ. ಲಂಚ, ರುಷುವತ್ತುಗಳು ಉನ್ನತ

ಸರ್ಕಾರಿ ಅಧಿಕಾರಿಗಳವರೆಗೂ ವ್ಯಾಪಿಸಿ ಬಿಟ್ಟಿದೆ. ಇತ್ತೀಚೆಗೆ ಸಂಸ್ಥಾನದಲ್ಲಿ ನಡೆದ ಒಂದು ಪ್ರಸಂಗ ಇದಕ್ಕೆ ನಿದರ್ಶನ. ಮಂತ್ರಿಗಳೂ, ಹೈಕೋರ್ಟ್ ನ್ಯಾಯಾಧೀಶರೂ ಕೂಡ ಅನುಮಾನಕ್ಕೆ ಒಳಗಾಗಿದ್ದಾರೆ ಎಂದ ಮೇಲೆ ಸರ್ಕಾರಕ್ಕೇನು ಕೀರ್ತಿ ಬಂದಿತು ಎಂದು ಹೇಳಿ 'ಸತ್ಯಾಗ್ರಹ ನಿರ್ಣಯ ಅನಿವಾರ್ಯ' ಎಂದು ಅಭಿಪ್ರಾಯಪಟ್ಟರು.

ಈ ಅಧಿವೇಶನದಲ್ಲಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1 ಶ್ರೀಮನ್ಮಹಾರಾಜರ ಸಂದೇಶ ಅಸ್ಪಷ್ಟ ಅನಿರ್ದಿಷ್ಟ ಮತ್ತು ಅತೃಪ್ತಿಕರವಾಗಿದೆ.

2 ರಾಜ್ಯಾಂಗ ರಚನಾ ಕಾರ್ಯವನ್ನು ಚುನಾಯಿತ ಪ್ರತಿನಿಧಿಗಳ ರಾಜ್ಯಾಂಗ ರಚನಾ ಪರಿಷತ್ತಿಗೆ ವಹಿಸಬೇಕು.

3 ಹೊಸ ರಾಜ್ಯಾಂಗ ಆಚರಣೆಗೆ ಬರುವವರೆಗೆ ಶಾಸನ ಸಭೆಗಳ ಬೆಂಬಲವಿರುವ ತಾತ್ಕಾಲಿಕ ಸರ್ಕಾರ ರಚನೆಯಾಗಬೇಕು.

4 ಕ್ಯುಮ್ಯುಲೇಟಿವ್ ವೋಟಿಂಗ್ ಪದ್ಧತಿ, ಕೆ. ಹನುಮಂತಯ್ಯನವರ ಮೇಲೆ ರಾಜದ್ರೋಹದ ಆಪಾದನೆ ಮತ್ತು ಶಿಕ್ಷೆ ಮುಂತಾದ ಸರ್ಕಾರದ ಪ್ರಗತಿ ವಿರುದ್ಧ ದಬ್ಬಾಳಿಕೆಯನ್ನು ಸಮಿತಿ ಖಂಡಿಸುತ್ತದೆ.

5 ಬ್ರಿಟಿಷರ ಸಾರ್ವಭೌಮಾಧಿಕಾರ ಕೊನೆಗಾಣುವುದಾಗಿರಲು ದೇಶದಲ್ಲಿ ಸೌಖ್ಯ, ಸಮಾಧಾನ, ಸುಭದ್ರತೆಗಳನ್ನು ನೆಲೆಗೊಳಿಸಲಿಕ್ಕೂ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಅತ್ಯಗತ್ಯ.

6 ಮೈಸೂರು ಸಂಸ್ಥಾನದ ಪ್ರಜೆಗಳು ಚುನಾಯಿಸಿದ ಪ್ರತಿನಿಧಿಗಳನ್ನು ರಾಜ್ಯಾಂಗ ರಚನಾ ಸಭೆಗೆ ಕಳುಹಿಸಬೇಕೆಂದೂ, ಭಾರತ ಸಂಯುಕ್ತ ರಾಜ್ಯಾಂಗದಲ್ಲಿ ಮೈಸೂರು ಸೇರಬೇಕೆಂದೂ, ಸಂಸ್ಥಾನದ ಪ್ರಜೆಗಳು ಕೇಳಿದರೂ ಸರ್ಕಾರ ಈ ಬಗ್ಗೆ ಅನಿಶ್ಚಯ ಧೋರಣೆ ತೋರಿದೆ.

7 ಸತ್ಯಾಗ್ರಹವನ್ನು ಇದೇ ಮೇ ತಿಂಗಳು 1 ನೇ ತಾರೀಖಿನ ದಿನ ಪ್ರಾರಂಭಿಸಬೇಕೆಂಬ ತೀರ್ಮಾನವನ್ನು ಈ ಸಮಿತಿಯು ಅಂಗೀಕರಿಸುತ್ತದೆ ಎಂಬ ನಿರ್ಣಯಗಳನ್ನು ಕೈಗೊಳ್ಳಲಾಯಿತು.[64]

---

64. ವಿಶ್ವ ಕರ್ನಾಟಕ ಪತ್ರಿಕೆ : ದಿನಾಂಕ : 06-04-1947.

ದಿವಾನ್ ಎ.ಆರ್. ಮೊದಲಿಯಾರ್ ಮತ್ತು ಕೆ.ಸಿ.ರೆಡ್ಡಿ ಮಾತುಕತೆಗಳು

ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಮತ್ತು ಮೈಸೂರಿನ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ನಡುವೆ ಹಲವು ಸುತ್ತುಗಳ ಮಾತುಕತೆಗಳು ಮತ್ತು ಈ ಮಾತುಕತೆಗಳ ಬಗ್ಗೆ ಪತ್ರ ವ್ಯವಹಾರಗಳು 1947ರ ಏಪ್ರಿಲ್ 16 ರಿಂದ 1947ರ ಆಗಸ್ಟ್ 07ರ ನಡುವೆ ದೀರ್ಘ ಮಾತುಕತೆಗಳು ನಡೆದಿವೆ. ಇವುಗಳು ಅಂದಿನ ಮೈಸೂರು ಸರ್ಕಾರದ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡುವ ಪ್ರಮುಖ ದಾಖಲೆಗಳಾಗಿವೆ.

1947ರ ಏಪ್ರಿಲ್ 23ರ ಸಂಜೆ 4-30ಕ್ಕೆ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದ ಕೆ.ಸಿ. ರೆಡ್ಡಿ, ಪ್ರಧಾನ ಕಾರ್ಯದರ್ಶಿ ಎ.ಜಿ. ರಾಮಚಂದ್ರ ರಾವ್ ಅವರ ನಡುವೆ ಬೆಂಗಳೂರಿನ ಕಾರ್ಲ್‌ಟನ್ ಹೌಸ್‌ನಲ್ಲಿ "ಮೈಸೂರು ಮಹಾರಾಜರು ಭಾರತದ ರಾಜ್ಯಾಂಗದಲ್ಲಿ ಮೈಸೂರು ಹೇಗೆ ವರ್ತಿಸಬೇಕು ಎಂಬ ವಿಚಾರವಾಗಿ ರಾಜಕೀಯ ಪಕ್ಷಗಳೊಡನೆ ಚರ್ಚಿಸಿ ರಾಜಕೀಯ ಪಕ್ಷಗಳಿಂದ ಸೂಕ್ತಸಲಹೆಗಳನ್ನು ಪಡೆಯಬೇಕೆಂಬ ಸೂಚನೆಯ ಬಗ್ಗೆ ಮಾತುಕತೆಗಳು ನಡೆದವು. ಈ ಸಭೆಯಲ್ಲಿ ದಿವಾನರು ಬೇರೆ ರಾಜಕೀಯ ಪಕ್ಷಗಳೊಂದಿಗೂ ಈ ಬಗ್ಗೆ ಚರ್ಚೆ ನಡೆಸವುದಾಗಿ ತಿಳಿಸಿದರು. ರೆಡ್ಡಿ ಅವರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯೊಡನೆ ಚರ್ಚಿಸಿ ತಮ್ಮ ಪಕ್ಷದ ಸ್ಪಷ್ಟ ನಿಲುವುಗಳನ್ನು ತಿಳಿಸುವುದಾಗಿ ಹೇಳಿದರು"[65]

ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿದ ನಂತರ ಕೆ.ಸಿ. ರೆಡ್ಡಿ ಅವರು ದಿನಾಂಕ : 29-04-1947ರಂದು ದಿವಾನರಿಗೆ ಕಾರ್ಯಕಾರಿ ಸಮಿತಿಯ ನಿರ್ಣಯಗಳ ಪ್ರತಿಯೊಂದನ್ನು ನೀಡಿದರು. ಆ ನಿರ್ಣಯಗಳ ಪ್ರಕಾರ "ಮುಂದೆ ರಚಿಸಲಿರುವ ಸರ್ಕಾರದ ಮಂತ್ರಿಗಳನ್ನು ಶಾಸನಸಭೆಯಿಂದ ಆಯ್ಕೆ ಮಾಡಿಕೊಳ್ಳಬೇಕು. ಈ ಮಂತ್ರಿಗಳು ಶಾಸನಸಭೆ ಮತ್ತು ಶಾಸನಸಭೆ ಸಂವಿಧಾನಗಳಿಗೆ ಜವಾಬ್ಧಾರರಾಗಿರಬೇಕು. ಈ ಬಗ್ಗೆ ನಾನು ಬೇರೆ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿದ್ದೇನೆ, ಅವರೂ ಸಹ ಈ ಬಗ್ಗೆ ಸಹಮತ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದ ಜನತೆಗೆ ಸೂಕ್ತವಾದ ಜವಾಬ್ಧಾರಿ ಸರ್ಕಾರ ರಚನೆಯನ್ನು ನಾವೆಲ್ಲರೂ ನಿರೀಕ್ಷಿಸುತ್ತಿದ್ದೇವೆ. ಇಂತಹ ಚರ್ಚೆಗಳ ಫಲವಾಗಿ ನಮ್ಮ ನಿರೀಕ್ಷೆ ಈಡೇರುತ್ತದೆ ಎಂದು ನಂಬಿದ್ದೇವೆ" ಎಂದು ಪತ್ರದಲ್ಲಿ ತಿಳಿಸಿದ್ದಾರೆ.[66]

65. MYSORE CONGRESS : Correspondence Between the Dewan of Mysore and the President, Mysore Congress 16th April to 7th August 1947, P-4.
66. MYSORE CONGRESS : Correspondence Between the Dewan of Mysore and the President, Mysore Congress 16th April to 7th August 1947, P-06.

1947ರ ಮೇ 26ರಂದು ನಡೆದ ಮಾತುಕತೆ ಸಭೆಯಲ್ಲಿ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರೊಡನೆ ಕೆ.ಸಿ. ರೆಡ್ಡಿ ಮತ್ತು ಆರ್. ಚೆನ್ನಿಗರಾಮಯ್ಯ ಪಾಲ್ಗೊಂಡಿದ್ದರು. ಮೈಸೂರು ಸಂಸ್ಥಾನವು ಭಾರತ ಒಕ್ಕೂಟದೊಂದಿಗೆ ಸೇರ್ಪಡೆಯಾಗಬೇಕೆಂದು ಇವರಿಬ್ಬರೂ ದಿವಾನರನ್ನು ಒತ್ತಾಯಿಸಿದರು. ರೆಡ್ಡಿ ಅವರು ಜವಾಬ್ದಾರಿ ಸರ್ಕಾರದ ರಚನೆಯ ಬಗ್ಗೆ ಮಾಹಿತಿಯನ್ನು ಕೋರಿದರು ಹಾಗೂ ಸಂವಿಧಾನ ರಚಿಸಲು ಇನ್ನೂ ಕೆಲವು ತಿಂಗಳುಗಳ ಕಾಲಾವಧಿ ಬೇಕಾಗುವುದರಿಂದ ಅವಶ್ಯಕತೆ ಉಂಟಾದರೆ ತಾತ್ಕಾಲಿಕ ಸರ್ಕಾರ ಅಥವಾ ಟ್ರಾನ್ಸಿಷನಲ್ ಗೌರ್ನಮೆಂಟ್ ಅನ್ನು ಸಾಧ್ಯವಾದಷ್ಟು ಶೀಘ್ರವಾಗಿ ಸ್ಥಾಪಿಸಬೇಕೆಂದು ಒತ್ತಾಯಿಸಿದರು. ಅದಕ್ಕೆ ಉತ್ತರವಾಗಿ ದಿವಾನರು ಈ ವಿಷಯದ ಬಗ್ಗೆ ಸದ್ಯದ ಪರಿಸ್ಥಿತಿಯಲ್ಲಿ ತಾವು ಸ್ವತಂತ್ರವಾಗಿ ಯಾವ ಉತ್ತರವನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು. ನಂತರ ರೆಡ್ಡಿ ಅವರು ಮುಂಬರುವ ಜಿಲ್ಲಾ ಬೋರ್ಡುಗಳ ಅಧ್ಯಕ್ಷರ ಚುನಾವಣೆಗಳಲ್ಲಿ ಅಧಿಕಾರಿಗಳು ಪಾಲ್ಗೊಳ್ಳಬಾರದು ಅಥವಾ ಅವು ಮುಕ್ತವಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದರು. ಆ ಬಗ್ಗೆ ಕಂದಾಯ ಮಂತ್ರಿಯ ನೆರವಿನೊಂದಿಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ದಿವಾನರು ಆಶ್ವಾಸನೆ ನೀಡಿದರು.[67]

ಮತ್ತೊಂದು ಪತ್ರಿಕಾ ವರದಿಯಲ್ಲಿ ಈ ಬಗ್ಗೆ ಮತ್ತಷ್ಟು ಹೆಚ್ಚಿನ ಮಾಹಿತಿ ದೊರೆಯುತ್ತದೆ. "ಕೆ.ಸಿ. ರೆಡ್ಡಿ ಅವರು ದಿವಾನರೊಂದಿಗೆ ಪ್ರಜಾಪ್ರತಿನಿಧಿ ಸಭೆಯ ನಾಯಕರಾದ ಕೆ. ಹನುಮಂತಯ್ಯ ಮತ್ತು ಇತರ ರಾಜಕೀಯ ಖೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಅದಕ್ಕೆ ಉತ್ತರವಾಗಿ ದಿವಾನರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ರೆಡ್ಡಿಯವರಿಗೆ ತಿಳಿಸಿದರು".[68]

ದೆಹಲಿಯಿಂದ ಹಿಂದಿರುಗಿದ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಒಂದು ಹೇಳಿಕೆಯನ್ನು ಹೊರಡಿಸಿದರು. ಅದರಂತೆ ಮೈಸೂರು ಸಂಸ್ಥಾನವೂ ಭಾರತದ ರಾಜ್ಯಾಂಗ ಸಭೆ ಸೇರುವುದೆಂದು 1947 ಜೂನ್ 17ರಂದು ಘೋಷಿಸಿದರು. ಇದರಿಂದ ಸಂತೋಷಗೊಂಡ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿ ಸಂಸ್ಥಾನದಲ್ಲಿ ತಾತ್ಕಾಲಿಕ ಸರ್ಕಾರ ರಚನೆಗೆ ಒತ್ತಾಯ ಮಾಡಿತು.

ದಿವಾನರೊಂದಿಗಿನ ಸಭೆಯಲ್ಲಿ ಕೆ.ಸಿ. ರೆಡ್ಡಿ ಮತ್ತಿತರ ಕಾಂಗ್ರೆಸ್ ನಾಯಕರ ಬೇಡಿಕೆಗಳು ಮತ್ತು ಒತ್ತಾಯಗಳ ಬಗ್ಗೆ ಸೂಕ್ತಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ್ದ

---

67. ಪೂರ್ವೋಕ್ತ : ದಿನಾಂಕ : 27–5–1947, ಪುಟ–10.
68. ಪೂರ್ವೋಕ್ತ : ಪುಟ–12.

ದಿವಾನರು ಯಾವುದನ್ನೂ ಈಡೇರಿಸಲಿಲ್ಲ. ಆದ್ದರಿಂದ ಈ ಬಗ್ಗೆ ತೀಕ್ಷ್ಣವಾದ ಪತ್ರವೊಂದನ್ನು ರೆಡ್ಡಿಯವರು 1947 ಜೂನ್ 19ರಂದು ಬರೆದರು. ಆ ಪತ್ರದಲ್ಲಿ "ಈ ಕೆಳಗಿನ ವಿಷಯಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ಈ ಪತ್ರ ಬರೆಯುತ್ತಿದ್ದೇನೆ. ನಮ್ಮ ಭೇಟಿಯ ಸಂದರ್ಭದಲ್ಲಿ ನಾವು

1) ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ನಾಯಕರಾದ ಕೆ. ಹನುಮಂತಯ್ಯ ನವರ ಬಿಡುಗಡೆಯ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದೆವು. ಅವರನ್ನು ಬಿಡುಗಡೆ ಮಾಡಲು ಸೂಕ್ತಕ್ರಮ ಕೈಗೊಳ್ಳುವುದಾಗಿ ನೀವು ತಿಳಿಸಿದ್ದೀರಿ. ಆದರೆ ಇದುವರೆಗೂ ಈ ಬಗ್ಗೆ ನೀವು ಯಾವ ಕ್ರಮವನ್ನು ಕೈಗೊಂಡಿಲ್ಲ.

2) ಈಸೂರು ಮತ್ತು ಶ್ರವಣಬೆಳಗೊಳದ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲು ಕೋರಿದ್ದೆವು. ಈ ಬಗ್ಗೆಯೂ ನೀವು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ.

3) ಜಿಲ್ಲಾ ಬೋರ್ಡ್‌ಗಳ ಅಧ್ಯಕ್ಷರ ಚುನಾವಣೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಮತದಾನದಲ್ಲಿ ಪಾಲ್ಗೊಳ್ಳಲು ಇರುವ ಅವಕಾಶವನ್ನು ರದ್ದುಪಡಿಸಬೇಕೆಂದು ಕೋರಿದ್ದೆವು. ಈ ಬಗ್ಗೆಯೂ ನೀವು ಗಮನಹರಿಸಿಲ್ಲ.

4) ಖಾಯಂ ಚುನಾಯಿತ ಸರ್ಕಾರ ರಚನೆಯಾಗುವವರೆಗೆ ಆಡಳಿತ ನಿರ್ವಹಿಸಲು ತಾತ್ಕಾಲಿಕ ಮಧ್ಯಂತರ ಮಂತ್ರಿ ಮಂಡಲವನ್ನು ರಚಿಸಲು ಕೋರಿದ್ದೆವು, ಈ ಬಗ್ಗೆ ತಕ್ಷಣವೇ ಉತ್ತರಿಸಲು ಸಾಧ್ಯವಿಲ್ಲವೆಂದು ನೀವು ತಿಳಿಸಿದ್ದೀರಿ.

5) ಭಾರತದ ರಾಜ್ಯಾಂಗ ರಚನಾಸಭೆಗೆ ಮೈಸೂರಿನ ಪ್ರತಿನಿಧಿಯನ್ನು ಕಳುಹಿಸಬೇಕೆಂದು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ನಿರ್ಧರಿಸಿತ್ತು.

ಈ ಎಲ್ಲ ವಿಷಯಗಳ ಬಗ್ಗೆ ನೀವು ಜೂನ್ 25ರ ಒಳಗೆ ಪತ್ರದ ಮೂಲಕ ನಿಮ್ಮ ಪ್ರತಿಕ್ರಿಯೆಯನ್ನು ತಿಳಿಸಲು ಕೋರುತ್ತೇನೆ. ಏಕೆಂದರೆ ಜೂನ್ 25ರಂದು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸಭೆ ನಡೆಯಲಿದೆ" ಎಂದು ಪತ್ರದಲ್ಲಿ ತಿಳಿಸಿದರು.[69]

1947ರ ಜುಲೈನಲ್ಲಿ ಭಾರತದ ರಾಜ್ಯಾಂಗ ಸಭೆಗೆ ಸಂಸ್ಥಾನದಿಂದ ಕಳುಹಿಸಬೇಕಾಗಿದ್ದ ಸದಸ್ಯರ ಆಯ್ಕೆಗಾಗಿ ಚುನಾವಣೆಗಳು ನಡೆದವು. ಅದರಂತೆ ಜುಲೈನಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಜಂಟಿ ಅಧಿವೇಶನ ಪ್ರಾರಂಭಗೊಂಡಿತು. ಇದರಲ್ಲಿ ಸಂವಿಧಾನಸಭೆಗೆ, ಪ್ರಜಾಪ್ರತಿನಿಧಿ ಸಭೆಯಿಂದ ಹೆಚ್.ಆರ್. ಗುರುವಾರೆಡ್ಡಿ

---

69. MYSORE CONGRESS : Correspondence Between the Dewan of Mysore and the President, Mysore Congress 16th April to 7th August 1947, P-16.

ಮತ್ತು ಕೆ.ಸಿ. ರೆಡ್ಡಿ, ನ್ಯಾಯವಿಧಾಯಕ ಸಭೆಯಿಂದ ಡಿ.ಹೆಚ್. ಚಂದ್ರಶೇಖರಯ್ಯ ಮತ್ತು ಎಸ್.ವಿ. ಕೃಷ್ಣಮೂರ್ತಿರಾಯರು ಚುನಾಯಿತರಾದರು.[70]

1947ರ ಆಗಸ್ಟ್ 1ರಂದು ಮೈಸೂರು ನಗರ ಟೌನ್‌ಹಾಲ್‌ನಲ್ಲಿ ಅಖಿಲ ಮೈಸೂರು ಕಾಂಗ್ರೆಸ್‌ನ ಸಮಿತಿ ವಿಶೇಷ ಅಧಿವೇಶನ ನಡೆಸಿ, ವೇದಿಕೆಯಲ್ಲಿ ಕೆ.ಟಿ. ಭಾಷ್ಯಂ, ಟಿ. ಸುಬ್ರಮಣ್ಯ, ಸಾಹುಕಾರ ಚನ್ನಯ್ಯ, ಕೆ.ಸಿ. ರೆಡ್ಡಿ ಇತರರು ಆಸೀನರಾಗಿದ್ದರು. ಆಗ ವೇದಿಕೆಗೆ ಆಗಮಿಸಿದ ಎಂ.ಎನ್. ಜೋಯಿಸ್ ಆಗಸ್ಟ್ 9ರಂದು ಹೋರಾಟ ಆರಂಭಿಸಬೇಕು. ಜವಾಬ್ದಾರಿ ಸರ್ಕಾರದ ಗುರಿ ಸಾಧನೆಗೆ ಸ್ವಲ್ಪವೂ ಸಾವಕಾಶ ಆಗಬಾರದು, ಹೋರಾಟಕ್ಕೆ ದಿನ ಗೊತ್ತು ಮಾಡಿ ಎಂದು ಹಠ ಹಿಡಿದರು. ಆದರೆ ಹೋರಾಟದ ದಿನಾಂಕದ ಬಗ್ಗೆ ಜಿಜ್ಞಾಸೆ ಉಂಟಾಯಿತು. ಆಗ ಜೋಯಿಸರು ನೀವು ನಾಯಕರು ನಿರ್ಧಾರ ಕೈಗೊಳ್ಳಲು ಮೀನಾ-ಮೇಷ ಎಣಿಸುತ್ತಿದ್ದೀರಿ, ಪ್ರಾಯಶಃ ಆಗಸ್ಟ್ 15ರಂದು ದೆಹಲಿಯ ಸಂಭ್ರಮದ ಉತ್ಸವದಲ್ಲಿ ಭಾಗವಹಿಸಬೇಕೆಂಬ ಚಪಲ ನಿಮಗೆ ಇರಬಹುದು, ಹೋಗಿ ಬನ್ನಿ ಎಂಬ ಧಾಟಿಯಲ್ಲಿ ನಿಷ್ಠೂರವಾಗಿ ಮಾತನಾಡಿದರು. ಇದು ಕೆ.ಸಿ. ರೆಡ್ಡಿ ಅವರಿಗೆ ಚುಚ್ಚಿದಂತೆ ಆಯಿತು. ಆಗ ಕೆ.ಸಿ. ರೆಡ್ಡಿ 'ನಮಗೆ ಅಂತಹ ಚಪಲವಿಲ್ಲ, ಹೋರಾಟಕ್ಕೆ ಸಿದ್ಧತೆ ಮಾಡಿ ಕೊಳ್ಳುತ್ತೇವೆ. ನಿಮ್ಮ ಅಪೇಕ್ಷೆಯಂತೆ ಬೇಗನೆ ಹೋರಾಟ ನಡೆಯುತ್ತದೆ' ಎಂದು ಹೇಳಿ ಹೋರಾಟಕ್ಕೆ ಬದ್ಧರಾದರು.[71]

ದಿವಾನರೊಂದಿಗೆ ಚರ್ಚೆಯ ಸಂದರ್ಭದಲ್ಲಿ ಬಂಧನದಲ್ಲಿದ್ದ ನಾಯಕರ ಬಿಡುಗಡೆಗೆ ಕೆ.ಸಿ. ರೆಡ್ಡಿಯವರು ಒತ್ತಾಯಿಸಿದ ವಿಷಯ ಗಮನಾರ್ಹವಾದುದು. ಆದರೆ ರೆಡ್ಡಿ ಅವರು ಬರೆದ ಎರಡೂ ಪತ್ರಗಳಿಗೆ ದಿವಾನರು ಯಾವುದೇ ಪ್ರತಿಕ್ರಿಯೆ ನೀಡದಿದುದರಿಂದ ಇವರ ನಡುವಿನ ಮಾತುಕತೆಗಳು ಮುರಿದು ಬಿದ್ದವು. ಈ ಸಂಧಾನ ಸಂಪೂರ್ಣ ವಿಫಲವಾಯಿತು. ಈ ಬಗ್ಗೆ ರೆಡ್ಡಿ ಅವರು ಮತ್ತೊಂದು ಪತ್ರದಲ್ಲಿ "ಈ ಸಂಧಾನ ಮಾತುಕತೆಗಳು ಮುರಿದು ಬೀಳಲು ದಿವಾನರೇ ಸಂಪೂರ್ಣ ಹೊಣೆಗಾರರು" ಎಂದಿರುವುದು ಗಮನಾರ್ಹ.[72]

ಮೈಸೂರು ಸಂಸ್ಥಾನದ ಮಹಾರಾಜರಾದ ಜಯಚಾಮರಾಜ ಒಡೆಯರ್ 1947ರ ಆಗಸ್ಟ್ 10ರಂದು ಭಾರತ ಒಕ್ಕೂಟಕ್ಕೆ ಸೇರುವ ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್ [INSTRUMENT OF ACCESSION] ಅಂದರೆ ವಿಲೀನೀಕರಣ ಲಿಖಿತಕ್ಕೆ ಸಹಿ ಹಾಕಿದರು.

---

70. ವೀರತಪ್ಪ .ಕೆ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ ಪುಟ-115.
71. ಸ್ವಾತಂತ್ರ್ಯ ಸೇನಾನಿ ಎಂ.ಎನ್. ಜೋಯಿಸರ ಆತ್ಮಕಥನ, ಪುಟ-169.
72. MYSORE CONGRESS : Correspondence Between the Dewan of Mysore and the President, Mysore Congress, Date : 16th April to 7th August 1947, P-19.

ಇದರಿಂದ ಮೈಸೂರು ಸಂಸ್ಥಾನ ಭಾರತದ ಒಂದು ಭಾಗವಾಗಿ ವಿಲೀನ ಗೊಂಡಿತು. 1947ರ ಆಗಸ್ಟ್ 15ರಂದು ಬ್ರಿಟಿಷರು ಭಾರತೀಯರಿಗೆ ಅಧಿಕಾರ ಹಸ್ತಾಂತರ ಮಾಡಿ ಭಾರತದಿಂದ ನಿರ್ಗಮಿಸಿದರು. ಆಧುನಿಕ ಭಾರತದ ಇತಿಹಾಸದಲ್ಲಿ ಆಗಸ್ಟ್ 15 ಒಂದು ಸುವರ್ಣ ದಿನವಾಗಿದೆ. ಈ ಉತ್ಸವವನ್ನು ಮೈಸೂರಿನ ಪುರಭವನದಲ್ಲಿ ಹಿಂದೆಂದು ಸೇರದಷ್ಟು ಜನ ಸೇರಿ ಸ್ವಾತಂತ್ರ್ಯೋತ್ಸವವನ್ನು ತ್ರಿವರ್ಣಧ್ವಜವನ್ನು ಹಾರಿಸುವ ಮುಖಾಂತರ ಆಚರಿಸಿದರು. ಆದರೆ ಮೈಸೂರು ಸರ್ಕಾರ ಅರಮನೆಯ ಮೇಲೆ, ಸರ್ಕಾರಿ ಕಚೇರಿಗಳ ಮೇಲೆ ತ್ರಿವರ್ಣಧ್ವಜ ಹಾರಿಸಲಿಲ್ಲ, ಸ್ವಾತಂತ್ರ್ಯದ ಸಮಾರಂಭಗಳಲ್ಲಿ ಭಾಗವಹಿಸಲಿಲ್ಲ, ರಾಷ್ಟ್ರಗೀತೆ ಹಾಡಲಿಲ್ಲ, ಇದರಿಂದ ಮೈಸೂರು ಕಾಂಗ್ರೆಸ್ ಮತ್ತು ಮೈಸೂರಿನ ಜನತೆ ಬೇಸರಗೊಂಡರು. ಇದು ಮುಂದಿನ ಐತಿಹಾಸಿಕ ಹೋರಾಟಕ್ಕೆ ಕಾರಣವಾಯಿತು.

5. ಮೈಸೂರು ಚಲೋ ಚಳವಳಿ ಮತ್ತು ಕೆ.ಸಿ. ರೆಡ್ಡಿ 1947

1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ದೇಶೀಯ ಸಂಸ್ಥಾನಗಳಲ್ಲೂ ಪ್ರಜಾರಾಜ್ಯಗಳು ಸ್ಥಾಪಿಸಲಾಗುವುದೆಂದೂ ಎಲ್ಲರೂ ಭಾವಿಸಿದ್ದರು. ಆದರೆ ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವದ ದಾರಿಯಲ್ಲಿ ಬಹಳ ದೂರಸಾಗಿದ್ದ ಮೈಸೂರು ಕೂಡ ಮಹಾರಾಜ ಜಯಚಾಮರಾಜ ಒಡೆಯರ್, ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಹಾಗೂ ಆಪ್ತ ಕಾರ್ಯದರ್ಶಿ ತಂಬೂಚೆಟ್ಟಿ ಅವರೊಡನೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಅವರ ನಾಯಕತ್ವದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ನಡೆದ ಸಂಧಾನಗಳು ವಿಫಲವಾದವು.

ಮೈಸೂರು ಸರ್ಕಾರ, ಮೈಸೂರು ಕಾಂಗ್ರೆಸ್‌ನೊಡನೆ ಮಾತುಕತೆಗಳನ್ನು ಆಡುತ್ತ ಸಮರಸಿದ್ಧತೆಗಳನ್ನು ಮಾಡುತ್ತಿತ್ತು. 1947ರ ಆಗಸ್ಟ್ 28ರಂದು ಸರ್ಕಾರ ತುರ್ತು ಶಾಸನವೊಂದನ್ನು ಘೋಷಿಸಿ ಪತ್ರಿಕೆಗಳು ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಸುದ್ದಿ ಪ್ರಕಟಿಸ ಬಾರದೆಂದು ಸಾರಿತು.

1947ರ ಆಗಸ್ಟ್ 19ರಂದು ಮೈಸೂರು ಕಾಂಗ್ರೆಸ್‌ನ ಪ್ರಕಟನ ಕಾರ್ಯದರ್ಶಿ ಎಚ್.ಕೆ. ವೀರಣ್ಣಗೌಡರು ಕಾರ್ಯಕಾರಿ ಸಮಿತಿಯ ಸಭೆ ನಡೆಸಿ ಒಂದು ಹೇಳಿಕೆ ಹೊರಡಿಸಿದರು. 'ರಚನಾತ್ಮಕ ವಿಧಾನಗಳಲ್ಲಿ ಕಾಂಗ್ರೆಸ್ ಕಾರ್ಯಸಮಿತಿಯು ಸ್ವಲ್ಪ ಬದಲಾವಣೆ ಮಾಡಿದೆ. ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಅವರನ್ನು 1947ರ ಸೆಪ್ಟಂಬರ್ 1ರಿಂದ ಪ್ರಥಮ ಸರ್ವಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಇನ್ನು ಮುಂದೆ ಎಲ್ಲಾ ಕಡೆಗಳಲ್ಲಿಯೂ ಸಾರ್ವಜನಿಕ ಸಭೆಗಳನ್ನು ನಡೆಸಬೇಕು. ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಡಬೇಕು.

ಸತ್ಯಾಗ್ರಹದ ಪ್ರಮಾಣ ವಚನಗಳನ್ನು ಸ್ವೀಕರಿಸಬೇಕು. ಸತ್ಯಾಗ್ರಹ ನಿಲ್ಲಿಸಲು ಪ್ರಥಮ ಸರ್ವಾಧಿಕಾರಿಗಲ್ಲದೆ ಬೇರೆ ಯಾರಿಗೂ ಅಧಿಕಾರವಿಲ್ಲ. ಸತ್ಯಾಗ್ರಹ ಅಹಿಂಸಾ ಮಾರ್ಗದಲ್ಲಿಯೇ ನಡೆಯಬೇಕು. ಇದಕ್ಕಾಗಿ ಸಮಸ್ತರ ಸಹಕಾರವನ್ನು ಕೋರಲಾಗಿದೆ'[73] ಎಂದೂ, ಸತ್ಯಾಗ್ರಹಿಗಳು 1947ರ ಸೆಪ್ಟೆಂಬರ್ 4ರಂದು ಹೊರಟು 1947ರ ಸೆಪ್ಟೆಂಬರ್ 11ರಂದು ಮೈಸೂರುತಲುಪಿ, ಅರಮನೆಸತ್ಯಾಗ್ರಹದಲ್ಲಿ ಭಾಗವಹಿಸಲು ತೀರ್ಮಾನ ಕೈಗೊಳ್ಳಲಾಯಿತು.

ಕೆ.ಸಿ. ರೆಡ್ಡಿಯವರ ನಾಯಕತ್ವದಲ್ಲಿ ಕಾರ್ಯಕಾರಿ ಸಮಿತಿ ಸಭೆ ಸೇರಿ 1947ರ ಆಗಸ್ಟ್ 21ರಿಂದ 1947ರ ಆಗಸ್ಟ್ 30ರವರೆಗೆ ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಪೂರ್ಣ ಜವಾಬ್ದಾರಿ ಸರ್ಕಾರದ ಬಗ್ಗೆ ಜಾಗೃತಿ ಉಂಟು ಮಾಡಲು ಕಾರ್ಯಕ್ರಮಗಳನ್ನು ಪ್ರಕಟಿಸಿತು. ಅದರಂತೆ ಮೂರು ತಂಡಗಳನ್ನು ರಚಿಸಲಾಯಿತು.

"ಮೊದಲನೆಯ ತಂಡದಲ್ಲಿ ಕೆ.ಸಿ. ರೆಡ್ಡಿ, ಟಿ. ಸುಬ್ರಮಣ್ಯ, ರಾಜಶೇಖರ ಹಿರೇಮಠ್ ಮತ್ತು ಎಂ. ಹುಸೇನ್ ಇತರರು ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿಯೂ, ಎರಡನೆಯ ತಂಡದಲ್ಲಿ ಕೆ.ಟಿ. ಭಾಷ್ಯಂ, ಎಚ್. ಸಿದ್ಧಯ್ಯ, ಎಂ. ಹುಚ್ಚೇಗೌಡ, ಕೆ.ಆರ್. ಮಾಧವರಾವ್, ಎ.ಜಿ. ರಾಮಚಂದ್ರರಾವ್ ಅವರು ಹಾಸನ, ಕಡೂರು, ಶಿವಮೊಗ್ಗ ಜಿಲ್ಲೆಗಳಲ್ಲಿಯೂ, ಮೂರನೆಯ ತಂಡದಲ್ಲಿ ಟಿ. ಸಿದ್ಧಲಿಂಗಯ್ಯ, ಎ.ಜಿ. ಬಂದೀಗೌಡ, ಎಸ್. ಚನ್ನಯ್ಯ, ನಂಜರಾಜೇ ಅರಸ್, ಕೆ.ಎಸ್. ಕುಮಾರನ್ ಅವರು ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳಲ್ಲೂ ಪ್ರವಾಸ ಕೈಗೊಂಡು ಸಂಸ್ಥಾನದ ಒಂಭತ್ತು ಜಿಲ್ಲೆಗಳಲ್ಲೂ ಉತ್ತಮ ಸಂಘಟನಾ ಕಾರ್ಯವನ್ನು ಮಾಡಿದರು".[74]

ಮೈಸೂರು ಕಾಂಗ್ರೆಸ್‌ನ ಸತ್ಯಾಗ್ರಹ ಘೋಷಣೆಯನ್ನು ಸ್ವಾಗತಿಸಿ, ಸಂಪೂರ್ಣ ನೆರವನ್ನು ನೀಡುವುದಾಗಿ "ಮದ್ರಾಸ್ ಕಾಂಗ್ರೆಸ್ ಅಧ್ಯಕ್ಷರಾದ ಕೆ. ಕಾಮರಾಜ್ ನಾಡರ್, ಮುಂಬಯಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಸ್.ಕೆ. ಪಾಟೀಲ್, ಅಲ್ಲದೆ ಕೊಡಗು, ಆಂಧ್ರ, ಕೇರಳ ಪ್ರದೇಶಗಳ ಸತ್ಯಾಗ್ರಹಿಗಳು ತಂಡೋಪತಂಡವಾಗಿ ಬೆಂಗಳೂರಿಗೆ ಬಂದು ಸೇರಲಾರಂಭಿಸಿದರು. ಜೊತೆಗೆ ಇಡೀ ಭಾರತದ ಕನ್ನಡಿಗರೆಲ್ಲ ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸುವುದಾಗಿ ಘೋಷಿಸಿದ್ದು ಮಾತ್ರವಲ್ಲದೆ, ಜನಬಲ, ಧನಬಲವನ್ನೂ ಒದಗಿಸಲು ಸಿದ್ಧರಾದರು. ಇದು ಮೈಸೂರು ಕಾಂಗ್ರೆಸ್‌ಗೆ ಅಷ್ಟಭುಜ ಬಂದಂತಾಯಿತು"[75].

---

73. ಸುಂದರರಾವ್ ಬ.ನ : ಚಲೋ ಮೈಸೂರು, ಪುಟ–6.
74. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–87.
75. ಪೂರ್ವೋಕ್ತ : ಪುಟ–90.

1947ರ ಆಗಸ್ಟ್ 27ರಂದು ಮೈಸೂರು ಸಂಸ್ಥಾನದ ಚೇಂಬರ್ ಆಫ್ ಕಾಮರ್ಸ್ ಮತ್ತು ಇಪ್ಪತ್ತು ಮೂರು ಇತರೇ ವ್ಯಾಪಾರಿಸಂಸ್ಥೆಗಳ ಪ್ರತಿನಿಧಿಗಳ ಮಹಾಸಭೆಯೊಂದು ಪಾಮಡಿ ಸುಬ್ಬರಾಮ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಈ ಸಭೆ 'ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಕೂಡಲೇ ಸ್ಥಾಪಿಸುವುದಾಗಿ ಮಹಾಪ್ರಭುಗಳು ಘೋಷಣೆ ಮಾಡಬೇಕು. ಮೈಸೂರು ಕಾಂಗ್ರೆಸ್ ಕೂಡ ದೇಶದ ಆಹಾರ ಪರಿಸ್ಥಿತಿಯನ್ನು ಗಮನಿಸಿ ಸತ್ಯಾಗ್ರಹ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಬೇಕು' ಎಂದು ನಿರ್ಣಯ ಮಾಡಿತು.[76]

ಸಂಸ್ಥಾನದ ಕೆಲವು 'ಕಾಂಗ್ರೆಸ್ಸೇತರ ಸಾರ್ವಜನಿಕ ಮುಖಂಡರು ಮೈಸೂರು ಕಾಂಗ್ರೆಸ್ ಕೈಗೊಂಡ ಸತ್ಯಾಗ್ರಹದ ವಿರುದ್ಧ 1947ರ ಆಗಸ್ಟ್ 28ರಂದು ಸಂಜೆ 6–00 ಗಂಟೆಗೆ ಸರ್ ಪುಟ್ಟಣ್ಣಶೆಟ್ಟರ ಪುರಭವನದಲ್ಲಿ ದೇವುಡು ನರಸಿಂಹಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಮಾವೇಶ ಏರ್ಪಡಿಸಿತು. ಆದರೆ ಈ ಸಭೆ ಸಾರ್ವಜನಿಕರ ಆಕ್ರೋಶಕ್ಕೆ ಹೆದರಿ ನಡೆಯಲೇ ಇಲ್ಲ. 'ಜನರು ಆರ್ಕಾಟ್ ಬಾಯ್ಕಾಟ್, ಆರ್ಕಾಟ್ ಹಿಂಬಾಲಕರಿಗೆ ಧಿಕ್ಕಾರ' ಎಂಬ ಘೋಷಣೆ ಕೂಗತೊಡಗಿದರು.[77]

1947ರ ಸೆಪ್ಟೆಂಬರ್ 1ರಂದು 'ಮೈಸೂರು ಚಲೋ' ಸತ್ಯಾಗ್ರಹಕ್ಕೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಬಿನ್ನಿಮಿಲ್, ಮಿನರ್ವ ಮಿಲ್, ಮೈಸೂರುಮಿಲ್, ಟಿ.ಆರ್. ಮಿಲ್, ಎಚ್.ಎ.ಎಲ್, ಸರ್ಕಾರಿ ಎಲೆಕ್ಟ್ರಿಕ್ ಕಾರ್ಖಾನೆ, ರೈಲ್ವೆ ಕಾರ್ಮಿಕರು, ಗಣಿ ಕಾರ್ಮಿಕರುಗಳು ಬೆಂಗಳೂರು ಅರಳೇಪೇಟೆಯ ಕಾಂಗ್ರೆಸ್ ಕಚೇರಿಯ ಬಳಿ ಬೆಳಗಿನಿಂದಲೇ ಸೇರಲಾರಂಭಿಸಿದರು. ಕಾರ್ಮಿಕ ಮುಖಂಡರಾದ ಕೆ.ಬಿ. ಶ್ರೀನಿವಾಸನ್, ಜಿ.ವಿ. ಚೆಲ್ಲಂ, ಎಂ.ಎಸ್. ಕೃಷ್ಣನ್, ಕೆ. ಕಣ್ಣನ್, ಕೆ.ಎಸ್. ಕುಮಾರನ್, ಎನ್. ಕೇಶವಯ್ಯಂಗಾರ್‌ರವರ ನೇತೃತ್ವದಲ್ಲಿ ಮೆರವಣಿಗೆ ಕಾಂಗ್ರೆಸ್ ಕಚೇರಿಯಿಂದ ಹೊರಟು ಇಂದಿನ ಕೆಂಪೇಗೌಡ ವೃತ್ತ, ಮೈಸೂರು ಬ್ಯಾಂಕ್ ವೃತ್ತ, ಅವೆನ್ಯೂ ರಸ್ತೆ, ಚಿಕ್ಕಪೇಟೆ, ಆರ್ಕಾಟ್ ಶ್ರೀನಿವಾಸಚಾರ್ ಬೀದಿ, ಸುಲ್ತಾನ್‌ಪೇಟೆ, ಅಕ್ಕಿಪೇಟೆ, ಬಳೇಪೇಟೆ ಮೂಲಕ ಚಿಕ್ಕಲಾಲ್‌ಬಾಗ್‌ನಲ್ಲಿ ಬಹಿರಂಗ ಸಭೆ ನಡೆಯಿತು.

ನಂತರ (ಸುಭಾಷ್‌ನಗರದ) ಧರ್ಮಾಂಬುದಿ ಕೆರೆಯ (ಈಗಿನ ಕೆಂಪೇಗೌಡ ಬಸ್ ನಿಲ್ದಾಣ) ಅಂಗಳಕ್ಕೆ ಬಂದು ಸೇರಿದರು. ಮೈಸೂರು ಕಾಂಗ್ರೆಸ್ 'ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಆಗಮಿಸಿ ರಾಷ್ಟ್ರಧ್ವಜಾರೋಹಣ ಮಾಡಿ 'ಮೈಸೂರು ಚಲೋ' ಘೋಷಣೆ

76. ಪೂರ್ವೋಕ್ತ : ಪುಟ–87.
77. ಪೂರ್ವೋಕ್ತ : ಪುಟ–89.

ಯೊಂದಿಗೆ ಸತ್ಯಾಗ್ರಹಕ್ಕೆ ಚಾಲನೆ ನೀಡಿದರು. ನಂತರ ಕೆ.ಸಿ. ರೆಡ್ಡಿ ಮಾತನಾಡಿ "ಇದೀಗ ನಮ್ಮ ಸತ್ಯಾಗ್ರಹ ಆರಂಭವಾಗಿದೆ, ಇಲ್ಲಿಂದ ಹೊರಡುವ ಮೆರವಣಿಗೆಯಲ್ಲಿ ಸಮಸ್ತ ಮಹಾಜನರೂ ಭಾಗವಹಿಸಬೇಕಾಗಿ ಕೋರಿಕೆ. ಅಲ್ಲದೆ ಸಂಜೆ ಬನಪ್ಪಪಾರ್ಕ್‌ನಲ್ಲಿ ಸಭೆ ಸೇರಲಿದೆ, ಅದಕ್ಕೂ ಎಲ್ಲರೂ ತಪ್ಪದೇ ಬರಬೇಕಾಗಿ ವಿನಂತಿ" ಎಂದು ನುಡಿದರು.[78]

ಮುಂದುವರೆಸಿ 'ಮೈಸೂರು ಧ್ವಜವನ್ನು ನಾವು ಗೌರವಿಸುವುದಿಲ್ಲ. ಏಕೆಂದರೆ ಆಗಸ್ಟ್ 15ರಂದು ಸರ್ಕಾರಿ ಕಚೇರಿಗಳ ಮೇಲೆ ರಾಷ್ಟ್ರಧ್ವಜ ಹಾರಿಸಲಿಲ್ಲ. ಇಡೀ ಪ್ರಪಂಚವೇ ಭಾರತದ ಸ್ವಾತಂತ್ರ್ಯ ದಿನ ಆಚರಿಸುವಾಗ, ನಮ್ಮ ಮಹಾರಾಜರೇಕೆ ರಾಷ್ಟ್ರಧ್ವಜವನ್ನು ಹಾರಿಸಲಿಲ್ಲ' ಎಂದು ಕೇಳಿದರು.[79] ಈ ಸಭೆಗೆ ಸುಮಾರು ಒಂದೂವರೆ ಲಕ್ಷ ಜನ ಸೇರಿದ್ದು ಆಗಿನ ಕಾಲದ ಬೃಹತ್‌ಸಭೆ ಇದಾಗಿತ್ತು. ಸಭೆ ಮುಗಿದ ನಂತರ ಹೊರಟ ಮೆರವಣಿಗೆ ಸುಮಾರು ಮೂರು ಮೈಲಿ ಉದ್ದದ ಅಭೂತ ಪೂರ್ವದ್ದಾಗಿತ್ತು[80] ಎಂದಿದ್ದಾರೆ.

1947ರ ಸೆಪ್ಟೆಂಬರ್ 1 ರಂದು ಸಂಜೆ ಬೆಂಗಳೂರಿನ ಬನಪ್ಪಪಾರ್ಕ್‌ನಲ್ಲಿ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಅಭೂತಪೂರ್ವ ಸಾರ್ವಜನಿಕ ಸಭೆ ಸೇರಿತ್ತು. ಸುಮಾರು ಎರಡು ಲಕ್ಷ ಜನ ಸೇರಿದ್ದರು. ವೇದಿಕೆ ಮೇಲೆ ಕಾಂಗ್ರೆಸ್ ಮುಖಂಡರು ಆಸೀನರಾಗಿದ್ದರು.

ಕೆ.ಸಿ. ರೆಡ್ಡಿ ಅಖಂಡ ಜನಸ್ತೋಮವನ್ನು ಉದ್ದೇಶಿಸಿ "ಬೆಂಗಳೂರಿನಲ್ಲೊಂದು ಇಂತಹ ಸಭೆ ಸೇರಿರಲಿಲ್ಲವೆಂದೂ, ಆಡಳಿತ ಪ್ರಮುಖರು ಈ ಸಭೆಯನ್ನು ಪ್ರತ್ಯೇಕ್ಷ ಕಂಡದ್ದೇ ಆದರೆ, ಮೈಸೂರಿನ ಜನ, ಪ್ರಜೆಗಳು, ಕೇವಲ ತಮ್ಮ ಹಿಂದಿರುವ ಸ್ವಾರ್ಥಿಗಳಷ್ಟೇ ಅಲ್ಲ ಎಂಬುದು ಅರಿವಾಗುತ್ತಿತ್ತೆಂದೂ ಹೇಳಿ, 'ಮಾಡೋಣ, ಇಲ್ಲವೇ ಮಡಿಯೋಣ. ಹಿಂದೆ ದಿಲ್ಲಿ ಚಲೋ ಎಂದು ಸುಭಾಷ್ ಚಂದ್ರಬೋಸರು ಹೊರಟಿದ್ದರು. ರಕ್ತಕೋಟೆಯ ಮೇಲೆ ತ್ರಿವರ್ಣ ಧ್ವಜವನ್ನೇರಿಸಲು, ನಾವೀಗ ಅರಮನೆಯ ಬಳಿಗೆ ಹೋಗೋಣ. 'ದೊರೆತನಕ ದೂರು' ಎಂಬ ನಾಣ್ನುಡಿಯನ್ನು ಸ್ಮರಿಸೋಣ 'ಮೈಸೂರು ಚಲೋ' ನಮ್ಮ ಘೋಷಣೆಯಾಗಲಿ! ಸೆಪ್ಟೆಂಬರ್ ನಾಲ್ಕರಂದು ಮನೆ ಬಿಟ್ಟು ಹೊರಡುವ ಸ್ವಾತಂತ್ರ್ಯವೀರರು ಪೂರ್ಣ ಜವಾಬ್ದಾರಿ ಸರ್ಕಾರವನ್ನು ಪಡೆಯದೆ ತಮ್ಮ ಮನೆಗಳಿಗೆ ಹಿಂತಿರುಗಬಾರದು ಎಂದೂ, 'ಜವಾಬ್ದಾರಿ ಸರ್ಕಾರ ಬಂದರೂ ಅರಮನೆ ಮುಂದೆ ಹೋಗಿ ಪ್ರಭುಗಳನ್ನು ಅಭಿನಂದಿಸಿ ಬರುತ್ತೇವೆ. ಗುರಿ ಸಾಧನೆ ಆಗಲಿ, ಆಗದಿರಲಿ ಮೈಸೂರು ಚಲೋ ಆಗಲೇಬೇಕು,

---

78. ಸುಂದರರಾವ್ .ಬ.ನ : ಚಲೋ ಮೈಸೂರು ವನವಿಹಾರಿ, ಪುಟ–14.
79. ಸೂರ್ಯನಾಥಕಾಮತ್ (ಸಂ) : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ–2, ಪುಟ–133.
80. ನರಸಿಂಹಯ್ಯ .ಎಚ್ : ಹೋರಾಟದ ಹಾದಿ / ಆತ್ಮಕಥೆ, ಪುಟ–107.

ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ನಡೆಸುವುದರ ಉದ್ದೇಶ ಮಹಾರಾಜರ ಕೀರ್ತಿಗಾಗಲಿ, ಗೌರವಕ್ಕಾಗಲಿ ಯಾವ ವಿಧವಾದ ಕುಂದುಂಟು ಮಾಡುವುದಿಲ್ಲ ಎಂದು ತ್ರಿಕರಣ ಪೂರ್ವಕವಾಗಿ ಘೋಷಿಸುತ್ತೇನೆ. ಪ್ರಜೆಗಳಿಗೂ, ಪ್ರಭುಗಳಿಗೂ ಮಧ್ಯೆ ಇರುವ ಅಡ್ಡಿಯನ್ನು ಕೊನೆಗಾಣಿಸಿ, ಉಭಯತ್ರರಿಗೂ ನಿಕಟ ಸಂಪರ್ಕ ಉಂಟು ಮಾಡುವುದೇ ಅರಮನೆಯ ಮುಂದೆ ಸತ್ಯಾಗ್ರಹ ಹೂಡುವುದರ ಗುರಿ" ಎಂದು ಸ್ಪಷ್ಟಪಡಿಸಿದರು.[81]

ಮೈಸೂರು ಕಾಂಗ್ರೆಸ್‌ನ ನಾಲ್ಕು ಬೇಡಿಕೆಗಳು

1. ಮೈಸೂರು ಸಂಸ್ಥಾನದಲ್ಲಿ ಕೂಡಲೇ ಸಂಪೂರ್ಣ ಜವಾಬ್ದಾರಿ ಸರ್ಕಾರದ ಘೋಷಣೆಯಾಗಬೇಕು.
2. ಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಉದ್ದೇಶಕ್ಕಾಗಿ ಒಂದು ರಾಜ್ಯಾಂಗ ರಚನೆ ಆಗುವವರೆಗೆ ಶಾಸನಸಭೆಗಳ ವಿಶ್ವಾಸಕ್ಕೆ ಪಾತ್ರವಾದ ಒಂದು ತಾತ್ಕಾಲಿಕ ಮಂತ್ರಿಮಂಡಲದ ರಚನೆಯಾಗಬೇಕು.
3. ರಾಜ್ಯಾಂಗವನ್ನು ರಚಿಸಲು ಎರಡು ಸಭೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾಸಭೆಯನ್ನು ರಚಿಸಬೇಕು.
4. ಬಂಧನದಲ್ಲಿರುವ ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಬೇಕು.[82]

ಸಭೆ 'ಆರ್ಕಾಟ್ ಬಾಯ್ಕಾಟ್, ತಂಬೂಚೆಟ್ಟಿ ಚಟ್ಟ ಕಟ್ಟಿ, ಕೆ.ಸಿ. ರೆಡ್ಡಿ ಪಟ್ಟಾ ಕಟ್ಟಿ' ಎಂದು ಕೂಗಿದರು.

ಮೈಸೂರು ಸರ್ಕಾರ 'ಮೈಸೂರು ಚಲೋ' ಸತ್ಯಾಗ್ರಹ ವಿವರಗಳನ್ನು ಜನರಿಗೆ ನೀಡುತ್ತಿದ್ದ ಪತ್ರಿಕೆಗಳ ಮೇಲೆ 1947ರ ಆಗಸ್ಟ್ 8ರಂದು ಹೇರಿದ್ದ ನಿಷೇದಾಜ್ಞೆಯನ್ನು ವಿರೋಧಿಸಿ ಸಂಸ್ಥಾನದ ಒಂಭತ್ತು ಪತ್ರಿಕೆಗಳು 1947ರ ಸೆಪ್ಟೆಂಬರ್ 2 ರಿಂದ 1947ರ ಸೆಪ್ಟೆಂಬರ್ 29ರವರೆಗೆ ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸಿದವು. ರಾಷ್ಟ್ರೀಯ ಪತ್ರಿಕೆಗಳೂ ಸರ್ಕಾರದ ಈ ಕ್ರಮವನ್ನು ಪ್ರತಿಭಟಿಸಿ ತಾವು ಪ್ರಕಟಣೆಯನ್ನು ನಿಲ್ಲಿಸಿದವು.[83]

ಮೈಸೂರು ಕಾಂಗ್ರೆಸ್‌ನ ಸರ್ವಾಧಿಕಾರಿ ಕೆ.ಸಿ.ರೆಡ್ಡಿ ಅವರು 1947ರ ಸೆಪ್ಟೆಂಬರ್ 2ರಂದು ಬೆಂಗಳೂರಿಗೆ ಎಚ್.ಎಸ್. ದೊರೆಸ್ವಾಮಿ, ಆರ್.ಎಸ್. ಆರಾಧ್ಯ ಮತ್ತು ಎಂ.ವಿ.

---

81. ಉಮಾಪತಿ .ಕೆ.ಎಸ್ : ಮೈಸೂರು ಚಲೋ, ಪುಟ–13.
82. ಸುಂದರರಾವ್ .ಬ.ನ : ಚಲೋ ಮೈಸೂರು, ಪುಟ–15.
83. ತೀ.ತಾ. ಶರ್ಮ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, ಪುಟ–42.

ಕೃಷ್ಣಪ್ಪ ಮುಂತಾದವರನ್ನು ಕರೆಸಿಕೊಂಡು ಭೂಗತ ಕಾರ್ಯಕ್ಕೆ ಸಿದ್ಧರಾಗಬೇಕೆಂದು ಹೇಳಿ, ಆರಾಧ್ಯರನ್ನು ಕೂಡಲೇ ಹುಬ್ಬಳ್ಳಿಗೆ ಹೋಗಲು ಸೂಚಿಸಿದರು. ಅಲ್ಲದೆ ಮೂರು ನಾಲ್ಕು ದಿನಗಳಲ್ಲಿ ನಮ್ಮೆಲ್ಲರನ್ನು ಬಂಧಿಸುವ ಸೂಚನೆ ಇದೆ. ಆ ಕಾರಣ ನಾವೆಲ್ಲ ಮತ್ತೆ ನಾಡಿದ್ದು ಸೇರೋಣ ಎಂದು ತಿಳಿಸಿದರು.[84]

ಮೈಸೂರು ದಿವಾನರಾದ ಆರ್ಕಾಟ್ ಅವರಿಗೂ, ಮೈಸೂರು ಕಾಂಗ್ರೆಸ್ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರಿಗೂ ಅನೇಕ ಪತ್ರ ವ್ಯವಹಾರಗಳು ನಡೆದರು ಕೂಡ, ಯಾವುದೂ ಇತ್ಯರ್ಥವಾಗದ ಕಾರಣ ಮೈಸೂರು ಕಾಂಗ್ರೆಸ್ 1947ರ ಸೆಪ್ಟೆಂಬರ್ 4ರಂದು ನಡೆಯಲಿರುವ 'ಮೈಸೂರು ಚಲೋ' ಸತ್ಯಾಗ್ರಹದಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ದಿವಾನರ ಸೂಚನೆಯಂತೆ ಪೊಲೀಸ್ ಸೂಪರಿಂಟೆಂಡೆಂಟ್ ಎಸ್.ವಿ. ಬಾಬುರೆಡ್ಡಿಯವರು 1947ರ ಸೆಪ್ಟೆಂಬರ್ 3ರ ರಾತ್ರಿ ಕೆ.ಸಿ. ರೆಡ್ಡಿ ಅವರನ್ನು ಹಾಸಿಗೆಯಿಂದ ಅನಾಮತ್ತು ಎತ್ತಿಕೊಂಡು ಹೋಗಿ ಬಂಧಿಸಿ, ಹಾಸನದ ಜೈಲಿಗೆ ಹಾಕಿದರು. ಅಲ್ಲದೆ ಕೆ.ಟಿ. ಭಾಷ್ಯಂ, ಎಸ್. ಚನ್ನಯ್ಯ, ಎಚ್. ಸಿದ್ಧಯ್ಯ, ಟಿ. ಸಿದ್ಧಲಿಂಗಯ್ಯ, ಎಸ್.ಕೆ. ಕುಮಾರನ್, ಎ.ಜಿ. ರಾಮಚಂದ್ರರಾವ್, ಎ.ಜಿ. ಬಂದೀಗೌಡ, ಎಚ್.ಕೆ. ವೀರಣ್ಣಗೌಡ, ಟಿ. ಸುಬ್ರಮಣ್ಯ, ಕೆ.ಆರ್. ಮಾಧವರಾವ್ ಮತ್ತು ಎಂ. ಹುಚ್ಚೇಗೌಡ ಅವರುಗಳನ್ನು ಬೆಂಗಳೂರಿನಲ್ಲಿ ಬಂಧಿಸಲಾಯಿತು.[85] ಹೀಗೆ ಸಂಸ್ಥಾನದಾದ್ಯಂತ ಕಾಂಗ್ರೆಸ್‌ನಾಯಕರು, ಕಾರ್ಯಕರ್ತರನ್ನು ಬಂಧಿಸಿ ಸೆರೆಮನೆಗೆ ಹಾಕಲಾಯಿತು. ಈ ಬಂಧನಗಳಿಂದ ಜನತೆಗೆ ಉತ್ಸಾಹ ಕುಗ್ಗುವ ಬದಲು ಉತ್ಸಾಹ ಹೆಚ್ಚಾಯಿತು.

1947ರ ಸೆಪ್ಟೆಂಬರ್ 4ರಂದು ಬೆಳಗ್ಗೆ ಚಿಕ್ಕಪೇಟೆಯಲ್ಲಿದ್ದ ಕಾಂಗ್ರೆಸ್ ಕಚೇರಿ ಬಳಿಯೇ ಸತ್ಯಾಗ್ರಹ ದಳಗಳನ್ನು ಪೊಲೀಸರು ಬಂಧಿಸಿದರು. ಕೆ.ಸಿ. ರೆಡ್ಡಿ ಅವರ ಹೆಂಡತಿ ಶ್ರೀಮತಿ ಸರೋಜಮ್ಮರೆಡ್ಡಿ ಅವರ ನಾಯಕತ್ವದಲ್ಲಿ ಸತ್ಯಾಗ್ರಹ ದಳವೊಂದು 'ಮೈಸೂರು ಚಲೋ' ಎನ್ನುತ್ತಾ ಯಾವ ಅಡ್ಡಿ ಆತಂಕಗಳಿಗೂ ಜಗ್ಗದೆ ಮುನ್ನಡೆಯಿತು. 'ಮಹಾತ್ಮಾ ಗಾಂಧೀಜಿ ಕೀ ಜೈ, ಜವಾಬ್ದಾರಿ ಸರ್ಕಾರ ಕೀ ಜೈ, ಆರ್ಕಾಟ್ ಬಾಯ್ಕಾಟ್' ಎಂದು ಘೋಷಣೆ ಕೂಗುತ್ತಾ ಸೆಂಟ್ರಲ್ ಪೊಲೀಸ್ ಸ್ಟೇಷನ್ ಬಳಿ ಹೋಗುತ್ತಿದ್ದ ಸತ್ಯಾಗ್ರಹಿಗಳ ಮೇಲೆ ಪೊಲೀಸರು ಏಕಾಏಕಿ ನಡೆಸಿದ ಲಾಠಿ ಪ್ರಹಾರದಲ್ಲಿ ಶ್ರೀಮತಿ ಸರೋಜಮ್ಮ ಕೆ.ಸಿ. ರೆಡ್ಡಿ ಅವರ ತಲೆಗೆ ಏಟುಬಿದ್ದು ಗಾಯಗೊಂಡರು. ಗೋಲಿಬಾರ್‌ನಲ್ಲಿ ಹಲವರು ಸತ್ತರು, ಹಲವಾರು ಮಂದಿ ಗಾಯಗೊಂಡರು.[86]

---

84. ಆರಾಧ್ಯ .ಆರ್.ಎಸ್ : ಸ್ವಾತಂತ್ರ್ಯ ಶ್ರೀ ಆರ್.ಎಸ್. ಆರಾಧ್ಯ ಜೀವನ ಚರಿತ್ರೆ, ಪುಟ–52.
85. ಸುಂದರರಾವ್ .ಬ.ನ : ಚಲೋ ಮೈಸೂರು, ಪುಟ–88.
86. ಉಮಾಪತಿ .ಕೆ.ಎಸ್ : ಮೈಸೂರು ಚಲೋ, ಪುಟ–18.

ಸಂಸ್ಥಾನದಾದ್ಯಂತ ನಡೆದ ಬಂಧನಗಳಿಂದ ಸ್ವಯಂ ಪ್ರಚೋದನೆಗೊಂಡ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಉಪಾಧ್ಯಾಯರು, ವ್ಯಾಪಾರಿಗಳು, ಕಾರ್ಮಿಕರು, ವಕೀಲರು, ಕೂಲಿಕಾರರು, ಹುಡುಗರು, ಪೋಲೀಸರು, ಜನಸಾಮಾನ್ಯರು ಮತ್ತು ರೈತರು ಈ ಚಳವಳಿಯಲ್ಲಿ ಜೀವನದ ಹಂಗುತೊರೆದು ಭಾಗವಹಿಸಿದರು.

ಈ ಚಳವಳಿಯಲ್ಲಿ ಹರತಾಳಗಳು, ಮುಷ್ಕರಗಳು, ಮೆರವಣಿಗೆಗಳು, ರಾಷ್ಟ್ರ ಧ್ವಜಾರೋಹಣಗಳು, ರೈಲ್ವೆಹಳಿ ಕಿತ್ತುಹಾಕುವುದು, ರೈಲಿನಲ್ಲಿ ಟಿಕೆಟ್‌ರಹಿತ ಪ್ರಯಾಣ, ವಿದ್ಯುತ್ ತಂತಿ ಕತ್ತರಿಸುವುದು, ದೂರವಾಣಿ ತಂತಿ ಕತ್ತರಿಸುವುದು, ಸರ್ಕಾರಿ ಆಸ್ತಿ-ಪಾಸ್ತಿಗಳ ನಾಶ, ಸೇತುವೆಗಳ ನಾಶ, ಪೊಲೀಸರಿಗೆ ದಿಗ್ಬಂಧನ, ಜೈಲಿನ ಗೋಡೆಗೆ ಡೈನಾಮೆಂಟ್ ಇಟ್ಟು ಸ್ಫೋಟಿಸುವುದು. ಹೀಗೆ ಬೃಹತ್ ರೂಪತಾಳಿದ ಚಳವಳಿಯಿಂದ ಕಕ್ಕಾಬಿಕ್ಕಿಯಾದ ಸರ್ಕಾರ ನಿಷೇದಾಜ್ಞೆ, ಲಾಠಿಪ್ರಹಾರ, ಗೋಲಿಬಾರ್‌ಗಳು ನಡೆಸಿತು. ಅಕ್ಷರಶಃ ಸಂಸ್ಥಾನದಲ್ಲೆಲ್ಲ ಗೆರಿಲ್ಲಾಯುದ್ಧ ರೀತಿ ಹೋರಾಟ ನಡೆಯುತ್ತಿತ್ತು'.[87]

ಬೆಂಗಳೂರಿನಲ್ಲಿ ಒಂದು ಗುಪ್ತ ರೇಡಿಯೋವನ್ನು ಚಳವಳಿಗಾರರು ಸ್ಥಾಪಿಸಿದ್ದರು. ಇದು 39 ಮತ್ತು 42 ಮೀಟರ್‌ಗಳಲ್ಲಿ ಪ್ರಸಾರವಾಗುತ್ತಿದ್ದು, ವಿವಿಧ ಬಡಾವಣೆಗಳಲ್ಲಿ ನಡೆಯುತ್ತಿದ್ದ ರಾಜಕೀಯ ಚಟುವಟಿಕೆಗಳನ್ನು ಬಿತ್ತರಿಸುವುದರ ಮೂಲಕ ಚಳವಳಿಗಾರರಲ್ಲಿ ಸ್ಫೂರ್ತಿಯನ್ನು ತುಂಬುತ್ತಿತ್ತು. ಇದಕ್ಕೆ 'ಪ್ರಜಾವಾಣಿ ರೇಡಿಯೋ' ಎಂದು ಕರೆಯುತ್ತಿದ್ದರು. ಇದು ಬೆಳಗ್ಗೆ 8-15, ಮಧ್ಯಾಹ್ನ 1-45, ಸಂಜೆ 6-15 ಮತ್ತು ರಾತ್ರಿ 9-15ಕ್ಕೆ ಸುದ್ಧಿ ಬಿತ್ತರಿಸಲಾಗುತಿತ್ತು.[88]

ಸರ್ಕಾರ ಪತ್ರಿಕೆಗಳ ಮೇಲೆ ನಿಷೇಧಾಜ್ಞೆ ಜಾರಿ ಮಾಡಿದ್ದರು. ಅದನ್ನು ಧಿಕ್ಕರಿಸಿ ಇನ್‌ಕ್ವಿಲಾಬ್ ವಾಹಿನಿ, ಕೇಸರಿ, ವಿಶ್ವ ಕರ್ಣಾಟಕ, ಸ್ವಾತಂತ್ರ್ಯೋದಯ ಪತ್ರಿಕೆಗಳು ಭೂಗತ ಪತ್ರಿಕೆಗಳಾಗಿ ಕಾರ್ಯನಿರ್ವಹಿಸಿದವು. ಈ ಮೈಸೂರು ಚಲೋ ಚಳವಳಿಯಿಂದ ಸಂಸ್ಥಾನದಾದ್ಯಂತ ನಡೆದ ಗೋಲಿಬಾರ್‌ನಿಂದ ತುಮಕೂರು-2, ಮಧುಗಿರಿ-2, ಕೋಲಾರದ ಶಿಡ್ಲಘಟ್ಟದಲ್ಲಿ-2, ಹೊಸದುರ್ಗ-6, ಹೊಳೆನರಸೀಪುರ-1, ಮೈಸೂರು-1, ಬೆಂಗಳೂರು-7, ಚೆಳ್ಳಕೆರೆ, ಪಾಂಡವಪುರ, ತೀರ್ಥಹಳ್ಳಿ, ದಾವಣಗೆರೆಗಳಲ್ಲಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಜನರ ಬಲಿಯಾದರು. ಐದುಸಾವಿರಕ್ಕೂ ಹೆಚ್ಚು ಜನರ ಬಂಧನಗಳಾಯಿತು.[89]

---

87. ತೀ.ತಾ. ಶರ್ಮ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, ಪುಟ-43.
88. ನರಸಿಂಹಯ್ಯ .ಎಚ್ : ಹೋರಾಟದ ಹಾದಿ / ಆತ್ಮಕಥೆ, ಪುಟ-120.
89. ರಾಮಸ್ವಾಮಿ .ಎಸ್.ಆರ್ : ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ಪುಟ-216.

ವಿಶೇಷವಾಗಿ ಶಿವಮೊಗ್ಗದಲ್ಲಿ ಸತ್ಯಾಗ್ರಹ ಮಾಡುತ್ತಿದ್ದ ಹನ್ನೆರಡು ಮಹಿಳೆಯರನ್ನು ದಸ್ತಗಿರಿ ಮಾಡಲಾಯಿತು. ಅವರೆಂದರೆ ಎನ್.ಎಸ್. ಗೌರಮ್ಮ, ಟಿ. ರತ್ನಮ್ಮ, ಎಸ್. ಪೊನ್ನಮ್ಮ, ಪದ್ಮಾವತಿ ಕೊಲ್ಲೂರಯ್ಯ, ಅಂಬಮ್ಮ, ಹೆಚ್. ಪದ್ಮಾವತಿ, ಚಲ್ಲಮ್ಮ, ಎಸ್.ಕೆ. ಚಂದ್ರವದನ, ಸುನಂದ, ಕುಸುಮ, ಕೆ.ಜೆ. ರಂಗೂಬಾಯಿ, ಆರ್.ಎನ್. ಇಂದಿರ- ಪ್ರಮುಖರು.[90]

ಮೈಸೂರು ಸಂಸ್ಥಾನದಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಸತ್ಯಾಗ್ರಹ ಬಿರುಸಾಗಿ ನಡೆಯುತ್ತಿರಲು, ಪರಿಸ್ಥಿತಿ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರಲು, ಮೈಸೂರು ಸರ್ಕಾರ ಮಾತುಕತೆ ನಡೆಸುವ ದೃಷ್ಟಿಯಿಂದ ಮೈಸೂರು ಕಾಂಗ್ರೆಸ್‌ನ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರನ್ನು ಚಿಕ್ಕಮಗಳೂರು ಜೈಲಿನಿಂದ ಬೆಂಗಳೂರು ಸೆಂಟ್ರಲ್ ಜೈಲಿಗೆ ಕರೆಯಿಸಿಕೊಳ್ಳಲು ಬಯಸಿತು. ಚಿಕ್ಕಮಗಳೂರು ಜೈಲಿನಲ್ಲಿ ಕೆ.ಸಿ. ರೆಡ್ಡಿ, ಎಚ್. ಸಿದ್ಧಯ್ಯ, ಟಿ. ಸುಬ್ರಮಣ್ಯ, ಎ.ಜಿ. ಬಂಧೀಗೌಡ ಮುಂತಾದ ನಾಯಕರಿದ್ದರು. ಇವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಬೇಕೆಂದಿದ್ದಾಗ ಅಲ್ಲಿನ ಖೈದಿಗಳು ತಮ್ಮ ನಾಯಕರನ್ನು ಜೈಲಿನ ಮಹಾದ್ವಾರವನ್ನು ಪೂರ್ತಿತೆಗೆದ ಅವರನ್ನು ಹೊರ ಒಯ್ಯಬೇಕೆಂದೂ, ದ್ವಾರದಲ್ಲಿ ಇರುವ ಕಿಂಡಿಯಿಂದ ಅಲ್ಲವೆಂದೂ, ಹಠ ಹಿಡಿದು, ಅಡ್ಡ ಕುಳಿತು ಪ್ರತಿಭಟಿಸಿದಾಗ, ಮಹಾದ್ವಾರ ತೆರೆಸಿಯೇ ನಾಯಕರನ್ನು ಬೀಳ್ಕೊಟ್ಟ ಘಟನೆ ಚಳವಳಿಗಾರರಲ್ಲಿ ರೋಮಾಂಚನವನ್ನುಂಟು ಮಾಡಿತು.[91]

1947ರ ಸೆಪ್ಟೆಂಬರ್ 8ರಂದು ಮಹಾರಾಜರು 'ಜವಾಬ್ದಾರಿ ಸರ್ಕಾರ' ದಯ ಪಾಲಿಸುವ ಘೋಷಣೆ ಮಾಡಿದರು. ಅದರಂತೆ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಹಾಗೂ ಇತರ ನಾಯಕರನ್ನು ಚಿಕ್ಕಮಗಳೂರಿನಿಂದ ಬೆಂಗಳೂರು ಸೆಂಟ್ರಲ್‌ಜೈಲಿಗೆ ಕರೆದುಕೊಂಡು ಬಂದರು. ಸರ್ಕಾರ ಮತ್ತು ಕೆ.ಸಿ. ರೆಡ್ಡಿ ಅವರ ನಡುವೆ ಮಾತುಕತೆ ನಡೆಯುವಾಗ ಕೆ.ಸಿ. ರೆಡ್ಡಿ ಅವರು ಸ್ಪಷ್ಟಪಡಿಸಿದಂತೆ ಭಾರತ ರಾಜ್ಯಾಂಗ ರಚನಾ ಕಾರ್ಯ ಭಾರತ ದೇಶದ ಜನತಾ ಪ್ರತಿನಿಧಿಗಳಿಂದ ರೂಪುಗೊಳ್ಳುತ್ತಿರುವಾಗ ಸಂಸ್ಥಾನದ ಹೊರಗಿನವರಾದ ದಿವಾನರು, ಅವರಿಂದ ನೇಮಕವಾದ ಸಲಹಾ ಸಮಿತಿಯ ಸದಸ್ಯರು, ಇವರಿಂದ ರಚಿಸಲ್ಪಟ್ಟ ರಾಜ್ಯಾಂಗ ಎಷ್ಟರ ಮಟ್ಟಿಗೆ ಜನರ ಆಶೋತ್ತರಗಳನ್ನು ಸಾಧಿಸಬಹುದು ಎಂಬ ಎಚ್ಚರಿಕೆಯ ದೃಷ್ಟಿಕೋನ ಇವರು ಧೀಮಂತ ನಾಯಕರಾಗಿ ಹೊರ ಹೊಮ್ಮಿರುವುದನ್ನು ತೋರಿಸುತ್ತದೆ. ಮುಂದುವರೆಸಿ ಮೈಸೂರಿನ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳನ್ನು ಒಳಗೊಂಡ ರಾಜ್ಯಾಂಗ ಸಭೆಯೊಂದನ್ನು ಏರ್ಪಡಿಸುವವರೆಗೆ ಈ ಸತ್ಯಾಗ್ರಹ ನಿಲ್ಲಿಸಬಾರದೆಂದು ಕರೆ ನೀಡಿದರು.[92]

---

90. ಸೂರ್ಯನಾಥ ಕಾಮತ್ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ-2, ಪುಟ-150.
91. ಪೂರ್ವೋಕ್ತ : ಪುಟ-687.
92. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ-111.

ಮಹಾರಾಜರು ಹೊರಡಿಸಿದ ಘೋಷಣೆಯಿಂದ 1947ರ ಸೆಪ್ಟೆಂಬರ್ 9ರಂದು ಎಷ್ಟೋ ಮಂದಿ ಸಂಸ್ಥಾನದ ಗಣ್ಯವ್ಯಕ್ತಿಗಳೂ, ವರ್ತಕ ಮುಖಂಡರುಗಳು ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರನ್ನು ಜೈಲಿನಲ್ಲಿ ಭೇಟಿಯಾಗಿ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳು ವಂತೆ ಪ್ರೇರೇಪಿಸಲು ಯತ್ನಿಸಿದರು. ಆದರೆ ಕೆ.ಸಿ. ರೆಡ್ಡಿ ಅವರು ದೃಢ ಮನಸ್ಕರಾಗಿದ್ದರಿಂದ ಅಡ್ಡದಾರಿಗೆಳೆಯಲು ಅವರಿಂದ ಸಾಧ್ಯವಾಗಲಿಲ್ಲ.[93] ಈ ಘಟನೆಯು ಜವಾಬ್ದಾರಿ ಸರ್ಕಾರ ಸ್ಥಾಪನೆಯ ವಿಷಯದಲ್ಲಿ ಕೆ.ಸಿ. ರೆಡ್ಡಿ ಅವರು ಹೊಂದಿದ್ದ ಸ್ಪಷ್ಟ ಚಿತ್ರಣ ಗೋಚರವಾಗುತ್ತದೆ.

ಮೈಸೂರು ದಿವಾನರಾದ ಆರ್ಕಾಟ್‌ರು ಸರ್ಕಾರವು ಸಂಸ್ಥಾನದ ಪ್ರಜೆಗಳನ್ನು ಹಿಂಸಿಸಿ ಸುಲಿಗೆ ಮಾಡುತ್ತಿದೆಯೆಂಬ ಕಾರಣದಿಂದ 1947ರ ಸೆಪ್ಟೆಂಬರ್ 15ರಂದು ಕಾಂಗ್ರೆಸ್ ಮುಖಂಡರಾದ ಕೆ.ಆರ್. ಶ್ರೀಧರ್, ಮುದ್ದಪ್ಪ, ತಿಮ್ಮಾರೆಡ್ಡಿ, ಬರಗೂರು ರಾಮೇಗೌಡ, ಕೆ.ಎಲ್. ಶರ್ಮ, ಪಿ.ಬಿ. ನಾರಾಯಣಾಚಾರಿ ಮುಂತಾದವರು, ಮೈಸೂರು ಸರ್ಕಾರದ ವಿರುದ್ಧ ಒಂದು ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸಿ, ಪ್ರತಿ ಸರ್ಕಾರವನ್ನು ರಚಿಸಿರುವುದಾಗಿ ಮೈಸೂರಿನ ಪ್ರಜಾವರ್ಗವು ಘೋಷಿಸಿತು. ಅದೇ 'ಆಜಾದ್ ಮೈಸೂರು ಸರ್ಕಾರ'. ಅದು ತನ್ನದೇ ಆದ ಮಂತ್ರಿಮಂಡಲ ರಚಿಸಿಕೊಂಡಿತ್ತು.

6. ಆಜಾದ್ ಮೈಸೂರು ಸರ್ಕಾರದ ಮಂತ್ರಿಮಂಡಲ

1 ಕೆ.ಸಿ. ರೆಡ್ಡಿ : ಮುಖ್ಯಮಂತ್ರಿ, ಭಾರತ ಡೊಮಿನಿಯನ್ ಸಂಬಂಧ, ನ್ಯಾಯಾಂಗ.
2 ಕೆ.ಟಿ. ಭಾಷ್ಯಂ : ಹಣಕಾಸು, ಕಾರ್ಮಿಕರು.
3 ಹೆಚ್. ಸಿದ್ಧಯ್ಯ : ರೆವಿನ್ಯೂ.
4 ಕೆ. ಹನುಮಂತಯ್ಯ : ಒಳಾಡಳಿತ, ಸೈನ್ಯಖಾತೆ, ಪೊಲೀಸ್ ದಳ.
5 ಕೆ. ಪಟ್ಟಾಭಿರಾಮನ್ : ಆಹಾರ.
6 ಟಿ. ಸಿದ್ಧಲಿಂಗಯ್ಯ : ಶಿಕ್ಷಣ
7 ಎಚ್.ಸಿ. ದಾಸಪ್ಪ : ಆರೋಗ್ಯ, ಗ್ರಾಮಾಭ್ಯುದಯ.
8 ಟಿ. ಮರಿಯಪ್ಪ : ಕೈಗಾರಿಕೆ, ವಿದ್ಯುಚ್ಛಕ್ತಿ, ಅಬ್ಕಾರಿ, ಪಾನ ನಿರೋಧ.
9 ಆರ್. ಚೆನ್ನಿಗರಾಮಯ್ಯ : ವ್ಯವಸಾಯ, ರೇಷ್ಮೆ.
10 ಎಂ.ಎಲ್. ನಂಜರಾಜೇ ಅರಸ್ : ಪಬ್ಲಿಕ್ ವರ್ಕ್ಸ್, ರೈಲ್ವೆ.
11 ಎ.ಜೆಡ್. ಷರೀಫ್ : ಸ್ಥಳೀಯ ಸಂಸ್ಥೆಗಳು, ಸಮಾಚಾರ ಖಾತೆ.

93. ಸುಂದರರಾವ್ .ಬ.ನ : ಚಲೋ ಮೈಸೂರು, ಪುಟ–111.

ಚುನಾಯಿತರಿಂದ ರಾಜ್ಯಾಂಗ ರಚನೆ, ಆಹಾರ, ಬಟ್ಟೆ, ವಸತಿಗಳ ಪರಿಹಾರ, ಪ್ರತಿಬಂಧಕಾಜ್ಞೆಗಳ ತೆರವು, ರೈತರ, ಕಾರ್ಮಿಕರ, ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರ, ಮೇಲಧಿಕಾರಿಗಳ ಸಂಬಳ, ಲಂಚಕೋರ ಅಧಿಕಾರಿಗಳ ವಜಾ, ಸತ್ಯಾಗ್ರಹ ಹೋರಾಟದ ಸಮಯದಲ್ಲಿ ದೌರ್ಜನ್ಯವೆಸಗಿದ ಅಧಿಕಾರಿಗಳಿಗೆ ಉಗ್ರಶಿಕ್ಷೆ, ಮಂತ್ರಿಗಳಿಗೆ 1000 ರೂ. ಸಂಬಳ, ಒಂದು ಕಾರು, ಒಂದು ಮನೆ ಕೊಡುವುದು.[94]

'ಆಜಾದ್ ಮೈಸೂರು ಸರ್ಕಾರ'ದ ಘೋಷಣೆಯಂತೆ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ, ಗೌಡಗೆರೆ, ಬುಕ್ಕಾಪಟ್ನ ಹೋಬಳಿಗಳಿಗೆ ಸೇರಿದ 99 ಗ್ರಾಮಗಳ ಗ್ರಾಮಾಧಿಕಾರಿ ಗಳೂ, ಗ್ರಾಮ ಜನರೂ ಪ್ರತ್ಯೇಕವಾಗಿ ತಮ್ಮ ಹಸ್ತಾಕ್ಷರಗಳುಳ್ಳ ಘೋಷಣಾ ಪತ್ರವನ್ನು ಹಿಂದೂಪುರದ ಸತ್ಯಾಗ್ರಹ ಶಿಬಿರಕ್ಕೂ, ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್ ಸರ್ಕಾರಕ್ಕೂ ಕಳಿಸಿಕೊಟ್ಟರು. ಇದರ ಉದ್ದೇಶವೆಂದರೆ ದೇಶೋದ್ಧಾರವೇ ಅವರ ಗುರಿಯಾಗಿತ್ತು.[95]

ಹಾಗೆಯೇ ಗೌರಿಬಿದನೂರು ತಾಲ್ಲೂಕಿನ ಮೇಳ್ಯ, ಚಂದನದೂರು, ಹುಣಸೇನಹಳ್ಳಿ, ಬೈಚಾಪುರ, ವೆಳತಿ, ಜೀಲಾಕುಂಟ, ತುಮಕೂರು ಜಿಲ್ಲೆಯ ಶ್ರಾವಂಡಹಳ್ಳಿ, ವಿತಲಾಪುರ, ಓಬಳಾಪುರ, ಪೋಲೇನಹಳ್ಳಿ, ದೊಡ್ಡ ಧಾಳಿಘಟ್ಟ, ಚಿಕ್ಕ ಧಾಳಿಘಟ್ಟ, ಶಾಮಗಾನಹಳ್ಳಿ ಕೊಡಿಗೇನಹಳ್ಳಿಯ ಜನರು ಆರ್ಕಾಟ್ ಸರ್ಕಾರದ ಸಂಬಂಧ ತೊರೆದು ಇನ್ನು ಮುಂದೆ ಆಜಾದ್ ಮೈಸೂರು ಸರ್ಕಾರಕ್ಕೆ ಅಧೀನರಾಗಿರುತ್ತೇವೆಂದು ಘೋಷಿಸಿದರು.[96]

1947ರ ಸೆಪ್ಟೆಂಬರ್ 21ರಂದು ಮೈಸೂರು ಸಂಸ್ಥಾನದಲ್ಲಿ ನಿಷೇಧಾಜ್ಞೆಗೊಳಗಾಗಿದ್ದ ಒಂಭತ್ತು ಪತ್ರಿಕೆಗಳ ಮಾಲೀಕರು ತಾಯಿನಾಡು ಪತ್ರಿಕೆಯ ಮಾಲೀಕರಾದ ಪಿ.ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸರ್ಕಾರದೊಡನೆ ಮಾತುಕತೆ ನಡೆಸಿ ವಿಧಿಸಿದ ನಿಷೇಧಾಜ್ಞೆಯನ್ನು ಸರ್ಕಾರ ವಾಪಸ್ಸು ಪಡೆಯುವಂತೆ ಮಾಡಿ ನಂತರ ಪ್ರಕಟಣೆ ಆರಂಭಿಸಿದವು.[97]

ಮೈಸೂರು ಚಲೋ ಚಳವಳಿ ಸಂಸ್ಥಾನದ ಇತರ ಕಡೆಗಳಂತೆ ಕೋಲಾರ ಜಿಲ್ಲೆಯಲ್ಲೂ ಉಗ್ರರೂಪ ತಾಳಿತು. ಮೈಸೂರು, ಆಂಧ್ರ ಮತ್ತು ತಮಿಳುನಾಡುಗಳ ಗಡಿಭಾಗಗಳಲ್ಲಿ ಎಂ.ವಿ. ಕೃಷ್ಣಪ್ಪ ಹಾಗೂ ಇತರರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ಶಿಬಿರಗಳು ನಡೆಯುತ್ತಿದ್ದವು. ಮೈಸೂರು ಮತ್ತು ತಮಿಳುನಾಡು ಗಡಿಗಳಾದ ಚಿತ್ತೂರು, ವೆಲ್ಲೂರು, ಪೇರಂಬಟ್,

---

94. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ–108.
95. ಪೂರ್ವೋಕ್ತ : ಪುಟ–109.
96. ಪೂರ್ವೋಕ್ತ : ಪುಟ–118.
97. ಪೂರ್ವೋಕ್ತ : ಪುಟ–113.

ಗುಡಿಯಾತ್ತಂ, ಆಂಬೂರುಗಳಲ್ಲಿ ಮೈಸೂರು ಸತ್ಯಾಗ್ರಹಿಗಳು ಮೆರವಣಿಗೆ ಮಾಡಿ ಜನರ ಬೆಂಬಲವನ್ನು ಪಡೆದು, ಅವರಿಂದ ಆಹಾರ ಪದಾರ್ಥಗಳ ಸಂಗ್ರಹಣೆಯನ್ನು ಮಾಡುತ್ತಿದ್ದರು. ಮೈಸೂರು ಮತ್ತು ಆಂಧ್ರ ಗಡಿಯಾದ ರಾಜಪೇಟೆಯಲ್ಲಿ ಸತ್ಯಾಗ್ರಹ ಶಿಬಿರವನ್ನು ತೆರೆದಿದ್ದರು. ಹಾಗೆಯೇ ಕೋಲಾರ ಜಿಲ್ಲೆಯ ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ, ಕೆ.ಜಿ.ಎಫ್. ಇತ್ಯಾದಿ ಸ್ಥಳಗಳಲ್ಲಿ ಶಿಬಿರಗಳು ನಡೆಯುತ್ತಿದ್ದು. ಈ ಶಿಬಿರಗಳಿಗೆ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದಲೂ ವಿದ್ಯಾರ್ಥಿಗಳು ಮತ್ತು ಯುವಕರು ಬಂದು ಸೇರುತ್ತಿದ್ದರು.

ಶಿಬಿರಗಳಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿದಂತೆ ಶಿಬಿರಾರ್ಥಿಗಳಿಗೆ ಆಹಾರ ಒದಗಿಸುವ ಸಮಸ್ಯೆ ಎದುರಾದಾಗ, ಸತ್ಯಾಗ್ರಹಿಗಳು ಕ್ಯಾಸಂಬಳ್ಳಿಯ ಆಹಾರ ಡಿಪೋಗೆ ಮುತ್ತಿಗೆ ಹಾಕಿ ಅಲ್ಲಿದ್ದ ಅಕ್ಕಿ, ಗೋಧಿ, ಜೋಳವನ್ನು ಶಿಬಿರಕ್ಕೆ ಹೊತ್ತುಕೊಂಡು ಹೋದರು. ಅಲ್ಲದೆ ಮೈಸೂರು ಗಡಿಯಲ್ಲಿದ್ದ ಎಟಿಪೋತಪಲ್ಲಿ ಪೊಲೀಸ್‌ಸ್ಟೇಷನ್ ಮೇಲೆ ದಾಳಿ ಮಾಡಿ ಅಲ್ಲಿದ್ದ ಆಹಾರ ಪದಾರ್ಥ, ಶಸ್ತ್ರಾಸ್ತ್ರ ಮತ್ತು ಬಟ್ಟೆಗಳನ್ನು ಲೂಟಿ ಮಾಡಲಾಯಿತು. ಈ ಪ್ರದೇಶಗಳಲ್ಲಿ ವ್ಯಾಪಕ ಚಳವಳಿ ಹರಡುತ್ತಿದ್ದಂತೆ ರಿಸರ್ವ್ ಪೊಲೀಸರು ಚಳವಳಿಯನ್ನು ಹತ್ತಿಕ್ಕಲು ಶಿಬಿರಗಳು ನಡೆಯುತ್ತಿದ್ದ ಸ್ಥಳಗಳ ಮೇಲೆ ದಾಳಿ ಮಾಡಿ ಸೆರೆಸಿಕ್ಕ ಸತ್ಯಾಗ್ರಹಿಗಳನ್ನು ಬಂಧಿಸಿ, ಕೋಲಾರ ಜೈಲಿಗೆ ಹಾಕಲಾಯಿತು.[98]

ಕೋಲಾರ ಜಿಲ್ಲೆಯ ಕೆ.ಜಿ.ಎಫ್.ನಲ್ಲಿ 1947ರ ಸೆಪ್ಟೆಂಬರ್ 22ರಂದು ಗಣಿ ಕೆಲಸಗಾರರು ಚಿತ್ತೂರು ಜಿಲ್ಲೆಯ ಬೂದಗೂರು ಎಂಬಲ್ಲಿ ಕಮ್ಯೂನಿಸ್ಟ್ ನಾಯಕ ಪಿ.ಎನ್. ಗೋವಿಂದನ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಈಗಿನ ದಬ್ಬಾಳಿಕೆ ಸರ್ಕಾರ ನಿರ್ಮೂಲನೆಗಾಗಿ 'ಜವಾಬ್ದಾರಿ ಸರ್ಕಾರ' ಸ್ಥಾಪನೆಯಾಗುವವರೆಗೆ ಮುಷ್ಕರ ಮುಂದುವರೆಸಬೇಕೆಂಬ ನಿರ್ಣಯ ಕೈಗೊಂಡರು.[99]

'ಮೈಸೂರು ಚಲೋ' ಚಳವಳಿಯ ಸಂದರ್ಭದಲ್ಲಿ 'ಪೌರವಾಣಿ' ಪತ್ರಿಕೆ ವಿಶೇಷ ಸೇವೆ ಸಲ್ಲಿಸಿತ್ತು. ಎಚ್.ಎಸ್. ದೊರೆಸ್ವಾಮಿ ಮತ್ತು ಕೆ.ಆರ್. ಶ್ರೀಧರ್‌ರವರು ಹಿಂದೂಪುರ ಸೇವಾ ಮಂದಿರದ ಸಂಸ್ಥಾಪಕರಾದ ಲಿಂಗಣ್ಣನವರ ಆಶ್ರಯದಲ್ಲಿ ಮೈಸೂರು ಹೋರಾಟಕ್ಕೆ ಪೌರವಾಣಿ ಪತ್ರಿಕೆ ಸ್ಥಾಪನೆ ಹಾಗೂ ಮೈಸೂರು ಗಡಿಭಾಗಗಳಲ್ಲಿ ಹೋರಾಟವನ್ನು ಸಂಘಟನೆ ಮಾಡಲು ಅನಂತಪುರ ಜಿಲ್ಲಾ ಕೇಂದ್ರದ ಕಲೆಕ್ಟರಲ್ಲಿ ಪೌರವಾಣಿ, ಪೌರವೀರ, ಪೌರದೂತ, ಪೌರಭಾಸ್ಕರ, ಪೌರಮಾರ್ತಾಂಡ ಎಂಬ ಐದು ಪತ್ರಿಕೆಗಳ ಸಂಪಾದಕರಾಗಿ ಎಚ್.ಎಸ್. ದೊರೆಸ್ವಾಮಿ 'ಡಿಕ್ಲೇರ್' ಘೋಷಿಸಿಕೊಂಡರು.

98. ಪ್ರಜಾವಾಣಿ ಪತ್ರಿಕೆ : ಮೈಸೂರು ಚಲೋ, ದಿನಾಂಕ : 27-09-1997, ಪುಟ-8.
99. ದೊರೆಸ್ವಾಮಿ .ಎಚ್.ಎಸ್ : ಹೋರಾಟದ ದಿಟ್ಟ ಹೆಜ್ಜೆಗಳು, ಪುಟ-114.

ಪೌರವಾಣಿ ಪತ್ರಿಕೆ 1947ರ ಸೆಪ್ಟೆಂಬರ್ 7ರಂದು ಆರಂಭಿಸಲಾಯಿತು. ಇದು ಹಿಂದೂಪುರದ ಆದಣ್ಣಶೆಟ್ಟರ ಸುದರ್ಶನ ಪ್ರೆಸ್‌ನಲ್ಲಿ ಮುದ್ರಣಗೊಂಡು ಬೆಂಗಳೂರಿನ ಏಜೆಂಟ್ ಶಾಮಣ್ಣನವರಿಗೆ ದಿನವೂ ಒಬ್ಬ ಸತ್ಯಾಗ್ರಹಿ ತಲುಪಿಸುತ್ತಿದ್ದರು. ಈ ಪತ್ರಿಕೆ ಎಸ್.ಎಸ್.ಶಾಸ್ತ್ರೀ, ಶ್ರೀರಂಗ, ರುಮಾಲೆ ಚೆನ್ನಬಸವಯ್ಯ, ಕೆ.ಎಲ್. ಶರ್ಮಾ, ಸುಬ್ಬರಾಮಯ್ಯ, ಎಂ.ಎಂ. ಪರಶುರಾಂ ಅವರುಗಳ ಸಹಾಯದಿಂದ ನಿರಂತರವಾಗಿ ನಡೆಯಿತು.

ಹಾಗೆಯೇ ಮದ್ರಾಸ್‌ನಲ್ಲಿನ ಸತ್ಯಾಗ್ರಹ ಶಿಬಿರವನ್ನು ಎಸ್.ಎನ್. ಗುಪ್ತ ನಡೆಸುತ್ತಿದ್ದರು. ನಿಷ್ಠಾವಂತ ಕಾಂಗ್ರೆಸ್ ಸೇವಕರಾದ ಇವರು ಪೌರವಾಣಿ ಪತ್ರಿಕೆಗೆ ಬೇಕಾದ ಬ್ಲಾಕುಗಳು, ವ್ಯಂಗ್ಯ ಚಿತ್ರಗಳು, ಕಾಗದವನ್ನು, ಗುಪ್ತರವರ ವಿನಂತಿಯ ಮೇರೆಗೆ ಮದ್ರಾಸ್‌ನ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳ ಮಾಲೀಕರು ಒದಗಿಸುತ್ತಿದ್ದರು. ಇಲ್ಲಿ ಕೆ.ಪಿ.ಸಿ.ಸಿ.ಯ ನೆರವು ಪಡೆದು ಮೈಸೂರಿನ ಗಡಿ ಪ್ರದೇಶಗಳಲ್ಲಿ ಸತ್ಯಾಗ್ರಹವನ್ನು ಸಂಘಟಿಸಿ ಸತ್ಯಾಗ್ರಹದ ಕಾವು ಉಳಿಯುವಂತೆ ಮಾಡಿದ್ದರು.[100]

ಮಹಾರಾಜರು ಎರಡನೆಯ ಘೋಷಣೆಯನ್ನು ಹೊರಡಿಸಿದರು. ಅದರಂತೆ ಆಡಳಿತ ಶಾಖೆಗಳನ್ನೆಲ್ಲ ಎರಡು ಭಾಗಗಳಾಗಿ ವಿಂಗಡಿಸಿದರು. ಮೊದಲನೆಯ ಭಾಗದಂತೆ ಅರಮನೆ, ರಾಜಭಂಡಾರ, ಸೈನ್ಯ, ಹೈಕೋರ್ಟ್, ಪಬ್ಲಿಕ್ ಸರ್ವಿಸ್ ಕಮೀಷನರ್ ನೇಮಕ, ನ್ಯಾಯವಿಧಾಯಕ ಸಭೆ, ಪ್ರಜಾಪ್ರತಿನಿಧಿ ಸಬೆಗಳನ್ನು ಸೇರಿಸುವ ಅಧಿಕಾರ, ಆಡಳಿತ ನಡೆಸಲಾಗದ ಪರಿಸ್ಥಿತಿಯೊದಗಿದಾಗ ಕೆಲಸ ಮುಂದುವರೆಸುವ 'ವಿಶೇಷಾಧಿಕಾರ' ಇವು ಮಹಾರಾಜರಿಗೆ ಸೇರಿದ್ದು, ಎರಡನೆಯ ಭಾಗದಂತೆ ಉಳಿದ ಆಡಳಿತ ಶಾಖೆಗಳೆಲ್ಲ ಪ್ರಜಾಪ್ರತಿನಿಧಿಗಳಿಂದ ಆರಿಸಿದ ಮಂತ್ರಿಗಳಿಗೆ ಸೇರಿದ್ದು ಇತ್ಯಾದಿ ವಿವರಣೆ ಕೊಡಲಾಯಿತು. ಆದರೆ ಈ ಯಾವುದಕ್ಕೂ ಸರ್ವಾಧಿಕಾರಿ ಕೆ.ಸಿ ರೆಡ್ಡಿ ಅವರು ಒಪ್ಪದೆ 'ರಾಜ ಘೋಷಣೆ'ಯನ್ನು ತಿರಸ್ಕರಿಸಿದರು.[101]

1947ರ ಅಕ್ಟೋಬರ್ 6ರಂದು ಮಹಾರಾಜರು ಮೂರನೆಯ ಘೋಷಣೆ ಹೊರಡಿಸಿದರು. ಅದರಂತೆ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವುದು ಸರಿಯೆಂದು, ಮೈಸೂರು ಕಾಂಗ್ರೆಸ್ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಹಾಗೂ ಪ್ರಮುಖರನ್ನು ಬಿಡುಗಡೆ ಮಾಡಲು ಆಜ್ಞೆ ಮಾಡಿದರು. ಅದರಂತೆ ಅಕ್ಟೋಬರ್ 7ರಂದು ಕೆ.ಸಿ. ರೆಡ್ಡಿ ಇತರರನ್ನು ಬಿಡುಗಡೆ ಮಾಡಿತು. ಅಕ್ಟೋಬರ್ 8 ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಅವರು, ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರೊಡನೆ ಮಾತುಕತೆ ನಡೆಸಿದರು.

---

100. ಪೂರ್ವೋಕ್ತ : ಪುಟ–102.
101. ತಿರುಮಲೆ ಶ್ರೀ ರಂಗಾಚಾರ್ಯ ಮತ್ತು ಕುಮಾರಸ್ವಾಮಿ .ಎಂ (ಸಂ) : ಮೈಸೂರು ಸಂಸ್ಥಾನದ ವೃತ್ತ ಪತ್ರಿಕಾ ಇತಿಹಾಸ (ಲೇಖನಗಳ ಸಂಕಲನ), ಪುಟ–297.

ಅಕ್ಟೋಬರ್ 11 ಮೈಸೂರು ಕಾಂಗ್ರೆಸ್ ಇತಿಹಾಸದಲ್ಲಿ ಮಹತ್ವದ ದಿನವಾಗಿದ್ದು, ಸರ್ಕಾರಕ್ಕೂ ಮತ್ತು ಕಾಂಗ್ರೆಸ್‌ಗೂ ಒಪ್ಪಂದ ಏರ್ಪಟ್ಟಿತು. 1947ರ ಅಕ್ಟೋಬರ್ 12ರಂದು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ, ಕಾಂಗ್ರೆಸ್‌ನ ಇತರ ಐದು ಜನ ನಾಯಕರೊಡನೆ ಅರಮನೆಯಲ್ಲಿ ಮಹಾರಾಜ ಜಯಚಾಮರಾಜ ಒಡೆಯರ್‌ರನ್ನು ಭೇಟಿ ಮಾಡಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಕಾಂಗ್ರೆಸ್ ನಾಯಕರನ್ನು ಸ್ವಾಗತಿಸಿದ ಮಹಾರಾಜರು 'ಸಂಸ್ಥಾನದ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ತಿಳಿಸಿದರು'. ಅದೇ ದಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿ ಸರ್ಕಾರಕ್ಕೂ ಮತ್ತು ಕಾಂಗ್ರೆಸ್‌ಗೂ ಆದ ಒಪ್ಪಂದವನ್ನು ಅಂಗೀಕರಿಸಿತು.[102]

7. ದಿವಾನ್ ಎ.ಆರ್.ಮೊದಲಿಯಾರ್ ಮತ್ತು ಕೆ.ಸಿ. ರೆಡ್ಡಿ ನಡುವೆ ಐತಿಹಾಸಿಕ ಒಪ್ಪಂದ

ಮೈಸೂರಿನ ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಹಾಗೂ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರ ನಡುವೆ 1947ರ ಅಕ್ಟೋಬರ್ 11ರಂದು ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

ಎ) ಮಂತ್ರಿಮಂಡಲದ ಪುನರ್ ರಚನೆ

ಬಿ) ಮೈಸೂರು ರಾಜ್ಯಾಂಗ ರಚನಾ ಸಭೆ

ಎ) ಮಂತ್ರಿಮಂಡಲದ ಪುನರ್ ರಚನೆ

1 ಈಗಿನ ಮಂತ್ರಿಮಂಡಲವನ್ನು ವಿಸರ್ಜಿಸಿ ಹೊಸ ಮಂತ್ರಿಮಂಡಲವನ್ನು ರಚಿಸುವುದು.

2 ಕಾಂಗ್ರೆಸೇತರ ಮಂತ್ರಿಗಳಿಗೆ ಸಂಬಂಧಿಸಿದಂತೆ ಸೂಕ್ತ ಕಂಡ ರೀತಿಯಲ್ಲಿ ಇತರ ಪಕ್ಷಗಳೊಡನೆ ಸಮಾಲೋಚಿಸಿದ ನಂತರ ಸಚಿವ ಸಂಪುಟದ ಬಗ್ಗೆ ಮೈಸೂರು ಕಾಂಗ್ರೆಸ್ ಶಿಫಾರಸು ಮಾಡುವುದು.

3 ಮಂತ್ರಿಮಂಡಲದಲ್ಲಿ ಒಂಭತ್ತಕ್ಕಿಂತ ಕಡಿಮೆಯಿಲ್ಲದ ಮಂತ್ರಿಗಳಿರುತ್ತಾರೆ. ಅವರಲ್ಲಿ ಮೂವರಿಗೆ ಕಡಿಮೆ ಇಲ್ಲದಂತೆ ಕಾಂಗ್ರೆಸ್ ಒಟ್ಟು ಉಳಿದ ಪಕ್ಷಗಳಿಂದ ಆರಿಸಲಾಗುವುದು.

---

102. ತೀ.ತಾ. ಶರ್ಮ : ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, ಪುಟ–42.

4 ಶಾಸಕಾಂಗದ ವಿಶ್ವಾಸ ಪಡೆದಿರುವವರೆಗೆ ಮಂತ್ರಿಮಂಡಲ ಅಧಿಕಾರದಲ್ಲಿರುತ್ತದೆ.

5 ಹುದ್ದೆಯಲ್ಲಿ ಮುಂದುವರೆಯುವ ದಿವಾನರೊಡನೆ ಮಂತ್ರಿಮಂಡಲವು ಸಚಿವ ಸಂಪುಟವಾಗಿ ಕರ್ತವ್ಯ ನಿರ್ವಹಿಸುವುದು ಮತ್ತು ಎಲ್ಲಾ ವಿಷಯಗಳಲ್ಲೂ ಜಂಟಿ ಜವಾಬ್ದಾರಿಯ ಆಧಾರದ ಮೇಲೆ ವ್ಯವಹರಿಸುವುದು.

6 ಸಂಪುಟದ ನಿರ್ಧಾರಗಳನ್ನು ಓಟುಗಳ ಬಹುಮತದಿಂದ ಕೈಗೊಳ್ಳಲಾಗುವುದು.

7 ಕಾಂಗ್ರೆಸ್‌ನಿಂದ ಆರಿಸಲಾದ ಒಬ್ಬ ಸಚಿವರನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡಲಾಗುವುದು.

ಬಿ) ಮೈಸೂರು ರಾಜ್ಯಾಂಗ ರಚನಾ ಸಭೆ

1 ಜನರಿಂದ ಚುನಾಯಿತರಾದ ಪ್ರತಿನಿಧಿಗಳಿರುವ ರಾಜ್ಯಾಂಗ ರಚನಾ ಸಭೆಯನ್ನು ನೂತನ ಮಂತ್ರಿಮಂಡಲವು ಕೂಡಲೇ ರೂಪಿಸುವುದು.

2 ಶ್ರೀ ಮನ್ಮಹಾರಾಜರ ಕೃಪಾಶ್ರಯದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವಿರುವ ಆಧಾರದ ಮೇಲೆ ಸಂಸ್ಥಾನಕ್ಕಾಗಿ ಸಂವಿಧಾನ ಮಸೂದೆಯನ್ನು ರೂಪಿಸುವ ಕರ್ತವ್ಯವನ್ನು ರಾಜ್ಯಾಂಗ ರಚನಾ ಸಭೆಗೆ ವಹಿಸಲಾಗುವುದು.

3 ಘೋಷಣೆಯ ಅನುಬಂಧ 1ರಲ್ಲಿರುವ ಮೂಲ ಅಂಶಗಳಿಗೆ ಅಗತ್ಯವೆಂದು ತೋರುವ ಮಾರ್ಪಾಡುಗಳನ್ನು, ಅನುಬಂಧ-2ಕ್ಕೆ ಅವಶ್ಯಕವೆನಿಸಿದ ಬದಲಾವಣೆಗಳನ್ನು ರಾಜ್ಯಾಂಗ ರಚನಾ ಸಭೆಯು ತಾನು ರೂಪಿಸುವ ಮಸೂದೆಯಲ್ಲಿ ಸೇರಿಸಬಹುದಾಗಿದೆ.

4 ನೂತನ ರಾಜ್ಯಾಂಗವು 1948ರ ಜುಲೈ 1ರಂದು ಅಥವಾ ಅದಕ್ಕೆ ಮುಂಚೆ ಜಾರಿಗೆ ಬರುವುದು. [103]

ಈ ಒಪ್ಪಂದದಂತೆ ಮೈಸೂರು ಸರ್ಕಾರವು 'ಮೈಸೂರು ಚಲೋ' ಸತ್ಯಾಗ್ರಹ ಸಂಬಂಧ ಬಂಧಿಸಲ್ಪಟ್ಟ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿತು. ಈ ಸಂತೋಷ ಸಮಾಚಾರವನ್ನು ಕೇಳಿದ ಮಹಾತ್ಮ ಗಾಂಧೀಜಿ ಮತ್ತು ಸರ್ದಾರ್ ಪಟೇಲರು ಮಹಾ ರಾಜರನ್ನು, ಮೈಸೂರು ಕಾಂಗ್ರೆಸ್ ನಾಯಕರನ್ನು ಅಭಿನಂದಿಸಿದರು.

---

103. ನಡಾವಳಿಗಳು : ಮೈಸೂರು ಪ್ರಜಾ ಪ್ರತಿನಿಧಿ ಸಭೆ – 1947–48.

ಈ ಸಂತೋಷಕ್ಕೆ ಮೈಸೂರು ನಗರದಲ್ಲಿ ಕೆ.ಸಿ. ರೆಡ್ಡಿ ಅವರನ್ನು ಜೀಪಿನಲ್ಲಿ ಮೆರವಣಿಗೆ ಮಾಡಿದ ನಂತರ ಸುಬ್ಬರಾಯನ ಕೆರೆಯ ಅಂಗಳದಲ್ಲಿ ನಡೆದ ಬೃಹತ್ ಸಭೆಯಲ್ಲಿ ಸರ್ವಾಧಿಕಾರಿ ರೆಡ್ಡಿ ಅವರು ಮಾತನಾಡುತ್ತಾ "ಸರ್ಕಾರಕ್ಕೂ, ಕಾಂಗ್ರೆಸ್‌ಗೂ ಒಪ್ಪಂದ ಏರ್ಪಟ್ಟಿದೆ. ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮಹಾರಾಜರು ಒಪ್ಪಿದ್ದಾರೆಂದು ಘೋಷಿಸಿ ಇನ್ನು ಮುಂದೆ ಮೈಸೂರು ಕಾಂಗ್ರೆಸ್ ಯಾವ ವಿಧವಾದ ರಾಜಕೀಯ ಚಳವಳಿಯನ್ನು ನಡೆಸಬೇಕಾಗಿಲ್ಲ" ಎಂದು ಘೋಷಿಸಿದರು.[104]

ಹೀಗೆ 1947ರ ಸೆಪ್ಟೆಂಬರ್ 1ರಿಂದ 1947ರ ಅಕ್ಟೋಬರ್ 12ರವರೆಗೆ ಸಂಸ್ಥಾನದಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಹಾಗೂ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಮೈಸೂರು ಚಲೋ ಸತ್ಯಾಗ್ರಹ 42 ದಿನಗಳ ಅವಿರತ ಹೋರಾಟದ ಫಲವಾಗಿ ಜನತಾ ರಾಜ್ಯ ಅಥವಾ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಕಾರಣವಾಯಿತು. ಅಲ್ಲದೆ ಕ್ವಿಟ್ ಇಂಡಿಯಾ ಚಳವಳಿ ಭಾರತದ ಸ್ವಾತಂತ್ರ್ಯಕ್ಕೆ ನಡೆದ ಹೋರಾಟವಾದರೆ, ಮೈಸೂರು ಚಲೋ ಚಳವಳಿ ಮೈಸೂರು ರಾಜ್ಯದ ಸ್ವಾತಂತ್ರ್ಯಕ್ಕೆ ನಡೆದ ಹೋರಾಟವಾಗಿದೆ. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಹೂಡಿದ ತಂತ್ರಗಳನ್ನು ಬಳಸಿ ಯಶಸ್ಸು ಕಂಡಿದ್ದ ಮೈಸೂರು ಸಂಸ್ಥಾನದ ಜನತೆ, ಅದೇ ತಂತ್ರಗಳನ್ನೇ ಬಳಸಿ ಮೈಸೂರು ಚಲೋ ಚಳವಳಿ ಪೂರ್ಣ ಯಶಸ್ಸು ಕಾಣಲು ಸಾಧ್ಯವಾಯಿತು.

ಪ್ರಾಯಶಃ ಮೈಸೂರು ಚಲೋಕ್ಕೆ ಸರಿಸಾಟಿಯಾದ ಜನಾಂದೋಲನ ಮೈಸೂರು ಸಂಸ್ಥಾನದಲ್ಲಿ ಹಿಂದೆ ನಡೆದಿಲ್ಲ ಎಂಬುದೇ ಈ ಹೋರಾಟದ ವೈಶಿಷ್ಟ್ಯವಾಗಿದ್ದು, ಇತಿಹಾಸ ಪುಟಗಳಲ್ಲಿ ವಿಶೇಷವಾಗಿ ಗುರುತಿಸುವ ಕೆಲಸ ಇನ್ನಾದರೂ ಆಗಬೇಕಾಗಿದೆ.

♦♦

104. ಸ್ವಾತಂತ್ರ್ಯ ಸೇನಾನಿ ಎಂ.ಎಸ್. : ಜೋಯಿಸ್‌ರ ಆತ್ಮಕಥನ, ಪುಟ–110.

ಅಧ್ಯಾಯ – 5

ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಕೆ.ಸಿ. ರೆಡ್ಡಿ 1947–1952

1. ಹಿನ್ನೆಲೆ

ಸ್ವತಂತ್ರ ಮೈಸೂರು ರಾಜ್ಯವು ವಿಚಿತ್ರವಾದ ಮತ್ತು ವಿಶೇಷವಾದ ಘಟನೆಗಳಿಂದ ಕೂಡಿದ ಇತಿಹಾಸವುಳ್ಳ ರಾಜ್ಯವಾಗಿದೆ. ಈ ಇತಿಹಾಸವು ಭಾರತದ ಇತಿಹಾಸದ ಒಂದು ಭಾಗ. ಈ ರಾಜ್ಯ ಸ್ವಾತಂತ್ರ್ಯ ಪೂರ್ವದಲ್ಲಿ ಕೆಲವು ವಿಚಾರಗಳಲ್ಲಿ ಬ್ರಿಟಿಷ್ ಭಾರತದ ಮಾದರಿ ಸಂಸ್ಥಾನವಾಗಿತ್ತು. ಅನುಸರಿಸಲು ಅತ್ಯುತ್ತಮವಾದ ಸಂಪ್ರದಾಯಗಳನ್ನು ಪಡೆದಿತ್ತು. ಈ ಮೈಸೂರು ರಾಜ್ಯ, ಭಾರತ ಸ್ವತಂತ್ರಗೊಂಡು (15–08–1947) ಎಪ್ಪತ್ತು ದಿವಸಗಳ ನಂತರ ಅಸ್ತಿತ್ವಕ್ಕೆ ಬಂದಿತು. ದಿನಾಂಕ: 24–10–1947ರ ವಿಜಯದಶಮಿ ದಿವಸ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ ಅವರು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ತಮ್ಮ ಹದಿನೇಳು ವರ್ಷಗಳ ಕನಸಾಗಿದ್ದ ಜವಾಬ್ದಾರಿ ಸರ್ಕಾರ ಸ್ಥಾಪನೆಯನ್ನು ನನಸು ಮಾಡುವುದರೊಂದಿಗೆ ಸಾರ್ಥಕ ಪಡಿಸಿಕೊಂಡು, ಭದ್ರಬುನಾದಿಯನ್ನು ಹಾಕುವುದರೊಂದಿಗೆ ಇಂದಿನ ಕರ್ನಾಟಕ ರಾಜ್ಯದ ಬೆಳವಣಿಗೆಗೆ ಕಾರಣರಾಗಿದ್ದಾರೆ.

ನೂತನ ಮೈಸೂರು ರಾಜ್ಯ ರೂಪುಗೊಂಡಾಗ ಅದರ ವಿಸ್ತೀರ್ಣ 29,489 ಚದರ ಮೈಲಿ ಹೊಂದಿತ್ತು. ಇದು ಒಂಭತ್ತು ಜಿಲ್ಲೆಗಳನ್ನು ಒಳಗೊಂಡಿದ್ದು ಅವು ಬೆಂಗಳೂರು, ಚಿತ್ರದುರ್ಗ, ಹಾಸನ, ಕೋಲಾರ, ಕಡೂರು, ಮೈಸೂರು, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು. ಈ ಜಿಲ್ಲೆಗಳು ಸುಮಾರು ಹದಿನೆಂಟು ಸಾವಿರಕ್ಕೂ ಹೆಚ್ಚು ಗ್ರಾಮಗಳನ್ನು ಒಳಗೊಂಡಿದ್ದು, ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ ಶೇ. 95%ರಷ್ಟು ಜನ ಗ್ರಾಮಗಳಲ್ಲಿಯೇ ವಾಸ ಮಾಡುತ್ತಿದ್ದರು. ಈ ಗ್ರಾಮಗಳ ಅಭಿವೃದ್ಧಿಯು ಸರ್ವತೋಮುಖವಾಗಿ ಮುಂದು ವರೆಯದ ಹೊರತು ದೇಶವಾಗಲಿ, ರಾಜ್ಯವಾಗಲಿ, ಜನಾಂಗವಾಗಲಿ ಮುಂದುವರೆಯಲಾರದ ಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಸಮಯದಲ್ಲಿ ರಾಜ್ಯದ ಅಭಿವೃದ್ಧಿಗೆ ನಿಂತು ಕಾರ್ಯ ಸಾಧಿಸಲು ದೃಢ ಸಂಕಲ್ಪ, ಏಕಾಗ್ರಚಿತ್ರ, ಕಾರ್ಯದಕ್ಷತೆ, ನಿಸ್ವಾರ್ಥತೆ, ಪ್ರಾಮಾಣಿಕತೆ,

ಮುನ್ನುಗ್ಗುವ ಛಲ ಹೊಂದಿರುವ ವ್ಯಕ್ತಿ ಅವಶ್ಯಕವಾಗಿ ಬೇಕಾಗಿತ್ತು. ಈ ಎಲ್ಲ ಗುಣಗಳನ್ನು ಹೊಂದಿರುವ ಕೆ.ಸಿ. ರೆಡ್ಡಿಯವರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದು ಜನತೆಯ ಸಂತೋಷಕ್ಕೆ ಪಾರವೇ ಇರಲಿಲ್ಲ.

2. ಕೆ.ಸಿ. ರೆಡ್ಡಿ ಸರ್ಕಾರದ ಮಂತ್ರಿಮಂಡಲ

ಕಾಂಗ್ರೆಸ್ ಮಂತ್ರಿಗಳು

1. ಕೆ.ಸಿ. ಚಂಗಲರಾಯರೆಡ್ಡಿ – ಮುಖ್ಯಮಂತ್ರಿ
2. ಹೆಚ್.ಸಿ. ದಾಸಪ್ಪ – ಕೈಗಾರಿಕೆ ಮತ್ತು ಹಣಕಾಸು ಖಾತೆ
3. ಕೆ.ಟಿ. ಭಾಷ್ಯಂಐಯ್ಯಂಗಾರ್ – ಕಾನೂನು ಮತ್ತು ಕಾರ್ಮಿಕ ಖಾತೆ
4. ಎಚ್. ಸಿದ್ದಯ್ಯ – ಲೋಕೋಪಯೋಗಿ ಮತ್ತು ವ್ಯವಸಾಯ ಖಾತೆ
5. ಟಿ. ಮರಿಯಪ್ಪ – ಗೃಹಖಾತೆ
6. ಆರ್. ಚೆನ್ನಿಗರಾಮಯ್ಯ – ಸ್ಥಳೀಯ ಸಂಸ್ಥೆಗಳ ಖಾತೆ.

ಕಾಂಗ್ರೆಸ್ಸೇತರ ಮಂತ್ರಿಗಳು

7. ಡಿ.ಎಚ್. ಚಂದ್ರಶೇಖರಯ್ಯ – ಶಿಕ್ಷಣ ಖಾತೆ
8. ಪಾಮಡಿ ಸುಬ್ಬರಾಮ ಶೆಟ್ಟಿ – ಸಿಟಿ ಮುನ್ಸಿಪಾಲಿಟಿ ಮತ್ತು ಮುಜರಾಯಿ ಖಾತೆ
9. ಮಹಮದ್ ಷರೀಫ್ – ಸಾರ್ವಜನಿಕ ಆರೋಗ್ಯ ಮತ್ತು ಅಬ್ಕಾರಿ ಖಾತೆ

ಹಾಗೂ ಮೈಸೂರು ರಾಜ್ಯದ ದಿವಾನರಾಗಿ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅಧಿಕಾರ ಸ್ವೀಕರಿಸಿದರು.[1]

ಹೀಗೆ ಅಧಿಕಾರ ವಹಿಸಿಕೊಂಡ ಕೆ.ಸಿ. ರೆಡ್ಡಿ ನೇತೃತ್ವದ ಸರ್ಕಾರವು 1947ರ ನವೆಂಬರ್ 1ರಂದು **'ಮೈಸೂರು ಬಿಡುಗಡೆ ದಿನ'**ವನ್ನು ರಾಜ್ಯದಾದ್ಯಂತ ಆಚರಿಸಲು ಕರೆ ನೀಡಿತು.

---

1. REPORT ON THE ADMINISTRATION OF MYSORE, 1947-48.

3. ಕೆ.ಸಿ. ರೆಡ್ಡಿ ಸರ್ಕಾರ ಎದುರಿಸಿದ ಸವಾಲುಗಳು

ಮೈಸೂರು ರಾಜ್ಯದಲ್ಲಿ ಅಧಿಕಾರವಹಿಸಿಕೊಂಡ ಕೆ.ಸಿ. ರೆಡ್ಡಿ ಅವರ ಸರ್ಕಾರ ಆರಂಭದಲ್ಲಿಯೇ ಧೃತಿಗೆಡುವಂತಹ ಹಲವಾರು ಜಟಿಲ, ಸೂಕ್ಷ್ಮ ಸಮಸ್ಯೆಗಳಿಗೆ ತುತ್ತಾಗ ಬೇಕಾಯಿತು. ಅವು ಕೋಮು ಗಲಭೆ ಸಮಸ್ಯೆ, ಪ್ರಾಂತ ರಚನೆ ಹಾಗೂ ಏಕೀಕರಣ ಸಮಸ್ಯೆ, ಮೈಸೂರು ರಾಜ್ಯಾಂಗ ರಚನೆ ಸಮಸ್ಯೆ, ಆಹಾರ ಸಮಸ್ಯೆ, ನಿರಾಶ್ರಿತರ ಸಮಸ್ಯೆ, ಅರಮನೆ ಖಾಸಗಿ ಸ್ವತ್ತುಗಳ ಇತ್ಯರ್ಥ ಸಮಸ್ಯೆ, ಕಾಂಗ್ರೆಸ್ಸಿಗರ ಅಧಿಕಾರ ವ್ಯಾಮೋಹ ಸಮಸ್ಯೆ, ದಿವಾನ್ ಎ.ಆರ್. ಮೊದಲಿಯಾರ್ ನೇಮಕ ಸಮಸ್ಯೆ, ಹೊಸ ಕೈಗಾರಿಕೆಗಳ ಸ್ಥಾಪನೆ ಸಮಸ್ಯೆ, ಮೈಸೂರು ಸೈನ್ಯದ ವಿಲೀನ ಸಮಸ್ಯೆ, ಮಂತ್ರಿಮಂಡಲದ ಪುನರ್ ರಚನೆ ಸಮಸ್ಯೆ, ಇತ್ಯಾದಿಗಳು. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದರೆ ಆಡಳಿತ ವ್ಯವಸ್ಥೆಯನ್ನು ದೃಢಪಡಿಸಿ ಕೊಳ್ಳಬೇಕಾದ ಅನಿವಾರ್ಯತೆ ಸರ್ಕಾರಕ್ಕೆ ಉಂಟಾಗಿತ್ತು.

ಇದೇ ಕಾಲಕ್ಕೆ 1948 ಜನವರಿ 30, ಶುಕ್ರವಾರ ಮಹಾತ್ಮ ಗಾಂಧೀಜಿ ಹತ್ಯೆ ನಡೆದಿದ್ದು, ಇಡೀ ರಾಷ್ಟ್ರವನ್ನು ಬೆಚ್ಚಿಬೀಳಿಸಿದಂತೆ ಮೈಸೂರು ಸರ್ಕಾರದ ನಾಯಕರನ್ನು ದಿಗ್ಭ್ರಮೆಯಲ್ಲಿ ಮುಳುಗಿಸಿತ್ತು. ಏಕೆಂದರೆ ಕೆ.ಸಿ. ರೆಡ್ಡಿ ಅವರು ಮೈಸೂರು ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಗಳು ಹಾಗೂ ಸಮಸ್ಯೆಗಳ ನಿವಾರಣೆಯ ಬಗ್ಗೆ ಗಾಂಧೀಜಿಯವರನ್ನು ಭೇಟಿಯಾಗಿ ಚರ್ಚಿಸಿ, ಸಲಹೆ, ಸೂಚನೆಗಳನ್ನು ಪಡೆಯುತ್ತಿದ್ದರು.

ಆರಂಭದಲ್ಲಿ ಕೆ.ಸಿ. ರೆಡ್ಡಿ ಅವರು (1927) ವೈಯಕ್ತಿಕವಾಗಿ ಮೈಸೂರು ರಾಜಕೀಯಕ್ಕೆ ಬಂದಿದ್ದೆ ಗಾಂಧೀಜಿ ಅವರ ಸಲಹೆ, ಸೂಚನೆ ಮೇರೆಗೆ. ಹೀಗೆ ಕೆ.ಸಿ. ರೆಡ್ಡಿ ತಮ್ಮ ರಾಜಕೀಯ ಜೀವನದ ಪ್ರತಿಯೊಂದು ನಿರ್ಣಾಯಕ ಹಂತಗಳಲ್ಲೂ ಗಾಂಧೀಜಿ ಅವರ ಸಲಹೆ, ಸೂಚನೆ, ಮಾರ್ಗದರ್ಶನದಂತೆ ಮುಂದುವರೆದುಕೊಂಡು ಬಂದ ವ್ಯಕ್ತಿಯಾಗಿದ್ದರು. ಆ ನಂತರ ಕೆ.ಸಿ. ರೆಡ್ಡಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಆದಾಗಲು ಭೇಟಿ ಮಾಡಿ ಬಂದಿದ್ದರು. ಈ ಹತ್ಯೆ, ರಾಷ್ಟ್ರದ ಜನತೆಗೆ ಹೇಗೆ ತುಂಬಲಾರದ ನಷ್ಟವಾಗಿತ್ತೋ, ಹಾಗೆಯೇ ಕೆ.ಸಿ. ರೆಡ್ಡಿ ಅವರಿಗೂ ಆಗಿತ್ತು.

ಇಂತಹ ಸಂದರ್ಭದಲ್ಲಿ ಕೆ.ಸಿ. ರೆಡ್ಡಿ ಅವರು ಮಹಾತ್ಮಾಗಾಂಧೀಜಿ ಅವರ ಬಗ್ಗೆ ಮಾತನಾಡುತ್ತಾ "..... ಬಾಪೂಜಿ ಅವರ ಮರಣಕ್ಕಾಗಿ ಇಂದು ವಿಶ್ವದ ಮಾನವ ಕೋಟಿಯೇ ಶೋಕ ಸಾಗರದಲ್ಲಿ ಮುಳುಗಿದೆ. ಇಡೀ ಭಾರತವೇ ಕಣ್ಣೀರು ಸುರಿಸುತ್ತಿದೆ. 'ಜಗತ್ತಿಗೇ ಆದರ್ಶರಾದ ಮಹಾತ್ಮ'ರನ್ನು ಭಾರತೀಯರು ಕಳೆದುಕೊಂಡರು. ನಾವಿಂದು ದಾರಿ ಕಾಣದೆ ಕಗ್ಗತ್ತಲಿನಲ್ಲಿದ್ದೇವೆ. ದಾರಿ ತೋರಿಸುವಂತೆ ಪರಮಾತ್ಮನಲ್ಲಿ ಪ್ರಾರ್ಥನೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಗಾಂಧೀಜಿ ಅವರ ಆದರ್ಶ ಜೀವನವನ್ನು ಮುಂದಿಟ್ಟುಕೊಂಡು ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕಾಗಿದೆ.........ಬಾಪೂಜಿ ಅವರು

ಕಣ್ಮರೆಯಾಗಿದ್ದರೂ ಅವರು ಅಮರರು. ಅವರ ಆತ್ಮವು, ಪಂಡಿತ ಜವಹರಲಾಲ್ ನೆಹರು ಅವರು ನುಡಿದಂತೆ, ಸದಾ ಪ್ರಕಾಶಮಾನವಾಗಿ ಶೋಭಿಸುತ್ತಿರುವುದು. ಅವರ ಆತ್ಮಜ್ಯೋತಿಯು ನಮಗೆ ಮಾರ್ಗದರ್ಶಕವಾಗಲಿ........." ಎಂದಿದ್ದಾರೆ[2].

ಹೀಗೆ ಇಷ್ಟೆಲ್ಲಾ ಸಮಸ್ಯೆಗಳ ನಡುವೆ ಆಡಳಿತ ನಡೆಸಬೇಕಾದ ಅನಿವಾರ್ಯತೆ ಕೆ.ಸಿ. ರೆಡ್ಡಿ ಸರ್ಕಾರದ್ದಾಗಿತ್ತು. ಆಡಳಿತ ನಡೆಸುತ್ತಿದ್ದಂತೆಯೇ ಬೃಹದಾಕಾರದ ಸಮಸ್ಯೆಗಳು ಸರ್ಕಾರದ ಮುಂದೆ ಹುಟ್ಟಿಕೊಳ್ಳಲಾರಂಭಿಸಿದವು. ಇವು ಸಾಮಾನ್ಯ ಜನತೆಗೆ ಅರ್ಥವಾಗುವ ಮೊದಲೇ, ಅಧಿಕಾರದಲ್ಲಿರುವ ಜನಪ್ರತಿನಿಧಿಗಳು ಅರ್ಥ ಮಾಡಿಕೊಂಡು ಪರಿಹಾರ ಕಂಡು ಕೊಳ್ಳಬೇಕಾಗಿತ್ತು.

ಕೋಮು ಗಲಭೆ ಸಮಸ್ಯೆ

ಭಾರತ ಮತ್ತು ಪಾಕಿಸ್ತಾನಗಳ ವಿಭಜನೆಯಿಂದ ದೇಶದಾದ್ಯಂತ ಹಲವು ರಾಜ್ಯಗಳಲ್ಲಿ ಕೋಮು ಗಲಭೆಗಳು ಉಂಟಾದವು. 1947ರ ಡಿಸೆಂಬರ್‌ನಲ್ಲಿ ಬೆಂಗಳೂರು ನಗರದಲ್ಲಿ ಕೋಟೆ ಹೈಸ್ಕೂಲ್ ಉಪಾಧ್ಯಾಯರೊಬ್ಬರ ಮೇಲೆ ಮುಸ್ಲಿಂ ವಿದ್ಯಾರ್ಥಿಯೊಬ್ಬ ಹಲ್ಲೆ ಮಾಡಿದ ಕಾರಣ ಗಲಭೆಗಳು ತೀವ್ರತರವಾಗಿ ಪ್ರಾರಂಭವಾಯಿತು. ಈ ಗಲಭೆಗಳು ಬೆಂಗಳೂರಿನ ಸಿಟಿ ಮಾರ್ಕೆಟ್, ಕಲಾಸಿಪಾಳ್ಯ, ಚಾಮರಾಜಪೇಟೆ, ವಿಶ್ವೇಶ್ವರಪುರ, ಬಳೇಪೇಟೆ ಮತ್ತು ಶಿವಾಜಿನಗರ ಮುಂತಾದ ಪ್ರದೇಶಗಳಲ್ಲಿ ಸಾಕಷ್ಟು ಆಸ್ತಿ–ಪಾಸ್ತಿಗಳು ನಷ್ಟವಾಯಿತು. ಈ ಗಲಭೆಗಳು ಕೆ.ಸಿ. ರೆಡ್ಡಿ ಸರ್ಕಾರಕ್ಕೆ ಪ್ರಾರಂಭದಲ್ಲೆ ತೊಡಕನ್ನುಂಟು ಮಾಡಲು ಕಾರಣವಾಯಿತು. ಈ ಗಲಭೆಗಳಿಂದ 14 ಮಂದಿ ಮರಣ ಹೊಂದಿದರು, ನೂರಾರು ಮಂದಿ ಗಾಯಗೊಂಡರು. ಈ ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಲಾಠಿ ಪ್ರಹಾರ, ಟಿಯರ್‌ಗ್ಯಾಸ್ ಪ್ರಯೋಗಿಸಿದರೂ ಸಹಾ ಗಲಭೆಗಳು ನಿಯಂತ್ರಿಸಲಾಗದೆ ಗಲಭೆಗ್ರಸ್ಥ ಪ್ರದೇಶಗಳಲ್ಲಿ ಕರ್ಫ್ಯೂ ಜಾರಿಗೆ ತಂದರು. ಮುಂದೆ ಕೆ.ಸಿ. ರೆಡ್ಡಿ ಹಾಗೂ ಇತರ ಮಂತ್ರಿಗಳು ಗಲಭೆಗ್ರಸ್ಥ ಪ್ರದೇಶಗಳಲ್ಲಿ ಭೇಟಿ ನೀಡಿ ಜನರನ್ನು ಶಾಂತಿಯಾಗಿರುವಂತೆ ಕೋರಿದ್ದರಿಂದ ಗಲಭೆಗಳು ನಿಯಂತ್ರಣಕ್ಕೆ ಬಂದು, ಕ್ರಮೇಣ ಪರಿಸ್ಥಿತಿ ಹತೋಟಿಗೆ ಬರಲು ಕಾರಣವಾಯಿತು.[3]

ಕೆ.ಸಿ. ರೆಡ್ಡಿ ಅವರು ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ಉನ್ನತವಾದ ಆದರ್ಶಗಳನ್ನು ಇಟ್ಟುಕೊಂಡು ಮೈಸೂರು ರಾಜ್ಯವನ್ನು ರಾಮರಾಜ್ಯವನ್ನಾಗಿಸಬೇಕೆಂಬ ಗಾಂಧೀಜಿ ಅವರ ಕನಸನ್ನು ನನಸು ಮಾಡಬೇಕೆಂಬ ಅದಮ್ಯವಾದ ಉತ್ಸಾಹವನ್ನು

---

2. ಜೀರಗೆ ಕಟ್ಟೆ ಬಸವಪ್ಪ (ಸಂ) : ಗ್ರಾಮಾಭ್ಯುದಯ ಮೈಸೂರು, ಸಂಪುಟ–1, ಸಂಚಿಕೆ–3, ಪುಟ–135.
3. ನವಯುಗ ಪತ್ರಿಕೆ : ದಿನಾಂಕ : 16–12–1947.

ಹೊಂದಿದ್ದರು. 1947ರ ಡಿಸೆಂಬರ್ 15ರಂದು ಸಾರ್ವಜನಿಕ ಸಭೆಯೊಂದರಲ್ಲಿ ಮಾಡಿದ ಭಾಷಣದಲ್ಲಿ ಅವರ ಅಭಿಪ್ರಾಯ ವ್ಯಕ್ತವಾಗಿದೆ. ಆ ಭಾಷಣದಲ್ಲಿ ರೆಡ್ಡಿ ಅವರು "ಈಗ ಜನತೆಯ ಯುಗ ಆರಂಭವಾಗಿದೆ. ಅತ್ಯಂತ ಮಹತ್ತರವಾದ ಜವಾಬ್ದಾರಿಯಿಂದ ನಮ್ಮ ಕರ್ತವ್ಯವೇನೆಂಬುದನ್ನು ಅರಿತು ಮುಂದುವರೆಯುವ ಕಾಲದಲ್ಲಿದ್ದೇವೆ. ಪ್ರತಿಯೊಬ್ಬ ಪ್ರಜೆಯೂ ಸುಖ ಸಂತೋಷಗಳಿಂದ ನಲಿದಾಡುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕಾಗಿದೆ. ಅಧಿಕಾರಿಗಳು ತಾವು ಪ್ರಜೆಗಳ ಸೇವಕರೆಂದೂ, ಪ್ರಜೆಗಳು ತಮಗೆ ಒಂದು ವಿಧದ ಕರ್ತವ್ಯವನ್ನು ಕೊಟ್ಟಿದ್ದಾರೆಂದೂ, ಪ್ರಜೆಗಳ ಕ್ಷೇಮವೇ ತಮ್ಮ ಕ್ಷೇಮವೆಂದೂ, ಪ್ರಜೆಗಳ ಸೌಖ್ಯವೇ ತಮ್ಮ ಸೌಖ್ಯವೆಂದೂ, ಅರಿತು ಕೆಲಸ ಮಾಡಬೇಕಾಗಿದೆ.

ಪ್ರಜೆಗಳೂ ಕೂಡ ಅಧಿಕಾರಿಗಳಲ್ಲಿ ನಂಬಿಕೆಯಿಟ್ಟು, ಅವರ ಕರ್ತವ್ಯಗಳಲ್ಲಿ ಭಾಗಿಗಳಾಗಿ, ಅವರನ್ನು ಕಡೆಗಣ್ಣಿನಿಂದ ನೋಡದೆ, ಗೌರವ, ಪ್ರೀತಿ, ವಿಶ್ವಾಸ, ಪ್ರೇಮಗಳಿಂದ ಕೆಲಸಗಳನ್ನು ಅವರ ಕೈಯಿಂದ ಮಾಡಿಸಿಕೊಳ್ಳಬೇಕು. ಪ್ರತಿಯೊಬ್ಬರು ತ್ರಿಕರಣ ಶುದ್ಧಿಯಿಂದ ಕೆಲಸ ಮಾಡಬೇಕು. ದೇಶದ ಜನತೆ ಒಂದು ನೀತಿಗೆ ಕಟ್ಟುಬಿದ್ದು ಧರ್ಮನಿಷ್ಠೆಯಿಂದ ತಮ್ಮ ಕರ್ತವ್ಯಗಳನ್ನು ಪಾಲಿಸಿಕೊಂಡು ಬರಬೇಕು. ಪ್ರಜಾವರ್ಗದವರು ಯಾವ ಕ್ಷೇತ್ರ ದಲ್ಲಿಯೇ ಇರಲಿ ಅವರುಗಳು ಪ್ರಾಮಾಣಿಕತೆಯಿಂದಲೂ, ದೇಶಭಕ್ತಿಯಿಂದಲೂ ತಮ್ಮ ನಡವಳಿಕೆಗಳನ್ನು ತಿದ್ದಿಕೊಳ್ಳಬೇಕು. ಶ್ರೀಮನ್ಮಹಾರಾಜ ಅವರು ಪ್ರಜೆಗಳಲ್ಲಿ ಹೆಚ್ಚಾದ ಪ್ರೀತಿ ವಿಶ್ವಾಸಗಳನ್ನು ಉಳ್ಳವರಾಗಿದ್ದಾರೆ. ಸಂಸ್ಥಾನದ ಪ್ರತಿಯೊಬ್ಬರು ಯಾವ ವ್ಯತ್ಯಾಸವೂ ಇಲ್ಲದೆ, ಎಲ್ಲರೂ ಮೈಸೂರಿನ ಮಕ್ಕಳು ಎಂಬ ಭಾವನೆಯಿಂದ ಪರಸ್ಪರವಾದ ಪ್ರೇಮ ಸಹನೆಗಳಿಂದ ನೂತನ ಮಾರ್ಗದಲ್ಲಿ ಮಹಾತ್ಮರ ಮೇಲ್ಪಂಕ್ತಿಯನ್ನು ಅನುಸರಿಸಿಕೊಂಡು ನಡೆಯಬೇಕು" ಎಂಬುದಾಗಿ ತಮ್ಮ ಉದಾತ್ತವಾದ ಆಲೋಚನೆಗಳನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದುದನ್ನು ಗಮನಿಸಬಹುದು.[4]

---

4. ಜೀರಗೆ ಕಟ್ಟೆ ಬಸವಪ್ಪ (ಸಂ) : ಗ್ರಾಮಾಭ್ಯುದಯ ಮೈಸೂರು, ಸಂಪುಟ–1, ಸಂಚಿಕೆ–1, ಪುಟ–11.

ಪ್ರಾಂತ ರಚನೆ ಹಾಗೂ ಏಕೀಕರಣ ಸಮಸ್ಯೆ

ಕೆ.ಸಿ. ರೆಡ್ಡಿ ಅವರು ಮುಖ್ಯಮಂತ್ರಿಯಾದ ತರುವಾದ ಎದುರಿಸಿದ ಮತ್ತೊಂದು ಸಮಸ್ಯೆ ಎಂದರೆ ಪ್ರಾಂತ ರಚನೆ ಮತ್ತು ಏಕೀಕರಣ ಸಮಸ್ಯೆ ಎಂದು ಹೇಳಬಹುದು.

ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಕನ್ನಡಿಗರಲ್ಲಿ ಸಮಗ್ರ ಕರ್ನಾಟಕಕ್ಕಾಗಿ ಅಭಿಲಾಷೆ ಮೂಡಲಾರಂಭಿಸಿತ್ತು. ಅದಕ್ಕಾಗಿಯೇ ಸಮಗ್ರ ಕರ್ನಾಟಕ ಪ್ರಾಂತದ ಪ್ರತಿನಿಧಿ ಸಂಸ್ಥೆಯಾಗಿ 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ರಾಜ ಋಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿತವಾಯಿತು. 1920ರ ನಾಗಪುರ ಕಾಂಗ್ರೆಸ್ ಅಧಿವೇಶನ ಭಾಷಾವಾರು ಪ್ರಾಂತ ರಚನೆಗೆ ಒಪ್ಪಿಗೆ ನೀಡಿತು. ಇದರಿಂದ ಭಾರತವನ್ನು ಭಾಷಾ ದೃಷ್ಟಿಯಿಂದ ಇಪ್ಪತ್ತೊಂದು ಭಾಗಗಳಾಗಿ ವಿಂಗಡಿಸಲಾಯಿತು. ಇದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸ್ಥಾಪನೆಗೆ ಕಾರಣವಾಗಿ, ಇದರ ವ್ಯಾಪ್ತಿ ಸಕಲ ಕನ್ನಡ ಭಾಷಾ ಪ್ರದೇಶಗಳಿಗೂ ಅನ್ವಯಿಸಿತು. 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನ ಯಶಸ್ವಿಯಾಗಲು 'ಅವರೆಲ್ಲ ಪ್ರಾಂತ ಭೇದ ಮರೆತು ಒಗ್ಗಟ್ಟಾಗಿ ಶ್ರಮಿಸಿದ್ದೆ' ಪ್ರಮುಖ ಕಾರಣವಾಯಿತು. ಇದೇ ವರ್ಷ ಇಲ್ಲಿಯೇ ಪ್ರಥಮ ಕರ್ನಾಟಕ ಪ್ರಾಂತೀಯ ಸಮ್ಮೇಳನ ನಡೆಯಿತು. ಅಂದಿನಿಂದ ಕರ್ನಾಟಕ ಏಕೀಕರಣ ಸಂಘವು ಕನ್ನಡನಾಡಿನ ನಾನಾ ಭಾಗಗಳಲ್ಲಿ ಹಲವಾರು ಸಮ್ಮೇಳಗಳನ್ನು ನಡೆಸಲಾರಂಭಿಸಿತು.

1946ರ ಅಗಸ್ಟ 31ರಲ್ಲಿ ದಾವಣಗೆರೆಯಲ್ಲಿ 'ಅಖಿಲ ಕರ್ನಾಟಕ ಸರ್ವಪಕ್ಷ ಸಮ್ಮೇಳನ' ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರ ನಾಯಕತ್ವದಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಎಂ.ಪಿ. ಪಾಟೀಲರು, ಉದ್ಘಾಟನೆಯನ್ನು ಶರತ್‌ಚಂದ್ರ ಬೋಸರು (ಸುಭಾಷ್ ಅಣ್ಣ) ಮಾಡಿದರು. ಜಿನರಾಜ ಹೆಗಡೆ ಮತ್ತು ರಾಮಕೃಷ್ಣ ಕಾರಂತರು ಪ್ರಮುಖ ಪಾತ್ರ ವಹಿಸಿದ್ದರು. ಈ ಸಮ್ಮೇಳನದ ಉದ್ದೇಶ ಕರ್ನಾಟಕ ಏಕೀಕರಣ ಚಳವಳಿಗೆ ವಿಶೇಷ ಚಾಲನೆ ನೀಡುವುದೇ ಆಗಿತ್ತು. ಈ ಸಮ್ಮೇಳನಕ್ಕೆ ಮೈಸೂರು ಕಾಂಗ್ರೆಸ್‌ನ ನಾಯಕರಾದ ಕೆಂಗಲ್ ಹನುಮಂತಯ್ಯ ಮತ್ತು ಎಚ್. ಸಿದ್ಧಯ್ಯ ಭಾಗವಹಿಸಿದ್ದರು.[5]

1946ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣಕ್ಕೆ ಹಲವಾರು ಸಮಸ್ಯೆಗಳು ಎದುರಾಗಿದ್ದವು. ಭಾರತಕ್ಕೆ ಸ್ವಾತಂತ್ರ್ಯವೇ ಇನ್ನೂ ಬಾರದಿದ್ದಾಗ ಮತ್ತು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ರಚನೆಯೇ ಆಗಿಲ್ಲದಿದ್ದಾಗ ಭಾಷಾವಾರು ಪ್ರಾಂತ ರಚನೆ ಮತ್ತು ಏಕೀಕರಣ ಬಹುದೂರದ ಮಾತೆಂದು ಕಂಡು ಬರುತ್ತಿದ್ದರೂ ವಿರೋಧ

---

5. ಚೆನ್ನಬಸಪ್ಪ ಕೋ : ಎಸ್. ನಿಜಲಿಂಗಪ್ಪ ಒಂದು ಅಧ್ಯಯನ, ಪುಟ–99.

ವಿರಲಿಲ್ಲ. ಇದಕ್ಕೆ ಪುಷ್ಠಿ ಕೊಡುವಂತೆ 1946ರ ನವೆಂಬರ್ 2ರಂದು ಮೈಸೂರು ಕಾಂಗ್ರೆಸ್‌ನ ಆರನೆಯ ಧ್ವಜ ಸತ್ಯಾಗ್ರಹ ಅಧಿವೇಶನ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಸುಭಾಷ್‌ನಗರ (ಈಗಿನ ಕೆಂಪೇಗೌಡ ಬಸ್ ನಿಲ್ದಾಣ)ದಲ್ಲಿ ಪ್ರಾರಂಭ ವಾಯಿತು.

ಈ ಅಧಿವೇಶನದಲ್ಲಿ ಕೆ.ಸಿ. ರೆಡ್ಡಿ ಅವರು ಮಾತನಾಡುತ್ತಾ "ಈ ವಾರ್ಷಿಕ ಸಭೆಯು ಬೇರೆ ಬೇರೆ ಆಡಳಿತದಲ್ಲಿ ಹರಿದು ಹಂಚಿ ಹೋಗಿರುವ ಭಾಗಗಳನ್ನೆಲ್ಲಾ ಒಗ್ಗೂಡಿಸಿ ಶೀಘ್ರವೇ ಕರ್ನಾಟಕದ ರಚನೆಯು ಆಗಬೇಕೆಂದು ಒತ್ತಾಯಿಸುವ ಗೊತ್ತುವಳಿ ಸ್ವೀಕರಿಸಿದರು. ಅಲ್ಲದೆ ಅಂತಹ ಏಕೀಕೃತ ಕರ್ನಾಟಕ ರಚನೆಗೆ, ಸದ್ಯಕ್ಕೆ ಮೈಸೂರು ಸಂಸ್ಥಾನದಲ್ಲಿರುವ ಅರೆಸೊತ್ತಿಗೆಯ ಆಳ್ವಿಕೆ ಅಡ್ಡಿಯಾಗಿರುವುದರ ಅರಿವಿದೆಯೆಂದೂ, ದಕ್ಷಿಣದ ಸಂಸ್ಥಾನಗಳು ತಮ್ಮ ಜನತೆಯ ಅಭಿಪ್ರಾಯಗಳನ್ನು ಗಮನಿಸದೆಯೇ, ಒಕ್ಕೂಟವೊಂದನ್ನು ರಚಿಸಿಕೊಳ್ಳುವ ಆತುರದ ಪ್ರಯತ್ನಗಳು ಅವರ ನಿರಂಕುಶ ಮನೋಭಾವ ಪ್ರತೀಕವೆಂದೂ ಭಾವಿಸಿದ ಸಭೆಯು, ಸಂಸ್ಥಾನಗಳು ಭಾಷಾವಾರು ಪ್ರಾಂತ ರಚನೆಯ ಸಂದರ್ಭದಲ್ಲಿ ನೆರೆ ರಾಜ್ಯಗಳೊಡನೆ ಸೇರುವುದು ಉಚಿತವೆಂದು ಸೂಚಿಸಿ ಕರ್ನಾಟಕದ ಎಲ್ಲ ಜನರೂ ಕನ್ನಡಿಗರಲ್ಲದೇ ಅದೇ ಪ್ರಾಂತ ರಚನೆಗೆ ಸಂಪೂರ್ಣ ಸಹಕಾರ ನೀಡಬೇಕೆಂದು" ಮನವಿ ಮಾಡಿದರು.[6]

1947ರ ಏಪ್ರಿಲ್‌ನಲ್ಲಿ ಮಧ್ಯಪ್ರಾಂತದಿಂದ ಸಂಸ್ಥಾನಕ್ಕೆ ಆಗಮಿಸಿದ್ದ ಪಂಡಿತ್ ದ್ವಾರಕನಾಥ ಮಿಶ್ರ ಅವರು ಪ್ರಾಂತ ರಚನೆ ಮತ್ತು ಏಕೀಕರಣ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ 'ಮೈಸೂರಿನವರಾದ ನೀವು ಬ್ರಿಟಿಷ್ ಕರ್ನಾಟಕವು ನಿಮ್ಮ ಸಂಸ್ಥಾನಕ್ಕೆ ಸೇರಿ ಏಕೀಕೃತ ಕರ್ನಾಟಕವಾಗಬೇಕೆಂದು ಆಶಿಸುತ್ತೀರಿ. ಆದರೆ ಬ್ರಿಟಿಷ್ ಕರ್ನಾಟಕದ ಜನತೆ ಮೈಸೂರು ಪ್ರಜೆಗಳಾಗಲು ಅಂಜುತ್ತಾರೆ. ಇದಕ್ಕೆ ಕಾರಣವಿಷ್ಟೆ, ಪ್ರಜಾಹಿತ ಸರ್ಕಾರವನ್ನು ಕಂಡ ಬ್ರಿಟಿಷ್ ಪ್ರಾಂತಗಳ ಜನರು ನಿರಂಕುಶ ಪ್ರಭುತ್ವವುಳ್ಳ ದೇಶೀ ರಾಜರ ಆಡಳಿತ ಹೇಗೆ ಒಪ್ಪಿಯಾರು? ಇದಕ್ಕೆ ಪರಿಹಾರ ಮಾರ್ಗವೂ ಸುಲಭವಾಗಿದೆ. ಮೈಸೂರಿನ ಮಹಾ ರಾಜರು 'ಕಾನ್ಸ್‌ಟ್ಯೂಷನಲ್ ಮೊನಾರ್ಕ್' ಆಗಬೇಕು. ಅಂದರೆ ಇಲ್ಲಿ ಪ್ರಜಾಸತ್ತಾತ್ಮಕ ಸರ್ಕಾರ ಬೇಕು. ಮಹಾರಾಜರ ನಿರಂಕುಶಾಧಿಕಾರ ಹೋಗಿ ಅವರು ಸಾಂಕುಶರಾಗಬೇಕು. ಆಗ ಬ್ರಿಟಿಷ್ ಪ್ರಾಂತದ ಜನರು ಸಂತೋಷದಿಂದ ಏಕೀಕೃತ ಕರ್ನಾಟಕ ಮೈಸೂರು ಆದರೆ ಅದರ ಪ್ರಜೆಗಳಾಗಬಲ್ಲರು' ಎಂದು ಅಭಿಪ್ರಾಯಪಟ್ಟಿದ್ದಾರೆ.[7]

---

6. ಗೋಪಾಲರಾವ್ .ಎಚ್.ಎಸ್ : ಕರ್ನಾಟಕ ಏಕೀಕರಣ ಇತಿಹಾಸ, ಪುಟ–144.
7. ತಿರುಮಲೆ ಶ್ರೀ ರಂಗಾಚಾರ್ಯ ಮತ್ತು ಕುಮಾರಸ್ವಾಮಿ ಎಂ: ಮೈಸೂರು ಸಂಸ್ಥಾನದ ವೃತ್ತ ಪತ್ರಿಕಾ ಇತಿಹಾಸ (ಲೇಖನಗಳ ಸಂಕಲನ), ಪುಟ–271.

ಅವರ ಮಾತು ಸಂಸ್ಥಾನದ ಪರಿಸ್ಥಿತಿಗೆ ಸಂದರ್ಭೋಚಿತವಾಗಿದೆ. ಏಕೆಂದರೆ ಬ್ರಿಟಿಷ್ ಪ್ರಾಂತಗಳಲ್ಲಿ ಪ್ರಜಾಹಿತ ಸರ್ಕಾರ ಏರ್ಪಟ್ಟು ಒಂದು ವರ್ಷವಾಗುತ್ತ ಬಂದರೂ, ಮೈಸೂರು ಸಂಸ್ಥಾನದಲ್ಲಿ ಜನರು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ತಂಬೂಚೆಟ್ಟಿ ಅವರುಗಳ ನಿರಂಕುಶಾಧಿಕಾರದಿಂದ ಪಾರಾಗಲು ನೋಡುತ್ತಿದ್ದರು.

ಏಕೀಕರಣಕ್ಕೆ ಸಂಬಂಧಿಸಿದಂತೆ ಸಾಹಿತಿಗಳಾದ ಶ್ರೀರಂಗರು ದಾಖಲಿಸಿರುವಂತೆ ಕೆ.ಸಿ. ರೆಡ್ಡಿ ಹಾಗೂ ಕೆಂಗಲ್ ಹನುಮಂತಯ್ಯ ಅವರ ಜೊತೆ ನಡೆದ ಚರ್ಚೆಯಲ್ಲಿ 'ಮೈಸೂರು ಸಹಿತವಾಗಿಯೋ? ಮೈಸೂರು ರಹಿತವಾಗಿಯೋ? ಎಂದು ಏಕೀಕರಣದ ಬಗ್ಗೆ ಕೆಲವರು ಸಮಸ್ಯೆಯನ್ನೆತ್ತಿದ್ದರು. ಕೆಂಗಲ್ ಹನುಮಂತಯ್ಯ ಮತ್ತು ಕೆ.ಸಿ. ರೆಡ್ಡಿ ಇಬ್ಬರೂ ಮುಖ್ಯಭಾಗ ವಹಿಸುತ್ತಿದ್ದರೆಂದು ನನ್ನೊಡನೆ ಚರ್ಚಿಸ ತೊಡಗಿದರು. ನಾನು ಅವರನ್ನು ಕಾರಂತರ ಹತ್ತಿರಕ್ಕೆ ಒಯ್ದು ವಿಷಯ ತಿಳಿಸಿದೆ. 'ನಮಗೆ ಏಕೀಕರಣ ಬೇಕು. ನಿಮಗೆ ಮಹಾರಾಜರು ಬೇಕಿದ್ದರೆ ಮೈಸೂರನ್ನೇ ಇಟ್ಟುಕೊಳ್ಳಿರಿ. ಆದರೆ ಕರ್ನಾಟಕ ಬೇಕಿದ್ದರೆ ನಮ್ಮ ಹಾಗೇ ನೀವೂ ನಿಮ್ಮ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿ ನಡೆಸಬೇಕು' ಎಂದರು. ಅವರಿಬ್ಬರೂ ಮಾತಿಲ್ಲದರೆ ತಲೆದೂಗಲು 'ಆದರೆ ಒಂದು ಹೇಳಬೇಕು. ನಿಮಗೆ ಸ್ವಾತಂತ್ರ್ಯ ಚಳವಳಿ ನಡೆಸಲಿಕ್ಕೆ ಒಪ್ಪಿ ಆಮೇಲೆ ಹಿಂದೆಗೆದರೆ ನಾವು ಬ್ರಿಟಿಷ್ ಕರ್ನಾಟಕದಿಂದ ನುಗ್ಗಿ ನಿಂತು ಚಳವಳಿ ನಡೆಸ್ತೀವಿ' ಎಂದು ಕಾರಂತರು ಹೇಳಿದರು. ನಂತರ ಕೆ.ಸಿ. ರೆಡ್ಡಿ ಅವರು ಮಾತನಾಡಿ 'ಮುಕ್ತ ಮನಸ್ಸಿನಿಂದ ಏಕೀಕರಣಕ್ಕೆ ಬೆಂಬಲಿಸಿದರು ಹಾಗೂ ಮಹಾರಾಜರ ಆಶ್ರಯದಲ್ಲೇ ಮೈಸೂರು ರಾಜ್ಯ ಮುಂದುವರೆಯಬೇಕೆಂದು ಅಪೇಕ್ಷಿಸಿದರು' ಎಂದು ತಿಳಿಸಿದ್ದಾರೆ.[8]

1947ರ ಡಿಸೆಂಬರ್ 29ರಂದು ಕರ್ನಾಟಕ ಏಕೀಕರಣ ಪರಿಷತ್ತು ತನ್ನ ಹನ್ನೊಂದನೆಯ ಅಧಿವೇಶನ ಕಾಸರಗೂಡಿನಲ್ಲಿ ನಡೆಯಿಸಿತು. ಇದರ ಅಧ್ಯಕ್ಷತೆ ಆರ್.ಆರ್. ದಿವಾಕರ್ ವಹಿಸಿದ್ದರು. ಕೆ.ಸಿ. ರೆಡ್ಡಿ ಅವರ ಮಂತ್ರಿಮಂಡಲದ ಲೋಕೋಪಯೋಗಿ ಮತ್ತು ವ್ಯವಸಾಯ ಖಾತೆ ಸಚಿವರಾದ ಎಚ್. ಸಿದ್ದಯ್ಯ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡುತ್ತಾ 'ಕನ್ನಡಿಗರ ಗುರಿಯು ಕನ್ನಡ ಪ್ರಾಂತ ಒಂದುಗೂಡಬೇಕೆಂಬುದೊಂದೇ ಆಗಿದೆ' ಎಂದರು.[9]

1948ರ ನವೆಂಬರ್ 6ರಂದು ಬೀರೂರಿನಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ 'ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನ' ನಡೆಯಿತು. ಕೆ.ಸಿ. ರೆಡ್ಡಿ

---

8. ಚೆನ್ನಬಸಪ್ಪ .ಕೋ : ಎಸ್. ನಿಜಲಿಂಗಪ್ಪ ಒಂದು ಅಧ್ಯಯನ, ಪುಟ–99.
9. ಗೋಪಾಲರಾವ್ .ಎಚ್.ಎಸ್ : ಕರ್ನಾಟಕ ಏಕೀಕರಣ ಇತಿಹಾಸ, ಪುಟ–133.

ಅವರು ಮಾತನಾಡುತ್ತಾ 'ಮೈಸೂರು ರಾಜ್ಯ ಕರ್ನಾಟಕದ ಪ್ರಾಂತ ರಚನೆಗೆ ಅಡ್ಡಿಯಾಗುವುದಿಲ್ಲವೆಂದೂ, ಮಹಾರಾಜರ ಘಟಸಾತ್ಮಕ ಆಳ್ವಿಕೆಯಲ್ಲೇ ಸಂಯುಕ್ತ ಕರ್ನಾಟಕದ ರಚನೆಯಾಗುವುದು ಅವಶ್ಯ ಮತ್ತು ಅನಿವಾರ್ಯ ಎಂದೂ ಹಾಗೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಒಂದಾಗುವ ನಿರ್ಣಯವನ್ನೂ ಸರ್ವಾನುಮತದಿಂದ ಅಂಗೀಕರಿಸಲಾಯಿತು'. ಇದೇ ಸಮಯದಲ್ಲಿ ಏಕೀಕರಣಕ್ಕೆ ಸಂಬಂಧಿಸಿದಂತೆ 'ಮೈಸೂರು ಸಂಸ್ಥಾನದ ಹೊರಗಿನ ಕನ್ನಡ ಪ್ರದೇಶಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ನೀಡಲು ಆರು ಸದಸ್ಯರ ಸಮಿತಿಯನ್ನು ನೇಮಿಸಲಾಯಿತು. ಸಮಿತಿಯಲ್ಲಿ ಟಿ. ಸಿದ್ದಲಿಂಗಯ್ಯ, ಟಿ. ಸುಬ್ರಮಣ್ಯ, ಎಸ್. ಚನ್ನಯ್ಯ, ಕೆ.ಜಿ. ಒಡೆಯರ್, ಎ.ಜಿ. ಬಂದೀಗೌಡ ಮತ್ತು ಬಿ.ಸಿ. ಹಾಲಪ್ಪ ಇದ್ದರು.[10]

ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪ ಅವರು 1948ರ ಡಿಸೆಂಬರ್ 2 ರಿಂದ 1948ರ ಡಿಸೆಂಬರ್ 6ರವರೆಗೆ ದೆಹಲಿಗೆ ತೆರಳಿ ಎಸ್.ಕೆ. ಧಾರ್ ಮತ್ತು ಸಮಿತಿ ಸದಸ್ಯರು, ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರು, ಕಾರ್ಯದರ್ಶಿ, ಗವರ್ನರ್ ಜನರಲ್, ಪ್ರಧಾನಿ ನೆಹರೂ, ಡಾ. ಪಟ್ಟಾಭಿ ಸೀತಾರಾಮಯ್ಯ, ಸರ್ದಾರ್ ಪಟೇಲ್ ಹಾಗೂ ಇತರರನ್ನು ಭೇಟಿಯಾಗಿ ಸಂಯುಕ್ತ ಕರ್ನಾಟಕ ಪ್ರಾಂತ ರಚನೆಯ ಅವಶ್ಯಕತೆ, ಅನುಕೂಲಗಳನ್ನು ಮನವರಿಕೆ ಮಾಡಿಕೊಟರು.[11]

1948ರ ಡಿಸೆಂಬರ್‌ನಲ್ಲಿ ಜೈಪುರ ಕಾಂಗ್ರೆಸ್ ಅಧಿವೇಶನದಲ್ಲಿ 'ಭಾಷಾವಾರು ಪ್ರಾಂತ್ಯಗಳನ್ನು ಪ್ರತಿಪಾದಿಸುತ್ತಿದ್ದ ಡಾ. ಪಟ್ಟಾಭೀ ಸೀತಾರಾಮಯ್ಯ ಅಧ್ಯಕ್ಷರಾದರು. ಪಾರ್ಲಿಮೆಂಟರಿ ಬೋರ್ಡ್‌ನಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿದ್ದು ಕನ್ನಡಿಗರಿಗೆ ಸ್ವಲ್ಪ ಸಮಾಧಾನ ತಂದಿತು'.[12]

ಕೇಂದ್ರ ಸರ್ಕಾರ ನೇಮಿಸಿದ್ದ ಎಸ್.ಕೆ. ಧಾರ್ ಸಮಿತಿ ಮತ್ತು ಜೆ.ವಿ.ಪಿ. ಸಮಿತಿಗಳು ಭಾಷಾವಾರು ಪ್ರಾಂತ್ಯ ರಚನೆಯಾಗಬೇಕಾಗಿದ್ದರೆ, ದೇಶೀಯ ಸಂಸ್ಥಾನಗಳು ಯೂನಿಯನ್ ಪ್ರದೇಶಗಳಲ್ಲಿ ವಿಲೀನವಾಗತಕ್ಕದ್ದು. ದೇಶೀಯ ಸಂಸ್ಥಾನಗಳು ವಿಲೀನವಾಗದೆ ಭಾಷಾವಾರು ಪ್ರಾಂತ್ಯ ರಚನೆ ಸಾಧ್ಯವಿಲ್ಲ ಎಂದು ಹೇಳಿತು. ಮುಂದೆ 1950ರ ಜನವರಿ 26ರಂದು 'ಭಾರತ ಸಂವಿಧಾನ ರಚನೆ' ಪೂರ್ಣಗೊಂಡು 'ಗಣರಾಜ್ಯ'ವೆಂದು ಘೋಷಿಸಿಕೊಂಡಿತು.

10. ಪೂರ್ವೋಕ್ತ : ಪುಟ–145.
11. ಪೂರ್ವೋಕ್ತ : ಪುಟ–145.
12. ಕಾಳೇಗೌಡ ನಾಗವಾರ, ಆನಂದಮೂರ್ತಿ .ಜಿ.ವಿ.: ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಪುಟ–95.

1951ರ ಜುಲೈನಲ್ಲಿ ಬೆಂಗಳೂರಿನಲ್ಲಿ 'ಅಖಿಲ ಭಾರತ ಕಾಂಗ್ರೆಸ್ ಸಮಿತಿ' ಅಧಿವೇಶನ ನಡೆಯಿತು. ಈ ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ "ಪ್ರಾಂತ್ಯಗಳನ್ನು ಭಾಷಾನುಗುಣವಾಗಿ ವಿಭಜಿಸಬೇಕೆಂದು ಪಶ್ಚಿಮ ಮತ್ತು ದಕ್ಷಿಣ ಭಾರತದಲ್ಲಿ ವಿಶೇಷ ಚಳವಳಿ ನಡೆಯುತ್ತಿದೆ, ಬಹಳ ಒತ್ತಾಯ ಬರುತ್ತಿದೆ. ಭಾಷಾನುಗುಣ ಪ್ರಾಂತ ರಚನೆಯ ಪರವಾಗಿ ಕಾಂಗ್ರೆಸ್ ಅನೇಕ ವರ್ಷಗಳ ಮೊದಲೇ ತನ್ನ ನಿರ್ದಿಷ್ಟ ತೀರ್ಮಾನ ಕೊಟ್ಟಿರುತ್ತದೆ. ಕಟ್ಟಕಡೆಯ ನಿರ್ಧಾರ ಜನರ ಕೈಯಲ್ಲಿದೆ. ಸಾಂಸ್ಕೃತಿಕ ಇತರ ಕಾರಣಗಳಿಂದ ಭಾಷಾನುಗುಣ ಪ್ರಾಂತ ಸರಿ ಎನಿಸಿದರೂ ಆರ್ಥಿಕ, ಆಡಳಿತ ಮತ್ತು ಹಣಕಾಸಿನ ದೃಷ್ಟಿಯಿಂದಲೂ ಈ ವಿಷಯವನ್ನು ಪರ್ಯಾಲೋಚಿ ಸುವುದು ಅಗತ್ಯ. ಏಕತ್ರವಾದ ಬಹು ಜನಾಭಿಪ್ರಾಯವು ಭಾಷಾನುಗುಣ ಪ್ರಾಂತ ರಚನೆಯ ಪರವಾಗಿದ್ದರೆ, ಸಂವಿಧಾನದಲ್ಲಿ ಸೂಚಿತವಾಗಿರುವಂತೆ ಗಡಿ ನಿರ್ಣಯ ಸಮಿತಿಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಬೇಕು"[13] ಎಂದು ಅಭಿಪ್ರಾಯ ವ್ಯಕ್ತಪಡಿಸಿದುದನ್ನು ಗಮನಿಸಬಹುದು.

1951ರ ನವೆಂಬರ್ 12ರಂದು 'ಕರ್ನಾಟಕ ಪ್ರಾಂತ ರಚನೆ' ಕುರಿತು ವಿಧಾನಸಭೆಯಲ್ಲಿ ಕೆ.ಸಿ. ರೆಡ್ಡಿ ಅವರು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಪ್ರಾಂತ ರಚನೆಗೆ ಇರುವ ಹಲವಾರು ಜಟಿಲ ಸಮಸ್ಯೆಗಳನ್ನು ಹಂತ ಹಂತ ಬಿಡಿಸಿಟ್ಟರು. "ಕರ್ನಾಟಕ ಪ್ರಾಂತ ರಚನೆಗಾಗಿ ಮುಂಬಯಿ ಮತ್ತು ಮದ್ರಾಸ್ ರಾಜ್ಯಗಳ ಕೆಲವು ಭಾಗಗಳನ್ನು ವಿಲೀನಗೊಳಿಸುವ ಸಂಬಂಧ, ವಿವಾದ ಮೈಸೂರು ಸರ್ಕಾರಕ್ಕೆ ನೇರ ಸಂಬಂಧಿಸಿದ್ದಲ್ಲ, ಈ ಬಗ್ಗೆ ರಾಷ್ಟ್ರಪತಿಯವರು ಆಸಕ್ತಿವಹಿಸಬೇಕು. ನೂತನ ಸಂವಿಧಾನದ 3ನೇ ಅನುಚ್ಛೇದ ಎ) ಯಾವುದೇ ರಾಜ್ಯದಿಂದ ಒಂದಿಷ್ಟು ಭೂ ಭಾಗವನ್ನು ಪ್ರತ್ಯೇಕಗೊಳಿಸಿ ಅಥವಾ ಎರಡು ರಾಜ್ಯಗಳನ್ನು ಒಂದುಗೂಡಿಸಿ ಅಥವಾ ಕೆಲವು ಭಾಗಗಳನ್ನು ಒಂದು ಗೂಡಿಸಿ ಅಥವಾ ಯಾವುದೇ ರಾಜ್ಯದ ಭಾಗಕ್ಕೆ ಯಾವುದೇ ಭೂ ಭಾಗವನ್ನು ಸೇರಿಸಿ ಒಂದು ಹೊಸ ರಾಜ್ಯವನ್ನು ರೂಪಿಸಬಹುದಾಗಿದೆ. ಬಿ) ಯಾವುದೇ ರಾಜ್ಯದ ವಿಸ್ತೀರ್ಣವನ್ನು ಹೆಚ್ಚಿಸುವುದು. ಸಿ) ಯಾವುದೇ ರಾಜ್ಯದ ವಿಸ್ತೀರ್ಣವನ್ನು ಕಡಮೆ ಮಾಡುವುದು. ಡಿ) ಯಾವುದೇ ರಾಜ್ಯದ ಗಡಿ ರೇಖೆಗಳನ್ನೇ ಬದಲಾಯಿಸುವುದು. ಇ) ಯಾವುದೇ ರಾಜ್ಯದ ಹೆಸರನ್ನು ಬದಲಾಯಿಸಬಹುದು.

ಆದ್ದರಿಂದ ಈ ಬಗ್ಗೆ ಭಾರತ ಸರ್ಕಾರವೇ ಮುಂದಾಗಬೇಕು ಹಾಗೂ ಈ ಉದ್ದೇಶಕ್ಕಾಗಿ ಅವರು ವಿಧೇಯಕವನ್ನು ಜಾರಿಗೆ ತರಬೇಕು. ಹಾಗೇ ಒಂದು ವಿಧೇಯಕವನ್ನು

---

13. ಪ್ರಕಟನೆ : ಕಾಂಗ್ರೆಸ್ ಘೋಷಣೆ : ಅಖಿಲ ಭಾರತ ಕಾಂಗ್ರೆಸ್ ಸಮಿತಿ ನಿರ್ಣಯಗಳು, 1951, ಪುಟ–15.

ಜಾರಿಗೊಳಿಸುವಾಗ, ರಾಷ್ಟ್ರಪತಿಯವರು ವಿಧೇಯಕವನ್ನು ಶಿಫಾರಸ್ಸು ಮಾಡಬೇಕು, ಶಿಫಾರಸ್ಸು ಮಾಡುವ ಮೊದಲು ಅವರು ಶಾಸಕಾಂಗದ ಅಭಿಪ್ರಾಯವನ್ನು ಕೇಳುತ್ತಾರೆ. ಮೈಸೂರಿನ ವಿಷಯಕ್ಕೆ ಸಂಬಂಧಿಸಿದಂತೆ ಆನಂತರ ಅದು ಶಾಸಕಾಂಗ ಅಥವಾ ಮೈಸೂರು ಸರ್ಕಾರವು ಪರಿಶೀಲಿಸಬೇಕಾಗುವ ವಿಷಯವಾಗುತ್ತದೆ" ಎಂದು ಸ್ಪಷ್ಟವಾಗಿ ಹೇಳಿದರು.[14]

ಇದೇ ದಿನ ವಿಧಾನಸಭೆಯಲ್ಲಿ 'ಕರ್ನಾಟಕ ಏಕೀಕರಣ'ಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಕೆ.ಸಿ. ರೆಡ್ಡಿ ಅವರು ಮಾತನಾಡುತ್ತಾ "ಇದು ರಾಜಕೀಯ ವಿಷಯ ವಾಗಿದ್ದು, ಕರ್ನಾಟಕ ಏಕೀಕರಣ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವಂತದ್ದಾಗಿರು ವುದರಿಂದ ಹಲವಾರು ಸಮಸ್ಯೆಗಳು ಉದ್ಭವಿಸಿದ್ದು, ಅವುಗಳನ್ನು ಹಂತ ಹಂತವಾಗಿ ಚರ್ಚಿಸಿ, ಕೂಲಂಕುಶವಾಗಿ ಪರಿಶೀಲಿಸಬೇಕಾಗಿದೆ" ಎಂದು ಹೇಳಿದರು.[15]

ಹೀಗೆ ಕೆ.ಸಿ. ರೆಡ್ಡಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗಿನಿಂದ ಮುಖ್ಯಮಂತ್ರಿ ಯಾಗಿ ಅಧಿಕಾರ ತ್ಯಜಿಸುವವರೆಗೆ ಪ್ರಾಂತ ರಚನೆ ಮತ್ತು ಏಕೀಕರಣಕ್ಕಾಗಿ ಪ್ರಾಮಾಣಿಕ ಪ್ರಯತ್ನಗಳನ್ನು ಕೈಗೊಂಡರೂ ಸಹಾ, ಸ್ವಾತಂತ್ರ್ಯಗೊಂಡ ನಂತರ ಉದ್ಭವಿಸಿದ ಜಟಿಲ ಸಮಸ್ಯೆಗಳು, ಈ ಏಕೀಕರಣ ವಿಚಾರದಲ್ಲಿ ತಮಗಾದ ಅವಮಾನ, ತಮ್ಮ ಮೇಲೆ ಮೂಡಿದ್ದ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರೆಂದೇ ಹೇಳಬೇಕು.

ಮೈಸೂರು ರಾಜ್ಯಾಂಗ ರಚನೆ ಸಮಸ್ಯೆ

ಕೆ.ಸಿ. ರೆಡ್ಡಿ ಅವರ ಮಂತ್ರಿಮಂಡಲವು 1947ರ ಅಕ್ಟೋಬರ್ 24ರಂದು ಸ್ಥಾಪನೆಗೊಂಡ ನಂತರ ಜನರಿಂದ ಚುನಾಯಿತರಾದ ಪ್ರತಿನಿಧಿಗಳನ್ನೇ ಒಳಗೊಂಡ ರಾಜ್ಯಾಂಗ ರಚನಾ ಸಭೆಯನ್ನು ರೂಪಿಸಬೇಕೆಂದು ಮಹಾರಾಜರು ಆದೇಶಿಸಿದರು. 1948ರ ಮಾರ್ಚ್ 20ರಂದು ರಾಜ್ಯಾಂಗ ರಚನಾ ಸಭೆಗೆ ಚುನಾವಣೆಗಳು ನಡೆದವು. ಒಂದು ಲಕ್ಷ ಜನ ಸಂಖ್ಯೆಗೆ ಒಬ್ಬ ಪ್ರತಿನಿಧಿಯಂತೆ 76 ಸದಸ್ಯರನ್ನು ಸಭೆ ಚುನಾಯಿಸಿತು. ಹೊಸ ರಾಜ್ಯಾಂಗ ರಚನಾ ಸಭೆಯ ಪ್ರಥಮ ಅಧಿವೇಶನ ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ 1948ರ ಏಪ್ರಿಲ್ 7ರಂದು ನಡೆಯಿತು. ಮಹಾರಾಜರು ಹಂಗಾಮಿ ಅಧ್ಯಕ್ಷರನ್ನಾಗಿ ಕೆ.ಸಿ.

14. MYSORE LEGISLATIVE ASSEMBLY : 8th October to 13th November-1951, P- 956 to 960.
15. ಪೂರ್ವೋಕ್ತ : ಪುಟ–961 ರಿಂದ 962.

ರೆಡ್ಡಿ ಅವರನ್ನು ಪೀಠದಲ್ಲಿ ಕೂರಿಸಿದ್ದರು. ನಂತರ ಸಭೆ ಟಿ. ಸುಬ್ರಮಣ್ಯಂ ಅವರನ್ನು ಪ್ರಥಮ ಸಭಾಧ್ಯಕ್ಷರಾಗಿ ಚುನಾಯಿಸಿದರು. ಈ ಸಭೆ ಮಹಾತ್ಮಾ ಗಾಂಧೀಜಿ ಅವರ ನಿಧನಕ್ಕಾಗಿ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು. 1948ರ ಏಪ್ರಿಲ್ 8ರಂದು ಸಮಾವೇಶಗೊಂಡು ಗಾಂಜೀ ವೀರಪ್ಪ ಅವರನ್ನು ಸಭೆಯ ಉಪಾಧ್ಯಕ್ಷರಾಗಿ ಚುನಾಯಿಸ ಲಾಯಿತು.[16]

1948ರ ಮೇ ನಲ್ಲಿ ನಡೆದ ಸಭೆಯು 'ಮೈಸೂರು ಭಾರತದ ಸಮಗ್ರ ಭಾಗವಾಗಿ ರುವುದೆಂದೂ, ಅದರ ರಾಜ್ಯಾಂಗವು ಭಾರತದ ರಾಜ್ಯಾಂಗಕ್ಕೆ ಅನುಗುಣವಾಗಿರಬೇಕೆಂದೂ ಘೋಷಿಸುವ ನಿರ್ಣಯ'ವನ್ನು ಅಂಗೀಕರಿಸಲಾಯಿತು. ಹೊಸ ರಾಜ್ಯಾಂಗದ ರೂಪರೇಷೆ ಗಳನ್ನು ನಿರ್ಧರಿಸಲು ಆರು ಸಮಿತಿಗಳನ್ನು ರಚಿಸಲಾಯಿತು. ಜೊತೆಗೆ ಭಾರತದ ರಾಜ್ಯಾಂಗ ರಚನಾ ಸಭೆಯೊಡನೆ ಮತ್ತು ಭಾರತೀಯ ಒಕ್ಕೂಟದ ಇತರ ರಾಜ್ಯಗಳೊಡನೆ ಸುಧಾರಣೆ ವಿಷಯಗಳನ್ನು ಚರ್ಚಿಸಲು ಒಂದು ಸಮಿತಿ ರಚಿಸಲಾಯಿತು. ಈ ಸಭೆಗೆ ಅಧ್ಯಕ್ಷರಾಗಿ ಕೆಂಗಲ್ ಹನುಮಂತಯ್ಯ, ಉಪಾಧ್ಯಕ್ಷರಾಗಿ ಗಾಂಜೀವೀರಪ್ಪ, ಸದಸ್ಯರಾಗಿ ಎಸ್. ರಂಗ ರಾಮಯ್ಯ, ಎಚ್.ಕೆ. ವೀರಣ್ಣಗೌಡ ಮತ್ತು ಭೀಮಪ್ಪ ನಾಯಕ್ ಅವರನ್ನು ಚುನಾಯಿಸ ಲಾಯಿತು.[17]

1948ರಲ್ಲಿ ಕೇಂದ್ರ ಸರ್ಕಾರ 'ಮಾದರಿ ಸಂವಿಧಾನವನ್ನು ರೂಪಿಸಲು ಬಿ.ಎನ್. ರಾವ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಅದಕ್ಕಾಗಿ 1948ರ ನವೆಂಬರ್ ನಲ್ಲಿ ದೆಹಲಿಗೆ ತೆರಳಿದ್ದ ಕೆಂಗಲ್ ಹನುಮಂತಯ್ಯನವರ ಸಮಿತಿ, ಕೇಂದ್ರ ಸರ್ಕಾರ ನೇಮಿಸಿದ್ದ ಸಭೆಯೊಡನೆ ಹಲವಾರು ಬಾರಿ ಚರ್ಚಿಸಿ 1949ರ ಜನವರಿ 1ರಂದು ಕೆ.ಸಿ. ರೆಡ್ಡಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯಂತೆ ಭಾರತ ಸರ್ಕಾರದಿಂದ ಮಾರ್ಗದರ್ಶನ ಮತ್ತು ಸಹಕಾರ ಇಲ್ಲದೆ ಸಂಸ್ಥಾನಗಳು ತಮ್ಮದೇ ಸಂವಿಧಾನಗಳನ್ನು ರೂಪಿಸಲು, ರಾಜ್ಯಾಂಗ ರಚನಾ ಸಭೆಗಳನ್ನು ರಚಿಸುವುದು ಅವಿವೇಕವೂ, ಅಪಾಯಕರವೂ ಎಂದು ಭಾರತ ಸರ್ಕಾರ ಗ್ರಹಿಸಿತು. ಈ ಕಾರಣದಿಂದ ಕೆ.ಸಿ. ರೆಡ್ಡಿ ಸರ್ಕಾರ ರಾಜ್ಯಾಂಗ ರಚನಾ ಸಭೆಯ ಸುಧಾರಣೆಗಳ ಪರಿಶೀಲನೆಯನ್ನು ಮುಂದೂಡಿತು.

1949ರ ಮೇ 19ರಂದು ಮುಖ್ಯಮಂತ್ರಿಗಳ ಸಮ್ಮೇಳನ ಸಮಾವೇಶಗೊಂಡು ಒಂದೊಂದು ರಾಜ್ಯಕ್ಕೂ ಪ್ರತ್ಯೇಕ ರಾಜ್ಯಾಂಗ ರಚನಾ ಸಭೆ ಅನಗತ್ಯವೆಂದೂ, ಭಾರತದ

---

16. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1948–49.
17. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1948–49.

ಸಂವಿಧಾನವು ಅದಾಗದೇ ರಾಜರುಗಳ ಸಂಸ್ಥಾನಗಳಿಗೂ ಅನ್ವಯಿಸತಕ್ಕದೆಂದೂ ತೀರ್ಮಾನಿಸಿತು.[18]

ಅಲ್ಲದೆ ಮೈಸೂರು ರಾಜ್ಯಾಂಗ ರಚನಾ ಸಭೆಯು ಕೆಲವು ತಿದ್ದುಪಡಿಗಳನ್ನು ಸೂಚಿಸಿತು. ಸಂಸ್ಥಾನಗಳಿಗೆ ಸಂಬಂಧಿಸಿದ ತಿದ್ದುಪಡಿಗಳನ್ನು ಸಂವಿಧಾನದಲ್ಲಿ ಅಳವಡಿಸಲಾಯಿತು. ಭಾರತ ರಾಜ್ಯಾಂಗ ರಚನಾ ಸಭೆ ಸಂವಿಧಾನವನ್ನು ಅಂಗೀಕರಿಸಿತು. ಇದರಲ್ಲಿ ಮೈಸೂರು 'ಬಿ' ರಾಜ್ಯ ಎಂದು ಅಂಗೀಕರಿಸಲಾಯಿತು. ಭಾರತದ ರಾಜ್ಯಾಂಗವನ್ನು ಮೈಸೂರಿಗೂ ಅಳವಡಿಸಿಕೊಳ್ಳುವ ಬಗ್ಗೆ ಮಹಾರಾಜರು 1949ರ ನವೆಂಬರ್ 25ರಂದು ಘೋಷಣೆ ಹೊರಡಿಸಿದರು.

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯಲ್ಲಿ 1949ರ ಡಿಸೆಂಬರ್ 15ರಂದು ವಿಸರ್ಜಿಸಿ ರಾಜ್ಯಾಂಗ ರಚನಾಸಭೆಯನ್ನೇ ತಾತ್ಕಾಲಿಕ ಶಾಸನಸಭೆಯನ್ನಾಗಿ ಮಾಡಲಾಯಿತು. ಇದರಿಂದಾಗಿ ಮಂತ್ರಿಮಂಡಲಕ್ಕೆ ದಿವಾನರು ಮುಖ್ಯಸ್ಥರಾಗಿರುವುದು ತಪ್ಪಿಹೋಯಿತು. ವಿಧಾನಸಭೆಗೆ ಜವಾಬ್ದಾರಿ ಹೊತ್ತ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರೇ ಆ ಸ್ಥಾನವನ್ನು ಪಡೆದರು. ಜೊತೆಗೆ ಒಂದು ನೂರು ಸದಸ್ಯರ ಬೆಂಬಲವಿದ್ದರೆ ಅವಿಶ್ವಾಸ ಸೂಚಕ ನಿರ್ಣಯ ತರಬಹುದೆಂದು ಅವಕಾಶ ಮಾಡಿ ಕೊಡಲಾಯಿತು. 1949ರ ನವೆಂಬರ್ 16ರಿಂದ ತಾತ್ಕಾಲಿಕ ವಿಧಾನಸಭೆ ಎಂದು ಪರಿಗಣಿಸಲಾಯಿತು. ಮುಂದೆ ಭಾರತದ ರಾಜ್ಯಾಂಗ 1950ರ ಜನವರಿ 26ರಂದು ಅನುಷ್ಠಾನಕ್ಕೆ ಬಂದಿತು.[19]

ಆಹಾರ ಸಮಸ್ಯೆ

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮೈಸೂರು ರಾಜ್ಯದಲ್ಲಿನ ಆಹಾರದ ಅಭಾವದಿಂದಾಗಿ ತತ್ತರಿಸುತ್ತಿದ್ದ ಸಂದರ್ಭದಲ್ಲಿ ಈ ಸಮಸ್ಯೆಯ ಪರಿಹಾರೋಪಾಯದ ಬಗ್ಗೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಸ್ಪಂದಿಸಿದ ರೀತಿ ಗಮನಾರ್ಹವಾಗಿದೆ.

1948ರ ಆಗಸ್ಟ್ 31ರಂದು ಶಾಸನಸಭಾ ಭವನದಲ್ಲಿ ಕೇಂದ್ರ ಆಹಾರ ಸಮಿತಿಯ ಜಂಟಿ ಸಭೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. "ಮೊದಲು ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುತ್ತಾ ಕೆ.ಸಿ. ರೆಡ್ಡಿ ಅವರು 1946ನೆಯ ವರ್ಷ ಆಹಾರ ಪರಿಸ್ಥಿತಿ ಅತೃಪ್ತಿಕರವಾಗಿತ್ತೆಂದೂ, 1947ನೆಯ ವರ್ಷ ಸಾಮಾನ್ಯವಾಗಿತ್ತೆಂದೂ

18. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1948-49, ಪುಟ-4.
19. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1948-49, ಪುಟ-88.

ಹೇಳಿದರು. 1948ನೆಯ ವರ್ಷದಲ್ಲಿ ನಿಯಂತ್ರಣವನ್ನು ಅನುಕ್ರಮವಾಗಿ ಸಡಿಲಗೊಳಿಸ ಲಾಯಿತು. ಕೇಂದ್ರ ಸರ್ಕಾರದಿಂದ 85 ಸಾವಿರ ಟನ್ ಆಹಾರ ಧಾನ್ಯ ಕೊಡಬೇಕೆಂದು ಇತ್ಯರ್ಥವಾಯಿತು, ಇದು ನಮಗೆ ಸಾಲದು. ಇದರ ಜೊತೆಗೆ ನಿಯಂತ್ರಣ ಸಡಿಲವಾದ್ದರಿಂದ ಸಂಗ್ರಹಿಸಬಹುದಾಗಿದ್ದ 46,000 ಟನ್ ರಾಗಿ, 18 ಲಕ್ಷ ಪಲ್ಲ ಭತ್ತವನ್ನು ಬಿಡಬೇಕಾಗಿ ಬಂತು. ಈ ರೀತಿ 77,000 ಟನ್ ಕಡಿಮೆ ಬಿತ್ತು. ನಿಯಂತ್ರಣ ಹೋದ ಮೇಲೆ ಈ ಧಾನ್ಯ ಮಾರುಕಟ್ಟೆಗೆ ಬಂದು ಜನಕ್ಕೆ ಸಿಗಬಹುದೆಂದು ನಿರೀಕ್ಷೆ ಇತ್ತು. ಈ ನಿರೀಕ್ಷೆ ಸಫಲವಾಗಿಲ್ಲ, ಬೆಲೆಗಳು ಏರಿತು. ಸರಬರಾಜು ಕಡಮೆಯಾಯಿತು. ಸರ್ಕಾರಿ ಡಿಪೋಗಳಿಗೆ ಜನ ಬರುವುದು ಹೆಚ್ಚಿತು. ರಾಗಿ ಹತೋಟ ಹೋದರೂ, ಸರ್ಕಾರದ ಡಿಪೋಗಳಲ್ಲಿ ರಾಗಿ ಮಾರಾಟ ಕಡಿಮೆಯಾಗಲಿಲ್ಲ. ಉಳಿದಿದ್ದ ರಾಗಿ ಎರಡೂ ಖರ್ಚಾಯಿತು" ಎಂದರು.

ಮುಂದುವರೆದು "ಇದರ ಜೊತೆಗೆ ಇಂಡಿಯಾ ಸರ್ಕಾರ ನಮಗೆ ಕೊಡಬೇಕಾಗಿದ್ದ 75,000 ಟನ್ ಧಾನ್ಯಕ್ಕೆ ಬದಲು 62,000 ಟನ್ ಕೊಡುವುದಾಗಿ ಇದ್ದಕ್ಕಿದ್ದ ಹಾಗೆ ತಿಳಿಸಿತು. ಇದಕ್ಕೆ ಬರ್ಮಾ ಅವ್ಯವಸ್ಥೆಯೇ ಕಾರಣ. ಇದು ಹೇಗಾದರೂ ಇರಲಿ ನಮಗೆ ಬರುವ ಧಾನ್ಯ ಬರಲಿಲ್ಲ. ಈಗಿನ ವ್ಯವಸ್ಥೆಯ ರೀತಿಯಂತೆ 11,000 ಟನ್ ಅಕ್ಕಿ, 4,000 ಟನ್ ಗೋಧಿ, 10,000 ಟನ್ ಇತರ ಧಾನ್ಯ ಬರುತ್ತದೆ. ನಮಗೆ 17,000 ಟನ್ ಅಕ್ಕಿ, 18,000 ಟನ್ ಇತರ ಧಾನ್ಯ, 3,000 ಟನ್ ಗೋಧಿ ಬರಬೇಕಾಗಿತ್ತು. ಈಗ ನಮ್ಮಲ್ಲಿರುವ ದಾಸ್ತಾನು 24,800 ಟನ್ ಧಾನ್ಯ. ನಮಗೆ ಕನಿಷ್ಠ ಪಕ್ಷ ತಿಂಗಳೊಂದಕ್ಕೆ 9,000 ಟನ್ ಅಕ್ಕಿ, 2,000 ಟನ್ ಗೋಧಿ, 3,500 ಟನ್ ರಾಗಿ ಬೇಕಾಗುತ್ತದೆ, ಈ ರೀತಿ ನಾಲ್ಕು ತಿಂಗಳು ನಿಭಾಯಿಸಬೇಕಾಗಿದೆ. ಈಗಿನ ಲೆಕ್ಕಾಚಾರದಂತೆ ಡಿಸೆಂಬರ್ ಕೊನೆಯವರೆಗೆ 58,000 ಟನ್ ಆಹಾರ ಧಾನ್ಯಬೇಕು. ಈಗಿರುವ ದಾಸ್ತಾನು, ಭಾರತ ಸರ್ಕಾರದಿಂದ ಬರುವ ದಾಸ್ತಾನು ಸೇರಿಸಿದರೆ 50,000 ಟನ್ ಧಾನ್ಯ ಆಗುತ್ತದೆ. ಅಂದರೆ 8000 ಟನ್ ಕಡಿಮೆ ಬಿತ್ತು. ಇದನ್ನು ಸರಿದೂಗಿಸಬೇಕು. ಈಗಿರುವ ದಾಸ್ತಾನನ್ನು ಖರ್ಚು ಮಾಡಿದರೆ ನವೆಂಬರ್ 15ರ ಹೊತ್ತಿಗೆ ರೇಷನನ್ನೇ ನಂಬಿಕೊಂಡಿರುವವರು ಉಪವಾಸ ಮಾಡ ಬೇಕಾಗುವುದು. ಧಾರಣೆಗಳ ಉಬ್ಬರ, ಸರಬರಾಜಿನ ಅಭಾವವೇ ಅಪಾಯಕ ಸೂಚನೆಗಳಾ ಗಿವೆ" ಎಂದು ಹೇಳಿದರು.

ಕೇಂದ್ರ ಸರ್ಕಾರವನ್ನು ಹೆಚ್ಚಿನ ಸರಬರಾಜಿಗೆ ಆಶ್ರಯಿಸೋಣ. ಈ ಮಧ್ಯೆ ಈ ವಿಶೇಷ ಪರಿಸ್ಥಿತಿಯನ್ನು ಎದುರಿಸಲೇಬೇಕು. ಈ ಸಲಹೆಗಳನ್ನು ಸರ್ಕಾರದ ಗಮನಕ್ಕೆ ತಂದಿದೆ. ಇವನ್ನು ಕಾಲಹರಣ ಮಾಡದೆ ಆಚರಣೆಗೆ ತರಲೇಬೇಕು. A ಮತ್ತು B ರೇಷನ್‌ದಾರರ ರೇಷನ್ನಿನಲ್ಲಿ ಒಂದು ಔನ್ಸು ಕಡಮೆ ಮಾಡುವುದು. ಈ ಕ್ರಮದ ಫಲವಾಗಿ A ರೇಷನ್‌ದಾರನಿಗೆ 6 ಔನ್ಸು ಲಭಿಸುವುದು. B ರೇಷನ್‌ದಾರನಿಗೆ 3.2 ಔನ್ಸ್

ಧಾನ್ಯ ಸಿಗುವುದು. ಇದೇ ರೀತಿ ಕಳೆದ ವರ್ಷವೂ ಕಡಿಮೆ ಮಾಡಿತ್ತು. ಇದರಿಂದ ತಿಂಗಳೊಂದಕ್ಕೆ 1,000 ಟನ್ ಉಳಿಯುವುದು. ಅಂದರೆ 4 ತಿಂಗಳಿಂದ 4,000 ಟನ್ ಉಳಿದಂತಾಯಿತು.

ಅಕ್ಕಿಯ ಮಾರಾಟದ ಬೆಲೆಯನ್ನು ಹೆಚ್ಚಿಸಬೇಕು. ಹೀಗೆ ಮಾಡಬೇಕೆಂದು ಹಿಂದೆಯೇ ನಿರ್ಧರಿಸಲಾಗಿತ್ತು. ಕಾರಣಾಂತರದಿಂದ ಆಚರಣೆಗೆ ತರಲಿಲ್ಲ. ರಾಜ್ಯದ ಆರ್ಥಿಕ ದೃಷ್ಟಿಯಿಂದ ಇದು ಅಗತ್ಯ. ಇದರಿಂದ ಅಕ್ಕಿಯನ್ನು ಕೊಳ್ಳುವ ಪ್ರಮಾಣವೂ ಕಡಿಮೆ ಯಾಗುವುದು. ಆಹಾರಧಾನ್ಯ ಸಂಗ್ರಹಕ್ಕಾಗಿ ಸಲಹೆ ನೀಡಲಾಗಿದೆ. ಭತ್ತ, ರಾಗಿಯ ಬೆಲೆಯನ್ನು ನಿರ್ಧರಿಸಲಾಗುವುದು. ಈ ಆಕರ್ಷಣೆಯಿಂದಲಾದರೂ, ಧಾನ್ಯ ಹೊರಕ್ಕೆ ಬೀಳಬಹುದು" ಎಂದು ಕೆ.ಸಿ. ರೆಡ್ಡಿ ಸ್ಪಷ್ಟವಾಗಿ ತಿಳಿಸಿದರು.[20]

ಆಹಾರ ಸಮಸ್ಯೆ ಎಷ್ಟು ಉಲ್ಬಣವಾಗಿತ್ತೆಂದರೆ ರಾಜ್ಯದಾದ್ಯಂತ ಜನ ಆಹಾರಕ್ಕಾಗಿ ಹಾಹಾಕಾರ ಪಡುವಂತಾಗಿತ್ತು. 'ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಸಮಾರಂಭವೊಂದಕ್ಕೆ ಹೋಗಿದ್ದಾಗ, ಅಲ್ಲಿಯ ಜನತೆ ಆಹಾರದ ಹಂಚಿಕೆ ಸರಿಯಾಗಿಲ್ಲ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಕೋಪೋದ್ರೇಕಗಳಿಂದ ಕೂಗುತ್ತಾ ಕೂಡಿದ್ದ ಜನತೆಯ ಗುಂಪನ್ನು ಲೆಕ್ಕಿಸದೆ ಮುಖ್ಯಮಂತ್ರಿಗಳು ಅವರ ಮಧ್ಯೆ ನುಗ್ಗಿ ಅವರೆಲ್ಲರನ್ನೂ ಶಾಂತವಾಗಿರುವಂತೆ ಪ್ರಾರ್ಥಿಸಿ, ಆಹಾರ ಹಂಚಿಕೆ ಅವ್ಯವಸ್ಥೆಗಳನ್ನೆಲ್ಲಾ ಕೂಡಲೇ ಪರಿಹರಿಸುತ್ತೇವೆ. ಸರಿಯಾದ ವಿಷಯ ವನ್ನು ತಿಳಿಯದೇ ರೊಚ್ಚಿಗೆಳೆಯಬಾರದು. ಅಧಿಕಾರಿಗಳು ಸರಿಯಾಗಿ ವರ್ತಿಸದಿದ್ದಲ್ಲಿ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದು ಎಂದು ಹಾಗೂ ಆಹಾರ ಸಮಸ್ಯೆಯ ಬಗ್ಗೆ ವಿವರವಾಗಿ ತಿಳಿಸಿದ್ದರಿಂದ ಜನತೆಯ ಕೋಪೋದ್ರೇಕಗಳು ಇಲ್ಲವಾದವು".[21]

ಮೈಸೂರು ಸಂಸ್ಥಾನದಲ್ಲಿಯ ಆಹಾರ ಸಮಸ್ಯೆಯ ಪರಿಹಾರಕ್ಕಾಗಿ ಒಂದು ಸಂಶೋಧನೆ ಕೇಂದ್ರವನ್ನು ಸ್ಥಾಪಿಸಬೇಕೆಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಆಲೋಚನೆಯಾಗಿತ್ತು. ಈ ಸಂದರ್ಭದಲ್ಲಿ 'ಮೈಸೂರಿನಲ್ಲಿರುವ ಇಂಡಿಯಾ ಸರ್ಕಾರದ ಆಹಾರ ಪೌಷ್ಟಿಕಾಂಶ ಪ್ರಾಯೋಗಿಕ ಕೇಂದ್ರದ ವ್ಯವಸ್ಥೆಯ ಬಗ್ಗೆ ಸಲಹೆ ನೀಡಲು ಭಾರತದ ಪ್ರಧಾನಿ ಜವಹರಲಾಲ್ ನೆಹರು ಅವರು ಮೈಸೂರಿನ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಿದರು. ಈ ಸಮಿತಿ ಪ್ರಯೋಗ ಶಾಲೆಗಳ ವ್ಯವಸ್ಥೆಯ ಬಗ್ಗೆ ಸಲಹೆ ನೀಡಲು ಯೋಜಿತವಾಗಿತ್ತು. ಕೆ.ಸಿ. ರೆಡ್ಡಿ

---

20. ಪೌರವಾಣಿ ಪತ್ರಿಕೆ : ದಿನಾಂಕ : 01–09–1948.
21. ಪೌರವಾಣಿ ಪತ್ರಿಕೆ : ದಿನಾಂಕ : 27–11–1948.

ಅವರ ಒತ್ತಾಸೆಯ ಫಲವಾಗಿಯೇ ಮೈಸೂರಿನಲ್ಲಿ ಸಿ.ಎಫ್.ಟಿ.ಆರ್.ಐ. (ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ಅಂಡ್ ರೀಸರ್ಚ್ ಇನ್ಸ್‌ಟಿಟ್ಯೂಟ್) ಪ್ರಾರಂಭವಾದದ್ದನ್ನು ಗಮನಿಸಬಹುದು. ಈ ಪ್ರಾಯೋಗಿಕ ಕೇಂದ್ರವನ್ನು ಉನ್ನತ ದರ್ಜೆಗೇರಿಸಿದ ಕೆ.ಸಿ. ರೆಡ್ಡಿ ಅವರು, ಪೌಷ್ಠಿಕ ಆಹಾರ ಸಮಸ್ಯೆಯ ನಿವಾರಣೆಗೋಸ್ಕರ ತಮ್ಮ ಅಧಿಕಾರಾವಧಿಯಲ್ಲಿ ಹೆಚ್ಚಿನ ಆದ್ಯತೆ ಕೊಟ್ಟು ಪರಿಶ್ರಮಿಸಿದುದನ್ನು ಗಮನಿಸಬಹುದು.[22]

ಆಹಾರದ ಸಮಸ್ಯೆಯ ಪರಿಹಾರದ ಬಗ್ಗೆ ಕೆ.ಸಿ. ರೆಡ್ಡಿಯವರು ಸಮಾರಂಭವೊಂದ ರಲ್ಲಿ ಮಾತನಾಡುತ್ತಾ "ಆಹಾರ ವಿಚಾರದಲ್ಲಿ ಸ್ವಪರಿಪೂರ್ಣತೆಯನ್ನು ಹೊಂದುವುದು ಇಂದು ನಮ್ಮ ಮುಂದಿರುವ ಮಹತ್ತರವಾದ ಸಮಸ್ಯೆಯಾಗಿದೆ. ಈ ಸಮಸ್ಯೆಯ ಪರಿಹಾರ ಕ್ಕಾಗಿ ನಾವೀಗ ಅತ್ಯಂತ ತ್ವರಿತವಾದ ಗಮನವನ್ನು ಕೊಡಬೇಕಾಗಿದೆ. ನಮ್ಮ ಪ್ರಧಾನಮಂತ್ರಿ ಜವಹರಲಾಲ್ ನೆಹರೂರವರು ಘೋಷಿಸಿರುವಂತೆ, ಈ ಸಮಸ್ಯೆಯನ್ನು ಪರಿಹರಿಸಲು ನಾವು ಒಂದು ಸಮರ ಕಾರ್ಯಕ್ರಮದಮತೆ ನಾನಾ ಮುಖಗಳಲ್ಲಿ, ನಾನಾ ಅಂತಸ್ತುಗಳಲ್ಲಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ" ಎಂದರು.

ಮುಂದುವರೆದು "ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ, ಮೊದಲು ಗ್ರಾಮ ವಾಸಿಗಳ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು ಅತ್ಯವಶ್ಯಕ. ಗ್ರಾಮಾಂತರ ವಾಸಿಗಳಲ್ಲಿ ಶೇಕಡ 90% ಮಂದಿ ವ್ಯವಸಾಯವನ್ನೇ ಜೀವನಾಧಾರವಾಗಿ ಇಟ್ಟುಕೊಂಡಿರುವುದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕಾದರೆ, ಅವರು ಒಂದು ತೆನೆ ಧಾನ್ಯವನ್ನು ಬೆಳೆಯುತ್ತಿದ್ದ ಕಡೆ, ಎರಡು ತೆನೆಗಳಷ್ಟು ಧಾನ್ಯವನ್ನು ಬೆಳೆದು ಆಹಾರದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಅಧಿಕ ಆಹಾರೋತ್ಪತ್ತಿಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಯಾರು ತೀವ್ರಾಸಕ್ತರಾಗಿರುವರೋ, ಯಾರಿಗಾಗಿ ಈ ಯೋಜನೆಯು ಉದ್ದೇಶಿಸಲ್ಪಟ್ಟಿರುವುದೋ ಅವರೆಲ್ಲರಿಗೂ ಉಪಯುಕ್ತ ಆಗುವುದೆಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ"[23] ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಸರಿಯಾಗಿ ಮಳೆ ಬೆಳೆಗಳಾಗದೆ ಜನರು ಬರ ಪರಿಸ್ಥಿತಿ ಎದುರಿಸುತ್ತಿದ್ದಾಗ ಆಹಾರ ಸಮಸ್ಯೆಯ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ನೆರವನ್ನು ಪಡೆಯಲು ರೆಡ್ಡಿ ಅವರು ಪ್ರಯತ್ನಿಸಿ ತಮ್ಮ ಪ್ರಯತ್ನದಲ್ಲಿ ಯಶಸ್ವಿಯೂ ಆದುದ್ದನ್ನು ಕಾಣಬಹುದು. ಕೆ.ಸಿ. ರೆಡ್ಡಿ ಅವರು ಮಾತನಾಡುತ್ತಾ 'ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿ ಉಲ್ಬಣಿಸಿದೆ,

22. ಪೌರವಾಣಿ ಪತ್ರಿಕೆ : ದಿನಾಂಕ : 09-02-1949.
23. ಜೀರಗೆ ಕಟ್ಟೆ ಬಸವಪ್ಪ(ಸಂ):ಗ್ರಾಮಾಭ್ಯುದಯ ಮೈಸೂರು, ಸಂಪುಟ-3, ಸಂಚಿಕೆ-1,ಪುಟ-14.

ಸುಮಾರು ಒಂದು ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಕೊರತೆ ಇದೆ. ಈ ಪೈಕಿ 70,000 ಟನ್ ಕೊಡಲು ಕೇಂದ್ರದವರು ಒಪ್ಪಿದ್ದಾರೆಂದು, ಹೆಚ್ಚಿಗೆ 30.000 ಟನ್ ಕೊಡಬೇಕೆಂದು ತಾವು ಕೇಳಿರುವುದಾಗಿ ತಿಳಿಸಿದರು. ಮುಂದುವರೆದು ಮಳೆಯ ಅಭಾವ ಕಾರಣದಿಂದಾಗಿ ಶಿವನಸಮುದ್ರದ ಜಲಾಶಯದಲ್ಲಿ ನೀರು ಬಹಳ ಕಡಮೆಯಾಗಿದೆ ಎಂದೂ, ಈ ಕಾರಣದಿಂದ ವಿದ್ಯುಚ್ಛಕ್ತಿ ಉತ್ಪನ್ನ ಕಡಮೆಯಾಗಿ ಕಾರ್ಖಾನೆಗಳಿಗೆ ಕೂಡ ವಿದ್ಯುತ್ ಸರಬರಾಜನ್ನು ಖೋತಾ ಮಾಡಿರುವುದಾಗಿಯೂ ಬೆಂಗಳೂರಿನ ಬೀದಿ ದೀಪಗಳನ್ನು ಅವಶ್ಯಕವಾದ ಕಡೆಗಳಲ್ಲಿ ಹೆಚ್ಚಿಸಲಾಗುವುದೆಂದೂ' ತಿಳಿಸಿದರು.[24]

"ಅಕ್ಟೋಬರ್ ಮೂರನೆಯ ವಾರದಲ್ಲಿ 'ಆಹಾರ ತಾಂತ್ರಿಕ ಸಂಸ್ಥೆ' ಮೈಸೂರು ಪ್ರಾರಂಭೋತ್ಸವವನ್ನು ಪ್ರಾರಂಭಿಸಲು ಪಂಡಿತ್ ನೆಹರುರವರು ಬರುವುದಿಲ್ಲ. ರಾಜಾಜಿ ಯವರು ಬರುತ್ತಾರೆ. ಭಾರತ ಸರ್ಕಾರದವರು ಮೈಸೂರು ಸಂಸ್ಥಾನಕ್ಕೆ ಪೂರ್ವ ಬಂಗಾಳದಿಂದ 1600 ನಿರಾಶ್ರಿತ ಸಂಸಾರಗಳನ್ನು ಕಳುಹಿಸಲಿದ್ದಾರೆ. ಅವರ ವಸತಿ, ಜೀವನ ನಿರ್ವಹಣೆ ಮೊದಲಾವುಗಳಿಗೆ ಕೇಂದ್ರ 25 ಲಕ್ಷ ರೂ. ಸಹಾಯ ನೀಡಲಿದೆ. ನಿರಾಶ್ರಿತರಿಗೆ ಸಂಸ್ಥಾನದಲ್ಲಿ ಜಮೀನು ಕೊಡಲು ಮೈಸೂರು ಸರ್ಕಾರ ವಾಗ್ದಾನ ಮಾಡಿದೆ. ನಮ್ಮ ಮಲೆನಾಡಿನಲ್ಲಿ ಜಮೀನಿದೆ. ಕೇಂದ್ರದಿಂದ ಮೈಸೂರಿಗೆ ಈ ಕೂಡಲೇ 1000 ಟನ್ ಹೆಚ್ಚಿನ ಗೋಧಿಯನ್ನು ಕಳುಹಿಸಲು ಏರ್ಪಾಡು ಮಾಡುವುದಾಗಿ ಒಪ್ಪಿದೆ. ಭಾರತ ಸರ್ಕಾರದಿಂದ ಬೇರೇನೂ ಆಹಾರಧಾನ್ಯ ಅಕ್ಟೋಬರ್‌ವರೆಗೆ ಬರುವಂತಿಲ್ಲ. ನಮಗೆ ಬರಬೇಕಾದ ಉಳಿದ ಅಕ್ಕಿ ಸಹ ಆಗಲೇ ಬರುವುದೇ ಹೊರತು ಅದಕ್ಕೆ ಮುಂಚೆ ಬರುವುದಿಲ್ಲ" ಎಂದರು.

ಮುಂದುವರೆದು "ದೇಶಕ್ಕೆ ಸಕ್ಕರೆ ಆಮದು ಕಮ್ಮಿ ಆಗಿರುವುದರಿಂದ ಆ ಬಗ್ಗೆ ಕೇಂದ್ರದ ನಿರೀಕ್ಷಣೆ ಫಲಿಸುವ ಸಂಭವವಿಲ್ಲದುದರಿಂದ ರಾಜ್ಯದಲ್ಲಿ ಸಕ್ಕರೆ ರೇಷನ್ ಈಗಿನ ಪ್ರಮಾಣವನ್ನು ಕೂಡಲೇ ಕಮ್ಮಿ ಮಾಡುವ ಆಲೋಚನೆ ಮಾಡಬೇಕಾಗಿದೆ. ಈಗಿನ ಸಕ್ಕರೆ ದಾಸ್ತಾನು ಸೆಪ್ಟೆಂಬರ್ ಕೊನೆಯವರೆಗೆ ಮಾತ್ರ ಸಾಕಾಗುವುದು. ಕೇಂದ್ರದ 'ಸ್ಟಾಫ್ ಸೆಲೆಕ್ಷನ್ ಬೋರ್ಡ್" ಅಕ್ಟೋಬರ್‌ವರೆಗೆ ಬೆಂಗಳೂರಿಗೆ ಭೇಟಿ ಕೊಡುವುದಿಲ್ಲ. ಮೈಸೂರು ಈ ಸಂಬಂಧ 'ಇನ್‌ಟಿಗ್ರೇಷನ್'ನ ಸಾಮಾನ್ಯ ತತ್ವಗಳನ್ನು ಒಪ್ಪಿರುವುದಾದರೂ ನಮ್ಮ ದೃಷ್ಟಿಯಿಂದ ತಪಸೀಲುಗಳು ತೀರ್ಮಾನವಾಗಿಲ್ಲ" ಎಂದರು.

---

24 ಪೌರವಾಣಿ ಪತ್ರಿಕೆ : ದಿನಾಂಕ : 30-05-1950.

"ರಾಜ್ಯದ ನಾನಾ ವಿದ್ಯುಚ್ಛಕ್ತಿ ಮತ್ತು ನೀರಾವರಿ ಯೋಜನೆಗಳಿಗೆ ಗ್ರ್ಯಾಂಟು ಮತ್ತು ಸಾಲಗಳ ರೂಪದಲ್ಲಿ ನಾವು ಕೇಂದ್ರದಿಂದ ಒಂದರಿಂದ ಮೂರು ಕೋಟಿ ರೂಪಾಯಿಗಳವರೆಗೆ ಸಹಾಯ ನಿರೀಕ್ಷಿಸಬಹುದಾಗಿದೆ. ಯಾವ ಯೋಜನೆಗಳನ್ನು ಮೊದಲು ತೆಗೆದುಕೊಳ್ಳತಕ್ಕದ್ದು ಎಂಬುದನ್ನು ಕೇಂದ್ರದಿಂದ ಬರುವ ಸಹಾಯದ ಪ್ರಮಾಣದ ಮೇಲೆ ನಿರ್ಧರಿಸಬೇಕಾಗುವುದು. ಅಲ್ಲದೆ ದೇಶದ ಜಟಿಲ ಆಹಾರ ಪರಿಸ್ಥಿತಿಯನ್ನು ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಎಲ್ಲರೂ ಮನದಟ್ಟು ಮಾಡಿಕೊಡುವುದಾಗಿಯೂ, ಉಳಿದ ರಾಜ್ಯಗಳಲ್ಲಿ 'ಪ್ರೊಕ್ಯೂರ್‌ಮೆಂಟ್' ಕೆಲಸವನ್ನು ಹುರುಪಿನಿಂದ ನಡೆಸಿ, ಸಾಲದ ರಾಜ್ಯಗಳಿಗೆ ಕಳುಹಿಸುವುದೊಂದೆ ಮಾರ್ಗವೆಂದು ಎಲ್ಲರಿಗೂ ಮನದಟ್ಟಾಗಿದೆಯೆಂದೂ" ಕೆ.ಸಿ. ರೆಡ್ಡಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುವುದು ಗಮನಾರ್ಹವಾಗಿದೆ.[25]

1950ರ ಸೆಪ್ಟಂಬರ್ 9ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಜನರ ಕುಂದು-ಕೊರತೆಗಳನ್ನು ಸ್ವತಃ ತಿಳಿದುಕೊಳ್ಳಲು 'ಗ್ರಾಮಾಂತರ ಪ್ರವಾಸ ಕೈಗೊಂಡು ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಚುಂಚನಕಟ್ಟೆ, ಬೆಟ್ಟದಪುರ, ಪಿರಿಯಾಪಟ್ಟಣ ಮತ್ತು ಹುಣಸೂರಿಗೆ ಭೇಟಿ ನೀಡಿದರು. ಮೊದಲು ಇಲವಾಲದ 'ಸಮಗ್ರ ಗ್ರಾಮ ಸೇವಾ ಸಹಕಾರ ಸಂಘ'ಕ್ಕೆ ಹೋಗಿ ಪರೀಕ್ಷಿಸಿ, ಜನಗಳಿಗೆ ಇರತಕ್ಕ ಕುಂದು-ಕೊರತೆಗಳ ವಿಚಾರ ಕೇಳಿ ಹಣದ ಆಸೆ ಬಿಟ್ಟು ನೆಲಗಡಲೆ ಕಾಯಿ ಬೆಳೆಯನ್ನು ಕಡಮೆ ಮಾಡಿ ರಾಗಿ, ಜೋಳ ಬೆಳೆಯಬೇಕೆಂದು ತಿಳಿಸಿದರು. ಪಿರಿಯಾಪಟ್ಟಣದ ಸಮೀಪ ಮಾವುಟ ಬೆಟ್ಟದ ಹಳ್ಳವನ್ನು ತಿರುಗಿಸಿ ನೀರಿನ ಅನುಕೂಲಗಳು ಮಾಡಿಕೊಟ್ಟಲ್ಲಿ ಅನೇಕ ಎಕರೆ ಜಮೀನಿನ ವ್ಯವಸಾಯಕ್ಕೆ ಅನುಕೂಲವಾಗುತ್ತೆಂದೂ, ಇದಕ್ಕೆ ಸುಮಾರು 20,000 ರೂ. ಅಂದಾಜು ಆಗಬಹುದೆಂದೂ ತಿಳಿಸಿದಕ್ಕೆ ಆ ಯೋಜನೆಯನ್ನು ಆದಷ್ಟು ಬೇಗನೆ ಕಾರ್ಯಾಚರಣೆಗೆ ತರುವುದಾಗಿಯೂ ತಿಳಿಸಿದರು. ಚುಂಚನಕಟ್ಟೆಗೆ ಭೇಟಿ ನೀಡಿ ಅಲ್ಲಿದ್ದ ರೈತರಿಂದ ಅವರ ವಿಚಾರ ತಿಳಿದು ಬೆಳೆಯಿಲ್ಲದ ಪ್ರದೇಶದಲ್ಲಿರುವ ಜನಗಳಿಗಾಗಿ ಹೆಚ್ಚು ಆಹಾರ ಬೆಳೆದು ಕೊಡಬೇಕೆಂದು ತಿಳಿಸಿದರು.[26]

ತಮ್ಮ 'ಗ್ರಾಮಾಂತರ ಪ್ರವಾಸ' ಮುಂದುವರೆಸಿದ ಕೆ.ಸಿ. ರೆಡ್ಡಿ ಅವರು ಮೈಸೂರಿನ ಟಿ. ನರಸೀಪುರ, ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ತಾಲ್ಲೂಕುಗಳಿಗೆ ಭೇಟಿ ನೀಡಿ ಮಾತನಾಡುತ್ತಾ 'ಟಿ. ನರಸೀಪುರದಲ್ಲಿ 18,600 ರೇಷನ್ ಕಾರ್ಡು ಕೊಡಲಾಗಿದೆಯೆಂದೂ, ಈ ಕಾರ್ಡುಗಳಿಗಾಗಿ ತಿಂಗಳಿಗೆ ಸುಮಾರು 750 ಪಲ್ಲ

25. ಪೌರವಾಣಿ ಪತ್ರಿಕೆ : ದಿನಾಂಕ : 23-08-1950.
26. ಪೌರವಾಣಿ ಪತ್ರಿಕೆ : ದಿನಾಂಕ : 13-09-1950.

ಸರ್ಕಾರದಿಂದ ಕೊಡಲಾಗುತ್ತಿದೆಯೆಂದೂ, ಇದರ ಪೈಕಿ ಸುಮಾರು 350 ಪಲ್ಲ ಸರ್ಕಾರಿ ನೌಕರರಿಗೆ ಬೇಕಾಗುತ್ತೆಂದೂ, ಬಾಕಿ ಉಳಿದ 400 ಪಲ್ಲ ಹಂಚಿದಲ್ಲಿ ಕಾರ್ಡು ಒಂದಕ್ಕೆ ನಾಲ್ಕಾಣೆ, ಎಂಟಾಣೆಗೆ ಅಕ್ಕಿಸಿಗುವುದು ಕೂಡ ಕಷ್ಟವಾಗುತ್ತದೆಂದೂ, ಇನ್ನೂ ಹೆಚ್ಚು ಅಕ್ಕಿ ಕಳುಹಿಸಬೇಕೆಂದೂ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಗಳು "ಈ ತಾಲ್ಲೂಕಿನ ಜನರು ಬಹು ಕಷ್ಟ ಸ್ಥಿತಿಯಲ್ಲಿರುವುದನ್ನು ತಿಳಿದೇ ತಲೆಹೊರೆಯ ಮೇಲೆ ಆಹಾರ ಧಾನ್ಯಗಳನ್ನು ತರಲು ಸರ್ಕಾರವು ಅವಕಾಶ ಕೊಟ್ಟಿತೆಂದೂ ಜನತೆಗೆ ಸಹಾಯವು ಅತ್ಯವಶ್ಯಕವೆಂದು ತಿಳಿಸಿದರು. ಬೇಕಾದಷ್ಟು ಕೊಡಲು ಸಾಧ್ಯವಿಲ್ಲವೆಂದೂ. ಪರಿಸ್ಥಿತಿಯನ್ನು ವಿಚಾರ ಮಾಡಿ ಸಾಧ್ಯವಾದಷ್ಟು ಹೆಚ್ಚು ಆಹಾರ ಧಾನ್ಯಗಳನ್ನು ಇಲ್ಲಿನ ಡಿಪೋಗಳಿಗೆ ಕಳುಹಿಸಲು ಏರ್ಪಾಡು ಮಾಡುವುದಾಗಿ ತಿಳಿಸಿದರು". ಮುಂದೆ ಹಿರೇಕೆರೆ ಅಡ್ಡಹಳ್ಳ, ಮೂಲಂಗಿ, ಮಾದಾಪುರ, ಹಿರಿಯೂರು ಪ್ರದೇಶಗಳಿಗೆ ಭೇಟಿ ನೀಡಿ ವ್ಯವಸಾಯಕ್ಕಾಗಿ ಬಾವಿ ತೆಗೆಸುವವರಿಗೆ ಸರ್ಕಾರ 500/– ರೂ. ಉಚಿತ ಧನ ಸಹಾಯ ಕೊಡುತ್ತಿರುವುದಾಗಿ ತಿಳಿಸಿ ಅದನ್ನು ಬಳಸಿಕೊಳ್ಳಬೇಕೆಂದು ತಿಳಿಸಿದರು.

ಅಲ್ಲದೆ "ಮೈಸೂರು, ಕೋಲಾರ ಮತ್ತು ಚಿತ್ರದುರ್ಗದ ಕೆಲವು ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಬಹಳ ತೊಂದರೆಯಾಗಿತ್ತೆಂದೂ, ಈಗಲಾದರೂ ಮಳೆ ಬಂದಿರುವುದು ಸ್ವಲ್ಪ ಸಮಾಧಾನ ತಂದಿದೆಯೆಂದು, ಮುಂದಿನ ಫಸಲು ಬರುವವರೆಗೆ 50 ಸೇರಿನವರೆಗೆ ತಲೆಹೊರೆ ತರುವ ಆಜ್ಞೆಯನ್ನು ಜಾರಿಯಲ್ಲಿಟ್ಟಿರುವುದಾಗಿ ಭರವಸೆ ನೀಡಿದರು. ಧಾನ್ಯ ವಸೂಲಿ ಕ್ರಮವನ್ನು ಸರಿಯಾಗಿ ಮಾಡಿಲ್ಲ ಎಂದೂ ಆಕ್ಷೇಪಣೆ ಇದೆ. ಬಡವರಿಂದ ಸಮನಾಗಿ ಆಹಾರ ಧಾನ್ಯಗಳು ವಸೂಲು ಮಾಡಲ್ಪಡುತ್ತಿದೆ ಎಂದೂ, ದಾಕ್ಷಿಣ್ಯಕ್ಕೊಳಗಾಗಿ ಅನೇಕ ಸಾಹುಕಾರರಿಂದ ಹೆಚ್ಚು ವಸೂಲು ಮಾಡದೆ ಅವರಲ್ಲಿಯೇ ಬಿಡಲಾಗಿದೆ. ಆದರೆ ಜನತೆಯಲ್ಲಿ ಪ್ರಾಮಾಣಿಕತೆಯ ಮಟ್ಟ ಹೆಚ್ಚಾಗದಿದ್ದಲ್ಲಿ ಯಾವ ಸರ್ಕಾರವೂ ಏನೂ ಮಾಡಲಾಗುವುದಿಲ್ಲ. ಸರ್ಕಾರವೂ ಪೊಲೀಸರನ್ನು ಮನೆ ಮನೆಗೂ ನುಗ್ಗಿಸಿ ದೌರ್ಜನ್ಯದಿಂದ ವರ್ತಿಸಿದ್ದರೆ ಇನ್ನೂ ಒಂದು ಲಕ್ಷ ಪಲ್ಲ ಸಿಕ್ಕುತ್ತಿತ್ತು. ಇದು ಸರಿಯೇ ಎಂಬುದನ್ನು ಜನಗಳೇ ಪರ್ಯಾಲೋಚಿಸಬೇಕೆಂದು ತಿಳಿಸಿ, ಇಲ್ಲಿನ ರೇಷನ್ ಡಿಪೋಗಳಿಗೆ ಹೆಚ್ಚು ಆಹಾರ ಧಾನ್ಯಗಳು ಬರುವಂತೆ ಏರ್ಪಾಡು ಮಾಡುವುದಾಗಿಯೂ, ಅದು ಸರಿಯಾದಲ್ಲಿ ಆಹಾರ ಧಾನ್ಯಗಳು ಬಡಬಗ್ಗರಿಗೆ ಸಿಗುವಂತೆ ಜನತೆಯು ಮತ್ತು ನೌಕರರು ಸಹಕರಿಸಬೇಕೆಂದು ಕೋರಿದರು".[27]

---

27. ಪೌರವಾಣಿ ಪತ್ರಿಕೆ : ದಿನಾಂಕ : 14–09–1950.

1950ರ ಸೆಪ್ಟಂಬರ್ 29ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಪತ್ರಿಕಾ ಹೇಳಿಕೆ ನೀಡಿ "ದಸರಾದಲ್ಲಿ ಮೈಸೂರಿನ ರಾಜಪ್ರಮುಖರ ಮೆರವಣಿಗೆ ನಡೆಯುವುದಿಲ್ಲ. ಮೆರವಣಿಗೆ ನಡೆಸಿದರೆ ಲಕ್ಷಾಂತರ ಜನರು ರಾಜಧಾನಿಗೆ ಬರುವುದರಿಂದ ಅವರಿಗೆಲ್ಲಾ ಅನ್ನ-ಪಾನಾದಿಗಳನ್ನು ಈಗಿನ ಪರಿಸ್ಥಿತಿಯಲ್ಲಿ ಒದಗಿಸಲು ಶಕ್ಯವಿಲ್ಲವೇ ಇಲ್ಲ. ವಸ್ತು ಪ್ರದರ್ಶನ ಮಾತ್ರ ನಡೆಯುತ್ತದೆ. ಅರಮನೆಯಲ್ಲಿ ವಿಧ್ಯುಕ್ತವಾದ ಇತರ ಉತ್ಸವ, ಪೂಜಾದಿ ಗಳು ನಡೆಯುತ್ತವೆ. ಸಕಾಲದಲ್ಲಿ ಮಳೆಯಾಗದೆ ಕೋಲಾರ, ಮೈಸೂರು ಮತ್ತು ಚಿತ್ರದುರ್ಗದ ಹಲವು ಪ್ರದೇಶಗಳಲ್ಲಿ ಬೆಳೆಯಾಗಿಲ್ಲ. ಕಷ್ಟ-ನಷ್ಟಗಳಿಗೆ ಒಳಗಾಗಿರುವ ಆ ಪ್ರದೇಶಗಳ ರೈತರಿಗೆ ಪರಿಹಾರ ಒದಗಿಸಲು ಪ್ರಯತ್ನಿಸಲಾಗಿದೆ. ಗುಂಡ್ಲಪೇಟೆ ಮತ್ತಿತರ ಕಡೆಗಳಲ್ಲಿ ಜನರಿಗೆ ಉದ್ಯೋಗ ಕಲ್ಪಿಸಲಾಗುತ್ತಿದೆ. ಅಂತರ ತಾಲ್ಲೂಕು ಆಹಾರ ಹತೋಟಿ ಸಡಿಲ ಮಾಡಿದುದರಿಂದ ಪರಿಸ್ಥಿತಿ ಸುಧಾರಿಸಿದೆ ಆದುದರಿಂದ ಅಂತರ ಜಿಲ್ಲಾ ಅಹಾರ ಹತೋಟಿ ಸಡಿಲ ಮಾಡುವ ವಿಷಯವನ್ನೂ ಸರ್ಕಾರ ಪರ್ಯಾಲೋಚಿಸುತ್ತಿದೆ" ಎಂದೂ, ಪ್ರಾರಂಭ ದಲ್ಲಿ ಸರ್ಕಾರದವರು ಸಾರ್ವಜನಿಕರಿಗೆ ತಿಳಿಸಬೇಕೆಂದಿರುವ ವಿಷಯಗಳನ್ನು ಪತ್ರಿಕೆಗಳ ಮೂಲಕ ಮುಟ್ಟಿಸುವುದಕ್ಕೂ ಸರ್ಕಾರದಿಂದ ಪತ್ರಿಕೆಗಳವರ ವಿಷಯಗಳನ್ನು ತಿಳಿದು ಕೊಳ್ಳುವುದಕ್ಕೂ ಅವಕಾಶ ಕಲ್ಪಿಸುವುದಕ್ಕಾಗಿ 'ಪಾಕ್ಷಿಕ ಸಮ್ಮೇಳನ'ವನ್ನು ಇನ್ನು ಮೇಲೆ ಗುರುವಾರದ ದಿನ ಕರೆಯುವುದಾಗಿ ತಿಳಿಸಿದರು".

ಮುಂದುವರೆದು "ರಾಜ್ಯದ ಆಹಾರ ಪರಿಸ್ಥಿತಿ ಅಷ್ಟು ಉತ್ತಮವಾಗಿಲ್ಲ. ಮುಂದಿನ ಮೂರು ತಿಂಗಳು ಬಹು ಕಷ್ಟಕರವಾದ ಕಾಲ. ಇದರಿಂದ ಪಾರಾಗುವುದಕ್ಕಾಗಿ ಹೆಚ್ಚು ಆಹಾರ ಧಾನ್ಯ ಒದಗಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗಿದೆ. ಸುಮಾರು ಮೂರು ತಿಂಗಳೊಳಗಾಗಿ ಅಲ್ಲಿಂದ ನಮಗೆ ಸಹಾಯ ಬರದೇ ಹೋದರೆ ಈಗ ಕೊಡುತ್ತಿರುವಷ್ಟು ಪ್ರಮಾಣದಲ್ಲೂ ರೇಷನ್ ಕೊಡಲು ಸಾಧ್ಯವಾಗದೇ ಹೋಗಬಹುದು" ಎಂದರು.

ಅಲ್ಲದೆ "ಕೇಂದ್ರದವರನ್ನು ಸಕ್ಕರೆ ಒದಗಿಸುವಂತೆ ಕೇಳಿದ್ದೇವೆ, ನಮ್ಮ ಸಕ್ಕರೆ ಕಾರ್ಖಾನೆ ಕೆಲಸ ಮಾಡಲು ಸಾಧ್ಯವಿಲ್ಲದೆ ಇರುವುದರಿಂದಲೇ ನಮಗೆ ಸಕ್ಕರೆಗೆ ತೊಂದರೆ ಯಾಗಿದೆ. ಬನ್ನೂರು ಮತ್ತು ಕೋಲಾರಗಳಲ್ಲಿ ಬೆಳೆಯುವ ಕಬ್ಬನ್ನು ಕಾರ್ಖಾನೆಯವರು ಕೊಂಡು ಸಕ್ಕರೆ ತಯಾರಿಕೆ ಪ್ರಾರಂಭಿಸಲು ಪ್ರಯತ್ನಗಳಾಗುತ್ತಿವೆ" ಎಂದು ರಾಜ್ಯದ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಟ್ಟರು.[28]

"ಕೆ.ಸಿ. ರೆಡ್ಡಿ ಅವರು 1948ರ ನವೆಂಬರ್ ತಿಂಗಳ ಕೊನೆಯವಾರದಲ್ಲಿ ಕೋಲಾರ ಜಿಲ್ಲೆಯ ಮಾಲೂರಿಗೆ 'ಕಸ್ತೂರಿಬಾ ಶಿಶುವಿಹಾರ ಮತ್ತು ಮಹಿಳಾ ಸಮಾಜ'ದ ಅಸ್ತಿಭಾರ

---

28. ಪೌರವಾಣಿ ಪತ್ರಿಕೆ : ದಿನಾಂಕ : 29-09-1950.

ಶಿಲೆ ಪ್ರತಿಷ್ಠಾಪನೆ ಮಾಡಲು ಆಗಮಿಸಿದಾಗ ಮಾಲೂರಿನ ಜನತೆ ಆಹಾರ ಅಭಾವದಿಂದ ರೋಸಿಹೋಗಿ ಮಾಲೂರಿನಲ್ಲಿ ಆಹಾರ ಹಂಚಿಕೆ ಸರಿ ಯಾಗಿಲ್ಲ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೂಗಾಡು ತ್ತಿದ್ದರು. ಹೀಗೆ ಉದ್ರಿಕ್ತರಾದ ಜನರನ್ನು ಲೆಕ್ಕಿಸದೆ ಮುಖ್ಯಮಂತ್ರಿ ರೆಡ್ಡಿ ಅವರು ಜನರ ಮಧ್ಯೆ ನುಗ್ಗಿ ಅವರೆಲ್ಲರನ್ನೂ ಶಾಂತರನ್ನಾಗಿಸಿ ಆಹಾರ ಹಂಚಿಕೆ ಅವ್ಯವಸ್ಥೆಗಳನ್ನೆಲ್ಲಾ ಕೂಡಲೇ ಪರಿಹರಿಸುತ್ತೇವೆ. ಸರಿಯಾದ ಸಂಗತಿ ತಿಳಿಯದೆ ಗಲಾಟೆ ಮಾಡಬಾರದು. ಅಧಿಕಾರಿಗಳು ಸರಿಯಾಗಿ ವರ್ತಿಸದಿದ್ದಲ್ಲಿ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುತ್ತದೆಂದು ಭರವಸೆ ನೀಡಿ ಉದ್ರಿಕ್ತ ಜನರನ್ನು ಸಮಾಧಾನ ಪಡಿಸಿದರು."[29]

ಹೀಗೆ ಕೆ.ಸಿ. ರೆಡ್ಡಿ ಅವರು ರಾಜ್ಯದಲ್ಲಿ ತಲೆದೋರಿದ್ದ ಆಹಾರ ಸಮಸ್ಯೆಯನ್ನು ಪರಿಹರಿಸಲು ಹಾಗೂ ಆಹಾರ ಅಭಾವವಿರುವ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಜನರ ಸಮಸ್ಯೆಗಳನ್ನು ಅರಿಯುವುದರ ಜೊತೆಗೆ, ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಜನರಿಗೆ ಮನವರಿಕೆ ಮಾಡಿಕೊಟ್ಟು ಶಾಂತಿ-ಸಮಾಧಾನದಿಂದ ಇರುವಂತೆ ಮಾಡಿ ರಾಜ್ಯದಲ್ಲಿ ಆಹಾರಕ್ಕಾಗಿ ಕ್ರಾಂತಿ ಉಂಟಾಗುವುದನ್ನು ತಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದೇ ಹೇಳಬೇಕು.

ನಿರಾಶ್ರಿತರ ಸಮಸ್ಯೆ

ಇಂಡಿಯಾ ದೇಶವನ್ನು ವಿಭಾಗ ಮಾಡಿದುದರ ಫಲವಾಗಿ ಉದ್ಭವಿಸಿದ ಅತ್ಯಂತ ಧಾರುಣವಾದ ಘಟನೆಗಳಲ್ಲಿ ನಿರಾಶ್ರಿತರ ಸಮಸ್ಯೆಯು ಅತಿ ಪ್ರಮುಖವಾದುದು. ನಿರಾಶ್ರಿತರು ಅನುಭವಿಸಿದ ಕಷ್ಟ ಪರಂಪರೆಗಳು ವರ್ಣನಾತೀತವಾಗಿವೆ. ಲಕ್ಷಾನುಲಕ್ಷ ಜನರು ತಮ್ಮ ಅನುವಂಶಿಕ ಮನೆಗಳನ್ನು, ಆಸ್ತಿಪಾಸ್ತಿಗಳನ್ನು ಕಳೆದುಕೊಂಡುದ್ದಲ್ಲದೆ, ತಮ್ಮ ಬಂಧು ಬಳಗವನ್ನೂ ಕಳೆದುಕೊಂಡರು. ಆದರೆ ಈ ಸ್ಥಾನಪಲ್ಲಟರಿಗೆ ಭೌತಿಕ ಪುನರ್ ವ್ಯವಸ್ಥೆಯೊಂದಿಗೆ ಮಾನಸಿಕ ಶಾಂತಿಯೂ ಅತ್ಯಗತ್ಯವಾಗಿ ಬೇಕಾಗಿದ್ದಿತು.

ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಹಾಗೂ ಸರ್ಕಾರದವರು ಈ ನಿರಾಶ್ರಿತರ ಪುನರ್ ವ್ಯವಸ್ಥೆಯ ಯೋಜನೆಯಲ್ಲಿ ಎದುರಿಸಿದ ಕಠಿಣ ಸಮಸ್ಯೆಗಳು ಅಷ್ಟಿಷ್ಟಲ್ಲ. ಎದುರಿಸಿದ ಅತ್ಯಂತ ಕ್ಲಿಷ್ಟವಾದ ಎರಡು ಸಮಸ್ಯೆಗಳೆಂದರೆ ಮೊದಲನೆಯದು ಆರ್ಥಿಕ ಅಭಾವ, ಎರಡನೆಯದು ಸ್ಥಾನಪಲ್ಲಟರು. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಮೈಸೂರು ರಾಜ್ಯದ ನಿರಾಶ್ರಿತರ ಸಮಸ್ಯೆಗಳನ್ನು ಅವಲೋಕಿಸಿದರೆ ಹೆಚ್ಚು ಫಲಕಾರಿಯಾಗಿ ಕಾಣಿಸುತ್ತದೆ.

29. ಪೌರವಾಣಿ ಪತ್ರಿಕೆ : ದಿನಾಂಕ : 27-11-1948.

ಭಾರತದೇಶ ಹಿಬ್ಭಾಗವಾದ ತಕ್ಷಣ, ಪಾಕಿಸ್ತಾನದಿಂದ ಕಡ್ಡಾಯವಾಗಿ ಹಿಂದೂಗಳು, ವಲಸೆ ವಲಸೆಯಾಗಿ ನಿರಂತರವಾಗಿ ಬರಲು ಪ್ರಾರಂಭ ಮಾಡಿದಾಗ, ಇತರ ರಾಜ್ಯಗಳ ಸರ್ಕಾರಗಳಂತೆಯೇ ಮೈಸೂರು ಸರ್ಕಾರವೂ ಸಹಾ ಸುಮಾರು ಐದು ಸಾವಿರ ನಿರಾಶ್ರಿತರಿಗೆ ವಸತಿಯನ್ನು ಕಲ್ಪಿಸಿಕೊಡಲು ಹಾಗೂ ಕೇಂದ್ರ ಸರ್ಕಾರಕ್ಕೆ ಸರ್ವ ಸಹಾಯಗಳನ್ನು ನೀಡಬೇಕೆಂಬ ಉದಾತ್ತವಾದ ಧ್ಯೇಯದಿಂದ ಈ ನಿರ್ಧಾರವನ್ನು ಕೆ.ಸಿ. ರೆಡ್ಡಿ ಸರ್ಕಾರ ಕೈಗೊಂಡಿತು.

1948ರ ಜನವರಿಯಲ್ಲಿ ಪಾಕಿಸ್ತಾನ ಸರ್ಕಾರ ಕರಾಚಿ ಮತ್ತು ಸಿಂಧ್ ಪ್ರಾಂತ್ಯದ ಇತರ ಪ್ರದೇಶಗಳಿಂದ ಸಿಂಧೀ ಹಿಂದೂಗಳನ್ನು, ಸಿಖ್ಖರನ್ನು ಹೊರದೂಡಲು ಪ್ರಾರಂಭಿಸಿದಾಗ, ಈ ನಿರಾಶ್ರಿತರು ಮುಂಬಯಿಗೆ ಹಡಗುಗಳಲ್ಲಿ ಬಂದು, ಅಲ್ಲಿಂದ ವಲಸೆ ವಲಸೆಯಾಗಿ ಮೈಸೂರು ರಾಜ್ಯದ ಬೆಂಗಳೂರು ನಗರಕ್ಕೆ ಬರಲಾರಂಭಿಸಿದರು. ಆದರೆ ಹೀಗೆ ಬಂದವರಲ್ಲಿ ಎಲ್ಲರೂ ತ್ವರಿತವಾದ ಸಹಾಯವನ್ನು ಅಪೇಕ್ಷಿಸುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ಇವರಲ್ಲಿ ಹಲವರು ತಾವು ಹಿಂದೆ ಕೂಡಿಟಿದ್ದ ಹಣವನ್ನು ತಂದಿದ್ದುದರಿಂದ ಸ್ವಲ್ಪಕಾಲ ಪರಾವಲಂಬಿಗಳಾಗದೆ ಜೀವನ ನಡೆಸಲು ಸಮರ್ಥರಾಗಿದ್ದರು.

ಕೆ.ಸಿ. ರೆಡ್ಡಿ ನೇತೃತ್ವದ ಮೈಸೂರು ಸರ್ಕಾರ ನಿರಾಶ್ರಿತರ ಕಮೀಷನರ್ ಅವರ ಅಧ್ಯಕ್ಷತೆಯಲ್ಲಿ 'ರಿಜಿಸ್ಟ್ರೇಷನ್ ಆಫೀಸ್'ನ್ನು ಸ್ಥಾಪಿಸಿದರು ಪ್ರಾರಂಭದಲ್ಲಿ ನಿರಾಶ್ರಿತರ ಹೆಸರುಗಳನ್ನು ನೋಂದಾಯಿಸಿ ಕೊಳ್ಳಲಾಯಿತು. ಆದರೆ ಮೈಸೂರಿನ ನಾಗರೀಕರು ರಾಷ್ಟ್ರನಾಯಕರ ಮನವಿಗೆ ಮನ್ನಣೆಯಿತ್ತು, ನಿರಾಶ್ರಿತರ ಸಹಾಯಕ್ಕೆ ಹಣವನ್ನು ಕೂಡಿಸಿದರು. ದಾನರೂಪದಿಂದ ಕೂಡಿಸಿದ ಹಣ ಸುಮಾರು ಒಂದು ಲಕ್ಷ ರೂಪಾಯಿ ಆಗಿತ್ತು. ಉದಾರದಾನಿಗಳೆಂದು ಹೆಸರು ಪಡೆದ ಎಲ್.ಎಸ್. ವೆಂಕಾಜಿರಾಯರ ಅಧ್ಯಕ್ಷತೆಯಲ್ಲಿ, ಈ ಹಣವನ್ನು ವಿನಿಯೋಗ ಮಾಡಲು ಸರ್ಕಾರದವರು ಒಂದು ಸಮಿತಿಯನ್ನು ರಚಿಸಿದರು.

ಈ ವ್ಯವಸ್ಥೆಯು ಪೂರ್ತಿಗೊಂಡು ಕೆಲವು ತಿಂಗಳು ಕಳೆಯುವುದರೊಳಗಾಗಿಯೇ ಹೈದರಾಬಾದ್‌ನಲ್ಲಿ ನಡೆದ ಗಲಭೆಗಳ ಪರಿಣಾಮವಾಗಿ ಇನ್ನೂ ಸುಮಾರು ಆರು ಸಾವಿರ ನಿರಾಶ್ರಿತರು ಬೆಂಗಳೂರಿಗೆ ಬಂದರು. ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಪುನರ್‌ವ್ಯವಸ್ಥೆಯನ್ನು ಬದಿಗೊತ್ತಿ, ಹೊಸದಾಗಿ ಬಂದ ಸ್ಥಾನಪಲ್ಲಟರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರದ ಯಂತ್ರವನ್ನು ಚುರುಕುಗೊಳಿಸಬೇಕಾದ ಸಂದರ್ಭ ಒದಗಿತು. ಮುಂದೆ ಹೈದರಾಬಾದ್‌ನಲ್ಲಿ ಶಾಂತ ವಾತಾವರಣ ನೆಲೆಸಿದ ಮೇಲೆ ಈ ನಿರಾಶ್ರಿತರನ್ನು ತಮ್ಮ ಮನೆಗಳಿಗೆ ರವಾನಿಸುವ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳಬೇಕಾಯಿತು.

ಮೈಸೂರು ಸರ್ಕಾರವು ನಿರಾಶ್ರಿತ ಕಮೀಷನರ್‌ರವರ ಕಚೇರಿಯಿಂದ ನೀಡುತ್ತಿರುವ ಸಹಾಯವನ್ನು ಎರಡು ವಿಧವಾಗಿ ವಿಂಗಡಿಸಲಾಯಿತು. ಮೊದಲನೆಯದು ತಾತ್ಕಾಲಿಕವಾದ ಸಹಾಯ, ಎರಡನೆಯದು ಶಾಶ್ವತವಾದ ಪುನರ್ ವ್ಯವಸ್ಥೆಯ ಯೋಜನೆಗಳು. ಮೊದಲನೆಯ 'ತಾತ್ಕಾಲಿಕವಾದ ಸಹಾಯವೆಂದರೆ ನಗದು ಹಣ, ಸಂಚಾರ ಸೌಕರ್ಯಗಳು, ವೈದ್ಯಕೀಯ ಸಹಾಯ ಮತ್ತು ಉಚಿತವಾಗಿ ಬಟ್ಟೆಗಳನ್ನು ಒದಗಿಸುವುದು.

ಎರಡನೆಯ 'ಶಾಶ್ವತವಾದ ಪುನರ್ ವ್ಯವಸ್ಥೆಯ ಯೋಜನೆಗಳೆಂದರೆ ಸ್ಥಾನಪಲ್ಲಟರಾದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದು. ಇದು ಪ್ರಾಥಮಿಕ ಮಟ್ಟದಿಂದ ವಿಶ್ವವಿದ್ಯಾಲಯದವರೆಗೆ, ಸ್ಥಾನಪಲ್ಲಟರಾದ ವರ್ತಕರಿಗೂ ಮತ್ತು ಕೈಗಾರಿಕೋದ್ಯೋಮಿಗಳಿಗೂ, ಸಾಲ ರೂಪವಾಗಿ ಹಣದ ಸಹಾಯ. ಇದರಲ್ಲಿ ನಿರಾಶ್ರಿತರ ಉಪಯೋಗಕ್ಕಾಗಿ ಇನ್ನೂರು ಮನೆಗಳನ್ನು ಕಟ್ಟುವ ಯೋಜನೆ ಹಾಗೂ ಆಕ್ಯುಪೇಷನಲ್ ಇನ್ಸ್ಟಿಟ್ಯೂಟ್‌ನಲ್ಲಿ ಪಾರಿಭಾಷಿಕ ಮತ್ತು ಔದ್ಯೋಗಿಕ ಕೇಂದ್ರವನ್ನು ಸ್ಥಾಪಿಸುವ ಯೋಜನೆ ಪ್ರಮುಖವು, ಇವುಗಳ ಜೊತೆಗೆ 60 ವರ್ಷ ಮೀರದ ವೃದ್ಧರಿಗೂ ಮತ್ತು ಅಂಗಹೀನರಿಗೂ ತಿಂಗಳೊಂದಕ್ಕೆ ಸಂಸಾರ ನಿರ್ವಹಣೆಗೆ ಬೇಕಾಗುವ ಖರ್ಚನ್ನು ಉಚಿತವಾಗಿ ಕೊಡಲಾಯಿತು. ಅಲ್ಲದೆ ನಿರಾಶ್ರಿತರಿಗೆ ಹೋಟೆಲ್, ಬಟ್ಟೆ ಅಂಗಡಿಗಳನ್ನು ನಡೆಸಲು ಲೈಸೆನ್ಸ್ ನೀಡಲಾಯಿತು. ಹೆಂಗಸರಿಗೆ ಹೊಲಿಯುವ ಯಂತ್ರಗಳನ್ನು ಉಚಿತವಾಗಿ ನೀಡಲಾಗಿದೆ.

ಮೈಸೂರು ರಾಜ್ಯದಲ್ಲಿ ನಿರಾಶ್ರಿತರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಪ್ರಬಲ ಪ್ರಯತ್ನ ನಡೆಸಿದ ಪ್ರಮುಖರೆಂದರೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಸರ್ಕಾರ, ಧರ್ಮಪ್ರಕಾಶ ಎಲ್.ಎಸ್. ವೆಂಕಾಜಿರಾಯರು ಮತ್ತು ಸಲಹಾ ಸಮಿತಿ ಅಧ್ಯಕ್ಷರು, ರೆಡ್‌ಕ್ರಾಸ್ ಸೊಸೈಟಿಯ ಆರ್ಗನೈಜಿಂಗ್ ಸೆಕ್ರೆಟರಿ ಶ್ರೀಮತಿ ಲಕ್ಷ್ಮೀ ಪಿ. ಕೃಷ್ಣಪ್ಪ ಹಾಗೂ ಮೈಸೂರಿನ ಜನತೆಯ ಸಹಾಯವನ್ನು ಮೈಸೂರು ರಾಜ್ಯದಲ್ಲಿ ವಸತಿ ಪಡೆದಿರುವ ನಿರಾಶ್ರಿತರೆಲ್ಲರೂ ಪ್ರಸ್ತುತ ಚಿರಋಣಿಗಳಾಗಿ ಇರಬೇಕಾಗಿದೆ'.[30] ಹೀಗೆ ಸ್ವತಂತ್ರ ಭಾರತದಾದ್ಯಂತ ನಿರಾಶ್ರಿತರಾಗಿ ಬಂದವರ ಜಟಿಲವಾದ, ಸಂಕೀರ್ಣವಾದ ಬೃಹತ್ ಸಮಸ್ಯೆ ಇತ್ತಾದರೂ, ಮೈಸೂರು ರಾಜ್ಯದಲ್ಲಿದ್ದ ಆಹಾರ ತೀವ್ರ ಅಭಾವ ನಿರಾಶ್ರಿತರ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸಿತ್ತು. ಅಂದು ಈ ಸಮಸ್ಯೆಯನ್ನು ಕೆ.ಸಿ. ರೆಡ್ಡಿ ಸರ್ಕಾರ ಧೈರ್ಯದಿಂದ ಎದುರಿಸುವಲ್ಲಿ ಹಾಗೂ ನಿರಾಶ್ರಿತರಾಗಿ

30. ಮೈಸೂರು ದಸರಾ ವಸ್ತು ಪ್ರದರ್ಶನ ಕೈಪಿಡಿ : 1951, ಪುಟ–51.

ಬಂದವರಿಗೆ ಮಾನವೀಯ ದೃಷ್ಟಿಯಿಂದ ಕೈಗೊಂಡ ಪರಿಹಾರ ಕ್ರಮಗಳು ಇಂದು ಕರ್ನಾಟಕ ರಾಜ್ಯವನ್ನು ವೈವಿಧ್ಯತೆಯಲ್ಲಿ ಏಕತೆಯ ರಾಜ್ಯವನ್ನಾಗಿ ಕಾಣಲು ಸಾಧ್ಯವಾಗಿಸಿದೆ.

ಅರಮನೆ ಖಾಸಗಿ ಸ್ವತ್ತುಗಳ ಇತ್ಯರ್ಥ ಸಮಸ್ಯೆ

ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರಿಗೆ ಎದುರಾದ ಮತ್ತೊಂದು ಜಟಿಲ ಸಮಸ್ಯೆ ಎಂದರೆ ರಾಜ ಪ್ರಮುಖ ಜಯಚಾಮರಾಜ ಒಡೆಯರ್ ಅವರ ಅರಮನೆ ಆಸ್ತಿ-ಪಾಸ್ತಿಗಳ ಇತ್ಯರ್ಥ ಸಮಸ್ಯೆ. ಏಕೆಂದರೆ ನೂರಾರು ವರ್ಷಗಳಿಂದ ಆಳ್ವಿಕೆ ನಡೆಸುತ್ತಿದ್ದ ರಾಜರು ಮತ್ತು ರಾಜ ಮನೆತನದವರಿಗೆ ಹಲವಾರು ಸೌಲಭ್ಯ ಮತ್ತು ಸವಲತ್ತುಗಳನ್ನು ಬಿಟ್ಟು ಕೊಡಬೇಕಾಗಿತ್ತು. ಸರ್ಕಾರ ನೌಕರರ ಸಂಖ್ಯೆಯನ್ನು ಕಡಿಮೆ ಮಾಡಿದ್ದರಿಂದ ಅರಮನೆಯ ಸಿಬ್ಬಂದಿ ಸರ್ಕಾರದ ವಿರುದ್ಧ ಅಸಮಾಧಾನಗೊಂಡರು.

ಅರಮನೆಗೆ ಸಂಬಂಧಿಸಿದ ಎರಡು ಮುಖ್ಯ ಸಮಸ್ಯೆಗಳನ್ನು ಸರ್ಕಾರ ಇತ್ಯರ್ಥ ಪಡಿಸಬೇಕಿತ್ತು. ಅರಮನೆಯ ಖಾಸಗಿ ಸ್ವತ್ತುಗಳ ಇತ್ಯರ್ಥ, ಮಹಾರಾಜರ ಸ್ವಂತದ ಪದಾತಿದಳ ನೆಲೆಸಿರುವ ನಿವೇಶನ ಮತ್ತು ಕಟ್ಟಡಗಳ ಸಂಬಂಧ ಸರ್ಕಾರ ಮಹಾರಾಜರಿಗೆ ಪರಿಹಾರ ಧನ ನೀಡುವ ವಿಷಯ. "ಖಾಸಗಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ನಿಷ್ಠುರ ಹಾಗೂ ಕಾನೂನಿಗೆ ಅಂಟಿಕೊಂಡ ನಿಲುವಿನಿಂದ ವಿಶ್ವಾಸಕ್ಕೆ ಹಾಗೂ ಸ್ನೇಹಕ್ಕೆ ಧಕ್ಕೆ ಉಂಟಾಗಬಹುದಾದ್ದರಿಂದ ಈ ವಿಷಯವನ್ನು ಮುಖತಃ ಚರ್ಚಿಸಿ ಕೊಡುಕೊಳ್ಳುವಿಕೆ ಮನೋಧರ್ಮದಿಂದ ಇತ್ಯರ್ಥಪಡಿಸಬೇಕು ಎಂದು ಭಾರತ ಸರ್ಕಾರವು ಹೊರಡಿಸಿದ ಶ್ವೇತಪತ್ರದಲ್ಲಿ ತಿಳಿಸಲಾಗಿತ್ತು.

ರಾಜ ಪ್ರಮುಖ ಜಯಚಾಮರಾಜ ಒಡೆಯರ್ ಮತ್ತು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಪರಮಾಪ್ತ ಸ್ನೇಹಿತರಾಗಿದ್ದರಿಂದ ಹಾಗೂ ಬೇಗನೆ ಇತ್ಯರ್ಥ ಪಡಿಸಿಕೊಳ್ಳುವ ದೃಷ್ಟಿಯಿಂದ ಜಯಚಾಮರಾಜ ಒಡೆಯರ್ ಕಟ್ಟಡ ನಿವೇಶನಗಳ ಪರಿಹಾರ ಸಂಬಂಧ ಮಾರುಕಟ್ಟೆಯ ಬೆಲೆಗಿಂತ ಬಹಳ ಕಡಮೆ ಬೆಲೆಯನ್ನು ಕೋರಿದ್ದರು. ಇದರಿಂದ ಪೂರ್ಣ ಜವಾಬ್ದಾರಿ ಕೆ.ಸಿ. ರೆಡ್ಡಿ ಅವರ ಮೇಲೆ ಬಿತ್ತು. ಮುಂದೆ ಸಂಪುಟ ನಿರ್ಣಯದಂತೆ 1949–50ರಲ್ಲಿದ್ದ 32 ಲಕ್ಷ ರೂ.ಗಳಿಂದ 26 ಲಕ್ಷ ರೂ.ಗಳಿಗೆ ಇಳಿಸಿದ ಪ್ರಯುಕ್ತ ಹಾಗೂ ಅರಮನೆಗೆ ನಿರ್ವಹಣೆಯ ವೆಚ್ಚವನ್ನು ತಪ್ಪಿಸುವ ಉದ್ದೇಶದಿಂದ ಅರಮನೆಯ ಉದ್ಯಾನ, ಮೃಗಾಲಯ, ವಿದ್ಯುಚ್ಛಕ್ತಿ ಇಲಾಖೆ ಮೊದಲಾದವುಗಳನ್ನು ಸರ್ಕಾರದ ಆಯಾ ಇಲಾಖೆಗಳ ನಿಯಂತ್ರಣಕ್ಕೆ ತೆಗೆದುಕೊಂಡರು. ಅಲ್ಲದೆ ಮೈಸೂರು, ಬೆಂಗಳೂರು ಅರಮನೆಗಳ ನಿರ್ವಹಣೆಗೆ, ಆದಾಯ ಕಡಮೆಯಾಗಿರುವ ಹಿನ್ನೆಲೆಯಲ್ಲಿ ವಾರ್ಷಿಕ 75,000 ರೂಪಾಯಿ

ನೀಡಲು ಒಪ್ಪಿಗೆ ನೀಡಿತ್ತು. ಇಷ್ಟು ಆಗುವ ಹೊತ್ತಿಗೆ ಕಾಲ ವಿಳಂಬವಾಗಿತ್ತು. ಇದು ಮಹಾರಾಜರಿಗೆ ಮುಜುಗರ ಉಂಟಾಗಲು ಕಾರಣವಾಯಿತು.

ಕೆ.ಸಿ. ರೆಡ್ಡಿ ಅವರು ಮಹಾರಾಜರಿಗೆ ಬರೆದ ಪತ್ರದಲ್ಲಿ "ನಿಮಗೆ ಹಾಗೂ ದೇಶಕ್ಕೆ ನಮ್ಮ ಕರ್ತವ್ಯವನ್ನು ಮಾಡಿದ್ದೇವೆ ಎಂಬ ಸಮಾಧಾನ ಈಗ ಬಂದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ದಾರ್‌ರ ಆಶಯವೇನಿತ್ತೋ ಅದನ್ನೂ ಸಹ ನಾವು ಈಡೇರಿಸಿದ್ದೇವೆ ಎಂಬ ವಿಶೇಷ ತೃಪ್ತಿ ಸಿಕ್ಕಿದೆ" ಎಂದು ತಿಳಿಸಿದ್ದಾರೆ.[31] ಆದರೆ ಅರಮನೆಗೆ ಸಂಬಂಧಿಸಿದ ಕೆಲಸಗಳು ಸಂಪೂರ್ಣ ಇತ್ಯರ್ಥವಾಗದೆ ಇನ್ನೂ ಇರುವಾಗಲೇ ಕೆ.ಸಿ. ರೆಡ್ಡಿ ಮುಖ್ಯಮಂತ್ರಿ ಸ್ಥಾನದಿಂದ ಇಳಿದು ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿಯಾದರು.

ಹೀಗೆ ಕೆ.ಸಿ. ರೆಡ್ಡಿ ಅವರ ಅಧಿಕಾರಾವಧಿಯಲ್ಲಿ ಪೂರ್ಣಗೊಳ್ಳದ ಆಸ್ತಿ-ಪಾಸ್ತಿಯ ಪರಿಹಾರ ಸಮಸ್ಯೆ ಮುಂದೆ ಜಟಿಲ ಸಮಸ್ಯೆಗಳಿಗೆ ಸಿಲುಕುವಂತಾಯಿತು.

ಅಪಾಯದ ಸುಳಿಯಲ್ಲಿ ನ್ಯಾಯ

(ಭಾರತದ ಸರ್ವೋನ್ನತ ನ್ಯಾಯಾಲಯದ ಮಾಜಿ ಪ್ರಧಾನ ನ್ಯಾಯಾಧೀಶರಾದ ಶ್ರೀ ಇ.ಎಸ್. ವೆಂಕಟರಾಮಯ್ಯ ಅವರು ಬರೆದಿರುವ "Justice Imperilled" ಎಂಬ ಕೃತಿಯನ್ನು ಆಧರಿಸಿದ ಲೇಖನವಿದು. 'ತಾಯಿನಾಡು' ಹಾಗೂ ಡೈಲಿನ್ಯೂಸ್ ಪತ್ರಿಕೆಗಳಲ್ಲಿನ ಲೇಖನಗಳು ಈ ಮೊಕದ್ದಮೆಗೆ ಮೂಲ ಕಾರಣಗಳಾಗಿದ್ದು ಒಂದು ನ್ಯಾಯಾಂಗ ಹೋರಾಟವೇ ಈ ಸಂಬಂಧ ನಡೆಯಿತು. ಇಂಗ್ಲೀಷಿನ ಈ ಕೃತಿಯಲ್ಲಿನ ಮುಖ್ಯಾಂಶಗಳನ್ನು ಕನ್ನಡದಲ್ಲಿ ಸಂಕ್ಷಿಪ್ತಗೊಳಿಸಿ ಈ ಲೇಖನ ಬರೆದುಕೊಟ್ಟಿರುವವರು ಶ್ರೀಮತಿ ವರದಾ ಶ್ರೀನಿವಾಸ. ನ್ಯಾಯಾಂಗಕ್ಕೆ ಸಂಬಂಧಿಸಿದ ಅಂಶಗಳ ಚರ್ಚೆಗೆ ಪತ್ರಿಕೆಗಳು ಈಗಲೂ ಹೆದರುವ ಸನ್ನಿವೇಶವಿದೆ. ತಾಯಿನಾಡು ಮತ್ತು ಡೈಲಿನ್ಯೂಸ್ ಪತ್ರಿಕೆಗಳು, ಸಂವಿಧಾನದತ್ತ ಮೂಲಭೂತ ಹಕ್ಕುಗಳು ಲಭ್ಯವಾಗುವುದಕ್ಕೆ ಮುನ್ನವೇ, ನ್ಯಾಯಕ್ಕೂ-ನ್ಯಾಯಾಂಗದ ವರ್ತನೆಗೂ ಇರುವ ವ್ಯತ್ಯಾಸವನ್ನು ಗುರುತಿಸಿದ್ದನ್ನು, ಈ ಅರಿವೇ ಒಂದು ಪ್ರಮುಖ ಪ್ರಕರಣಕ್ಕೆ ಕಾರಣವಾಯಿತು. ಈ ದೃಷ್ಟಿಯಿಂದ ನ್ಯಾಯಮೂರ್ತಿ ಶ್ರೀ ಇ.ಎಸ್. ವೆಂಕಟರಾಮಯ್ಯ ಅವರ ಕೃತಿಯಲ್ಲಿನ ವಿಚಾರಗಳು ಇಂದಿಗೂ ಪ್ರಸ್ತುತ, ಪ್ರೇರಕ.)

---

31. ಸಂಧ್ಯಾರೆಡ್ಡಿ .ಕೆ.ಆರ್ : ಕೆ.ಸಿ. ರೆಡ್ಡಿ : ಪುಟ-21.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಉಪಸ್ಥಿತಿಯಲ್ಲಿ ನೀಡಲಾದ ನಿರ್ಣಯಗಳನ್ನು ಕಾರ್ಯಾಂಗದ ಪುನರ್ ಪರಿಶೀಲನೆಗೆ ಒಳಪಡಿಸಬೇಕು ಎನ್ನುವುದು ನನ್ನ ನ್ಯಾಯಪ್ರಜ್ಞೆಗೆ ಆಘಾತವುಂಟು ಮಾಡಿದೆ. ನ್ಯಾಯಾಡಳಿತದಲ್ಲಿ ನ್ಯಾಯಮೂರ್ತಿಗಳಿಗೆ ನೆರವು ನೀಡುವ ಆತ್ಮೀಯರೆಂದರೆ ವಕೀಲ ವೃಂದ ಹಾಗೂ ಪತ್ರಿಕೆ. ಉಲ್ಲೇಖಿನ ಸಂದರ್ಭದಲ್ಲಿ ವಕೀಲ ವೃಂದ ಇದರ ವಿರುದ್ಧ ಪ್ರತಿಭಟಿಸಿದುದನ್ನು ನಾನು ಕೇಳಿಲ್ಲ. ಸಂತಸದ ವಿಷಯವೆಂದರೆ "ಡೈಲಿ ನ್ಯೂಸ್" ಪತ್ರಿಕೆಯ ಮಾನ್ಯ ಸಂಪಾದಕರು ಎರಡು ಉತ್ತಮ ಲೇಖನಗಳನ್ನು ಪ್ರಕಟಿಸಿ ಸಾರ್ವಜನಿಕರ ಗಮನ ಸೆಳೆದಿದ್ದಾರೆ ಹಾಗೂ ಅವರ ನೆತ್ತಿಯ ಮೇಲೆ ತೂಗಾಡುತ್ತಿರುವ ಅಪಾಯದ ಕುರಿತು ಎಚ್ಚರಿಕೆಯಿತ್ತಿದ್ದಾರೆ. ಅದಕ್ಕಾಗಿ ಸಾರ್ವಜನಿಕರು ಈ ಪತ್ರಿಕೆಗೆ ಋಣಿಗಳಾಗಿರಬೇಕು.

ಈ ಮಾತುಗಳು ಕೇಳಿಬಂದದ್ದು 1948ರ ಮೇ 22ರಂದು ಮೈಸೂರಿನಲ್ಲಿ ನಡೆದ ನ್ಯಾಯಿಕ ಅಧಿಕಾರಿಗಳ ಸಮ್ಮೇಳನದಲ್ಲಿ. ಆಗಿನ ಮೈಸೂರಿನ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಪಿ. ವೆಂಕಟರಮಣ ರಾವ್ ಅವರು ಸಾರ್ವಜನಿಕವಾಗಿ ಈ ಅಭಿಪ್ರಾಯ ಟೀಕೆ–ಸಂತಸ ವ್ಯಕ್ತಪಡಿಸಿದ್ದರು.

ಹಿನ್ನೆಲೆ :

ಬೆಂಗಳೂರಿನ ಬ್ಯಾಂಕೊಂದರಲ್ಲಿ ಗುಮಾಸ್ತನಾಗಿದ್ದ ಬಿ.ಎನ್. ಗೋಪಾಲರಾವ್ ಎಂಬಾತ 1940ರಲ್ಲಿ ಬ್ಯಾಂಕಿನ ಸೇವೆಗೆ ರಾಜೀನಾಮೆ ನೀಡಿ ದೊಡ್ಡ ರೀತಿಯಲ್ಲಿ ಹಣಕಾಸು ವ್ಯವಹಾರದ ಲಾಭವನ್ನು ತನ್ನೊಡನೆ ಠೇವಣಿಯಿರಿಸಿದವರೊಂದಿಗೆ ಹಂಚಿ ಕೊಳ್ಳುವ ಬಗ್ಗೆ ಪ್ರಚಾರ ನೀಡಿದ. ಹೆಚ್ಚಿನ ದರದ ಲಾಭದ ಪ್ರಲೋಭನೆ ಬೃಹತ್‌ಸಂಖ್ಯೆಯ ಠೇವಣಿದಾರರನ್ನು ಆಕರ್ಷಿಸಿತು. ಎಲ್ಲ ಕ್ಷೇತ್ರಗಳ ಗಣ್ಯ ವ್ಯಕ್ತಿಗಳೂ ಇದಕ್ಕೆ ಹೊರತಾಗಿರಲಿಲ್ಲ. ಆತನ ಬಳಿ ಸಂಗ್ರಹವಾದ ಠೇವಣಿಯ ಮೊತ್ತ ಸುಮಾರು 3.15 ಕೋಟಿ ರೂಪಾಯಿ. 1946ರ ಡಿಸೆಂಬರ್ 12ರಂದು ಈ ಗೋಪಾಲರಾಯನ ವ್ಯವಹಾರ ಪೂರ್ಣ ಕುಸಿದು ಬಡ್ಡಿ ಚೆಕ್‌ಗಳೆಲ್ಲ ನಿರಾಕರಿಸಲ್ಪಟ್ಟ ವಾರ್ತೆ ಕಾಡ್ಗಿಚ್ಚಿನಂತೆ ಹರಡಿತು.

ಅರಸರ ಆಡಳಿತದ ಕಾಲವದು. ಅಂದಿನ ಪ್ರಜಾ ಪ್ರತಿನಿಧಿಸಭೆಯಲ್ಲಿ ಚರ್ಚೆಯಾಯಿತು. ವಿಚಾರಣಾ ಸಮಿತಿಯು ನೇಮಕವಾಗಿ ಈ ಬಗ್ಗೆ ಸರ್ಕಾರದ ಪ್ರಕಟಣೆ 1948ರ ಫೆಬ್ರವರಿ 25ರಂದು ಹೊರಬಿತ್ತು.

ಉಚ್ಚ ನ್ಯಾಯಾಲಯದ ಆಗಿನ ನ್ಯಾಯಮೂರ್ತಿ ಪಿ. ಮೇದಪ್ಪ ಅವರು ಸಮಿತಿಯ ಅಧ್ಯಕ್ಷರಾಗಿ, ಶ್ರೀ ಎಸ್. ನಿಜಲಿಂಗಪ್ಪ ಹಾಗೂ ಶ್ರೀ ಟಿ. ಸುಬ್ರಹ್ಮಣ್ಯಂ ಅವರು ಸದಸ್ಯರಾಗಿ,

ಬೆಂಗಳೂರು ಜಿಲ್ಲೆ (ನಗರ) ಡೆಪ್ಯೂಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಎನ್.ವಿ. ಬಾಬುರೆಡ್ಡಿ ಅವರು ಕಾರ್ಯದರ್ಶಿ ಆಗಿ ನೇಮಕಗೊಂಡರು.

ನಂತರ ವಿಶೇಷ ತುರ್ತು ತಿದ್ದುಪಡಿ ಆಜ್ಞೆಯೊಂದನ್ನು ಹೊರಡಿಸಿ ಸಮಿತಿ ಶಿಕ್ಷಿಸುವ ಯಾವೊಬ್ಬ ವ್ಯಕ್ತಿಯಾಗಲೀ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಹಾಗೂ ಸರ್ಕಾರ ಈ ಬಗ್ಗೆ ತನಗೆ ಸೂಕ್ತವೆಂದು ತೋರಿದ ಕ್ರಮ ಕೈಗೊಳ್ಳಲು ಅಂದರೆ ಶಿಕ್ಷೆ ರದ್ದುಪಡಿಸಲು, ಅಪರಾಧಿಯನ್ನು ವಿಮುಕ್ತಿಗೊಳಿಸಲು ಇಲ್ಲವೆ ಶಿಕ್ಷೆಯನ್ನು ದೃಢಪಡಿಸಲು ಈ ತುರ್ತು ಆಜ್ಞೆಯಿಂದ ಅವಕಾಶ ಕಲ್ಪಿಸಿಕೊಂಡಿತು.

ಅಂದರೆ ಹೈಕೋರ್ಟ್ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯ ಆಜ್ಞೆಗಳನ್ನು ತಿರುಗುಮುರುಗು ಮಾಡಲು ಕಾರ್ಯಾಂಗಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದು ದಿಗ್ಭ್ರಮೆಗೊಳಿಸುವ ಸಂದರ್ಭವಾಗಿತ್ತು. ಈ ತಿದ್ದುಪಡಿಯನ್ನೇ ಅಂದಿನ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರು ಸಾರ್ವಜನಿಕರಾಗಿ ಖಂಡಿಸಿದ್ದು.

ಶ್ರೀ ವೆಂಕಟರಮಣ ರಾವ್ ಅವರ ಭಾಷಣದ ಮುಖ್ಯ ಅಂಶಗಳು ಬೆಂಗಳೂರಿನ ವೃತ್ತ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಪ್ರಕಟವಾದವು. ಸ್ಥಳೀಯ ದೈನಿಕಗಳ ಪೈಕಿ ಕನ್ನಡದ ತಾಯಿನಾಡು ಹಾಗೂ ಇಂಗ್ಲೀಷ್ ಡೈಲಿನ್ಯೂಸ್ ಜನಪ್ರಿಯ ಪತ್ರಿಕೆಗಳಾಗಿದ್ದವು. ಇವೆರಡು ಪತ್ರಿಕೆಗಳ ಮಾಲೀಕರು ಹಾಗೂ ಪ್ರಕಾಶಕರು ಪಿ.ಆರ್. ರಾಮಯ್ಯ ಅವರಾಗಿದ್ದರು. ಅಷ್ಟೇ ಅಲ್ಲ ತಾಯಿನಾಡು ಸಂಪಾದಕರು ಆಗಿದ್ದರು. ಪಿ.ಬಿ. ಶ್ರೀನಿವಾಸನ್ ಅವರು ಡೈಲಿನ್ಯೂಸ್‌ನ ಸಂಪಾದಕರಾಗಿದ್ದರು. 1948ರ ಮೇ 4ರ ಡೈಲಿನ್ಯೂಸ್‌ನ ಸಂಪಾದಕೀಯದಲ್ಲಿ ಅವರು ಈ ರೀತಿ ಅಭಿಪ್ರಾಯಪಟ್ಟರು. ಅದರ ಮುಖ್ಯ ಅಂಶ ಹೀಗಿದೆ. "ನ್ಯಾಯಾಂಗವು ಕಾರ್ಯಾಂಗದಿಂದ ಬೇರೆಯಾಗಿ ಸಂಪೂರ್ಣ ಸ್ವಾಯತ್ತ ಅಧಿಕಾರ ಹೊಂದಿರಬೇಕು. ನ್ಯಾಯಾಂಗದ ಪ್ರಕಾರ್ಯಗಳ ಮೇಲೆ ಕಾರ್ಯಾಂಗದ ದಬ್ಬಾಳಿಕೆ ಸಲ್ಲದು. ಉಚ್ಚ ನ್ಯಾಯಾಲಯವೊಂದು ಇರುವಾಗ ತಾತ್ಕಾಲಿಕ ಸಮಿತಿಯೊಂದು ದಂಡ ನೀಡುವ ನ್ಯಾಯಾಲಯ ಎಂಬಂತೆ ವರ್ತಿಸುವುದು ಏಕೆ? ಇಂಥ ಸಲ್ಲದ ತುರ್ತು ಆಜ್ಞೆಯನ್ನು ಸರ್ಕಾರ ಒಡನೆಯ ನಿಷ್ಕ್ರಿಯಗೊಳಿಸಬೇಕು. ಮಾನ್ಯ ಮುಖ್ಯ ನ್ಯಾಯಮೂರ್ತಿಯವರು ತಮ್ಮ ತೀರ್ಮಾನ ನೀಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರೂ ಅವರ ಸಹೋದ್ಯೋಗಿಗಳೂ ಅದರಂತೆ ವರ್ತಿಸಬೇಕೆಂಬುದು ನಮ್ಮ ಅಪೇಕ್ಷೆ".

ಅದಕ್ಕುತ್ತರವಾಗಿ ಆಗಿನ ರಾಜ್ಯ ಸರ್ಕಾರ ಪತ್ರಿಕಾ ಪ್ರಕಟಣೆಯೊಂದನ್ನು ನೀಡಿತು. "ಕಾರ್ಯಾಂಗವು ಯಾವುದೇ ರೀತಿಯಲ್ಲೂ ನ್ಯಾಯಾಂಗವನ್ನು ಅತಿಕ್ರಮಿಸಲು ಯತ್ನಿಸಿಲ್ಲ. ಅಥವಾ ಹಾಗೆ ಉದ್ದೇಶಿಸಿಯೂ ಇಲ್ಲ. ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯಗಳು ನಿರಾಧಾರವಾದವು".

ತರುವಾಯ 1948ರ ಜೂನ್ ಮೊದಲ ವಾರದಲ್ಲಿ ಶ್ರೀ ಪಿ. ವೆಂಕಟರಮಣ ರಾವ್ ನಿವೃತ್ತರಾದಾಗ, ಹಿರಿಯ ನ್ಯಾಯಮೂರ್ತಿಗಳಾಗಿದ್ದ ಶ್ರೀ ಜಿ. ಪರಮಶಿವಯ್ಯ ಅವರು ಮುಖ್ಯ ನ್ಯಾಯಮೂರ್ತಿಗಳಾಗಿ ನೇಮಕಗೊಂಡರು.

ಈ ಮಧ್ಯೆ ವಿಚಾರಣಾ ಸಮಿತಿಗೆ ಹಾಜರಾಗಿದ್ದ ಡಾ. ಸಿ.ಎಫ್.ಡ. ಕೋಸ್ಟ ಎಂಬುವರು ರಹಸ್ಯ ವಿಚಾರಣೆ ಕಾಲದಲ್ಲಿ ತಮ್ಮನ್ನು ಒರಟಾಗಿ ನಡೆಸಿಕೊಂಡರೆಂದು ಮುಖ್ಯಮಂತ್ರಿಗಳಿಗೆ ದೂರು ನೀಡಿದರು. ಆ ತರುವಾಯ ಬೆಂಗಳೂರಿನ ಜನಪ್ರಿಯ ವಕೀಲರೂ ಹಾಗೂ ನಾಗರಿಕಹಕ್ಕು ಒಕ್ಕೂಟದ ಅಧ್ಯಕ್ಷರು ಆದ ಎಲ್.ಎಸ್. ರಾಜು ಅವರು ಜೂನ್ 19ರಂದು ಡೈಲಿ ನ್ಯೂಸ್‌ನಲ್ಲಿ ಒಂದು ಲೇಖನ ಬರೆದರು.

"ವಿಚಾರಣಾ ಸಮಿತಿಗೆ ಹಾಜರಾಗುವವರಿಗೆ ಕಾನೂನು ನೆರವು ನೀಡತಕ್ಕದ್ದು ಮತ್ತು ಸಮಿತಿಯ ಕಾರ್ಯಕಲಾಪ ಬಹಿರಂಗವಾಗಿ ನಡೆಯಬೇಕು. ಆದ್ದರಿಂದ ಈಗಲಾದರೂ ಸರ್ಕಾರ ತುರ್ತು ಆಜ್ಞೆ ಹಿಂದಕ್ಕೆ ಪಡೆದು ಮುಕ್ತ ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದರು.

ಆ ತರುವಾಯ ಜೂನ್ 22ರಂದು ಅವರು ಪುನಃ ಒಂದು ಪತ್ರವನ್ನು ಡೈಲಿ ನ್ಯೂಸ್ ಸಂಪಾದಕರಿಗೆ ಬರೆದಿದ್ದು, ಅದು 23ರ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರ ಮುಖ್ಯ ವಿಚಾರ ಹೀಗಿದೆ – "ವಕೀಲನಾಗಿ ಹಾಗೂ ನಾಗರಿಕ ಹಕ್ಕುಗಳ ಒಕ್ಕೂಟದ ಅಧ್ಯಕ್ಷರಾಗಿ ನಾನು ಹೇಳುವುದಾದರೆ, ಡಾ. ಡ. ಕೋಸ್ಟರು ಮುಖ್ಯಮಂತ್ರಿಗಳಿಗೆ ಬರೆದ ಪತ್ರಪ್ರಸಂಗ ನನಗೆ ಆಘಾತವುಂಟು ಮಾಡಿದೆ. ಈಗ ನಾನು ತಿಳಿದಿರುವಂತೆ, ವಿಚಾರಣೆ ಸಮಿತಿಯ ವಿಚಾರಣೆಗೊಳಗಾದ ಮೇಲೆ ಅವರು ಹಾಸಿಗೆ ಹಿಡಿದಿದ್ದಾರೆ.

ಸಮಿತಿಗೆ ಅಸಾಧಾರಣ ಅಧಿಕಾರ ನೀಡುವ ಉಪಬಂಧಗಳು (ತುರ್ತು ಆಜ್ಞೆ ಅಧಿನಿಯಮ) ಹಿಂದಿನ ಸ್ಟಾರ್ ಚೇಂಬರ್ ವಿಧಾನಗಳನ್ನು ನೆನಪಿಗೆ ತರುತ್ತವೆ. ಈ ಉಪಬಂಧಗಳು ಅಧಿಕಾರಾತೀತವಾದವು. ಅಸಾಧಾರಣವಾದವು ಹಾಗೂ ಯಾವುದೇ ನ್ಯಾಯಬದ್ಧ ಮನಸ್ಸಿಗೆ ಆಘಾತ ನೀಡುವಂತಹವು ಆಗಿವೆ. ಆದ್ದರಿಂದ ಸಮಿತಿಯ ಅಧ್ಯಕ್ಷರಿಗೆ ಹಾಗೂ ಆದರಣೀಯ ಸಹೋದ್ಯೋಗಿಗಳಗೆ ನನ್ನ ನಮ್ರ ವಿನಂತಿ ಇದು. ದಯವಿಟ್ಟು ನ್ಯಾಯಸಮ್ಮತ ಹಾಗೂ ಶಾಂತ ವಾತಾವರಣವನ್ನು ಕಾಯ್ದುಕೊಳ್ಳಿ. ಸಾಕ್ಷಿದಾರರಿಗೆ ಯಾವುದೇ ರೀತಿಯ ನೋವು ಉಂಟಾಗದಂತೆ ನೋಡಿಕೊಳ್ಳಿ".

ಈ ಪತ್ರದ ಆರಂಭದಲ್ಲಿ ಎಲ್.ಎಸ್. ರಾಜು ಅವರು ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಈ ವಿಷಯ ಕುರಿತು ಬರೆಯಲಾದ ಸಂಪಾದಕೀಯದ ಬಗ್ಗೆ ಅಭಿನಂದನೆ ತಿಳಿಸಿದ್ದಾರೆ ಮತ್ತು ಅದೇ ಲೇಖನವನ್ನು ತಾಯಿನಾಡು ಪತ್ರಿಕೆಯಲ್ಲೂ ಮುದ್ರಿಸಲಾಗುವುದೆಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶ್ರೀರಾಜು ಅವರ ಪತ್ರಗಳ ವಿಷಯವು ವಿಚಾರಣಾ ಸಮಿತಿಗೆ ಅವಮಾನವಾಗುವಂತಿವೆ ಎಂದು ಆರೋಪಿಸಿ ಲೇಖಕ ಎಲ್.ಎಸ್. ರಾಜು ಅವರಿಗೆ ಹಾಗೂ ಪ್ರಕಾಶಕ ಪಿ.ಆರ್. ರಾಮಯ್ಯ ಅವರಿಗೆ : ಡೈಲಿ ನ್ಯೂಸ್ ಪತ್ರಿಕೆಯ ಸಂಪಾದಕ ಪಿ.ಬಿ. ಶ್ರೀನಿವಾಸನ್ ಅವರಿಗೆ ಸಮಿತಿಯು 1948ರ ಅಧಿನಿಯಮ 25ರ ತಿದ್ದುಪಡಿ ಆಧರಿಸಿ ನ್ಯಾಯಾಲಯ ನಿಂದನೆಯ ಆರೋಪಗಳಿಗೆ ಉತ್ತರಿಸುವಂತೆ ನೋಟಿಸು ನೀಡಿತು.

ಸದರಿ ಪ್ರಕರಣದ ಮೂಲಕ ಸರ್ಕಾರವು ರಾಜ್ಯದಲ್ಲಿ ಉಚ್ಚ ನ್ಯಾಯಾಲಯಕ್ಕೆ ಸಮಾನಾಂತರವಾದ ಒಂದು ನ್ಯಾಯಾಲಯವನ್ನು ರಚಿಸಲು ಪ್ರಯತ್ನಿಸಿತು. ವಾಸ್ತವವಾಗಿ ರಾಜ್ಯದಲ್ಲಿ 1940ರ ನ್ಯಾಯಾಲಯ ನಿಂದನೆ ಅಧಿನಿಯಮ ಜಾರಿಯಲ್ಲಿರಲಿಲ್ಲ. ಜಾರಿಯಲ್ಲಿದ್ದುದು 1930ರ ನ್ಯಾಯಾಲಯ ನಿಂದನೆ ಅಧಿನಿಯಮವಾಗಿತ್ತು. ನೋಟಿಸಿನ ಮೇರೆಗೆ ಶ್ರೀಯುತರಾದ ಎಲ್.ಎಸ್. ರಾಜು, ಪಿ.ಆರ್. ರಾಮಯ್ಯ ಹಾಗೂ ಪಿ.ಬಿ. ಶ್ರೀನಿವಾಸನ್ ಅವರು ವಿಚಾರಣಾ ಸಮಿತಿಯ ಮುಂದೆ ಹಾಜರಾಗಿ ಆರೋಪಗಳ ಸಂಜ್ಞೆಯಂತೆ ಬಗ್ಗೆ ಆಕ್ಷೇಪಿಸಿದರು. 1948ರ ಅಧಿನಿಯಮದ 9ನೇ ಪ್ರಕರಣದ ಔಚಿತ್ಯ ಮತ್ತು ನ್ಯಾಯ ಸಮ್ಮತತೆಯನ್ನು ಪ್ರಶ್ನಿಸಿದರು. ಈ ಕುರಿತ ಅವರ ವಾದವನ್ನು ವಿಚಾರಣಾ ಸಮಿತಿ ತಳ್ಳಿ ಹಾಕಿತು.

ಇವರುಗಳನ್ನು ತನ್ನ ವಿರುದ್ಧ ಮಾಡಿದ ನ್ಯಾಯಾಲಯ ನಿಂದನೆಯ ಅಪರಾಧಗಳ ತಪ್ಪಿತಸ್ಥರೆಂದು ತೀರ್ಮಾನಿಸಿ, ಅವರಿಗೆ ಎರಡು ತಿಂಗಳ ಸಾದಾ ಕಾರಾಗೃಹವಾಸ ಹಾಗೂ 300 ರೂಪಾಯಿಗಳ ಜುಲ್ಮಾನೆಯ ಶಿಕ್ಷೆಯನ್ನೂ, ಜುಲ್ಮಾನೆಗೆ ತಪ್ಪಿದರೆ ಮತ್ತೆ ಒಂದು ತಿಂಗಳ ಸಾದಾ ಕಾರಾಗೃಹವಾಸದ ಶಿಕ್ಷೆಯನ್ನೂ ನೀಡಿತು. ಇದು ನಡೆದದ್ದು 1948ರ ಜುಲೈ 14ರಂದು. ಈ ತೀರ್ಪು ದಿನದ ಕೊನೆಯಲ್ಲಿ ಹೊರಬಿದ್ದು ಅವುಗಳ ನಕಲು ಆಪಾದಿತರಿಗೆ ಸಿಗುವ ವೇಳೆಗೆ ಸಂಜೆ 5.45 ಗಂಟೆ ಆಗಿತ್ತು. ನ್ಯಾಯಮೂರ್ತಿ ಪುಟ್ಟರಾಜ ಅರಸು ಅವರು ಅದೇ ದಿನ ಈ ಮೂವರ ಜಾಮೀನು ಅರ್ಜಿಗಳನ್ನು ನ್ಯಾಯಾಲಯದ ಕಚೇರಿ ವೇಳೆ ಮುಗಿದಿದ್ದರೂ 6 ಗಂಟೆಗೆ ಆಲಿಸಿ, ಅರ್ಜಿದಾರರು ಎತ್ತಿ ಹಿಡಿದ ನ್ಯಾಯಕ ಅಂಶಗಳು ಮೂಲಭೂತ ಮಹತ್ವದ್ದೆಂದು ಕಂಡು ಬಂದುದರಿಂದ ಮತ್ತು ಮೂವರು ಗಣ್ಯವ್ಯಕ್ತಿಗಳಾಗಿದ್ದು, ವಿವಿಧ ಉದ್ಯಮಗಳು ಹಾಗೂ ಕರ್ತವ್ಯಗಳಲ್ಲಿ ತೊಡಗಿರುವುದರಿಂದ ಇವರುಗಳನ್ನು ಹಠಾತ್ತಾಗಿ ಬಂಧಿಸುವುದು ಸರಿಯಲ್ಲ ಎಂದು ಹೇಳಿ ತಲಾ ಒಂದುಸಾವಿರ ರೂಪಾಯಿ ಜಾಮೀನು ಮೇಲೆ ಬಿಡುಗಡೆ ಮಾಡಬಹುದೆಂದು ಸಂಜೆ 6.30ರ ಹೊತ್ತಿಗೆ ಆಜ್ಞೆ ಮಾಡಿದರು. ವಿಚಾರಣಾ ಸಮಿತಿಯ ಆದೇಶದಂತೆ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಒಪ್ಪಿಸಿದ್ದ ಈ ಮೂವರನ್ನು ತದನುಸಾರ ಅದೇ ರಾತ್ರಿ ಬಿಡುಗಡೆ ಮಾಡಲಾಯಿತು.

ಆದರೆ 1948ರ ಜುಲೈ 16ರಂದು ರಾಜ್ಯದ ಅಡ್ವೋಕೇಟ್ ಜನರಲ್ ಅವರು ನ್ಯಾಯಾಲಯಕ್ಕೆ ಒಂದು ಮನವಿ ಸಲ್ಲಿಸಿದರು. ಸಮಿತಿಯು ನೀಡಿದ ದೋಷಸಿದ್ಧಿಯ, ನ್ಯಾಯ ಪರತೆಯನ್ನು ಪ್ರಶ್ನಿಸುವ ಅಧಿಕಾರ ವ್ಯಾಪ್ತಿ ಉಚ್ಚ ನ್ಯಾಯಾಲಯಕ್ಕಿಲ್ಲ ಎಂಬ ಮೂಲ ಆಧಾರದ ಮೇಲೆ ಜಾಮೀನು ಮಂಜೂರಾತಿ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಮನವಿಯಲ್ಲಿ ಕೇಳಲಾಗಿತ್ತು.

1948ರ ಜುಲೈ 22ರಂದು ವಿಭಾಗ ನ್ಯಾಯಪೀಠವು ಸಮಿತಿಗೆ ನೋಟಿಸುಗಳನ್ನು ನೀಡಿತು. ಸಮಿತಿಯು ಅವುಗಳನ್ನು ಸ್ವೀಕರಿಸಲು ನಿರಾಕರಿಸಿ ಉಚ್ಚನ್ಯಾಯಾಲಯವು ನೀಡಿದ ನೋಟೀಸುಗಳು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗ: ಅವುಗಳನ್ನು ಸ್ವೀಕರಿಸುವುದಿಲ್ಲ ಎಂಬ ಹಿಂಬರಹದೊಡನೆ ಸಮಿತಿಯ ಕಾರ್ಯದರ್ಶಿ ಅವುಗಳನ್ನು ಹಿಂದಿರುಗಿಸಿದರು. ಆದ್ದರಿಂದ ನ್ಯಾಯಮೂರ್ತಿಗಳು ಈ ಮೊಕದ್ದಮೆಯನ್ನು ಏಕಪಕ್ಷೀಯವಾಗಿ ಆಲಿಸಲಾಗುವುದೆಂದು ನಿರ್ದೇಶಿಸಿದರು. ಮುಂದಿನ ವಿಚಾರಣೆಗೆ ಆಗಸ್ಟ್ 5ನೇ ತಾರೀಖು ಗೊತ್ತುಪಡಿಸಿದರು. ಆದರೆ ಆಗಸ್ಟ್ 5ರ ವಿಚಾರಣೆಯನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರ ಎರಡನೆಯ ತಿದ್ದುಪಡಿ ಆಜ್ಞೆ ಹೊರಡಿಸಿತು.

ಈ ತಿದ್ದುಪಡಿ ಆಜ್ಞೆಯನ್ನು ಅದೀಗ ತಾನೇ ಮುದ್ರಿಸಲಾಗಿದ್ದ ಹಸಿ ಹಸಿ ಕಾಗದವನ್ನೇ ಹಿಡಿದು, ರಾಜ್ಯ ಸರ್ಕಾರದ ಪರವಾಗಿ ವಾದಿಸಲು ಮದ್ರಾಸಿನ ಅಡ್ವೋಕೇಟ್ ಜನರಲ್ ಅವರು ಬಂದಿದ್ದರು. ಆದರೆ ಅರ್ಜಿದಾರನ ಪರ, ಬೆಂಗಳೂರಿನ ಖ್ಯಾತ ವಕೀಲರಾಗಿದ್ದ ಎಂ.ಪಿ. ಸೋಮಶೇಖರ ರಾವ್ ಅವರು ಬಲವಾಗಿ ವಾದವನ್ನು ಮಂಡಿಸಿ, ಈ ತಿದ್ದುಪಡಿ ಆಜ್ಞೆಯ ನಿರರ್ಥಕತೆಯನ್ನು ತೋರಿಸಿಕೊಟ್ಟರು. ಮೊಕದ್ದಮೆ ಆಗಸ್ಟ್ 12ಕ್ಕೆ ಮುಂದೂಡಲ್ಪಟ್ಟಿತು.

ಮುಖ್ಯ ಪುನರ್‌ವೀಕ್ಷಣ ಅರ್ಜಿಯಲ್ಲಿ ತಾನು ಮಧ್ಯೆ ಪ್ರವೇಶಿಸುವುದು ಹಾಗೂ ಅದರಲ್ಲಿ ಎತ್ತಿದ ಸಂವಿಧಾನಿಕ ಮಹತ್ವದ ಪ್ರಶ್ನೆಗಳ ವಿಷಯವನ್ನು ಆಲಿಸುವುದು ಸೂಕ್ತ ಎಂದು ಸರ್ಕಾರ ಸಲಹೆ ನೀಡಿರುವುದಾಗಿ ಹೇಳಿ, ಮೈಸೂರಿನ ಅಡ್ವೋಕೇಟ್ ಜನರಲ್ ಅವರು 1948ರ ಆಗಸ್ಟ್ 11ರಂದು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು.

12ನೇ ತಾರೀಖಿನಂದು ಅದನ್ನು ಆಲಿಸಲು ಪ್ರತಿವಾದಿಯಾದ ವಿಚಾರಣಾ ಸಮಿತಿಯ ಅಧ್ಯಕ್ಷರಾದ ಪಿ. ಮೇದಪ್ಪ ಅವರನ್ನು ಹೊರತುಪಡಿಸಿ, ಉಚ್ಚ ನ್ಯಾಯಾಲಯದ ಎಲ್ಲ ನ್ಯಾಯಮೂರ್ತಿಗಳನ್ನು ಒಳಗೊಂಡ ಒಂದು ನ್ಯಾಯಪೀಠವನ್ನು ರಚಿಸಲಾಯಿತು.

ಸರ್ಕಾರದ ಪರವಾಗಿ ರಾಜ್ಯದ ಅಡ್ವೋಕೇಟ್ ಜನರಲ್ ಆಗಿದ್ದ ಜಿ.ಆರ್. ಯತಿರಾಜು ಅವರೂ, ಮದ್ರಾಸ್ ಅಡ್ವೋಕೇಟ್ ಜನರಲ್ ಆಗಿದ್ದ ಕೆ. ರಾಜಅಯ್ಯರ್ ಅವರೂ ವಾದ ಮಂಡಿಸಿದರು.

ಅರ್ಜಿದಾರರ ಪರವಾಗಿ ಬೆಂಗಳೂರಿನ ಹಿರಿಯ ವಕೀಲರುಗಳಾಗಿದ್ದ ಮಿರ್ಲೆ ಎನ್. ಲಕ್ಷ್ಮೀನಾರಾಯಣಪ್ಪ, ಎಂ.ಪಿ. ಸೋಮಶೇಖರ ರಾವ್, ಎಂ. ರಾಮಸ್ವಾಮಿ ಮತ್ತು ನಿಟ್ಟೂರು ಶ್ರೀನಿವಾಸರಾಯರು ಮೊಕದ್ದಮೆಯಲ್ಲಿ ವಾದಿಸಿದರು.

ಮೂಲಭೂತವಾದ ಕಾನೂನು ಅಂಶಗಳು ಈ ಪ್ರಕರಣದಲ್ಲಿ ಎತ್ತಲ್ಪಟ್ಟಿರುವುದರಿಂದ ಬೆಂಗಳೂರು ವಕೀಲರ ಸಂಘವೂ ಈ ಮೊಕದ್ದಮೆಯಲ್ಲಿ ಭಾಗವಹಿಸಲು ಅನುಮತಿ ಕೋರಿತು. ಮದ್ರಾಸಿನ ಅಡ್ವೊಕೇಟ್ ಜನರಲ್ ಆಗಿ ಹಿಂದೆ ಕಾರ್ಯ ನಿರ್ವಹಿಸಿದ್ದ ಟಿ.ಆರ್. ವೆಂಕಟರಾಮಾ ಶಾಸ್ತ್ರಿಗಳು ಸಂಘವನ್ನು ನ್ಯಾಯಾಲಯದಲ್ಲಿ ಪ್ರತಿನಿಧಿಸಿದರು.

ವಿಸ್ತೃತಗೊಂಡ ನ್ಯಾಯಪೀಠ ಆಗಸ್ಟ್ 12ರಿಂದ 20ರವರೆಗೆ ಕಾನೂನು ಅಂಶಗಳ ಬಗ್ಗೆ ಪರ–ವಿರೋಧ ವಾದ ವಿವಾದಗಳನ್ನು ಕೇಳಿತು. ಹಲವಾರು ಪ್ರಮುಖ ಪ್ರಮಾಣೀಕೃತ ಆಧಾರಗಳು ಈ ಸಂಬಂಧದಲ್ಲಿ ಉಲ್ಲೇಖಿಸಲ್ಪಟ್ಟಿದ್ದು ನ್ಯಾಯಪೀಠ ತೀರ್ಮಾನಕ್ಕೆ ಬರಲು ಕಾಲಾವಕಾಶ ಅಗತ್ಯವಾದ್ದರಿಂದ ತೀರ್ಪು ಕಾದಿರಿಸಲಾಯಿತು.

ಆದರೆ ನಂತರದ ಎರಡೇ ವಾರದೊಳಗೆ ಮತ್ತು ತೀರ್ಪು ಹೊರಬೀಳುವುದಕ್ಕೆ ಮುನ್ನ ಮಹಾರಾಜರು ತಮ್ಮ ಸರ್ಕಾರದ ಸಲಹೆಯ ಮೇರೆಗೆ ಇನ್ನೊಂದು ಆಜ್ಞೆ– ವಿಶೇಷ ವಿಚಾರಣಾ ಅಧಿನಿಯಮ (1948ರ ಅಧಿನಿಯಮ 61) ಹೊರಡಿಸಿದರು.

ವಿಚಾರಣಾ ಸಮಿತಿಯ ಹಿಂದಿನ ಎಲ್ಲ ಕಾನೂನು ವ್ಯವಹಾರಣೆಗಳಿಗೂ ಇದು ಮಾನ್ಯತೆ ನೀಡುವಂತಹದಾಗಿತ್ತು. ಸಮಿತಿಯು ನೀಡಿದ ಶಿಕ್ಷೆಯನ್ನು ಸರ್ಕಾರವು ತನ್ನ ವಿವೇಚನೆಯ ಮೇರೆಗೆ ಪೂರ್ಣವಾಗಿ ಅಥವಾ ಭಾಗಶಃ ಹಿಂತೆಗೆದುಕೊಳ್ಳಲೂ ಅವಕಾಶ ನೀಡುವಂತಹದಾಗಿತ್ತು.

ಮೈಸೂರಿನ ಮಹಾರಾಜರು ಹೊರಡಿಸಿದ ಈ ಮಟ್ಟದ ಒಂದು ಆಜ್ಞೆಯ ಔಚಿತ್ಯವನ್ನು ಪ್ರಶ್ನಿಸುವ ಅಧಿಕಾರ, ಸಂವಿಧಾನ ಇನ್ನೂ ಜಾರಿಗೆ ಬರದಿದ್ದ 1948ರಲ್ಲಿ, ರಾಜ್ಯ ಹೈಕೋರ್ಟಿಗೆ ಇರಲಿಲ್ಲ. ಅದರ ಕೈ ಕಟ್ಟಿಹಾಕಿದಂತೆ ಆಯಿತು.

ಆದ್ದರಿಂದ ಉಚ್ಚ ನ್ಯಾಯಾಲಯಕ್ಕೆ ಅರ್ಜಿದಾರರ ಅರ್ಜಿಗಳನ್ನು ತಿರಸ್ಕರಿಸದೆ ಬೇರೆ ವಿಧಿಯಿರಲಿಲ್ಲ. ಅರ್ಜಿದಾರರನ್ನು ಜಾಮೀನು ಮೇಲೆ ಬಿಡುಗಡೆ ಮಾಡಿದ್ದ ಆಜ್ಞೆಯನ್ನು ರದ್ದುಗೊಳಿಸುವ ತೀರ್ಪನ್ನು 1948ರ ಸೆಪ್ಟೆಂಬರ್ 9ರಂದು ನೀಡಿತು. ಅರ್ಜಿದಾರರನ್ನು ಪುನಃ ಬಂಧಿಸಿ ಜೈಲಿಗೆ ಕಳುಹಿಸಲಾಯಿತು.

ಆದರೆ ಈ ಆರೋಪಿಗಳ ಬಗ್ಗೆ ಉಳಿದ ಶಿಕ್ಷೆಯ ಅವಧಿಯನ್ನು ಮಾಫ್ ಮಾಡಿ ಬಿಡಬೇಕೆಂದು ಹೈಕೋರ್ಟ್ ಮಾಡಿದ್ದ ಸಲಹೆ. ಬಹುಶಃ ಅದಕ್ಕಿಂತ ಹೆಚ್ಚಾಗಿ ಸರ್ಕಾರಿ ಕ್ರಮದ ಬಗ್ಗೆ ಸಾರ್ವಜನಿಕರಲ್ಲಿ ಕಂಡುಬಂದಿದ್ದ ಕೋಪೋದ್ರೇಕದ ಅಭಿಪ್ರಾಯಗಳ

ಹಿನ್ನೆಲೆಯಲ್ಲಿ ಸೆಪ್ಟೆಂಬರ್ 11ರಂದು ಅಂದರೆ ಎರಡು ದಿನಗಳ ಬಳಿಕ ಎಲ್.ಎಸ್. ರಾಜು, ಪಿ.ಆರ್. ರಾಮಯ್ಯ ಮತ್ತು ಪಿ.ಬಿ. ಶ್ರೀನಿವಾಸನ್ – ಇವರುಗಳನ್ನು ಸರ್ಕಾರ ಬಿಡುಗಡೆ ಮಾಡಿತು.

ಈ ಮೊಕದ್ದಮೆಯ ವಿಚಾರಣೆ ಅವಧಿಯಲ್ಲಿ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಜಿ. ಪರಮಶಿವಯ್ಯ ಹಾಗೂ ನ್ಯಾಯಮೂರ್ತಿ ಆರ್. ಪುಟ್ಟರಾಜ ಅರಸ್ ಅವರು ನ್ಯಾಯಾಂಗದ ಘನತೆಯನ್ನು, ಕಾರ್ಯಾಂಗದ ದಬ್ಬಾಳಿಕೆಯ ವಿರುದ್ಧ ಎತ್ತಿಹಿಡಿಯುವಲ್ಲಿ ತೋರಿದ ಅಸಾಮಾನ್ಯ ದಿಟ್ಟ ಮನೋಭಾವವನ್ನು ಪತ್ರಿಕೆಗಳೂ, ನ್ಯಾಯವೇತ್ತರೂ, ವಿಚಾರವಂತರೂ ಶ್ಲಾಘಿಸಿ ನಾಡು ಅವರಿಗೆ ಕೃತಜ್ಞವಾಗಿರಬೇಕೆಂದರು.

ಆದರೆ ಇವರುಗಳ ಸೇವಾವಧಿಯನ್ನು ಮೊಟಕುಗೊಳಿಸಿ ಸರ್ಕಾರ ನಡೆದುಕೊಂಡ ರೀತಿ ಒಂದು ಕೆಟ್ಟ ಸಂಪ್ರದಾಯ ಎನ್ನದೇ ವಿದಿಯಿಲ್ಲ. ಸತ್ಯಕ್ಕಾಗಿ ನ್ಯಾಯಕ್ಕಾಗಿ ಕೆಲವೊಮ್ಮೆ ಹೋರಾಡಲೇ ಬೇಕಾಗುತ್ತದೆ. ರಕ್ಷಿಸುವ ನ್ಯಾಯವೇ ಭಕ್ಷಕರ ಕೈಯಲ್ಲಿ ಸಿಕ್ಕಿಹಾಕಿಕೊಂಡಾಗಲಂತೂ ಹೋರಾಟ ತೀವ್ರ ಹಾಗೂ ಗಂಭೀರ ಸ್ವರೂಪವನ್ನು ತಳೆಯುತ್ತದೆ. ಅದು ಆಗ ವ್ಯಕ್ತಿಯಿಂದ ಸಮಷ್ಟಿಯತ್ತ ಹೊರಳುತ್ತದೆ.

ಅರ್ಜಿದಾರರಾದ ಎಲ್.ಎಸ್. ರಾಜು, ಪಿ.ಆರ್. ರಾಮಯ್ಯ ಹಾಗೂ ಪಿ.ಬಿ. ಶ್ರೀನಿವಾಸನ್ ಅವರು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿರುವುದನ್ನು ಕುರಿತ ಉಚ್ಚ ನ್ಯಾಯಾಲಯದ ನ್ಯಾಯಪೀಠದ ತೀರ್ಪಿಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಹಲವಾರು ಲೇಖನಗಳು ಬಂದವು. ಪ್ರಸಿದ್ಧ ಪತ್ರಿಕಾ ಲೇಖಕ, ನಾಲ್ಕು ದಶಕಗಳಿಂದ ತಮ್ಮ ಬರವಣಿಗೆಯ ಮೂಲಕ ಸಾರ್ವಜನಿಕ ಸಂಪರ್ಕ ಹೊಂದಿದ್ದ ಡಿ.ವಿ. ಗುಂಡಪ್ಪನವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು 1948ರ ಸೆಪ್ಟೆಂಬರ್ 13ರಂದು ನೀಡಿದರು.

ಈ ಮೊಕದ್ದಮೆ ಪ್ರಕರಣದಲ್ಲಿ ಕಾರ್ಯಾಂಗದ ಅಸಹಕಾರವಿದ್ದರೂ ರಾಜ್ಯ ಹೈಕೋರ್ಟಿನ ನ್ಯಾಯಾಧೀಶರುಗಳು ವ್ಯವಹರಿಸುವ ರೀತಿಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಸಮಯಕ್ಕೆ ತಕ್ಕದಾದ ಔಚಿತ್ಯ ಹಾಗೂ ಘನತೆಯೊಂದಿಗೆ ಸ್ವತಂತ್ರ ಮನೋಭಾವದಿಂದ ನಿರ್ಭಯವಾಗಿ ನಡೆದುಕೊಳ್ಳುವ ನ್ಯಾಯಮೂರ್ತಿಗಳು ನಮ್ಮ ಉಚ್ಚ ನ್ಯಾಯಾಲಯದಲ್ಲಿದ್ದಾರೆ ಎಂಬ ಸಂಗತಿ ನಮಗೆಲ್ಲ ತುಂಬ ನೆಮ್ಮದಿ ತರುವ ವಿಷಯ ಎಂದು ಹೃದಯ ತುಂಬಿ ನುಡಿದರು.[32]

---

32. ಪಿ.ಆರ್. ರಾಮಯ್ಯ : ತಾಯಿನಾಡು : ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು 1995.

ಸ್ವಾತಂತ್ರ್ಯದ ಅರುಣೋದಯದ ಆ ಕಾಲದಲ್ಲಿ ಅಭಿಪ್ರಾಯ ಸ್ವಾತಂತ್ರ್ಯವನ್ನು ವ್ಯಕ್ತಪಡಿಸಲು, ಸಾಮಾಜಿಕ, ಆರ್ಥಿಕ, ರಾಜನೀತಿಯ ನ್ಯಾಯಗಳ ಬಗ್ಗೆ ಕಟ್ಟೆಚ್ಚರ ಮೂಡಿಸಲು ಲೇಖನಗಳನ್ನು ಪ್ರಕಟಿಸಿ, ಎಲ್ಲರಲ್ಲೂ ಜಾಗೃತಿ ಉಂಟು ಮಾಡುವಲ್ಲಿ ಸಾರ್ಥಕ ಸೇತುವಾಗಿ ಪತ್ರಿಕಾ ಮಾಧ್ಯಮ ಕಾರ್ಯನಿರ್ವಹಿಸಿದೆ. ಆ ಕಾಲದಲ್ಲಿ ತಾಯಿನಾಡು, ಡೈಲಿನ್ಯೂಸ್‌ಗಳಂಥ ಪತ್ರಿಕೆ ಇಟ್ಟ ದಿಟ್ಟಹೆಜ್ಜೆ, ತೊಟ್ಟನಿಲುವು ನಿಜಕ್ಕೂ ಆದರ್ಶ ಪ್ರಾಯವಾದುದಷ್ಟೇ ಅಲ್ಲ ಅನುಸರಣೀಯವೂ ಹೌದು, ಅನುಕರಣೀಯವೂ ಹೌದು!

ಕಾಂಗ್ರೆಸ್ಸಿಗರ ಅಧಿಕಾರ ವ್ಯಾಮೋಹ ಸಮಸ್ಯೆ

1947ರ ಅಕ್ಟೋಬರ್ 24ರಂದು ಕೆ.ಸಿ. ರೆಡ್ಡಿ ಅವರು ಕಾಂಗ್ರೆಸ್ ಪಕ್ಷದ ಮೊದಲ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿ ಕೊಂಡಾಗ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅದರಲ್ಲಿ ಕಾಂಗ್ರೆಸ್ಸಿಗರ ಅಧಿಕಾರ ವ್ಯಾಮೋಹ ಕೂಡ ಒಂದು. ಈ ಅತೃಪ್ತರ ಬಳಗದ ನಾಯಕ ಕೆಂಗಲ್ ಹನುಮಂತಯ್ಯ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಮೈಸೂರು ಮಹಾರಾಜರು ಅಧಿಕಾರ ಬಿಟ್ಟುಕೊಡದೆ ಇದ್ದಾಗ, ಮೈಸೂರು ಕಾಂಗ್ರೆಸ್ ಸರ್ವಾಧಿಕಾರಿ ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಮೈಸೂರು ಚಲೋ ಚಳುವಳಿ ಸಂದರ್ಭದಲ್ಲಿ ಕೆಂಗಲ್ ಹನುಮಂತಯ್ಯ ಮಾಡಿದ ಉಗ್ರ ಭಾಷಣದಿಂದ ಸರ್ಕಾರ ಅವರನ್ನು ಬಂಧಿಸಿ 18 ತಿಂಗಳ ಕಾಲ ಸೆರೆಮನೆಗೆ ದೂಡಿತು. ಮುಂದೆ ದಿವಾನರು ಮತ್ತು ಕೆ.ಸಿ. ರೆಡ್ಡಿ ಅವರ ನಡುವೆ ಹಲವಾರು ಸುತ್ತಿನ ಮಾತುಕತೆಗಳಾದರೂ ಸರ್ಕಾರ ಹನುಮಂತಯ್ಯನವರನ್ನು ಬಿಡುಗಡೆ ಮಾಡಲಿಲ್ಲ. ಇದರಿಂದ ಕೋಪಗೊಂಡ ಕೆ.ಸಿ. ರೆಡ್ಡಿ 'ಮಾತುಕತೆಗಳು ಮುರಿದು ಬೀಳಲು ದಿವಾನರೇ ನೇರ ಹೊಣೆಗಾರರು' ಎಂದು ಟೀಕಿಸಿದ್ದಾರೆ.[33]

ಆ ನಂತರದಲ್ಲಿ ದಿವಾನ್ ಎ.ಆರ್. ಮೊದಲಿಯಾರ್ ಮತ್ತು ಕೆ.ಸಿ. ರೆಡ್ಡಿ ಅವರ ನಡುವೆ ಐತಿಹಾಸಿಕ ಒಪ್ಪಂದ ಏರ್ಪಟ್ಟು ಕೆ.ಸಿ. ರೆಡ್ಡಿ ಮುಖ್ಯಮಂತ್ರಿಯಾಗಿ, ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ದಿವಾನರಾಗಿ ಮತ್ತು ಮಹಾರಾಜರು ರಾಜ ಪ್ರಮುಖರಾಗಿ ಅಧಿಕಾರವಹಿಸಿ ಕೊಂಡರು. ಆದರೂ ಕೆ. ಹನುಮಂತಯ್ಯನವರು ಜೈಲಿನಿಂದ ಬಿಡುಗಡೆ ಆಗದೆ ಇದ್ದಿದ್ದು ಅವರ ಕೋಪಕ್ಕೆ ಕಾರಣವಾಗಿತ್ತು. ಆ ನಂತರ ಬಿಡುಗಡೆಗೊಂಡ ಮೇಲೂ ರೆಡ್ಡಿ ಅವರ ಮಂತ್ರಿಮಂಡಲದಲ್ಲಿ ಸ್ಥಾನಸಿಗದೇ ಸರ್ಕಾರದ ಪತನಕ್ಕೆ ಕಂಕಣ ಕಟ್ಟಿ ನಿಂತರು.

---

33. ಪ್ರಕಟಣೆ : ಮೈಸೂರು ಕಾಂಗ್ರೆಸ್ – 1947.

ಇದರ ಜೊತೆಗೆ ಕಾಂಗ್ರೆಸ್ ಶಾಸನಸಭಾ ಸದಸ್ಯರು ಅಧಿಕಾರ ವ್ಯಾಮೋಹದಿಂದ ಪ್ರೇರಿತಗೊಂಡು ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಸಂದೇಹ, ಸಂಘರ್ಷಗಳು ಉಂಟಾಗಲು ತಮ್ಮ ತಮ್ಮ ಜಾತಿ, ವರ್ಗಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಒಕ್ಕಲಿಗರು ಮತ್ತು ಲಿಂಗಾಯತರು ಮೈಸೂರು ರಾಜ್ಯದಲ್ಲಿ ಬಹುಸಂಖ್ಯಾತ ಪಂಗಡಗಳಾಗಿದ್ದವು. ಇವರು ತಮ್ಮ ಪ್ರಾಬಲ್ಯಗಳನ್ನು ಗಳಿಸಿಕೊಳ್ಳಲು ಹವಣಿಸಿದರು. ಇವರಿಗೆ ಸವಾಲಾಗಿ ಅಲ್ಪಸಂಖ್ಯಾತರೂ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ರೆಡ್ಡಿಯವರ ವಿರುದ್ಧವಾಗಿ ಅಪಪ್ರಚಾರ ಕೈಗೊಂಡರು. ಇವರ ಜೊತೆಗೆ ಒಕ್ಕಲಿಗರೂ ಸೇರಿಕೊಂಡು ಜಾತಿದ್ವೇಷದ ಜೊತೆಗೆ, ಮಾತ್ಸರ್ಯದಿಂದ ಕೂಡಿದ ವ್ಯಕ್ತಿದ್ವೇಷವೂ ಸೇರಿಕೊಂಡದ್ದು ಕಾಣಬಹುದು.

ಒಕ್ಕಲಿಗರ ಸೊಕ್ಕನ್ನು ಮುರಿಯಲು ಕರ್ನಾಟಕ ಏಕೀಕರಣವೊಂದು ಸಾಧನವೆಂದು ಲಿಂಗಾಯತರೂ, ಏಕೀಕರಣದಿಂದ ತಾವು ಅನುಭವಿಸುತ್ತಿರುವ ಅಧಿಕಾರ ಹಸ್ತಾಂತರವಾಗುತ್ತದೆಂದು ಒಕ್ಕಲಿಗರೂ ಹಾಗೂ ದ್ವಿಕರ್ನಾಟಕ ನಿರ್ಮಾಣದಿಂದ ಅಧಿಕಾರ ನಿಯಂತ್ರಣ ಸಾಧ್ಯವಾಗಬಹುದೆಂದು ಇನ್ನೂ ಕೆಲವರೂ ವಾದಿಸುತ್ತಾ ಕರ್ನಾಟಕ ಪೂರ್ಣವಾಗಿ ಸಂಘಟಿತವಾಗದಂತೆ ಅಡ್ಡಿಪಡಿಸಿರುವುದನ್ನು ಕಾಣಬಹುದು.[34] ಇದರ ಜೊತೆಗೆ ಕೆಲವು ವೃತ್ತಪತ್ರಿಕೆಗಳು ವ್ಯವಸ್ಥಿತವಾಗಿ ಕೆ.ಸಿ. ರೆಡ್ಡಿ ಅವರನ್ನೇ ಗುರಿಯಾಗಿಟ್ಟು ಕೊಂಡು ಲೇಖನಗಳನ್ನು ಬರೆದು ಜನಸಾಮಾನ್ಯರಿಗೆ ತಲುಪಿಸಿರುವುದನ್ನು ಸಹ ಕಾಣಬಹುದಾಗಿದೆ.

ಇಷ್ಟೆಲ್ಲಾ ವ್ಯವಸ್ಥಿತ ಸಂಚು ತಮ್ಮ ವಿರುದ್ಧ ನಡೆಯುತ್ತಿರುವುದನ್ನು ಗಮನಿಸಿದ್ದ ಕೆ.ಸಿ. ರೆಡ್ಡಿ ಅವರು ಅಧಿಕಾರಕ್ಕಾಗಿ, ತಾವು ನಂಬಿದ ಮೌಲ್ಯಗಳನ್ನು ಬಿಟ್ಟುಕೊಡದ ವ್ಯಕ್ತಿಯಾಗಿದ್ದರು. ಆದರೆ ಆಡಳಿತದಲ್ಲಿ ಕಾಲಕ್ಕೆ ತಕ್ಕಹಾಗೆ ಆಲೋಚನಾ ವಿಧಾನದಲ್ಲಿ ಮಾರ್ಪಾಡು ಮಾಡಿಕೊಳ್ಳಬೇಕದ ಅನಿವಾರ್ಯತೆಯನ್ನು ಅರಿತು ಕೊಂಡಿದ್ದರು. ಅದ ಕ್ಕಾಗಿಯೇ 1949ರಲ್ಲಿ ಮಂತ್ರಿಮಂಡಲದಲ್ಲಿದ್ದ ಕಾಂಗ್ರೆಸ್ಸೇತರ ಮಂತ್ರಿಗಳನ್ನು, ದಿವಾನರನ್ನು ಅಧಿಕಾರದಿಂದ ಇಳಿಸಿದಾಗ ತೆರವಾದ ಮಂತ್ರಿಗಳ ಸ್ಥಾನಗಳಿಗೆ ಹಿರಿಯ ರಾಜಕಾರಣಿಯಾದ ಟಿ. ಸಿದ್ದಲಿಂಗಯ್ಯ ಅವರನ್ನು ಮಾತ್ರ ಸೇರಿಸಿಕೊಂಡಿದ್ದು ರೆಡ್ಡಿ ಅವರ ಚಾಣಾಕ್ಷತೆ ಎದ್ದು ಕಾಣುತ್ತದೆ.

ಇದೇ ಕಾಲಕ್ಕೆ ರಾಜ್ಯದಲ್ಲಿ ಅಧಿಕಾರ ಬದಲಾವಣೆಗಾಗಿ ಉದ್ಭವಿಸಿದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಹಾಗೂ ಶ್ರೀಮತಿ ಸರೋಜಮ್ಮ ಕೆ.ಸಿ. ರೆಡ್ಡಿ

---

34. ದೇಜಗೌ : ಕರ್ನಾಟಕದ ರೂವಾರಿ, ಪುಟ–135.

ಅವರು ದೆಹಲಿಗೆ ತೆರಳಿ ಕೇಂದ್ರ ಸರ್ಕಾರದ ಆಪ್ತನಾಯಕರೊಡನೆ ರಾಜ್ಯದಲ್ಲುಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಉಪಶಮನಕ್ಕಾಗಿ ಕ್ರಮ ಕೈಗೊಳ್ಳುವಂತೆ ಹೇಳಿ ಹಿಂತಿರುಗಿದ್ದರು.[35]

1950ರ ಜೂನ್ ತಿಂಗಳಲ್ಲಿ ಪುನಃ ಉದ್ಭವಿಸಿದ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು 'ಕೆ.ಸಿ. ರೆಡ್ಡಿ ಅನಾರೋಗ್ಯ ಕಾರಣ ಎರಡು ವಾರಗಳ ಕಾಲ ಚಿಕಿತ್ಸೆಗಾಗಿ ಊಟಿ ಮತ್ತು ಕೇರಳಗಳಲ್ಲಿ ವಿಶ್ರಾಂತಿ ಪಡೆಯುವುದರ ಮೂಲಕ ತಪ್ಪಿಸಿಕೊಂಡಿರುವುದು ಕಂಡುಬರುತ್ತದೆ'.[36] ಆದರೆ ಇಂತಹ ಪ್ರಸ್ತಾಪಗಳು ನಾಲ್ಕಾರು ತಿಂಗಳಿಗೊಮ್ಮೆ ಬಂದು ಜನಜೀವನವನ್ನು ಕಲುಕುತ್ತಿದ್ದು ಕೆಲವು ಸ್ವಾರ್ಥಸಾಧಕರ ಒಳಸಂಚು ಎಂದು ಸ್ಪಷ್ಟವಾಗುತ್ತದೆ.

ಕೆಂಗಲ್ ಹನುಮಂತಯ್ಯನವರ ಹಠ, ಛಲಅರಿತ ಕೆ.ಸಿ. ರೆಡ್ಡಿ, ಅವರನ್ನು ಭೇಟಿ ಮಾಡಿ 'ಚುನಾವಣೆ ನಡೆಯಲು ಕೇವಲ ಆರು ತಿಂಗಳು ಮಾತ್ರವಿದೆ. ಅಲ್ಲಿಯವರೆಗೆ ಸಹಿಸಿ, ಮುಂದೆ ನೀವೇ ಈ ರಾಜ್ಯದ ಉತ್ತರಾಧಿಕಾರಿಗಳು, ಅಲ್ಲದೆ ನೀವು ಈಗ ಹುಟ್ಟು ಹಾಕಿರುವ ಗುಂಪುಗುಳಿತನ ನಾಳೆ ನಿಮಗೂ ಮುಳ್ಳಾಗಬಹುದು' ಎಂದಿದ್ದಾರೆ.[37] ಆದರೆ ಹಠಕ್ಕೆ ಬಿದ್ದು, ರೆಡ್ಡಿ ಅವರ ವಿವೇಕದ ಮಾತುಗಳನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಹನುಮಂತಯ್ಯ ಇಲ್ಲದಿರುವುದು ಕಂಡು ಬರುತ್ತದೆ.

1950ರ ಡಿಸೆಂಬರ್ ತಿಂಗಳಲ್ಲಿ "ಕೆಂಗಲ್ ಹನುಮಂತಯ್ಯನವರ ಬಣದವರಾದ ಎಚ್.ಎಂ. ಚೆನ್ನಬಸಪ್ಪ, ಎಸ್. ರಂಗರಾವ್, ಸಿ.ಆರ್. ಬಸಪ್ಪ ಅವರುಗಳು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರನ್ನು ಭೇಟಿ ಮಾಡಿ 36 ಕಾಂಗ್ರೆಸ್ ಶಾಸನಸಭಾ ಸದಸ್ಯರು ಸಹಿ ಮಾಡಿದ ಅವಿಶ್ವಾಸ ನಿರ್ಣಯ ಪತ್ರವನ್ನು ನೀಡಿದರು. ಇದಕ್ಕೆ ಉತ್ತರಿಸಿದ ರೆಡ್ಡಿ ಅವರು ಈ ವಿಷಯ ಕಾಂಗ್ರೆಸ್ ಪಾರ್ಟಿಗೆ ಸಂಬಂಧಿಸಿದ್ದಾದ್ದರಿಂದ, ಅದು ಪಾರ್ಟಿ ಸಭೆಯಲ್ಲಿ ಚರ್ಚೆಯಾಗುವುದು ಸೂಕ್ತವೆಂದೂ, ಅದಕ್ಕಾಗಿ ಈ ತಿಂಗಳು 27ನೇ ತಾರೀಖು ಪಾರ್ಟಿ ಸಭೆ ಸೇರಿಸುವುದಾಗಿಯೂ ಹಾಗೂ ಈ ವಿಷಯವು ಕೇಂದ್ರ ಪಾರ್ಲಿಮೆಂಟರಿ ಸಮಿತಿಗೂ ತಿಳಿಸಲಾಗಿದೆ" ಎಂದು ತಿಳಿಸಿದ್ದಾರೆ.[38]

1950ರಲ್ಲಿಯೇ ಕಾಂಗ್ರೆಸ್‌ನ ಕೆಲವು ಶಾಸನಸಭಾ ಸದಸ್ಯರು ಅಧಿಕಾರ, ಹಣ ಹಾಗೂ ರಾಜಕೀಯ ಒಡನಾಟಕ್ಕಾಗಿ ಸಂಸ್ಥಾನದ ಸಾಹುಕಾರರ, ಜಮೀನ್ದಾರರ, ಅಧಿಕಾರಿಗಳ, ವರ್ತಕರ, ಕೈಗಾರಿಕೋದ್ಯಮಿಗಳ ಬೆಂಬಲಿಗರು ಆಗಿದ್ದು, ಈ ವ್ಯಕ್ತಿಗಳು ತಮ್ಮ ಏಜೆಂಟರ

---

35. ಪೌರವಾಣಿ ಪತ್ರಿಕೆ : ದಿನಾಂಕ : 26–01–1950.
36. ಪೌರವಾಣಿ ಪತ್ರಿಕೆ : ದಿನಾಂಕ : 25–06–1950.
37. ಕೋಣಂದೂರು ವೆಂಕಪ್ಪಗೌಡ : ನವ–ಮೈಸೂರು ಶಿಲ್ಪಿ, ಪುಟ–108.
38. ಪೌರವಾಣಿ ಪತ್ರಿಕೆ : ದಿನಾಂಕ : 12–12–1950.

ಮೂಲಕ ಬೆಂಬಲ, ನಾಯಕರ ಪರವಾಗಿ ಪಿತೂರಿ, ಮಸಲತ್ತುಗಳನ್ನು ಮಾಡುತ್ತಿದ್ದುದ್ದನ್ನು ವೃತ್ತಪತ್ರಿಕೆ ಬಿಂಬಿಸಿರುವುದನ್ನು ಕಾಣಬಹುದು'.[39]

1950ರ ಡಿಸೆಂಬರ್ 27 ಮತ್ತು 28ರಂದು ನಡೆದ ಕಾಂಗ್ರೆಸ್ ಶಾಸನಸಭಾ ಸದಸ್ಯರ ಸಭೆಯಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಮಾತನಾಡಿ "ತಮ್ಮ ಮಂತ್ರಿಮಂಡಲ ಪಟ್ಟಪಾಡನ್ನು, ಎದುರಿಸಿದ ಸಮಸ್ಯೆಗಳನ್ನು ವಿವರಿಸಿ, ತಾವು ಜನವರಿ 10ನೇ ತಾರೀಖಿನೊಳಗಾಗಿ ಪಕ್ಷ ಸಭೆಕರೆಸಿ, ವಿಶ್ವಾಸವನ್ನು ಕೋರುವುದಾಗಿಯೂ, ಇಲ್ಲದಿದ್ದರೇ ತಮಗಿರುವ ಬೇರೆ ಮಾರ್ಗ ಅನುಸರಿಸುವುದಾಗಿಯೂ" ತಿಳಿಸಿದರು. ಮುಂದುವರೆದು "ಈ ತಿಂಗಳ 7ನೆಯ ತಾರೀಖು ಹಲವು ಶಾಸನಸಭಾ ಸದಸ್ಯರು ಬಂದು ನನ್ನನ್ನು ನಾಯಕ ಪದವಿಗೆ ರಾಜೀನಾಮೆ ಕೊಡಬೇಕೆಂದು ಕೇಳಿ ಸಹಿ ಹಾಕಿಸಿದ್ದ ಒಂದು ಪತ್ರ ಕೊಟ್ಟರು. ಅದೇ ಕಾಲಕ್ಕೆ ಒಂದು ಅವಿಶ್ವಾಸ ಸೂಚಕ ನಿರ್ಣಯವನ್ನು ಕೂಡ ನನಗೆ ಕಳುಹಿಸಿ ಕೊಡಲಾಯಿತು. ಆ ಪತ್ರಗಳನ್ನು ಕೇಂದ್ರ ಪಾರ್ಲಿಮೆಂಟರಿ ಬೋರ್ಡ್‌ನ ಸಲಹೆಗಾಗಿ ಕಳಿಸಿಕೊಡಲಾಗಿದೆ' ಎಂದರು. ಅಲ್ಲದೆ 'ಅವಿಶ್ವಾಸ ಸೂಚನಾ ಪತ್ರವನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಆದರೂ ಮುಂದೆ ಯಾರು ನಾಯಕರಾಗಿ ಉಳಿಯ ಬೇಕೆಂಬುದರ ಬಗ್ಗೆ ಕೂಡಲೇ ಇತ್ಯರ್ಥವಾಗುವುದು ಒಳ್ಳೆಯದೆಂದು ಈ ದೃಷ್ಟಿಯಿಂದ ವಿಶ್ವಾಸ ಕೋರುವುದಾಗಿಯೂ ತಿಳಿಸಿದ್ದಾರೆ".[40]

ಈ ಬದಲಾವಣೆಯ ಬಿಸಿ ಬಿಸಿ ಚರ್ಚೆಗಳು ರಾಜ್ಯದಲ್ಲಿ ತೀವ್ರತರವಾದ ಸಂಚಲನ ಸಾರ್ವಜನಿಕರಲ್ಲಿ ಮೂಡಿಸಿದ್ದು ಕಂಡು ಬರುತ್ತದೆ. ಅದಕ್ಕಾಗಿ "ರಾಜ್ಯದಲ್ಲಿ ಕೆ.ಸಿ. ರೆಡ್ಡಿ ಅವರನ್ನು ಬಿಟ್ಟರೆ, ಇನ್ನು ನಾಯಕತ್ವಕ್ಕೆ ಅರ್ಹತೆ ಉಳ್ಳವರು ಯಾರಿದ್ದಾರೆ, ರೆಡ್ಡಿಗಳು ಮೇಧಾವಿಗಳು, ರಾಜಕೀಯ ಬಲ್ಲವರು, ಸಂವಿಧಾನ ಅಭ್ಯಾಸದಲ್ಲಿ ಪರಿಣಿತರು, ನಾಯಕತ್ವ ಬದಲಾವಣೆಯಾದರೆ ಪ್ರಥಮ ದರ್ಜೆಯ ನಾಯಕ ಶ್ರೇಣಿಗೆ ಸೇರಿದವರು ನಮಗೆ ಸಿಗುವುದು ದುರ್ಲಭವೇ ಸರಿ ಎಂದೂ ಪತ್ರಿಕೆಗಳು ಬಿಂಬಿಸಿರುವುದು" ಕಂಡು ಬರುತ್ತದೆ.[41]

1951ರ ಜನವರಿ 10ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ನಾಯಕತ್ವದಲ್ಲಿ ವಿಶ್ವಾಸ ಕೋರುವ ಸಭೆ ಕುಮಾರಪಾರ್ಕ್‌ನಲ್ಲಿ ನಡೆಯಿತು. ಈ ಸಭೆಗೆ ಎಂ.ಪಿ.ಸಿ.ಸಿ. ಅಧ್ಯಕ್ಷರಾದ ಕೆಂಗಲ್ ಹನುಮಂತಯ್ಯ, ಪಾರ್ಲಿಮೆಂಟರಿ ಉಪಸಮಿತಿಯ ಸದಸ್ಯರಾದ ಸಾಹುಕಾರ ಚನ್ನಯ್ಯ, ಕಾಂಗ್ರೆಸ್ ಶಾಸನಸಭಾ ಸದಸ್ಯರು ಆಗಮಿಸಿದ್ದರು. 'ರಹಸ್ಯ ಬ್ಯಾಲಟ್'

---

39. ಪೌರವಾಣಿ ಪತ್ರಿಕೆ : ದಿನಾಂಕ : 14–12–1950.
40. ಪೌರವಾಣಿ ಪತ್ರಿಕೆ : ದಿನಾಂಕ : 29–12–1950.
41. ಪೌರವಾಣಿ ಪತ್ರಿಕೆ : ದಿನಾಂಕ : 06–12–1950.

ಮೂಲಕ ವೋಟಿಂಗ್ ನಡೆಯಿತು. ಬ್ಯಾಲಟ್ ಬಾಕ್ಸನ್ನು ಸಭಾಧ್ಯಕ್ಷ ಕೆ.ಸಿ. ರೆಡ್ಡಿ ಅವರ ಮುಂದಿಟ್ಟು, 65 ಸದಸ್ಯರಿಗೂ ಕೆ.ಸಿ. ರೆಡ್ಡಿ ಹೆಸರನ್ನೊಳಗೊಂಡಿದ್ದ ಚೀಟಿಯನ್ನು ಕೊಟ್ಟು, ಹೆಸರಿನ ಮುಂದೆ ಗುರುತು ಮಾಡುವುದು, ಇಲ್ಲದಿದ್ದರೆ ಹೆಸರನ್ನು ಹೊಡೆದು ಹಾಕುವುದು ಈ ರೀತಿ ವೋಟಿಂಗ್ ನಡೆಯಿತು. ಕೆ.ಸಿ. ರೆಡ್ಡಿ ಅವರ ಪರವಾಗಿ 34 ಮತಗಳು, ವಿರೋಧವಾಗಿ 30 ಮತಗಳು ಬಿದ್ದವು. ಒಂದು ಓಟು 'ತಟಸ್ಥ ಓಟು' (ಕೆ.ಸಿ. ರೆಡ್ಡಿ) ಎಂದು ಪರಿಗಣಿತವಾಗಿತ್ತು. ಹೀಗೆ ಕೆ.ಸಿ. ರೆಡ್ಡಿ ಅವರ ಸರ್ಕಾರ 4 ಮತಗಳ ಅಂತರದಿಂದ ಜಯಶೀಲರಾಗಿದ್ದು ದೊಡ್ಡ ತೊಂದರೆಯಿಂದ ಪಾರಾಗುವಂತೆ ಆಯಿತು.

ನಂತರ ಎರಡೂ ಬಣಗಳ ಸದಸ್ಯರು ಮಾತನಾಡಿ "ನೀವು ಈ ಪ್ರಕರಣದಲ್ಲಿ ಮೊದಲಿನಿಂದ ಕೊನೆಯವರೆಗೂ ಗಾಂಭೀರ್ಯದಿಂದ ನಡೆದುಕೊಂಡಿದ್ದೀರಿ" ಎಂದು ಕೆ.ಸಿ. ರೆಡ್ಡಿ ಅವರನ್ನು ಅಭಿನಂದಿಸಿದರು.

ನಂತರ ರೆಡ್ಡಿ ಅವರು ಮಾತನಾಡಿ "ತಮ್ಮಲ್ಲಿ ಮತ್ತೆ ವಿಶ್ವಾಸ ಸೂಚಿಸಿದ್ದಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿ, ಆಡಳಿತದಲ್ಲಿ ನ್ಯೂನ್ಯತೆಗಳಿರುವುದೆಂದೂ, ಇರುವ ಕಷ್ಟಗಳನ್ನು, ಸಮಸ್ಯೆಗಳನ್ನು ತಿಳಿಸಿ, ಕಾಂಗ್ರೆಸ್ ಹಾಗೂ ಶಾಸನಸಭಾ ಸದಸ್ಯರ ಸಹಕಾರ ಸಹಾಯದಿಂದ ಆಡಳಿತವನ್ನು ಉತ್ತಮಪಡಿಸುವ ಭರವಸೆ ನೀಡಿ, ಆಡಳಿತ ಕಾಂಗ್ರೆಸ್ ಎರಡು ಸೇರಿ ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿ, ಆಡಳಿತ ನಾನಾ ಬಾಬುಗಳಿಗೂ ಆಡಳಿತ ಮಾಡಬೇಕೆಂದಿರುವ ಹತ್ತು ಸಮಿತಿಗಳಿಗೂ ಶಾಸನಸಭಾ ಸದಸ್ಯರನ್ನು ಸೇರಿಸುವ ಉದ್ದೇಶವಿರುವುದಾಗಿ ಇದೇ ಕಾಲಕ್ಕೆ ತಿಳಿಸಿದ್ದಾರೆ"[42]

ಹೀಗೆ ಕೆಂಗಲ್ ಹನುಮಂತಯ್ಯನವರು, ರೆಡ್ಡಿ ಅವರ ಸರ್ಕಾರ ಉರುಳಿಸಲು ಕೊನೆ ಮೊದಲಿಲ್ಲದ ಅಡ್ಡಿ, ಆತಂಕಗಳನ್ನು ಸೃಷ್ಟಿಸಿ ಸರ್ಕಾರ ನಿರಾಂತಕವಾಗಿ ಕೆಲಸ ಮಾಡಲು ಕಷ್ಟ ಸಾಧ್ಯವಾಗುವಂತಹ ಪರಿಸ್ಥಿತಿ ತಂದೊಡ್ಡುಡುತ್ತಿದ್ದರು. ಕೊನೆಗೆ ತಾನೇ ನಂಬಿದ್ದ ಸ್ನೇಹಿತರಿಂದಲೇ ಮೋಸ ಹೋಗಿದ್ದು, ಅವರ ಪ್ರತಿಷ್ಠೆ, ಅಹಂ, ಅಧಿಕಾರ ವ್ಯಾಮೋಹ, ಬೆಂಬಲಿಗರಿಂದ ಅವರು ಮಾಡುತ್ತಿದ್ದ ಕೆಲಸ ಸರಿ ಎಂದು ಸೇಡನ್ನು ತೀರಿಸಿಕೊಳ್ಳಲು ಕಾಯುತ್ತಿದ್ದರು.

1951ರ ಮಾರ್ಚ್ ವೇಳೆಗೆ ಮತ್ತೊಮ್ಮೆ 'ಕೆಂಗಲ್ ಹನುಮಂತಯ್ಯ ಮತ್ತು ಕೆ.ಸಿ. ರೆಡ್ಡಿ ಅವರ ನಡುವಿನ ಮನಸ್ತಾಪ ಉಲ್ಬಣಿಸಿತು. ಈ ಸಮಸ್ಯೆಯ ಪರಿಹಾರಕ್ಕಾಗಿ ಕಾಂಗ್ರೆಸ್ ನಾಯಕರು ದೆಹಲಿಗೆ ಹೋಗಿ ಎ.ಐ.ಸಿ.ಸಿ. ಅಧ್ಯಕ್ಷರಾದ ಪುರುಷೋತ್ತಮದಾಸ್

---

42. ಪೌರವಾಣಿ ಪತ್ರಿಕೆ : ದಿನಾಂಕ : 11–01–1951.

ಟಂಡನ್ ಹಾಗೂ ಪ್ರಧಾನಿ ನೆಹರು ಅವರನ್ನು ಭೇಟಿ ಮಾಡಿ ಮೈಸೂರು ರಾಜ್ಯ ಕಾಂಗ್ರೆಸ್ ಸದಸ್ಯರಿಂದ ಉದ್ಭವಿಸಿರುವ ಬಿಕ್ಕಟ್ಟನ್ನು ಪರಿಹರಿಸಲು ಕೋರಿರುವುದು ವ್ಯಕ್ತವಾಗುತ್ತದೆ'.[43]

ಕೆಂಗಲ್ ಹನುಮಂತಯ್ಯನವರ ಹಠಮಾರಿತನವನ್ನು ಕೆ.ಸಿ. ರೆಡ್ಡಿ ರಾಜಕೀಯ ಚಾಣಾಕ್ಷತನದಿಂದ ಗೆಲ್ಲುತ್ತಿದ್ದರು. ಆದರೆ ರೆಡ್ಡಿ ಸರ್ಕಾರದ ವಿರುದ್ಧ ದೂರುಗಳು ಕೇಂದ್ರ ಸರ್ಕಾರದ ಬಾಗಿಲು ತಟ್ಟುತ್ತಿದ್ದರಿಂದ ನೆಹರು ಅವರು "ಮೈಸೂರು ರಾಜ್ಯದ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಲಾಲ್ ಬಹದ್ದೂರ್ ಶಾಸ್ತ್ರೀ ಅವರನ್ನು ಕಳುಹಿಸಿದರು. ಶಾಸ್ತ್ರೀಯವರು ರಾಜ್ಯಕ್ಕೆ ಆಗಮಿಸಿ ಶಾಸನಸಭಾ ಸದಸ್ಯರು, ಕೆ. ಹನುಮಂತಯ್ಯ, ಕೆ.ಸಿ. ರೆಡ್ಡಿ ಮಂತ್ರಿಮಂಡಲದ ಸದಸ್ಯರನ್ನು ಭೇಟಿ ಮಾಡಿ, ಇಲ್ಲಿನ ವಿದ್ಯಮಾನಗಳನ್ನು ಅರಿತುಕೊಂಡರು. ನಂತರ ತನ್ನ ವರದಿಯಲ್ಲಿ 'ಮೈಸೂರು ಕಾಂಗ್ರೆಸ್ಸಿಗರು ಹೊಸ ನಾಯಕತ್ವವನ್ನು ಅಪೇಕ್ಷಿಸುತ್ತಾರೆ' ಎಂದು ವರದಿ ಸಲ್ಲಿಸಿದರು".[44]

ಇದೇ ಕಾಲಕ್ಕೆ ಹನುಮಂತಯ್ಯ ಎಂ.ಪಿ.ಸಿ.ಸಿ.ಯ ಅಧ್ಯಕ್ಷರು ಆಗಿದ್ದರಿಂದ ದೃಢಮನಸ್ಕರಾಗಿ ರೆಡ್ಡಿಯವರ ಸರ್ಕಾರವನ್ನು ಉರುಳಿಸಲು ಯೋಜನಾಬದ್ಧವಾಗಿ ಭೂಮಿಕೆಯನ್ನು ಸಿದ್ಧಪಡಿಸಿಕೊಂಡು ಮೈಸೂರು ರಾಜ್ಯಾದ್ಯಂತ ಪ್ರವಾಸ ಮಾಡಿದರು. ಪ್ರಮುಖ ಸ್ಥಾನಗಳಲ್ಲಿದ್ದ ರೆಡ್ಡಿ ಅವರ ಬೆಂಬಲಿಗರನ್ನು ಇಳಿಸಿ ಅಥವಾ ತನ್ನ ಕಡೆ ಸೆಳೆದುಕೊಂಡು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು. ಈ ಅವಿಶ್ವಾಸ ನಿರ್ಣಯದಲ್ಲಿ ಕೆ.ಸಿ. ರೆಡ್ಡಿ ಅವರ ಸರ್ಕಾರ 4 ಮತಗಳ ಅಂತರದಿಂದ ಪತನಗೊಳ್ಳಲು ಕಾರಣರಾದರು.[45]

ಹೀಗೆ ಹಿಂದೆ ಯಾವ ಆಡಳಿತಕ್ಕೂ ಎದುರಾಗದಂತಹ ಜಟಿಲವಾದ ರಾಜಕೀಯ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಕೆ.ಸಿ. ರೆಡ್ಡಿ ಅವರ ಮಂತ್ರಿಮಂಡಲ ಎದುರಿಸ ಬೇಕಾಯಿತು. ಕೊನೆಗೆ ಕೆಂಗಲ್ ಹನುಮಂತಯ್ಯನವರು ತಾವು ನಂಬಿದ ಮೌಲ್ಯಗಳಿಗೆ ತಿಲಾಂಜಲಿ ಇಟ್ಟು, ಹಠಮಾರಿತನದಿಂದ, ಸದಸ್ಯರಿಗೆ ಅಧಿಕಾರದ ಆಸೆ ತೋರಿಸಿ ತನ್ನ ಕಾರ್ಯ ನೆರವೇರಿಸಿಕೊಂಡದ್ದು ಮಾತ್ರ ಅವರ ಅಧಿಕಾರ ವ್ಯಾಮೋಹಕ್ಕೆ ಹಿಡಿದ ಕನ್ನಡಿಯಾಗಬಹುದೆ? ಇದು ಚರ್ಚೆಗೆ ಬಿಟ್ಟ ವಿಚಾರ.

---

43. ಸತ್ಯವಾದಿ ಪತ್ರಿಕೆ : ದಿನಾಂಕ : 14-03-1951.
44. ಕೋಣಂದೂರು ವೆಂಕಪ್ಪಗೌಡ : ನವ-ಮೈಸೂರು ಶಿಲ್ಪಿ, ಪುಟ-109.
45. ಕೋಣಂದೂರು ವೆಂಕಪ್ಪಗೌಡ : ನವ-ಮೈಸೂರು ಶಿಲ್ಪಿ, ಪುಟ-110.

ದಿವಾನ್ ಎ.ಆರ್. ಮೊದಲಿಯಾರ್ ನೇಮಕ ಸಮಸ್ಯೆ

1947 ಅಕ್ಟೋಬರ್ 24ರಂದು ಮೈಸೂರು ಮಹಾರಾಜ ಜಯಚಾಮರಾಜ ಒಡೆಯರ್ ಆಶ್ರಯದಲ್ಲಿ, ನೂತನ ಮೈಸೂರು ರಾಜ್ಯದ ರಚನೆ, ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಮುಖ್ಯಮಂತ್ರಿ ಹಾಗೂ ಇತರರು ಸಚಿವರುಗಳಾಗಿ ಅಧಿಕಾರವನ್ನು ವಹಿಸಿಕೊಳ್ಳುವುದರೊಂದಿಗೆ ಮೊದಲನೆಯ ಪ್ರಜಾಸರ್ಕಾರ ಅಥವಾ ಜವಾಬ್ಧಾರಿ ಸರ್ಕಾರದ ಸ್ಥಾಪನೆಗೆ ನಾಂದಿ ಹಾಡಿದರು. ಇದನ್ನು ಮಹಾರಾಜರು 1947 ಅಕ್ಟೋಬರ್ 27ರಂದು ಅನುಮೋದಿಸಿದ್ದರು.

1947 ಆಗಸ್ಟ್ 15ರಂದು ಭಾರತ, ಬ್ರಿಟಿಷರ ದಾಸ್ಯದಿಂದ ಹೊರಬಂದು ಸ್ವತಂತ್ರಗೊಂಡ ಆ ನಂತರ, ಮೈಸೂರು ಸಂಸ್ಥಾನದಲ್ಲಿ ತಾತ್ಕಾಲಿಕ ಜವಾಬ್ಧಾರಿ ಸರ್ಕಾರ ರಚನೆಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿ ಅವರು ಮೈಸೂರು ಸರ್ಕಾರದ ಮೇಲೆ ಮಾತುಕತೆಗಾಗಿ ಒತ್ತಡ ಹೇರಲಾರಂಭಿಸಿದ್ದರ ಪರಿಣಾಮವಾಗಿ ಮಹಾರಾಜ ಜಯಚಾಮರಾಜ ಒಡೆಯರ್ ಅವರು ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರಿಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಜೊತೆಗೆ ಮಾತುಕತೆ ಆರಂಭಿಸಲು ಸೂಚಿಸಿದ್ದರು. ಅದರಂತೆ ಇವರಿಬ್ಬರ ನಡುವೆ ಹಲವಾರು ಸುತ್ತಿನ ಮಾತುಕತೆಗಳು ದಿನಾಂಕ : 1947 ಆಗಸ್ಟ್ 17ರಿಂದ 1947 ಅಕ್ಟೋಬರ್ 11ರವರೆಗೆ ನಡೆದವು. ಈ ಮಾತುಕತೆಗಳ ನಡುವೆಯೇ ಜಯಚಾಮರಾಜ ಒಡೆಯರ್ ಅವರು ಜವಾಬ್ದಾರಿ ಸರ್ಕಾರ ರಚನೆಗೆ ಸಂಬಂಧಿಸಿದಂತೆ ಜನತೆಯ ಪರವಾಗಿ ಮೂರು ಘೋಷಣೆಗಳನ್ನು ಸಹ ಹೊರಡಿಸಿದ್ದರು.

1947ರ ಅಕ್ಟೋಬರ್ 12ರಂದು ಕೆ.ಸಿ. ರೆಡ್ಡಿ ಅವರು ಜಯಚಾಮರಾಜ ಒಡೆಯರ್ ಅವರನ್ನು ಮೈಸೂರು ಅರಮನೆಯಲ್ಲಿ ಭೇಟಿಯಾದಾಗ ಮಹಾರಾಜರು ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ರಚಿಸಲು ತಿಳಿಸಿದರು. ಅದರಂತೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರು 1947ರ ಅಕ್ಟೋಬರ್ 11ರಂದು ನಡೆದ ಒಪ್ಪಂದವನ್ನು ಅಂಗೀಕರಿಸಿರುವುದಾಗಿ ತಿಳಿಸಿದರು. ಅದರಂತೆ "ದಿವಾನರಲ್ಲದೆ ಅರು ಜನ ಮಂತ್ರಿಗಳು ಕಾಂಗ್ರೆಸ್‌ನಿಂದಲೂ, ಮೂರುಜನ ಮಂತ್ರಿಗಳು (ಕಾಂಗ್ರೆಸ್ಸೇತರ) ಸರ್ಕಾರದಿಂದ ನೇಮಿತ ರಾದವರೂ ಸೇರಿ ಸರ್ಕಾರವನ್ನು ಸ್ಥಾಪಿಸಬೇಕಾಗಿ ಇತ್ಯರ್ಥವಾಗಿತ್ತು. ಈ ಸರ್ಕಾರವು ಮಹಾರಾಜ ಜಯಚಾಮರಾಜ ಒಡೆಯರ್ ಅವರ ಆಶ್ರಯದಲ್ಲಿ ನಡೆಯಬೇಕಾಗಿಯೂ ಒಪ್ಪಿಗೆಯಾಗಿತ್ತು".[46]

---

46. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1947–48.

1947ರ ಆಗಸ್ಟ್ 15 ರಿಂದ 1947ರ ಅಕ್ಟೋಬರ್ 24ರವರೆಗೆ ಭಾರತ ಸ್ವತಂತ್ರಗೊಂಡು ಸುಮಾರು ಎಪ್ಪತ್ತು ದಿವಸಗಳ ನಂತರ ಮೈಸೂರು ರಾಜ್ಯದಲ್ಲಿ ಕೆ.ಸಿ. ರೆಡ್ಡಿ ಮುಖ್ಯಮಂತ್ರಿ ಆಗುವುದರೊಂದಿಗೆ 'ಜವಾಬ್ದಾರಿ ಸರ್ಕಾರ' ಸ್ಥಾಪನೆಯಾಯಿತು.

ಕೆ.ಸಿ. ರೆಡ್ಡಿ ಅವರ ಸರ್ಕಾರ ರಚನೆಯಾಗುತ್ತಿದ್ದಂತೆ ಎದ್ದ ಮೊದಲ ಆಪಾದನೆ ದಿವಾನ್ ಎ.ಆರ್. ಮೊದಲಿಯಾರ್ ಅವರನ್ನು ದಿವಾನರಾಗಿ ಮೈಸೂರು ಜವಾಬ್ದಾರಿ ಸರ್ಕಾರದಲ್ಲಿ ಉಳಿಸಿಕೊಂಡಿದ್ದಕ್ಕಾಗಿ ಆಗಿತ್ತು. ಮೈಸೂರು ಪ್ರಜೆಗಳಿಗೆ ಸರ್ಕಾರವನ್ನು ಒಪ್ಪಿಸಲು ವಿಳಂಬ ಮಾಡುವಂತೆ ಮಹಾರಾಜ ಜಯಚಾಮರಾಜ ಒಡೆಯರ್ ಅವರಿಗೆ ಸೂಚಿಸಿದ್ದೆ ದಿವಾನರು, ಆದ್ದರಿಂದ ದಿವಾನರನ್ನು ಸರ್ಕಾರದಲ್ಲಿ ಉಳಿಸಿಕೊಳ್ಳಕೂಡದು, ಜೊತೆಗೆ ಮೈಸೂರಿನಲ್ಲಿಯೇ ನುರಿತು, ಅರಿತವರು ದಿವಾನರಾಗಿದ್ದರೆ ಮೈಸೂರು ರಾಜ್ಯದ ಜನತೆಗೆ ಹೆಚ್ಚು ಪ್ರಯೋಜನವಾಗುತ್ತಿತು. ಅಲ್ಲದೆ ಮೈಸೂರಿನವರಿಗೆ ಹೆಚ್ಚು ಹೊರಗಿನವರನ್ನು ತಂದರೆ ಮೈಸೂರಿನವರ ಆತ್ಮಗೌರವ ಕುಂದಾಗುವುದೆಂದು ಆಪಾದನೆಯಾಗಿತ್ತು.

ಮೈಸೂರು ಸರ್ಕಾರದಲ್ಲಿ ಸಚಿವರ ಸ್ಥಾನಸಿಗದೆ, ಅಧಿಕಾರಕ್ಕಾಗಿ ಹಂಬಲಿಸುತ್ತಿದ್ದ ಕೆಲವು ಮೈಸೂರು ಕಾಂಗ್ರೆಸ್ ನಾಯಕರು ತಮ್ಮ ಬೆಂಬಲಿಗರೊಂದಿಗೆ ಪ್ರತ್ಯಕ್ಷವಾಗಿ ದಿವಾನ್ ಎ.ಆರ್. ಮೊದಲಿಯಾರ್ ನೇಮಕವನ್ನು ಹಾಗೂ ಪರೋಕ್ಷವಾಗಿ ಕೆ.ಸಿ. ರೆಡ್ಡಿ ಸರ್ಕಾರವನ್ನು ಟೀಕಿಸಿ ಚಳವಳಿ ಪ್ರಾರಂಭಿಸಿದ್ದರು. ಕಾರಣ ಕಾಂಗ್ರೆಸ್ಸಿಗರು ದಿವಾನ್ ಎ.ಆರ್. ಮೊದಲಿಯಾರ್ ಅವರು ಚುನಾಯಿತ ಸದಸ್ಯರಲ್ಲದಿದ್ದುದರಿಂದ ದಿವಾನರಾಗಿ ಉಳಿದುದು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದ್ದಿತು. ಪ್ರಜೆಗಳಿಗೆ ಅವರು ಜವಾಬ್ದಾರರಾಗಿರಲಿಲ್ಲ. ಇದೇ ಲೋಪವು ಕಾಂಗ್ರೆಸ್ಸೇತರ ಮೂವರು ಮಂತ್ರಿಗಳಾದ ಡಿ.ಎಚ್. ಚಂದ್ರಶೇಖರಯ್ಯ, ಪಾಮಡಿ ಸುಬ್ಬರಾಮ ಶೆಟ್ಟಿ ಮತ್ತು ಮಹಮದ್ ಷರೀಫ್ ಅವರುಗಳಿಗೂ ಅನ್ವಯಿಸುತ್ತಿತ್ತು. ಇದನ್ನೇ ಕಾರಣವಾಗಿಟ್ಟುಕೊಂಡು ಆಗಿದ್ದ ಒಪ್ಪಂದದ ಪಾವಿತ್ರತೆಯನ್ನು ಲಕ್ಷಿಸದೆ ಕಾಂಗ್ರೆಸ್ಸಿನಲ್ಲಿ ಕೆಲವರು ಇವರುಗಳನ್ನು ತೆಗೆಯುವುದಕ್ಕೂ, ಬೇರೆ ಕಾಂಗ್ರೆಸ್ಸಿಗರನ್ನು ಸರ್ಕಾರದಲ್ಲಿ ನೇಮಿಸುವುದಕ್ಕೂ ಆಗಾಗ ಕೊನೆಮೊದಲಿಲ್ಲದ ಚಳವಳಿ, ಸನ್ನಾಹಗಳನ್ನು ಮಾಡುತ್ತಿದ್ದರು. ಇದು ಕೆ.ಸಿ. ರೆಡ್ಡಿ ಅವರಿಗೆ ತುಂಬಾ ಮುಜುಗರ ಉಂಟು ಮಾಡುತ್ತಿತ್ತು.

ಒಪ್ಪಂದದಂತೆ "...... ಹುದ್ದೆಯಲ್ಲಿ ಮುಂದುವರೆಯುವ ದಿವಾನರೊಡನೆ ಹೊಸಮಂತ್ರಿಮಂಡಲವು ಸಚಿವ ಸಂಪುಟವಾಗಿ ಕರ್ತವ್ಯ ನಿರ್ವಹಿಸುವುದು ಮತ್ತು ಎಲ್ಲ ವಿಷಯಗಳಲ್ಲೂ ಜಂಟಿ ಜವಾಬ್ದಾರಿಯ ಆಧಾರದ ಮೇಲೆ ವ್ಯವಹರಿಸುವುದು ಹಾಗೂ ಸಂಪುಟದ ನಿರ್ಧಾರಗಳನ್ನು ಓಟುಗಳ ಬಹುಮತದಿಂದ ಕೈಗೊಳ್ಳುವುದು" ಎಂಬುದಾಗಿತ್ತು.[47] ದಿವಾನರ ನೇಮಕ ಮತ್ತು ಸಂಪುಟದಲ್ಲಿ ಮಂತ್ರಿಗಳ ಸಂಖ್ಯೆಗೆ

47. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1947–48.

ಸಂಬಂಧಿಸಿದಂತೆ ಡಿ.ವಿ.ಜಿ. ಅವರು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರಿಗೆ ಪತ್ರ ಬರೆದು "ಒಂಬತ್ತು ಮಂತ್ರಿಗಳಿರುವುದು ಹೆಚ್ಚೆಂದೂ, ದಿವಾನರ (ಎ.ಆರ್. ಮೊದಲಿಯಾರ್) ಪದವಿಯನ್ನು ಮುಂದುವರೆಸುತ್ತಿರುವುದು ಅಷ್ಟು ಸಮಾಧಾನಕರವಾದ ವಿಷಯವಲ್ಲವೆಂದೂ, ಮುಂದೆ ಮೈಸೂರಿನ ಸಂವಿಧಾನ ರಚನೆಯಾಗುವ ಸಂದರ್ಭದಲ್ಲಿ ಇವೆಲ್ಲವೂ ಸರಿಹೋಗಬಹುದೆಂದೂ" ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದರು.[48]

ವೈಯುಕ್ತಿಕವಾಗಿ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ವಿದ್ಯಾವಂತರು, ಬುದ್ಧಿವಂತರು, ರಾಜಕೀಯ ಚತುರರು ಆಗಿದ್ದು ಹಲವಾರು ರಾಜ್ಯದ ಮತ್ತು ರಾಷ್ಟ್ರೀಯ ಕಾಂಗ್ರೆಸ್ ನಾಯಕರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು.

1947ರ ಜನವರಿ 8ರಂದು ಮಹಾರಾಜ ಜಯಚಾಮರಾಜ ಒಡೆಯರ್ ದಿವಾನರಾದ ಎ.ಆರ್. ಮೊದಲಿಯಾರ್ ಅವರನ್ನು ಕುರಿತು "…. ನನ್ನ ದಿವಾನರು ರಾಜಕೀಯ ಸಂವಿಧಾನಗಳ ಬಗ್ಗೆ ಬಹು ಗಮನಾರ್ಹ ತಿಳುವಳಿಕೆಯನ್ನು ಹೊಂದಿದ್ದು, ಅವುಗಳ ಕಾರ್ಯಾನುಷ್ಠಾನದಲ್ಲೂ ಅನುಭವ ಪಡೆದಿರುವವರು. ಭಾರತದ ಇತರ ಭಾಗಗಳಲ್ಲಿನ ವಿದ್ಯಮಾನಗಳನ್ನೂ, ನಡೆದಿರುವ ಚರ್ಚೆಗಳನ್ನೂ ಅವರು ಗಮನದಲ್ಲಿಡು ತ್ತಾರೆ. ಅವರು ನನ್ನ ಪ್ರಜೆಗಳಲ್ಲಿ ಎಲ್ಲ ವರ್ಗಗಳು ಹಾಗೂ ಗುಂಪುಗಳೊಡನೆಯೂ ಸಮಾಲೋಚನೆ ನಡೆಸಿ, ಅವರ ಸಹಾಯ, ಹಿತನುಡಿ ಮತ್ತು ಸಹಕಾರದ ಪ್ರಯೋಜನದೊಡನೆ ತಮ್ಮ ಸಲಹೆಗಳು ಯಾವುದೇ ರೂಪವನ್ನು ತಳೆಯಲಿ ಅವು ನನ್ನ ಹೃದಯದಲ್ಲಿರುವ ಮಹೋದ್ದೇಶವನ್ನು ಅಂದರೆ ಸರ್ವರಿಗೂ ಸಮಾನಾವಕಾಶಗಳನ್ನು ಖಚಿತಪಡಿಸಿ, ತನ್ನ ಪ್ರೀತಿ ಪಾತ್ರ ಪ್ರಜೆಗಳ ಸುರಕ್ಷೆ, ತೃಪ್ತಿ ಹಾಗೂ ಸುಖವನ್ನು ಸಾಧಿಸುವುದನ್ನು ಈಡೇರಿಸುತ್ತವೆಂದು ನಂಬಿದ್ದೇನೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.[49]

ಇನ್ನು ಮೈಸೂರು ಸರ್ಕಾರದಲ್ಲಿ ದಿವಾನರ ನೇಮಕ ಮತ್ತು ಇತರೇ ಕಾಂಗ್ರೆಸ್ಸೇತರ ಮಂತ್ರಿಗಳ ನೇಮಕದಲ್ಲಿ ಮಹಾರಾಜರಿಗೆ ಅವರದೇ ಆದ ಒತ್ತಡಗಳು ಹಾಗೂ ಲೆಕ್ಕಾಚಾರಗಳು ಇದ್ದದ್ದು ಸ್ಪಷ್ಟವಾಗುತ್ತದೆ. ಅದು ಅವರ ವಂಶಪಾರಂಪರ್ಯ ಆಸ್ತಿ-ಪಾಸ್ತಿ ರಕ್ಷಣೆ, ಕುಟುಂಬದವರ ರಕ್ಷಣೆ, ನಿರ್ವಹಣೆ, ಸಿಬ್ಬಂದಿವೆಚ್ಚ, ಸೈನ್ಯದ ನಿರ್ವಹಣೆ ಮತ್ತು ರಕ್ಷಣೆ, ಉದ್ಯೋಗ, ಸಂಬಳ ಇತ್ಯಾದಿಗಳಿಗೆ ಸಂಬಂಧಿಸಿದ್ದಾಗಿತ್ತು. ಇದು ಅಷ್ಟು ಸುಲಭ ಪರಿಹಾರೋ ಪಾಯವೇನೂ ಆಗಿರಲಿಲ್ಲ. ಆ ಕಾರಣಕ್ಕಾಗಿಯೇ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ

48. ಡಿ.ವಿ.ಜಿ. ಕೃತಿ ಶ್ರೇಣೀ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ-1996.
49. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1947-48.

ಕೆ.ಸಿ. ರೆಡ್ಡಿ ಅವರು ಕೂಡ ದಿವಾನರಿಗೂ ಮತ್ತು ನಮಗೂ ಆದ ಒಪ್ಪಂದದ ಬಗ್ಗೆ ಮೈಸೂರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯನ್ನು ಒಪ್ಪಿಸುವಲ್ಲಿ ಬಹಳ ಶ್ರಮಪಟ್ಟಿದ್ದು ಕಂಡು ಬರುತ್ತದೆ. ಇದು ಅನಿವಾರ್ಯವೂ ಕೂಡ ಆಗಿತ್ತು.

ಆದ್ದರಿಂದ ದಿವಾನರ ನೇಮಕ ಮತ್ತು ಕಾಂಗ್ರೆಸ್ಸೇತರ ಮಂತ್ರಿಗಳ ನೇಮಕದಲ್ಲಿ ಮಹಾರಾಜರ ಮತ್ತು ಕೆ.ಸಿ. ರೆಡ್ಡಿ ಅವರ ಒಡಂಬಡಿಕೆಯನ್ನು ಒಪ್ಪಲೇಬೇಕಾಗಿತ್ತು. ಇಲ್ಲಿ ಕಾಂಗ್ರೆಸ್‌ನ ಕೆಂಗಲ್ ಹನುಮಂತಯ್ಯ ಹಾಗೂ ಇತರರ ಹುನ್ನಾರ, ಸನ್ನಾಹ, ಚಳವಳಿಗಳಿಗೆ ಬೆಲೆಯಿಲ್ಲವಾಗಿತ್ತು.

ದಿವಾನ್ ಎ.ಆರ್. ಮೊದಲಿಯಾರ್ ಅವರು ಭಾರತ ಸರ್ಕಾರದ ಆಜ್ಞೆಯಂತೆ 1948ರ ಫೆಬ್ರವರಿ 14 ರಿಂದ 1948ರ ಏಪ್ರಿಲ್ 27ರವರೆಗೆ ಈಗಿನ ಸ್ವಿಟ್ಜರ್‌ಲೆಂಡ್‌ನ ಜಿನೀವಾದಲ್ಲಿ ನಡೆದ INTERNATIONAL MARITIME CONFERENCE- ಅಂತರಾಷ್ಟ್ರೀಯ ಸಾಗರ ಸಂಬಂಧ ಸಮ್ಮೇಳನ ಮತ್ತು INTERNATIONAL FREEDOM OF PRESS CONFERENCE- ಅಂತರಾಷ್ಟ್ರೀಯ ಪತ್ರಿಕಾ ಸ್ವಾತಂತ್ರ್ಯ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸುವುದರ ಮೂಲಕ ತಮ್ಮ ಸಾಮರ್ಥ್ಯವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಕಾರಣವಾಗಿದ್ದು, ಮೈಸೂರು ರಾಜ್ಯದಲ್ಲಿ ದಿವಾನರ ಮಹತ್ವ ಹೆಚ್ಚಾಗಲು ಕಾರಣವಾಯಿತು.[50]

1948ರ ನವೆಂಬರ್‌ನಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನ ಚಿಕ್ಕಮಗಳೂರು ಜಿಲ್ಲೆಯ ಬೀರೂರಿನಲ್ಲಿ ಟಿ. ಸಿದ್ಧಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಮೈಸೂರು ದಿವಾನರ ಪದವಿ ರದ್ದುಗೊಳಿಸುವ ಕುರಿತು ತೀವ್ರವಾದ ಚರ್ಚೆ ನಡೆಯಿತು. ಈ ಚರ್ಚೆಗೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಉತ್ತರಿಸುತ್ತಾ "ಈ ಪ್ರಶ್ನೆಯನ್ನು ಮಂತ್ರಿಮಂಡಲವೂ, ಕಾಂಗ್ರೆಸ್ ನಾಯಕರು ಗಾಢವಾಗಿ ಪರಿಶೀಲಿಸುತ್ತಿರುವುದಾಗಿಯೂ, ಈ ಬಗ್ಗೆ ಸರ್ದಾರ್‌ಪಟೇಲ್ ಮತ್ತು ಇತರ ಪ್ರಮುಖರೊಡನೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿರುವುದಾಗಿಯೂ, ಇದನ್ನು ಆದಷ್ಟು ಬೇಗ ಇತ್ಯರ್ಥಗೊಳಿಸುವುದಾಗಿಯೂ ಹೇಳಿ ಸಮಾಧಾನ ಪಡಿಸಿದ್ದರು."[51]

ಹೀಗೆ 1947ರ ಅಕ್ಟೋಬರ್ 24 ರಿಂದ 1949ರ ಆಗಸ್ಟ್ 06ರವರೆಗೆ ಮೈಸೂರು ರಾಜ್ಯದ ನೂತನ ಮಂತ್ರಿಮಂಡಲದಲ್ಲಿ ದಿವಾನರಾಗಿ ಅಧಿಕಾರ ಸ್ವೀಕಾರ ಮಾಡಿದ ಮೇಲೂ 'ದಿವಾನ್ ಪದವಿ'ಯೆಂಬುದು ಕಾಲೋಚಿತವಾಗುವಂತಿಲ್ಲವಷ್ಟೆ, ಈ ಸಂಬಂಧವನ್ನು

---

50. REPORT ON THE ADMINISTRATIONS OF MYSORE - 1948-49.
51. ಪೌರವಾಣಿ ಪತ್ರಿಕೆ : ದಿನಾಂಕ : 07–11–1950.

ತೊಡೆದು ಹಾಕದೆ ಗತ್ಯಂತರವಿಲ್ಲವಾಯಿತು. ಇದರಿಂದ ದಿವಾನರ ಹುದ್ದೆಯನ್ನು 1949ರ ಆಗಸ್ಟ್ 06ರಲ್ಲಿ ರದ್ದುಗೊಳಿಸಲಾಯಿತು. ಆ ನಂತರ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರೇ ದಿವಾನರ ಪ್ರಕಾರ್ಯಗಳನ್ನು ವಹಿಸಿಕೊಳ್ಳುವ ಮೂಲಕ ದಿವಾನ್ ಹುದ್ದೆಯ ಏವಾದವನ್ನು ಕೊನೆಗಾಣಿಸಿದರು.

ಹೊಸ ಕೈಗಾರಿಕೆಗಳ ಸ್ಥಾಪನೆ ಸಮಸ್ಯೆ

ಮೈಸೂರು ರಾಜ್ಯ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಸರ್ಕಾರವು ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಅನೇಕ ವಿವಿಧಗಳಲ್ಲಿ ಪ್ರಯತ್ನಗಳನ್ನು ಮಾಡಿದೆ. ಬೃಹತ್ ಪ್ರಮಾಣದ ಕೈಗಾರಿಕೆಗಳಿಗೆ ಎಷ್ಟರ ಮಟ್ಟಿಗೆ ಸರ್ಕಾರ ಗಮನಕೊಟ್ಟಿದೆಯೋ, ಅದೇ ರೀತಿ ಗೃಹ ಕೈಗಾರಿಕೆಗಳ ಅಭಿವೃದ್ಧಿಗೂ ಗಮನಕೊಟ್ಟು ಪ್ರಾಮಾಣಿಕ ಪ್ರಯತ್ನ ನಡೆಸಿರುವುದು ಗಮನಾರ್ಹವಾಗಿದೆ.

1948ರ ಆಗಸ್ಟ್ – ಸೆಪ್ಟೆಂಬರ್‌ನಲ್ಲಿ ಮೈಸೂರು ರಾಜ್ಯದಲ್ಲಿ ಕೈಮಗ್ಗಗಳಿಗೆ ನೂಲು ಸರಬರಾಜು ಆಗದೇ ಮಗ್ಗಗಳಿಗೆ ಕೆಲಸವಿಲ್ಲದೆ ಇದ್ದ ಸಂದರ್ಭದಲ್ಲಿ ನೇಯ್ಗೆ ಕೆಲಸಗಾರರ ತೊಂದರೆಯ ಬಗ್ಗೆ ಬೆಂಗಳೂರು ಪುರಸಭೆಯ ಉಪಾಧ್ಯಕ್ಷ ಇ.ಪಿ. ನಂಜಪ್ಪನವರು ಸಮಸ್ಯೆಯ ಬಗ್ಗೆ, ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಜೊತೆ ಚರ್ಚಿಸಿದಾಗ ರೆಡ್ಡಿ ಅವರು ಕೈ ಮಗ್ಗದವರಿಗೆ ಪ್ರಾಪ್ತವಾಗಿರುವ ತೊಂದರೆಯ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಮುಂದೆ ಬರಲಿರುವ ನಿಯಂತ್ರಣದ ವ್ಯವಸ್ಥೆಯಿಂದ ಸ್ವಲ್ಪ ತಡವಾಗಿದೆ. ಇನ್ನೊಂದು ವಾರದೊಳಗಾಗಿ ನೂಲು ತರಿಸಿಕೊಡಲಾಗುವುದೆಂದು ಭರವಸೆ ನೀಡಿದರು'.[52]

ತಮ್ಮ ಭರವಸೆಯಂತೆಯೇ ಕೈ ಮಗ್ಗದವರಿಗೆ ನೂಲು ಪೂರೈಕೆಯಾಗುವಂತೆ ವ್ಯವಸ್ಥೆ ಮಾಡಿದರು. ಈ ಒಂದು ಘಟನೆಯಿಂದಲೇ ರೆಡ್ಡಿಯವರು ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದ್ದರೆಂಬುದು ತಿಳಿದು ಬರುತ್ತದೆ.

ಕೆ.ಸಿ. ರೆಡ್ಡಿ ಅವರು ಒಂದು ಭಾಷಣದಲ್ಲಿ ಸಂಸ್ಥಾನದಲ್ಲಿ ಇಂಟರ್ ಮಿಡಿಯಟ್ ಕಾಲೇಜುಗಳನ್ನು ಹೆಚ್ಚಿಸಿಕೊಂಡು ಹೋಗುವುದರಿಂದ ಏನೂ ಪ್ರಯೋಜನವಿಲ್ಲ. ದೇಶದ ಸಂಪತ್ತನ್ನು ಹೆಚ್ಚಿಸಲು ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಮತ್ತು ಹಳೆಯ ಕೈಗಾರಿಕೆಗಳನ್ನು ವೃದ್ಧಿಗೊಳಿಸುವ ದೃಷ್ಟಿಯಿಂದ ರಾಜ್ಯದಲ್ಲಿ ಸಾಧ್ಯವಿರುವ ಕಡೆಯಲ್ಲೆಲ್ಲ ಟೆಕ್ನಿಕಲ್ ಕಾಲೇಜುಗಳನ್ನು ಸ್ಥಾಪಿಸುವುದು ಒಳ್ಳೆಯದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[53]

---

52. ಸತ್ಯವಾದಿ ಪತ್ರಿಕೆ : ದಿನಾಂಕ : 27–09–1948.
53. ಜೀರಗೆ ಕಟ್ಟೆ ಬಸವಪ್ಪ(ಸಂ): ಗ್ರಾಮಾಭ್ಯುದಯ ಮೈಸೂರು, ಸಂ–1, ಸಂಚಿಕೆ–2, ಪುಟ–650.

ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಮಾತನಾಡುತ್ತಾ "ಸಂಸ್ಥಾನದಲ್ಲಿ 'ಸೈಕಲ್ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸುವ ವಿಚಾರ ಸರ್ಕಾರ ತೀವ್ರಲೋಚನೆಯಲ್ಲಿದೆ. ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸಂಸ್ಥಾನದಲ್ಲೇ ಇರುವುದು ಈ ಉದ್ಯಮಕ್ಕೆ ತುಂಬಾ ಸಹಕಾರಿಯಾಗಿದೆ. ದಿನವೊಂದಕ್ಕೆ ಎರಡು ಸಾವಿರ ಸೈಕಲ್ ತಯಾರಿಸಬಹುದಾದ ಕಾರ್ಖಾನೆ ಸ್ಥಾಪಿಸಬೇಕೆಂದು ಸರ್ಕಾರದ ಆಸೆ. ವಿದೇಶಿಯಾತ್ರೆ ಮಾಡುತ್ತಿರುವ ಕೈಗಾರಿಕಾ ಮಂತ್ರಿ ಹೆಚ್.ಸಿ. ದಾಸಪ್ಪನವರು ಹಿಂತಿರುಗುತ್ತಲೇ ಯೋಗ್ಯಕ್ರಮ ತೆಗೆದುಕೊಳ್ಳಲಾಗುವುದು" ಎಂದು ಹೇಳಿದರು.[54]

ಈ ಹೇಳಿಕೆ ನೀಡಿದ ಮರುದಿನವೇ ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೋತ್ತರ ಸಮಯದಲ್ಲಿ ಕೆ.ಸಿ. ರೆಡ್ಡಿ ಅವರು 'ಮೈಸೂರು ರಾಜ್ಯದಲ್ಲಿ 'ರೇಯಾನ್ ಕೈಗಾರಿಕೆ' ಸ್ಥಾಪಿಸಬೇಕೆಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದೂ, ಇದನ್ನೂ ರಾಜ್ಯದಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಿದರೆ ಕೈಗಾರಿಕೆಯ ಬಂಡವಾಳದ ಶೇಕಡ 20ರಷ್ಟು ಷೇರುಗಳನ್ನು ಸರ್ಕಾರ ವಹಿಸಿಕೊಳ್ಳುವುದೆಂದೂ ತಿಳಿಸಿದರು. ಈ ಯೋಜನೆಯ ಕಾರ್ಯದಲ್ಲಿ ಕೆಲವು ಕೈಗಾರಿಕೋದ್ಯಮಿಗಳು ಸರ್ಕಾರದೊಡನೆ ಸಹಕರಿಸಲು ಮುಂದೆ ಬಂದಿದ್ದಾರೆಂದೂ, ಈಗ ಬೊಂಬಾಯಿ ಮತ್ತು ತಿರುವಾಂಕೂರಿನಲ್ಲಿ ಹೀಗೆ ಎರಡು ರೇಯಾನ್ ಕಾರ್ಖಾನೆಗಳು ಮಾತ್ರ ಭಾರತದಲ್ಲಿ ಇವೆ. ಇದರಲ್ಲೊಂದು 5 ಟನ್ನು ಕಾರ್ಖಾನೆ, ಮತ್ತೊಂದು 10 ಟನ್ನುಗಳ ಕಾರ್ಖಾನೆ. ಭಾರತಕ್ಕೆ ಬೇಕಾಗಿರುವುದು ದಿನವೊಂದಕ್ಕೆ 50 ರಿಂದ 70 ಟನ್ನುಗಳಷ್ಟು ರೇಯಾನ್ ಮುಂದೆ ದಿನಕ್ಕೆ 100 ಟನ್ನುಗಳಷ್ಟು ಬೇಕಾಗಬಹುದೆಂದು ನಿರೀಕ್ಷಿಸಲಾಗಿದೆ. ಆದುದರಿಂದ ಇನ್ನೂ 5–6 ರೇಯಾನ್ ಕಾರ್ಖಾನೆಗಳ ಅಗತ್ಯತೆ ಇದೆಯೆಂಬುದು ಭಾರತ ಸರ್ಕಾರದ ಅಭಿಪ್ರಾಯ. ಮೈಸೂರಿನಲ್ಲಿ ಬೇಕಾದಷ್ಟು ಅರಣ್ಯವು ಇರುವುದರಿಂದ ರೇಯಾನ್ ಕಾರ್ಖಾನೆಗಳಿಗೆ ಕಚ್ಚಾಮೂಲ ಬೇಕಾದಷ್ಟು ಸಿಕ್ಕುತ್ತದೆ. 5 ಟನ್ನು ಕಾರ್ಖಾನೆಗೆ 3 ಕೋಟಿ ರೂ. ವೆಚ್ಚವಾಗುತ್ತದೆ. 10 ಟನ್ನು ಕಾರ್ಖಾನೆಗೆ 10 ಕೋಟಿ ರೂ. ಬೇಕಾಗುತ್ತದೆ. ಮೈಸೂರಿನಲ್ಲಿ ಎಷ್ಟು ಟನ್ನುಗಳ ಕಾರ್ಖಾನೆ ಸ್ಥಾಪಿಸಬೇಕೆಂಬುದು ಕೈಗಾರಿಕಾ ಮಂತ್ರಿ ಹೆಚ್.ಸಿ. ದಾಸಪ್ಪನವರು ವಿದೇಶ ಪ್ರವಾಸದಿಂದ ಹಿಂದಿರುಗಿದ ನಂತರ ತೀರ್ಮಾನಿಸಲಾಗುವುದು' ಎಂದು ಸ್ಪಷ್ಟಪಡಿಸಿದರು.[55]

---

54. ಪೌರವಾಣಿ ಪತ್ರಿಕೆ : ದಿನಾಂಕ : 11–01–1949.
55. ಪೌರವಾಣಿ ಪತ್ರಿಕೆ : ದಿನಾಂಕ : 12–01–1949.

1949ರ ಜನವರಿ 18ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಸರ್ಕಾರದ ಕೈಗಾರಿಕಾ ನೀತಿಯನ್ನು ನ್ಯಾಯವಿಧಾಯಕ ಸಭೆಯಲ್ಲಿ ವಿವರಿಸುತ್ತಾ, 'ಈಗಿನ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಹೊಸ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದೇ ಸರ್ಕಾರದ ಉದ್ದೇಶವಾಗಿದೆ. ಕೆಲವು ಕಾರ್ಮಿಕ ಹಿತಸಾಧನ ಶಾಸನಗಳ ಬಗೆಗೆ ಕೈಗಾರಿಕಾ ನಿರತರು ಆತಂಕ ವ್ಯಕ್ತಪಡಿಸಿ ಅತೃಪ್ತಿ ಸೂಚಿಸಿದ್ದಾರೆ. ಆದರೂ ಸರ್ಕಾರದ ಕೈಗಾರಿಕಾ ನೀತಿಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಇದನ್ನೇ ಮುಂದುವರೆಸಬೇಕೆಂದು ನಿರ್ಧರಿಸಿದ್ದೇವೆ. ಮೈಸೂರು ಕೈಗಾರಿಕಾ ಕ್ಷೇತ್ರದಲ್ಲಿ ಅಗ್ರಸ್ಥಾನ ಪಡೆಯಬೇಕೆಂಬುದೇ ನಮ್ಮ ಉದ್ದೇಶ' ಎಂದರು.

ನಂತರ 'ಬೆಳ್ಳೂರು ಚಿನ್ನದ ಗಣಿಗಳಿಗಾಗಿ ಒಂದು ಲಕ್ಷರೂ. ಕೊಡಬೇಕಾಗಿದೆ. ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಶ್ರೀ ಶಂಕರ ಟೆಕ್ಸ್‌ಟೈಲ್ ಗಿರಣಿಗಳಿಗೆ ಹತ್ತು ಲಕ್ಷ ರೂ. ಸಾಲ ಕೊಟ್ಟಿದ್ದೇವೆ. ಇದು ಶೇಕಡ 3 ಬಡ್ಡಿಯಂತೆ ಕೇವಲ ಒಂದು ವರ್ಷದ ಅಲ್ಪಕಾಲಾವಧಿಯ ಸಾಲ. ಈ ಗಿರಣಿಯು ಆರ್ಥಿಕ ಸದೃಢತೆಯ ಬಗ್ಗೆ ಸಂದೇಹ ಪಡಬೇಕಾಗಿಲ್ಲ. ಇಂತಹ ಸಂದೃಢವಾದ ಸಂಸ್ಥೆಗಳು ಭಾರತದಲ್ಲಿ ಲಭಿಸುವುದು ಅಪರೂಪ. ಇಂತಹ ಸಂಸ್ಥೆಗಳಿಗೆ ಸಹಾಯ ಮಾಡದಿದ್ದರೆ ಮೈಸೂರಿನವರಲ್ಲದವರು ಬಂದು ಇಲ್ಲಿನ ವಾಣಿಜ್ಯವನ್ನು ಹತೋಟಿ ಪಡಿಸಿಕೊಳ್ಳುತ್ತಿದ್ದರು. ಮೈಸೂರಿನಲ್ಲೂ ಇಂಡಸ್ಟ್ರಿಯಲ್ ಕಾರ್ಪೋರೇಷನ್‌ನ್ನು ಸ್ಥಾಪಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಕೈಗಾರಿಕೋದ್ಯಮಗಳಿಗೆ ಹಣ ಸಹಾಯ ಮಾಡುವ ಬಗ್ಗೆ ಪಕ್ಷಪಾತವಿಲ್ಲ' ಎಂದು ಹೇಳಿದರು.[56]

ಮೈಸೂರು ವಾಣಿಜ್ಯ ಸಂಘದ 34ನೆಯ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು, ಸಂಘದ ಅಧ್ಯಕ್ಷರಾದ ವೈ. ಗೋಪಾಲಕೃಷ್ಣ ಶೆಟ್ಟರು ಪ್ರಸ್ತಾಪಿಸಿದ ಅನೇಕ ಸಮಸ್ಯೆಗಳನ್ನು ಕುರಿತು ಮಾತನಾಡಿ "ಮಂತ್ರಿಮಂಡಲ ರಚನೆಯು ಗಜಗರ್ಭವಾದುದೇನೋ ನಿಜವಾದರೂ ಮತ್ತು ಕೆಲವೆಡೆಗಳಲ್ಲಿ ತೃಪ್ತಿ ಇಲ್ಲದಿದ್ದರೂ ಈಗ ಆಗಿರುವುದು ಬಹುಜನರಿಗೆ ಸಮ್ಮತವಾಗಿದೆಯೆಂದೇ ನನ್ನ ಭಾವನೆ. ಮಂತ್ರಿಮಂಡಲದಲ್ಲಿ ವಾಣಿಜ್ಯಕ್ಷೇತ್ರದವರು ಯಾರೂ ಇಲ್ಲದಿರುವುದರ ಕೊರತೆಯನ್ನು ನಾನು ಬಲ್ಲೆ. ಅಂತಹವರೊಬ್ಬರನ್ನು ಉಳಿಸಿಕೊಳ್ಳಬೇಕೆಂದು ನನ್ನ ಅಭಿಪ್ರಾಯವೂ ಆಗಿತ್ತು. ಏಕೆಂದರೆ ವಾಣಿಜ್ಯಕ್ಷೇತ್ರದ ಮಹತ್ವವನ್ನರಿತಿದ್ದೇನೆ. 1945ರಲ್ಲಿ ನಾನೇ ಈ ಕ್ಷೇತ್ರದಲ್ಲೂ ಪ್ರವೇಶಿಸಿದ್ದೆ. ಬ್ರಿಟನ್ನಿಗೆ ಆಗ ಹೋದುದು ಕನ್‌ಫೆಕ್ಷನರಿ ಮತ್ತು ಸೈಕಲ್ ತಯಾರಿಕ

56. ಪೌರವಾಣಿ ಪತ್ರಿಕೆ : ದಿನಾಂಕ : 19–01–1949.

ಕಾರ್ಖಾನೆಗಳನ್ನು ಪ್ರಾರಂಭಿಸುವ ಉದ್ದೇಶದಿಂದ ಎಂಬುವುದು ಅನೇಕರಿಗೆ ಗೊತ್ತೇ ಇದೆ. ಕಾರ್ಮಿಕರ ಸಮಸ್ಯೆಗಳ ಬಗ್ಗೆ ತಯಾರಿಕಗಾರರು ಗಮನಕೊಟ್ಟು, ಕಾರ್ಮಿಕರನ್ನು ತಮ್ಮ ಪಾಲುಗಾರರೆಂಬ ಭಾವನೆ ಬೆಳೆಸಿಕೊಳ್ಳಬೇಕು'[57] ಎಂದು ತಿಳುವಳಿಕೆ ಹೇಳಿದ್ದಾರೆ.

1948ರ ಅಕ್ಟೋಬರ್ 1ರಂದು ಬೆಂಗಳೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ರಸ್ತೆಯಲ್ಲಿರುವ ವ್ಯಾನ್‌ಗಾರ್ಡ್ ವಿಮಾ ಕಂಪನಿಯ ಹೊಸ ಕಟ್ಟಡವನ್ನು ಉದ್ಘಾಟಿಸುತ್ತಾ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು "ದೇಶದ ಅಭ್ಯುದಯವಾಗಲಿಕ್ಕೆ ವಿಮಾ ಕಂಪನಿಗಳೂ, ಬಹಳ ದೊಡ್ಡ ಸಾಧನ ಬ್ಯಾಂಕುಗಳು, ದೊಡ್ಡ ದೊಡ್ಡ ಕೈಗಾರಿಕೆಗಳ ರಾಷ್ಟ್ರೀಕರಣವೂ ಆಗಬೇಕಾದ್ದು ಇದಕ್ಕೆ ಪೂರ್ವಭಾವಿಯಾಗಿ ನಾವು 'ಒತ್ತಾಯ ವಿಮಾ ಪದ್ಧತಿ' ಜಾರಿಗೆ ತರಬೇಕು" ಎಂದು ನುಡಿದರು.[58]

ಮೈಸೂರು ರಾಜ್ಯದ ಗ್ರಾಮಾಭಿವೃದ್ಧಿಯ ಬಗ್ಗೆ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಮಾತನಾಡುತ್ತಾ "ಗ್ರಾಮಗಳೂ ಅವುಗಳ ನಿವಾಸಿಗಳೂ ದೇಶದ ಬೆನ್ನು ಮೂಳೆಯಂತಿರುವ ಸಂಗತಿಯನ್ನು ಎಲ್ಲರೂ ಒಪ್ಪುತ್ತಾರೆ. ಗ್ರಾಮಾಂತರ ಪ್ರದೇಶಗಳು ಎಲ್ಲ ವಿಧಗಳಲ್ಲೂ ಅಭಿವೃದ್ಧಿಯಾಗುವಂತೆ ಮಾಡುವುದಕ್ಕೆ ಹಲವು ಪ್ರಯತ್ನಗಳು ನಡೆದು ನಡೆಯುತ್ತಲೂ ಇವೆ. ಇದಕ್ಕಾಗಿ ಆಗಿಂದಾಗ್ಗೆ ಬೇರೆ ಬೇರೆ ಯೋಜನೆಗಳೂ ತಯಾರಿಸಲ್ಪಟ್ಟು, ಜನ ಜೀವನ ಸಂಬಂಧವಾಗಿ ಅತಿ ಮುಖ್ಯವಾಗಿರುವ ಈ ಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸುವುದಕ್ಕಾಗಿ ಆ ಯೋಜನೆಗಳಂತೆ ಕಾರ್ಯಾರಂಭವು ನಡೆದಿದೆ.

ಆದಾಗ್ಯೂ, ಒಂದಲ್ಲ ಒಂದು ಕಾರಣದಿಂದ ನಿರೀಕ್ಷಿಸಿದ ಫಲಿತಾಂಶಗಳು ಮಾತ್ರ ಗಣನೀಯವಾದ ಪ್ರಮಾಣದಲ್ಲಿ ದೊರೆಯದೆ ಹೋಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸುಧಾರಣೆಗಳೂ, ಅಭಿವೃದ್ಧಿ ಕಾರ್ಯಗಳೂ ಇನ್ನೂ ಅನೇಕ ಬಾಬುಗಳ ಸಂಬಂಧದಲ್ಲಿ ನಡೆಯಬೇಕಾಗಿ ಹಾಗೆಯೇ ಉಳಿದಿವೆ. ಎಷ್ಟೋ ಗ್ರಾಮಗಳಲ್ಲೂ ಚರಂಡಿ ಕಾಮಗಾರಿ ಯೋಜನೆಯನ್ನು ಕೈಗೊಳ್ಳಬೇಕಾಗಿದೆ. ಗ್ರಾಮಗಳಲ್ಲಿ ಅದರಲ್ಲೂ ಅವುಗಳ ಪೈಕಿ ಬಡ ಸ್ಥಿತಿಯಲ್ಲಿರುವವುಗಳಲ್ಲಿ, ಸರಿಯಾದ ವಾಸದ ಮನೆಗಳನ್ನು ಕಟ್ಟಿಸುವ ಕೆಲಸವು ಕೂಡಲೆ ಗಮನಕ್ಕೆ ತೆಗೆದುಕೊಳ್ಳಬೇಕಾದ ವಿಷಯ.

ಗ್ರಾಮ ರಸ್ತೆಗಳು, ಕೆರೆಗಳ ಜೀರ್ಣೋದ್ಧಾರ, ಗ್ರಾಮ ಅರಣ್ಯಗಳನ್ನು ಅಭಿವೃದ್ಧಿ ಪಡಿಸುವುದು, ಶಾಲೆಗಳಿಗೆ ಸರಿಯಾದ ಕಟ್ಟಡಗಳನ್ನೊದಗಿಸುವುದರ ಜೊತೆಗೆ ವಿದ್ಯಾಭ್ಯಾಸಕ್ಕೆ

---

57. ಪೌರವಾಣಿ ಪತ್ರಿಕೆ : ದಿನಾಂಕ : 12–02–1950.
58. ಪೌರವಾಣಿ ಪತ್ರಿಕೆ : ದಿನಾಂಕ : 01–10–1948.

ತಕ್ಕ ಸೌಕರ್ಯಗಳನ್ನು ಕಲ್ಪಿಸುವುದು, ಹಲವಾರು ಗೃಹ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ಅಭಿವೃದ್ಧಿಪಡಿಸುವುದು, ಇತ್ಯಾದಿ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಗ್ರಾಮಾಭಿವೃದ್ಧಿಗೆ ಸರ್ಕಾರದಿಂದ ಒಂದು ಹೊಸ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಈ ಯೋಜನೆಯನ್ನು ಬಹುಮಟ್ಟಿಗೆ ಸರ್. ಎಂ. ವಿಶ್ವೇಶ್ವರಯ್ಯನವರ 'ಜಿಲ್ಲಾ ಅಭಿವೃದ್ಧಿಯ ಯೋಜನೆ' ರೀತಿಯಲ್ಲಿಯೇ ರಚಿಸಲಾಗಿದೆ. ಪ್ರತಿಯೊಂದು ಪ್ರದೇಶದ ಜನರೂ ತಮ್ಮ ಶಕ್ತಿ, ಸಾಮರ್ಥ್ಯಗಳನ್ನು ಉತ್ಸಾಹದಿಂದ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುವಂತೆ, ಅವರಿಗೆ ಪ್ರಾತಿನಿಧ್ಯವಿರುವ ಗ್ರಾಮಾಭಿವೃದ್ಧಿ ಸಮಿತಿಗಳು ಬಹಳ ಶೀಘ್ರದಲ್ಲೇ ನೇಮಕವಾಗಲಿವೆ. ಅಲ್ಲದೆ ನಾನಾ ವಿಧಗಳಲ್ಲಿಯೂ ಗ್ರಾಮ ಸುಧಾರಣೆಯೂ ಮತ್ತು ಗ್ರಾಮಾಭಿವೃದ್ಧಿಯು ನಡೆಯುವುದಕ್ಕೆ ಬೇಕಾದ ಕಾರ್ಯಕ್ರಮಗನ್ನು ಕೈಗೊಳ್ಳುವುದಕ್ಕೆ ಒಂದು ಸಾಧನವೂ ಸಹ ಏರ್ಪಡುವುದರಲ್ಲಿದೆ.

ಆಹಾರ, ಬಟ್ಟೆ, ಸೀಮೆಎಣ್ಣೆ, ಕಬ್ಬಿಣ, ಉಕ್ಕು, ಗೊಬ್ಬರ, ವ್ಯವಸಾಯದ ಉಪಕರಣಗಳ ಸರಬರಾಜು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದವರಿಗೆ ತಿಳಿಸುವ ಕೆಲಸವನ್ನು ಈ ಗ್ರಾಮಾಭಿವೃದ್ಧಿ ಸಮಿತಿಗಳಿಗೆ ವಹಿಸಿಕೊಡಲಾಗುತ್ತದೆ. ಈ ಹೊಸ ನೀತಿಯು ಏರ್ಪಟ್ಟ ಮೇಲೆ, ಗ್ರಾಮಸ್ಥರ ಸ್ಥಿತಿಯನ್ನು ಉತ್ತಮಗೊಳಿಸುವ ವಿವಿಧ ರೀತಿಯ ಉದ್ದೇಶಗಳಿಗಾಗಿ ಕೊಡಲಾಗುತ್ತಿರುವ ಹಣದ ಸಹಾಯದಿಂದ, ಗ್ರಾಮಾಭಿವೃದ್ಧಿಯು ಬಹಳ ಬೇಗ ಬೇಗನೆ ನಡೆಯುವ ಭರವಸೆ ಇದೆ"[59] ಎಂದಿದ್ದಾರೆ. ಹೀಗೆ ಸರ್ಕಾರದ ಯೋಜನೆಗಳನ್ನು ಪೂರ್ಣವಾಗಿ ಸದಸ್ಯರ ಮುಂದೆ ತೆರೆದಿಟ್ಟು ಟೀಕಾಕಾರರ ಬಾಯಿ ಮುಚ್ಚಿಸಿರುವುದು ಕಂಡು ಬರುತ್ತದೆ.

ಮೈಸೂರು ಸೈನ್ಯದ ವಿಲೀನ ಪ್ರಕ್ರಿಯೆ ಸಮಸ್ಯೆ

"ಭಾರತದ ಸ್ವಾತಂತ್ರ್ಯ ನಂತರವೂ ತನ್ನ ಸ್ವತಃ ಸೈನ್ಯವನ್ನು ಹೊಂದಿದ್ದ ಮೈಸೂರು ರಾಜ್ಯ 1940ರ ಏಪ್ರಿಲ್‌ನಲ್ಲಿ ತನ್ನ ಸೈನ್ಯವನ್ನು ಭಾರತದ ಸೈನ್ಯದೊಂದಿಗೆ ವಿಲೀನಗೊಳಿಸಲು ಪ್ರಯತ್ನ ನಡೆಸಿತು. ಆದರೆ ಭಾರತ ಸರ್ಕಾರವು ತನ್ನ ಸೈನ್ಯವನ್ನು ಸ್ವಲ್ಪ ಮಟ್ಟಿಗೆ ಕಡಿತಗೊಳಿಸಲು ಯೋಚಿಸುತ್ತಿದ್ದುದರಿಂದ ಹಲವಾರು ವರ್ಷಗಳಿಂದ ರಾಜ್ಯದ ರಕ್ಷಣೆಗೋಸ್ಕರ ಸೇವೆ ಸಲ್ಲಿಸಿದ್ದ ಸೈನಿಕರು ನಿರುದ್ಯೋಗಿಗಳಾಗುವ ಭೀತಿಯುಂಟಾಯಿತು. ಈ ಸಂದರ್ಭದಲ್ಲಿ

59. ಜೀರಗೆ ಕಟ್ಟೆ ಬಸವಪ್ಪ(ಸಂ): ಗ್ರಾಮಾಭ್ಯುದಯ ಮೈಸೂರು, ಸಂ-1, ಸಂಚಿಕೆ-10, ಪುಟ-590.

ಕೆ.ಸಿ. ರೆಡ್ಡಿ ಅವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಮೈಸೂರು ಸೈನ್ಯವು ಹಿಂದೆ ರಾಜ್ಯಕ್ಕೆ ಸಲ್ಲಿಸಿದ್ದ ಸೇವೆಯನ್ನು ಪರಿಗಣಿಸಿ ಅವರನ್ನು ಮಾನವೀಯತೆಯಿಂದ ನೋಡಿ ಕೊಳ್ಳಬೇಕು. ಅವರನ್ನು ಭಾರತದ ಸೈನ್ಯಕ್ಕೆ ಸೇರಿಸಿಕೊಳ್ಳಬೇಕು, ಅದು ಅಸಾಧ್ಯವಾದರೆ ಅವರಿಗೆ ಸೂಕ್ತವಾದ ಕೆಲಸವನ್ನು ಕೊಡಬೇಕು ಎಂದು ಒತ್ತಾಯಿಸಿದರು. ಕೆ.ಸಿ. ರೆಡ್ಡಿ ಅವರ ಒತ್ತಾಯಕ್ಕೆ ಮಣಿದ ಕೇಂದ್ರ ಸರ್ಕಾರ ವಿಸರ್ಜಿಸಲಾದ ಮೈಸೂರಿನ ಎರಡು ಸಾವಿರ ಸೈನಿಕರಲ್ಲಿ ಒಂದು ಸಾವಿರದ ಐನೂರು ಸೈನಿಕರಿಗೆ ವಿವಿಧ ಉದ್ಯೋಗಗಳನ್ನು ಕಲ್ಪಿಸಲಾಯಿತು. ಉಳಿದ ಐನೂರು ಸೈನಿಕರಿಗೆ ಬೇರೆ ರೀತಿಯ ಪರಿಹಾರೋಪಾಯಗಳನ್ನು ಒದಗಿಸಲಾಯಿತು".[60]

ಮಂತ್ರಿಮಂಡಲದ ಪುನರ್ ರಚನೆ ಸಮಸ್ಯೆ

1949ರಲ್ಲಿ ರಾಜ್ಯಾಂಗ ನಿಯಮಗಳಲ್ಲಾದ ಬದಲಾವಣೆಯಂತೆ ಇನ್ನು ಮುಂದೆ ಮಂತ್ರಿಮಂಡಲ ಎಂದರೆ ಒಬ್ಬ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳು. ಮುಖ್ಯಮಂತ್ರಿಯನ್ನು ಮಹಾರಾಜರು ಆಯ್ಕೆ ಮಾಡಿ ಅವರ ಸಲಹೆಯಂತೆ ಮಂತ್ರಿಗಳನ್ನು ಮಹಾರಾಜರು ನೇಮಕ ಮಾಡುತ್ತಿದ್ದರು. ಮಂತ್ರಿಗಳು ಮಹಾರಾಜರ ಒಪ್ಪಿಗೆ ಇರುವ ತನಕ ಹುದ್ದೆಯಲ್ಲಿರುವವರು ಈ ನಿಯಮಗಳಂತೆ 1949ರ ಆಗಸ್ಟ್ 7ರಂದು ದಿವಾನರ ಹುದ್ದೆ ರದ್ದುಪಡಿಸಲಾಯಿತು. ಅಲ್ಲದೆ ಮೈಸೂರು ರಾಜ್ಯವನ್ನು 'B' ವಿಭಾಗದ ರಾಜ್ಯಗಳ ಪಟ್ಟಿಯಲ್ಲಿ ಸೇರಿಸಲಾಯಿತು. 1949ರ ನವೆಂಬರ್ 25ರಂದು ಮಹಾರಾಜರು, ಭಾರತದ ರಾಜ್ಯಾಂಗವನ್ನು ಮೈಸೂರು ರಾಜ್ಯಕ್ಕೆ ಅಳವಡಿಸಿಕೊಳ್ಳುವ ಘೋಷಣೆ ಹೊರಡಿಸಿದರು. ಇದರಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯನ್ನು 1949ರ ಡಿಸೆಂಬರ್ 15ರಂದು ವಿಸರ್ಜಿಸಿ ರಾಜ್ಯಾಂಗ ರಚನಾ ಸಭೆಯನ್ನೇ ತಾತ್ಕಾಲಿಕ ಶಾಸನಸಭೆಯನ್ನಾಗಿ ಮಾಡಲಾಯಿತು.[61]

1950ರ ಜನವರಿ 26ರಂದು ಭಾರತ ಸರ್ಕಾರ ಅಂಗೀಕರಿಸಿದ ಹೊಸ ಸಂವಿಧಾನವನ್ನು ಮೈಸೂರು ರಾಜ್ಯವು ಅಳವಡಿಸಿಕೊಂಡಿತು. ಇದರಿಂದ ಹಿಂದಿನ ತಾತ್ಕಾಲಿಕ ಕೆ.ಸಿ. ರೆಡ್ಡಿ ಅವರ ಮಂತ್ರಿಮಂಡಲ ರಾಜೀನಾಮೆ ನೀಡಿತು. ನಂತರ ಹೊಸ ಮಂತ್ರಿಮಂಡಲ ಕೆ.ಸಿ. ರೆಡ್ಡಿ ಅವರ ನಾಯಕತ್ವದಲ್ಲಿಯೇ ರಚನೆಯಾಯಿತು. ಈ ಮಂತ್ರಿಮಂಡಲಕ್ಕೆ ಹೊಸದಾಗಿ ಟಿ. ಸಿದ್ದಲಿಂಗಯ್ಯ ಅವರು 1950 ಫೆಬ್ರವರಿ 6ರಂದು ಸೇರ್ಪಡೆಗೊಂಡರು.

---

60. ತಾಯಿನಾಡು : ದಿನಾಂಕ : 06-05-1949.
61. ನಡಾವಳಿಗಳು :ಮೈಸೂರು ಪ್ರಜಾಪ್ರತಿನಿಧಿ ಸಭೆ – 1949-50.

1. ಕೆ.ಸಿ. ಚಂಗಲರಾಯರೆಡ್ಡಿ – ಮುಖ್ಯಮಂತ್ರಿ
2. ಹೆಚ್.ಸಿ. ದಾಸಪ್ಪ – ಆರ್ಥಿಕ ಮತ್ತು ಕೈಗಾರಿಕ ಖಾತೆ
3. ಕೆ.ಟಿ. ಭಾಷ್ಯಂ ಅಯ್ಯಂಗಾರ್ – ನ್ಯಾಯಾಂಗ ಮತ್ತು ಕಾರ್ಮಿಕ ಖಾತೆ
4. ಟಿ. ಸಿದ್ಧಲಿಂಗಯ್ಯ – ವಿದ್ಯಾಭ್ಯಾಸ ಮತ್ತು ಆರೋಗ್ಯ ಖಾತೆ
5. ಎಚ್. ಸಿದ್ಧಯ್ಯ – ರೆವಿನ್ಯೂ ಮತ್ತು ಎಕ್ಸೈಜ್ ಖಾತೆ
6. ಟಿ. ಮರಿಯಪ್ಪ – ಗೃಹ ಖಾತೆ
7. ಆರ್. ಚೆನ್ನಿಗರಾಮಯ್ಯ – ಸ್ಥಳೀಯ ಸಂಸ್ಥೆಗಳ ಖಾತೆ

ನೂತನ ಮಂತ್ರಿಮಂಡಲವನ್ನು, ಕೆ.ಸಿ. ರೆಡ್ಡಿ ಅವರನ್ನು ಸರ್ದಾರ್ ಪಟೇಲ್ ಹಾಗೂ ಪಟ್ಟಾಭಿ ಸೀತಾರಾಮಯ್ಯ ಮುಂತಾದವರು ಅಭಿನಂದಿಸಿದರು.[62]

ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ರಾಜ್ಯದ ಹಿತದೃಷ್ಟಿಯಿಂದ ಇಲಾಖಾ ಮುಖ್ಯಸ್ಥರ ಮತ್ತು ಮಂತ್ರಿಗಳ ನಡುವೆ ಸಹಕಾರ ಏರ್ಪಡುವಂತೆ ಮತ್ತು ಅಧಿಕಾರಿ ಮತ್ತು ನೌಕರರ ನಡುವೆ ಸಮನ್ವಯ ರೂಪಿಸಲು ಪ್ರಯತ್ನಿಸಿದರು. ಅದಕ್ಕಾಗಿ ಒಂದು ಸಭೆಯನ್ನು ಕರೆದು ಸಹಕಾರ ಕೋರಿದರು.

ಈ ಸಭೆಯಲ್ಲಿ ಕೆ.ಸಿ. ರೆಡ್ಡಿ ಮಾತನಾಡುತ್ತಾ "ಆಡಳಿತ ವ್ಯವಸ್ಥ ಉಪಸಮಿತಿ ವರದಿ ಬಂದಿದ್ದು, ಅದನ್ನು ಜಾರಿಗೆ ತರಲಾಗುವುದೆಂದೂ, ಪ್ರಧಾನ ಸರ್ಕಾರಿ ಕೆಲಸಗಳನ್ನು ವಿಕೇಂದ್ರೀಕರಿಸಿ ಮಂತ್ರಿಗಳ ನೀತಿ ಮತ್ತು ಕಾರ್ಯಕ್ರಮಗಳನ್ನು ಮಾತ್ರ ಇಟ್ಟುಕೊಂಡು, ಉಳಿದ ಜವಾಬ್ದಾರಿಗಳನ್ನು ಇಲಾಖಾ ಮುಖ್ಯಸ್ಥರಿಗೆ ವಹಿಸಿಕೊಡಲಾಗುವುದೆಂದೂ, ಮಂತ್ರಿಗಳು ಮತ್ತು ಅಧಿಕಾರಿಗಳಲ್ಲಿ ಸಹಕಾರ ಏರ್ಪಡಬೇಕೆಂದೂ, ಕಾರ್ಯದರ್ಶಿಗಳ ಸ್ಥಾನಕ್ಕೆ ಹಿರಿಯ ಅಧಿಕಾರಿಗಳನ್ನು ನೇಮಿಸಲಾಗುವುದೆಂದೂ, ಸರ್ಕಾರಿ ನೌಕರರ ಸಂಬಳ ಕಡಿತ ಮಾಡುವುದಿಲ್ಲವೆಂದೂ, ಆದರೆ ಇಲಾಖೆಗಳ ಖರ್ಚುಗಳನ್ನು ಕಡಮೆ ಮಾಡಬೇಕೆಂದೂ, ಇಲಾಖೆಯ ಮುಖ್ಯಾಧಿಕಾರಿಗಳು ಕಾರ್ಯದರ್ಶಿಗಳ ಸಲಹೆಯನ್ನು ಉಲ್ಲಂಘಿಸಬಾರದೆಂದೂ ಹೇಳಿ, ಸರ್ಕಾರ ಇರುವುದು ಜನಸಾಮಾನ್ಯರ ಸೇವೆಗಾಗಿ, ಆದ್ದರಿಂದ ಮಂತ್ರಿಗಳು ಮತ್ತು ಅಧಿಕಾರಿಗಳು ಎಚ್ಚರಿಕೆಯಿಂದ ನಡೆದುಕೊಳ್ಳಬೇಕು" ಎಂದು ಹೇಳಿ ಎಲ್ಲರ ಸಹಕಾರ ಕೋರಿದರು.[63]

---

62. ಸತ್ಯವಾದಿ ಪತ್ರಿಕೆ : ದಿನಾಂಕ : 07–2–1950.
63. ಪೌರವಾಣಿ ಪತ್ರಿಕೆ : ದಿನಾಂಕ : 18–02–1950.

ಕಾಗೋಡು ರೈತರ ಚಳವಳಿ ಸಮಸ್ಯೆ

ಭಾರತ ಸ್ವಾತಂತ್ರ್ಯಗಳಿಸಿದ ನಂತರ ಮೈಸೂರು ರಾಜ್ಯದಲ್ಲಿ ನಡೆದ ಮೊದಲ ರೈತ ಹೋರಾಟವೇ ಕಾಗೋಡು ಚಳವಳಿ. 1950–51ರಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಅಧಿಕಾರಾವಧಿಯಲ್ಲಿ ಭೂ ಮಾಲೀಕರ ವಿರುದ್ಧ ಗೇಣಿದಾರರು ನಡೆಸಿದ ಪ್ರಗತಿಪರ ಹೋರಾಟವೇ 'ಕಾಗೋಡು ರೈತರ ಚಳವಳಿ'. ಕಾಗೋಡು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ತಾಳಗುಪ್ಪ ಹೋಬಳಿಯ ಸಣ್ಣ ಗ್ರಾಮ. ಇಲ್ಲಿ ಹೆಚ್ಚಿನ ಭೂಮಿ ಕೆ. ಗುರುಪ್ಪ ಒಡೆಯರ್ (ಕೆ.ಜಿ. ಒಡೆಯರ್) ಕುಟುಂಬದವರ ಒಡೆತನದಲ್ಲಿತ್ತು. ಇವರ ಜಮೀನಿನಲ್ಲಿ ಕೆಲಸ ಮಾಡುವ ಗೇಣಿದಾರರು ವಂಶಪಾರಂಪರ್ಯವಾಗಿ ಕೆಲಸ ಮಾಡುತ್ತಿದ್ದರು. ಮುಂದೆ ಭೂ ಮಾಲೀಕರಿಗೂ ಮತ್ತು ಗೇಣಿದಾರರಿಗೂ 'ಗೇಣಿ ಭತ್ತದ ಕೊಳಗ' ಅಳತೆಯ ಪ್ರಮಾಣದಲ್ಲಿ ಉಂಟಾದ ಸಂಘರ್ಷ ಒಂದು ನಿರ್ದಿಷ್ಟ ರೂಪ ಪಡೆದಂತೆ ರಾಜ್ಯ ಮತ್ತು ರಾಷ್ಟ್ರೀಯ ಸುದ್ಧಿಯಾಯಿತು. ಇದರಿಂದ ಕಾಗೋಡು ರೈತರ ಬೆಂಬಲಕ್ಕೆ ಸಮಾಜವಾದಿ ಪಕ್ಷದ ರಾಜ್ಯ ಮತ್ತು ರಾಷ್ಟ್ರ ನಾಯಕರು, 'ಹಿಂದ್ ಕಿಸಾನ್ ಪಂಚಾಯತ್ ಪಕ್ಷ'ದ ರಾಷ್ಟ್ರ ನಾಯಕರು ಭಾಗವಹಿಸಿ ಹೋರಾಟ ಪ್ರಬಲಗೊಳ್ಳುವಂತೆ ಮಾಡಿದರು. ಸಮಾಜವಾದಿ ಪಕ್ಷದ ರಾಮ ಮನೋಹರ ಲೋಹಿಯಾ ಜರ್ಮನಿಯ 'ಫ್ರಾಂಕ್‌ಪರ್ಟ್' ಅಂತರಾಷ್ಟ್ರೀಯ ಸಮ್ಮೇಳನದಲ್ಲಿ 'ಕಾಗೋಡು ಚಳವಳಿ' ಪ್ರಸ್ತಾಪ ಮಾಡಿದ್ದರಿಂದ ಇದು ಅಂತರಾಷ್ಟೀಯ ಸುದ್ದಿಯಾಯಿತು.

1951ರ ಮೇ–ಜೂನ್‌ನಲ್ಲಿ ವಿಧಾನಸಭೆಯಲ್ಲಿ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಹಲವಾರು ಸದಸ್ಯರು ಕಾಗೋಡು ಚಳವಳಿಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗಳಿಗೆ ಸರ್ಕಾರದ ಗೃಹಮಂತ್ರಿ ಟಿ. ಮರಿಯಪ್ಪನವರು 'ಕಾಗೋಡು ಸತ್ಯಾಗ್ರಹ ಸಂಬಂಧ ಬಂಧಿತರು 310, ಅಪರಾಧಿಗಳು 37, ಬಿಡುಗಡೆಯಾದವರು 270 ಎಂದೂ, ವಿಶೇಷ ಪೊಲೀಸ್ ಪಡೆಯನ್ನು ಕಾಗೋಡುನಲ್ಲಿ ಕಾನೂನು, ಶಾಂತಿ ಮತ್ತು ಶಿಸ್ತುಪಾಲನೆಗೆ ಇರಿಸಲಾಗಿತ್ತೇ ವಿನಃ ಜಮೀನ್ದಾರರು ಈ ವಿಶೇಷ ಪಡೆಯ ನಿರ್ವಹಣಾ ವೆಚ್ಚವನ್ನು ಭಾಗಶಃ ಅಥವಾ ಪೂರ್ಣವಾಗಿ ಭರಿಸಿದರು ಅಥವಾ ಭರಿಸಲೊಪ್ಪಿದರೇ ಎಂಬ ಪ್ರಶ್ನೆ ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.[64]

ಮುಂದೆ ಕೆ.ಸಿ. ರೆಡ್ಡಿ ಸರ್ಕಾರಕ್ಕೂ ಮತ್ತು ಗೇಣಿದಾರರು ಹಾಗೂ ಮುಖಂಡರಿಗೂ ನಡೆದ ಮಾತುಕತೆಯಂತೆ ಸರ್ಕಾರ 'ಗೇಣಿಶಾಸನ' ರೂಪಿಸಲು ಎಚ್. ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಯಿತು. ಟಿ. ಮರಿಯಪ್ಪ, ಕೆ.ಟಿ. ಭಾಷ್ಯಂ,

---

64. ನಾಗರಾಜ್ .ಎಂ.ಜಿ. : ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು, ಸಂಪುಟ–1, ಪುಟ–134.

ಕಡಿದಾಳ್ ಮಂಜಪ್ಪ ಹಾಗೂ ಇತರರು ಸದಸ್ಯರಾಗಿದ್ದರು. ಈ ಸಮಿತಿ ನೀಡಿದ ವರದಿಯಂತೆ ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿ 'ಗೇಣಿಶಾಸನ'ಕ್ಕೆ ಒಪ್ಪಿಗೆ ಪಡೆಯಿತು.[65]

1951ರ ಅಕ್ಟೋಬರ್ – ನವೆಂಬರ್ ವೇಳೆಗೆ ಕಾಗೋಡು ಚಳುವಳಿ ಶಾಂತವಾಗಿ ಜೈಲಿನಲ್ಲಿದ್ದ ಚಳವಳಿಗಾರರು ಮುಚ್ಚಳಿಕೆ ಪತ್ರ ನೀಡಿ ಹೊರಬಂದರು. ಈ ಕಾಗೋಡು ಚಳವಳಿಯಿಂದ ರೈತರಿಗೆ ತಕ್ಷಣ ಲಾಭ ದೊರೆಯದೆ ಹೋದರು, ತಮ್ಮ ಬದುಕಿನ ಮುಖ್ಯ ಆಸರೆಯಾಗಿದ್ದ ಗೇಣಿ ಜಮೀನನ್ನೇ ಪಣವಾಗಿಟ್ಟು ಹೋರಾಡಿದ ಅವರ ಆತ್ಮಶಕ್ತಿಯ ಪ್ರದರ್ಶನವಾಗಿ, ರಾಜ್ಯದ ಇತಿಹಾಸದಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಪಡೆಯಿತು.

ಈ ಚಳವಳಿ ಕೆ.ಸಿ. ರೆಡ್ಡಿ ಸರ್ಕಾರವನ್ನು ಪೇಚಿಗೆ ಸಿಲುಕಿಸಿತಲ್ಲದೆ, ತನ್ನ ನಿಧಾನಗತಿಯ ನಿರ್ಧಾರದಿಂದ ರಾಜ್ಯದಲ್ಲಿ ಸಮಾಜವಾದಿ ಪಕ್ಷ ಪ್ರಬಲವಾಗಿ ಸಂಘಟನೆಗೊಳ್ಳಲು ಕಾರಣವಾಗಿ 1952ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಹಲವಾರು ಸ್ಥಾನಗಳನ್ನು ಪಡೆಯಲು ಕಾರಣವಾಯಿತು.

4. ಇತರೇ ಸವಾಲುಗಳು

ಹೀಗೆ ಕೆ.ಸಿ. ರೆಡ್ಡಿ ಅವರ ಸರ್ಕಾರ ಒಂದೊಂದು ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದಂತೆಯೇ ಹಲವಾರು ಸಮಸ್ಯೆಗಳು ಪುನಃ ಹುಟ್ಟಿಕೊಳ್ಳುತ್ತಿದ್ದವು. ಅವು 1) ಹೊಸ ಸಂವಿಧಾನ ರಚನಾ ಸಮಸ್ಯೆ, 2) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ಹಾಗೂ ಸಂಪನ್ಮೂಲ ಹಂಚಿಕೆ ಸಮಸ್ಯೆ, 3) ನೀರಾವರಿ ಸಮಸ್ಯೆ, 4)ವಿದ್ಯುಚ್ಛಕ್ತಿ ಉತ್ಪಾದನಾ ಸಮಸ್ಯೆ, 5) ನಿರುದ್ಯೋಗ ನಿವಾರಣಾ ಸಮಸ್ಯೆ, 6) ಕಾರ್ಮಿಕರ ಕಲ್ಯಾಣ ಸಮಸ್ಯೆ, 7) ಭಿಕ್ಷುಕರ ಸಮಸ್ಯೆ, 8) ಮುಸ್ಲಿಂರ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಬೇಡಿಕೆ ಸಮಸ್ಯೆ, 9) ನೂತನ ಶಿಕ್ಷಣ ವ್ಯವಸ್ಥೆ ಸಮಸ್ಯೆ, 10) ಬಡತನ ನಿವಾರಣಾ ಸಮಸ್ಯೆ, 11) ವಸತಿಗಳ ನಿರ್ಮಾಣ ಸಮಸ್ಯೆ, 12) ಗ್ರಾಮಾಭಿವೃದ್ಧಿ ಯೋಜನೆ ಅನುಷ್ಠಾನ ಸಮಸ್ಯೆ ಇತ್ಯಾದಿಗಳು.

ಇಂತಹ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಬರದಲ್ಲಿಯೂ ಕೆ.ಸಿ. ರೆಡ್ಡಿ ಅವರು ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಾಗಿದ್ದ ಸಂದಿಗ್ಧ ಪರಿಸ್ಥಿತಿ ರಾಜ್ಯದಲ್ಲಿ ಕೊನೆ ಮೊದಲಿಲ್ಲದೆ ನಿರಂತರವಾಗಿ ನಡೆಯುತ್ತಿತ್ತು.

---

65. ಕಡಿದಾಳ್ ಮಂಜಪ್ಪ : ನನಸಾಗದ ಕನಸು, ಪುಟ–118.

5. ಕೆ.ಸಿ. ರೆಡ್ಡಿ ಸರ್ಕಾರದ ಕಾರ್ಯಕ್ರಮಗಳು

ಕೋಲಾರ ಜಿಲ್ಲಾ ಕಾಂಗ್ರೆಸ್ ಸಭೆ

1950ರ ಏಪ್ರಿಲ್ 16ರಂದು ಕೋಲಾರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಹೆಚ್.ಸಿ. ಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೋಲಾರ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ, ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಯಶೋಧರಾ ದಾಸಪ್ಪ ಹಾಗೂ ಕೆ. ಪಟ್ಟಾಭಿರಾಮನ್ ಆಗಮಿಸಿದ್ದರು.

ಈ ಸಭೆಯಲ್ಲಿ ಕೆ.ಸಿ. ರೆಡ್ಡಿ ಮಾತನಾಡುತ್ತಾ "ಈಗ ದೇಶದಲ್ಲಿ ಉಂಟಾಗಿರುವ ಅತೃಪ್ತಿಯು ಮೈಸೂರು ದೇಶದಲ್ಲೇ ಅಲ್ಲವೆಂದೂ, ಇದು ಇಡೀ ಭಾರತದಲ್ಲೇ ಇದೆ ಯೆಂದೂ, ಇದಕ್ಕೆ ಬಹಳ ಮಟ್ಟಿಗೆ ಕಂಟ್ರೋಲ್ ಕಾರಣವೆಂದರು. ಕಂಟ್ರೋಲ್ ತೆಗೆದು ಹಾಕುವುದರಿಂದ ಉದ್ಭವಿಸತಕ್ಕ ತೊಂದರೆಗಳನ್ನು ಅಂಕಿ–ಅಂಶಗಳ ಮೂಲಕ ವಿವರಿಸಿದರು. ದೇಶಕ್ಕೆ ಬೇಕಾಗಿರತಕ್ಕ ಪದಾರ್ಥಗಳ ಉತ್ಪತ್ತಿಯು ಹೆಚ್ಚಿಸಿದರೆ ಕಂಟ್ರೋಲ್ ಅದರಷ್ಟಕ್ಕೆ ಅದೇ ಹೋಗುತ್ತದೆಂದೂ, ಉತ್ಪತ್ತಿ ಹೆಚ್ಚಿಸಲು ಸರ್ಕಾರ ಶ್ರಮಿಸುತ್ತಿದೆ ಎಂದು ಹೇಳಿದರು. ನಂತರ ರೈತರು ವ್ಯವಸಾಯಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ರೆಡ್ಡಿಯವರು ರೈತರಿಗೆ ವ್ಯವಸಾಯಕ್ಕೆ ಸಂಬಂಧಪಟ್ಟ ಕಬ್ಬಿಣದ ಸಾಮಾನು ಗಳನ್ನು ಲೈಸೆನ್ಸ್ ಹೋಲ್ಡರ್‌ಗಳಿಗೆ ಕೊಡುವುದನ್ನು ರದ್ದುಮಾಡಿ, ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳಿಗೆ ಕೊಟ್ಟು ರೈತರಿಗೆ ಸುಲಭವಾಗಿ ಹಂಚುವ ವಿಚಾರ, ವ್ಯವಸಾಯ ವನ್ನು ಹೆಚ್ಚಿಸುವುದಕ್ಕೆ ಪಂಪುಗಳನ್ನು ಕೊಡುವ ವಿಚಾರ, ಕಳ್ಳ ವ್ಯಾಪಾರವನ್ನು ತಡೆಯುವ ವಿಚಾರ ಬಗ್ಗೆ ಮಾತನಾಡಿದರು."[66]

ಅಸ್ಸಾಂ ಭೂಕಂಪ ಪರಿಹಾರ ನಿಧಿ

1950ರ ಸೆಪ್ಟೆಂಬರ್‌ನಲ್ಲಿ ಅಸ್ಸಾಂ ರಾಜ್ಯದಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ನೊಂದ ಜನರಿಗೆ ಪರಿಹಾರ ರೂಪದಲ್ಲಿ ನಿಧಿ ಸಂಗ್ರಹಿಸಲು ತೀರ್ಮಾನಿಸಿದರು. ಅದರಂತೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಸಾರ್ವಜನಿಕರಲ್ಲಿ ಮಾಡಿಕೊಂಡ ಮನವಿಯಂತೆ "ಅಸ್ಸಾಂ ಭೂಕಂಪದಲ್ಲಿ ಕಷ್ಟ–ನಷ್ಟಕ್ಕೀಡಾಗಿ ನೊಂದಿರುವವರಿಗೆ ಮೈಸೂರು ರಾಜ್ಯ ತನ್ನ ಕೈಲಾದ ಮಟ್ಟಿಗೆ ಸಹಾಯ ನೀಡಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿ ರಾಜ್ಯದ ನಾನಾ ಸಂಸ್ಥೆಗಳು ರಾಜಕೀಯ ಪಕ್ಷ, ಪ್ರತಿಪಕ್ಷಗಳೆನ್ನದೆ, ಸಾರ್ವಜನಿಕ ಮುಖಂಡರು, ದಾನಿಗಳು ಎಲ್ಲರೂ ಸಹಕರಿಸಿ ಚಂದಾ ಕೊಡಿಸಬೇಕೆಂದು ಮನವಿ ಮಾಡಿಕೊಂಡರು. ನಂತರ ರಾಜ್ಯದಲ್ಲಿ ನಿಧಿಯನ್ನು ರಚಿಸಲಾಗಿದೆಯೆಂದೂ, ಚಂದಾಹಣವನ್ನು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳಲ್ಲೂ ಸ್ವೀಕರಿಸಲು ಏರ್ಪಾಡು ಮಾಡಲಾಗಿದೆ

66. ಪೌರವಾಣಿ ಪತ್ರಿಕೆ : ದಿನಾಂಕ : 22–04–1950.

ಎಂದೂ, ನಾನಾ ಜಿಲ್ಲಾಧಿಕಾರಿಗಳಿಗೂ ಆಯಾಯ ಸ್ಥಳಗಳಲ್ಲಿ ಸಮಿತಿಗಳನ್ನುಂಟು ಮಾಡಬೇಕೆಂದು ಸೂಚನೆ ಕೊಡಲಾಗಿದೆಯೆಂದೂ, ಈ ಸಂಬಂಧ ಸರ್ಕಾರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ" ಎಂದು ಹೇಳಿದರು.[67]

'ಮುಖ್ಯಮಂತ್ರಿಗಳ ಅಸ್ಸಾಂ ಪರಿಹಾರ ನಿಧಿ'ಗೆ 1950ರ ಡಿಸೆಂಬರ್ ಮೊದಲ ವಾರದಲ್ಲಿ 3,66,268–00 ರೂಪಾಯಿಗಳು ಸೇರಿವೆ ಎಂದೂ, ಅದರಲ್ಲಿ ಸರ್ಕಾರ ಕೊಟ್ಟಿರುವ 20,000 ರೂ.ಗಳ ಜೊತೆಗೆ ಶ್ರೀಮನ್ಮಹಾರಾಜರು 1 ಲಕ್ಷ ರೂ.ಗಳು ಹಾಗೂ ವಿವಿಧ ಜಿಲ್ಲೆಗಳ ಪೈಕಿ ಚಿತ್ರದುರ್ಗ ಜಿಲ್ಲೆಯಿಂದಲೇ ಹೆಚ್ಚಿನ ಹಣ 38,454–00 ರೂ.ಗಳು ಶೇಖರವಾಗಿದೆ' ಎಂದೂ ತಿಳಿಸಲಾಗಿದೆ.[68] ಹೀಗೆ ಮೈಸೂರು ರಾಜ್ಯದ ಜನತೆಯು ಮುಖ್ಯ ಮಂತ್ರಿ ಕೆ.ಸಿ. ರೆಡ್ಡಿ ಅವರ ಮನವಿಗೆ ಸ್ಪಂದಿಸಿ ಪರಿಹಾರ ನಿಧಿಗೆ ಸಹಾಯ ಮಾಡಿರುವುದು ಅವರ ಉದಾರಗುಣವನ್ನು ಎತ್ತಿ ತೋರಿಸುತ್ತದೆ.

ಕೆ.ಸಿ. ರೆಡ್ಡಿ ಅವರ ಚಿಕ್ಕಮಗಳೂರು ಭೇಟಿ

1950ರ ಅಕ್ಟೋಬರ್ 9ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಚಿಕ್ಕಮಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪೌರಸಭೆಯ ಅಧ್ಯಕ್ಷರು ನೀಡಿದ ನಿವೇದನ ಪತ್ರಕ್ಕೆ ಉತ್ತರಿಸಿ ಹಣದ ಅಡಚಣೆ ಸರ್ಕಾರಕ್ಕಿದೆ ಎಂದೂ, ಪೌರಸಭೆಗಳು ತಮ್ಮ ವರಮಾನಗಳನ್ನು ಆದಷ್ಟು ಜಾಸ್ತಿ ಮಾಡಿಕೊಳ್ಳಬೇಕೆಂದೂ, ಕೆಲಸಗಳನ್ನು ಬೇಗನೆ ಮಾಡಿಸಿಕೊಳ್ಳಲು ಪೌರಸಭೆಗಳು ಅಪೇಕ್ಷಿಸಿದ್ದಲ್ಲಿ ಹಣ ಕೊಡುವುದಾಗಿಯೂ ತಿಳಿಸಿದರು.[69]

1950ರ ಅಕ್ಟೋಬರ್ 10ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು 'ಇಂಡಿಯನ್ ಮತ್ತು ಮೈಸೂರು ಪ್ಲಾಂಟರ್ ಸಂಘ'ಗಳು ಒಟ್ಟಾಗಿ ಸೇರಿ ಏರ್ಪಡಿಸಿದ ಸಮಾರಂಭದಲ್ಲಿ ಮಾತನಾಡುತ್ತಾ "ಮಲೆನಾಡಿನ ರಸ್ತೆಗಳು ವಿಪರೀತ ಮಳೆಯಿದ ಹಾಳಾಗುವುದರಿಂದ ಸಿಮೆಂಟ್ ಕಾಂಕ್ರಿಟ್ ಮಾಡಿಸುವ ಆಲೋಚನೆ ಸರ್ಕಾರಕ್ಕಿದೆ ಎಂದೂ, ರೈಲು ಬರುವ ವಿಷಯದಲ್ಲಿ ಜನ ತುಂಬ ಕುತೂಹಲರಾಗಿದ್ದು, ರೈಲನ್ನು ಚಾಮರಾಜ ನಗರದಿಂದ ಸತ್ಯಮಂಗಲಕ್ಕೂ, ಕಡೂರಿನಿಂದ ಚಿಕ್ಕಮಗಳೂರು, ಚಿಕ್ಕಮಗಳೂರಿನಿಂದ ಹಾಸನಕ್ಕೂ ಹಾಸನದಿಂದ ಮಂಗಳೂರಿಗೂ ಏರ್ಪಡಿಸಲು ಭಾರತ ಸರ್ಕಾರಕ್ಕೆ ಮನವಿ ಮಾಡುವುದಾಗಿಯೂ" ತಿಳಿಸಿದರು.[70]

---

67. ಪೌರವಾಣಿ ಪತ್ರಿಕೆ : ದಿನಾಂಕ : 12–09–1950
68. ಪೌರವಾಣಿ ಪತ್ರಿಕೆ : ದಿನಾಂಕ : 20–12–1950.
69. ಪೌರವಾಣಿ ಪತ್ರಿಕೆ : ದಿನಾಂಕ : 10–10–1950.
70. ಪೌರವಾಣಿ ಪತ್ರಿಕೆ : ದಿನಾಂಕ : 11–10–1950.

ದಸರಾ ವಸ್ತು ಪ್ರದರ್ಶನದಲ್ಲಿ ಕೆ.ಸಿ. ರೆಡ್ಡಿ

1950ರ ಅಕ್ಟೋಬರ್ 12ರಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಮೈಸೂರಿನಲ್ಲಿ 'ದಸರಾ ವಸ್ತುಪ್ರದರ್ಶನ' ಉದ್ಘಾಟಿಸಿ ಮಾತನಾಡುತ್ತಾ "ಈ ಸಾರಿ ಮೈಸೂರು ವಸ್ತು ಪ್ರದರ್ಶನವು ಹೆಚ್ಚು ಆಡಂಬರವಿಲ್ಲದೆ ನಡೆಯುವುದಾದರೂ ಅದರಲ್ಲಿ ಭೋಧಪ್ರದವಾದ ಅಂಶಗಳನ್ನು ಎಂದಿಗಿಂತಲೂ ಹೆಚ್ಚಾಗಿದೆ ಎಂದೂ, ಕೇವಲ ಮನರಂಜನೆಯ ಭಾಗಗಳನ್ನು ಮಾತ್ರ ಕಡಮೆ ಮಾಡಲಾಗಿದೆ ಎಂದೂ, ಮೈಸೂರಿನಲ್ಲಿ ಒಂದು ಸ್ಥಾಯಿ ವಸ್ತು ಪ್ರದರ್ಶನವನ್ನು ಏರ್ಪಡಿಸುವ ಬಗ್ಗೆ ಪರಿಶೀಲಿಸುವುದು ಸೂಕ್ತವೆಂದು ಹೇಳಿದರು".[71]

ಈಗ ಕರ್ನಾಟಕ ಸರ್ಕಾರ ಮೈಸೂರಿನಲ್ಲಿ ಶಾಶ್ವತವಾದ ವಸ್ತು ಪ್ರದರ್ಶನ ಇರಬೇಕೆಂದು ಸರ್ಕಾರ ಯೋಜಿಸಲಾಗುತ್ತಿದೆ. ರೆಡ್ಡಿ ಅವರು 67 ವರ್ಷಗಳ ಹಿಂದೆಯೇ ಇದನ್ನು ಯೋಜಿಸಿದ್ದರೆಂದರೆ ಅವರ ದೂರದರ್ಶಿತ್ವದ ಅರಿವಾಗುತ್ತದೆ.

ಕೆ.ಸಿ. ರೆಡ್ಡಿ ಅವರ ಕಡೂರು ಭೇಟಿ

ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಕಡೂರಿಗೆ ಸಮಾರಂಭವೊಂದಕ್ಕೆ ಆಗಮಿಸಿ ಮಾತ ನಾಡುತ್ತಾ "ಜನತೆಯ ಸಹಕಾರವಿಲ್ಲದೆ ಯಾವ ಸರ್ಕಾರದವರೂ ಜನರ ಆಶೋತ್ತರಗಳನ್ನು ಈಡೇರಿಸಿ ಕೊಡುವುದಕ್ಕೆ ಸಾಧ್ಯವಿಲ್ಲ. ಜನತೆಯ ಸಹಕಾರವಿಲ್ಲದೆ ಸರ್ಕಾರದ ಯಾವೊಂದು ಯೋಜನೆಯೂ ಫಲಿಸಲಾರದು. ಜನತೆ ಪ್ರಜಾಧರ್ಮದ ಮತ್ತು ಸ್ವಾತಂತ್ರ್ಯದ ಅರ್ಥವನ್ನು ಅರಿತು ತಮ್ಮಪಾಲಿನ ಕೆಲಸವನ್ನು ನೆರವೇರಿಸಬೇಕು ಎಂದೂ, ಈ ಜಿಲ್ಲೆಯಲ್ಲಿ ಆಗಬೇಕಾದ ಕಾರ್ಯಗಳ ಬಗ್ಗೆ ತಾವು ಹಲವಾರು ಸಮಾರಂಭಗಳು, ಬೇಡಿಕೆಗಳು, ಭಾಷಣಗಳ ಮೂಲಕ ಪಡೆದ ದೀರ್ಘ ಅನುಭವದ ಬಗ್ಗೆ ಭಾಷಣ ಮಾಡಿ, ದೇಶದ ಪುರೋಭಿವೃದ್ಧಿ ಯನ್ನು ಸಾಧಿಸಲು ಬೇಕಾದಷ್ಟು ಯೋಜನೆಗಳು ಕಾರ್ಯಗತವಾಗಬೇಕೆಂದೂ, ಸರ್ಕಾರ ಅಧಿಕಾರ ವರ್ಗ ಮತ್ತು ಜನತೆ ಇವುಗಳ ಪರಸ್ಪರಸಹಕಾರದಿಂದ ಇದಕ್ಕೆ ಶ್ರಮಿಸಬೇಕೆಂದೂ, ಜನತೆ ಸರ್ಕಾರ ಸ್ಥಾಪಿಸುವಾಗ ನಾವು ಜನತೆಯನ್ನು ಹುರಿದುಂಬಿಸಿದಂತೆ ಈ ರಾಷ್ಟ್ರೋನ್ನತಿಯನ್ನು ಸಾಧಿಸಲು ಮತ್ತು ಜನತೆಯನ್ನು ಹುರಿದುಂಬಿಸಬೇಕಾದ್ದು ಅಗತ್ಯವೆಂದು ತಿಳಿಸಿದ್ದಾರೆ".[72]

6. ಮೈಸೂರು ಶಾಸನಸಭಾ ಭವನ ನಿರ್ಮಾಣ ಪ್ರಕ್ರಿಯೆ (ವಿಧಾನಸೌಧ)

ಕೆ.ಸಿ. ರೆಡ್ಡಿ ಅವರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾದ ಕೂಡಲೇ ಮಾಡಿದ ಮಹತ್ವ ಪೂರ್ಣವಾದ ಕೆಲಸಗಳಲ್ಲಿ ರಾಜ್ಯದ ರಾಜಧಾನಿಯನ್ನು ಮೈಸೂರಿನಿಂದ

---

71. ಪೌರವಾಣಿ ಪತ್ರಿಕೆ : ದಿನಾಂಕ : 13-10-1950
72. ಪೌರವಾಣಿ ಪತ್ರಿಕೆ : ದಿನಾಂಕ : 16-10-1950.

ಬೆಂಗಳೂರಿಗೆ ಬದಲಾಯಿಸಿದ್ದು. ಇದಕ್ಕೆ ಕಾರಣ ರಾಜಧಾನಿಯಲ್ಲಿ ಸರ್ಕಾರದ ಎಲ್ಲಾ ಕೆಲಸ ಕಾರ್ಯಗಳು ಅಠಾರ ಕಚೇರಿ (ಇಂದಿನ ಕರ್ನಾಟಕ ಉಚ್ಚನ್ಯಾಯಾಲಯ ಕಟ್ಟಡ) ಯಲ್ಲಿ ನಡೆಯುತ್ತಿತ್ತು. ಶಾಸನಸಭೆಯು ಸಹಾ ಅಠಾರ ಕಚೇರಿಯಲ್ಲಿಯೇ ನಡೆಯಬೇಕಾಗಿತ್ತು.

ಆದ್ದರಿಂದ ಸರ್ಕಾರವು ತನ್ನ ವಿಧಾನಮಂಡಲ ಅಧಿವೇಶನ ಸೇರಿದಂತೆ ಎಲ್ಲಾ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಲು ಒಂದು ವಿಶಾಲವಾದ ಹೊಸಕಟ್ಟಡದ ಅಗತ್ಯವಿತ್ತು.

1950ರ ಜನವರಿ 26ರಂದು ಭಾರತ ಸಂವಿಧಾನ ರೂಪುಗೊಂಡು ಹೊಸ ರಾಜ್ಯಗಳು ಅಸ್ತಿತ್ವಕ್ಕೆ ಬಂದ ಮೇಲೆ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದುದರಿಂದ 'ಅಸೆಂಬ್ಲಿ ಹಾಲ್' ನಿರ್ಮಾಣಕ್ಕೆ ಸರ್ಕಾರದ ಮೇಲೆ ಒತ್ತಡ ಹೆಚ್ಚಿತು. ಆಗ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ, ಅವರ ಸಂಪುಟ ಸಚಿವರು, ವಿಧಾನಸಭೆಯ ಅಸೆಂಬ್ಲಿ ಹಾಲ್, ಲಾಂಜ್ ರೂಂ ಹಾಗೂ ವಾಚನಾಲಯಕ್ಕೆ 1951ರ ಜನವರಿ 4ರಂದು ಗೊತ್ತುವಳಿ ಸ್ವೀಕರಿಸಿತು. ಅದರಂತೆ ತಜ್ಞ ಇಂಜನಿಯರುಗಳೊಂದಿಗೆ ಸಮಾಲೋಚನೆ ನಡೆಸಿ, ಆ ಕಟ್ಟಡದ ನಿರ್ಮಾಣಕ್ಕೆ ನಕ್ಷೆಯನ್ನು ತಯಾರಿಸಲಾಯಿತು. ಇದು ಎರಡು ಹಂತಗಳಲ್ಲಿ ನಿರ್ಮಾಣ ಮಾಡಬೇಕು ಎಂದಿದ್ದ ಈ ಕಟ್ಟಡದ ಯೋಜನಾ ಅಂದಾಜು ವೆಚ್ಚ 33 ಲಕ್ಷ ರೂ. ಎಂದು ನಿಗದಿಪಡಿಸಲಾಗಿತ್ತು. ಇದಕ್ಕೆ 'ಮೈಸೂರು ಶಾಸನಸಭಾ ಭವನ' ಎಂದು ಹೆಸರಿಡಲಾಗಿತ್ತು.

'ಮೈಸೂರು ಶಾಸನಸಭಾ ಭವನ' ಕಟ್ಟಡವು 200 ಸದಸ್ಯರ ಅಸೆಂಬ್ಲಿಹಾಲ್, 500 ಪ್ರೇಕ್ಷಕರಿಗೆ ಗ್ಯಾಲರಿ, 60 ಸದಸ್ಯರ ಕೌನ್ಸಿಲ್ ಹಾಲ್, 250 ಪ್ರೇಕ್ಷಕರಿಗೆ ಗ್ಯಾಲರಿ, ರಾಜ ಪ್ರಮುಖ ಕೊಠಡಿ, ಗ್ರಂಥಾಲಯ, ಲಾಂಜ್, ಹುಲ್ಲುಹಾಸು, ವಿಶಾಲವಾದ ಅಂಗಳ, ಮುಖ್ಯಮಂತ್ರಿ ಹಾಗೂ ಏಳು ಸಚಿವರಿಗೆ ಕೊಠಡಿಗಳ ಮೊದಲ ಹಂತ. ಮೇಲ್ಮನೆಯ 60 ಸದಸ್ಯರು, ಸಭಾಪತಿ, ಉಪ ಸಭಾಪತಿ ಕೊಠಡಿ ಹಾಗೂ ಕೌನ್ಸಿಲ್ ಕಚೇರಿಗೆ ಎರಡನೇ ಹಂತದಲ್ಲೂ ಅವಕಾಶ ಕಲ್ಪಿಸಲಾಗಿತ್ತು. ಅಮೇರಿಕನ್ ಶೈಲಿಯ ಈ ಕಟ್ಟಡ ಯೋಜನೆ ಆಗ ಮೈಸೂರು ರಾಜ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಕೆಂಗಲ್ ಹನುಮಂತಯ್ಯ ಅವರಿಗೆ ಇಷ್ಟವಾಗಿರಲಿಲ್ಲ.

1951ರ ಜುಲೈ 13ರಂದು ಭಾರತದ ಪ್ರಧಾನಮಂತ್ರಿ, ಜವಹರಲಾಲ್ ನೆಹರು ಅವರು 'ಮೈಸೂರು ಶಾಸನಸಭಾ ಭವನ' ಕಟ್ಟಡ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಿ ಶಂಕುಸ್ಥಾಪನೆ ನೆರವೇರಿಸಿದರು. ಇದು ಒಂದು ದೊಡ್ಡ ರೀತಿಯಲ್ಲಿ ನಡೆದ ಸಮಾರಂಭ ವಾಗಿತ್ತು. ಈ ಶಿಲಾನ್ಯಾಸ ಶಿಲೆಯನ್ನು ಈಗಲೂ ವಿಧಾನಸೌಧ ಕಟ್ಟಡದ ಮುಂಭಾಗದ ಸ್ತಂಭದಲ್ಲಿ ಕಾಣಬಹುದು.

ಈ ಮೈಸೂರು ಶಾಸನಸಭಾ ಭವನ ಕಟ್ಟಡ ಶಿಲಾನ್ಯಾಸ ಮಾಡಿ ಮಾತನಾಡಿದ ಜವಹರಲಾಲ್ ನೆಹರು ಅವರು "ಕಟ್ಟಡ ಎಂದರೆ ವಾಸ್ತುಶಿಲ್ಪ ಕುಶಲತೆ ಮಾತ್ರವಲ್ಲ, ಅದು ಸುಂದರವಾಗಿ ಇರಬೇಕು, ಗಟ್ಟಿಮುಟ್ಟಾಗಿರಬೇಕು. ನಮ್ಮ ಕಲಾ ಪರಂಪರೆ ಪ್ರತಿಬಿಂಬ ವಾಗಿರಬೇಕು, ನೋಡುಗರಿಗೆ ನಮ್ಮ ಪ್ರಾಚೀನ ಕಲಾ ವೈಶಿಷ್ಟ್ಯವನ್ನು ಈ ಕಟ್ಟಡ ನೆನಪಿಗೆ ತಂದು ಕೊಡಲಿ, ಹಾಗೇ ಪ್ರಜಾತಂತ್ರದ ಭಾವನೆಗಳನ್ನು ಸ್ಫುರಿಸಲಿ" ಎಂದು ನುಡಿದಿದ್ದಾರೆ.

ಆದರೆ ಕಟ್ಟಡದ ನಿರ್ಮಾಣ ಕಾರ್ಯ ಪ್ರಾರಂಭವಾಗಲೇ ಇಲ್ಲ. ಕೆ.ಸಿ. ರೆಡ್ಡಿ ಅವರು ಅಧಿಕಾರದಲ್ಲಿ ಉಳಿಯಲಿಲ್ಲ. ಎರಡು ವರ್ಷಗಳೇ ಕಳೆದು ಹೋದವು. ಆಗ ಕೆ.ಸಿ. ರೆಡ್ಡಿ ಅವರು, ಮೈಸೂರು ರಾಜ್ಯದ ಮುಖ್ಯಮಂತ್ರಿಯಾದ ಕೆ. ಹನುಮಂತಯ್ಯನವರನ್ನು ಭೇಟಿ ಮಾಡಿ "ಆ ಕಟ್ಟಡ ನನ್ನ ಕಾಲದಲ್ಲೂ ಆಗಲಿಲ್ಲ. ನೀವಾದರೂ ಕಟ್ಟಿಸಿ" ಎಂದು ವಿನಂತಿಸಿದರು.

ಅದರಂತೆ ಕಾರ್ಯಪ್ರವೃತ್ತರಾದ ಹನುಮಂತಯ್ಯನವರು ಸರ್ಕಾರಿ ಅಧಿಕಾರಿಗಳ ಒಂದು ಸಭೆ ಸಮಾವೇಶಗೊಳಿಸಿ ಅದರಲ್ಲಿ ಕಾಮಗಾರಿ ಇಲಾಖೆ ಅಧಿಕಾರಿಗಳು, ವಿದ್ಯುಚ್ಛಕ್ತಿ ಇಲಾಖೆ ಅಧಿಕಾರಿಗಳು, ಸೆಕ್ರೆಟೇರಿಯಟ್ ಅಧಿಕಾರಿಗಳು ಎಲ್ಲರೂ ಸೇರಿದರು. ಆ ಸಭೆಯಲ್ಲಿ ಕೆ.ಸಿ. ರೆಡ್ಡಿ ಅವರ ಕಾಲದ ಆ ನಕ್ಷೆಯನ್ನು ಹನುಮಂತಯ್ಯನವರು ಸಭೆಯ ಮುಂದಿಟ್ಟು ನಕ್ಷೆಯನ್ನು ಸಂಪೂರ್ಣ ಬದಲಿಸಿ "ಒಂದು ಅಂತಸ್ತಿಗೆ ಬದಲು ಮೂರು ಅಂತಸ್ತುಗಳನ್ನು ಕಟ್ಟಬೇಕು. ಸಚಿವರೂ, ಕಾರ್ಯದರ್ಶಿಗಳೂ, ನ್ಯಾಯಾಂಗ ಶಾಖೆಯ ಫೈಲ್ ಆಗಲಿ, ರೆಫರೆನ್ಸ್ ಆಗಲಿ ಬೇಕೆಂದರೆ ತಕ್ಷಣ ಸಿಗುವಂತಿರಬೇಕು. ವಿಧಾನಸಭಾ ಸದಸ್ಯರೂ, ಸರ್ಕಾರಿ ಅಧಿಕಾರಿಗಳೂ, ಸಚಿವರೂ, ಎಲ್ಲರೂ ಒಂದೇ ಭವನದಲ್ಲಿ ಕುಳಿತು ಕಾರ್ಯಕಲಾಪ ನಡೆಸುವಂತಿರಬೇಕು. ಇಷ್ಟೆಲ್ಲಾ ಗಮನದಲ್ಲಿಟ್ಟುಕೊಂಡು ಒಂದು ಅಚ್ಚುಕಟ್ಟಾದ ನಕೆಯನ್ನು ತಯಾರಿಸಿ ಎಂದು ಸೂಚಿಸಿದರು. ಅದು ಇತಿಹಾಸವಾಗಿ ಮುಂದೆ ನಿಂತಿದೆ.[73]

ಈ ಕಟ್ಟಡದಲ್ಲಿ ಒಂದು ವಿಶೇಷ ಹಾಗೂ ಮಹತ್ವದ ವಿಭಾಗವಿದ್ದು ಇಡೀ ವಿಧಾನಸೌಧಕ್ಕೆ ವಿಶೇಷವಾದ ಆದರಣೆ ಇದ್ದ ಹಾಗೇ, ಇತಿಹಾಸ ಸಂಶೋಧನೆಗೆ ಬೇಕಾದ ಅತ್ಯಮೂಲ್ಯ ದಾಖಲೆಗಳ ಸಂಗ್ರಹ ಹೊಂದಿರುವ 'ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ' ಇದ್ದು, ದೇಶ-ವಿದೇಶಗಳ ಸಂಶೋಧನಾ ವಿದ್ಯಾರ್ಥಿಗಳಿಗೆ, ವಿದ್ವಾಂಸರುಗಳಿಗೆ ಬೇಕಾದ ಮಹತ್ವ ಪೂರ್ಣವಾದ ದಾಖಲೆಗಳನ್ನು ಒದಗಿಸುವ ಕಾರ್ಯನಿರ್ವಹಿಸುತ್ತ ಆದರಣೀಯವಾಗಿದೆ. ಇದು ವಿಧಾನಸೌಧಕ್ಕೆ ಮುಕುಟದ ರೀತಿಯಲ್ಲಿ ಇದೆ ಎಂದೇ ನನ್ನ ಭಾವನೆ.

---

73. ಸುಧಾ ಪತ್ರಿಕೆ ವರದಿ.

7. ಕೆ.ಸಿ. ರೆಡ್ಡಿ ಸರ್ಕಾರದ ಸಾಧನೆಗಳು

ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರ ಜವಾಬ್ದಾರಿ ಸರ್ಕಾರ 1947ರ ಅಕ್ಟೋಬರ್ 24 ರಿಂದ 1952ರ ಮಾರ್ಚ್ 30ರವರೆಗೆ ಅಧಿಕಾರ ನಡೆಸಿತು. ಆದರೆ ಇಲ್ಲಿ ಪ್ರಾರಂಭದಿಂದ 1951ರ ಡಿಸೆಂಬರ್‌ವರೆಗೆ ಮಾತ್ರ ಸರ್ಕಾರದ ಸಾಧನೆ ದಾಖಲಿಸಲಾಗಿದೆ.

ಮೈಸೂರು ಭಾರತದ ಮುಖ್ಯ ರಾಜ್ಯಗಳಲ್ಲೊಂದು. ಸ್ವಲ್ಪ ಹೆಚ್ಚು ಕಡಮೆ ಭಾರತದ ಇತರ ರಾಜ್ಯಗಳಿಗಿರುವಷ್ಟೇ ಸ್ಥಾನ-ಮಾನ, ಜವಾಬ್ದಾರಿ ಮೈಸೂರಿಗೂ ಇದೆ. ಭಾರತದ ರಾಜಕೀಯದಲ್ಲಿ ಮೈಸೂರಿನ ಸ್ಥಾನ ಗಣನೀಯ. ಭಾರತ ರಾಜ್ಯಾಂಗ ನಿರ್ಮಾಣ ಕಾರ್ಯದಲ್ಲಿ ಮೈಸೂರು ಸಲ್ಲಿಸಿರುವ ಕಾಣಿಕೆ ಹಿರಿದಾದುದು. ಸ್ವಾತಂತ್ರ್ಯ ಬಂದ ಪ್ರಾರಂಭದಲ್ಲಿ, ಭಾರತ ಅನೇಕ ಬೃಹತ್ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತಾದರೂ ಜನೋಪಯುಕ್ತ ರಾಷ್ಟ್ರ ನಿರ್ಮಾಣ ಕಾರ್ಯಗಳನ್ನು ಉಪೇಕ್ಷಿಸಲಿಲ್ಲ. ಅಂತೆಯೇ ಮೈಸೂರಿನಲ್ಲೂ ಜನ ಹಿತಚಿಂತನೆ ಹಾಗೂ ಪ್ರಗತಿಗೆ ಸಂಬಂಧಿಸಿದ ಕಾರ್ಯ ಉತ್ತಮವಾಗಿಯೇ ನಡೆದಿದೆ.

ಕೆ.ಸಿ. ರೆಡ್ಡಿ ಅವರ ಸರ್ಕಾರ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು "ಮೂರು ವರ್ಷಗಳ ಯೋಜನೆ"ಯನ್ನು ರೂಪಿಸಿ ಜಾರಿಗೆ ತಂದಿತು. ಆದರೆ ಮುಂದೆ ಕೇಂದ್ರ ಸರ್ಕಾರ "ಪಂಚ ವಾರ್ಷಿಕ ಯೋಜನೆ"ಯನ್ನು ಭಾರತದಾದ್ಯಂತ ಜಾರಿಗೆ ತಂದಿದ್ದರಿಂದ ಮೈಸೂರು ಸರ್ಕಾರ ತನ್ನ ಯೋಜನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡು 'ಪಂಚ ವಾರ್ಷಿಕ ಯೋಜನೆ' (1951-1956) ಯನ್ನು ಅಳವಡಿಸಿಕೊಂಡಿತು.

ಈ ಯೋಜನೆಯನ್ನು ಜಾರಿಗೆ ತರಲು ಕಾರಣವೇನೆಂದರೆ ಬ್ರಿಟಿಷರು ತಮ್ಮ ಆಳ್ವಿಕೆಯಲ್ಲಿ ಭಾರತದ ರಾಜಕೀಯ ಕ್ಷೇತ್ರವಲ್ಲದೆ, ಆರ್ಥಿಕ ಕ್ಷೇತ್ರಗಳಾದ ಕೈಗಾರಿಕ ಕ್ಷೇತ್ರ, ಕೃಷಿ ಕ್ಷೇತ್ರ ಹಾಗೂ ಗ್ರಾಮೀಣ ಗೃಹ ಕೈಗಾರಿಕೆಗಳನ್ನು ವ್ಯವಸ್ಥಿತವಾಗಿ ಹಾಳು ಮಾಡಿದ್ದರು. ಇದೇ ಕಾಲಕ್ಕೆ ದೇಶವು ವಿಭಜನೆಗೊಂಡಿದ್ದರಿಂದ ಭಾರತದ ಆರ್ಥಿಕ ಕ್ಷೇತ್ರ ಮತ್ತಷ್ಟು ಜರ್ಜರಿತವಾಗಿತ್ತು. ನೂತನ ಕೇಂದ್ರ ಸರ್ಕಾರ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿತ್ತು. ಇದರ ಫಲವೇ "ಪಂಚವಾರ್ಷಿಕ ಯೋಜನೆ"ಗಳ ಅನುಷ್ಠಾನ. ಇದರ ಉದ್ದೇಶ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದು ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು. ಇದು ಕೃಷಿ, ನೀರಾವರಿ, ವಿದ್ಯುತ್ ಉತ್ಪಾದನೆ ಹಾಗೂ ಖಾಸಗಿ ಕೈಗಾರಿಕೆಗಳ ಅಭಿವೃದಿಗೆ ಮೊದಲ ಆದ್ಯತೆ ನೀಡಿ ಪ್ರೋತ್ಸಾಹಿಸಲಾಯಿತು.

ಕೆ.ಸಿ. ರೆಡ್ಡಿ ಸರ್ಕಾರ ಪ್ರಮುಖವಾಗಿ ವಿದ್ಯಾಭ್ಯಾಸ, ಆರೋಗ್ಯ, ಸಹಕಾರ ಸಂಘಗಳು, ವಿದ್ಯುಚ್ಛಕ್ತಿ ಪ್ರಸಾರ, ಪಶುವೈದ್ಯ ಶಾಲೆಗಳು, ಮದ್ಯಪಾನ ನಿರೋಧ, ಕೈಗಾರಿಕೆಗಳು ಇತ್ಯಾದಿಗಳ ಬಗ್ಗೆ ಪ್ರಸ್ತಾಪಿಸಿದೆ.

ವಿದ್ಯಾಭ್ಯಾಸ

ಕಳೆದ ನಾಲ್ಕು ವರ್ಷಗಳಲ್ಲಿ ವಿದ್ಯಾಸಂಸ್ಥೆಗಳ ಸಂಖ್ಯೆ 10,500 ರಿಂದ 15,500ಕ್ಕೆ ಏರಿದೆ. ವಿದ್ಯಾರ್ಥಿಗಳ ಸಂಖ್ಯೆ ಆರು ಲಕ್ಷ ಐವತ್ತು ಸಾವಿರದಿಂದ ಒಂಭತ್ತು ಲಕ್ಷ ಐವತ್ತು ಸಾವಿರಕ್ಕೆ ಏರಿದೆ. ವಿದ್ಯಾಭ್ಯಾಸದ ವೆಚ್ಚ ಒಂದೂವರೆ ಕೋಟಿ ರೂ.ಗಳಿಂದ ಮೂರು ಕೋಟಿಗೆ ಏರಿದೆ. ಸಾಮಾನ್ಯ ವಿದ್ಯಾಭ್ಯಾಸದ ಶಾಲಾ–ಕಾಲೇಜುಗಳಲ್ಲದೆ, ನ್ಯಾಯಶಾಸ್ತ್ರದ ಮಹಾವಿದ್ಯಾಲಯ, ವಾಣಿಜ್ಯ ಮಹಾವಿದ್ಯಾಲಯ, ಇಂಜಿನಿಯರಿಂಗ್ ಕಾಲೇಜುಗಳು, ಔದ್ಯೋಗಿಕ ಶಿಕ್ಷಣ ಶಾಲೆಗಳು ಸ್ಥಾಪಿತವಾಗಿವೆ. ಅಕ್ಷರಸ್ಥರ ಸಂಖ್ಯೆ ಶೇ. 13 ರಿಂದ ಶೇ. 18ಕ್ಕೆ ಏರಿದೆ. ವಯಸ್ಕರ ಶಿಕ್ಷಣ ಕಾರ್ಯವು ಪ್ರಗತಿ ಪಥದಲ್ಲಿ ನಡೆದಿದೆ. ಈ ಕಾರ್ಯಕ್ಕಾಗಿ 'ವಯಸ್ಕರ ಶಿಕ್ಷಣ ಸಮಿತಿ'ಗೆ ಸರ್ಕಾರ ಪ್ರತಿವರ್ಷ ಐದು ಲಕ್ಷ ರೂ. ಕೊಡುತ್ತಿದೆ.

ಆರೋಗ್ಯ

ವೈದ್ಯಕೀಯ ಸಂಸ್ಥೆಗಳ ಸಂಖ್ಯೆ 400 ರಿಂದ 500ಕ್ಕೆ ಏರಿದೆ. ಅರವತ್ತು ಸಾವಿರ ಚದರ ಮೈಲಿಗೆ ಅಥವಾ ಹದಿನೈದು ಸಾವಿರ ಜನಸಂಖ್ಯೆಗೆ ಒಂದರಂತೆ ಆಸ್ಪತ್ರೆ ಇರುವುದೆಂದರೆ ಅದು ಸಾಮಾನ್ಯ ಸಾಧನೆಯೇನಲ್ಲ. ಆರೋಗ್ಯ ಕೇಂದ್ರಗಳ ಸಂಖ್ಯೆ 68 ರಿಂದ 120ಕ್ಕೆ ಏರಿದೆ. ಮಲೇರಿಯಾ ಹತೋಟಿ ಕಾರ್ಯ, ಕ್ಷಯರೋಗ ಚಿಕಿತ್ಸೆ ಕಾರ್ಯ ಪರಿಣಾಮಕಾರಿಯಾಗಿ ನಡೆದಿದೆ. ತೊನ್ನು ರೋಗದ – ಆರೋಗ್ಯ ಮಂದಿರದ ಸ್ಥಾಪನೆಗೆ ಒಪ್ಪಿಗೆ ದೊರೆತಿದೆ, ಚಲಿಸುವ ಆಸ್ಪತ್ರೆ ವ್ಯವಸ್ಥೆಯೂ ಆಗಲಿದೆ.

ಸಹಕಾರ ಸಂಘಗಳು

ಸಹಕಾರ ಸಂಘಗಳ ಸಂಖ್ಯೆ 2,500 ರಿಂದ 5,000ಕ್ಕೆ ಏರಿದೆ. ಸದಸ್ಯ ಬಲ ಹಾಗೂ ವಹಿವಾಟಿನ ಪ್ರಗತಿಯೂ ಚೆನ್ನಾಗಿದೆ. ಸದಸ್ಯ ಸಂಖ್ಯೆ ಎರಡೂವರೆ ಲಕ್ಷದಿಂದ ಐದು ಲಕ್ಷಕ್ಕೂ, ವಹಿವಾಟು ಇಪ್ಪತ್ತೆಂಟುವರೆ ಕೋಟಿ ರೂ.ನಿಂದ ನಲವತ್ತೊಂದುವರೆ ಕೋಟಿಗೂ ಏರಿದೆ. ಈ ವಿಷಯದಲ್ಲಿ ಆಗಿರುವ ಕಾರ್ಯ ಮಹತ್ವ ಪೂರ್ಣವಾದುದು.

ವಿದ್ಯುಚ್ಛಕ್ತಿ ಪ್ರಸಾರ

ವಿದ್ಯುತ್‌ದೀಪ ಒದಗಿಸಿರುವ ಸ್ಥಳಗಳ ಸಂಖ್ಯೆ 228 ರಿಂದ 469ಕ್ಕೆ ಏರಿದೆ. ವಿದ್ಯುಚ್ಛಕ್ತಿ ನೀರಾವರಿ ಪಂಪುಗಳ ಸಂಖ್ಯೆ 1,000 ದಿಂದ 2,500ಕ್ಕೆ ಏರಿದೆ. ದೀಪಗಳ ಸಂಖ್ಯೆ 56,000 ದಿಂದ 92,000ಕ್ಕೆ ಏರಿದೆ. ಅಶ್ವಶಕ್ತಿಯ ಬೇಡಿಕೆ ಹೆಚ್ಚಾಗಿದ್ದರಿಂದ 30 ಕೋಟಿ ವೆಚ್ಚದಿಂದ 50 ಕೋಟಿಗೆ ಮುಟ್ಟಿದೆ. ಪ್ರಸಾರ–ಸಾಲುಗಳ ಉದ್ದ 1198 ರಿಂದ

1648ಕ್ಕೂ, ಬೀದಿ ದೀಪಗಳ ಸಂಖ್ಯೆ 19,468 ರಿಂದ 25,055ಕ್ಕೂ, ಶಕ್ತಿ ಸ್ಥಾಪನೆ 3,6000 ರಿಂದ 6,200ಕ್ಕೂ, ಮನೆ ಉಷ್ಣವರ್ಧಕಗಳ ಸಂಖ್ಯೆ 2,400 ರಿಂದ 5,000ಕ್ಕೂ. ಇಲಾಖೆಯ ಆದಾಯ ಒಂದು ಕೋಟಿ ರೂಪಾಯಿಯಿಂದ ಒಂದು ಕೋಟಿ ಅರವತ್ತೊಂದು ಲಕ್ಷ ರೂಪಾಯಿಗೂ ಏರಿದೆ.

ಪಶು ವೈದ್ಯ ಶಾಲೆಗಳು

ಪಶುವೈದ್ಯ ಶಾಲೆಗಳ ಸಂಖ್ಯೆ 139 ರಿಂದ 193ಕ್ಕೆ ಏರಿದೆ. ಚಿಕಿತ್ಸೆ ಪಡೆದ ಪಶುಗಳ ಸಂಖ್ಯೆ ಐದು ಲಕ್ಷದಿಂದ ಎಂಟು ಲಕ್ಷಕ್ಕೆ ಏರಿದೆ. 25,000 ಪ್ರಾಣಿಗಳಿಗೊಂದರಂತೆ ಪಶುವೈದ್ಯಶಾಲೆ ಇರಬೇಕೆಂಬುದು 'ರಾಯಲ್ ಕಮೀಷನ್' ಶಿಫಾರಸ್ಸು. ಆ ಗುರಿಯನ್ನು ಸ್ವಲ್ಪ ಹೆಚ್ಚು ಕಡಮೆ ನಾವು ಮುಟ್ಟಿದ್ದೇವೆ ಎನ್ನಬಹುದು.

ಮದ್ಯಪಾನ ನಿರೋಧ

ದೇಶದ ಮೂರನೇ ಎರಡು ಭಾಗದಲ್ಲಿ ಮದ್ಯಪಾನ ನಿಷೇಧ ಜಾರಿಯಲ್ಲಿದೆ. ಹೆಂಡದ ಅಂಗಡಿಗಳ ಸಂಖ್ಯೆ 3,000 ದಿಂದ 900ಕ್ಕೆ ಇಳಿದಿದ್ದೇ ಇದಕ್ಕೆ ಸಾಕ್ಷಿ. ಈ ಸಂಬಂಧದಲ್ಲಿ ಅಪರಾಧಿಗಳ ಸಂಖ್ಯೆ 4,721 ರಿಂದ 2,209ಕ್ಕೆ ಇಳಿದಿದೆ. ಮದ್ಯಪಾನ ನಿಷೇಧದ ದೆಸೆಯಿಂದ ನಮ್ಮ ಸರ್ಕಾರಕ್ಕೆ ಆದಾಯದಲ್ಲಿ ಪ್ರತಿವರ್ಷ ಒಂದು ಕೋಟಿ ರೂಪಾಯಿ ಖೋತಾ ಆಗುತ್ತಿದೆ.

ಕೈಗಾರಿಕೆಗಳು

ಕಬ್ಬಿಣ ಮತ್ತು ಉಕ್ಕಿನ ಉತ್ಪನ್ನ ನಾಲ್ಕರಷ್ಟು ಹೆಚ್ಚಿದೆ. ಸಿಮೆಂಟ್ ಉತ್ಪನ್ನ ಮೂರರಷ್ಟು ಹೆಚ್ಚಿದೆ. ಹುಳಿದ್ರಾವಕ – ಉತ್ಪನ್ನ ಉದ್ಯಮ ಹಾಗೂ ದ್ವಿಶಕ್ತಿಯೋಗ ಕಬ್ಬಿಣ ಉತ್ಪನ್ನ ಉದ್ಯಮಗಳು ಸ್ಥಾಪಿತವಾಗಿದೆ. ಭದ್ರಾವತಿ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆ, ಇನ್ನೂ ಹಲವು ಕೈಗಾರಿಕೆಗಳನ್ನು (ವಿದ್ಯುಚ್ಛಕ್ತಿ ಕೈಗಾರಿಕೆ) ಸ್ಥಾಪಿಸುವ ಆಲೋಚನೆ ಇದೆ.

ಸರ್ ಎಂ. ವಿಶ್ವೇಶ್ವರಯ್ಯನವರ ಯೋಜನೆಯಂತೆ ಎರಡು ಜಿಲ್ಲೆಗಳಲ್ಲಿ ಗ್ರಾಮ ಕೈಗಾರಿಕೆಗಳ ಉನ್ನತಿಕಾರ್ಯ ನಡೆದಿದೆ. ಅವರ ಮಾರ್ಗದರ್ಶನದಲ್ಲಿ 'ಗ್ರಾಮ ಕೈಗಾರಿಕಾ ಸಮಿತಿ'ಗಳು ಕೆಲಸ ಮಾಡುತ್ತಿವೆ. ಟೆಲಿಫೋನ್ ಕಾರ್ಖಾನೆಯನ್ನೂ, ಮಿಷನ್ ಟೂಲ್ ಕಾರ್ಖಾನೆಯನ್ನೂ, ಕೇಂದ್ರ ಆಹಾರ ಪರಿಶೋಧನ ಸಂಸ್ಥೆಯನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರ ನೆರವು ನೀಡಿದೆ. ಜಿಲ್ಲಾ ಹಾಗೂ ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಗಳು ಸ್ಥಾಪಿತವಾಗಿವೆ, ಗ್ರಾಮಾಂತರ ರಸ್ತೆಗಳ ನಿರ್ಮಾಣ, ಚರಂಡಿ ಹಾಗೂ

ನೈರ್ಮಲ್ಯ ವ್ಯವಸ್ಥೆ, ತೋಪು ಬಡಾವಣೆ, ಕುಡಿಯುವ ನೀರಿನ ಬಾವಿ ವ್ಯವಸ್ಥೆ, ಗೊಬ್ಬರವನ್ನು ತಯಾರಿಸುವುದು, ರೇಡಿಯೋ ಸೌಕರ್ಯ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿವೆ. 2,000 ಮೈಲಿ ಉದ್ದದ ರಸ್ತೆ, 3,000 ಚರಂಡಿ ಸೌಕರ್ಯ, 1,000 ಗ್ರಾಮ ಬಡಾವಣೆಗಳು, 22 ಲಕ್ಷ ಮರಗಿಡ ನೆಡುವುದು, 35,000 ಗೊಬ್ಬರದ ಗುಂಡಿಗಳು ಈ ಕಾರ್ಯಗಳೆಲ್ಲಾನಡೆದಿವೆ.

ವನ ಮಹೋತ್ಸವ ಕಾರ್ಯವನ್ನು ಚೆನ್ನಾಗಿ ಮಾಡಿರುವುದಕ್ಕಾಗಿ ಭಾರತ ಸರ್ಕಾರದ ಪ್ರಪ್ರಥಮ ಬಹುಮಾನ ಮೈಸೂರು ರಾಜ್ಯಕ್ಕೆ ಲಭಿಸಿದೆ. ದಲಿತ ವರ್ಗದವರ ಗೃಹ ನಿರ್ಮಾಣಕ್ಕಾಗಿ (15,000 ಮನೆಗಳು) ಒಂದು ಕೋಟಿ ರೂ. ವೆಚ್ಚ ಮಾಡಲಾಗಿದೆ. ಅರಣ್ಯ ಇಲಾಖೆಯವರು 3,000 ಎಕರೆ ವಿಸ್ತೀರ್ಣದಲ್ಲಿ ಕಾಡು ಬೆಳೆಸುವ ಕಾರ್ಯ ಮಾಡಿದ್ದಾರೆ. ಈ ಇಲಾಖೆಯ ಆದಾಯ 61 ಲಕ್ಷದಿಂದ 75 ಲಕ್ಷಕ್ಕೆ ಏರಿದೆ. ಚಿನ್ನದ ಗಣಿಯಂತೂ ಇದ್ದೇ ಇದೆ. ಇತರ ಹಲವು 'ಖನಿಜ'ಗಳನ್ನು ಶೋಧಿಸುವ ಪ್ರಯತ್ನ ಸಾಗಿದೆ. ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಈವರೆಗೆ ಭಾರತ ಸರ್ಕಾರ ಎರಡು ಕೋಟಿ ರೂ. ಸಹಾಯ ಮಾಡಿದೆ. ಈ ಯೋಜನೆಯ ಪ್ರಕಾರ 1,000 ನೀರಾವರಿ ಬಾವಿಗಳನ್ನು (ಬಾವಿಗೆ 500 ರೂ. ನಿಂದ 1,000 ರೂ. ವರೆಗೆ ಹಣ ಸಹಾಯ ಪಡೆದು) ತೋಡಲಾಗಿದೆ. 22,000 ಎಕರೆ ಭೂಮಿಗೆ ನೀರಿನ ವಸತಿ ಕೊಡುವ 18 ದೊಡ್ಡ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹಲವು ಆಗಲೇ ಮುಗಿದಿವೆ. 250 ಕೆರೆಗಳ ದುರಸ್ತಿ ಆಗಿದೆ. ಇನ್ನೂ 500 ಕೆರೆಗಳ ದುರಸ್ತಿ ಆಗಲಿದೆ. ನದಿ, ಕೆರೆ ಮೊದಲಾದವುಳಿಂದ ನೀರಿನ ವಸತಿ ಒದಗಿಸುವ ಕಾರ್ಯ ಭರದಿಂದ ಸಾಗಿದೆ.

ಕಳೆದ ಎರಡು ವರ್ಷಗಳಲ್ಲಿಯೇ 700 ಕಾಮಗಾರಿಗಳು ಮುಗಿದು, ಇನ್ನೂ 250 ಆಗಲಿವೆ. ಭೂಮಿ ದುರಸ್ತಿಯ ಕಾರ್ಯವು ಚೆನ್ನಾಗಿ ಆಗುತ್ತಿದೆ. ಇಂತಹ 123 ಕಾಮಗಾರಿಗಳು ಮುಗಿದು ಇನ್ನೂ 240 ಆಗಲಿವೆ. 22,000 ಎಕರೆ ಅರಣ್ಯ ಭೂಮಿಯನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ. ಬಿತ್ತನೆ ಧಾನ್ಯ, ಹಿಂಡಿ, ಗೊಬ್ಬರ, ವ್ಯವಸಾಯದ ಉಪಕರಣಗಳು ಇವುಗಳನ್ನು ಕಳೆದ ಎರಡು ವರ್ಷಗಳಲ್ಲಿ ಹೇರಳವಾಗಿ ಒದಗಿಸಲಾಗಿದೆ. ಟ್ರ್ಯಾಕ್ಟರುಗಳ, ಬುಲ್ಡೋಸರ್‌ಗಳ ಸೌಕರ್ಯವನ್ನೂ ರೈತರಿಗೆ ಮಾಡಿಕೊಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 40,000 ಎಕರೆ ಭೂಮಿಯನ್ನು ಸರ್ಕಾರ ವ್ಯವಸಾಯಕ್ಕಾಗಿ ಕೊಟ್ಟಿದೆ. ತಕಾವಿ ಸಾಲದ ವ್ಯವಸ್ಥೆಯೂ ಆಗಿದೆ. ಎರಡೇ ವರ್ಷದಲ್ಲಿ 6 ಲಕ್ಷರೂ. ಕೊಡಲಾಗಿದೆ. 9,000ಎಕರೆ ಭೂಮಿಯನ್ನು ಸಹಕಾರದ ತತ್ವದ ಮೇಲೆ ವ್ಯವಸಾಯ ಮಾಡಲು ಸಹಕಾರ ಸಂಘಗಳಿಗೆ ಕೊಟ್ಟಿದೆ. ಧಾರಾಳವಾಗಿ ಸಾಲವನ್ನು ಕೊಡಲಾಗಿದೆ. ಮೈಸೂರು ರಾಜ್ಯದ ಜನಸಂಖ್ಯೆ 73 ಲಕ್ಷದಿಂದ 90 ಲಕ್ಷಕ್ಕೆ ಏರಿತು.

ರಾಜ್ಯದಲ್ಲಿ ಕೂಲಿಗಾರರಿಗೆ, ದಲಿತ ವರ್ಗಗಳವರಿಗೆ, ವ್ಯವಸಾಯ ಹಾಗೂ ನೀರಾವರಿಗೆ ಸಂಬಂಧಿಸಿದಂತೆ ಅನೇಕ ಉಪಯುಕ್ತ ಶಾಸನಗಳನ್ನು ಸರ್ಕಾರ ಮಾಡಿದೆ. ಭೂ-ಸುಧಾರಣೆಗೆ ಸಂಬಂಧಿಸಿದಂತೆ ಜೋಡಿ-ಇನಾಮುಗಳ ನಿರ್ಮೂಲನ, ಗುತ್ತಿಗೆ ಪದ್ಧತಿ ರೀತಿಯಲ್ಲೂ ಶಾಸನಗಳಾಗಿವೆ. ಕಾರ್ಪೋರೇಷನ್ ಹಾಗೂ ಮುನ್ಸಿಪಾಲಿಟಿಗಳಿಗೆ ಸಂಬಂಧಿಸಿದ ಶಾಸನಗಳೂ ಆಗಿವೆ. ವಿಶ್ವವಿದ್ಯಾಲಯ, ಜಿಲ್ಲಾ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಶಾಸನಗಳು ಆಗಿವೆ.

ಅಖಿಲ ಭಾರತಕ್ಕೆ ಸಂಬಂಧಿಸಿದ 'ಪಂಚವಾರ್ಷಿಕ ಯೋಜನೆ'ಯನ್ನು ಅನುಸರಿಸಿ, ಮೈಸೂರು ರಾಜ್ಯಕ್ಕೆ ಅನ್ವಯಿಸುವಂತೆ 'ಪಂಚವಾರ್ಷಿಕ ಯೋಜನೆ'ಯೊಂದನ್ನು ಕೆ.ಸಿ. ರೆಡ್ಡಿ ಅವರ ಸರ್ಕಾರ ಮೊಟ್ಟ ಮೊದಲ ಬಾರಿಗೆ ರೂಪಿಸಿದೆ. ಈ ಯೋಜನೆ ಪ್ರಕಾರ 5 ವರ್ಷಗಳಲ್ಲಿ 36.6 ಕೋಟಿ ರೂ.ಗಳ ವೆಚ್ಚ ಆಗಬೇಕಾಗುತ್ತದೆ. ಈಗ ಪ್ರತಿ ವರ್ಷ ಆಗುತ್ತಿರುವ ಖರ್ಚಿಗಿಂತ ಹೆಚ್ಚಾಗಿದೆ. ಅಂದರೆ ಈಗಿರುವ ಸಮಾಜ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದಕ್ಕೂ, ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೂ ಪ್ರತಿವರ್ಷ 20 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದೆಂದು ಅರ್ಥ.

'ಪಂಚವಾರ್ಷಿಕ ಯೋಜನೆ'ಗೆ ಸಂಬಂಧಿಸಿದಂತೆ ಮಾಡಿದ ಖರ್ಚಿನಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಭಿವೃದ್ಧಿಗಾಗಿ ಭಾರತ ಸರ್ಕಾರ ಕೊಡಲಿರುವ 429.25 ಲಕ್ಷ ರೂ. ಸೇರ್ಪಡೆಯಾಗಿಲ್ಲ. ಅದೇ ಬೇರೆ ರಸಾಯನಿಕ ಹಾಗೂ ಯೋಜನೆಗೂ ವಿದ್ಯುಚ್ಛಕ್ತಿ ಕೈಗಾರಿಕೆಗೂ ಭಾರತ ಸರ್ಕಾರ ಬೇರೆ ಹಣ ಸಹಾಯ ಒದಗಿಸುತ್ತಿದೆ. ಹೊನ್ನೆಮರಡು, ಮೇಕೆದಾಟು, ಕಪಿನಿ ವಿದ್ಯುತ್ ಯೋಜನೆಗೂ ಭಾರತ ಸರ್ಕಾರ ಹಣ ಒದಗಿಸಬೇಕೆಂದೂ. ಲಕ್ಕವಳ್ಳಿ ಜಲಾಶಯದ ಕಾರ್ಯವನ್ನು ವಹಿಸಿಕೊಳ್ಳಬೇಕೆಂದೂ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.[74]

ಈ ಮೇಲಿನ ಕೆ.ಸಿ. ರೆಡ್ಡಿ ಅವರ ಸರ್ಕಾರದ ಸಾಧನೆಗಳನ್ನು ಯಾವುದೇ ಉದ್ವೇಗಕ್ಕೊಳಗಾಗದೆ ಉತ್ಪ್ರೇಕ್ಷೆ ಮಾಡದೆ ಕೂಲಂಕುಶವಾಗಿ ಅವಲೋಕಿಸಿದ್ದೇ ಆದರೆ ಒಂದು ಚಿತ್ರಣ ಸ್ಪಷ್ಟವಾಗುತ್ತದೆ. ಅದು ಕೆ.ಸಿ. ರೆಡ್ಡಿ ಅವರು ವೇಗವಾಗಿ ಬದಲಾಗುತ್ತಿದ್ದ ಜಗತ್ತನ್ನು ಸ್ವತಃ ಕಂಡಿದ್ದು, ಅದಕ್ಕೆ ತಕ್ಕಂತೆ ಸ್ವತಂತ್ರ ಭಾರತದ ರಾಜ್ಯಗಳು ಹೊಂದಿ ಕೊಳ್ಳಲೇಬೇಕಾದ ಅನಿವಾರ್ಯತೆ, ರಾಜ್ಯದ ಮುಖ್ಯಮಂತ್ರಿಯಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ 'ಮಾದರಿ ರಾಜ್ಯ'ಕ್ಕೆ ಅಸ್ತಿಭಾರ ಹಾಕಿ, ಅದನ್ನು ಮುಂದಿನ ಜನಾಂಗಕ್ಕಾಗಿ ರೂಪಿಸಲು ಶ್ರಮಿಸಿದ್ದಾರೆ ಎಂದು ಸ್ಪಷ್ಟವಾಗುತ್ತದೆ.

---

74. ಪ್ರಕಟನೆ : ಮಹಾ ಚುನಾವಣೆ ಬುಲೆಟಿ, ಅಖಿಲ ಭಾರತ ಕಾಂಗ್ರೆಸ್. ಪುಟ-8.

6ಕೆ.ಸಿ. ರೆಡ್ಡಿ ಆಗಿನ ಕಾಲದ ಜನರಿಗಿಂತ ಎಲ್ಲಾ ರಂಗಗಳಲ್ಲೂ, ಅಭಿವೃದ್ಧಿಯ ಪಥದಲ್ಲಿ ತುಂಬಾ ಮುಂದಾಲೋಚನೆಯುಳ್ಳ ಆಧುನಿಕ ವ್ಯಕ್ತಿಯಾಗಿರುವುದು ಕಂಡು ಬರುತ್ತದೆ. ಆದ್ದರಿಂದಲೇ ರೆಡ್ಡಿ ಅವರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರಿಯಾದ ಅರಿವಿಲ್ಲದ ಕೆಲವು ವ್ಯಕ್ತಿಗಳು, ಕೆಲವು ಪತ್ರಿಕೆಗಳು ಹಾಗೂ ಕೆಲವು ಬರಹಗಾರರು ಟೀಕಿಸಿರುವುದನ್ನು ಸಹಾ ಕಾಣಬಹುದು.

ಆದರೆ ಸುಮಾರು ಅರವತ್ತೇಳು ವರ್ಷಗಳ ನಂತರ ಕೆ.ಸಿ. ರೆಡ್ಡಿ ಅವರ ರಾಜಕೀಯ, ಆಡಳಿತವನ್ನು ಸಂಶೋಧನೆ ಮಾಡುವ ಮೂಲಕ ವಿಶ್ಲೇಷಿಸಿರುವುದರಿಂದ ಆ ಆರೋಪಗಳಲ್ಲಿ ಯಾವುದೇ ಹುರುಳಿಲ್ಲವೆಂದೂ, ಅವು ಕೇವಲ ದೂರದೃಷ್ಟಿ ಕೊರತೆ, ವೈಯಕ್ತಿಕ ದ್ವೇಷ, ಅಧಿಕಾರ ದಾಹ ಮತ್ತು ಜಾತಿ ರಾಜಕೀಯದಿಂದಲೂ ಕೂಡಿರುವುದು ಸ್ಪಷ್ಟವಾಗುತ್ತದೆ. ಆದರೆ ಕೆ.ಸಿ. ರೆಡ್ಡಿ ತಮ್ಮ ಅವಧಿಯಲ್ಲಿ ನಿಸ್ವಾರ್ಥತೆ, ಪ್ರಾಮಾಣಿಕತೆ, ದೂರದೃಷ್ಟಿ, ರಾಜಕೀಯ ಇಚ್ಛಾಶಕ್ತಿಗಳನ್ನು ಆಡಳಿತದ ಎಲ್ಲಾ ಕ್ಷೇತ್ರಗಳಲ್ಲೂ ಅಳವಡಿಸಿ ಕೊಂಡಿರುವುದಕ್ಕೆ ಈ ಮೇಲಿನ ಸಾಧನೆಗಳೇ ಸಾಕ್ಷಿಯಾಗಿವೆ.

ಹೀಗೆ ಕೆ.ಸಿ. ರೆಡ್ಡಿ ಹಾಗೂ ಸಂಪುಟದ ಸಚಿವರುಗಳು ಮೈಸೂರು ರಾಜ್ಯದ ಜನತೆಯ ಆಶೋತ್ತರಗಳಂತೆ ನಿಸ್ವಾರ್ಥ, ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವುದರ ಮೂಲಕ ಭದ್ರಬುನಾದಿಯನ್ನು ಹಾಕಿ ನವಯುಗಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿ ಆಗಿದ್ದಾರೆ ಎಂದು ದೃಢವಾಗಿ ಹೇಳಬಹುದು.

ಆದ್ದರಿಂದ ಕೆ.ಸಿ. ರೆಡ್ಡಿ ಅವರನ್ನು ಆಧುನಿಕ ಭಾರತದ ನವಕರ್ನಾಟಕ ರಾಜ್ಯದ ಮಾದರಿ ಮುಖ್ಯಮಂತ್ರಿ ಎಂದು ಕರೆಯಬಹುದು.

❖❖

ಅಧ್ಯಾಯ – 6

ಸಂಸದೀಯ ಪಟುವಾಗಿ ಕೆ.ಸಿ. ರೆಡ್ಡಿ

1. ಹಿನ್ನೆಲೆ

ಮೈಸೂರು, ಭಾರತದಲ್ಲಿಯೇ ಅತ್ಯಂತ ದೀರ್ಘಾವಧಿ ಸಂಸದೀಯ ಇತಿಹಾಸ ಹೊಂದಿರುವ ರಾಜ್ಯವಾಗಿತ್ತು. ಇದು ಹಿಂದೆ ಕೇವಲ ಅರಿಕೆದಾರರ ಕೂಟವಾಗಿದ್ದು, ಆ ನಂತರದ ಕಾಲಘಟ್ಟದಲ್ಲಿ ಪೂರ್ಣ ಪ್ರಜಾಪ್ರಭುತ್ವದ ಬುನಾದಿಯನ್ನು ಹಾಕಿದ ಮಹಾ ಸಂಸ್ಥೆಯೆಂದು ಪರಿಗಣಿಸಲ್ಪಟ್ಟಿರುವುದು ವಿಶೇಷ. ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಗಳಲ್ಲಿನ ಸಂಸದೀಯ ಕಲಾಪಗಳು ಬೌದ್ಧಿಕವಾಗಿ, ತರ್ಕಬದ್ಧವಾಗಿ ಹಾಗೂ ಸ್ವಾರಸ್ಯಯುತವಾಗಿಯೂ ಇರುತ್ತಿತ್ತು ಎಂಬುದಕ್ಕೆ ಸಾಕ್ಷಿ ಇಲ್ಲಿದೆ.

ಹಿಂದಿನ ಸಮಾಜ, ಇಂದಿನದಕ್ಕಿಂತ ಎಷ್ಟೋ ಅಂಶಗಳಲ್ಲಿ ಭಿನ್ನ, ಬಹಳ ನಿಧಾನ, ಉದಾಸೀನ ತುಂಬಿದ ಆ ಸಮುದಾಯದೊಳಗಿನಿಂದ ಆಗ ತಾನೇ ಹೊಸ ಚೇತನವೊಂದು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗೆ ಪ್ರವೇಶಿಸಿತು. ಅವರೇ ಕೋಲಾರ ಜಿಲ್ಲೆಯ ಮೂಡಲತಾರೆ ಕೆ.ಸಿ. ರೆಡ್ಡಿ. ಅವರು 1930ರಿಂದ 1952ರವರೆಗೆ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ನಿರಂತರವಾಗಿ ಆಯ್ಕೆಯಾಗಿ, ಪ್ರಾಮಾಣಿಕ ಸಂಸದೀಯ ಪಟುವಾಗಿ, ತನ್ನ ಕೌಶಲ್ಯ, ಬುದ್ಧಿಚಾತುರ್ಯ, ತರ್ಕಬದ್ಧವೂ ಹಾಗೂ ವಿಚಾರಪೂರ್ಣ ಚರ್ಚೆಗಳಿಂದ ಅತ್ಯಂತ ಹಿಂದುಳಿದ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಮೈಸೂರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಜನಸಾಮಾನ್ಯರ ಹಕ್ಕುಗಳಿಗೆಗಾಗಿ ಮತ್ತು ಏಳಿಗೆಗಾಗಿ ಶ್ರಮಿಸಿರುವ ಮೊದಲ ಸಾಲಿನ ಮೊದಲಿಗರು ಎಂದು ಪರಿಗಣಿಸಲ್ಪಡಬೇಕಾಗಿದೆ.

ಕೆ.ಸಿ. ರೆಡ್ಡಿ ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆಗೆ 1930 ರಿಂದ 1933, 1933 ರಿಂದ 1936, 1941 ರಿಂದ 1945 ಮತ್ತು 1950 ರಿಂದ 1952ರವರೆಗೆ ಆಯ್ಕೆಯಾಗಿದ್ದಾರೆ. 1941ರಿಂದ 1945ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ 'ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದಾರೆ'.[1] ಮೈಸೂರು ನ್ಯಾಯವಿಧಾಯಕ ಸಭೆಗೆ 1930 ರಿಂದ 1932, 1932 ರಿಂದ 1934, 1934 ರಿಂದ 1936, 1936 ರಿಂದ 1937ರ ಡಿಸೆಂಬರ್ (ರಾಜೀನಾಮೆ),

---

1. The Mysore Gazette : 1930-1952.

1945 ರಿಂದ 1949ರವರೆಗೂ ಆಯ್ಕೆಯಾಗಿ, ಇದೇ ಅವಧಿಯಲ್ಲಿ ನ್ಯಾಯವಿಧಾಯಕ ಸಭೆಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದಾರೆ.[2] 1930 ರಿಂದ 1937ರ ಅವಧಿಯಲ್ಲಿ ಕೆ.ಸಿ. ರೆಡ್ಡಿ ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಗಳಲ್ಲಿ ಪ್ರಜಾಪಕ್ಷ ಮತ್ತು ಪ್ರಜಾ ಸಂಯುಕ್ತ ಪಕ್ಷದ ಅಧ್ಯಕ್ಷರು ಆಗಿ ಸೇವೆ ಸಲ್ಲಿಸಿದ್ದಾರೆ.[3]

ಮಹಾರಾಜರ ಸರ್ಕಾರ ರಾಜ್ಯದ ಅಭಿವೃದ್ಧಿಗೆ ರಚಿಸುತ್ತಿದ್ದ ಉನ್ನತ ಸಮಿತಿಗಳಿಗೆ ಅರ್ಹರು ಮತ್ತು ಪ್ರಾಮಾಣಿಕ ದಕ್ಷ ಸದಸ್ಯರನ್ನು ಮಾತ್ರ ನೇಮಿಸಲಾಗುತ್ತಿತ್ತು. ಕೆ.ಸಿ. ರೆಡ್ಡಿ ಅವರು ಈ ಎರಡೂ ಸಭೆಗಳಲ್ಲಿ ಸರ್ಕಾರದಿಂದ ನೇಮಕಗೊಂಡು ಸುಮಾರು 50ಕ್ಕೂ ಹೆಚ್ಚು ವಿಶೇಷ ಸಮಿತಿಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿರುವುದನ್ನು ಕಾಣಬಹುದು.[4] ಭಾರತ ಸ್ವಾತಂತ್ರ್ಯಗೊಂಡ ನಂತರ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ 1947ರ ಅಕ್ಟೋಬರ್ 24 ರಿಂದ 1952 ರ ಮಾರ್ಚ್ 30 ರವರೆಗೆ ಸಲ್ಲಿಸಿರುವ ಸೇವೆಗೆ ಇಂದಿನ ಕರ್ನಾಟಕದ ಜನರು ರೆಡ್ಡಿ ಅವರನ್ನು ನೆನಪಿಸಿಕೊಳ್ಳಲೇಬೇಕಾದ ಅಗತ್ಯತೆ ಎಂದಿಗಿಂತಲೂ ಇಂದು ಹೆಚ್ಚಾಗಿ ಕಂಡುಬರುತ್ತಿದೆ ಎಂದು ದೃಢವಾಗಿ ಹೇಳಬಹುದು.

ಹೀಗೆ ಕೆ.ಸಿ.ರೆಡ್ಡಿ ಅವರು ಎಂ.ಆರ್.ಎ. ಮತ್ತು ಎಂ.ಎಲ್.ಸಿ. ಸಭೆಗಳಲ್ಲಿ ಪ್ರಜಾಪಕ್ಷ, ಪ್ರಜಾ ಸಂಯುಕ್ತ ಪಕ್ಷ, ಮೈಸೂರು ಕಾಂಗ್ರೆಸ್‌ನ ಸಂಸದೀಯ ಪಟುವಾಗಿ ಮೈಸೂರು ರಾಜ್ಯದ ಜನತೆಯ ಹಲವಾರು ಜಟಿಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕವಾಗಿ ಚರ್ಚಿಸಿ, ಆ ಸಮಸ್ಯೆಗಳ ನಿವಾರಣೆಗೆ ಶ್ರಮಿಸಿರುವುದನ್ನು ಕಾಣಬಹುದು.

2. ಪೌರ ರಕ್ಷಕ ಮಸೂದೆ ಮತ್ತು ಕೆ.ಸಿ. ರೆಡ್ಡಿ

1940ರ ಮೈಸೂರು ಪ್ರಜಾಪ್ರತಿನಿಧಿ ಸಭೆ ಅಧಿವೇಶನದಲ್ಲಿ ಸರ್ಕಾರ ತುರ್ತುಶಾಸನದ ಬದಲು ಪೌರ ರಕ್ಷಕರ ಮಸೂದೆಯನ್ನು ಮಂಡಿಸಿತು. ಇದು ಬ್ರಿಟಿಷ್ ಭಾರತದ ಒಂದು ಸುಗ್ರೀವಾಜ್ಞೆಗೆ ಅನುಗುಣವಾಗಿದ್ದವು. ಇದಕ್ಕಾಗಿ ಸಂಸ್ಥಾನದಲ್ಲಿ ಸಿವಿಕ್ ಗಾರ್ಡ್ಸ್ ಪಡೆ ನೇಮಿಸಬೇಕೆಂದು ಸದಸ್ಯರು ವಾದಿಸಿದರು. ಆದರೆ ಮೈಸೂರು ಕಾಂಗ್ರೆಸ್ ಸದಸ್ಯರು ಇದನ್ನು ವಿರೋಧಿಸಿದರು. ಈ ಚರ್ಚೆಯಲ್ಲಿ ಕೆ.ಸಿ. ರೆಡ್ಡಿ ಅವರು ಸಂಸ್ಥಾನದಲ್ಲಿ ಹಿಂದೂಗಳು ಮತ್ತು ಮುಸ್ಲಿಂರ ನಡುವೆ ಪರಸ್ಪರ ತಿಳುವಳಿಕೆ ಇದೆ, ವಾಸ್ತವವಾಗಿ ಸಿವಿಕ್ ಗಾರ್ಡ್ಸ್

---

2. The Mysore Gazette : 1930-1950
3. ಪ್ರಕಟನೆ : ಪ್ರಜಾಪಕ್ಷ ಮತ್ತು ಪ್ರಜಾ ಸಂಯುಕ್ತ ಪಕ್ಷದ ಪತ್ರಗಳು. 1930–1937.
4. ನಡಾವಳಿಗಳು : ಎಂ.ಆರ್.ಎ. ಮತ್ತು ಎಂ.ಎಲ್.ಸಿ. : 1930 ರಿಂದ 1947.

ಪಡೆಯನ್ನು ರಚಿಸಿದರೆ ಶಾಂತಿಗೆ ಭಂಗ ಬರುವುದು. ಕಳೆದ ಎಂಟು ತಿಂಗಳಲ್ಲಿ ಅವರಿಗೆ ಕೆಲಸವೇ ಇರಲಿಲ್ಲ. ಈಗಾಗಲೇ ಸರ್ಕಾರ ಸಾರ್ವಜನಿಕ ಭದ್ರತೆ ಕಾಯ್ದೆಯನ್ನು ದುರುಪಯೋಗ ಮಾಡುತ್ತಿದೆ. ಕೇವಲ ವಿರೋಧದ ಕಾರಣಕ್ಕಾಗಿಯೇ ಕಾಂಗ್ರೆಸ್ ಈ ಮಸೂದೆಯನ್ನು ವಿರೋಧಿಸುತ್ತಿದೆ ಎಂಬುದು ಸರಿಯಲ್ಲ ಎಂದು ಹೇಳಿದರು.[5]

ಇದೇ ಅಧಿವೇಶನದಲ್ಲಿ ಕೆಲವು ಸದಸ್ಯರು "ರಾಜಕೀಯ ಚಳವಳಿಯಲ್ಲಿ ಭಾಗವಹಿಸಿದ ಕೆಲವರ ಮೇಲೆ ವಿಧಿಸಿದ ಜುಲ್ಮಾನೆ, ಅನರ್ಹತೆ ಮತ್ತು ಇತರ ಶಿಕ್ಷಾಕ್ರಮವನ್ನು ರದ್ದು ಪಡಿಸಬೇಕೆಂದು ಕೇಳಿದರು. ಇದರ ಬಗ್ಗೆ ನಡೆದ ಚರ್ಚೆಯಲ್ಲಿ ಕೆ.ಸಿ. ರೆಡ್ಡಿ ಅವರು ದೇಶದ ಕಾನೂನಗಳಿಂದ ಆಡಳಿತ ನಡೆಯಬೇಕೆಂದು ಹೇಳಿರುವ ಸದಸ್ಯರೊಡನೆ ತಮಗೆ ಭಿನ್ನಾಭಿಪ್ರಾಯ ಇಲ್ಲವೆಂದೂ, ಕಾನೂನನ್ನು ಅತಿಕ್ರಮಿಸಿದ ಕಾಂಗ್ರೆಸ್‌ನವರು ಶಿಕ್ಷೆಯನ್ನು ಅನುಭವಿಸ ಬೇಕಾಗುತ್ತದೆ. ಇದೇ ಭಾವನೆಯಿಂದಲೇ ಕಾಂಗ್ರೆಸ್‌ನವರು ನ್ಯಾಯಾಲಯಗಳಲ್ಲಿ ತಮ್ಮನ್ನು ಸಮರ್ಥಿಸಿ ಕೊಳ್ಳುವವಾದ ಹೂಡಲಿಲ್ಲ. ಶಾಸನವೇ ದಮನಕಾರಿಯಾಗಿದೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಅದನ್ನು ರದ್ದುಪಡಿಸಬೇಕು ಎಂದು ತೋರಿಸುವುದಕ್ಕಾಗಿ ಕಾಂಗ್ರೆಸ್‌ನವರು ಕಾನೂನು ಉಲ್ಲಂಘಿಸಿದರು ಎಂದಿದ್ದಾರೆ.

ಮುಂದುವರೆದು ಸರ್ಕಾರದಿಂದ ಯಾವುದೇ ಸಹಾನುಭೂತಿ ಅಥವಾ ಅನುಗ್ರಹಕ್ಕಾಗಿ ಕೋರುವುದಿಲ್ಲ. ಕಾಂಗ್ರೆಸ್‌ನ ಯಾರೊಬ್ಬರೂ ರಿಯಾಯಿತಿಗಳನ್ನು ಸ್ವೀಕರಿಸುವುದಿಲ್ಲ. ಸರ್ಕಾರ ಜುಲ್ಮಾನೆ ಹಣವನ್ನು ಶೇಖರಿಸಲು ಜನರನ್ನು ಪೀಡಿಸಿ ಉಗ್ರಕ್ರಮಗಳನ್ನು ಕೈಗೊಳ್ಳುತ್ತಿದೆ. ಬ್ರಿಟಿಷ್ ಭಾರತದಲ್ಲಿ ಕೂಡ ವಕೀಲರ ಸನ್ನದುಗಳನ್ನು ಕಸಿದುಕೊಂಡಿಲ್ಲ ಮತ್ತು ಅಪರಾಧಿಗಳು ಎಂದು ಹೇಳಲಾಗಿರುವವರನ್ನು ಚುನಾವಣೆಗಳಿಗೆ ನಿಲ್ಲದಂತೆ ನಿಷೇಧಿಸಿಲ್ಲ. ಮೈಸೂರಿನಲ್ಲಿ ಪ್ರಭುಗಳ ಮತ್ತು ಪ್ರಜೆಗಳ ನಡುವೆ ಹಿತಾಸಕ್ತಿ ಏಕೀಭವಿಸಿದೆ. ಅದಕ್ಕಾಗಿಯೇ ಕಾಂಗ್ರೆಸ್‌ನವರು ಸರ್ಕಾರದಿಂದ ಔದಾರ್ಯಕ್ಕಾಗಿ ಯೋಚಿಸುತ್ತಿಲ್ಲ. ಅವರು ನ್ಯಾಯ ಮತ್ತು ಸಮಂಜಸ ವರ್ತನೆಗಾಗಿ ಮಾತ್ರ ಕೇಳುತ್ತಿದ್ದಾರೆ. ದಮನಕಾರಿ ಆಜ್ಞೆಗಳನ್ನು ಹಿಂದೆಗೆದು ಕೊಳ್ಳುವುದು ಸರ್ಕಾರಕ್ಕೆ ಬಿಟ್ಟಿದ್ದು" ಎಂದು ಹೇಳಿದರು.[6]

3. ದಿವಾನ್ ಎನ್. ಮಾಧವರಾವ್ ಮತು ಕೆ.ಸಿ. ರೆಡ್ಡಿ

ಕೆ.ಸಿ. ರೆಡ್ಡಿ ಅವರು ನ್ಯಾಯಪಕ್ಷಪಾತಿಯಾಗಿದ್ದು ನೇರ ನಡೆನುಡಿಯ ವ್ಯಕ್ತಿತ್ವವನ್ನು ಹೊಂದಿದ್ದರು. ಯಾರಿಗೂ ಅಂಜದೆ, ಅಳುಕದೆ ತಮ್ಮ ಅಭಿಪ್ರಾಯಗಳನ್ನು ಧೈರ್ಯವಾಗಿ

---

5. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1940–41.
6. ಪೂರ್ವೋಕ್ತ : 1940–41.

ಮಂಡಿಸುತ್ತಿದ್ದರು. ಒಮ್ಮೆ ರೆಡ್ಡಿ ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾತನಾಡುತ್ತಾ "ವಕೀಲರ ಸನ್ನದುಗಳನ್ನು ರದ್ದು ಮಾಡುವಂತಹ ಕಾರ್ಯಾಂಗದ ಕ್ರಮಗಳು, ಪೊಲೀಸ್ ದಬ್ಬಾಳಿಕೆಯೂ ನಡೆಯುತ್ತಿವೆಯೆಂದೂ ವ್ಯಾಪಕ ಆಪಾದನೆಗಳನ್ನು ಮಾಡಿದರು. ಸತ್ಯಾಗ್ರಹಿಗಳು ಚುನಾವಣೆಗಳಿಗೆ ನಿಲ್ಲದಂತೆ ಅವರನ್ನು ಪ್ರತಿಬಂಧಿಸಲಾಗಿದೆ. ಗ್ರಾಮಾಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಭಯಕಾರಕ ಆಡಳಿತವನ್ನು ಜಾರಿಗೊಳಿಸಲಾಗಿದೆ. ಪಟೇಲರು ಮತ್ತು ಶಾನುಭೋಗರು ಚುನಾವಣೆಗೆ ನಿಲ್ಲಲು ಅವಕಾಶ ನೀಡಿ, ರಾಜಕೀಯ ಪಕ್ಷಗಳಿಗೆ ಸೇರಲು ಅನುಮತಿ ನಿರಾಕರಿಸಿರುವುದು ಒಂದು ವಿಡಂಬನೆ ಆಗಿದೆ. ಅವರಿಗೆ ಸಂಸ್ಥಾನದ ಹಣದಿಂದ ಹಣ ಕೊಡಲಾಗುತ್ತಿದ್ದರೂ ಅವರೆಲ್ಲ ಸರ್ಕಾರಿ ಉದ್ಯೋಗಿಗಳೇ ಎಂದು ತಿಳಿಯದಾಗಿದೆ" ಎಂದು ಆಕ್ಷೇಪ ವ್ಯಕ್ತಪಡಿಸಿ ದಿವಾನರಾಗಿದ್ದ ಎನ್. ಮಾಧವರಾವ್ ಅವರ ಕಾರ್ಯ ವೈಖರಿಯನ್ನು ಬಹಿರಂಗವಾಗಿ ಟೀಕಿಸಿದ್ದನ್ನು ಗಮನಿಸಬಹುದು.[7]

1941ರಲ್ಲಿ ಕಾಂಗ್ರೆಸ್ ಸದಸ್ಯರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರಾದ ಎನ್. ಮಾಧವರಾವ್ ಅವರ ಭಾಷಣವನ್ನು ವಿರೋಧಿಸುತ್ತಿದ್ದರೂ ಸಹ, "ಮೈಸೂರು ಕಾಂಗ್ರೆಸ್ ಪಕ್ಷದ ಸಭೆಯ ಅಧ್ಯಕ್ಷರು ಆಗಿದ್ದ ಕೆ.ಸಿ. ರೆಡ್ಡಿ ಅವರು ತಕ್ಷಣವೇ ಮಹಾರಾಜರಲ್ಲಿ ತಮ್ಮ ಪಕ್ಷದ ನಿಷ್ಠೆಯನ್ನು ದೃಢಪಡಿಸಿದರು. ಮಹಾರಾಜರಿಗೆ ಅನುಚಿತವಾದ ಸಲಹೆಗಳನ್ನು ನೀಡುತ್ತಿರುವುದಕ್ಕಾಗಿ ಮಹಾರಾಜರ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರನ್ನು ಟೀಕಿಸಿದರು. ಅಲ್ಲದೆ ಸಭೆಗೆ ದಿವಾನರನ್ನು ಸ್ವಾಗತಿಸುವ ಪದ್ಧತಿಯನ್ನು ರೆಡ್ಡಿ ಟೀಕಿಸಿದರು.

ಮುಂದುವರೆದು ಎಷ್ಟಾದರೂ ದಿವಾನರು ಮಹಾರಾಜರಿಂದ ನಾಮಕಾರಣ ಮಾಡಲ್ಪಟ್ಟವರು. ಕಾಂಗ್ರೆಸ್ ಸದಸ್ಯರಾದರೋ ಪ್ರತಿಬಂಧಕಾಜ್ಞೆಗಳು, ದಸ್ತಗಿರಿಗಳು ಮತ್ತು ಸೆರೆಮನೆಗಳ ನಡುವೆ ಚುನಾವಣೆಗಳಲ್ಲಿ ಸೆಣಸಬೇಕು. ಜವಾಬ್ದಾರಿ ಸರ್ಕಾರವನ್ನು ಘಳಿಸಲು ಚುನಾವಣೆಗಳಲ್ಲಿ ಸ್ಪರ್ಧಿಸುವುದಕ್ಕಾಗಿ ಸತ್ಯಾಗ್ರಹವನ್ನೂ ಸಹ ಅವರು ಬಿಡಬೇಕಾಯಿತು. ನಿರ್ಬಂಧಗಳಿದ್ದರೂ ಸಹ ಕಾಂಗ್ರೆಸ್ ಪಕ್ಷವು ಜಿಲ್ಲಾ ಮಂಡಳಿಗಳಿಗೆ ನಡೆದ ಚುನಾವಣೆಗಳಲ್ಲಿ ಸ್ಪರ್ಧಿಸುವುದಕ್ಕಾಗಿ ಸತ್ಯಾಗ್ರಹವನ್ನು ಸಹ ಅವರು ಬಿಡಬೇಕಾಯಿತು. ನಿರ್ಬಂಧಗಳಿದ್ದರೂ ಸಹ ಕಾಂಗ್ರೆಸ್ ಪಕ್ಷವು ಜಿಲ್ಲಾ ಮಂಡಳಿಗಳಿಗೆ ನಡೆದ ಚುನಾವಣೆಗಳಲ್ಲಿ 134 ಸ್ಥಾನಗಳ ಪೈಕಿ 119ನ್ನು ಘಳಿಸಿಕೊಂಡರು.[8]

"ಬೆಂಗಳೂರು ನಗರದ ಪುರಸಭಾ ಮಂಡಳಿಯಲ್ಲಿ ಎಲ್ಲಾ ಸ್ಥಾನಗಳನ್ನು ಪಡೆದುಕೊಂಡಿದೆ. ಇಷ್ಟು ಸಾಧನೆಯಿದ್ದರೂ ಪಕ್ಷದೊಡನೆ ಹಾರ್ದಿಕ ಸಂಬಂಧ ಹೊಂದಲು

---

7. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1940–41.
8. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1940–41.

ಸರ್ಕಾರ ಇಚ್ಛಿಸುತ್ತಿಲ್ಲ ಹಾಗೂ ಎರಡೂ ಸಭೆಗಳಿಗೂ ಸದಸ್ಯರನ್ನು ನಾಮಕರಣ ಮಾಡಿದ, ಮಂತ್ರಿಮಂಡಲವನ್ನು ರಚಿಸಿದ ಮತ್ತು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರನ್ನು ನೇಮಕ ಮಾಡಿದ ರೀತಿಯನ್ನು ಕಟುವಾಗಿ ಟೀಕಿಸಿದರು. ಇದನ್ನು ಎಸ್.ಸಿ. ಮಲ್ಲಯ್ಯ ಆಕ್ಷೇಪಿಸಿದಾಗ. ಕೆ.ಸಿ. ರೆಡ್ಡಿಯವರು 'ತಾವು ವ್ಯಕ್ತಿಗಳನ್ನು ವಿರೋಧಿಸುತ್ತಿಲ್ಲವೆಂದೂ, ಅನುಸರಿಸಿರುವ ತತ್ವಗಳನ್ನು ವಿರೋಧಿಸುತ್ತಿರುವುದಾಗಿಯೂ, ಹೊಸ ಸುಧಾರಣೆಗಳು ಜನರಲ್ಲಿ ಅಸಮಾಧಾನ ಹುಟ್ಟಿಸುತ್ತವೆ. ಸರ್ಕಾರವನ್ನು ಅಭಿನಂದಿಸಲು ಯಾವ ಕಾರಣವೂ ಇಲ್ಲ" ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ.[9]

4. ಕಾರ್ಮಿಕರ ಸಮಸ್ಯೆ ಮತ್ತು ಕೆ.ಸಿ. ರೆಡ್ಡಿ

ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾರ್ಮಿಕರ ವೇತನ, ತುಟ್ಟಿಭತ್ಯೆಗಳಿಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಕೆ.ಸಿ. ರೆಡ್ಡಿ ಅವರು 'ಜೀವನಕ್ಕೆ ಸಾಕಾಗುವಷ್ಟು ವೇತನ ಕೊಡುವುದು ಸರ್ಕಾರದ ಕರ್ತವ್ಯ ಎಂದರಲ್ಲದೆ, ಶಿವನಸಮುದ್ರ ದುರಂತ ನಡೆದು ಹದಿನಾರು ದಿನ ಗಳಾಗಿವೆ, ಆದರೂ ಕೂಡ ಅದರಿಂದ ನೊಂದ ಕಾರ್ಮಿಕರಿಗೆ ಬದಲಿ ಉದ್ಯೋಗ ಕಲ್ಪಿಸಲು ಸರ್ಕಾರದಲ್ಲಿ ಯಾವ ಯೋಜನೆಯೂ ಇಲ್ಲ. ಕಾರ್ಖಾನೆ ಕಾರ್ಮಿಕರಿಗೆ ಬದುಕುವಷ್ಟು ಸಂಬಳವೂ ಸಿಕ್ಕದೇ ಇರುವಾಗ ಸರ್ಕಾರ ಅನೇಕರಿಗೆ ತುಟ್ಟಿಭತ್ಯೆ ಕೊಡುತ್ತಿದೆ. ಕೈಗಾರಿಕೆಗಳು ಕಾರ್ಮಿಕರಿಗೆ ಹಣವನ್ನು ಮುಂಗಡವಾಗಿ ಕೊಟ್ಟು ಅ ನಂತರ ಮರುಪಾವತಿ ಮಾಡಿಸಿ ಕೊಳ್ಳಬಹುದಾಗಿದೆ. ಆದರೆ ಸರ್ಕಾರ ಜಿಪುಣಾಗ್ರೇಸರ ನೀತಿಯನ್ನು ಅನುಸರಿಸುತ್ತಿದೆ' ಎಂದು ಟೀಕಿಸಿದರು. ಮುಂದುವರೆದು 'ಕಾರ್ಖಾನೆಗಳು ಪೂರ್ತಿ ವೇತನವನ್ನು ಕೊಟ್ಟರೂ ಕೂಡ ಐದು ಲಕ್ಷ ರೂಪಾಯಿ ಮಾತ್ರ ಖರ್ಚಾಗುತ್ತದೆ. ಒಂದು ಸಾಮಾಜಿಕ ವಿಮಾ ನಿಧಿ ಮತ್ತು ಭವಿಷ್ಯ ನಿಧಿಯನ್ನು ಕಲ್ಪಿಸಬೇಕು. ಕಾರ್ಖಾನೆಗಳ ಹತ್ತಿರದ ಹೆಂಡದ ಅಂಗಡಿಗಳನ್ನು ಮುಚ್ಚಿದರೆ ಕಾರ್ಮಿಕರು ತಮ್ಮ ಹಣವನ್ನು ಪೋಲು ಮಾಡುವುದು ತಪ್ಪುತ್ತದೆ" ಎಂದಿದ್ದಾರೆ.[10]

5. ಹಿಂದೂ ಕಾಯಿದೆ ತಿದ್ದುಪಡಿ ಸಮಸ್ಯೆ ಮತ್ತು ಕೆ.ಸಿ. ರೆಡ್ಡಿ

ನ್ಯಾಯವಿಧಾಯಕ ಸಭೆಯಲ್ಲಿ 'ಸ್ತ್ರೀಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಹಿಂದೂ ಕಾಯಿದೆಗೆ ತಿದ್ದುಪಡಿಗಳನ್ನು ತರಲು ಅನುಮತಿಯನ್ನು ಬೇಡುವ ಸೂಚನೆಯನ್ನು

---

9. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1940–41.
10. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1944–45.

ಬೇಡಲಾಗಿತ್ತು'. ಇದಕ್ಕೆ ಸಂಬಂದಪಟ್ಟ ಹಾಗೇ ಸದಸ್ಯರು ಪಕ್ಷಬೇಧ ಮರೆತು, ಜಾತಿಬೇಧ ಮರೆತು, ಕಾಯಿದೆಗೆ ತಿದ್ದುಪಡಿ ತರಲು ಬೆಂಬಲ ವ್ಯಕ್ತಪಡಿಸಿದರು. ಆದರೆ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಮಾತನಾಡಿ ಹಿಂದೂಗಳಲ್ಲದ ಸದಸ್ಯರು ಹಿಂದೂ ಕಾಯಿದೆ ವಿಚಾರದಲ್ಲಿ ಮಧ್ಯೆ ಪ್ರವೇಶಿಸಬಾರದೆಂಬ ಮನವಿಯನ್ನು ಹೆಚ್ಚಿನ ಸದಸ್ಯರು ವಿರೋಧಿಸಿದರು.

ಇಂತಹ ಸಮಯದಲ್ಲಿ ಸದಸ್ಯರಾದ ಕೆ.ಸಿ. ರೆಡ್ಡಿ ಅವರು ಮಾತನಾಡಿ "ಮಸೂದೆಯನ್ನು ಸ್ವಾಗತಿಸುತ್ತಾ, ಇಂತಹ ಮುಖ್ಯ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು ಸಹಜ. ಆದರೆ ಮಸೂದೆ ಸಾಕಷ್ಟು ದೂರ ಹೋಗಿಲ್ಲವೆಂಬುದನ್ನು ಅದಕ್ಕೆ ವಿರೋಧವಿಲ್ಲದಿರುವುದೇ ಸೂಚಿಸುತ್ತದೆ. ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಅವರು ನಿಜವಾದ ಸಮಸ್ಯೆಗೆ ಗಮನ ಕೊಡದೆ ಅಸ್ಪಷ್ಟವಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ ಮಸೂದೆಗೆ ಸರ್ವಾನುಮತದ ಬೆಂಬಲ ವ್ಯಕ್ತವಾಗಿದೆ ಎಂದು ಅರ್ಥ ಬರುತ್ತದೆ. ಜನರ ಮತ್ತು ವಿಶೇಷವಾಗಿ ಮಹಿಳೆಯರ, ನೈಜ ಆಶೋತ್ತರಗಳಿಗೆ ಶಾಸನಬದ್ಧ ಸ್ವರೂಪ ಕೊಡಲು ಮಸೂದೆ ಪ್ರಯತ್ನಿಸಿದೆ ಎಂದು ತಿಳಿಸಿದರು.

ಇದೇ ಸಮಯದಲ್ಲಿ ಕಾಯಿದೆಯಲ್ಲಿರುವ 'ಸ್ತ್ರೀ ಧನದ ಸ್ವತ್ತಿನ ಹಕ್ಕು'ಗಳಿಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಕೆ.ಸಿ. ರೆಡ್ಡಿ ಅವರು 'ಮಸೂದೆಯ ತತ್ವಗಳಿಗೆ ಗಂಭೀರ ವಿರೋಧವೇನೂ ಬಂದಿಲ್ಲವೆಂದೂ, ಆದರೆ ಕುಟುಂಬ ವಿಭಜನೆಗೆ ಇರುವ ಅವಕಾಶ ಮತ್ತು ಅ ನಂತರ ಕುಟುಂಬದ ಸ್ವತ್ತಿನಲ್ಲಿ ಉಂಟಾಗುವ ಪಾಲುಗಳಿಂದ ಭೂಮಿ ಸಮಸ್ಯೆಯ ಮೇಲೆ ಯಾವ ಪರಿಣಾಮ ಉಂಟಾಗುವುದೆಂದು ತಾವು ಕಳವಳ ಪಡುವುದಾಗಿ ತಿಳಿಸಿದರು. ಕೃಷಿಯ ಶೋಚನೀಯ ಪರಿಸ್ಥಿತಿಗೆ ಹಿಡುವಳಿಗಳ ಛಿದ್ರತೆ ಮತ್ತು ಭೂ ಮಾಲೀಕರ ಗೈರು ಹಾಜರಿ ಮುಖ್ಯ ಕಾರಣಗಳೆಂದು ಸೂಚಿಸಿದರು.

ಮಸೂದೆಯ ಪ್ರಕಾರ ಒಬ್ಬ ಅವಿವಾಹಿತ ಸೋದರಿ ಅಥವಾ ಅವಿವಾಹಿತ ಪುತ್ರಿ ಕುಟುಂಬದ ಸ್ವತ್ತಿನಲ್ಲಿ ಪಾಲು ಹೊಂದಿರುತ್ತಾಳೆ. ಕಾಲಾನುಕ್ರಮದಲ್ಲಿ ಅಂತಹ ಪುತ್ರಿ ಅಥವಾ ಸೋದರಿ ಮದುವೆಯಾದರೆ ಅವರು ಯಾವುದೋ ದೂರದ ಸ್ಥಳಗಳಿಗೆ ಹೋಗಬೇಕಾಗುತ್ತದೆ. ಭೂ ಸ್ವತ್ತಿನಲ್ಲಿ ತನ್ನ ಪಾಲನ್ನು ಆಕೆ ಜೊತೆಗೆ ತೆಗೆದುಕೊಂಡು ಹೋಗಲಾರಳು. ಇದರಿಂದ ಭೂ ಮಾಲೀಕರ ಗೈರುಹಾಜರಿ ಸಂದರ್ಭಗಳು ಉತ್ತೇಜನ ಹೊಂದುತ್ತವೆ. ಪಾಲನ್ನು ಪಡೆಯುವ ಒಬ್ಬ ಪುರುಷ ವ್ಯಕ್ತಿಯೂ ಹೀಗೆ ಹೊರಟು ಹೋಗಬಹುದೆಂದು ವಾದಿಸಬಹುದು. ಆದರೆ ಇಂತಹ ಪ್ರಸಂಗಗಳಲ್ಲಿ ಅದು ಪುರುಷ ಸದಸ್ಯನ ಆಯ್ಕೆಗೆ ಮತ್ತು ಇಷ್ಟಕ್ಕೆ ಒಳಪಡುತ್ತದೆ ಎಂದರು.

ಅವಿವಾಹಿತ ಸೋದರಿ ಅಥವಾ ಪುತ್ರಿಯರ ಸಂದರ್ಭದಲ್ಲಿ ಅಂತಹವರು ಕಡ್ಡಾಯವಾಗಿ ದೂರದ ಸ್ಥಳಗಳಿಗೆ ಹೋಗಲೇ ಬೇಕಾಗುತ್ತದೆ. ಅವಿವಾಹಿತ ಪುತ್ರ ಅಥವಾ

ಸೋದರಿಯು ಕುಟುಂಬದ ಸ್ವತ್ತಿನಲ್ಲಿ ಪಾಲನ್ನು ಪಡೆದು, ಆ ನಂತರ ಮದುವೆಯಾಗಿ ಬೇರೊಂದು ಸ್ಥಳದಲ್ಲಿ ವಾಸಿಸುವಾಗ ಅಂತಹ ಪಾಲನ್ನು ಹಣದ ರೂಪಕ್ಕೆ ಪರಿವರ್ತಿಸಬೇಕು ಅಥವಾ ಅಂತಹವರು ತಮಗೆ ಬಂದ ಸ್ವತ್ತನ್ನು ಹೊರಗಿನವರಿಗಲ್ಲದೆ ಕುಟುಂಬದಲ್ಲೇ ಯಾರಾದರೂ ಒಬ್ಬರಿಗೆ ಮಾರಬೇಕೆಂಬ ಪೂರ್ವೋಪಾದಿಯನ್ನು ಕಲ್ಪಿಸಬೇಕು ಎಂದು ಹೇಳಿದರು. ನಂತರ "ಒಬ್ಬ ವಿಧವೆ ಮತ್ತೆ ಮದುವೆ ಮಾಡಿಕೊಂಡರೆ ಆಕೆಯ ಸ್ಥಾನ ಏನಾಗುತ್ತದೆ ಎಂದು ಪ್ರಶ್ನಿಸಿದ ರೆಡ್ಡಿ ಅವರು, ವಿಧವೆ ತನಗೆ ಹಿಂದೆ ಇದ್ದ ಗಂಡನ ಕುಟುಂಬದ ಸ್ವತ್ತಿನಿಂದ ಪಾಲು ಪಡೆಯುತ್ತಾಳೆ. ಆ ಸ್ವತ್ತು ಆಕೆಗೆ ಉಳಿಯಬೇಕೇ, ಬೇಡವೇ ಎನ್ನುವ ಪ್ರಶ್ನೆಗೆ ಉತ್ತರ ಕೊಡಬೇಕು.

ಸ್ತ್ರೀ ಧನದ ವ್ಯಾಖ್ಯಾನ ಸಾಕಷ್ಟು ವಿಶಾಲವಾಗಿಲ್ಲ, ನಿಯಮವು ವರದಕ್ಷಿಣೆಯ ಅನಿಷ್ಠ ಪದ್ಧತಿಗೆ ಒಂದು ಘಾತಕವಾಗುತ್ತದೆ. ಜೀವನಾಂಶ ಕೊಡಬೇಕೆಂಬ ನಿಯಮದಿಂದ ಕುಟುಂಬದ ಪುರುಷ ಸದಸ್ಯರ ಮೇಲೆ ಅನವಶ್ಯಕವಾದ ಹೊರೆ ಬೀಳುತ್ತದೆ. ಜೀವನಾಂಶದ ವೆಚ್ಚಗಳ ಕುಟುಂಬದ ಸ್ವತ್ತಿನ ಮೇಲೆ ಮೊದಲನೆಯ ಉಪಾಧಿಯಾಗಿರಬೇಕೆಂದು ಹೇಳಬಾರದು. ಇಂತಹ ಹಕ್ಕು ಸೃಷ್ಟಿಯಾದ ನಂತರ ಉಂಟಾಗುವ ಪರಭಾರೆಗಳು ಮಾತ್ರ ಹೀಗೆ ಹೊಣೆಯಾಗಬೇಕು ಎಂದು ಸೂಚಿಸಿದರು.[11] ನಂತರ ಮಾತನಾಡಿದ ನ್ಯಾಯ ವಿಧಾಯಕ ಸಭೆಯ ದ್ವಿತೀಯ ಸದಸ್ಯರಾದ ಎಸ್.ಪಿ. ರಾಜಗೋಪಾಲಚಾರಿ ಅವರು ಕೆ.ಸಿ. ರೆಡ್ಡಿ ಅವರು ಪ್ರಸ್ತಾಪಿಸಿದ ವಿಷಯಗಳು ಬಹಳ ಮುಖ್ಯವಾಗಿದೆ ಹಾಗೂ ಪರಿಶೀಲನೆಗೆ ಅರ್ಹವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರ ಪಡೆಯಿತು. ಹೀಗಾಗಿ ಹಿಂದೂ ಕಾಯಿದೆಯ ತಿದ್ದುಪಡಿಯ ಸಂಪೂರ್ಣ ಯಶಸ್ಸು ಕೆ.ಸಿ. ರೆಡ್ಡಿ ಅವರದೆಂದು ಹೇಳಬಹುದು.

6. ಬಾಲ್ಯವಿವಾಹ ಪದ್ಧತಿ ನಿಷೇಧ ಮಸೂದೆ ಮತ್ತು ಕೆ.ಸಿ. ರೆಡ್ಡಿ

ನ್ಯಾಯವಿಧಾಯಕ ಸಭೆಯಲ್ಲಿ ಸಂಸ್ಥಾನದಲ್ಲಿ ಬಾಲ್ಯವಿವಾಹ ನಿಷೇಧ ಮಸೂದೆ ಬಗ್ಗೆ ನಡೆದ ಚರ್ಚೆಯಲ್ಲಿ ಜನಗಣತಿ ವರದಿಯಂತೆ 5ರಿಂದ 10 ವರ್ಷಗಳ ವರೆಗಿನ ವಯೋವರ್ಗಕ್ಕೆ ಸೇರಿದ 8.82 ಲಕ್ಷ ಜನಸಂಖ್ಯೆಯಲ್ಲಿ 21,583 ವಿವಾಹಿತರಿದ್ದಾರೆ. ಅವರಲ್ಲಿ 350 ಬಾಲಕರು ಮತ್ತು 21,233 ಬಾಲಕಿಯರು. ಅದೇ ರೀತಿ 10 ರಿಂದ 15 ವರ್ಷಗಳ ವಯೋವರ್ಗಕ್ಕೆ ಸೇರಿದೆ 8.14 ಲಕ್ಷ ಜನಸಂಖ್ಯೆಯಲ್ಲಿ 77,969 ವಿವಾಹಿತರಿದ್ದಾರೆ.

---

11. ನಡಾವಳಿಗಳು : ಮೈಸೂರು ನ್ಯಾಯವಿಧಾಯಕ ಸಭೆ, 1930–31.

ಅವರಲ್ಲಿ 2270 ಬಾಲಕರು ಮತ್ತು 75,699 ಬಾಲಕಿಯರು ಸೇರಿದ್ದಾರೆ. ಇದು ಮೈಸೂರು ಸಂಸ್ಥಾನದಲ್ಲಿ ಬಾಲ್ಯವಿವಾಹ ಪದ್ಧತಿ ಎಷ್ಟು ವಿಶಾಲವಾಗಿ ವ್ಯಾಪಿಸಿದೆ ಹಾಗೂ ಇದು ಯಾವುದೇ ಒಂದು ನಿರ್ದಿಷ್ಟ ಕೋಮಿಗೆ ಸೀಮಿತಗೊಂಡಿಲ್ಲ ಎಂದು ತಿಳಿಯುತ್ತದೆ.

ಈ ಪದ್ಧತಿಯನ್ನು ವಿರೋಧಿಸಿ ಬಹಳ ನಿಷ್ಠುರವಾಗಿ ಮಾತನಾಡಿದ ಕೆ.ಸಿ. ರೆಡ್ಡಿ ಅವರು "ದೈಹಿಕ, ವೈದ್ಯಕೀಯ ಮತ್ತು ಶಾರೀರಿಕ ಪರಿಗಣನೆಗಳಿಗೆ ಸಂಬಂಧಿಸಿದಂತೆ ಮಸೂದೆಯಲ್ಲಿರುವ ಕೆಲವು ಅಂಶಗಳ ಬಗ್ಗೆ ಅವರು ಮಾತನಾಡಿ ಈ ಪರಿಗಣನೆಗಳು ಇತರ ಎಲ್ಲ ಅಂಶಗಳ ಮೇಲೆ ಪ್ರಾಮುಖ್ಯ ಹೊಂದಿವೆ ಎಂದರು. ಒಪ್ಪಿಗೆ ವಯಸ್ಸಿನ ಸಮಿತಿ ವರದಿಯನ್ನು ಪ್ರಸ್ತಾಪಿಸಿ ಸದಸ್ಯರು ದೀರ್ಘಕಾಲ ಪ್ರವಾಸ ನಡೆಸಿ, ಒಂದು ಪ್ರಶ್ನಾವಳಿಯನ್ನು ಹೊರಡಿಸಿ, ಸಾಕ್ಷ್ಯಗಳನ್ನು ಸಂಗ್ರಹಿಸಿ, ವಿಪುಲವಾದ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾರೆಂದು ತಿಳಿಸಿದರು. ಕೂಲಂಕುಷವಾಗಿ ತನಿಖೆ ನಡೆಸಿದ ನಂತರ ಒಂದು ನಿರ್ಧಾರಕ್ಕೆ ಬಂದು ಬಾಲ್ಯ ವಿವಾಹದ ಭೀಕರ ಸ್ವಭಾವ ಮತ್ತು ಅನಿಷ್ಟ ಪರಿಣಾಮಗಳನ್ನು ವಿವರಿಸಿದರು. 16ವರ್ಷಕ್ಕೆ ತಾಯ್ತನ ಬರಬಾರದೆಂದು ಪೂರ್ವದೇಶಗಳ ಮತ್ತು ಪಾಶ್ಚಾತ್ಯ ವೈದ್ಯಕೀಯ ಅಭಿಪ್ರಾಯವು ಸರ್ವಾನುಮತದಿಂದ ಸೂಚಿಸಿದೆ. ಪ್ರಾಚೀನ ಆಯುರ್ವೇದ ಪಂಡಿತರಾದ ಸುಶ್ರುತ ಮತ್ತು ವಾಗ್ದತ್ತರು ಕೂಡ 16 ವರ್ಷಕ್ಕೆ ಮುಂಚೆ ಗರ್ಭಧರಿಸ ಬಾರದೆಂದು ಹೇಳಿದ್ದಾರೆ. ಇದನ್ನು ಆಧುನಿಕ ವೈದ್ಯಕೀಯ ಸಂಸ್ಥೆಯು ಪುಷ್ಟೀಕರಿಸಿದೆ. ತಾಯ್ತನಕ್ಕೆ 18 ವರ್ಷಗಳ ವಯಸ್ಸು ಸೂಕ್ತವೆಂದು ಅನೇಕ ವೈದ್ಯಕೀಯ ವಿಜ್ಞಾನಿಗಳು ಭಾವಿಸಿರುವುದಾಗಿ 'ಒಪ್ಪಿಗೆ ವಯಸ್ಸಿನ ಪರಿಶೀಲನಾ ಸಮಿತಿ' ವರದಿ ಮಾಡಿದೆ.

1928ರ ಡಿಸೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ವೈದ್ಯರ ಸಮ್ಮೇಳನವು ತಾಯಿಯ ಮತ್ತು ಮಗುವಿನ ಆರೋಗ್ಯ ಹಾಗೂ ಹಿತಾಸಕ್ತಿಗಳ ದೃಷ್ಟಿಯಿಂದ 20 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಪುರುಷರ ಮತ್ತು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀಯರ ಕೂಟವು ವೈಜ್ಞಾನಿಕ ಕಾರಣಗಳಿಗಾಗಿ ಅಪೇಕ್ಷಣೀಯವಲ್ಲವೆಂದು ಸೂಚಿಸಿದೆ ಎಂದರು. 16 ವರ್ಷಗಳಿಗಿಂತ ಕಡಿಮೆ ವಯಸ್ಸಿನಲ್ಲಿ ತಾಯ್ತನ ಬಂದರೆ ಅದು ತಾಯಿ ಮತ್ತು ಮಗುವಿನ ಮೇಲೆ ಸ್ಪಷ್ಟವಾಗಿ ದುಷ್ಪರಿಣಾಮ ಹೊಂದಿರುವುದೆಂದು ಅನೇಕ ಪ್ರಸಂಗಗಳಲ್ಲಿ ರುಜುವಾತಾಗಿದೆ. ಸಮಿತಿಯು ತಿಳಿಸಿರುವಂತೆ, ಸಣ್ಣ ವಯಸ್ಸಿನಲ್ಲಿ ಬಸುರಿ ಯಾದರೆ ಶೇಕಡ 31%ರಷ್ಟು ಮಹಿಳೆಯರಿಗೆ ಗರ್ಭಪಾತವಾಗುತ್ತದೆ ಅಥವಾ ಸಕಾಲಕ್ಕೆ ಮುಂಚಿತವಾಗಿಯೇ ಹೆರಿಗೆಯಾಗುತ್ತದೆ. ಶೇಕಡ 17.8% ರಷ್ಟು ಪ್ರಸಂಗಗಳಲ್ಲಿ ಭ್ರೂಣದ ಸಾವು, ಹೆರಿಗೆಯ ನಂತರ ತಾಯಿಗೆ ದೀರ್ಘವಾದ ಅನಾರೋಗ್ಯ, ನಿರಂತರವಾಗಿ ಭಯಪೀಡೆ ಮುಂತಾದ ಅಸಹಜ ಪರಿಣಾಮಗಳು ಉಂಟಾಗುತ್ತವೆ. ಆದ್ದರಿಂದ ಒಟ್ಟು ಶೇಕಡ 48.8%ರಷ್ಟು ಪ್ರಸಂಗಗಳಲ್ಲಿ ಅಸಹಜವಾದ ಕೆಡುಕುಗಳು ಉಂಟಾಗುತ್ತವೆ ಎಂದರು.

ಮತ್ತೊಂದು ಮೂಲದ ಪ್ರಕಾರ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ತಾಯ್ತನದಲ್ಲಿ ಗರ್ಭ ಇಳಿಯುವುದು ಅಥವಾ ಹುಟ್ಟಿದ ಮೊದಲ ಎಂಟು ದಿನಗಳೊಳಗೆ ನವಜಾತ ಶಿಶುವಿನ ಸಾವುಗಳು ಶೇಕಡ 14.8%ರಷ್ಟು ಇರುತ್ತದೆಂದು ತಿಳಿಸಿದರು. 16 ರಿಂದ 21 ವರ್ಷ ವಯಸ್ಸಿನ ತಾಯ್ತನದಲ್ಲಿ ಈ ಶೇಕಡಾವಾರು 9%ರಷ್ಟು ಮತ್ತು 20 ರಿಂದ 30 ವರ್ಷ ವಯಸ್ಸಿನ ತಾಯ್ತನದಲ್ಲಿ ಕೇವಲ 4.3%ರಷ್ಟು ಇರುವುದೆಂದು ಕೆ.ಸಿ. ರೆಡ್ಡಿ ತಿಳಿಸಿದರು. ಆದ್ದರಿಂದ 20 ರಿಂದ 30 ವರ್ಷದವರೆಗಿನ ಸ್ತ್ರೀಯರಲ್ಲಿ ಇರುವುದಕ್ಕಿಂತ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ತಾಯ್ತನದ ಪ್ರಸಂಗಗಳಲ್ಲಿ ಗರ್ಭ ಇಳಿಯುವಿಕೆ ಮತ್ತು ನವಜಾತ ಶಿಶುಗಳ ಸಾವು ಮೂರುವರೆಯಷ್ಟು ಹೆಚ್ಚಾಗಿರುತ್ತದೆ ಎಂದರು. ತುಂಬ ಪ್ರಖ್ಯಾತರಾದ ಒಬ್ಬ ಮದ್ರಾಸ್ ವೈದ್ಯರು ಕೂಲಂಕುಶವಾದ ತನಿಖೆಯನ್ನು ನಡೆಸಿ ಎಳೆಯ ವಯಸ್ಸಿನಲ್ಲಿ ಗರ್ಭಧರಿಸಿದಾಗ ಅಂತಹ ಮಹಿಳೆಯರ ಸಾವು ಗರಿಷ್ಠ ಪ್ರಮಾಣದಲ್ಲಿ ಇರುವುದೆಂದು, ಮೊದಲ ಬಸಿರು ಮತ್ತು ಚೊಚ್ಚಲ ಹೆರಿಗೆಯಲ್ಲಿ ಅದು ಅತ್ಯಂತ ಹೆಚ್ಚಾಗಿರುವುದೆಂದು ತಿಳಿಸಿದ್ದಾರೆ. ತಾಯಿಯ ವಯಸ್ಸು ಕಡಮೆಯಾದಷ್ಟು ಗರ್ಭಿಣಿ ತಾಯಿಯ ಸಾವಿನ ಅಪಾಯ ಹೆಚ್ಚಾಗಿರುತ್ತದೆ. ಚೊಚ್ಚಲ ಹೆರಿಗೆಯಲ್ಲಿ, ಅದರಲ್ಲೂ ವಿಶೇಷವಾಗಿ 16 ವರ್ಷಕ್ಕಿಂತ ಕಡಮೆ ವಯಸ್ಸಿನ ಸಂದರ್ಭದಲ್ಲಿ ಸಾವಿನ ಪ್ರಮಾಣ ಅತ್ಯಂತ ಹೆಚ್ಚಾಗಿರುತ್ತದೆ, ಎಂದು ತಿಳಿಸಿದ್ದಾರೆ ಎಂದರು.

ಮೈಸೂರಿನ ಜನಗಣತಿ ವರದಿ ಕೂಡ 15 ರಿಂದ 30 ವರ್ಷ ವಯಸ್ಸಿನ ಸ್ತ್ರೀಯರಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಸಾವು ಸಂಭವಿಸುತ್ತದೆಂದು ತಿಳಿಸಿರುವುದು ಕೆ.ಸಿ. ರೆಡ್ಡಿ ಅವರು ಪ್ರಸ್ತಾಪಿಸಿದರು. "ಬಾಲ್ಯವಿವಾಹ, ಎಳೆಯ ವಯಸ್ಸಿನಲ್ಲೇ ಗರ್ಭಿಣಿಯಾಗುವುದು, ಅಷ್ಟೇ ಅಲ್ಲದೆ ಸೂಲಗಿತ್ತಿಯರು ಅನುಸರಿಸುವ ಹಳೆಯ ವಿಧಾನಗಳು ಸೇರಿಕೊಂಡು ಈ ಸ್ಥಿತಿ ಉಂಟಾಗಿದೆ. ಋತುವಿಗೆ ಮುಂಚಿತವಾಗಿ ಮದುವೆ ಮಾಡುವ ರೂಢಿಯಿರುವ ಕೋಮು ಗಳಲ್ಲಿನ ಬಾಲ್ಯವಿವಾಹಗಳು ಬಾಲಕಿಯರನ್ನು ಅವರ ಶರೀರಗಳು ತಡೆದುಕೊಳ್ಳುವ ಶಕ್ತಿ ಯನ್ನು ಇನ್ನೂ ಹೊಂದಿಲ್ಲದಿರುವಾಗಲೇ ಅವರನ್ನು ವಿವಾಹ ಜೀವನದ ಪ್ರವಾಹಕ್ಕೆ ತಳ್ಳುತ್ತವೆ. ಆದ್ದರಿಂದ ಎಳೆಯ ವಯಸ್ಸಿನ ತಾಯ್ತನ ಮತ್ತು ಅದರಿಂದ ಉಂಟಾಗುವ ದುಷ್ಪರಿಣಾಮಗಳು ತುಂಬ ಭೀಕರವೆಂದು ವೈದ್ಯಕೀಯ ಹಾಗೂ ಶರೀರಶಾಸ್ತ್ರದ ಅಂಶಗಳು ತೋರಿಸುತ್ತವೆ" ಎಂದು ಕೆ.ಸಿ. ರೆಡ್ಡಿ ಅವರು ತಿಳಿಸಿದರು.

ಅಂಕಿ- ಅಂಶಗಳು ವಿವಾಹದ ಸಾಫಲ್ಯಕ್ಕೆ ಸಂಬಂಧಿಸಿವೆ ಎಂದೂ, ಅದು 16 ವರ್ಷಕ್ಕೆ ಮುಂಚಿತವಾಗಿ ನಡೆಯದೆ ಇದ್ದರೆ ಅವನ್ನು ತಪ್ಪಿಸಬಹುದೆಂದೂ ಬಂದಿರುವ ವಾದವನ್ನು ಕೆ.ಸಿ. ರೆಡ್ಡಿ ಅವರು ಪ್ರಸ್ತಾಪಿಸಿ 'ಮದುವೆಗಾಗಿ ಯಾವುದೇ ವಯಸ್ಸನ್ನು

ನಿರ್ಧರಿಸಬೇಕಾಗಿಲ್ಲವೆಂದು ಆದರೆ ನಿಷೇಕದ ವಯಸ್ಸನ್ನು ಅಥವಾ ಒಪ್ಪಿಗೆಯ ವಯಸ್ಸನ್ನು ನಿರ್ಧರಿಸುವುದರಿಂದ ಈ ಸಮಸ್ಯೆ ಪರಿಹಾರವಾಗುವುದೆಂದೂ ಕೆಲವರು ಭಾವಿಸಿರುವುದಾಗಿ ಹೇಳಿದರು. ಒಪ್ಪಿಗೆಯ ವಯಸ್ಸನ್ನು ಕುರಿತ ಸಮಿತಿಯು ಈ ಅಂಶವನ್ನು ಪರಿಶೀಲಿಸಿ ಒಪ್ಪಿಗೆಗಾಗಿ ವಯಸ್ಸನ್ನು ನಿರ್ಧರಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲವೆಂದು ತಿಳಿಸಿದೆ. ವಿವಾಹಕ್ಕಾಗಿ ಒಂದು ಶಾಸನವನ್ನು ರೂಪಿಸದೆ, ಒಪ್ಪಿಗೆಯ ವಯಸ್ಸನ್ನು ನಿರ್ಧರಿಸುವುದರಿಂದ ಪ್ರಯೋಜನವಿಲ್ಲವೆಂದು ಸಮಿತಿ ತಿಳಿಸಿದೆ. ಈ ಒಪ್ಪಿಗೆ ಕಾಯ್ದೆಯು ಜಾರಿಯಲ್ಲಿರುವುದರಿಂದ ದೇಶಕ್ಕೆ ಯಾವ ಪ್ರಯೋಜನವೂ ಉಂಟಾಗಿಲ್ಲ. ಬ್ರಾಹ್ಮಣರು ಮತ್ತು ವೈಶ್ಯರು ಮುಂತಾದ ಕೆಲವು ಕೋಮುಗಳಲ್ಲಿ ಮಾತ್ರ ಬಾಲ್ಯ ವಿವಾಹದ ಪದ್ಧತಿ ಆಚರಣೆಯಲ್ಲಿದೆ ಎಂದು ಭಾವಿಸುವುದು ತಪ್ಪೆಂದು ಕೆ.ಸಿ. ರೆಡ್ಡಿ ವಾದಿಸಿದರು.

ಮದ್ರಾಸ್ ಪ್ರಾಂತ್ಯದಲ್ಲಿ ಪಡೆದಿರುವ ಅಂಕಿ-ಅಂಶಗಳಿಂದ ಶೇಕಡ 25%ರಷ್ಟಿರುವ ಬಾಲ್ಯ ವಿವಾಹಗಳಲ್ಲಿ ಬ್ರಾಹ್ಮಣರು ಮತ್ತು ವೈಶ್ಯರಿಗೆ ಶೇಕಡ 4%ರಷ್ಟು ಮಾತ್ರ ಸಂಬಂದಿಸಿವೆ ಎಂದು ತೋರಿದೆ. ಆದ್ದರಿಂದ ಮಸೂದೆಯನ್ನು ಮಂಡಿಸಿರುವವರು ಮತ್ತು ಅದನ್ನು ಸಮರ್ಥಿಸುವವರು ಬೇರೆ ಯಾವುದೋ ಉದ್ದೇಶವನ್ನು ಹೊಂದಿರುವರೆಂದು ತಿಳಿಯ ಬಾರದು. ಋತು ನಂತರದ ವಿವಾಹಗಳನ್ನು ಅನುಸರಿಸುತ್ತಿದ್ದ ದೊಡ್ಡ ಕೋಮುಗಳವರು ಹಿಮ್ಮುಖವಾಗಿ ಸಾಗಿ ಎಳೆಯ ವಯಸ್ಸಿನಲ್ಲಿ ಮದುವೆ ಮಾಡುವ ಪದ್ಧತಿಗೆ ಬರುತ್ತಿದ್ದಾರೆ ಎಂಬುದು ಈ ಮಸೂದೆಯನ್ನು ಮಂಡಿಸುವುದಕ್ಕೆ ಒಂದು ಕಾರಣವಾಗಿದೆ. ಆ ಜನರು ಮೇಲು ಜಾತಿಯ ಪದ್ಧತಿಗಳನ್ನು ಅನುಸರಿಸಿದರೆ ತಮ್ಮ ಅಂತಸ್ತು ಹೆಚ್ಚುವುದೆಂದು ಭಾವಿಸುತ್ತಾರೆ. ಅಲ್ಪಸಂಖ್ಯಾತ ಕೋಮುಗಳ ಪರವಾಗಿ ಹೇಳಬೇಕೆಂದರೆ ತಾಯಿ ತಂದೆಯರು ತಮ್ಮ ಹೆಣ್ಣು ಮಕ್ಕಳಿಗೆ 14 ವರ್ಷಗಳ ನಂತರ ಮದುವೆ ಮಾಡಬೇಕೆಂದು ಇಚ್ಛಿಸಿದರೂ ಕೂಡ ಸಂಪ್ರದಾಯ, ಸಾಮಾಜಿಕ ಬಹಿಷ್ಕಾರದ ಭಯ ಮತ್ತು ಇತರ ಅನೇಕ ಅಂಶಗಳು ಕ್ರೂರವಾಗಿ ಅಡ್ಡ ಬರುತ್ತಿರುವ ಸಂದರ್ಭಗಳು ತಮಗೆ ತಿಳಿದಿವೆ ಎಂದು ಕೆ.ಸಿ. ರೆಡ್ಡಿ ಹೇಳಿದರು.

ಅವರಿಗೆ ಶಾಸನದ ರಕ್ಷಣೆ ದೊರಕದ ಹೊರತು ಅವರು ತಮ್ಮದೇ ದಾರಿಯಲ್ಲಿ ನಡೆಯಲಾರರು. ಅಲ್ಪಸಂಖ್ಯಾತ ಕೋಮುಗಳ ಪರವಾಗಿ ಯಾರೂ ಮಾತನಾಡದೆ ಇರುವುದು ವಿಷಾದಕರ ಎಂದು ಕೆ.ಸಿ.ರೆಡ್ಡಿ ನುಡಿದರು. ಸಣ್ಣ ಬಾಲಕಿಯರ ವೈಧವ್ಯದ ಕಷ್ಟಗಳನ್ನು ಮತ್ತು ಇತರ ತೊಂದರೆಗಳನ್ನು ನಿವಾರಿಸಲು ಒಂದು ಕಾನೂನನ್ನು ರೂಪಿಸಲಾಗುವುದಿಲ್ಲವೇ ಎಂದು ಸದಸ್ಯರಾದ ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಕೇಳಿದಾಗ, ಅದು ಅಲ್ಪಸಂಖ್ಯಾತ ಕೋಮುಗಳ ಜನರಿಗೆ ಸಹಾಯವಾಗುವುದೆಂದರು. ಶೇಕಡ 97%ರಷ್ಟು

ಜನಸಂಖ್ಯೆ ಇರುವ ಬಹುಸಂಖ್ಯಾತ ಕೋಮುಗಳು ಈ ಕ್ರಮಕ್ಕೆ ಆಕ್ಷೇಪಿಸುವುದಿಲ್ಲ ಎಂದು ಕೆ.ಸಿ. ರೆಡ್ಡಿ ತಿಳಿಸಿದರು. ಆದರೆ ಶಾಸನವಿಲ್ಲದೆ, ತುಂಬ ಅನಿಷ್ಟವಾದ ಪದ್ಧತಿ ಎಂದು ವರ್ಣಿಸಿರುವ ರೂಢಿಗೂ ತಾವು ಸಿಕ್ಕಿಬೀಳುವುದಾಗಿ ಆ ಜನರ ಭಾವಿಸಿದ್ದಾರೆ. ಅಲ್ಪಸಂಖ್ಯಾತ ಕೋಮುಗಳಲ್ಲೂ ಕೂಡ ಹೆಚ್ಚು ಜನರು ಈ ಕ್ರಮವನ್ನು ಸ್ವಾಗತಿಸುತ್ತಾರೆ ಎಂದು ಕೆ.ಸಿ. ರೆಡ್ಡಿ ಭಾವಿಸಿದರು.

ಹಯವದನರಾಯರು ಮಹಮದೀಯರಿಗೆ ಹೇಗೆ ಅನ್ವಯಿಸುತ್ತದೆಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೆ.ಸಿ. ರೆಡ್ಡಿ ತುರ್ಕಿ ಮತ್ತು ಈಜಿಪ್ಟ್ ಮುಂತಾದ ಮುಸ್ಲಿಂ ದೇಶಗಳಲ್ಲೂ ಕೂಡ ನಿರ್ದಿಷ್ಟ ವಯಸ್ಸಿಗೆ ಮುಂಚೆ ಆದ ಮದುವೆಗಳನ್ನು ಅಸಿಂಧುವೆಂದು ಸಾರುವ ವಿವಾಹ ಶಾಸನವೊಂದು ಜಾರಿಯಲ್ಲಿದೆ ಎಂದು, ಒಪ್ಪಿಗೆ ವಯಸ್ಸನ್ನು ಕುರಿತ ಸಮಿತಿ ತಿಳಿಸಿರುವುದಾಗಿ ಕೆ.ಸಿ. ರೆಡ್ಡಿ ಹೇಳಿದರು. ಭಾರತ ಅಥವಾ ಮೈಸೂರಿನ ಮುಸ್ಲಿಂ ಧರ್ಮ, ತುರ್ಕಿ ಅಥವಾ ಈಜಿಪ್ಟ್‌ನ ಮುಸ್ಲಿಂ ಧರ್ಮಕ್ಕಿಂತ ತುಂಬ ಬೇರೆ ರೀತಿಯದೇ ಎಂದು ತಾವು ತಿಳಿಯಬಯಸುವುದಾಗಿ ನುಡಿದರು. ಆದರೆ ಷರಿಯತ್ ಅಥವಾ ಕುರಾನಿನ ತತ್ವಗಳ ಬಗ್ಗೆ ತಾವು ಮಾತನಾಡಲು ಇಚ್ಚಿಸುವುದಿಲ್ಲ ಎಂದರು.

ಕೆ.ಸಿ. ರೆಡ್ಡಿ ಅವರು ಮುಂದುವರೆದು ಈ ಮಸೂದೆಗೆ ಅದನ್ನು ಮಂಡಿಸಲು ಅನುಮತಿ ಲಭಿಸದೆ ಇರುವಂತಹ ಕ್ರೂರಸ್ಥಿತಿ ಸಂಭವಿಸುವಂತೆ ಅದರ ಸ್ವಭಾವ ಕೇಡಿಗವೂ, ಅನಿಷ್ಟವೂ ಆಗಿಲ್ಲವೆಂದು ವರ್ಣಿಸಿದರು. ಕೆಲವು ನಿರ್ದಿಷ್ಟ ವಿಧಿಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಇರಬಹುದು. ಕಳೆದ 68 ವರ್ಷಗಳಲ್ಲಿ ಪ್ರತಿದಿನವೂ ರೂಢಿಯು ಕೆಲವು ಮೌಲ್ಯಗಳನ್ನು ನಾಶಪಡಿಸಿದೆ ಎಂದು ಪಂಡಿತ್ ಮೋತಿಲಾಲ್ ನೆಹರು ಹೇಳಿದ್ದಾರೆ. ಡಾ. ಅನಿಬೆಸೆಂಟರು ಹೇಳುವಂತೆ ಈ ರೂಢಿಯು ಖಚಿತವಾಗಿ ಎಷ್ಟು ಅಮಾನವೀಯವಾಗಿದೆ ಎಂದು ತಾನು ಮನುಷ್ಯನೆಂದು ಹೇಳಿಕೊಳ್ಳುವ ಯಾರೇ ಆಗಲಿ ತಾನು ಪ್ರತ್ಯಕ್ಷವಾಗಿ ಅದನ್ನು ನೋಡಿದಾಗ ಸಹಜವಾಗಿಯೇ ದಿಗ್ಭ್ರಮೆಗೊಳ್ಳುತ್ತಾನೆ. ದೇಶದ ಪ್ರಗತಿಗೆ ಆಶಾ ದಾಯಕವಾಗಿರುವ ವಿದ್ಯಾವಂತ ವರ್ಗಗಳ ಆರೋಗ್ಯವನ್ನು ಬಾಲ್ಯವಿವಾಹವು ಕ್ರಮವಾಗಿ, ನಿಧಾನವಾಗಿ, ಅಂದರೆ ಖಂಡಿತವಾಗಿ ಹಾಳು ಮಾಡುತ್ತಿದೆ ಎಂದಿದ್ದಾರೆ.

ಕೆ.ಸಿ. ರೆಡ್ಡಿ ಅವರು ಸುಮಾರು 50 ವರ್ಷ ವಯಸ್ಸಿನಲ್ಲಿರುವ ಭಾರತೀಯರು ಕೂಡ ಸ್ವತಃ ತಾವು 66 ವರ್ಷ ವಯಸ್ಸಿನಲ್ಲಿ ಕಾಣುವುದಕ್ಕಿಂತ ಹೆಚ್ಚು ಮುದಿತನವನ್ನು ತೋರಿಸುತ್ತಾರೆ. ಏಕೆಂದರೆ ಅವರು ಪ್ರಕೃತಿ ನಿಯಮಗಳನ್ನು ನಿರ್ಲಕ್ಷಿಸುತ್ತಾರೆ ಮತ್ತು ಸ್ತ್ರೀಯರಿಗೆ ಹುಟ್ಟುವ ಬದಲು ಮಕ್ಕಳಿಗೆ ಹುಟ್ಟಿದ್ದಾರೆ ಎಂದರು. ಅಲ್ಲದೆ ಜನರು ಪುರುಷತ್ವದ ಸುಸ್ಥಿತಿಯಲ್ಲಿ ಇರುವಾಗಲೇ ಅವಶೇಷಗಳಂತೆ ಆಗಬಾರದು ಎಂದರು.

ಲಾಲಾ ಲಜಪತ್‌ರಾಯ್ ಪ್ರಕಾರ ಬಾಲ್ಯವಿವಾಹವು ಭಾರತೀಯರ ಶಾರೀರಿಕ ದೃಢತೆಯ ಮೇಲೆ ದುಷ್ಪರಿಣಾಮವನ್ನು ಹೊಂದಿದೆ ಎಂದೂ, ಅನೇಕ ಐರೋಪ್ಯ ವಿದ್ವಾಂಸರು ಈ ವಿಷಯವನ್ನು ಆಳವಾದ ಅಧ್ಯಯನ ಮಾಡಿದ್ದಾರೆ. ಅವರೆಲ್ಲರೂ ಕೂಡ ನಿಜವಾದ ಭಾರತದ ಹಿಂದೂ, ಬೆಳೆದ ವ್ಯಕ್ತಿಯಾಗಿ ಅಲ್ಲದೆ, ಎಳೆಯ ವಯಸ್ಸಿನವನಾಗಿ ವಿವಾಹವಾಗುತ್ತಾನೆಂದು ಒಪ್ಪಿದ್ದಾರೆ. ಬಾಲ್ಯವಿವಾಹವು ನಿಸ್ಸಂದೇಹವಾಗಿ ರಾಷ್ಟ್ರದ ಪ್ರಾಣಶಕ್ತಿಯನ್ನು ಕೊರೆದು ಹಾಕುತ್ತಿದೆ ಎಂದಿದ್ದಾರೆ.

ಡಾ. ರವೀಂದ್ರನಾಥ್ ಟಾಗೋರ್ ಪ್ರಕಾರ ವಿವಾಹಕ್ಕಾಗಿ ಬಾಲಕಿಯರಿಗೆ 16 ವರ್ಷ ಮತ್ತು ಬಾಲಕರಿಗೆ 22 ವರ್ಷ ಕನಿಷ್ಠ ವಯಸ್ಸಾಗಿರಬೇಕು ಎಂದಿದ್ದಾರೆ. ಎಂ.ಆರ್. ಜಯಕರ್ ಪ್ರಕಾರ ಶಾರದಾ ಮಸೂದೆಯ ಮೇಲೆ ಮಾತನಾಡಿದಾಗ ಇಡೀ ಸಾಮಾಜಿಕ ರಚನೆಯೇ ಬೆಂಕಿ ಹೊತ್ತಿ ಉರಿಯುತ್ತಿರುವಾಗ ಅದನ್ನು ಅನುಸರಿಸಬೇಕೆಂದು ಸಾರ್ವಜನಿಕ ಅಭಿಪ್ರಾಯ ಒತ್ತಾಯಿಸುತ್ತಿದೆಯೇ ಎಂದು ಕಂಡು ಕೊಳ್ಳುವುದರಲ್ಲಿ ಎಚ್ಚರಿಕೆಯಿಂದಿರಬೇಕೆಂದು ನಮಗೆ ಸೂಚಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಸದ್ಯದ ದುಷ್ಟ ಮತ್ತು ಪೈಶಾಚಿಕ ರೂಢಿ ತಂದಿಡುತ್ತಿರುವ ಅಪಾಯದ ಬಗ್ಗೆ ಇನ್ನಷ್ಟು ರುಜುವಾತು ಅಗತ್ಯವಾಗಿದೆಯೇ ಎಂದು, ಈ ದುಷ್ಪರಿಣಾಮಗಳನ್ನು ಪರಿಹರಿಸಲು ಚಿಕಿತ್ಸೆಯು ಶಾಸಕಾಂಗದಲ್ಲೇ ಇದೆ ಎಂದೂ ಕೆ.ಸಿ. ರೆಡ್ಡಿ ತಿಳಿಸಿದ್ದಾರೆ.

ಕೆ.ಸಿ. ರೆಡ್ಡಿ ಅವರು ಮುಂದುವರೆದು ತಮ್ಮ ಪ್ರಾಮಾಣಿಕ ಮನವಿಯನ್ನು ಸಭೆಯ ಸದಸ್ಯರು ಮಾಡಿರುವ ಮನವಿಯನ್ನು ನಿರ್ಲಕ್ಷಿಸಬಹುದು, ಆದರೆ ಬಾಲ್ಯವಿವಾಹ ಪದ್ಧತಿಯ ವೇದಿಕೆಯ ಮೇಲೆ ಬಲಿಯಾಗಿರುವ ಎಳೆಯ ವಯಸ್ಸಿನ ತಾಯಂದಿರ ನೋವಿನ ಆಕ್ರಂದನವನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ, ಸಮಾಜವನ್ನು ಹಾಳು ಮಾಡುತ್ತಿರುವ ಅನೇಕ ಸಾಮಾಜಿಕ ಅನಿಷ್ಟಗಳಲ್ಲಿ ಬಾಲ್ಯವಿವಾಹವು ಒಂದು ಮುಖ್ಯ ಕಾರಣವೆಂದೂ ಹೇಳಿದ್ದನ್ನು ಗಮನಿಸಬಹುದು.[12]

ಒಟ್ಟಾರೆ ಬಾಲ್ಯವಿವಾಹ ಪದ್ಧತಿಯನ್ನು ನಿಷೇಧಿಸುವ ಬಗ್ಗೆ ಕೆ.ಸಿ. ರೆಡ್ಡಿ ಅವರ ಅಭಿಪ್ರಾಯಗಳನ್ನು ಗಮನಿಸಿದರೆ ಅವರ ಸಾಮಾಜಿಕ ಕಾಳಜಿಯ ಅರಿವಾಗುತ್ತದೆ.

7. ಅಸ್ಪೃಶ್ಯರ ದೇವಾಲಯ ಪ್ರವೇಶ ಮತ್ತು ಕೆ.ಸಿ. ರೆಡ್ಡಿ

ನ್ಯಾಯವಿಧಾಯಕ ಸಭೆಯಲ್ಲಿ ಸದಸ್ಯರು ದೇವಾಲಯಗಳಿಗೆ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಇತರ ಅಸ್ಪೃಶ್ಯವರ್ಗಗಳ ಪ್ರವೇಶ ಮತ್ತು ಪೂಜೆಗೆ ಅವಕಾಶ

12. ನಡಾವಳಿಗಳು : ಮೈಸೂರು ನ್ಯಾಯವಿಧಾಯಕ ಸಭೆ, 1934–35.

ಮಾಡಿಕೊಡಬೇಕೆಂದು ಮಹಾರಾಜರಿಗೆ ಶಿಫಾರಸ್ಸು ಮಾಡುವ ಒಂದು ನಿರ್ಣಯವನ್ನು ಮಂಡಿಸಿದರು.

ಈ ಚರ್ಚೆಯಲ್ಲಿ ಭಾಗವಹಿಸಿದ ಕೆ.ಸಿ. ರೆಡ್ಡಿ ಅವರು ನಿರ್ಣಯಕ್ಕೆ ಹೃತ್ಪೂರ್ವಕ ಬೆಂಬಲ ವ್ಯಕ್ತಪಡಿಸಿ "ಹರಿಜನರಿಗೆ ದೇವಾಲಯ ಪ್ರವೇಶ ಕೊಡುವ ವಿಷಯವು ಹಿಂದೂ ಧರ್ಮದ ಅಳಿವು-ಉಳಿವಿನ ಪ್ರಶ್ನೆಯೆಂದು ಮಹಾತ್ಮಗಾಂಧಿ ಹೇಳಿದ್ದಾರೆ. ಅಸ್ಪೃಶ್ಯತೆಯು ಬದುಕಿದ್ದರೆ ಹಿಂದೂ ಧರ್ಮ ಸತ್ತು ಹೋಗುತ್ತದೆ ಎಂದೂ, ಈ ಗ್ರಹಿಕೆಯೇ ಸಮಗ್ರ ಭಾರತದಲ್ಲಿ ಹಿಂದೂ ಸಮುದಾಯದ ಪ್ರಜ್ಞೆಯನ್ನು ಹೊಡೆದಟ್ಟಿಸಿದೆ. ಆದ್ದರಿಂದಲೇ ತಿರುವಾಂಕೂರಿನ ಮಹಾರಾಜರು ದೇವಾಲಯಗಳಲ್ಲಿ ಎಲ್ಲಾ ಹಿಂದೂಗಳಿಗೂ ಪ್ರವೇಶ ಕೊಟ್ಟಿದ್ದಾರೆ. ಜಗತ್ತಿನ ಇತಿಹಾಸದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿರುತ್ತದೆ. ಮೈಸೂರಿನ ಮಹಾರಾಜರು ಅರಮನೆಯಲ್ಲಿ ಹರಿಜನರಿಗೆ ಪ್ರವೇಶ ಕೊಡುವ ಮೂಲಕ ಸಂಪ್ರದಾಯವನ್ನು ಮುರಿದಿದ್ದಾರೆ. ಮೊದಲಿನಿಂದ ಸ್ಥಾಪಿತವಾಗಿರುವ ಧಾರ್ಮಿಕ ಆಚರಣೆಗಳು ಮತ್ತು ಸಂಪ್ರದಾಯಗಳಲ್ಲಿ ಸರ್ಕಾರ ಕೈ ಹಾಕಬಾರದೆಂಬ ವಾದವನು ಕೆ.ಸಿ. ರೆಡ್ಡಿ ಅವರು ತಿರಸ್ಕರಿಸಿದರು.

ಹಿಂದೆ ಅನೇಕ ಸಂದರ್ಭಗಳಲ್ಲಿ ಜನರ ಧಾರ್ಮಿಕ ಮತ್ತು ಸಾಮಾಜಿಕ ರೂಢಿಗಳಲ್ಲಿ ಸುಧಾರಣೆ ತಂದು ಅವುಗಳಲ್ಲಿ ಗಂಭೀರ ಹಸ್ತಕ್ಷೇಪ ನಡೆಸಿದ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ತಿರುವಾಂಕೂರಿನಲ್ಲಿ ದೇವಾಲಯಗಳ ವರಮಾನದಲ್ಲಿ ದೊಡ್ಡಭಾಗವನ್ನು ಸರ್ಕಾರವೇ ಕೊಡುತ್ತಿದ್ದು, ದೇವಾಲಯಗಳ ಮೇಲೆ ಸರ್ಕಾರಕ್ಕೆ ಬಹುಮಟ್ಟಿನ ಹತೋಟಿ ಇತ್ತೆಂದು ವಾದಿಸಬಹುದಾಗಿದೆ. ಮೈಸೂರಿನಲ್ಲಿ ದೇವಾಲಯಗಳಿಗೆ ಸರ್ಕಾರದ ವಂತಿಗೆ ಬಹು ಸ್ವಲ್ಪವಾಗಿದೆ. ಈ ಸಂದರ್ಭಗಳಲ್ಲಿ ಸರ್ಕಾರವು ತಿರುವಾಂಕೂರಿನ ಸರ್ಕಾರ ಕೈಗೊಂಡಿರುವ ಕಾರ್ಯದ ಮಾದರಿಯಲ್ಲೇ ನಡೆದುಕೊಳ್ಳುವುದು ಸಾಧ್ಯವಿಲ್ಲವೆಂದು ಹೇಳಬಹುದಾಗಿದೆ. ಇವರಲ್ಲಿನ ವ್ಯತ್ಯಾಸ ಕಡಮೆ ಪ್ರಮಾಣದ್ದಾಗಿದೆ, ಇಂತಹ ಸುಧಾರಣೆಗೆ ಪರಿಸ್ಥಿತಿ ಇನ್ನೂ ಪಕ್ವವಾಗಿಲ್ಲವೆಂದು ಸರ್ಕಾರ ಹೇಳಬಹುದು. ಗ್ರಾಮಸ್ಥರಲ್ಲಿ ಸಾಮಾನ್ಯ ಜನರೆಲ್ಲರು ಈ ಸುಧಾರಣೆ ಬಗ್ಗೆ ಸ್ಪಷ್ಟವಾದ ವಿರೋಧ ಹೊಂದಿರುವರೆಂದು ಕೂಡ ಸರ್ಕಾರ ವಾದಿಸಬಹುದು. ಸರ್ಕಾರವು ಈಗಾಗಲೇ ಬಾವಿಗಳ ಉಪಯೋಗ, ರಸ್ತೆಗಳಲ್ಲಿ ಪ್ರವೇಶ ಮತ್ತು ಇತರ ಅನೇಕ ಪ್ರಯೋಜನೆಗಳನ್ನು ಹರಿಜನರಿಗೆ ಒದಗಿಸಿದೆ, ಇಂತಹ ರಿಯಾಯಿತಿಗಳನ್ನು ಹರಿಜನರಿಗೆ ಕೊಟ್ಟಿರುವುದನ್ನು ಮೈಸೂರಿನ ಜನ ವಿರೋಧಿಸಿಲ್ಲ.

ಹಿಂದೂ ಸಮುದಾಯದಲ್ಲಿ ಸವರ್ಣೀಯರ ವರ್ಗವು ಸುಧಾರಣೆಗೆ ವಿರೋಧ ವಾಗಿದೆ ಎಂದೂ ಮತ್ತು ಸರ್ಕಾರದ ಘೋಷಣೆಯ ಮೂಲಕ ಅದನ್ನು ಅವರ ಮೇಲೆ

ಹೊರಿಸಿದರೆ ದುರಂತಕರ ಪರಿಣಾಮಗಳು ಉಂಟಾಗುವುದೆಂದೂ ಸರ್ಕಾರ ಹೇಳಬಹುದು. ಜನರ ಭಾವೋದ್ವೇಗವನ್ನು ಪ್ರಚೋದಿಸಲಾಗುವುದೆಂದೂ ಮತ್ತು ಲಿಂಗಾಯಿತರು ಹಾಗೂ ಒಕ್ಕಲಿಗರೂ ಕೂಡ ಸುಧಾರಣೆಯ ಕಟ್ಟಾ ವಿರೋಧಿಗಳೆಂದೂ ಹೇಳಬಹುದು ಎಂದರು. ಈ ಹಂತದಲ್ಲಿ ಅಧ್ಯಕ್ಷರು ಲಿಂಗಾಯಿತರು ಮತ್ತು ಒಕ್ಕಲಿಗರು ಈ ಸುಧಾರಣೆಯ ಪರವಾಗಿರು ವರೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೆ.ಸಿ. ರೆಡ್ಡಿ ಲಿಂಗಾಯಿತರ ಪರವಾಗಿ ಏನನ್ನೂ ಹೇಳುವುದಕ್ಕೂ ತಾವು ಸಮರ್ಥರಲ್ಲವೆಂದು, ಒಕ್ಕಲಿಗರು ಸಂಪೂರ್ಣವಗಿ ಸುಧಾರಣೆಗೆ ಅನುಕೂಲವಾಗಿದ್ದಾರೆಂದು ಹೇಳಿದರು.

ಮುಂದುವರೆದು 'ಈ ಸುಧಾರಣೆಯನ್ನು ಕಾರ್ಯಗತಗೊಳಿಸಿದರೆ ಹಿಂದೂ ಸಮಾಜದಲ್ಲಿ ಕ್ಷೋಭೆ ಉಂಟಾಗುವುದೆಂದು ತಾವು ಭಾವಿಸುವುದಿಲ್ಲ ಎಂದರು. ತಿರುವಾಂಕೂರು ಸಂಸ್ಥಾನದಲ್ಲಿ ಜನರು ಸಂಪ್ರದಾಯ ಶರಣರು ಮತ್ತು ಅಸ್ಪೃಶ್ಯತೆಯ ಅತಿಕಠಿಣ ರೀತಿಯು ಆ ಸಂಸ್ಥಾನದಲ್ಲಿ ಆಚರಣೆಯಲ್ಲಿತ್ತು. ಅಲ್ಲೂ ಕೂಡ ಈ ಘೋಷಣೆಯ ನಂತರ ಯಾವುದೇ ಕ್ಷೋಭೆ ಅಥವಾ ಕ್ರಾಂತಿ ಉಂಟಾಗಿಲ್ಲ ಅಥವಾ ತಲೆಗಳು ಉರುಳಿ ಬಿದ್ದಿಲ್ಲ, ಸಂತೋಷ ಮಾತ್ರ ಕಂಡು ಬಂದಿದೆ. ಮಹಾತ್ಮಗಾಂಧಿ ಅವರು ಕೂಡ ಇದು ಅನುಭವಸಿದ್ಧವೆಂದು ಹೇಳಿದ್ದಾರೆ. ಇದೇ ರೀತಿಯ ಕ್ರಮವನ್ನು ಮೈಸೂರಿನಲ್ಲೂ ಕೈಗೊಂಡರೆ ಪರಿಣಾಮ ಬೇರೆ ರೀತಿಯಾಗುವುದೆಂದು ಭಾವಿಸಲು ಕಾರಣವಿಲ್ಲವೆಂದು ಕೆ.ಸಿ. ರೆಡ್ಡಿ ಹೇಳಿದರು. ಎಲ್ಲಾ ಸರ್ಕಾರಿ ಶಾಲೆಗಳನ್ನು ಎಲ್ಲಾ ಕೋಮುಗಳ ಮಕ್ಕಳಿಗೂ ತೆರೆದಿಟ್ಟು ಸರ್ಕಾರ ಆಜ್ಞೆಯನ್ನು ಹೊರಡಿಸಿದಾಗ ಒಂದು ತಲೆಯೂ ಉದುರಲಿಲ್ಲ. ಕ್ರಾಂತಿಯೇನೂ ಉಂಟಾಗಲಿಲ್ಲ. ಸರ್ಕಾರದ ಆಜ್ಞೆಯನ್ನು ಅನುಸರಿಸಲಾಯಿತು.

ಆದಿ ಕರ್ನಾಟಕರು ಕೂಡ ಹಿಂದೂಗಳಾಗಿದ್ದು ರಾಮ, ನಾರಾಯಣ, ಗೋವಿಂದ ಎಂಬುದಾಗಿ ಹಿಂದೂ ದೇವರುಗಳ ಹೆಸರುಗಳನ್ನೇ ಇಟ್ಟುಕೊಳ್ಳುತ್ತಾರೆ. ದೇಶದಲ್ಲಿ ಜನರು ಈ ಸುಧಾರಣೆಗೆ ತಯಾರಾಗಿದ್ದಾರೆಯೇ ಅಥವಾ ಸಾಕಷ್ಟು ಪ್ರಚಾರವನ್ನು ನಡೆಸಲಾಗಿದೆಯೇ ಎಂದು ಸರ್ಕಾರವು ಕೇಳಬಹುದಾಗಿದೆ. ಹಿಂದಿನ ಕಾಲದಲ್ಲಿ ಸಣ್ಣ ವಿವಾದಗಳಿಂದಲೇ ತಲೆಗಳನ್ನು ಒಡೆಯಲಾಗಿದೆ. ಈ ಸುಧಾರಣೆಗಾಗಿ ಕೋರುತ್ತಿರುವ ನಾಯಕರು ಅದನ್ನು ವಿರೋಧಿಸುವವರೋ ಇದಕ್ಕೆ ಅನುಕೂಲವಾಗುವಂತೆ ತಮ್ಮೆಲ್ಲ ಸಾಮರ್ಥ್ಯವನ್ನು ವಿನಿಯೋಗಿಸಲು ಸಿದ್ಧರಿದ್ದಾರೆ. ಎಷ್ಟೋ ಕಾಲದ ಹಿಂದೆಯೇ ನಡೆಯಬೇಕಾಗಿದ್ದ ಈ ಕ್ರಮವನ್ನು ಕೈಗೊಳ್ಳಲು ಸರಿಯಾದ ಕಾಲ ಬಂದು ಹೋಗಿದೆ. ಮಹಾರಾಜರು ಎಲ್ಲಾ ಅಧಿಕಾರಗಳಿಗೂ ಮೂಲ ಸೆಲೆ ಮತ್ತು ಅವರು ಒಬ್ಬ ಶ್ರೇಷ್ಠ ಹಿಂದೂ. ಹಿಂದೂ ಧರ್ಮವೂ ಕ್ಷೀಣಿಸಿ ಕಡೆ ಯಲ್ಲಿ ನಿರ್ನಾಮವಾಗದಂತೆ ರಕ್ಷಿಸಲು ಅವರು ಈ ದೊಡ್ಡ ಹೆಜ್ಜೆಯನ್ನು ಹಾಕಬೇಕು ಮತ್ತು ಅದರಿಂದ ಇಡೀ ದೇಶವು ಸಂತೋಷಪಡುತ್ತದೆ. ಶಂಕೆ,

ಭಯಗಳು ಖಂಡಿತ ಇರುವುದಾದರೂ ಅವು ಮೂಲಭೂತವಾಗಿ ನಿರಾಧಾರವಾದವು" ಎಂದು ಹೇಳಿದ್ದಾರೆ.[13]

ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡುವ ರೆಡ್ಡಿ ಅವರ ಮನೋಭಾವ ಅಸ್ಪೃಶ್ಯತೆಯನ್ನು ನಿರ್ಮೂಲನ ಮಾಡಲು ತಮ್ಮ ಅಧಿಕಾರವಧಿಯಲ್ಲಿ ಅವರು ಕೈಗೊಂಡ ಕ್ರಮಗಳನ್ನು ಗಮನಿಸಬಹುದು.

8. ಮುಂಗಡ ಪತ್ರದ ಚರ್ಚೆ ಮತ್ತು ಕೆ.ಸಿ. ರೆಡ್ಡಿ

ನ್ಯಾಯವಿಧಾಯಕ ಸಭೆಯಲ್ಲಿ ಕೆ.ಸಿ. ರೆಡ್ಡಿ ಅವರು ಮುಂಗಡ ಪತ್ರದ ಬಗ್ಗೆ ನಡೆದ ಚರ್ಚೆಯಲ್ಲಿ ಮಾತನಾಡುತ್ತಾ "ಮುಂಗಡ ಪತ್ರವು ಹೆಚ್ಚುವರಿಯದೇ ಅಥವಾ ಕೊರತೆಯದೇ ಎನ್ನುವುದು ಚರ್ಚಾಸ್ಪದವಾದ ವಿಷಯವೆಂದು ಹೇಳಿ, ಅದು ತಾಂತ್ರಿಕವಾಗಿ ಹೆಚ್ಚುವರಿ ಬಜೆಟ್ ಆಗಿದೆ. ಏಕೆಂದರೆ ಮೀಸಲುಗಳಿಂದ ಹಣವನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಮುಂಗಡ ಪತ್ರ ಮುನ್ನೋಟ ಹೊಂದಿರಬೇಕು. ವರ್ಷ ವರ್ಷಕ್ಕೂ ವರಮಾನ ಕ್ರಮೇಣ ಹೆಚ್ಚುತ್ತಿದೆ ಮತ್ತು ವೆಚ್ಚವೂ ಕೂಡ ಹೆಚ್ಚುತ್ತಿದೆ. ಮುಂಬರುವ ವರ್ಷಗಳಲ್ಲಿ ಹೆಚ್ಚುವರಿ ಅಥವಾ ಸಮತೋಲನ ಇರುವ ಬಜೆಟ್‌ನ ತಯಾರಿಗೆ ಹೆಚ್ಚು ಅವಕಾಶವಿಲ್ಲ. ಗಣಿಗಳ ವರಮಾನ ಕಡಿಮೆಯಾಗುತ್ತಿದೆ. ಇನ್ನು 20 ವರ್ಷಗಳಲ್ಲಿ ಇಡೀ ವರಮಾನ ಮಾಯವಾಗುತ್ತದೆ. ಅಬ್ಕಾರಿ ವರಮಾನದ ಪ್ರಶ್ನೆ ತುಂಬ ನಾಜೂಕಿನ ವಿಷಯ. ಆದರೆ ಮದ್ಯಪಾನವನ್ನು ನಿಷೇಧಿಸಲು ಪ್ರವೃತ್ತಿಯು ಎಲ್ಲೆಲ್ಲೂ ಕಂಡು ಬರುತ್ತಿದೆ. ಮದ್ಯಕ್ಕೆ ವಿರೋಧ ಹೆಚ್ಚುವ ಕಾಲವೊಂದು ಬರಲಿದೆ ಮತ್ತು ಸರ್ಕಾರವು ಕಡ್ಡಾಯವಾಗಿ ಅಬ್ಕಾರಿ ಆದಾಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ಸಂಭವವನ್ನು ಮುಂಚೆಯೇ ಕಂಡುಕೊಂಡು ಆ ಪರಿಸ್ಥಿತಿ ಯನ್ನು ಎದುರಿಸಲು ಒಂದಷ್ಟು ರಕ್ಷಣೆಯನ್ನು ಇಟ್ಟುಕೊಳ್ಳುವುದು ಉತ್ತಮಕರವಾದ ಮುತ್ಸದ್ದಿತನ ಎನಿಸುತ್ತದೆ ಎಂದರು.

ಕಡೇ ಪಕ್ಷ ದೂರ ದೂರದಲ್ಲಿ ಹಳ್ಳಿಗಳಲ್ಲಿನ ಅಂಗಡಿಗಳನ್ನು ಮುಚ್ಚಬೇಕು ಮತ್ತು ಎಲ್ಲ ಅಂಗಡಿಗಳನ್ನು ಕ್ರಮ ಕ್ರಮವಾಗಿ ಮುಚ್ಚಿ ಬಿಡುವ ನೀತಿಯನ್ನು ಒಂದಷ್ಟು ಉತ್ಸಾಹದಿಂದ ಅನುಸರಿಸಬೇಕು. ಖಾಯಂ ರೀತಿಯ ವರಮಾನಗಳು ಸುಲಭವಾಗಿ ಏರಿಳಿತ ಗೊಳ್ಳುವ ಸ್ವಭಾವವನ್ನು ಹೊಂದಿಲ್ಲವೆಂದು ಹೇಳಿದರು. ತೆರಿಗೆ ಹೊರೆಯನ್ನು ಸಮನಾಗಿ ಇಟ್ಟಿಲ್ಲ. ಕೆಳಮಟ್ಟದ ಜನರಿಗೆ ಪರಮಾವಧಿ ತೆರಿಗೆ ಕಡಿಮೆ ಮಾಡಿರುವುದರ ಜೊತೆಗೆ ಕೇಂದ್ರ ಸರ್ಕಾರದ ವರಮಾನದಿಂದ ಇನ್ನಷ್ಟು ಹೆಚ್ಚಿನ ಪಾಲನ್ನು ಪಡೆಯಲು

---

13. ನಡಾವಳಿಗಳು : ಮೈಸೂರು ನ್ಯಾಯವಿಧಾಯಕ ಸಭೆ, 1936–37.

ಸಂಸ್ಥಾನ ಸರ್ಕಾರ ಹಕ್ಕು ಹೊಂದಿದೆ. ಈ ವಿಷಯಕ್ಕಾಗಿ ದಿವಾನರು ಧೈರ್ಯದಿಂದ ಹೋರಾಡಬೇಕು ಎಂದು ಹೇಳಿ, ಭಟ್ಕಳ ಬಂದರಿನ ಯೋಜನೆ ಇನ್ನೂ ಆಲೋಚನೆ ಯಲ್ಲಿದೆಯೇ ಎಂದು ತಿಳಿಯಬಯಸಿದರು. ಜನರಲ್ಲಿ ಪರಮಾವಧಿ ತೆರಿಗೆಯನ್ನು ವಿಧಿಸಲಾಗಿದೆ ಆದರೆ ಮೇಲಿನ ಜನಗಳ ಮೇಲಿನ ತೆರಿಗೆ ಸರಿಯಾಗಿಲ್ಲ. ಮಿಲಿಟರಿ ವೆಚ್ಚದಲ್ಲಿ ಸ್ವಲ್ಪ ಮಟ್ಟಿಗೆ ಹಿಡಿದು ಮಾಡಿರುವುದು ಸ್ವಾಗತಾರ್ಹ.

ವಿದ್ಯಾಭ್ಯಾಸದ ಮೇಲೆ ಗಮನಾರ್ಹವಾಗಿ ವೆಚ್ಚ ಮಾಡಲಾಗುತ್ತಿದೆಯೆಂದು ಕಂಡು ಬಂದರೂ ಹಣದ ಬಳಕೆಯಲ್ಲಿ ಅಪಾರವಾದ ವ್ಯರ್ಥ ಕಂಡು ಬರುತ್ತಿದೆ. ಆದ್ದರಿಂದ ವಿದ್ಯಾಭ್ಯಾಸಕ್ಕಾಗಿ ಇನ್ನಷ್ಟು ಹಣ ನಿಗದಿ ಮಾಡಬೇಕೆಂದು ಒತ್ತಾಯಪಡಿಸುವುದು ಉಪಯೋಗವಿಲ್ಲ. ಹಣವನ್ನು ವಿವೇಕದಿಂದ ಖರ್ಚು ಮಾಡುವುದು ಹೆಚ್ಚು ಮುಖ್ಯವಾದ ವಿಷಯ. ಗ್ರಾಮಾಂತರ ಪ್ರದೇಶಗಳ ಜನರಿಗಾಗಿ ವೃತ್ತಿಶಿಕ್ಷಣದ ಮತ್ತು ಕೃಷಿಶಿಕ್ಷಣದ ಶಾಲೆಗಳನ್ನ ಹೆಚ್ಚು ಮಾಡಬೇಕು. ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಜಾಗೃತಿ ಇದೆಯೆಂದು ಒಪ್ಪಬಹುದಾದರೂ ಮುಂಗಡ ಪತ್ರದಲ್ಲಿ ನಿಗದಿಗಳನ್ನು ಮಾಡುವುದರಲ್ಲಿ ಸರ್ಕಾರದ ಕೈಗಳನ್ನು ಕಟ್ಟಿಹಾಕಿದಂತಿದೆ. ಭೂ ಅಡಮಾನ ಬ್ಯಾಂಕುಗಳು, ಗ್ರಾಮೀಣ ಆರೋಗ್ಯ, ಗ್ರಾಮೀಣ ರಸ್ತೆಗಳು ಮುಂತಾದವುಕ್ಕಾಗಿ ಕೊಟ್ಟಿರುವ ನಿಗದಿಗಳು ಸಾಕಷ್ಟಿಲ್ಲ. ಗ್ರಾಮಾಂತರದ ಭಾಗವೇ ಸಂಸ್ಥಾನಕ್ಕೆ ನಿಜವಾದ ಹೃದಯ" ಎಂದು ಕೆ.ಸಿ. ರೆಡ್ಡಿ ಹೇಳಿದರು.[14]

ನ್ಯಾಯವಿಧಾಯಕ ಸಭೆ ಸದಸ್ಯರಾದ ಕೆ.ಟಿ. ಸತ್ಯನಾರಾಯಣಶೆಟ್ಟಿ ಅವರು ಒಂದು ನಿರ್ಣಯ ಮಂಡಿಸಿ 'ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲಿಸಲು ಮತ್ತು ಸರ್ಕಾರಿ ಸೇವೆಗಳಲ್ಲಿ ಖೋತಾ ಕ್ರಮಗಳನ್ನು ಜಾರಿ ಮಾಡುವ ರೀತಿ ವಿಧಾನಗಳನ್ನು ಸೂಚಿಸಲು ಅಧಿಕಾರಿಗಳು ಹಾಗೂ ಅಧಿಕಾರೇತರರು ಇರುವ 'ಸಮ್ಮಿಶ್ರ ಸಮಿತಿ' ಯೊಂದನ್ನು ನೇಮಿಸಬೇಕೆಂದು ಶಿಫಾರಸು' ಮಾಡಿದರು.

ಈ ನಿರ್ಣಯಕ್ಕೆ ಬೆಂಬಲ ವ್ಯಕ್ತಪಡಿಸಿ ಚರ್ಚೆಯಲ್ಲಿ ಭಾಗವಹಿಸಿದ ಕೆ.ಸಿ. ರೆಡ್ಡಿ ಅವರು "ಕಾಲ ಕಾಲಕ್ಕೆ ಸಂಸ್ಥಾನದ ಹಣಕಾಸು ಪರಿಸ್ಥಿತಿಯನ್ನು ಪರಾಮರ್ಶಿಸಿ ತನಿಖೆ ಮಾಡುವುದು ಅಪೇಕ್ಷಣೀಯವೆಂದು ಹೇಳಿದರು. ದಿವಾನರು ತಮ್ಮ ಬಜೆಟ್ ಭಾಷಣದಲ್ಲಿ ಸಂಸ್ಥಾನದ ಹಣಕಾಸಿನ ಸ್ಥಿತಿ ಕಳವಳದಿಂದ ಮುಕ್ತವಾಗಿಲ್ಲವೆಂದು ಹೇಳಿದ್ದರು. ಇದಕ್ಕೆ ಪ್ರತಿಯಾಗಿ ಹಣಕಾಸಿನ ಸ್ಥಿತಿ ಬಹಳ ಭದ್ರವಾಗಿದೆ ಎಂದು ಹಣಕಾಸು ಕಾರ್ಯದರ್ಶಿ ಹೇಳಿದ್ದಾರೆ. ಈ ಎರಡು ಹೇಳಿಕೆಗಳು ಪರಸ್ಪರ ವಿರೋಧವಾಗಿವೆ. ಆದ್ದರಿಂದ ಇಡೀ

---

14. ನಡಾವಳಿಗಳು : ಮೈಸೂರು ನ್ಯಾಯವಿಧಾಯಕ ಸಭೆ, 1930–31.

ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲು ಅವಶ್ಯಕವಾಗಿದೆ. ಭೂ ಕಂದಾಯವು ಸ್ಥಿರವಾದ ಅಂಶವಾಗಿದೆ. ಅಬ್ಕಾರಿ ವರಮಾನವು ಸಂದೇಹಾಸ್ಪದ ಮತ್ತು ಗಣಿಗಾರಿಕೆಯ ವರಮಾನ ಕಾಲ ಕ್ರಮದಲ್ಲಿ ಕಡಿಮೆಯಾಗುತ್ತದೆ. ಆದ್ದರಿಂದ ಭವಿಷ್ಯದಲ್ಲಿ ಹಣಕಾಸಿನ ಬೇಡಿಕೆಗಳನ್ನು ಪೂರೈಸಿಕೊಳ್ಳುವ ವಿಷಯದಲ್ಲಿ ತಾವಿ ಒಂದಷ್ಟು ನಿರಾಸೆಯನ್ನು ಹೊಂದಿರುವುದಾಗಿ ಹೇಳಿದರು.

ಕೇಂದ್ರ ಸರ್ಕಾರದ ವರಮಾನದಿಂದ ಹೊಸಪಾಲನ್ನು ಪಡೆಯುವ ಬಗ್ಗೆ ಮತ್ತು ತೆರಿಗೆ ಪಾವತಿಯ ವಿಷಯ ನಾವು ಊಹಿಸಲು ಸಾಧ್ಯವಿಲ್ಲ. ಸಂಸ್ಥಾನದ ಎಲ್ಲಾ ಪ್ರಜೆಗಳ ನಡುವೆ ತೆರಿಗೆಯನ್ನು ಸಮಾನವಾಗಿರಿಸಬೇಕೆಂದು ವಿಷಯಗಳ ಸಮಿತಿ ಸಲಹೆ ಮಾಡಿದೆ. ಆದರೆ ಈ ಅಂಶಕ್ಕೆ ಗಮನವನ್ನೇ ಕೊಟ್ಟಿಲ್ಲ. ರೈತರಿಗೆ ಪೂರಕವಾದ ಪ್ರಯೋಜನಗಳನ್ನು ಕೊಡದೆ ಅವರನ್ನು ಹಿಂಡಲಾಗುತ್ತಿದೆ. ಉನ್ನತ ಮಟ್ಟದ ಅಧಿಕಾರಿಗಳ ವೇತನಗಳನ್ನು ಕಡಿಮೆ ಮಾಡಬೇಕೆನ್ನುವ ವಿಷಯ ಸತ್ತ ಕುದುರೆಯಂತಾಗಿದೆ. ಕೆಲವು ಇಲಾಖೆಗಳಲ್ಲಿ ಖೋತಾ ಮಾಡಲು, ಪುನರ್ ವ್ಯವಸ್ಥೆಗೊಳಿಸಲು ಮತ್ತು ಒಂದನ್ನೊಂದು ಸೇರಿಸಲು ಒಂದಷ್ಟು ಅವಕಾಶವಿದೆ" ಎಂದ ಸೂಚಿಸಿದರು.[15] ಈ ಎಲ್ಲ ಅಂಶಗಳಿಂದ ರಾಜ್ಯದ ಅಭಿವೃದ್ಧಿಗಾಗಿ ರೆಡ್ಡಿ ಅವರ ಅಹರ್ನಿಶಿಯಾಗಿ ದುಡಿಯುತ್ತಿದ್ದುದು ತಿಳಿದು ಬರುತ್ತದೆ.

9. ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ಕೆ.ಸಿ. ರೆಡ್ಡಿ

1946ರ ಮಾರ್ಚ್ 3ರಂದು ಕೆ.ಸಿ. ರೆಡ್ಡಿ ಅವರು 'ಅಖಿಲ ಭಾರತ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನ'ದ (ALL INDIA STATES PEOPLE'S CONFERENCE) ಪ್ರತಿನಿಧಿಯಾಗಿ ಲಂಡನ್‌ಗೆ ಭೇಟಿ ನೀಡಿದ್ದಾಗ ಪತ್ರಿಕಾ ಸಂದರ್ಶನವೊಂದರಲ್ಲಿ "ಬ್ರಿಟಿಷ್ ಸರ್ಕಾರವು ಭಾರತಕ್ಕೆ ಕ್ಯಾಬಿನೆಟ್ ಆಯೋಗವನ್ನು ಕಳುಹಿಸುವ ಬ್ರಿಟನ್ ಪ್ರಧಾನಿ ಕ್ಲೆಮೆಂಟ್ ಅಟ್ಲಿ ನಿರ್ಧಾರದಿಂದ ತಮಗೆ ತೃಪ್ತಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಭಾರತದಲ್ಲಿ ತಾತ್ಕಾಲಿಕವಾಗಿ ಸ್ಥಾಪಿಸಲಿರುವ ರಾಷ್ಟ್ರೀಯ ಸರ್ಕಾರ ಸಂವಿಧಾನದ ರಚನೆ ಮಾಡುವುದಕ್ಕಾಗಿ ನೇಮಿಸುವ ಸಮಿತಿಯಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತರಾದ ಭಾರತೀಯ ರಾಜ್ಯಗಳ ಪ್ರತಿನಿಧಿಗಳನ್ನು ಸೇರಿಸಬೇಕೆಂದು ಆಗ್ರಹ ಪಡಿಸಿರುವುದು ಗಮನಾರ್ಹ ದಂಗತಿಯಾಗಿದೆ".[16]

---

15. ನಡಾವಳಿಗಳು : ಮೈಸೂರು ನ್ಯಾಯ ವಿಧಾಯಕ ಸಭೆ, 1930–31.
16. URMILA PRADHIN : Towards the Integration of Indian States, 1919-1947, P- 154.

ಇದೇ ಸಮಯದಲ್ಲಿ ಕೆ.ಸಿ. ರೆಡ್ಡಿ ಅವರು "ಭಾರತ ಪ್ರತಿನಿಧಿಯಾಗಿ ಅಂತರರಾಷ್ಟ್ರೀಯ ಗಣಿ ಕಾರ್ಮಿಕರ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದಲ್ಲಿ ಗಣಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿ, ಪರಿಣಾಮಕಾರಿ ಭಾಷಣ ಮಾಡಿರುವುದು ಕಂಡು ಬರುತ್ತದೆ".[17]

10. ಲೋಕಸೇವಾ ಆಯೋಗದ ಸ್ಥಾಪನೆ ಮತ್ತು ಕೆ.ಸಿ. ರೆಡ್ಡಿ

1949ರ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ 'ಆಡಳಿತ ಸೇವಾ ವರ್ಗದ ದಕ್ಷತೆ' ಹೆಚ್ಚುವಂತೆ ಮಾಡಲು ಸಿವಿಲ್ ಸರ್ವಿಸ್ ಪರೀಕ್ಷೆ ನಡೆಸಿ ದಕ್ಷತೆಯುಳ್ಳ ಅರ್ಹ ವ್ಯಕ್ತಿಗಳನ್ನು ಮಾತ್ರ ಆರಿಸಬೇಕೆಂದೂ, ನಾಮಕರಣ ಪದ್ಧತಿ ಕೈಬಿಡಬೇಕೆಂದೂ ಹಾಗೂ ಸರ್ಕಾರಿ ಉದ್ಯೋಗ ವರ್ಗದ ವೆಚ್ಚವನ್ನು ಹೆಚ್ಚಿಸಬೇಕೆಂದೂ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು "ಪ್ರಾತಿನಿಧಿಕ ಸರ್ಕಾರದಲ್ಲಿ ಮಂತ್ರಿಮಂಡಲವು ತನ್ನ ಧೋರಣೆಗಳೂ ಕಾರ್ಯಗತವಾಗಲು ಆಡಳಿತ ಸೇವಾ ವರ್ಗವನ್ನು ನಿರ್ದೇಶಿಸುವುದೆಂದು ಹೇಳಿದರು. ನಾಮಕರಣ ಮಾಡುವ ಮತ್ತು ಪರೀಕ್ಷೆಗಳ ಪದ್ಧತಿ ಬಹಳ ಕಾಲದಿಂದ ನಡೆದು ಬಂದಿದ್ದು ಅದನ್ನು ಮುಂದುವರಿಸಬೇಕೇ, ಬೇಡವೇ ಎಂದು ಸರ್ಕಾರ ಪರಿಶೀಲಿಸುತ್ತಿದೆ.

ಉನ್ನತ ಅಧಿಕಾರಿಗಳು ಇತರ ರಾಜ್ಯಗಳಿಗೆ ಹೋಗುವ ಆಕರ್ಷಣೆಯನ್ನು ತಪ್ಪಿಸಲು ಅವರ ವೇತನಗಳನ್ನು ಹೆಚ್ಚಿಸಬೇಕೆಂಬ ಬೇಡಿಕೆ ಕುರಿತು ಹೇಳಬೇಕೆಂದರೆ, ನಿರ್ಣಯದಲ್ಲಿ ಕೇಳಿರುವ 10 ಲಕ್ಷ ರೂಪಾಯಿನಿಂದ ಏನೂ ಸಹಾಯವಾಗದು. ಸಂಬಳ ಹೆಚ್ಚಿಸಲಾಗುವುದೇ ಎಂದು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ, ಆಡಳಿತ ಸೇವಾ ವರ್ಗದವರ ವೇತನಗಳು ದೇಶದಾದ್ಯಂತ ಏಕರೂಪದಲ್ಲಿರಬೇಕೆಂದು ನನ್ನ ವೈಯಕ್ತಿಕ ಅಪೇಕ್ಷೆ, ನೇಮಕಾತಿ ಆಯ್ಕೆಗೆ ಈಗಿರುವ ಪದ್ಧತಿಯನ್ನು ಟೀಕಿಸುವುದು ಸರಿಯಲ್ಲ. ನಿರ್ಣಯದಲ್ಲಿರುವ ಎಲ್ಲಾ ಅಂಶಗಳನ್ನು ಕಾರ್ಯಗತ ಮಾಡಬೇಕೆಂದರೆ ಸರ್ಕಾರಕ್ಕೆ 130 ಕೋಟಿ ರೂಪಾಯಿ ಖರ್ಚು ಬೀಳುತ್ತದೆ. ದಕ್ಷತೆಯುಳ್ಳ ಆಡಳಿತ ಸೇವಾ ವರ್ಗ ಇರಬೇಕೆಂಬ ತತ್ವವೇನೋ ಒಳ್ಳೆಯದೇ, ಆದರೆ ಅದನ್ನು ತಂದಿರುವ ರೂಪದಲ್ಲಿ ಸರ್ಕಾರ ವಿರೋಧಿಸಬೇಕಾಗಿದೆ" ಎಂದು ಹೇಳಿದರು.[18]

---

17. RICHARD, L. PARK AND IRENETINKER : Leadership and Political Institution in India, P-111.
18. ನಡಾವಳಿಗಳು : ಮೈಸೂರು ಪ್ರಜಾಪ್ರತಿನಿಧಿ ಸಭೆ, 1941–42.

ರೆಡ್ಡಿ ಅವರ ಶ್ರಮದ ಫಲವಾಗಿಯೇ ಲೋಕಸೇವಾ ಆಯೋಗದ ಸ್ಥಾಪನೆಯಾಮುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

11. ಶಾಸನಸಭೆ ಮತ್ತು ಕೆ.ಸಿ. ರೆಡ್ಡಿ

ಕೆಲವು ಇಲಾಖೆಗಳ ಆಡಳಿತಗಳು ಕೇಂದ್ರ ಸರ್ಕಾರಕ್ಕೆ ಸೇರಿ ಹೋಗುವ ಸಂಬಂಧದಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಮಾತನಾಡಿ "ಈ ಇಲಾಖೆಗಳ ನೌಕರ ವರ್ಗದವರು ಮೈಸೂರಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅವರು ಮುಂದೆ ಇನ್ನು ಹೆಚ್ಚಿನ ಯಶಸ್ಸು ಮತ್ತು ಕೀರ್ತಿ ಪಡೆಯಲೆಂದು ಹಾರೈಸಿದರು. ಅಲ್ಲದೆ ಮಿಲಿಟರಿ, ರೈಲ್ವೆ, ವರಮಾನ ತೆರಿಗೆ, ಆಡಿಟ್, ಸೆಂಟ್ರೆಲ್ ಎಕ್ಸೈಜ್ ತೆರಿಗೆಗಳು, ಟೆಲಿಫೋನ್, ಆಕಾಶವಾಣಿ. ಮಿಲಿಟರಿಯಾಲಜಿ, ಇನ್ಸ್‌ಪೆಕ್ಷನ್ ಆಫ್ ಮೈನ್ಸ್, ಟ್ರೇಡ್‌ಮಾರ್ಕ್ಸ್, ಊಟಿಯಲ್ಲಿ ಏರೋಡ್ರಮ್, ಕ್ಯಾಪಿಟಲ್ ಇಷ್ಯೂಸ್, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಜೀಯೋ–ಫಿಸಿಕಲ್ ಸೆಕ್ಷನ್ ಈ ಬಾಬುಗಳು ಈ ದಿನದಿಂದ ಮೈಸೂರಿನಿಂದ ಕೇಂದ್ರ ಸರ್ಕಾರಕ್ಕೆ ಸೇರಿ ಹೋಗುತ್ತವೆ. ಇವುಗಳ ಪೈಕಿ ಕ್ಯಾಪಿಟಲ್ ಇಷ್ಯೂಸ್, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಜೀಯೋ–ಫಿಸಿಕಲ್ ಸೆಕ್ಷನ್, ಮಿಲಿಟರಿಯಾಲಜಿ ಈ ಇಲಾಖೆಗಳ ಆಡಳಿತವನ್ನು ಮೈಸೂರು ಸರ್ಕಾರದವರು ಭಾರತ ಸರ್ಕಾರದ ಏಜೆಂಟರಾಗಿ ನೋಡಿಕೊಳ್ಳುವರು.

ಕೇಂದ್ರಕ್ಕೆ ಸೇರಿ ಹೋಗುವ ಇಲಾಖೆಯಲ್ಲಿರುವ ನೌಕರರ ಸ್ಥಾನಮಾನಗಳು ಉತ್ತಮಗೊಳ್ಳುವುವು. ಕೇಂದ್ರ ಸರ್ಕಾರದವರು ಕೇಂದ್ರಕ್ಕೆ ಸೇರಿ ಹೋಗುವ ಮೈಸೂರು ರೈಲ್ವೆ ನೌಕರರ ಸಂಬಳವನ್ನು ಈಗಾಗಲೇ ಇತರ ರೈಲ್ವೆಗಳ ಸಂಬಳದ ಮಟ್ಟಕ್ಕೆ ಹೆಚ್ಚಿಸಿರುವುದಾಗಿ ಪ್ರಕಟವಾಗಿದೆ ಎಂದೂ ಹಾಗೂ ಮೈಸೂರು ರೈಲ್ವೆ ಇಲಾಖೆಯ ನೌಕರರು ಕಳೆದ ಎರಡು ವರ್ಷಗಳಿಂದ ಉತ್ಸಾಹದಿಂದ ಕೆಲಸ ಮಾಡಿ ರೈಲ್ವೆ ವರಮಾನವು ಹೆಚ್ಚಿಸಿರುವರೆಂದು ಕೆ.ಸಿ. ರೆಡ್ಡಿ ಅವರು ತಿಳಿಸಿದ್ದಾರೆ.

ಭಾರತವೆಲ್ಲ ಒಂದು, ಈ ಇಲಾಖೆಗಳನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿ ಬಿಟ್ಟೆವೆಂದೂ ಯಾರು ನೆನೆಯಬೇಕಾಗಿಲ್ಲ. ಭಾರತದ ಅಭಿವೃದ್ಧಿಗಾಗಿ ನಾವು ನಂಬಿಕೆಯಿಂದ, ಉತ್ಸಾಹದಿಂದ ದೃಢ ಮನಸ್ಸಿನಿಂದ ನಮ್ಮ ಮುಂದಿನ ಕೆಲಸವನ್ನು ಮಾಡಬೇಕು. ಭಾರತ ಸರ್ಕಾರ ನಮ್ಮದು ಎಂಬುದನ್ನು ಮರೆಯಬಾರದು. ಭಾರತ ಪಾರ್ಲಿಮೆಂಟಿನಲ್ಲಿ ಮತ್ತು ಅನೇಕ ಉಪಸಮಿತಿಗಳಲ್ಲಿ ನಮ್ಮ ಪ್ರತಿನಿಧಿಗಳು ಇರುತ್ತಾರೆ" ಎಂದರು.[19]

---

19. ಪೌರವಾಣಿ ಪತ್ರಿಕೆ : ದಿನಾಂಕ : 02–04–1950.

12. ಸ್ವಾತಂತ್ರ್ಯ ದಿನಾಚರಣೆ ಮತ್ತು ಕೆ.ಸಿ. ರೆಡ್ಡಿ

1950ರ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಮಾತನಾಡುತ್ತಾ "ಪ್ರಾರಂಭದಿಂದಲೂ ಕೃಷಿಯೇ ನಮ್ಮ ಜನ ಜೀವನದ ಮುಖ್ಯವೃತ್ತಿ. ಗ್ರಾಮಗಳೇ ನಮ್ಮ ಸಂಸ್ಕೃತಿಯ ನೆಲೆವೀಡು. ಪ್ರಾಚೀನ ಜನತೆಯ ಜೀವನದಲ್ಲಿ ಉತ್ಸಾಹ, ಔದಾರ್ಯ ಮತ್ತು ಸರಳತೆ ಇವು ತುಂಬಿದ್ದವು. ಸಾಹಿತ್ಯ ಮತ್ತು ಕಲೆ ಇವುಗಳ ಅಭಿರುಚಿಯು ಅತ್ಯುನ್ನತ ಮಟ್ಟದಲ್ಲಿ ಜನಸಾಮಾನ್ಯರ ಬಳಕೆಯಲ್ಲಿ ಇದ್ದಿತು. ಜನತೆ ಶ್ರಮ ಜೀವಿಗಳಾಗಿ ಕೆರೆ, ಕಟ್ಟೆ, ತೋಪು, ದೇವಸ್ಥಾನ, ಛತ್ರ ಮುಂತಾದ ಮಹತ್ತಾದ ಕಾರ್ಯಗಳನ್ನು ಮಾಡಿದರು. ಕಾಲ ಉರುಳಿದಂತೆಲ್ಲಾ ಅವರ ಸಂಸ್ಕೃತಿಯ ಶಕ್ತಿ ಕಡಿಮೆಯಾಯಿತು. ರೈತನು ತನ್ನ ಶ್ರಮಜೀವನದಲ್ಲಿ ನಿಶ್ಶಕ್ತನು, ನಿರಾಸಕ್ತನೂ ಆದನು ಎಂದರು.

ಮುಂದುವರೆದು ದೇಶದ ಸಂಸ್ಕೃತಿ ಮತ್ತು ಸಂಪತ್ತುಗಳಿಗೆ ಅಡಿಪಾಯವಾದ ಗ್ರಾಮಗಳು ನಶಿಸುತ್ತಿರುವುದನ್ನೂ, ಜನಾಂಗಕ್ಕೆ ಆಧಾರ ಪ್ರಾಯನಾದ ರೈತನು ಕುಗ್ಗುತ್ತಿರುವುದನ್ನೂ ಕಂಡು ಮಹಾತ್ಮಗಾಂಧಿ ಅವರು ದೇಶದ ಮುಂದಾಳುಗಳ ಗಮನವನ್ನು ಗ್ರಾಮಾಭ್ಯುದಯದ ಕಡೆಗೆ ಸೆಳೆದರು. ಹಳ್ಳಿಗಳ ಪತನವಾದರೆ ದೇಶದ ಪತನವಾಗುವುದೆಂದು ಅವರು ಅರಿತರು 'ಗ್ರಾಮೋದ್ಧಾರ ಮಾಡಿ' ಎಂಬ ಬರೀ ಕೂಗನ್ನು ಹಾಕಿದರೆ ಸಾಲದು ಎಂದು ಅವರೇ ಸ್ವತಃ ಸೇವಾ ಗ್ರಾಮದಲ್ಲಿ ಹೋಗಿ ನೆಲೆಸಿದರು. ಅಲ್ಲಿ ಅವರೂ ಅವರ ಬಳಗದವರೂ ಕೂಡಿ ಶ್ರಮಿಸಿ ಗುಡಿಸಲುಗಳನ್ನು ಕಟ್ಟಿದರು. ಕುಲುಮೆಯಿಟ್ಟು ನೇಗಿಲು ಮುಂತಾದ ಮರ ಮುಟ್ಟುಗಳನ್ನು ಮಾಡಿಕೊಂಡು ಬೆಳೆಗಳನ್ನು ಬೆಳೆದರು, ಗಾಣ ಆಡಿಸಿ ಎಣ್ಣೆ ತೆಗೆದರು, ನೂತು, ನೇಯ್ದು ಬಟ್ಟೆ ತಯಾರಿಸಿದರು, ರೋಗಿಗಳನ್ನು ಉಪಚರಿಸಿದರು, ಶಿಕ್ಷಣಕ್ಕೆ ಶಾಲೆಗಳನ್ನು ಏರ್ಪಡಿಸಿದರು, ಪ್ರಾರ್ಥನೆ ಮತ್ತು ಆಟ ಪಾಠಗಳಿಗೆ ರಂಗಸ್ಥಳವನ್ನು ಏರ್ಪಡಿಸಿದರು. ಈ ರೀತಿ ಸೇವಾ ಗ್ರಾಮವು ಸ್ವಪರಿಪೂರ್ಣವಾಗಿಯೂ ಸಾಮೂಹಿಕವಾಗಿಯೂ ಐಕ್ಯತೆಯಿಂದ ಬೆಳೆಯಿತು.

ನಮ್ಮ ಸಮಸ್ತ ಹಳ್ಳಿಗಳೂ ಇದೇ ರೀತಿ ಬೆಳೆಯಬಾರದೇಕೆ? ಜನರಲ್ಲಿ ದಕ್ಷತೆ, ಆಸಕ್ತಿ, ದುಡಿಮೆ, ಒಗ್ಗಟ್ಟು ಇವು ಹೆಚ್ಚಾಗಬೇಕಾಗಿದೆ. ಕಪಟ, ಅನುಮಾನ, ಅಸಂತೃಪ್ತಿ, ಸೋಮಾರಿತನ, ಬಾಹ್ಯಾಡಂಬರ ಇವು ತೊಲಗಬೇಕು. ಎಲ್ಲರೂ ಶ್ರಮಜೀವಿಳಾಗಿ ದುಡಿದು, ಸುರಾಜ್ಯವನ್ನು-ಬಾಪೂ ಚಿತ್ರಿಸಿದ ರಾಮರಾಜ್ಯವನ್ನು ಸ್ಥಾಪಿಸಲು ಮುನ್ನಡೆಯೋಣ" ಎಂದು ಹೇಳಿದ್ದಾರೆ.[20]

---

20. ಜೀರಗೆ ಕಟ್ಟೆ ಬಸವಪ್ಪ (ಸಂ): ಗ್ರಾಮಾಭ್ಯುದಯ ಮೈಸೂರು, ಸಂಪುಟ-3, ಸಂಚಿಕೆ-8, ದಿನಾಂಕ : 15-08-1950, ಪುಟ-232.

13. ಅಖಿಲ ಭಾರತ ಆಡಳಿತ ಸೇವಾ ಯೋಜನೆ ಮತ್ತು ಕೆ.ಸಿ. ರೆಡ್ಡಿ

1950ರ ಸೆಪ್ಟೆಂಬರ್‌ನಲ್ಲಿ ನಡೆದ ಶಾಸನಸಭೆಯಲ್ಲಿ ಸದಸ್ಯರು 'ಆಲ್ ಇಂಡಿಯಾ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆ'ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ಅಧಿಕಾರ ಕುಂಠಿತಗೊಳಿಸುತ್ತಿದೆ, ಅಧಿಕಾರವೆಲ್ಲ ಕೇಂದ್ರೀಕೃತವಾಗುತ್ತಿದೆ, ಆಕ್ರಮಣಶೀಲತೆಯ ರೀತಿಯಲ್ಲಿ ಇದು ನಡೆದು ಬರುತ್ತಿದೆ. ಕೇಂದ್ರದ ಈ ನೀತಿಯನ್ನೇ ಮೈಸೂರು ಸರ್ಕಾರ ಪ್ರತಿಭಟಿಸಬೇಕು ಎಂದೂ, ಸಾಧಕ ಬಾಧಕಗಳನ್ನು ಸಭೆಗೆ ವಿವರಿಸಿ, ಪೂರ್ವಭಾವಿ ಒಪ್ಪಿಗೆ ಪಡೆಯದೆ, ಮೈಸೂರು ರಾಜ್ಯದಲ್ಲಿ ಜಾರಿಗೆ ತರಕೂಡದು ಎಂದು ಉಗ್ರವಾಗಿ ಪ್ರತಿಭಟಿಸಿದ್ದರು.

ಅಷ್ಟೇ ಉಗ್ರವಾಗಿ ಸದಸ್ಯರವಾದವನ್ನು ಖಂಡಿಸುತ್ತಾ ಯೋಜನೆಯನ್ನು ಸಮರ್ಥಿಸಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಮಾಡಿರುವ ಭಾಷಣ ಚರಿತ್ರಾರ್ಹವಾಗಿದೆ. ಸಭೆಯಲ್ಲಿ "ಪಂಜರದಲ್ಲಿಯ ಗಿಳಿಯ ಹಾಗೇ ನಮ್ಮ ಗೊಂದಲ ಬೇಡ, ನಮ್ಮಷ್ಟಕ್ಕೆ ನಾವಿರೋಣ ಎಂದ ಮನೋಭಾವದಿಂದ ಇಂದು ನಮಗೆ ಪ್ರಯೋಜನವಿಲ್ಲ, ಆ ಕಾಲ ಹೋಯಿತು. ವಿಶಾಲದೃಷ್ಟಿ, ಅಖಿಲ ಭಾರತ ಹಿತ ಹಾಗೂ ಮೈಸೂರಿನ ಹಿತ, ಇದು ಹಿಂದಿನ ಅಗತ್ಯ. ಯಾವಾಗ ನಾವು ದೇಶದ ರಾಜ್ಯಾಂಗವನ್ನು ಒಪ್ಪಿ ಆ ಮೇಲೆ ಅಖಿಲ ಭಾರತ ಹಿತದ ದೃಷ್ಟಿಯಿಂದ ರಾಜ್ಯಾಂಗದ ಇಂಟಿಗ್ರೇಷನ್, ಹಣಕಾಸಿನ ಇಂಟಿಗ್ರೇಷನ್, ಮಿಲಿಟರಿ ಇನ್‌ಟಿಗ್ರೇಷನ್ ಮೊದಲಾಗಿ ಮುಖ್ಯವಾದುದನ್ನೆಲ್ಲ ಒಪ್ಪಿಕೊಂಡೆವೋ, ಈಗ ಇಡೀ ದೇಶದ ಹಿತದೃಷ್ಟಿಯಿಂದ ಬಂದಿರುವ ಅಡ್ಮಿನಿಸ್ಟ್ರೇಟಿವ್ ಯೋಜನೆಯನ್ನು ಒಪ್ಪದಿರುವುದರಲ್ಲಿ ಅರ್ಥವೇನಿದೆ? ನಾವಿಂದಿರುವುದು ಹೊಸ ಚೌಕಟ್ಟಿನಲ್ಲಿ. 1947ರ ಆಗಸ್ಟ್‌ಗೆ ಮುಂಚಿತ ದಿನಗಳಲ್ಲ. ಈಗಿನ ಸಂದರ್ಭಗಳೇ ಬೇರೆ, ಈ ಮೂರು ವರ್ಷಗಳಲ್ಲಿ ದೇಶದಲ್ಲಿ ಎಂತೆಂಥ ಘಟನೆಗಳಾಗಿವೆ, ಯಾವ್ಯಾವುದು ಮಾರ್ಪಾಟಾಗಿದೆ ಎಂಬುದನ್ನು ಸದಸ್ಯರು ಗಮನಕ್ಕೆ ತಂದುಕೊಳ್ಳಬೇಕು.

ಈ ದೃಷ್ಟಿಯಿಂದ ನಾವು ಕೇಂದ್ರದ ಕೈಯನ್ನು ಬಲಪಡಿಸಿಕೊಂಡು ಬರಬೇಕೆಂದು ಈ ಮೂರು ವರ್ಷಗಳಲ್ಲಿ ಹೆಜ್ಜೆ ಹೆಜ್ಜೆಗೂ ಹೇಳುತ್ತಲೇ ಮುಂದುವರೆಯುತ್ತಿದ್ದೇವೆ. ಒಂದೊಂದಾಗಿ ನಮ್ಮ ಅನೇಕ ಇಲಾಖೆಗಳನ್ನು ಕೇಂದ್ರಕ್ಕೆ ಕೊಟ್ಟು ಬಿಟ್ಟಿದ್ದೇವೆ. ಆದ್ದರಿಂದ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ತತ್ವಕ್ಕೆ ನಾವು ಒಪ್ಪಿಗೆ ಕೊಟ್ಟಿರುವುದರಲ್ಲಿ ಏನೇನೂ ತಪ್ಪಿಲ್ಲ. ನಾವು ಅನುಸರಿಸುವ ಮಾರ್ಗವು ಸರಿಯಾಗಿಯೇ ಇದೆ. ಒಪ್ಪಿದ ಮೇಲೆ ಹಿಂದಕ್ಕೆ ಹೆಜ್ಜೆಯಿಡುವುದು ಸಾಧ್ಯವೇ ಇಲ್ಲ. ಕಷ್ಟ ಬರುವುದಾದರೆ ಏನು ಬರುತ್ತೋ ನೋಡೋಣ, ಒಂದು ವೇಳೆ ಬಂದರೆ ಧೈರ್ಯದಿಂದ ಎದುರಿಸೋಣ. ನಾವು ಯೋಜನೆಯನ್ನು ಒಪ್ಪಿ

ಸರಿಯಾದ ಮಾರ್ಗವನ್ನೇ ಅನುಸರಿಸಿರುವೆವೆಂದು ಬಲವಾಗಿ ಮನದಟ್ಟಾಗಿರುವವರಲ್ಲಿ ನಾನೊಬ್ಬ.

ಮುಂದುವರೆದು ನಾನಾ ಬಾಬುಗಳಲ್ಲಿ ಇಂಟಿಗ್ರೇಷನ್ ಆಗದೆ ಇದ್ದಿದ್ದರೆ ಮೈಸೂರು ಹಿಂದೆ ಯಾವ ಸ್ಥಿತಿಯಲ್ಲಿ ಇದ್ದಿತೋ ಅದೇ ಸ್ಥಿತಿಯಲ್ಲಿ ಇಂದೂ ಇರಬೇಕಾಗಿರುತ್ತಿತ್ತು. ಕೇಂದ್ರದಲ್ಲಿ ಮೈಸೂರಿನವರನ್ನು ಕೇಳುವವರೇ ಇರುತ್ತಿರಲಿಲ್ಲ. ಮೈಸೂರು ಜನಗಳಿಗೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವಿರುತ್ತಿರಲಿಲ್ಲ. ನಾವು ಈಗ ರಾಜಕೀಯವಾಗಿಯೂ, ಶಾಸನ ರೀತಿಯಾಗಿಯೂ ಬೆಳೆದಿದ್ದೇವೆ. ಈಗ ಮೈಸೂರಿನ ಜನಗಳು ತಲೆ ಎತ್ತಿ ನಾವು ಭಾರತದ, ಕೇಂದ್ರದ ಆಗು-ಹೋಗುಗಳಲ್ಲಿ ಪಾತ್ರವಹಿಸಿದ್ದೇವೆ ಎಂದು ಹೇಳಿಕೊಳ್ಳಲು ಅವಕಾಶವಿದೆ, ಆದ್ದರಿಂದ ಮೈಸೂರು ಸರ್ಕಾರದ ಈ ಯೋಜನೆ ರಾಜ್ಯದಲ್ಲಿ ಜಾರಿಗೆ ಬರಲು ಒಪ್ಪಿ ತೆಗೆದುಕೊಂಡಿರುವ ಹೆಜ್ಜೆಯನ್ನು ಸದಸ್ಯರಿಗೆ ಮನದಟ್ಟಾಗುವಂತೆ ಸಮರ್ಥಿಸಿದರು.

ಸರ್ಕಾರ, ಕೇಂದ್ರಕ್ಕೆ ಎಲ್ಲವನ್ನು ಕೊಟ್ಟು ಬಿಡುತ್ತಿದೆ, ಮೈಸೂರಿನ ಸ್ಥಾನಮಾನ ವೇನೆಂಬುದನ್ನೇ ಮರೆತಿದೆ ಎಂಬರ್ಥ ಕೊಟ್ಟು ಬಂದ ಟೀಕೆಗಳಿಗೆ ಉತ್ತರ ಕೊಟ್ಟ ಕೆ.ಸಿ. ರೆಡ್ಡಿ ಅವರು ನಾವು ವಿಷಯಗಳಲ್ಲಿ ದುಡುಕಿ ತೀರ್ಮಾನಗಳಿಗೆ ಬರುವುದರಿಂದ ಪ್ರಯೋಜನ ವಿಲ್ಲ. ಎಲ್ಲವನ್ನೂ ಕೇಂದ್ರಕ್ಕೆ ಕೊಟ್ಟು ಬಿಡುತ್ತಿದ್ದೇವೆಯಲ್ಲ ಎಂದು ನಮಗೂ ಸರ್ಕಾರಕ್ಕೆ ಆಗಾಗ್ಗೆ ಅನ್ನಿಸುತ್ತದೆ. ಆದರೆ ಅಧಿಕಾರ ಕೇಂದ್ರೀಕರಣವೆಂಬುದು ಹೊಸದೇನು ಅಲ್ಲ. ರಾಜ್ಯಾಂಗದಲ್ಲೇ ಇದೆ. ನಾವು ರಾಜ್ಯಾಂಗವನ್ನು ಒಪ್ಪಿದ್ದೇವೆ. ಆದ್ದರಿಂದ ಒಪ್ಪಿಕೊಂಡಿರುವುದಕ್ಕೆ ನಾವು ಕಣ್ಣು ಮುಚ್ಚುವಂತಿಲ್ಲ. ಆದರೆ ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ ಕೇಂದ್ರಕ್ಕೆ ಸೇರಿದ ಮಾತ್ರಕ್ಕೆ ಮೈಸೂರು ಸರ್ಕಾರ ಮೈಸೂರಿನ ನ್ಯಾಯವಾದ ಹಕ್ಕುಗಳ ಪಾಲನೆಗಾಗಿ ಹೊಡೆದಾಡುವುದು ಎಂದು ಅರ್ಥವಲ್ಲ. ಪ್ರತಿ ಹೆಜ್ಜೆಯಲ್ಲೂ ಹೊಡೆದಾಡು ತ್ತಿದ್ದೇವೆ, ಇದು ಕೇಂದ್ರಕ್ಕೆ ಗೊತ್ತಿದೆ.

ಕೇಂದ್ರ ನಮ್ಮ ಹಕ್ಕು-ಬಾಧ್ಯತೆಗಳನ್ನು ಮರೆತೂ ಇಲ್ಲ. ನೀವು ಕೇಂದ್ರದ ಕೈಗೊಂಬೆ ಗಳಾಗಿರಲು ಸಾಧ್ಯವಿಲ್ಲವೆಂದು ನಾವಲ್ಲದೆ, ನಮ್ಮ ಹಾಗೇ ಕೇಂದ್ರದೊಡನೆ ಸಂಪರ್ಕ ವಿಟ್ಟುಕೊಂಡಿರುವ ಇತರ ರಾಜ್ಯಗಳೂ ಕೇಂದ್ರಕ್ಕೆ ತಿಳಿಸಿವೆ. ಕೆಲವು ಸದಸ್ಯರಲ್ಲಿ ನಮಗೆ (ಸರ್ಕಾರಕ್ಕೆ) ಧ್ಯೇಯವಿಲ್ಲ, ಕೇಂದ್ರ ಹೇಳಿದ ಹಾಗೆ ಕೇಳುತ್ತಾರೆ ಎಂಬ ಒಂದು ಭಾವನೆ ಇದೆ. ನಾನಾ ಮುಖ್ಯ ವಿಷಯಗಳ ಮೇಲಿನ ಸಂಬಂಧದ ಯೋಜನೆಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ತಡ ಮಾಡಿದ್ದರೆ ಅದಕ್ಕೆ ನಾವು (ಮೈಸೂರು ಸರ್ಕಾರ) ಆಗ್ಗಿಂದಾಗ್ಗೆ ತಡೆ ಹಾಕಿದುದೇ ಕಾರಣವೆಂಬುದಾಗಿ ಧಾರಾಳವಾಗಿ ಹೇಳಬಲ್ಲೆ. ವಿಷಯಗಳನ್ನು ತಡೆಗಟ್ಟಿದವರೂ ನಾವು, ಚರ್ಚೆಯನ್ನೆಬ್ಬಿಸಿದವರೂ ನಾವೇ ಎಂದು ಸ್ಪಷ್ಟಪಡಿಸಿದರು.

ಮುಂದುವರೆದು ಅಡ್ಮಿನಿಸ್ಟ್ರೇಟಿವ್ ಯೋಜನೆ ಮೊದಲು 1948ರಲ್ಲಿ ಅದು ಪ್ರಾರಂಭ ಆದಾಗಿನಿಂದ ಈಗಿನವರೆಗೂ ಅದರ ನಾನಾ ಹೆಜ್ಜೆಗಳಲ್ಲಿ ಕೇಂದ್ರದೊಡನೆ ಹೇಗೆ ಮೈಸೂರು ಸರ್ಕಾರ ಹೊಡೆದಾಡಿ ಮೈಸೂರು ಅಧಿಕಾರಿಗಳ ಸ್ಥಾನಮಾನಗಳನ್ನು ಕಾಪಾಡಲು ಪ್ರಯತ್ನಿಸಿದೆ ಎಂಬುದನ್ನು ವಿವರಿಸಿ, ಕಡೆಗೆ ಯೋಜನೆಗೆ ಒಪ್ಪಿಗೆ ಕೊಡಲಾಯಿತೇ ವಿನಃ, ತಪಸೀಲುಗಳು ಯಾವುದೂ ತೀರ್ಮಾನ ಆಗಿಲ್ಲವೆಂದೂ, ಮೈಸೂರು ಅಧಿಕಾರಿಗಳ ಸ್ಥಾನಮಾನಗಳಿಗೆ ಎಲ್ಲಿ ಚ್ಯುತಿ ಬರುವುದೋ ಎಂಬ ಭಯದಿಂದಲೇ ಬರಲಿರುವ ರಿಕ್ರೂಟ್‌ಮೆಂಟ್ ಬೋರ್ಡ್‌ನಲ್ಲಿ ಅಧಿಕಾರಿಗಳ 'ಸ್ಕ್ರೀನಿಂಗ್' ಎಂಬುದು ಆಗುವಾಗ ಮೈಸೂರಿನ ಪ್ರತಿನಿಧಿಗಳಿಬ್ಬರು ಬೋರ್ಡ್‌ನಲ್ಲಿರುವಂತೆ ಕೇಂದ್ರವನ್ನು ಒಪ್ಪಿಸಲಾಗಿದೆ ಎಂದು ನುಡಿದರು.

ಅಲ್ಲದೆ 'ಸ್ಕ್ರೀನಿಂಗ್' ಎಂಬುದರ ವಿಚಾರವೆತ್ತಿ ಇದು ಸ್ವಾಭಾವಿಕವಾಗಿಯೇ ಇದೆ. ನಮ್ಮ ಅಧಿಕಾರಿಗಳನ್ನೆಲ್ಲಾ ಅಖಿಲ ಭಾರತ ಸರ್ವಿಸ್‌ಗೆ ತೆಗೆದುಕೊಳ್ಳುವುದು ಹೇಗೆ ಸಾಧ್ಯ? ಆಯ್ಕೆ ಎಂಬುದು ಮುಖ್ಯ ದೃಷ್ಟಿಯಾಗಿರತಕ್ಕದ್ದು ಸಹಜವಾಗಿಯೇ ಇದೆ. ಆದ್ದರಿಂದ 'ಸ್ಕ್ರೀನಿಂಗ್'ನಿಂದ ನಷ್ಟವೇನೂ ಇಲ್ಲ. ಬೇರೆ ಪ್ರಾಂತಗಳಲ್ಲಿ ಈಗಾಗಲೇ ಒಂದು ಸಾವಿರ ಅಧಿಕಾರಿಗಳು ಚುನಾಯಿಸಲ್ಪಟ್ಟಿರುವರೆಂದು ನನಗೆ ತಿಳಿದು ಬಂದಿದೆ. ಈ ಬಗ್ಗೆ ದೂರುಗಳು ಇದ್ದಂತೆ ಕಾಣುತ್ತಿಲ್ಲ. ಬಂದ ಒಂದೆರಡು ದೂರುಗಳನ್ನು ಕೇಂದ್ರದವರು ಸಮಾಧಾನ ಮಾಡಿದರು ಎಂದು ಸಮರ್ಥಿಸಿಕೊಂಡರು.

ಸದಸ್ಯರೊಬ್ಬರು 'ರಾಜ್ಯಾಂಗದ 16ನೆಯ ಸೆಕ್ಷನ್ನಿನ 4ನೆಯ ವಿಧಿಯ ಪ್ರಕಾರ ಇದರ ನಿಯಮವೇನಾಗುವುದು? (ಹಿಂದುಳಿದ ಪಂಗಡಗಳ ಬಗ್ಗೆ ಸರ್ವಿಸ್‌ನಲ್ಲಿ ರಕ್ಷಣೆ ಕೊಡಬೇಕಾದ ನಿಯಮ)' ಎಂದು ಪ್ರಶ್ನಿಸಲು, ಕೆ.ಸಿ. ರೆಡ್ಡಿ ಅವರು "ಅದು ವಿಮರ್ಶೆ ಮಾಡಬೇಕಾದ ವಿಚಾರ, ಸರ್ವರ ಮೂಲಭೂತ ಹಕ್ಕುಗಳ ನಿಯಮದ ದೃಷ್ಟಿಯಿಂದ ಆ ನಿಯಮವನ್ನು ಹೇಗೆ ವಿಮರ್ಶಿಸಲಾಗುವುದೋ ನೋಡಬೇಕು. ಅಂತೂ ನಮಗೇನೂ ಆ ಬಗ್ಗೆ ಕೇಂದ್ರದಿಂದ ಯಾವ ನಿರ್ದೇಶನವೂ ಇಲ್ಲ ಎಂದರು.

ಮದ್ರಾಸ್‌ನ ಹೈಕೋರ್ಟ್ ಈಚೆಗೆ ಕೊಟ್ಟಿರುವ ತೀರ್ಪಿನ ದೃಷ್ಟಿಯಿಂದ ಶಾಲಾ–ಕಾಲೇಜುಗಳಲ್ಲಿ ಕೋಮುವಾರು ಮೊದಲಾದ ಆಧಾರದ ಮೇಲೆ, ಸೀಟುಗಳನ್ನು ಕಾದಿಡುವುದು ಎಂಬುದು ರಾಜ್ಯಾಂಗದ 16ನೆಯ ಸೆಕ್ಷನ್ನಿನ 1ನೆಯ ನಿಯಮಕ್ಕೆ ವಿರುದ್ಧ ಎಂಬುದಾಗಿ ಸಲಹೆ ಮಾಡಿ ಕೇಂದ್ರದವರು ಮೈಸೂರು ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದಾರೆ ಎಂದು ಸಭೆಗೆ ತಿಳಿಸಿದರು.

ಮೈಸೂರು ಸಿವಿಲ್ ಸರ್ವಿಸ್ ನೌಕರರ ಅಭಿಪ್ರಾಯವನ್ನು (ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆ) ಪಡೆಯಬೇಕೆಂದೂ ಕೇಂದ್ರ ಮೈಸೂರು ಸರ್ಕಾರಕ್ಕೆ ತಿಳಿಸಿರುವುದಾಗಿಯೂ, ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಅಕ್ಟೋಬರ್‌ನಲ್ಲಿ ಬರಲಿರುವ ಆಯ್ಕೆ ಬೋರ್ಡಿನೊಡನೆ ಚರ್ಚಿಸಿ, ಮೈಸೂರಿನ ಹಿತದಲ್ಲಿ ಅಖೈರು ತೀರ್ಮಾನಗಳಿಗೆ (ತಪಶೀಲುಗಳಲ್ಲಿ) ಬರುವುದಾಗಿಯೂ ಶಾಸನಸಭೆಯ ಮುಂದೆ ಎಲ್ಲವನ್ನೂ ಇಡುವುದಾಗಿಯೂ ಭರವಸೆ ಕೊಟ್ಟು, ನಿರ್ಣಯವನ್ನು ಅದು ಈಗಿರುವ ರೀತಿಯಲ್ಲಿ ಒಪ್ಪಲು ಸಾಧ್ಯವಿಲ್ಲ, ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆಯ ತತ್ವವನ್ನು ಒಪ್ಪಿಕೊಂಡು, ಈಗ ಹಿಂದಕ್ಕೆ ಹೋಗುವುದು ನ್ಯಾಯವಲ್ಲ ಎಂದರು.

ಮುಂದುವರೆದು ನಿರ್ವಾಹವಿಲ್ಲದೆ ಸರ್ಕಾರವೇ ಬೇಗ ಬೇಗ ಮುಖ್ಯವಾದ ವಿಧಿಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾದ ಈಗಿನ ಕಷ್ಟದ ಸಮಯದಲ್ಲಿ, ಎಲ್ಲವನ್ನು ಮೊದಲು ಶಾಸನಸಭೆ ಮುಂದಿಡಬೇಕು ಎಂಬುದು ಎಷ್ಟು ಅಸಾಧ್ಯವೆಂಬುದನ್ನು ಸದಸ್ಯರು ಮನಗಂಡು, ಸರ್ಕಾರದೊಡನೆ ಸಹಕರಿಸಬೇಕೆಂದು ಪ್ರಾರ್ಥಿಸಿದರು".[21]

ಹೀಗೆ ಕೆ.ಸಿ. ರೆಡ್ಡಿ ಅವರು ಬಹು ತರ್ಕಬದ್ಧವೂ, ರಾಜಕೀಯ ನೈಪುಣ್ಯತೆಯಿಂದ ಕೂಡಿದುದೂ, ಗಾಢವಿಚಾರ ಪೂರಿತವೂ ಅಷ್ಟೇ ಆವೇಶಭರಿತವೂ ಆದ ಭಾಷಣದಿಂದ ಸದ್ಯದ ನೂತನ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಕೇಂದ್ರಕ್ಕೆ, ರಾಜ್ಯ ಸರ್ಕಾರಗಳಿಗೂ ಇರಬೇಕಾದ ಸಂಬಂಧವೇನೆಂಬ ಚಿತ್ರಣವನ್ನು ಮನಗಾಣುವಂತೆ ಸಭೆಯ ಮುಂದಿಟ್ಟು ಸದಸ್ಯರಲ್ಲಿ ಮೂಡಿದ್ದ ಆ ಕಾರಣವಾದ ಸಂದೇಹಾನ್ವಯ ಭೀತಿಯನ್ನು ದೂರ ಮಾಡಿರುವುದು ಸ್ಪಷ್ಟವಾಗುತ್ತದೆ.

14. ಪತ್ರಿಕಾ ಗೋಷ್ಠಿ ಮತ್ತು ಕೆ.ಸಿ. ರೆಡ್ಡಿ

ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ "B" (ದೇಶೀಯ) ಸಂಸ್ಥಾನಗಳ ಮೇಲ್ವಿಚಾರಣೆ ಮತ್ತು ಹತೋಟಿಯ ಅಧಿಕಾರವನ್ನು ಕೇಂದ್ರ ಹೊಂದಿದೆಯಾದರೂ ಮೈಸೂರಿನ ವಿಚಾರದಲ್ಲಿ ವಿನಾಯಿತಿ ದೊರೆತಿದೆ. ಡಿಸೆಂಬರ್ ತಿಂಗಳ ಹೊರಗೆ 29,000 ಟನ್ನು ಆಹಾರಧಾನ್ಯ ಬೇಕೆಂದು ಕೇಂದ್ರದವರನ್ನು ಕೇಳಿದ್ದೇವೆ ಎಂದೂ, ಚಾಮರಾಜನಗರ, ಸತ್ಯಮಂಗಲ ರೈಲ್ವೆಮಾರ್ಗ ನಿರ್ಮಾಣದ ಬಗ್ಗೆ ಒತ್ತಾಯ ತಂದಿದ್ದೇವೆ, ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ಗೆ ಅಧಿಕಾರಿಗಳನ್ನು ಚುನಾಯಿಸಿ ಕೊಳ್ಳಲು ಸಲಹಾ

---

21. ಪೌರವಾಣಿ ಪತ್ರಿಕೆ : ದಿನಾಂಕ : 05–09–1950.

ಸಮಿತಿ ಸದಸ್ಯರು ಬರಲಿರುವರು ಹಾಗೂ ಮೈಸೂರು ಸರ್ಕಾರದ ದೊಡ್ಡ ಯೋಜನೆಗಳನ್ನು ಪೂರೈಸಲು ಕೇಂದ್ರ ಸರ್ಕಾರದಿಂದ ಒಂದು ಲಕ್ಷ ರೂಪಾಯಿ ಸಾಲ ಮಂಜೂರಾಗಲಿದೆ ಎಂದೂ, ಮೈಸೂರಿನಲ್ಲಿ 'ರತ್ನಗಂಬಳಿ ಪ್ರೊಸೆಸಿಂಗ್ ಪ್ಲಾಂಟ್' ಸ್ಥಾಪಿಸಲಾಗುವುದು ಎಂದೂ, ವಿಶ್ವೇಶ್ವರಯ್ಯ ಯೋಜನೆ ಮತ್ತು ಗ್ರಾಮಾಂತರಗಳಲ್ಲಿ ಗೃಹ ಕೈಗಾರಿಕೆಗಳಿಗೆ ಕೈಗೂಡಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ಐದುಲಕ್ಷ ರೂ.ಗಳ ಸಾಲ ಕೊಡಲು ಒಪ್ಪಿದೆ ಎಂದರು.

ನಂತರ ಮೈಸೂರು, ತಿರುವಾಂಕೂರು, ಹೈದರಾಬಾದ್‌ಗಳಿಗೆ ಸೇರಿಸಿ ಒಂದು ಪಬ್ಲಿಕ್‌ಸರ್ವಿಸ್ ಕಮೀಷನ್ ಇಲ್ಲ. ಪಬ್ಲಿಕ್‌ಸರ್ವಿಸ್ ಕಮೀಷನ್ ನಿಯಮಗಳನ್ನು ಮೈಸೂರು ಮಂತ್ರಿಮಂಡಲದಲ್ಲಿ ಚರ್ಚಿಸಲಾಗಿದೆ. ಮೈಸೂರು ರೈಲ್ವೆ ರಿಸರ್ವ್ ನಿಧಿಯನ್ನು ಬೆಂಗಳೂರಿನಲ್ಲಿ ಆರಂಭಿಸಬೇಕೆಂದಿರುವ 'ಟ್ರಾಲಿ ಬಸ್ ಯೋಜನೆ'ಗೆ ಒದಗಿಸುವಂತೆ ರೈಲ್ವೆಮಂತ್ರಿಗಳನ್ನು ಕೇಳಿದ್ದೇವೆ ಎಂದೂ, ಬೆಂಗಳೂರು ರೈಲ್ವೆ ನಿಲ್ದಾಣವನ್ನು ಹೊಸ ರೀತಿಯಲ್ಲಿ ನಿರ್ಮಿಸಿ, ಸಜ್ಜುಗೊಳಿಸಬೇಕೆಂದು ಒತ್ತಾಯಿಸಲಾಗಿದೆ" ಎಂದು ಹೇಳಿದರು.[22]

ಹಿಂದಿನ ಮೈಸೂರು ಸಂಸ್ಥಾನವು ಮಾನವ ಚಟುವಟಿಕೆಗಳ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿತ್ತು. ಅಂತಹ ಕ್ಷೇತ್ರದಲ್ಲಿ ಕೆ.ಸಿ. ರೆಡ್ಡಿ ಅವರು ಅತ್ಯುತ್ತಮ ಸಂಸದೀಯ ಪಟುವಾಗಿ ಸರ್ಕಾರ ಮತ್ತು ಜನರ ನಡುವೆ ನೇರ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ರೀತಿ ಇವರು ಕಾರ್ಯನಿರ್ವಹಿಸದೆ ಹೋಗಿದ್ದರೆ ಅನ್ವರ್ಥಕಾರಿ ನಿರಂಕುಶಾಧಿಕಾರಕ್ಕೆ ದಾರಿಯಾಗುತ್ತಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಪ್ರಜಾಪಕ್ಷ, ಪ್ರಜಾ ಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್ ಪಕ್ಷಗಳಿಂದ ಆಯ್ಕೆಗೊಂಡು ಎರಡೂ ಸಭೆಗಳಲ್ಲಿ ಪಕ್ಷದ ಮತ್ತು ಅಧ್ಯಕ್ಷರು ಆಗಿ ಸೇವೆ ಸಲ್ಲಿಸಿರುವ ಕೆ.ಸಿ.ರೆಡ್ಡಿ ಅವರು ತಮ್ಮ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಉದ್ಭವಿಸಿದ್ದ ಅನೇಕ ಜಟಿಲ ಸಮಸ್ಯೆಗಳ ಬಗ್ಗೆ ಕಲಾಪಗಳಲ್ಲಿ ತಮ್ಮ ಅವಿಶ್ರಾಂತ ಪ್ರಯತ್ನದಿಂದ ಸತತವಾಗಿ ಆಕ್ರಮಣ ಪ್ರವೃತ್ತಿಯಿಂದ ಆಡಳಿತದ ತಪ್ಪುಗಳನ್ನು ಎತ್ತಿ ತೋರಿಸಿದುದು ಹಾಗೂ 50ಕ್ಕೂ ಹೆಚ್ಚು ವಿಶೇಷ ಸಮಿತಿಗಳಲ್ಲಿ ಸೇವೆ ಸಲ್ಲಿರುವುದು, ಯಾವೊಬ್ಬ ಸಂಸದೀಯ ಪಟುವಿನ ಜೀವನದಲ್ಲಿ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ನಿಜಕ್ಕೂ ಒಂದು ಮಹತ್ವದ ಮೈಲಿಗಲ್ಲು. ಇದರಿಂದ ರೆಡ್ಡಿ ಅವರು ಒಬ್ಬ ಉದ್ದಾಮ ರಾಜಕೀಯ ಸಂಸದೀಯ ಪಟುವಾಗಿ ರೂಪುಗೊಂಡಿದ್ದ ಅಂಶ ಗೋಚರವಾಗುತ್ತದೆ.

---

22. ಪೌರವಾಣಿ ಪತ್ರಿಕೆ : ದಿನಾಂಕ : 23–11–1950.

ಇಲ್ಲಿ ಇಡೀ ರಾಜ್ಯದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಸಭೆಗಳು ಬೀರಿದ ಆಡಳಿತಾತ್ಮಕ ಪರಿಣಾಮಗಳನ್ನು ಸ್ಪಷ್ಟವಾಗಿ ಕಾಣಬಹುದು. ಏಕೆಂದರೆ ಕೆ.ಸಿ. ರೆಡ್ಡಿ ಅವರು ಜನ ಸಾಮಾನ್ಯರ ಕೂಗಿಗೆ ಸಾಕಷ್ಟು ಸ್ಪಂದಿಸಿ, ಜನರ ಆಕಾಂಕ್ಷೆಗಳನ್ನು ಪೂರೈಸಲು ಸರ್ಕಾರವನ್ನು ಜಾಗೃತಗೊಳಿಸಿದಕ್ಕೆ ಸಾಕ್ಷಿ ಇಲ್ಲಿದೆ. ಅಲ್ಲದೆ ರೆಡ್ಡಿ ಅವರಂತಹ ಸಂಸದೀಯ ಪಟುಗಳ ದೂರದೃಷ್ಟಿಯಿಂದ ಸಭೆಗಳು ಒಂದು ಬಲವಾದ ಸಜೀವ ಸಂಸ್ಥೆಗಳಾಗಿ ಬೆಳೆಯಿತೆಂಬುದನ್ನು ಇತಿಹಾಸ ಪುಟಗಳಲ್ಲಿ ಕಾಣಬಹುದಾಗಿದೆ. ಮೈಸೂರು ರಾಜ್ಯದಲ್ಲಿ 'ಜವಾಬ್ದಾರಿ ಸರ್ಕಾರ' ಸ್ಥಾಪನೆಗೊಂಡು ಕೆ.ಸಿ. ರೆಡ್ಡಿ ಅವರು ಮುಖ್ಯಮಂತ್ರಿಯಾಗಿ ಶಾಸನಸಭೆಯ ಕಲಾಪಗಳಲ್ಲಿ ಪಾಲ್ಗೊಂಡು ಅಲ್ಲಿ ಮಂಡಿತವಾಗುತ್ತಿದ್ದ ಚರ್ಚೆಗಳಿಂದ ದೇಶದ ಜನತೆಯು ಸ್ವಾತಂತ್ರ್ಯದಿಂದ ಹಾಗೂ ಹೊಸ ಸಂವಿಧಾನಕ್ಕೆ ಅನುಗುಣವಾಗಿ ಎಚ್ಚೆತ್ತುಕೊಳ್ಳುವಂತೆ ಪದೇ ಪದೇ ಕೂಗಿ ಎಚ್ಚರಿಸಿರುವುದು ಕಂಡುಬರುತ್ತದೆ.

ಹೀಗೆ ಕೆ.ಸಿ. ರೆಡ್ಡಿ ಅವರು ಮಾಡಿರುವ ಭಾಷಣಗಳು, ಶಾಸನಸಭೆಗಳ ಚರ್ಚೆಗಳಲ್ಲಿ ಮಂಡಿಸಿರುವ ಅಭಿಪ್ರಾಯಗಳನ್ನು ಗಮನಿಸಿದರೆ ಅವರೊಬ್ಬ ನಿಪುಣ ರಾಜತಂತ್ರಜ್ಞ, ಅತ್ಯಂತ ಶ್ರೇಷ್ಠ ಸಂಸದೀಯ ಪಟು ಎಂಬುದು ಸ್ಪಷ್ಟವಾಗಿ ಅರಿವಾಗುತ್ತದೆ.

❖❖

ಅನುಬಂಧಗಳು : ಭಾಷಣಗಳು, ಬಿಡಿಲೇಖನಗಳು

1. ಸರ್ವರ ಕರ್ತವ್ಯ

ದಿನಾಂಕ : 15–12–1947

"..... ಈಗ ಜನತೆಯ ಯುಗ ಆರಂಭವಾಗಿದೆ..... ಅತ್ಯಂತ ಮಹತ್ತರವಾದ ಜವಾಬ್ದಾರಿಯಿಂದ ನಮ್ಮ ಕರ್ತವ್ಯವೇನೆಂಬುದನ್ನು ಅರಿತು ಮುಂದುವರೆಯುವ ಕಾಲದಲ್ಲಿದ್ದೇವೆ..... ಪ್ರತಿಯೊಬ್ಬ ಪ್ರಜೆಯೂ ಸುಖ ಸಂತೋಷಗಳಿಂದ ನಲಿದಾಡುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ..... ಅಧಿಕಾರಿಗಳು ತಾವು ಪ್ರಜೆಗಳ ಸೇವಕರೆಂದೂ, ಪ್ರಜೆಗಳು ತಮಗೆ ಒಂದು ವಿಧದ ಕರ್ತವ್ಯವನ್ನು ಕೊಟ್ಟಿದ್ದಾರೆಂದೂ, ಪ್ರಜೆಗಳ ಕ್ಷೇಮವೇ ತಮ್ಮ ಕ್ಷೇಮವೆಂದೂ, ಪ್ರಜೆಗಳ ಸೌಖ್ಯವೇ ತಮ್ಮ ಸೌಖ್ಯವೆಂದೂ, ಅರಿತು ಕೆಲಸ ಮಾಡ ಬೇಕಾಗಿದೆ. ಪ್ರಜೆಗಳೂ ಕೂಡ ಅಧಿಕಾರಿಗಳಲ್ಲಿ ನಂಬಿಕೆಯಿಟ್ಟು ಅವರ ಕರ್ತವ್ಯಗಳಲ್ಲಿ ಭಾಗಿಗಳಾಗಿ, ಅವರನ್ನು ಕಡೆಗಣ್ಣಿನಿಂದ ನೋಡದೆ, ಗೌರವ, ಪ್ರೀತಿ, ವಿಶ್ವಾಸ, ಪ್ರೇಮಗಳಿಂದ ಕೆಲಸಗಳನ್ನು ಅವರ ಕೈಯಿಂದ ಆಗಮಾಡಿಸಿಕೊಳ್ಳಬೇಕು.... ಪ್ರತಿಯೊಬ್ಬರೂ ತ್ರಿಕರಣ ಶುದ್ಧಿಯಿಂದ ಕೆಲಸ ಮಾಡಬೇಕು. ದೇಶದ ಜನತೆ ಒಂದು ನೀತಿಗೆ ಕಟ್ಟು ಬಿದ್ದು ಧರ್ಮನಿಷ್ಠೆಯಿಂದ ತಮ್ಮ ಕರ್ತವ್ಯಗಳನ್ನು ಪಾಲಿಸಿಕೊಂಡು ಬರಬೇಕು. ಪ್ರಜಾವರ್ಗದವರು ಯಾವ ಕ್ಷೇತ್ರದಲ್ಲಿಯೇ ಇರಲಿ ಅವರುಗಳು ಪ್ರಾಮಾಣಿಕತೆಯಿಂದಲೂ, ದೇಶಭಕ್ತಿಯಿಂದಲೂ ತಮ್ಮ ನಡೆವಳಿಕೆಗಳನ್ನು ತಿದ್ದಿಕೊಳ್ಳಬೇಕು... ಶ್ರೀಮನ್ಮಹಾರಾಜರವರು ಪ್ರಜೆಗಳಲ್ಲಿ ಅತುಳವಾದ ಪ್ರೀತಿ ವಿಶ್ವಾಸಗಳನ್ನುಳ್ಳವರಾಗಿದ್ದಾರೆ... ಸಂಸ್ಥಾನದ ಪ್ರತಿಯೊಬ್ಬರೂ ಯಾವ ವ್ಯತ್ಯಾಸವೂ ಇಲ್ಲದೆ ಎಲ್ಲರೂ ಮೈಸೂರಿನ ಮಕ್ಕಳು ಎಂಬ ಭಾವನೆಯಿಂದ ಪರಸ್ಪರವಾದ ಪ್ರೇಮ ಸಹನೆಗಳಿಂದ ನೂತನ ಮಾರ್ಗದಲ್ಲಿ ಮಹಾತ್ಮರ ಮೇಲ್ಪಂಕ್ತಿಯನ್ನು ಅನುಸರಿಸಿಕೊಂಡು ನಡೆಯಬೇಕು..."

ಭಾಷಣ : **ಕೆ. ಚಂಗಲರಾಯರೆಡ್ಡಿ,** ಬಿ.ಎ., ಬಿ.ಎಲ್.,

ಮುಖ್ಯಮಂತ್ರಿಗಳು

ಮೈಸೂರು ರಾಜ್ಯ

2. ಗ್ರಾಮಾಭಿವೃದ್ಧಿ

ದಿನಾಂಕ : 09–10–1948

ದಿನಾಂಕ 1948ರ ಅಕ್ಟೋಬರ್ 9ರಂದು ಮೈಸೂರು ದಸರಾ ಅಧಿವೇಶನದಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ. ಚಂಗಲರಾಯರೆಡ್ಡಿ (ಕೆ.ಸಿ. ರೆಡ್ಡಿ) ಬಿ.ಎ., ಬಿ.ಎಲ್., ಅವರು ಮಾಡಿದ ಭಾಷಣ.

ಗ್ರಾಮಗಳೂ ಅವುಗಳ ನಿವಾಸಿಗಳೂ ದೇಶದ ಬೆನ್ನುಮೂಳೆಯಂತಿರುವ ಸಂಗತಿಯನ್ನು ಎಲ್ಲರೂ ಒಪ್ಪುತ್ತಾರೆ. ಗ್ರಾಮಾಂತರ ಪ್ರದೇಶಗಳು ಎಲ್ಲ ವಿಧಗಳನ್ನೂ ಅಭಿವೃದ್ಧಿಯಾಗುವಂತೆ ಮಾಡುವುದಕ್ಕೆ ಹಲವು ಪ್ರಯತ್ನಗಳು ನಡೆದು ನಡೆಯುತ್ತಲೂ ಇವೆ. ಇದಕ್ಕಾಗಿ ಆಗಿಂದಾಗ್ಗೆ ಬೇರೆ ಬೇರೆ ಯೋಜನೆಗಳೂ ತಯಾರಿಸಲ್ಪಟ್ಟು, ಜನ ಜೀವನ ಸಂಬಂಧವಾಗಿ ಅತಿ ಮುಖ್ಯವಾಗಿರುವ ಈ ಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸುವುದಕ್ಕಾಗಿ ಆ ಯೋಜನೆಗಳಂತೆ ಕಾರ್ಯಾರಂಭವು ನಡೆದಿದೆ. ಆದಾಗ್ಯೂ, ಒಂದಲ್ಲ ಒಂದು ಕಾರಣದಿಂದ ನಿರೀಕ್ಷಿಸಿದ ಫಲಿತಾಂಶಗಳು ಮಾತ್ರ ಗಣನೀಯವಾದ ಪರಿಮಾಣದಲ್ಲಿ ದೊರೆಯದೆ ಹೋಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸುಧಾರಣೆಗಳೂ, ಅಭಿವೃದ್ಧಿ ಕಾರ್ಯಗಳೂ ಇನ್ನೂ ಅನೇಕ ಬಾಬುಗಳ ಸಂಬಂಧದಲ್ಲಿ ನಡೆಯಬೇಕಾಗಿ ಹಾಗೆಯೇ ಉಳಿದಿವೆ. ಎಷ್ಟೋ ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿಕೊಡಬೇಕಾಗಿದೆ. ಎಲ್ಲ ಗ್ರಾಮಗಳಲ್ಲೂ ಚರಂಡಿ ಕಾಮಗಾರಿ ಯೋಜನೆಯನ್ನು ಕೈಗೊಳ್ಳಬೇಕಾಗಿದೆ. ಗ್ರಾಮಗಳಲ್ಲಿ ಅದರಲ್ಲೂ ಅವುಗಳ ಪೈಕಿ ಬಡ ಸ್ಥಿತಿಯಲ್ಲಿರುವವುಗಳಲ್ಲಿ, ಸರಿಯಾದ ವಾಸದ ಮನೆಗಳನ್ನು ಕಟ್ಟಿಸುವ ಕೆಲಸವು ಕೂಡಲೇ ಗಮನಕ್ಕೆ ತೆಗೆದುಕೊಳ್ಳಬೇಕಾದ ವಿಷಯ. ಗ್ರಾಮರಸ್ತೆಗಳು, ಕೆರೆಗಳ ಜೀರ್ಣೋದ್ಧಾರ, ಗ್ರಾಮ ಜಂಗಲುಗಳನ್ನು ಏರ್ಪಡಿಸಿ ಅಭಿವೃದ್ಧಿಪಡಿಸುವುದು, ಸ್ಕೂಲುಗಳಿಗೆ ಸರಿಯಾದ ಕಟ್ಟಡಗಳನ್ನೊದಗಿಸುವುದರ ಜೊತೆಗೆ ವಿದ್ಯಾಭ್ಯಾಸಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸುವುದು, ಹಲವಾರು ಗೃಹ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ಅಭಿವೃದ್ಧಿಪಡಿಸು ವುದು – ಮುಂತಾದ ಇನ್ನೂ ಎಷ್ಟೋ ಸಮಸ್ಯೆಗಳನ್ನು ಶ್ರದ್ಧಾಸಕ್ತಿಗಳಿಂದ ಬಗೆಹರಿಸಬೇಕಾಗಿದೆ. ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಗ್ರಾಮಾಭಿವೃದ್ಧಿಗೆ ಸರ್ಕಾರದವರು ಒಂದು ಹೊಸ ಯೋಜನೆಯನ್ನು ಸಿದ್ಧಪಡಿಸಿರುತ್ತಾರೆ.

ಈ ಯೋಜನೆಯನ್ನು ಬಹುಮಟ್ಟಿಗೆ ಸರ್ ಎಂ. ವಿಶ್ವೇಶ್ವರಯ್ಯನವರು ರಚಿಸಿದ್ದ "ಡಿಸ್ಟ್ರಿಕ್ಟ್ ಅಭಿವೃದ್ಧಿಯ ಯೋಜನೆ"ಯ ಮಾದರಿಯಲ್ಲೇ ರಚಿಸಲಾಗಿದೆ. ಪ್ರತಿಯೊಂದು ಪ್ರದೇಶದ ಜನರೂ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಉತ್ಸಾಹದಿಂದ ಕಾರ್ಯರೂಪಕ್ಕೆ ತರುವುದಕ್ಕೆ ಸಾಧಕವಾಗುವಂತೆ, ಅವರಿಗೆ ಪ್ರಾತಿನಿಧ್ಯವಿರುವ ಗ್ರಾಮಾಭಿವೃದ್ಧಿ ಸಮಿತಿಗಳು ಬಹಳ ಶೀಘ್ರದಲ್ಲೇ ನೇಮಕವಾಗಲಿವೆ. ಅಲ್ಲದೆ ನಾನಾ ಬಾಬುಗಳಲ್ಲಿಯೂ ಗ್ರಾಮ ಸುಧಾರಣೆಯೂ ಮತ್ತು ಗ್ರಾಮಾಭಿವೃದ್ಧಿಯೂ ನಡೆಯುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಒಂದು ಸಾಧನವೂ (ಏಜನ್ಸಿ) ಸಹ, ಏರ್ಪಡುವುದರಲ್ಲಿದೆ. ಆಹಾರ, ಬಟ್ಟೆ, ಸೀಮೆಎಣ್ಣೆ, ಕಬ್ಬಿಣ, ಉಕ್ಕು, ಗೊಬ್ಬರ, ವ್ಯವಸಾಯದ ಉಪಕರಣಗಳು, ಬಿತ್ತನೆಬೀಜ ಮೊದಲಾದ ಮುಖ್ಯವಾದ ವಸ್ತುಗಳ ಸರಬರಾಜು ವಿಚಾರಗಳಲ್ಲಿ ಸರ್ಕಾರದವರಿಗೆ ಸಲಹೆ ಹೇಳುವ ಕೆಲಸವನ್ನು ಈ ಗ್ರಾಮಾಭಿವೃದ್ಧಿ ಸಮಿತಿಗಳಿಗೆ ವಹಿಸಿಕೊಡಲಾಗುತ್ತದೆ. ಈ ಹೊಸ ಸಾಧನವು ಏರ್ಪಟ್ಟ ಮೇಲೆ, ಗ್ರಾಮಸ್ಥರ ಸ್ಥಿತಿಯನ್ನು ಉತ್ತಮಗೊಳಿಸುವ ನಾನಾ ಉದ್ದೇಶಗಳಿಗಾಗಿ ಈಗ ಕೊಡುತ್ತಿರುವ ಹಣದ ಸಹಾಯದಿಂದ, ಗ್ರಾಮಾಭಿವೃದ್ಧಿಯು ಬಹಳ ಶೀಘ್ರವಾಗಿ ನಡೆಯುವ ಭರವಸೆ ಇದೆ.

ಭಾಷಣ : **ಕೆ. ಚಂಗಲರಾಯರೆಡ್ಡಿ,** ಬಿ.ಎ., ಬಿ.ಎಲ್.,

ಮುಖ್ಯಮಂತ್ರಿಗಳು

ಮೈಸೂರು ರಾಜ್ಯ

3. ಗ್ರಾಮಾಂತರ ಪ್ರಜಾ ಸರ್ಕಾರ

ದಿನಾಂಕ : ಸೆಪ್ಟೆಂಬರ್ – 1949

ಭಾರತ ದೇಶದ ಕೋಟ್ಯಾಂತರ ಪ್ರಜೆಗಳು ದೇಶದ ಒಂದು ಕೊನೆಯಿಂದ ಇನ್ನೊಂದು ಕೊನೆಯವರಿಗೆ ನಿಬಿಡವಾಗಿರತಕ್ಕ ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಅದೇ ರೀತಿ, ಮೈಸೂರು ರಾಜ್ಯದ ಲಕ್ಷಾಂತರ ಪ್ರಜೆಗಳು ಸಾವಿರಾರು ಸಣ್ಣ–ದೊಡ್ಡ ಗ್ರಾಮಗಳಲ್ಲಿ ವಾಸ ಮಾಡುತ್ತಾರೆ. ಆದುದರಿಂದ, ದೇಶದ ಪ್ರಗತಿಯೂ ಮತ್ತು ಅಭಿವೃದ್ಧಿಯೂ ಗ್ರಾಮಾಂತರ ವಾಸಿಗಳ ಉನ್ನತಿಯನ್ನು ಅವಲಂಬಿಸಿರುವುದು ಸ್ಪಷ್ಟವಾಗಿದೆ. ಅನೇಕ ಮಂದಿ ಪ್ರಖ್ಯಾತ ಬರಹಗಾರರಿಗೂ ಮತ್ತು ಆಗಾಗ್ಗೆ ರಾಜ್ಯಾಡಳಿತ ಕುಶಲರಿಗೂ ಇದು ಬಹಳ ಇಷ್ಟವಾದ ವಿಷಯವಾಗಿದ್ದುದರಿಂದ ಅವರೆಲ್ಲರೂ ಗ್ರಾಮಗಳ ಪುನರುದ್ಧಾರಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ತೀವ್ರಾಸಕ್ತಿಯಿಂದ ಪರ್ಯಾಲೋಚಿಸಿ ರುತ್ತಾರೆ. ಈ ವಿಚಾರವಾಗಿ ಅನೇಕ ಯೋಜನೆಗಳು ಕೈಕೊಳ್ಳಲ್ಪಟ್ಟು ಅವು ಸ್ವಲ್ಪ ಹೆಚ್ಚು ಕಡಮೆ ಫಲದಾಯಕ ವಾಗಿ ಪರಿಣಮಿಸಿವೆ. ಅಲ್ಲದೆ ಸ್ವತಂತ್ರ ಭಾರತಕ್ಕೆ ಒಂದು ರಾಜ್ಯಶಾಸನವನ್ನು ವ್ಯವಸ್ಥೆಗೊಳಿಸುವ ಸಂಬಂಧದಲ್ಲಿ ಈ ವಿಚಾರಕ್ಕೆ ಒಂದು ಹೆಚ್ಚಿನ ಗಮನವನ್ನು ಕೊಡಬೇಕೆಂದು ಆಲೋಚನೆ ನಡೆಯಿತು. ರಾಷ್ಟ್ರಪಿತ ಮಹಾತ್ಮಗಾಂಧಿಯವರು ಯಾವಾಗಲೂ ಗ್ರಾಮಾಂತರ ವಾಸಿಗಳ ಯೋಗಕ್ಷೇಮವನ್ನು ಬಯಸುತ್ತಿದ್ದರು ಮತ್ತು ಅವರು ತಮ್ಮ ಘನವಾದ ಉದ್ದೇಶವನ್ನು, ಎಂದರೆ ದೇಶದಲ್ಲಿರತಕ್ಕ ಬಡ ಜನರನ್ನು ಉದ್ಧಾರ ಮಾಡತಕ್ಕ ಉದ್ದೇಶವನ್ನು, ಸಾಧಿಸುವುದಕ್ಕೆ ಕಾರ್ಯಕಾರಿಯಾದ ಪ್ರಯೋಗ ಗಳನ್ನು ನಿರಂತರವೂ ಆಲೋಚಿಸುತ್ತಿದ್ದರು. ಅವರಿಗೆ ರಾಜಕೀಯ ಸ್ವರಾಜ್ಯವು ಆರ್ಥಿಕ ಮತ್ತು ಸಾಮಾಜಿಕ ಸ್ವರಾಜ್ಯಕ್ಕೆ ತಳಹದಿಯೆಂಬ ಭಾವನೆ ಇದ್ದಿತು. ಆದುದರಿಂದ ಅವರು ಅದನ್ನು "ರಾಮರಾಜ್ಯ"ವೆಂದು ಕರೆದರು.

ಈಗ ತಾನೇ ಮುಕ್ತಾಯಗೊಳ್ಳುತ್ತಲಿರುವ ಭಾರತೀಯ ರಾಜ್ಯಶಾಸನ ವ್ಯವಸ್ಥೆಯಲ್ಲಿ ಈ ಸಂಬಂಧವಾಗಿ ಗಾಂಧೀಜಿಯವರ ಅಭಿಪ್ರಾಯಕ್ಕೆ ಅನುಸಾರವಾದ ನಿಯಮಗಳನ್ನು ಗಣನೆಗೆ ತೆಗೆದುಕೊಳ್ಳದೆಯೂ ಮತ್ತು ಅವುಗಳನ್ನು ಆ ರಾಜ್ಯಶಾಸನ ವ್ಯವಸ್ಥೆಯಲ್ಲಿ ಸೇರಿಸದೆಯೂ ಇರುವುದು ದುರದೃಷ್ಟದ ವಿಷಯ. ಈ ರಾಜ್ಯಶಾಸನವು ಸ್ವಲ್ಪ ಹೆಚ್ಚು ಕಡಮೆ ಪಾಶ್ಚಾತ್ಯ ಮಾದರಿಯಲ್ಲಿ ಶುದ್ಧಾಂಗವಾಗಿ "ಪಾರ್ಲಿಮೆಂಟರಿ" ಪದ್ಧತಿಯ ಪ್ರಜಾಧಿ ಕಾರದ ಸ್ವರೂಪದಲ್ಲಿ ರಚಿತವಾಗಿದೆ. ನಾನು ಮೈಸೂರು ರಾಜ್ಯಾಂಗ ರಚನಾ ಸಭೆಯ ಆರಂಭದ ಅಧಿವೇಶನದಲ್ಲಿ ಮಾಡಿದ ಭಾಷಣದಿಂದ ಒಂದಂಶವನ್ನು ಇಲ್ಲಿ ಸೂಚಿಸ ಬಹುದಾಗಿದೆ. ಆ ಭಾಷಣದಲ್ಲಿ ನಾನು ಈ ರೀತಿ ಹೇಳಿದ್ದೇನೆ.

ನಾನು ಮತ್ತೊಂದು ಮುಖ್ಯ ಅಂಶವನ್ನು ಹೆಚ್ಚು ಸ್ಪಷ್ಟವಾಗಿ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಗಾಂಧೀಜಿಯವರು ಭಾರತ ದೇಶದ ಜನ ಜೀವನಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಚಾರವನ್ನೂ ಗಮನಿಸಿ ಕಾರ್ಯ ನಡೆಸಿದ್ದರು; ಭಾರತ ದೇಶದ ರಾಜ್ಯಶಾಸನ ವಿಷಯದಲ್ಲಿ ಕೂಡ ಅವರು ತಮ್ಮ ಅಭಿಪ್ರಾಯಗಳನ್ನು ಹೊಂದಿದ್ದರು. ಕೇಂದ್ರ ಸರ್ಕಾರದಲ್ಲಿಯೇ ಎಲ್ಲ ಅಧಿಕಾರಿಗಳೂ ನೆಲಸದೆ ಇರತಕ್ಕ ಎಂದರೆ ವಿಕೇಂದ್ರಿಕೃತ ಪ್ರಜಾಪ್ರಭುತ್ವದಲ್ಲಿ ಅವರಿಗೆ ನಂಬಿಕೆಯಿದ್ದಿತು. ಈ ವಿಚಾರವಾಗಿ ಅವರು ಹೇಳಿರುವ ಮಾತುಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಹೊಸದೊಂದು ನಾಗರಿಕತೆಯ ವಿಚಾರದಲ್ಲಿ ಎಂದರೆ ತಾವು "ರಾಮರಾಜ್ಯ"ವೆಂದು ಹೆಸರಿಟ್ಟು ಕರೆದ ಆಡಳಿತಕ್ರಮದ ವಿಚಾರದಲ್ಲಿ ಅವರು ಈ ಮುಂದೆ ಕಂಡಂತೆ ನುಡಿದಿದ್ದಾರೆ.

"ಧಾರ್ಮಿಕ ದೃಷ್ಟಿಯಿಂದ, ಅಂಥ ರಾಜ್ಯವನ್ನು ಭೂಲೋಕದಲ್ಲಿ ಸ್ಥಾಪಿಸಲ್ಪಟ್ಟ ಭಗವತ್ಸಾಮ್ರಾಜ್ಯವೆಂದು ಕರೆಯಬಹುದು. ರಾಜಕೀಯ ದೃಷ್ಟಿಯಿಂದ ಅದು ಪರಿಪೂರ್ಣ ವಾದ ಪ್ರಜಾಪ್ರಭುತ್ವ, ಅಂತ ಪ್ರಜಾಪ್ರಭುತ್ವದಲ್ಲಿ ಇವನು ಧನಿಕನು, ಅವನು ದರಿದ್ರನು, ಇವನು ಕಪ್ಪು, ಅವನು ಬಿಳುಪು, ಇವನು ಈ ಮತದವನು, ಅವನು ಆ ಮತದವನು, ಇವನು ಗಂಡಸು, ಅವಳು ಹೆಂಗಸು– ಎಂಬೀ ಆಧಾರಗಳನ್ನು ಅವಲಂಬಿಸಿರತಕ್ಕ ಯಾವ ಭೇದಭಾವಗಳೂ ಇರುವುದಿಲ್ಲ. ಅದರಲ್ಲಿ ಜಮೀನು, ಸರ್ಕಾರವೂ ಪ್ರಜೆಗಳಿಗೆ ಸೇರಿರುವುವು, ಶೀಘ್ರವಾಗಿಯೂ ಸಂಪೂರ್ಣವಾಗಿಯೂ, ಸುಲಭವಾಗಿಯೂ ಜನಗಳಿಗೆ ನ್ಯಾಯ ದೊರೆಯುವುದು. ಆದುದರಿಂದ ಅಂಥ ರಾಜ್ಯದಲ್ಲಿ ದೇವತಾರಾಧನ ಸ್ವಾತಂತ್ರವಿದೆ. ಭಾಷಣ ಸ್ವಾತಂತ್ರವಿದೆ. ಪತ್ರಿಕಾ ಸ್ವಾತಂತ್ರ್ಯವಿದೆ. ಪ್ರಜೆಗಳೇ ಇಷ್ಟಪಟ್ಟು ನೈತಿಕ ನಿಯಮಗಳನ್ನು ವಿಧಾಯಕ ಮಾಡಿಕೊಳ್ಳುವುದರಿಂದ ಈ ಸೌಲಭ್ಯಗಳೆಲ್ಲವೂ ದೊರೆಯಲು ಅವಕಾಶವಿರು ತ್ತದೆ. ಅಂಥ ರಾಜ್ಯವು ಸತ್ಯ ಮತ್ತು ಅಹಿಂಸೆಗಳ ಆಧಾರದ ಮೇಲೆ ಸ್ಥಾಪಿಸಲ್ಪಡಬೇಕು ಮತ್ತು ಅಂಥ ರಾಜ್ಯವು ಸಂಪತ್ಸುಖ ಸ್ವಯಂಪೂರ್ಣತೆಗಳಿಂದ ಕೂಡಿದ ಗ್ರಾಮಗಳನ್ನೂ ಮತ್ತು ಗ್ರಾಮವಾಸಿಗಳನ್ನೂ ಒಳಗೊಂಡಿರಬೇಕು".

ವಿಕೇಂದ್ರೀಕೃತ ತತ್ವದ ಮೇಲೆ ರಚಿತವಾದ ರಾಜ್ಯಾಂಗದಲ್ಲಿ ಬಲಿಷ್ಠವಾದ ಗ್ರಾಮ ಪಂಚಾಯಿತಿಗಳ ಏರ್ಪಾಡಿಗೆ ಅವಕಾಶವನ್ನು ಕಲ್ಪಿಸಿ, ಅವಕ್ಕೆ ಪರಮಾಧಿಕಾರವನ್ನು ಕೊಟ್ಟು ಸಾಕಾದಷ್ಟು ದ್ರವ್ಯ ಸಹಾಯ ಮಾಡಿದರೆ, ಅದು ಅತ್ಯುತ್ತಮ ರೀತಿಯ ಪ್ರಜಾಪ್ರಭುತ್ವವಾಗುತ್ತದೆಂದು ನಾನು ತಿಳಿಸಲು ಆಶಿಸುತ್ತೇನೆ. ಈ ರೀತಿಯ ಪ್ರಜಾಪ್ರಭುತ್ವವು ಸುಪ್ರಸಿದ್ಧವಾದ "ಪಾರ್ಲಿಮೆಂಟರಿ" ಪದ್ಧತಿಯ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿರುವುದಲ್ಲವೇ

ಎಂದು ಕೇಳಿದರೆ ಅದಕ್ಕೆ ನನ್ನ ಉತ್ತರ ಇಷ್ಟು. "ಪಂಚಾಯಿತಿ ಪ್ರಜಾಪ್ರಭುತ್ವ"ವೆಂದು ಕರೆಯಬಹುದಾದ ರಾಜ್ಯಾಡಳಿತ ಕ್ರಮವನ್ನೂ ಮತ್ತು "ಪಾರ್ಲಿಮೆಂಟರಿ ಪ್ರಜಾಪ್ರಭುತ್ವ" ವೆಂದು ಪ್ರಸಿದ್ಧವಾದ ರಾಜ್ಯಾಡಳಿತ ಕ್ರಮವನ್ನೂ ಸಾಮರಸ್ಯವಾಗಿ ಮಿಳಿತಗೊಳಿಸಬಹುದಾದ ಒಂದು ರಾಜ್ಯಾಂಗವನ್ನು ಚಾತುರ್ಯ ಮತ್ತು ವಿವೇಕಗಳಿಂದ ರಚಿಸಲು ಸಾಧ್ಯವಿರಲೇಬೇಕು. ಇದೊಂದು ಮುಖ್ಯವಾದ ಮತ್ತು ಮೂಲಭೂತವಾದ ವಿಷಯ. ಆದುದರಿಂದ ಇದನ್ನು ತಮ್ಮ ತೀವ್ರ ಗಮನಕ್ಕೆ ತರುತ್ತೇನೆ. ಅಲ್ಲದೆ, ಈ ವಿಚಾರವನ್ನು ತಾವು ಅತ್ಯುತ್ತಮ ರೀತಿಯಲ್ಲಿ ಪರ್ಯಾಲೋಚಿಸಬೇಕೆಂದು ಒತ್ತಾಯವಾಗಿ ತಿಳಿಸುತ್ತೇನೆ.

ಮೈಸೂರು ರಾಜ್ಯದ ರಾಜ್ಯಾಂಗ ರಚನಾಸಭೆಯು ಮೈಸೂರು ರಾಜ್ಯಕ್ಕೆ ಒಂದು ಯುಕ್ತವಾದ ರಾಜ್ಯಾಂಗವನ್ನು ರಚಿಸಲು ಕಾರ್ಯಕಲಾಪಗಳನ್ನು ಆರಂಭಿಸುವುದಕ್ಕೆ ಪ್ರಥಮದಲ್ಲಿಯೇ ಅಂಥ ಒಂದು ರಾಜ್ಯಾಂಗದ ಗುರಿ ಮತ್ತು ಉದ್ದೇಶಗಳನ್ನು ವಿವರಿಸಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಈ ನಿರ್ಣಯದಲ್ಲಿ ರಾಜ್ಯಾಂಗ ರಚನೆಯ ಯಾವ ಉದ್ದೇಶಗಳಿಗೆ ಮತ್ತು ತತ್ತ್ವಗಳಿಗೆ ಒಳಪಟ್ಟಿರ ಬೇಕೆಂಬುದನ್ನು ವಿಧಾಯಕ ಮಾಡಲಾಯಿತು. ಅವುಗಳ ಪೈಕಿ ಒಂದು ಈ ಕೆಳಗೆ ಕಂಡಂತೆ ಇರುತ್ತದೆ.

"ಕೇಂದ್ರೀಕೃತವಾದ ಸರ್ಕಾರದ ಒತ್ತಡದಿಂದ ಹಳ್ಳಿಗಳ ಯೋಗಕ್ಷೇಮದ ಮತ್ತು ಪ್ರಗತಿಯ ವಿಚಾರದಲ್ಲಿ ಉದಾಸೀನ ಭಾವವು ತೋರಿಸಲ್ಪಡದೆ ಇರುವುದಕ್ಕಾಗಿಯೂ ಮತ್ತು ಹಳ್ಳಿಯ ಜನರಲ್ಲಿ ಪೌರನೀತಿಯ ಮತ್ತು ಸ್ವಾವಲಂಬನದ ಮನೋಭಾವವು ಬೆಳೆಯುವಂತೆ ಮಾಡುವುದಕ್ಕಾಗಿಯೂ ಮತ್ತು ಹಳ್ಳಿಯ ಜನರಲ್ಲಿ ಗುಪ್ತವಾಗಿರತಕ್ಕ ಶಕ್ತಿ ಸಾಮರ್ಥ್ಯಗಳನ್ನು ಪ್ರಚೋದನೆಗೊಳಿಸಿ ಅವುಗಳಿಂದ ಇಡೀ ದೇಶಕ್ಕೆ ಪ್ರಯೋಜನವಾಗುವಂತೆ ಮಾಡುವುದಕ್ಕಾಗಿಯೂ ಗ್ರಾಮ ಪಂಚಾಯಿತಿಗಳಂಥ ಪ್ರಜಾಡಳಿತ ಸಂಸ್ಥೆಗಳನ್ನು ಏರ್ಪಡಿಸಿ ಅವುಗಳು ತಮ್ಮ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಅವುಗಳಿಗೆ ಸಾಕಾದಷ್ಟು ಅಧಿಕಾರ ವನ್ನು ಕೊಡುವುದಕ್ಕೂ ಮತ್ತು ಸಾಕಾದಷ್ಟು ಹಣವನ್ನು ಒದಗಿಸುವುದಕ್ಕೂ ರಾಜ್ಯಾಂಗ ರಚನೆಯಲ್ಲಿ ತಕ್ಕ ಅವಕಾಶವು ಕಲ್ಪಿಸಲ್ಪಡತಕ್ಕದ್ದು". ಮೈಸೂರು ರಾಜ್ಯದ ನೂತನ ರಾಜ್ಯಾಂಗ ವ್ಯವಸ್ಥೆಯಲ್ಲಿ ಮೇಲಿನ ನಿರ್ಣಯವನ್ನು ಸೇರಿಸಿ ಅದನ್ನು ಜಾರಿಗೆ ತರಬೇಕೆಂಬುದು ನಮಗಿದ್ದ ಆಸೆ. ಆದರೆ ಅಲ್ಲಿಂದೀಚೆಗೆ ನಡೆದ ಕೆಲವು ಘಟನೆಗಳಿಂದ ವಾತಾವರಣವು ಬದಲಾಯಿಸಿ ಅದರ ಪರಿಣಾಮವಾಗಿ ಮೈಸೂರು ರಾಜ್ಯವೂ ಸೇರಿ ರಾಜ್ಯಗಳಿಗೆ ಸಂಬಂಧಪಟ್ಟ ರಾಜ್ಯಾಂಗ ಶಾಸನವು ಭಾರತ ದೇಶದ ರಾಜ್ಯಾಂಗ ಶಾಸನದಲ್ಲಿಯೇ ಸೇರಿಸಲ್ಪಡುವುದಾಗಿದೆ. ನಾನು ಹಿಂದೆಯೇ ಸೂಚಿಸಿರುವಂತೆ ಭರತಖಂಡದ ರಾಜ್ಯಾಂಗ ಶಾಸನ ಸಭೆಯವರು ಗಾಂಧೀಜಿಯವರ ಅಭಿಪ್ರಾಯಕ್ಕೆ ಅನುಸಾರವಾದ "ಪಂಚಾಯಿತಿ ಪ್ರಭುತ್ವ"ಕ್ಕೆ ನಿರ್ದಿಷ್ಟವಾದ

ಭಾಷೆ ಮತ್ತು ಷರತ್ತುಗಳ ಮೂಲಕ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಕೆಲವರು ಪ್ರಯತ್ನ ಪಟ್ಟರೂ ಅದು ಸಾಧ್ಯವಾಗಲಿಲ್ಲವೆಂಬುದು ನನಗೆ ಗೊತ್ತಿದೆ. ಪ್ರಾಯಶಃ ಕೇಂದ್ರ ಸರ್ಕಾರದವ ರಾಗಲಿ ಅಥವಾ ರಾಜ್ಯಗಳ ಸರ್ಕಾರಗಳವರಾಗಲಿ ಪ್ರತ್ಯೇಕವಾದ ಕಾನೂನನ್ನು ಜಾರಿಗೆ ತರುವುದರ ಮೂಲಕ ಆ ಉದ್ದೇಶಗಳನ್ನು ಸಫಲಗೊಳಿಸಿ ಕೊಳ್ಳಬಹುದೆಂದು ಭಾವಿಸಿರುವಂತೆ ತೋರುತ್ತದೆ.

ಆದುದರಿಂದ ಮೈಸೂರು ರಾಜ್ಯದಲ್ಲಿ ಈ ಕೂಡಲೆ, ಸ್ಥಳೀಯ ಪ್ರಜಾ ಸರ್ಕಾರಕ್ಕೆ ಸಂಬಂಧಪಟ್ಟ ಒಂದು ವಿಶಾಲವಾದ ಮತ್ತು ಸಮಗ್ರವಾದ ಯೋಜನೆಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ನಾವು ಪ್ರವೃತ್ತರಾಗುವುದು ಅಗತ್ಯ. ಈ ಯೋಜನೆಯ ಸಂಬಂಧದಲ್ಲಿ ಕೇವಲ ಗ್ರಾಮಾಂತರ ಪ್ರದೇಶಗಳ ವಿಚಾರವನ್ನೇ ಗಮನಿಸುವುದಾದರೆ ಮೈಸೂರು ರಾಜ್ಯದಲ್ಲಿ ಆಗಿಂದಾಗ್ಗೆ ಅನೇಕ ಯೋಜನೆಗಳು ಪ್ರಯೋಗಿಸಲ್ಪಟ್ಟಿವೆ. ಈ ಉದ್ದೇಶಕ್ಕಾಗಿ ಏರ್ಪಟ್ಟ "ಏಜನ್ಸಿ"ಗಳು ಕೂಡ ಆಗಿಂದಾಗ್ಗೆ ಬದಲಾವಣೆ ಗೊಳಿಸಲ್ಪಟ್ಟಿವೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಏರ್ಪಟ್ಟ ಗ್ರಾಮ ಪಂಚಾಯಿತಿಗಳು ಇನ್ನೂ ಕೆಲಸ ನಡೆಸುತ್ತಿವೆ. ಸ್ವಲ್ಪ ಕಾಲದವರೆಗೆ ಕೆಲಸ ನಡೆಸುತ್ತಿದ್ದ ತಾಲ್ಲೂಕು ಬೋರ್ಡುಗಳು ಈಗ ಅಳಿದು ಹೋಗಿವೆ. ಜಿಲ್ಲಾ ಬೋರ್ಡುಗಳೂ ಕೂಡ ಬಹಳ ಹೆಚ್ಚು ಕಾಲದಿಂದ ಕೆಲಸ ನಡೆಸುತ್ತಿವೆ. ಈ ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳ ಜೊತೆಗೆ, ಸಾಮಾನ್ಯವಾಗಿ ಸರ್ಕಾರದ ಹಲವು ಇಲಾಖೆಗಳ ವರಿಗೂ ಮತ್ತು ವಿಶೇಷವಾಗಿ ರೆವಿನ್ಯೂ ಇಲಾಖೆಯವ ರಿಗೂ ಗ್ರಾಮಾಭಿವೃದ್ಧಿ ಕಾರ್ಯ ವನ್ನು ವಹಿಸಲಾಗಿದೆ. ಒಂದು ವರ್ಷದ ಹಿಂದೆ, ಸರ್ಕಾರದವರಿಂದ ಏರ್ಪಟ್ಟ ಗ್ರಾಮಾಭಿವೃದ್ಧಿ ಯೋಜನೆಯ ಮೇರೆಗೆ, ಗ್ರಾಮಾಭಿವೃದ್ಧಿ ಸಮಿತಿಗಳು ಏರ್ಪಟ್ಟಿರುತ್ತವೆ ಮತ್ತು ಆ ಸಮಿತಿಗಳವರು ಈ ವಿಷಯಕ್ಕೆ ಸಂಬಂಧಪಟ್ಟ ಅನೇಕ ಅಂಶಗಳನ್ನು ಹುರುಪಿನಿಂದ ಗಮನಿಸುತ್ತಿದ್ದಾರೆ. ಈ ಯೋಜನೆಗಳ ಮೇರೆಗೆ ಎಷ್ಟರಮಟ್ಟಿಗೆ ಕೆಲಸವು ನಡೆಯುತ್ತಿದೆ ಮತ್ತು ನಮ್ಮ ಪ್ರಯತ್ನಗಳು ಎಷ್ಟರಮಟ್ಟಿಗೆ ಫಲಪ್ರದವಾಗಿವೆ ಮತ್ತು ಎಷ್ಟರಮಟ್ಟಿಗೆ ವಿಫಲವಾಗಿವೆ ಎಂಬ ವಿಚಾರಗಳನ್ನು ಇಲ್ಲಿ ವಿಶದವಾಗಿ ತಿಳಿಸುವುದು ನನ್ನ ಉದ್ದೇಶವಲ್ಲ. ಆದರೆ ಇಷ್ಟನ್ನು ಮಾತ್ರ ತಿಳಿಸಬಹುದಾಗಿದೆ. ಹಲವು ಸಂಸ್ಥೆಗಳು ತನ್ನಲ್ಲಿ ಅಡಕವಾಗಿದ್ದರೂ ಸಹ ಆ ಹಲವು ಸಂಸ್ಥೆಗಳು ಒಂದನ್ನೊಂದು ಆಚ್ಛಾದಿಸದೆ, ಮಾಡಿದ ಕೆಲಸವನ್ನು ಮತ್ತೆ ಮಾಡದೆ, ಸೌಹಾರ್ದದಿಂದ ಕಾರ್ಯ ಕಲಾಪಗಳನ್ನು ನಡೆಯಿಸತಕ್ಕಂಥ ಉತ್ತಮ ರೀತಿಯ ಒಂದು ಸಂಯುಕ್ತ ಸಂಸ್ಥೆಯು (ಏಜನ್ಸಿ) ತ್ವರಿತವಾಗಿ ಬೇಕಾಗಿದೆ. ಈ ಪ್ರಮುಖ ಅಂಶವು ತೀವ್ರವಾಗಿ ಮನವರಿಕೆಯಾದುದರಿಂದಲೇ ಮೈಸೂರು ಸರ್ಕಾರದವರು ಈ ವಿಚಾರಕ್ಕೆ ಸಂಬಂಧಪಟ್ಟ ಎಲ್ಲ ಅಂಶಗಳನ್ನು ಪರಿಶೀಲಿಸುವುದಕ್ಕೂ ಮತ್ತು (ವಾಂಛಿತ) ಇಷ್ಟವಾದ

ಫಲಗಳನ್ನು ಪಡೆಯುವುದಕ್ಕೆ ಅತ್ಯುತ್ತಮವಾದ ಮಾರ್ಗ ಯಾವುದೆಂಬುದನ್ನು ಸರ್ಕಾರಕ್ಕೆ ಸಲಹೆ ಮಾಡುವುದಕ್ಕೂ ಒಂದು ಸಮಿತಿಯನ್ನು ಏರ್ಪಡಿಸಿರುತ್ತಾರೆ. ಆ ಸಮಿತಿಯವರು ಪರ್ಯಾಲೋಚಿಸ ಬೇಕಾದ ವಿಷಯಗಳು ಪ್ರಕಟಿಸಲ್ಪಟ್ಟಿವೆ. ಆದುದರಿಂದ ಆ ವಿಷಯಗಳನ್ನು ಇಲ್ಲಿ ತಿಳಿಸುವುದು ಅನಾವಶ್ಯಕ.

ಕಾನೂನು ಮೇರೆಗೆ, ಹೆಚ್ಚು ಅಧಿಕಾರಗಳಿಂದ ಕೂಡಿ, ಸಾಕಷ್ಟು ಧನ ಬಲವನ್ನು ಹೊಂದಿ ಪ್ರಜಾಪ್ರಭುತ್ವ ತತ್ವರೀತ್ಯಾ ರಚಿತವಾದ ಒಂದು ಸಮರ್ಥ ಕಾರ್ಯನಿರ್ವಹಣೆ ಸಂಸ್ಥೆ (ಏಜನ್ಸಿ)ಯನ್ನು ಸ್ಥಾಪಿಸಬೇಕೆಂಬುದೇ ಮುಖ್ಯ ಉದ್ದೇಶ. ಈ ವಿಚಾರದಲ್ಲಿ ಸಮಿತಿಯವರ ಸಲಹೆಗಳ ಸ್ವರೂಪವೇನಿರ ಬಹುದೆಂಬುದನ್ನು ಮುಂದಾಗಿ ತಿಳಿಸಲು ನನಗೆ ಇಷ್ಟವಿಲ್ಲದಿದ್ದರೂ, ಈ ಸಂಬಂಧದಲ್ಲಿ ಕೆಲವು ಸಲಹೆಗಳನ್ನು ಕೊಡಲಿಚ್ಚಿಸುತ್ತೇನೆ.

ಈಗ ಮೈಸೂರು ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ಸಂಖ್ಯೆ ಅಪರಿಮಿತವಾಗಿವೆ ಎಂದು ನನ್ನ ಅಭಿಪ್ರಾಯ. ಅವು ಅಸ್ತಿತ್ವದಲ್ಲಿದ್ದುಕೊಂಡು ದಕ್ಷತೆಯಿಂದ ಕೆಲಸ ಮಾಡ ಬೇಕಾದರೆ ಅವುಗಳಲ್ಲಿ ಶೇಕಡ 50%ರಷ್ಟನ್ನು ಕಡಮೆ ಮಾಡಬಹುದೆಂದು ನನಗೆ ತೋರುತ್ತದೆ. ಈ ಸಂಸ್ಥೆಗಳು ಶಕ್ತಿ ಸಾಮರ್ಥ್ಯದಿಂದ ಕೂಡಿರಬೇಕು ಮತ್ತು ಮೇಲಿನ ಕಟ್ಟಡವು ಸುಭದ್ರ ವಾಗಿ ನಿಲ್ಲುವುದಕ್ಕೆ ತಕ್ಕ ಅಡಿಗಲ್ಲಾಗಿರಬೇಕು. ವಯಸ್ಕರ ಚುನಾವಣಾ ಪದ್ಧತಿಯು ಈ ಮಟ್ಟದಲ್ಲಿ ಕಾರ್ಯಕಾರಿಯಾಗಬೇಕಾಗಿದೆ. ಮೈದಾನ ಪ್ರದೇಶದಲ್ಲಿ ಸುಮಾರು ಐದು ಗ್ರಾಮಗಳಿಗೂ ಮತ್ತು ಮಲೆನಾಡು ಪ್ರದೇಶದಲ್ಲಿ ಇನ್ನೂ ಕಡಮೆ ಸಂಖ್ಯೆಯ ಗ್ರಾಮಗಳಿಗೂ ಒಂದು ಗ್ರಾಮ ಪಂಚಾಯಿತಿ ಇದ್ದರೆ ಸಾಕಾಗಬಹುದು. ಸಾಧ್ಯವಾದ ಸಂದರ್ಭಗಳಲ್ಲೆಲ್ಲಾ (ಮೀಟಿಂಗ್‌ಗಳಲ್ಲಿ) ಸಭೆಗಳಲ್ಲಿ ಕೈಎತ್ತಿ ತೋರಿಸುವುದರ ಮೂಲಕ ಚುನಾವಣೆಯು ನಡೆಯಬಹುದು. ಆದರೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ 'ಬ್ಯಾಲಟ್' ಮೂಲಕ ಓಟು ಮಾಡಬಹುದು. ಈ ಮಾರ್ಗದಲ್ಲಿ ಮುಂದಿನ ಹಂತವೆಂದರೆ "ಸರ್ಕಲ್" ಸಮಿತಿಗಳು ಪ್ರತಿಯೊಂದು ಸರ್ಕಲ್‌ನಲ್ಲಿಯೂ ಸುಮಾರು 15–20 ಹಳ್ಳಿಗಳು ಇರಬೇಕು. ಪ್ರತಿಯೊಂದು ಸರ್ಕಲ್‌ನ ಕ್ಷೇತ್ರ ಪರಿಮಿತಿಯು ಈಗ ವಿವಿಧೋದ್ದೇಶ ಪರಸ್ಪರ ಸಹಕಾರ ಸಂಘಗಳಿಗೆ ಗೊತ್ತು ಮಾಡಿರುವಷ್ಟೇ ಇರುತ್ತದೆ. ಈ ಸಮಿತಿಗಳಿಗೆ ಚುನಾವಣೆಯು ಬಹುಶಃ ಪರೋಕ್ಷ ಕ್ರಮದಲ್ಲಿದ್ದರೆ ಒಳ್ಳೆಯದೆಂದು ತೋರುತ್ತದೆ. ತಾಲ್ಲೂಕು ಬೋರ್ಡುಗಳೂ ಕೂಡ, ಅವು ಬೇರೆ ರೂಪದಲ್ಲಿದ್ದರೂ, ಬಹಳಮಟ್ಟಿಗೆ ಈಗಿನ ಅಭಿವೃದ್ಧಿ ಸಮಿತಿಗಳಂತೆಯೇ ಇರಬಹುದು. ಈ ಬೋರ್ಡುಗಳಿಗೆ ಸದಸ್ಯರುಗಳನ್ನು ಚುನಾಯಿಸುವುದಕ್ಕೆ ನಡೆಸುವ ಚುನಾವಣೆಗಳು ಕೂಡ ಪರೋಕ್ಷ ಕ್ರಮದಲ್ಲಿಯೇ ನಡೆಯಬಹುದು. ಜಿಲ್ಲೆಗಳಲ್ಲೆಲ್ಲಾ ಕೆಲಸ ನಡೆಸುವುದಕ್ಕಾಗಿ "ಜಿಲ್ಲಾ ಕೌನ್ಸಿಲ್"ಗಳೆಂದು ಅಥವಾ "ಜಿಲ್ಲಾ ಅಸೆಂಬ್ಲಿ"ಗಳೆಂದು ಕರೆಯಲ್ಪಡಬಹುದಾದ

ಜಿಲ್ಲಾ ಬೋರ್ಡುಗಳು ಏರ್ಪಡಿಸಲ್ಪಡಬಹುದು. ಈ ಸಂಸ್ಥೆಗಳಿಗೂ ಕೂಡ ಚುನಾವಣೆಯು ಪರೋಕ್ಷ ಕ್ರಮದಲ್ಲಿಯೇ ನಡೆಯುವುದು ಒಳ್ಳೆಯದು. ಆದರೆ ರಾಜ್ಯಕ್ಕೆಲ್ಲಾ ಅನ್ವಯಿಸುವಂತೆ ಒಂದು ಕೇಂದ್ರ ಸಂಯುಕ್ತ ಸಂಸ್ಥೆ ಇರಬೇಕು. ಈ ಕೇಂದ್ರ ಸಂಸ್ಥೆಯು ಸಾಮಾನ್ಯವಾಗಿ ಸಮಗ್ರ ಸರ್ಕಾರದೊಡನೆಯೂ ಮುಖ್ಯವಾಗಿ ಮಂತ್ರಿಮಂಡಲದವರೊಡನೆಯೂ ನಿಕಟ ಸಂಬಂಧವುಳ್ಳದ್ದಾಗಿರುವುದು. ಮೇಲೆ ಸೂಚಿಸಿರುವಂತೆ ಈ ಯೋಜನೆಯನ್ನು ಸ್ಥೂಲವಾಗಿ ತಿಳಿಸಿರುತ್ತೇನೆ. ಈಗಲೇ ಅದರ ವಿವರಗಳನ್ನೆಲ್ಲಾ ತಿಳಿಸುವುದು ಸೂಕ್ತವಲ್ಲ. ಈಗ ಏರ್ಪಟ್ಟಿರುವ ಸಮಿತಿಯವರು ಈ ವಿಚಾರಕ್ಕೆ ಸಂಬಂಧಪಟ್ಟ ಅಂಶಗಳನ್ನೆಲ್ಲಾ ಪರಿಶೀಲಿಸಿ ಸರ್ವರಿಗೂ ಒಪ್ಪಿಗೆಯಾಗುವಂಥ ಒಂದು ಯೋಜನೆಯನ್ನು ಸಿದ್ಧಗೊಳಿಸುವರೆಂದು ನಾನು ನಂಬುತ್ತೇನೆ.

ಆದಾಗ್ಯೂ ಒಂದೆರಡು ಪ್ರಧಾನ ವಿಚಾರಗಳನ್ನು ನಾನು ಒತ್ತಿ ತಿಳಿಸಬೇಕಾಗಿದೆ. ಮೊದಲನೆಯದಾಗಿ, ಗ್ರಾಮಾಂತರ ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳಿಗೆ ಸಾಧ್ಯವಾದ ಮಟ್ಟಿಗೂ ಅತ್ಯಂತ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡಬೇಕು. ಈಗ ಕೇಂದ್ರಗೊಳಿಸಿದ ಮೇಲ್ಪಟ್ಟ ಅಧಿಕಾರ ಕ್ಷೇತ್ರಗಳ ಮೂಲಕ ಚಲಾಯಿಸುತ್ತಿರುವ ಅಧಿಕಾರಗಳಲ್ಲಿ ಕೆಲವನ್ನು ಈ ಸಂಸ್ಥೆಗಳಿಗೆ ವಹಿಸುವುದರಲ್ಲಿ ಸ್ವಲ್ಪ ಧೈರ್ಯದಿಂದ ವರ್ತಿಸಬೇಕಾಗಿದೆ. ನೀರಿನಲ್ಲಿ ಧುಮುಕದೆ ಈಜು ಕಲಿಯುವುದಕ್ಕಾಗಲಾರದೆಂಬ ನಾಣ್ನುಡಿಯನ್ನು ಜ್ಞಾಪಕಕ್ಕೆ ತಂದುಕೊಳ್ಳ ಬೇಕು. ಅನೇಕ ಗ್ರಾಮಗಳಲ್ಲಿ ಕಕ್ಷಿಗಳೂ (ದ್ವೇಷಗಳೂ), ಸೋಮಾರಿತನವೂ, ಔದಾಸೀನವೂ ಇರುವುದು ನಿಜ. ಆದರೆ ನಾವು ಧೈರ್ಯದಿಂದ ಈ ಪ್ರಯೋಗವನ್ನು ನಡೆಸುವುದಕ್ಕೆ ಅದರಿಂದ ಅಡ್ಡಿಯಾಗಬಾರದು. ಯಾವುದು ಸರಿಯೆಂಬುದನ್ನು ಕಟ್ಟಕಡೆಯಲ್ಲಿ ಗೊತ್ತು ಮಾಡತಕ್ಕವರು ಜನಗಳೇ. ಎರಡನೆಯದಾಗಿ, ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳಿಗೆ ವಹಿಸಲ್ಪಡುವ ಕರ್ತವ್ಯ ಗಳನ್ನು ಜವಾಬ್ದಾರಿಗಳನ್ನೂ ತೃಪ್ತಿಕರವಾಗಿ ನಿರ್ವಹಿಸಬೇಕಾದರೆ ಆ ಸಂಸ್ಥೆಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಬೇಕಾದುದು ಅವಶ್ಯಕವೆಂಬ ಅಂಶವನ್ನು ಒತ್ತಿ ತಿಳಿಸಲಿಚ್ಛಿಸುತ್ತೇನೆ. ಈ ಧನ ಸಹಾಯವನ್ನು ಕಾನೂನಿನ ಮೂಲಕ ಒದಗಿಸುವುದು ಉತ್ತಮಮಾರ್ಗ. ಈ ರೀತಿ, ಸ್ಥಳೀಯ ಸಂಸ್ಥೆಗಳವರು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳಲ್ಲಿ ವ್ಯವಸಾಯ, ನೀರಾವರಿ, ವಿದ್ಯಾಭ್ಯಾಸ, ಜನಾರೋಗ್ಯ, ಗ್ರಾಮ ನೈರ್ಮಲ್ಯ, ಗ್ರಾಮ ಕೈಗಾರಿಕೆ ಇವೇ ಮುಂತಾದ ಜನರ ಯೋಗಕ್ಷೇಮಕ್ಕೆ ಸಂಬಂಧಪಟ್ಟ ಮುಖ್ಯ ವಿಚಾರಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಿರುವಂತೆ ಅವಕಾಶ ಕಲ್ಪಿಸಲ್ಪಡಬೇಕು.

ಗ್ರಾಮಾಂತರ ಪ್ರದೇಶಗಳ ಜನರಲ್ಲಿ ಬೇಕಾದಷ್ಟು ಅನುಭವವೂ, ಉತ್ಸಾಹವೂ, ಸಾಮರ್ಥ್ಯವೂ ಮತ್ತು ಮುಂದಾಳುತನವೂ ಇವೆಯೆಂದು ನನಗೆ ದೃಢಪಟ್ಟಿದೆ. ಈ ಅಮೂಲ್ಯವಾದ ಸಾಧನಗಳನ್ನು ವಿವೇಕದಿಂದ ಉಪಯೋಗಿಸಿಕೊಂಡು ಕಷ್ಟಪಟ್ಟು ಕೆಲಸ

ಮಾಡಿದಲ್ಲಿ – ದೇಶವು ಸಂಪದಯುಕ್ತವಾಗಿ ಪ್ರಗತಿ ಹೊಂದಿ ಆ ರೂಪದಲ್ಲಿ ಲಾಭದಾಯಕವಾದ ಫಲವು ಲಭಿಸುವುದರಲ್ಲಿ ಸಂದೇಹವಿಲ್ಲ. ಮೈಸೂರು ರಾಜ್ಯದ ಪ್ರಜೆಗಳಿಗೆ ಪ್ರಯೋಜನಕರವಾಗಿರುವಂತೆ ಮಾತ್ರವೇ ಅಲ್ಲದೆ ಭಾರತ ದೇಶದ ಇತರ ರಾಜ್ಯಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲು ಯೋಗ್ಯವಾಗುವಂಥ ಸ್ಥಳೀಯ ಪ್ರಜಾ ಸರ್ಕಾರದ ಒಂದು ಯೋಜನೆಯನ್ನು ಸಿದ್ಧಗೊಳಿಸುವ ಸೌಭಾಗ್ಯವು ಮೈಸೂರು ರಾಜ್ಯಕ್ಕೆ ಲಭಿಸಲೆಂದು ನಾನು ಹಾರೈಸುತ್ತೇನೆ. "ಸ್ಥಳೀಯ ಸ್ವರಾಜ್ಯದ" (ಸ್ಥಳೀಯ ಪ್ರಜಾಧಿಕಾರ ಸರ್ಕಾರದ) ತಳಪದಿಯ ಮೇಲೆ "ಸುರಾಜ್ಯ"ವನ್ನು (ಒಳ್ಳೆಯ ಸರ್ಕಾರವನ್ನು) ಸ್ಥಾಪಿಸುವುದೇ ನಮ್ಮ ಗುರಿಯಾಗಿರಬೇಕು.

ಲೇಖಕರು : **ಕೆ. ಚಂಗಲರಾಯರೆಡ್ಡಿ,** ಬಿ.ಎ., ಬಿ.ಎಲ್.,
ಮುಖ್ಯಮಂತ್ರಿ
ಮೈಸೂರು ರಾಜ್ಯ

4. ಮೈಸೂರು ರಾಜ್ಯದ ಅಭ್ಯುದಯ – 1951

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ನಾಲ್ಕು ವರ್ಷಗಳು ಮುಗಿದು ಐದನೆಯ ವರ್ಷ ಪ್ರಾರಂಭವಾಗಿದೆ.

ಮೈಸೂರು ರಾಜ್ಯವು 1950ರ ಜನವರಿ 26ನೆಯ ತಾರೀಖಿನ ದಿನ ಜಾರಿಗೆ ಬಂದ ಭಾರತದ ರಾಜ್ಯಾಂಗ ಸಂವಿಧಾನಕ್ಕೆ ಈಗ ಸೇರಿದೆ. ಈ ಸಂವಿಧಾನದ ಪ್ರಕಾರ ಇತರ ಮತ್ತು ರಾಜ್ಯಗಳಂತೆಯೇ ಮೈಸೂರು ರಾಜ್ಯಕ್ಕೂ ಹಕ್ಕುಗಳೂ ಮತ್ತು ಅಧಿಕಾರಗಳೂ ಲಭಿಸಿವೆ. ಅಲ್ಲದೆ, ಅವುಗಳಂತೆಯೇ ಮೈಸೂರು ರಾಜ್ಯಕ್ಕೂ ಜವಾಬ್ದಾರಿಗಳನ್ನು ಹೊರ ಬೇಕಾದ ಹೊಣೆಗಾರಿಕೆಯಿದೆ. ರಾಜ್ಯಾಂಗ ವ್ಯವಸ್ಥೆಯೊಡನೆ ಹಣಕಾಸಿನ ಸಂಬಂಧವಾದ ವಿಲೀನೀಕರಣ ವ್ಯವಸ್ಥೆಯೂ ನಡೆದು ಪೂರೈಸಿದೆ. ಅಖಿಲ ಭಾರತ ಹುದ್ದೆಗಳ ಸಂಬಂಧದ ವಿಲೀನೀಕರಣವನ್ನು ರೂಪಿಸುವ ಪ್ರಯತ್ನಗಳೂ ನಡೆಯುತ್ತಿವೆ. ಶೀಘ್ರದಲ್ಲೇ ಅವೂ ಸುಮುಖವಾಗಿ ಮುಕ್ತಾಯ ಹೊಂದುತ್ತವೆಂದು ಹೇಳಬಹುದಾಗಿದೆ.

ಭಾರತದ ರಾಜ್ಯಾಂಗ ವ್ಯವಸ್ಥೆಯನ್ನು ಏರ್ಪಡಿಸುವ ಮಹತ್ತರ ಕಾರ್ಯದಲ್ಲಿ ಮೈಸೂರು ರಾಜ್ಯವೂ ತನಗೆ ತಕ್ಕ ಸ್ಥಾನಮಾನಗಳನ್ನು ಪಡೆದು, ಗಣನೀಯವಾದ ಸೇವೆಯನ್ನು ಸಲ್ಲಿಸಿತು. ಇದು ನಿಜವಾಗಿಯೂ ತೃಪ್ತಿಕರವಾದ ಸಂಗತಿ. ಕಳೆದ ನಾಲ್ಕು ವರ್ಷಗಳಲ್ಲಿ ಜೀವನದ ನಾನಾ ಕ್ಷೇತ್ರಗಳಲ್ಲಿಯೂ ದೇಶೋನ್ನತಿ ಸಾಧಕವಾದ ಅನೇಕ ಕಾರ್ಯಗಳು ಕೇಂದ್ರ ಸರ್ಕಾರದಿಂದಲೂ, ಭಾರತದಲ್ಲಿರುವ ಇತರ ಸರ್ಕಾರಗಳಿಂದಲೂ ನಡೆದಿವೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ನಡೆದಿರತಕ್ಕವುಗಳಲ್ಲಿ ಕೆಲವನ್ನು ಮಾತ್ರವೇ ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸಿ ಅವಕ್ಕೆ ಸಂಬಂಧಪಟ್ಟ ಅಂಕಿ-ಅಂಶಗಳನ್ನು ತಿಳಿಸುತ್ತೇವೆ.

ವಿದ್ಯಾಭ್ಯಾಸ

ರಾಜ್ಯದಲ್ಲಿ ಪ್ರಜೆಗಳ ಅಭ್ಯುದಯ ಸಾಧನೆಗಾಗಿ ಮತ್ತು ಅವರ ಸುಖ ಸಂತೋಷ ಗಳನ್ನು ಹೆಚ್ಚಿಸುವುದಕ್ಕಾಗಿ ನಾನಾ ಇಲಾಖೆಗಳಿಂದಲೂ ಹಲವಾರು ಕಾರ್ಯಕಲಾಪಗಳು ನಡೆದಿವೆ. ಮೊದಲು ವಿದ್ಯಾಭ್ಯಾಸದ ವಿಚಾರವನ್ನೇ ನೋಡೋಣ. ನಾನಾ ದರ್ಜೆಗಳ

ಸ್ಕೂಲು, ಕಾಲೇಜು ಮುಂತಾದ ವಿದ್ಯಾಸಂಸ್ಥೆಗಳ ಸಂಖ್ಯೆ, ಈ ನಾಲ್ಕು ವರ್ಷಗಳ ಅವಧಿಯಲ್ಲಿ 10,500 ರಿಂದ 15,500ಕ್ಕೆ ಏರಿದೆ. ಅವುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಂಖ್ಯೆ ಆರೂವರೆ ಲಕ್ಷದಿಂದ ಒಂಭತ್ತೂವರೆ ಲಕ್ಷಕ್ಕೆ ಹೆಚ್ಚಿದೆ. ವಿದ್ಯಾಭ್ಯಾಸದ ವೆಚ್ಚವು ದ್ವಿಗುಣವಾಗಿ ಅಧಿಕವಾಗಿದೆ, ಎಂದರೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳಿಂದ ಸುಮಾರು ಮೂರು ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ಇನ್ನೂ ಸ್ವಲ್ಪ ವಿವರವಾಗಿ ತಿಳಿಸುವುದಾದರೆ, ಹೈಸ್ಕೂಲುಗಳ ಸಂಖ್ಯೆ 112 ರಿಂದ 204ಕ್ಕೆ, ಮಿಡ್ಲ್‌ಸ್ಕೂಲುಗಳ (ಮಾಧ್ಯಮಿಕ) ಸಂಖ್ಯೆ ಸುಮಾರು 570 ರಿಂದ 700ಕ್ಕೆ ಮತ್ತು ಪ್ರೈಮರಿ ಸ್ಕೂಲ್ (ಪ್ರಾಥಮಿಕ)ಗಳ ಸಂಖ್ಯೆ ಸುಮಾರು 8,500 ರಿಂದ 9,500ಕ್ಕೆ ಹೆಚ್ಚಿದೆ.

ಮೊದಲನೆಯ ದರ್ಜೆಯ ಮತ್ತು ಎರಡನೆಯ ದರ್ಜೆಯ ಕಾಲೇಜುಗಳ ಸಂಖ್ಯೆಗಳೂ ಅದೇ ರೀತಿ ಹೆಚ್ಚಿವೆ. ಕಾನೂನು ಕಾಲೇಜು, ವಾಣಿಜ್ಯ ಕಾಲೇಜು ಮುಂತಾದ ಹೊಸ ಸಂಸ್ಥೆಗಳೂ ಏರ್ಪಟ್ಟಿವೆ. ಇತ್ತೀಚೆಗೆ ಎರಡು ಇಂಜಿನಿಯರಿಂಗ್ ಕಾಲೇಜುಗಳು ಹೊಸದಾಗಿ ಏರ್ಪಟ್ಟು ಪ್ರತಿವರ್ಷವೂ 500 ಮಂದಿ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೇರಲು ಅವಕಾಶವಿದೆ. ಇಂಜಿನಿಯರಿಂಗ್ ಕಾಲೇಜುಗಳ ಜೊತೆಗೆ, ಇಂಜಿನಿಯರಿಂಗ್ ಸ್ಕೂಲ್ ಇದೆ. ಹೊಸದಾಗಿ ಮೈಸೂರು, ದಾವಣಗೆರೆ, ಹಾಸನ, ಚಿಂತಾಮಣಿ ಮತ್ತು ಭದ್ರಾವತಿ – ಈ ನಾಲ್ಕು ಸ್ಥಳಗಳಲ್ಲಿ ಔದ್ಯೋಗಿಕ ಶಿಕ್ಷಣ ಶಾಲೆಗಳನ್ನು ಏರ್ಪಡಿಸಲಾಗಿದೆ.

ಜನಾರೋಗ್ಯ

ಈಗ್ಗೆ ನಾಲ್ಕು ವರ್ಷಗಳ ಹಿಂದೆ, ನಮ್ಮ ರಾಜ್ಯದಲ್ಲಿ ಸುಮಾರು 400 ವೈದ್ಯ ಸಂಸ್ಥೆಗಳಿದ್ದು, ಈಗ ಸುಮಾರು 500ಕ್ಕೆ ಹೆಚ್ಚಿವೆ. ಎಂದರೆ, ಪ್ರತಿ 60 ಚದರ ಮೈಲಿಗಳಿಗೆ ಒಂದರಂತೆ ಮತ್ತು ಸುಮಾರು 15,000 ಜನಸಂಖ್ಯೆಗೆ ಒಂದೊಂದರಂತೆ ವೈದ್ಯ ಸಂಸ್ಥೆಗಳಿವೆ. ಭಾರತದ ಇತರ ಯಾವ ರಾಜ್ಯಗಳಲ್ಲೂ ಈ ಪ್ರಮಾಣದ ವೈದ್ಯ ಸಂಸ್ಥೆಗಳಿಲ್ಲವೆಂದು ಹೇಳಬಹುದು. 1947ನೆಯ ವರ್ಷದಲ್ಲಿ, ಆರೋಗ್ಯಕೇಂದ್ರಗಳು 68 ಮಾತ್ರವೇ ಇದ್ದು ಈಗ ಅವುಗಳ ಸಂಖ್ಯೆ 120ಕ್ಕೆ ಹೆಚ್ಚಿದೆ. ರಾಜ್ಯದಲ್ಲಿ ಮಲೇರಿಯಾ ರೋಗವು ಹೆಚ್ಚಾಗಿರುವ ಪ್ರದೇಶಗಳಲ್ಲೆಲ್ಲಾ ಆರೋಗ್ಯ ಕೇಂದ್ರಗಳನ್ನು ಏರ್ಪಡಿಸಿ, ಅದರ ಹಾವಳಿಯನ್ನು ಅಡಗಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ರಾಜ್ಯದಲ್ಲಿ ಮಲೇರಿಯಾ ರೋಗವನ್ನು ಮತ್ತು

ಕ್ಷಯರೋಗವನ್ನು ಆದಷ್ಟು ಮಟ್ಟಿಗೂ ಕಡಮೆ ಮಾಡುವ ನಾನಾ ಕಾರ್ಯಕಲಾಪಗಳೂ ನಡೆಯುತ್ತಿವೆ. ಕುಷ್ಠರೋಗಿಗಳ ಚಿಕಿತ್ಸೆಗಾಗಿ ಒಂದು ದೊಡ್ಡ "ಸೆಂಟ್ರಲ್ ಲೆಪ್ರಸಿ ಸ್ಯಾನಿಟೋರಿಯಂ" ಕೇಂದ್ರ ಸಂಸ್ಥೆಯನ್ನು ಏರ್ಪಡಿಸುವ ಯೋಜನೆಯು ಸಹಾ ಮಂಜೂರಿಗಿದೆ.

ಸಹಕಾರ

ಸಹಕಾರ ಸಂಘಗಳ ಸಂಖ್ಯೆಯಂತೂ ಅತ್ಯಂತ ವಿಶೇಷವಾಗಿ ಹೆಚ್ಚಾಗಿದೆ. 1946–47 ನೆಯ ಸಾಲಿನಲ್ಲಿ ಅವುಗಳ ಸಂಖ್ಯೆಯು 2,500, 1950 ನೆಯ ಇಸವಿಯ ಕೊನೆಯಲ್ಲಿ ಒಟ್ಟು 5,000 ಸಂಘಗಳಿದ್ದವು. ಸದಸ್ಯರ ಸಂಖ್ಯೆ ಎರಡು ಲಕ್ಷ ಐವತ್ತು ಸಾವಿರದಿಂದ ಸುಮಾರು ಐದು ಲಕ್ಷಗಳಿಗೂ. ಜಮಾ ಖರ್ಚು ವಹಿವಾಟು ಸುಮಾರು ಇಪ್ಪತ್ತೆಂಟು ಕೋಟಿ ರೂಪಾಯಿಗಳಿಂದ ಸುಮಾರು ನಲವತ್ತೊಂದು ಕೋಟಿ ಐವತ್ತು ಲಕ್ಷ ರೂಪಾಯಿಗಳಿಗೂ ಏರಿದೆ. ಸಹಕಾರ ಸಂಘಗಳ ಸಂಖ್ಯೆಯು ಹೀಗೆ ಹೆಚ್ಚಿರುವುದು ಗ್ರಾಮಾಂತರ ಪ್ರದೇಶಗಳಲ್ಲಿ ಅದೂ, ಸಮಗ್ರ ಗ್ರಾಮ ಸಹಕಾರ ಸಂಘಗಳ ರೂಪದಲ್ಲಿ. ಈ ಸಂಘಗಳು, ಸುಮಾರು 30 ಗ್ರಾಮಗಳ ಒಂದೊಂದು ಸರ್ಕಲ್‌ಗೆ ಒಂದೊಂದರಂತಿದೆ.

ವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿ ಸರಬರಾಯಿ ಸಂಬಂಧವಾಗಿಯೂ ಪ್ರಗತಿಸಾಧನೆ ಚೆನ್ನಾಗಿ ನಡೆದಿದೆ. 1947ನೆಯ ವರ್ಷದಲ್ಲಿ 228 ಊರುಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ನಡೆಯುತ್ತಿತ್ತು. 1950ನೆಯ ವರ್ಷದ ಕೊನೆಯಲ್ಲಿ 469 ಊರುಗಳಿಗೆ ವಿದ್ಯುತ್ ಪಡೆಯುವಂತಾಯಿತು. 1947ನೆಯ ವರ್ಷದ ಜೂನ್ ತಿಂಗಳಲ್ಲಿ ಸುಮಾರು ಒಂದು ಸಾವಿರ ನೀರಾವರಿ "ಪಂಪು"ಗಳಿದ್ದವು. ಈಗ ಅವುಗಳ ಸಂಖ್ಯೆ ಸುಮಾರು 25,000ಕ್ಕೆ ಏರಿದೆ. ನಾಲ್ಕು ವರ್ಷಗಳ ಹಿಂದೆ ಒಟ್ಟು 70,000 ಅಶ್ವಶಕ್ತಿಗಳ ವಿದ್ಯುಚ್ಛಕ್ತಿ ಸರಬರಾಯಿ ನಡೆಯುತಿದ್ದು, ಈಗ ಸುಮಾರು 1 ಲಕ್ಷ 12,000 ಕ್ಕೆ ಏರಿದೆ. ಆಗ್ಗೆ 30 ಕಿಲೋವಾಟ್ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ತಯಾರಾಗುತ್ತಿದ್ದು, ಈಗ 50 ಕಿಲೋವಾಟ್ ಪ್ರಮಾಣದಲ್ಲಿ ತಯಾರಾಗುತ್ತಿದೆ. [ಟ್ರ್ಯಾನ್ಸ್ ಮಿಷನ್] "ಟ್ರ್ಯಾನ್ಸ್ ಮಿಷನ್" ಲೈನುಗಳ ಒಟ್ಟು ದೂರ 1,198 ಮೈಲಿಗಳಿಂದ 1648 ಮೈಲಿಗಳಿಗೆ, ವಿದ್ಯುದ್ದೀಪಗಳ ಯಂತ್ರಜೋಡಣೆ ಸಂಖ್ಯೆ 56,000 ದಿಂದ 92,000ಕ್ಕೆ, ಬೀದಿ ದೀಪಗಳ ಸಂಖ್ಯೆ 19,468 ರಿಂದ 15,055ಕ್ಕೆ, ಯಂತ್ರಶಕ್ತಿಗಾಗಿ ವಿದ್ಯುಚ್ಛಕ್ತಿ ಜೋಡಣೆಗಳು 3,600 ರಿಂದ 6,200ಕ್ಕೆ ಅಡಿಗೆ ಮುಂತಾದ ಗೃಹಕಾರ್ಯ ಗಳಿಗಾಗಿ

ಒದಗಿಸುವ ವಿದ್ಯುಚ್ಛಕ್ತಿ ಜೋಡಣೆಗಳು ಸುಮಾರು 2,400 ರಿಂದ ಸುಮಾರು 5,000ಕ್ಕೆ ಹೆಚ್ಚಿವೆ. ವಿದ್ಯುಚ್ಛಕ್ತಿ ಬಾಬಿನ ಹುಟ್ಟುವಳಿಯು ಸುಮಾರು ಒಂದು ಕೋಟಿ ರೂಪಾಯಿಗಳಿಂದ 1 ಕೋಟಿ 61 ಲಕ್ಷ ರೂಪಾಯಿಗಳಿಗೆ ಹೆಚ್ಚಿದೆ.

ಪಶುವೈದ್ಯ

ಪಶು ವೈದ್ಯಶಾಲೆಗಳ ಸಂಖ್ಯೆಯೂ ಏಕಪ್ರಕಾರವಾಗಿ ಹೆಚ್ಚಿದೆ. 1946–47ರಲ್ಲಿ ಅವುಗಳ ಸಂಖ್ಯೆ 139 ಮಾತ್ರ. ಅದು 1950–51ರ ವೇಳೆಗೆ 193ಕ್ಕೆ ಏರಿತು. ಕಳೆದ ಒಂದು ವರ್ಷದಲ್ಲಿ ಸುಮಾರೂ 8 ಲಕ್ಷ ಕಾಲ್ನಡೆಗಳಿಗೆ ಚಿಕಿತ್ಸೆ ನಡೆದಿದೆ. 1946–47ರಲ್ಲಿ 5 ಲಕ್ಷ ಕಾಲ್ನಡೆಗಳಿಗಿಂತಲೂ ಕಡಮೆ ಸಂಖ್ಯೆಯವಕ್ಕೆ ಚಿಕಿತ್ಸೆ ನಡೆದಿತ್ತು. ಪ್ರತಿ 25,000 ರಾಸುಗಳಿಗೆ ಒಂದರಂತೆ ಪಶು ವೈದ್ಯಶಾಲೆಗಳಿರಬೇಕೆಂಬ ಗುರಿಯನ್ನು ಮೈಸೂರು ರಾಜ್ಯವು ಶೀಘ್ರದಲ್ಲೇ ಸಾಧಿಸುವುದಾಗಿದೆ. ಈ ಗುರಿಯನ್ನು ಮುಟ್ಟುವಂತಿರುವುದು ಭಾರತದಲ್ಲಿ ಮೈಸೂರು ರಾಜ್ಯ ಒಂದರಲ್ಲೇ ಎಂದು ಹೇಳಬಹುದು.

ಪಾನ ನಿರೋಧ

ಪಾನ ನಿರೋಧ ಕಾರ್ಯನೀತಿಯನ್ನು ಸರ್ಕಾರದವರು ಅನುಸರಿಸುತ್ತಿದ್ದಾರೆ. ಈಗಾಗಲೇ ರಾಜ್ಯದಲ್ಲಿ ಸುಮಾರು 2/3 ಭಾಗದ ಪ್ರದೇಶದಲ್ಲಿ ಅದು ಜಾರಿಗೆ ಬಂದಿದೆ. 1946–47ರಲ್ಲಿ ಸುಮಾರು 3,000 ಮದ್ಯದ ಅಂಗಡಿಗಳಿದ್ದುವು. 1950–51ರಲ್ಲಿ ಅವುಗಳ ಸಂಖ್ಯೆ ಸುಮಾರು 900ಕ್ಕೆ ತಗ್ಗಿತು. ಅಬಕಾರಿ ಕಾನೂನಿಗೆ ವಿರುದ್ಧವಾಗಿ ನಡೆದ ಅಪರಾಧಗಳ ಸಂಖ್ಯೆಯು ಕೂಡ 1946–47ರಲ್ಲಿ 4,721 ಇದ್ದು 1950–51ರಲ್ಲಿ 2,209ಕ್ಕೆ ತಗ್ಗಿದೆ. ಅಬಕಾರಿ ಹುಟ್ಟುವಳಿಯು ವರ್ಷಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಕಡಮೆಯಾಗಿದೆ.

ಕೈಗಾರಿಕೆ

ಕೈಗಾರಿಕಾ ಕ್ಷೇತ್ರದ ಕೆಲವು ಮಾರ್ಗಗಳಲ್ಲಿ ಗಣನೀಯವಾಗಿ ಪ್ರಗತಿ ಸಾಧನೆಯಾಗಿದೆ. ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯನ್ನು ನಾಲ್ಕರಷ್ಟು ಹೆಚ್ಚಿಸುವ ಆರಂಭ ಕಾರ್ಯಗಳು ಪೂರೈಸಿವೆ. ಈಗ 25,000 ಟನ್ನುಗಳು ಮಾತ್ರ ತಯಾರಾಗುತ್ತಿವೆ. ಈಗಿರುವುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ತಯಾರಾದ ಕಬ್ಬಿಣ ಮತ್ತು ಉಕ್ಕು ಸುಮಾರು ಒಂದು ಲಕ್ಷ

ಟನ್ನುಗಳು ಮುಂದಿನ ವರ್ಷದಿಂದ ಬಳಕೆಗೆ ಒದಗುತ್ತಿದೆ. ಸಿಮೆಂಟು ಕಾರ್ಖಾನೆಯಲ್ಲಿ ಮೊದಲಿಗಿಂತಲೂ ಮೂರರಷ್ಟು ಹೆಚ್ಚಿನ ಪ್ರಮಾಣದ ಸಿಮೆಂಟು ತಯಾರಾಗುವಂತೆ ವ್ಯವಸ್ಥೆ ನಡೆದಿದೆ. ಅಸಿಟಿಕ್ ಆಸಿಡ್ ದ್ರಾವಕವನ್ನು ತಯಾರಿಸುವ ಯಂತ್ರಜೋಡಣೆ ಮುಗಿದು ಕೆಲಸವು ಪ್ರಾರಂಭವಾಗಿದೆ. ಒಟ್ಟು ಭಾರತದಲ್ಲಿ ಅದನ್ನು ತಯಾರಿಸುವ ಯಂತ್ರ ಜೋಡಣೆ ಇದೊಂದೇ "ಫೆರೋ ಸಿಲಿಕಾನ್" ತಯಾರಿಸುವ ಕೆಲಸವೂ ಪ್ರಾರಂಭ ವಾಗಿದೆ. ಭದ್ರಾವತಿ ಕಾರ್ಖಾನೆಯಲ್ಲಿ ಇತರ ಅನೇಕ ವಸ್ತುಗಳನ್ನು ತಯಾರಿಸುವ ಕಾರ್ಯಕಲಾಪಗಳ ಸಂಬಂಧದಲ್ಲಿಯೂ ಪ್ರಗತಿ ಸಾಧನೆಯ ಪ್ರಯತ್ನಗಳು ಬೇಗ ಬೇಗ ಮುಂದುವರಿಯುತ್ತಿವೆ. ಕೃತಕಗೊಬ್ಬರವನ್ನು ತಯಾರಿಸುವ ಕಾರ್ಖಾನೆ, "ಎಲೆಕ್ಟ್ರಿಕಲ್" ಕೈಗಾರಿಕೆಗಳ ವ್ಯವಸ್ಥೆ, ಮುಂತಾದವಕ್ಕೆ ಸಂಬಂಧಪಟ್ಟ ಅನೇಕ ಇತರ ಯೋಜನೆಗಳು ಸರ್ಕಾರದವರ ತೀವ್ರಾ ಲೋಚನೆಯಲ್ಲಿವೆ.

ಗ್ರಾಮಾಭಿವೃದ್ಧಿ

ಸರ್ ಎಂ. ವಿಶ್ವೇಶ್ವರಯ್ಯನವರಿಂದ ರಚಿತವಾಗಿರುವ ಗ್ರಾಮಾಭಿವೃದ್ಧಿ ಯೋಜನೆಯು ಎರಡು ಜಿಲ್ಲೆಗಳಲ್ಲಿ ಆಚರಣೆಗೆ ಬಂದಿದೆ. ಅದಕ್ಕೆ ಸಂಬಂಧಪಟ್ಟ ಕಾರ್ಯನಿರ್ವಾಹಕ ಸಮಿತಿಗೆ ಅವರೇ ಅಧ್ಯಕ್ಷರಾಗಿದ್ದರೆ. ಅವರ ಮಾರ್ಗದರ್ಶನದಲ್ಲೆ ಕಾರ್ಯಕಲಾಪಗಳು ಶೀಘ್ರ ಶೀಘ್ರವಾಗಿ ನಡೆಯುತ್ತಿವೆ. ಟೆಲಿಫೋನ್ ಕಾರ್ಖಾನೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಕ್ಕೆ ಮೈಸೂರು ಸರ್ಕಾರದವರು ಸೌಕರ್ಯಗಳನ್ನು ಒದಗಿಸಿರುವುದನ್ನೂ ಇಲ್ಲಿ ಸೂಚಿಸಬಹುದಾಗಿದೆ. ಭಾರತಸರ್ಕಾರದವರು ಅದರ ಜೊತೆಗೆ ಮೈಸೂರು ರಾಜ್ಯದಲ್ಲಿ "ಮೆಷೀನ್‌ಟೂಲ್ ಇಂಡಸ್ಟ್ರಿ" ಎಂಬ ಯಂತ್ರೋಪಕರಣಗಳ ತಯಾರಿ ಕೈಗಾರಿಕೆಯನ್ನು ಸ್ಥಾಪಿಸಿವುದಕ್ಕೂ ಮೈಸೂರು ಸರ್ಕಾರದವರು ಸೌಕರ್ಯಗಳನ್ನು ಒದಗಿಸಿರುತ್ತಾರೆ.

ಗ್ರಾಮಾಭಿವೃದ್ಧಿ ಕಾರ್ಯಗಳು ಏಕ ಪ್ರಕಾರವಾಗಿ ಪ್ರಗತಿ ಹೊಂದುತ್ತಿವೆ. ಜಿಲ್ಲಾ (ಕಸಬುಗಳಲ್ಲಿಯೂ) ಮತ್ತು ತಾಲ್ಲೂಕುಗಳಲ್ಲಿಯೂ ಗ್ರಾಮಾಭಿವೃದ್ಧಿ ಸಮಿತಿಗಳೂ ಹೊಸದಾಗಿ ಏರ್ಪಟ್ಟಿವೆ. 1946–47ರಿಂದ ಪ್ರಾರಂಭಿಸಿ 1950ನೆಯ ವರ್ಷದ ಕೊನೆಯ ವೇಳೆಗೆ ಸುಮಾರು 2,000 (ಎರಡು ಸಾವಿರ) ಮೈಲಿಗಳ ದೂರದಷ್ಟು ಹೊಸ ಗ್ರಾಮ ರಸ್ತೆಗಳನ್ನು ಮಾಡಿಸಲಾಯಿತು. ಸುಮಾರು 3,000 ಮೈಲಿ (ಮೂರು ಸಾವಿರ) ಚರಂಡಿ ಯೋಜನೆಗಳು ನೆರವೇರಿದೆ. ಸುಮಾರು 1,000 (ಒಂದು ಸಾವಿರ) ಗ್ರಾಮಗಳಿಗೆ ವನ ಮಹೋತ್ಸ

ಸಂಬಂಧವಾಗಿ 6 ಲಕ್ಷ (ಆರು ಲಕ್ಷ) ಗಿಡಗಳನ್ನು ನೆಡಲಾಯಿತು. 1950–51ರಲ್ಲಿ ಸುಮಾರು 38 ಲಕ್ಷ (ಮೂವತ್ತೆಂಟು ಲಕ್ಷ) ಗಿಡಗಳನ್ನೂ ನೆಡಲಾಯಿತು. ಈ ವರ್ಷವೂ ಈ ಕೆಲಸವು ಭರದಿಂದ ಸಾಗುತ್ತಿದೆ. ಈ ಸಂಬಂಧವಾಗಿ ಒಟ್ಟು ಭಾರತದಲ್ಲೇ ಅತ್ಯಂತ ಶ್ರೇಷ್ಠ ರೀತಿಯಲ್ಲಿ ಕೆಲಸ ನಡೆಯುವ ಗ್ರಾಮಕ್ಕೆ ದೊರೆಯುವ ಅಖಿಲ ಭಾರತದ "ಷೀಲ್ಡ್" ಬಹುಮಾನವು ಕೋಲಾರ ಜಿಲ್ಲೆಯ ಒಂದು ಗ್ರಾಮಕ್ಕೆ ಈಚೆಗೆ ಲಭಿಸಿದೆ. ಕಳೆದ ಕೆಲವು ವರ್ಷಗಳಲ್ಲಿ ಸುಮಾರು 3,500 "ಕಾಂಪೋಸ್ಟ್" ಗೊಬ್ಬರದ ಗುಳಿಗಳನ್ನು ತೋಡಲಾಗಿದೆ. ಹರಿಜನರೇ ಮುಂತಾದ ನಿಮ್ನ ತರಗತಿಗಳವರ ವಾಸದ ಮನೆಗಳ ಸೌಕರ್ಯ ಕಲ್ಪನೆಗಾಗಿ 1 ಕೋಟಿ (ಒಂದು ಕೋಟಿ) ರೂಪಾಯಿಗಳಿಗಿಂತಲೂ ಹೆಚ್ಚು ಮೊಬಲಗು ವೆಚ್ಚವಾಗಿದೆ. ಹೊಸ ಯೋಜನೆಯ ಪ್ರಕಾರ ಅನೇಕ ಗ್ರಾಮಗಳಲ್ಲಿ ಒಟ್ಟು ಸುಮಾರು 15,000 (ಹದಿನೈದು ಸಾವಿರ) ಮನೆಗಳು ನಿರ್ಮಿತವಾಗಿವೆ.

ಅರಣ್ಯಾಭಿವೃದ್ಧಿ

1947–48ರಿಂದ ಪ್ರತಿವರ್ಷವೂ ಅರಣ್ಯ ಇಲಾಖೆಯವರು ಸುಮಾರು 3,000 ಎಕರೆಗಳಲ್ಲಿ ಗಿಡಗಳನ್ನು ಹಾಕಿ "ಪ್ಲಾಂಟೇಷನ್" ಏರ್ಪಾಟು ಮಾಡುತ್ತಾ ಇದ್ದಾರೆ. ಅರಣ್ಯಗಳನ್ನು ಬೆಳೆಸಲು ವೆಚ್ಚ ಹೆಚ್ಚುತ್ತಿದೆ. ಅದರಂತೆಯೇ ಅರಣ್ಯಗಳಿಂದ ಬರುವ ಹುಟ್ಟುವಳಿಯೂ ಹೆಚ್ಚುತ್ತಿದೆ. 1947–48ರಲ್ಲಿ ಒಟ್ಟು ಹುಟ್ಟುವಳಿ 61 ಲಕ್ಷ (ಅರವತ್ತೊಂದು ಲಕ್ಷ) ರೂಪಾಯಿಗಳು ಮಾತ್ರ. 1950–51ರಲ್ಲಿ ಅದು ಸುಮಾರು 75 ಲಕ್ಷ (ಎಪ್ಪತ್ತೈದು ಲಕ್ಷ) ರೂಪಾಯಿಗಳಿಗೆ ಏರಿದೆ. ಅರಣ್ಯವನ್ನು ಬೆಳೆಯಿಸಿ ವೃದ್ಧಿಗೊಳಿಸುವ ಕಾರ್ಯಕಲಾಪಗಳು ಕ್ರಮವಾಗಿ ನಡೆಯುತ್ತಿದೆ.

ಖನಿಜಗಳು

ಮೈಸೂರು ಸಂಸ್ಥಾನವು ಖನಿಜಗಳಿಗೆ ಪ್ರಸಿದ್ಧವಾಗಿದೆ. ಸಂಸ್ಥಾನದಲ್ಲಿ ಚಿನ್ನದ ಗಣಿ ಕೈಗಾರಿಕೆಯೂ ಇದೆ. ಖನಿಜಗಳ ಅನ್ವೇಷಣದ "ಸರ್ವೇ" ಪರಿಶೀಲನೆಯು ನಡೆಯುತ್ತಿದೆ. ಇತರ ಅನೇಕ ಗಣಿಗಳ ಕೆಲಸವನ್ನು ಪ್ರಾರಂಭಿಸಿ ಬಗೆಬಗೆಯ ಖನಿಜಗಳನ್ನು ತೆಗೆಯುವ ಹಲವು ಯೋಜನೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಅವುಗಳನ್ನು ಕಾರ್ಯ ರೂಪಕ್ಕೆ ತರುವ ಪ್ರಯತ್ನಗಳು ನೆರವೇರುವುದರಲ್ಲಿದೆ.

ನೀರಾವರಿ ಕಾಮಗಾರಿಗಳು

ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ ಒಂದು ತ್ರೈವಾರ್ಷಿಕ ಕಾರ್ಯಕ್ರಮದ ಯೋಜನೆಯು 1949-50ರಲ್ಲಿ ಪ್ರಾರಂಭವಾಯಿತು. ಈ ಯೋಜನೆಗಾಗಿ ಭಾರತ ಸರ್ಕಾರದಿಂದ ಪಡೆದಿರುವ ದ್ರವ್ಯ ಸಹಾಯದ ಮತ್ತು ಸಾಲದ ಒಟ್ಟು ಮೊಬಲಗು ಸುಮಾರು ಎರಡು ಕೋಟಿ ರೂಪಾಯಿಗಳು. ಕಳೆದ ಎರಡು ವರ್ಷಗಳ ಅವಧಿಯಲ್ಲಿ ತೋಡಿರುವ ನೀರಾವರಿ ಬಾವಿಗಳ ಸಂಖ್ಯೆ 1,100ಕ್ಕಿಂತಲೂ ಹೆಚ್ಚಾಗಿದೆ. ಅವುಗಳಲ್ಲಿ ಪ್ರತಿಯೊಂದಕ್ಕೂ ಸರ್ಕಾರದವರು 500 ರೂಪಾಯಿಗಳಿಂದ 1,000 ರೂಪಾಯಿಗಳವರೆಗೆ ಸಹಾಯ ದ್ರವ್ಯವನ್ನು ಕೊಟ್ಟಿದ್ದಾರೆ. ಒಟ್ಟು 22,000 ಎಕರೆಗಳಿಗೆ ನೀರಾವರಿಯಾಗುವಂತೆ 18 ಭಾರೀ ಜಲಾಶಯಗಳನ್ನು ನಿರ್ಮಿಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ. 250 ಕೆರೆಗಳು ಜೀರ್ಣೋದ್ಧಾರವಾಗಿದೆ. 500ಕ್ಕಿಂತ ಮೇಲ್ಪಟ್ಟ ಕೆರೆಗಳ ಜೀರ್ಣೋದ್ಧಾರದ ಕಾಮಗಾರಿಗಳು ನಡೆಯುತ್ತಿವೆ. ನದೀ ಬಯಲುಗಳಲ್ಲಿ ನೀರಾವರಿ ಬಾವಿಗಳನ್ನು ತೋಡಿ ನೀರಾವರಿ ವ್ಯವಸಾಯ ನಡೆಯಿಸುವ ಕಾರ್ಯಕಲಾಪಗಳು ಕ್ರಮವಾಗಿ ಮುಂದುವರೆಯುತ್ತಿವೆ. ಕಳೆದ ಎರಡು ವರ್ಷಗಳಿಂದ ಕೆರೆನಾಲೆಗಳನ್ನೂ, ನದೀ ನಾಲೆಗಳನ್ನೂ ಮತ್ತು ಕೆರೆಗಳಿಗೆ ನೀರನ್ನೊದಗಿಸುವ ಕಟ್ಟು ಕಾಲುವೆಗಳನ್ನೂ ಉತ್ತಮಗೊಳಿಸಿ ನೀರಾವರಿ ಸೌಕರ್ಯಗಳನ್ನೊದಗಿಸುವುದು ಒಂದು ವಿಶೇಷ ಪ್ರಯತ್ನವಾಗಿ ನಡೆಯುತ್ತಿದೆ. ಈ ಸಂಬಂಧವಾಗಿ ಇದುವರೆಗೆ ಸುಮಾರು 700 ಕಾಮಗಾರಿಗಳು ಪೂರೈಸಿವೆ. ಸುಮಾರು 150 ಕಾಮಗಾರಿಗಳು ಪೂರೈಸುವುದರಲ್ಲಿವೆ. ಅನೇಕ ಜಮೀನು ಅಭಾದು ಯೋಜನೆಗಳು ನಡೆಯುತ್ತಿವೆ. ಇದುವರೆಗೆ ಇಂಥ ಕಾಮಗಾರಿಗಳು 123 ಪೂರೈಸಿವೆ. 240 ಕಾಮಗಾರಿಗಳು ನಡೆಯುತ್ತಾ ಇವೆ.

ಸುಮಾರು 22,000 ಎಕರೆಗಳಷ್ಟು ಕಾಡು ಗಿಡಗಳೂ, ಜೊಂಡು ಹುಲ್ಲುಗಳೂ ಬೆಳೆದುಕೊಂಡಿದ್ದ ಜಮೀನುಗಳನ್ನು "ಬುಲ್‌ಡೋಜರ್"ಗಳಿಂದ ಮಟ್ಟವಾಡಿಸಿ "ಟ್ರ್ಯಾಕ್ಟರ್"ಗಳಿಂದ ಉಳಿಸಿ ಸಾಗುವಳಿಗೆ ತರಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ರೈತರಿಗೆ ಬೀಜದ ಧಾನ್ಯಗಳೇ ಮುಂತಾದುವನ್ನು ಒದಗಿಸಿ ಅನುಕೂಲಪಡಿಸುವ ಯೋಜನೆಗಳನ್ನು ಆಚರಣೆಗೆ ತರಲಾಗಿದೆ. ಈ ಯೋಜನೆಗಳ ಮೇರೆಗೆ 3,637 ಟನ್ನುಗಳಷ್ಟು ಬೀಜದ ಧಾನ್ಯಗಳು, 25,000 ಟನ್ನು ಹಿಂಡಿ, 2 ಲಕ್ಷ ಟನ್ನುಗಳಷ್ಟು "ಕಾಂಪೋಸ್ಟ್" ಗೊಬ್ಬರ, ಸುಮಾರು 25 ಲಕ್ಷ ರೂಪಾಯಿಗಳು ಬೆಲೆ ಬಾಳುವ ವ್ಯವಸಾಯದ ಮುಟ್ಟುಗಳು- ಇವೆಲ್ಲಾ ರೈತರಿಗೆ ಒದಗಿಸಲ್ಪಟ್ಟಿದೆ. ಇವುಗಳೆಲ್ಲಾ ವ್ಯವಸಾಯಗಾರರಿಗೆ ಅಗ್ಗದ ಬೆಲೆಗೆ ದೊರೆಯುವಂತೆ ಮಾಡುವುದಕ್ಕಾಗಿ ತಕ್ಕ ಏರ್ಪಾಡುಗಳು ನಡೆದಿವೆ. ಕೆಲವು ವಸ್ತುಗಳನ್ನಂತೂ, ಅಸಲು ಬೆಲೆಗಿಂತಲೂ ಕಡಮೆ ಬೆಲೆಗೆ ಮಾರಿ, ಸರ್ಕಾರದವರು ನಷ್ಟ ಭರ್ತಿ

ಮಾಡಲು ಸಹಾಯ ದ್ರವ್ಯಗಳನ್ನು ಕೊಡುತ್ತಿದ್ದಾರೆ. ವ್ಯವಸಾಯದ ಇಲಾಖೆಯಲ್ಲಿ 132 "ಟ್ರ್ಯಾಕ್ಟರ್" ಯಂತ್ರಗಳೂ, 22 "ಬುಲ್‌ಡೋಜರ್" ಯಂತ್ರಗಳೂ ಇವೆ. ಅವುಗಳ ಬಳಕೆಯು ಹೆಚ್ಚಿ ಅವುಗಳು ಅಲ್ಪಸ್ವಲ್ಪ ಮುರಿದು ಹೋದರೆ ಅಥವಾ ಇತರ ರೀತಿಗಳಲ್ಲಿ ಕೆಟ್ಟುಹೋದರೆ, ದುರಸ್ತಿ ಮಾಡಿ, ರೈತರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ, ಒಂದು "ವರ್ಕ್‌ಷಾಪ್" ಯಂತ್ರ ಶಾಲೆಯನ್ನು ಏರ್ಪಡಿಸುವ ಕೆಲಸವನ್ನೂ ಕೈಗೊಳ್ಳಲಾಗಿದೆ. ರೈತರುಗಳು ಕಂತುಗಳಲ್ಲಿ ಮೊಬಲಗನ್ನು ಪಾವತಿ ಮಾಡುವ ಷರತ್ತಿಮೇಲೆ ಅವರಿಗೆ "ಟ್ರ್ಯಾಕ್ಟರ್" ಉಳುಮೆಯಂತ್ರಗಳನ್ನು ವಿಕ್ರಯಿಸುವ ಸೌಕರ್ಯವನ್ನೂ ಕಲ್ಪಿಸಲಾಗಿದೆ. ಹಲವಾರು ರೈತರು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಡೀಸೆಲ್ ಎಣ್ಣೆ ಪಂಪುಗಳನ್ನು ರೈತರಿಗೆ ಮಾರಿ, ಕಂತುಗಳಲ್ಲಿ ಮೊಬಲಗುಗಳನ್ನು ವಸೂಲು ಮಾಡುವ ಯೋಜನೆಯನ್ನು ಆಚರಣೆಗೆ ತರಲಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಒಟ್ಟು 40,000 ಎಕರೆಗಳಷ್ಟು ಜಮೀನುಗಳನ್ನು ಸರ್ಕಾರಿ ಬಂಜರು ಜಮೀನುಗಳಿಂದಲೂ, ಫಲವತ್ತಾದ ಈಚಲು ತೋಪುಗಳಿಂದಲೂ, ರೈತರಿಗೆ ಸಾಗುವಳಿಗೆ ಬಿಟ್ಟು ಕೊಡಲಾಗಿದೆ. ಜಮೀನು ಆಬಾದು ಮತ್ತು ತಕಾವಿ ಸಾಲಗಳಿಗಾಗಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸುಮಾರು 6 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಸಹಕಾರ ಕ್ರಮದಲ್ಲಿ ಸಾಗುವಳಿ ನಡೆಯಿಸಲು ಪ್ರಯತ್ನಗಳು ನಡೆದಿವೆ. ಈ ಸಂಬಂಧದಲ್ಲಿ ಸುಮಾರು 9,000 ಎಕರೆ ಜಮೀನುಗಳನ್ನು ನಾನಾ ಸಹಕಾರ ಸಂಘಗಳಿಗೆ ಹಂಚಿ ಕೊಡಲಾಗಿದೆ. ಈ ಸಹಕಾರ ಸಂಘಗಳು ನಾನಾ ರೀತಿಗಳಲ್ಲಿ ಪುರೋಭಿವೃದ್ಧಿ ಹೊಂದಲು ಅನುಕೂಲವಾಗುವಂತೆ ಅವುಗಳಿಗೆ ಸಾಲಗಳನ್ನೂ ಮತ್ತು ಸಹಾಯ ದ್ರವ್ಯಗಳನ್ನೂ ಕೊಡಲಾಗಿದೆ. ಅಕ್ಕಿ, ರಾಗಿ, ಜೋಳ ಮುಂತಾದ ಧಾನ್ಯಗಳು ತಕ್ಕಷ್ಟು ಪ್ರಮಾಣಗಳಲ್ಲಿ ಒದಗದೆ ತೊಂದರೆಯಾಗಿದೆಯಷ್ಟೇ. ಆ ಧಾನ್ಯಗಳ ಬಳಕೆಯು ಆದಷ್ಟು ಕಡಮೆಯಾಗಿದ್ದು, ಅವುಗಳ ಜೊತೆಗೆ ಗೆಣಸು ಮುಂತಾದವುಗಳ ಬಳಕೆಯು ಹೆಚ್ಚುವಂತೆ ಮಾಡುವುದು ಸೂಕ್ತವೆಂದು ತೋರಿತು. ಅದಕ್ಕಾಗಿ ರೈತರುಗಳೂ, ವಿಶೇಷವಾಗಿ ಮಲೆನಾಡು ಜಿಲ್ಲೆಗಳ ಕಾಫಿ ಪ್ಲಾಂಟರುಗಳೂ, ಭತ್ತ ಮುಂತಾದವುಗಳ ಜೊತೆಗೆ ಗೆಣಸು, ಮರಗೆಣಸು ಮುಂತಾದವುಗಳನ್ನು ಬೆಳೆಯಲು ಪ್ರೋತ್ಸಾಹ ಕೊಡಲಾಯಿತು.

ಪಡಿತರ

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಮೈಸೂರು ರಾಜ್ಯದ ಜನಸಂಖ್ಯೆಯು 73 ಲಕ್ಷಗಳಿಂದ 90 ಲಕ್ಷಗಳಿಗಿಂತಲೂ ಹೆಚ್ಚಾಗಿದೆಯೆಂಬುದನ್ನೂ ನಾವು ಮರೆಯು ವಂತಿಲ್ಲ. ಜನಸಂಖ್ಯೆಯು ಹೆಚ್ಚಾಗಿರುವ ಕಾರಣ, ಮೈಸೂರು ರಾಜ್ಯದ ಜನರಿಗೆ ಈಗ ತಲೆಯೊಂದಕ್ಕೆ

ದೊರೆಯುವ ಪಡಿತರದ ಪ್ರಮಾಣವು ತಕ್ಕಷ್ಟಿಲ್ಲ. ಅದು ಅವಶ್ಯ ಪ್ರಮಾಣಕ್ಕಿಂತ ಕಡಮೆಯಾಗಿದೆ. ಈಗ ಕೊಡುತ್ತಿರುವಷ್ಟನ್ನು ಕೊಡಬೇಕಾದರೂ ಕೂಡ, ನಾವು ಹೊರಗಿನಿಂದ ಆಹಾರ ಧಾನ್ಯಗಳನ್ನು ಆಮದು ಮಾಡಬೇಕಾಗಿದೆ.

ಆಹಾರ ಬೆಳೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ ಪೂರೈಸಿ ಈಗ ಆಚರಣೆಗೆ ತಂದಿರುವ ನಾನಾ ಯೋಜನೆಗಳ ಫಲಿತಾಂಶಗಳು ಗೋಚರಕ್ಕೆ ಬರುವುದು ಮುಂದಿನ ವರ್ಷಗಳಲ್ಲಿ ಮಾತ್ರವೇ.

ಸುಧಾರಣೆಗಳು

ಕಳೆದ ನಾಲ್ಕು ವರ್ಷಗಳಲ್ಲಿ ರಚಿತವಾಗಿರುವ ಕಾನೂನುಗಳನ್ನು ನೋಡಿದರೆ, ಹಲವು ಸುಧಾರಣೆಗಳು ನಡೆದಿರುವುದು ಗೊತ್ತಾಗುತ್ತದೆ. ಕಾರ್ಮಿಕರ ಯೋಗಕ್ಷೇಮ ಸಾಧನೆ, ನಿಮ್ನ ತರಗತಿಗಳವರ ಹಿತಸಾಧನೆ, ವ್ಯವಸಾಯಾಭಿವೃದ್ಧಿ, ನೀರಾವರಿ ಮೇಲ್ಪಾಟು – ಮುಂತಾದವುಗಳಿಗೆಲ್ಲಾ ಗಮನ ಕೊಡಲಾಗಿದೆ. ಅವುಗಳ ಸಂಬಂಧವಾಗಿ ಅಗತ್ಯವಾದ ಕಾನೂನುಗಳು ರಚಿತವಾಗಿವೆ. ಜೋಡಿ ಮತ್ತು ಇನಾಂ ಗ್ರಾಮಗಳ ರದ್ದಿಯಾತಿಗೂ ಮತ್ತು ಷಿಕ್ಮಿ ಸಾಗುವಳಿಗೂ (Tenancy) ಸಂಬಂಧಪಟ್ಟ ಎರಡು ಮಸೂದಾ ಕಾನೂನುಗಳು ರಚಿತವಾಗಿ ಶಾಸನ ವಿಧಾಯಕ ಸಭೆಯ ಪರಿಶೀಲನೆಯಲ್ಲಿವೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಒಂದು ಮಸೂದಾ ಕಾನೂನನ್ನು ಆ ಸಭೆಯಲ್ಲಿ ಮಂಡಿಸುವುದಕ್ಕಾಗಿ ಆರಂಭ ಕಾರ್ಯಗಳು ಪೂರೈಸುವುದರಲ್ಲಿವೆ. ಕಾರ್ಪೊರೇಷನ್ ಆಕ್ಟ್ ಮತ್ತು ಟೌನ್ ಮುನಿಸಿಪಾಲಿಟಿಗಳ ಆಕ್ಟ್ ಇವೆರಡು ಕಾನೂನುಗಳಾಗಿ ಏರ್ಪಟ್ಟಿವೆ. ಅವು ಜಾರಿಗೆ ಬಂದಿವೆ. ಜಿಲ್ಲಾ ಬೋರ್ಡ್‌ಗಳು ಮತ್ತು ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟ ಮಸೂದಾ ಕಾನೂನು ಶಾಸನವಾಗುವುದರಲ್ಲಿದೆ.

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರಗಳನ್ನು ವಹಿಸುವುದಕ್ಕಾಗಿ ಮತ್ತು ಹೆಚ್ಚಿನ ಹುಟ್ಟುವಳಿ ಸಾಧನಗಳನ್ನು ಒದಗಿಸಿ ಕೊಡುವುದಕ್ಕಾಗಿ ಈ ಮಸೂದಾ ಕಾನೂನುಗಳು ರಚಿತವಾಗಿವೆ.

ಪಂಚವಾರ್ಷಿಕ ಯೋಜನೆ

ಸಮಗ್ರ ಭಾರತಕ್ಕಾಗಿ ಈಚೆಗೆ ಪಂಚವಾರ್ಷಿಕ ಕಾರ್ಯಕ್ರಮವೊಂದು ಏರ್ಪಟ್ಟಿದೆಯಷ್ಟೆ. ಅದರ ಅಂಗವಾಗಿ ಮೈಸೂರು ರಾಜ್ಯದಲ್ಲಿಯೂ ಒಂದು ಪಂಚವಾರ್ಷಿಕ

ಯೋಜನೆ ಯನ್ನು ರಚಿಸಲಾಗಿದೆ. ಅದನ್ನು ಅಖಿಲ ಭಾರತದ "ಪ್ಲಾನಿಂಗ್ ಕಮಿಷನ್" ಸಂಸ್ಥೆಯವರೂ ಅನುಮೋದಿಸಿದ್ದಾರೆ. ಆ ಯೋಜನೆಯ ಮೇರೆಗೆ ಐದು ವರ್ಷಗಳ ಅವಧಿಯಲ್ಲಿ 36 ಕೋಟಿ ರೂಪಾಯಿಳ ವೆಚ್ಚಕ್ಕೆ ಅವಕಾಶವು ಕಲ್ಪಿತವಾಗಿದೆ. ನಾನಾ ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚವಾಗುವ ಮಾಮೂಲು ಮೊಬಲಗಿನ ಜೊತೆಗೆ ಈ ವೆಚ್ಚವು ನಡೆಯಬೇಕೆಂದು ಗೊತ್ತಾಗಿದೆ. ಈ ಯೋಜನೆಯು ಆಖೈರಾಗಿ ಅನುಮೋದಿ ಸಲ್ಪಟ್ಟ ತರುವಾಯ, ರಾಜ್ಯದಲ್ಲಿ ಈಗ ನಡೆಯುತ್ತಿರುವ ಸೇವಾ ಕಾರ್ಯಕಲಾಪಗಳನ್ನು ಮುಂದುವರಿಸುವುದಕ್ಕಾಗಿ ಮತ್ತು ಮುಂದೆ ನಿರ್ಧಾರವಾಗುವ ಅಭಿವೃದ್ಧಿ ಕಾರ್ಯ ಕಲಾಪಗಳನ್ನು ನಡೆಸುವುದಕ್ಕಾಗಿ ಪ್ರತಿವರ್ಷವೂ ಸುಮಾರು 20ಕೋಟಿ ರೂಪಾಯಿಗಳ ಮೊಬಲಗು ವೆಚ್ಚವಾಗಬೇಕಾಗುತ್ತದೆ. ಸೌಕರ್ಯ ಕಲ್ಪನೆಯ ಸೇವಾ ಕಾರ್ಯಗಳಿಗಾಗಿ 1945–46ರಲ್ಲಿ ವಿನಿಯೋಗವಾಗುತ್ತಿದ್ದ ಮೊಬಲಗು ಸರ್ಕಾರದ ಒಟ್ಟು ವೆಚ್ಚದಲ್ಲಿ ಶೇಕಡ 21%ರಷ್ಟು ಮಾತ್ರ. 1951–52ನೆಯ ಸಾಲಿನಲ್ಲಿ ಬಡ್ಜೆಟ್‌ನಲ್ಲಿ ಅದು ಶೇಕಡ 50%ರಷ್ಟಕ್ಕೆ ಅಂದಾಜಾಗಿದೆ.

ಪಂಚವಾರ್ಷಿಕ ಯೋಜನೆಯ ಮೇರೆಗೆ ನಾನಾ ಇಲಾಖೆಗಳಿಗೂ ಒದಗುವ ವೆಚ್ಚದ ಮೊಬಲುಗಳು ಸ್ಥೂಲವಾಗಿ ಈ ರೀತಿ ಇದೆ.

			ಲಕ್ಷ ರೂಪಾಯಿಗಳು
1	ವಿದ್ಯುಚ್ಛಕ್ತಿಯ ಯೋಜನೆಗಳು	–	1200'68
2	ನೀರಾವರಿ	–	716
3	ವ್ಯವಸಾಯ	–	442'98
4	ರಸ್ತೆಗಳು	–	332'05
5	ವಿದ್ಯಾಭ್ಯಾಸ	–	225,60
6	ಜನಾರೋಗ್ಯ ರಕ್ಷಣೆ	–	158'25
7	ಮೆಡಿಕಲ್ (ವೈದ್ಯ)	–	56'50
8	ನಿಮ್ನ ತರಗತಿಗಳವರಿಗೆ ವಸತಿ ಸೌಕರ್ಯ	–	100'00
9	ಕಾರ್ಮಿಕರಿಗೆ ವಸತಿ ಸೌಕರ್ಯ	–	50'00
10	ರೇಷ್ಮೆ ಕೈಗಾರಿಕೆಯೂ ಸೇರಿ		

	ಗೃಹ ಕೈಗಾರಿಕೆಗಳು	–	135'00
11	ಗ್ರಾಮಾಭಿವೃದ್ಧಿ	–	81'05
12	ಪಶುವೈದ್ಯ	–	53'75
13	ಗಣಿಯ ಕೆಲಸವೂ ಸೇರಿ ಇತರ ಸಣ್ಣ ಕೈಗಾರಿಕೆಗಳು	–	34'80
14	ಜಂಗಲುಗಳು	–	8'30
15	ಸಹಕಾರ	–	7'10
16	ಮೀನುಗಳ ಸಂಬಂಧದ ಪಾಸೇವಾರಿ ವೆಚ್ಚ	–	2'20

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಭಿವೃದ್ಧಿ ಕಾರ್ಯಗಳಿಗಾಗಿ ತಗಲುವ 429.25 ಲಕ್ಷ ರೂಪಾಯಿಗಳನ್ನು, ಮೇಲೆ ಕಂಡ ವೆಚ್ಚಗಳ ಜೊತೆಗೆ ಒದಗಿಸಲಾಗುವುದು. ಭದ್ರಾವತಿ ಕಾರ್ಖಾನೆ ವೆಚ್ಚವು ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಸೇರುತ್ತದೆ, ಅದಕ್ಕಾಗಿ ಕೇಂದ್ರ ಸರ್ಕಾರದವರು ಹಣವನ್ನು ಒದಗಿಸುತ್ತಾರೆ.

ಪ್ಲಾನಿಂಗ್ ಕಮೀಷನ್ ಅವರು "ಸಪ್ಲಿಮೆಂಟರಿ" ಯೋಜನೆಯೊಂದನ್ನು ಪರ್ಯಾಲೋಚಿಸುವ ಉದ್ದೇಶವಿದೆ. ಕೃತಕಗೊಬ್ಬರಗಳನ್ನು ತಯಾರಿಸುವ ಮತ್ತು ರಸಾಯನ ವಸ್ತುಗಳನ್ನ ತಯಾರಿಸುವ ನಮ್ಮ ಯೋಜನೆಯನ್ನು ಅವರು ಅದರಲ್ಲಿ ಸೇರಿಸಿರುತ್ತಾರೆ. ಅದಕ್ಕಾಗಿ ಸುಮಾರು ಮೂರು ಕೋಟಿ ರೂಪಾಯಿಗಳ ವೆಚ್ಚವನ್ನು ವಹಿಸಬೇಕಾಗುತ್ತದೆ. ಭಾರತ ಸರ್ಕಾರದವರು ಗಮನದಲ್ಲಿಟ್ಟು ಕೊಂಡಿರುವ ಭಾರಿ ಯೋಜನೆಗಳ ಸಂಬಂಧವಾಗಿ ವಿದ್ಯುಚ್ಛಕ್ತಿ ಕೈಗಾರಿಕೆಗಳ ಯೋಜನೆಯನ್ನು ಪರ್ಯಾಲೋಚಿಸಲಾಗುತ್ತಿದೆ. ಅದಕ್ಕೆ ಸುಮಾರು ಏಳುಕೋಟಿ ರೂಪಾಯಿಗಳು ವೆಚ್ಚವಾಗಬಹುದೆಂದು ಅಂದಾಜಾಗಿದೆ.

ಈಗ ಸೂಚಿಸಿದ ಯೋಜನೆಗಳ ಜೊತೆಗೆ, ಹೊನ್ನೆಮರಡು, ಮೇಕೆದಾಟು ಮತ್ತು ಕಪಿನೀ ಯೋಜನೆಗಳನ್ನೂ ಕೂಡ, ಅಖಿಲ ಭಾರತದ ಪ್ಲಾನಿಂಗ್ ಕಮೀಷನ್ ಅವರಿಂದ ರಚಿತವಾಗುತ್ತಿರುವ "ಸಪ್ಲಿಮೆಂಟರಿ" ಯೋಜನೆಯಲ್ಲಿ ಸೇರಿಸಬೇಕೆಂದು ನಾವು ಬಿನ್ನೈಸಿ ಒತ್ತಿ ಹೇಳುತ್ತಿದ್ದೇವೆ. ಲಕ್ಕವಳ್ಳಿ ಯೋಜನೆಯನ್ನೂ ಕೇಂದ್ರ ಸರ್ಕಾರದ ಯೋಜನೆಯಂತೆ ಭಾವಿಸಿ ಹತ್ತು ವರ್ಷಗಳ ಅವಧಿಯಲ್ಲಿ ಪೂರೈಸಬೇಕೆಂದೂ ಭಾರತ ಸರ್ಕಾರದವರಿಗೆ ಬಿನ್ನೈಸಿ ಒತ್ತಿ ಹೇಳುತ್ತಿದ್ದೇವೆ.

ಮೈಸೂರು ರಾಜ್ಯದ ಸಲುವಾಗಿ ಐದು ವರ್ಷಗಳ ಅವಧಿಗೆ ರಚಿತವಾಗಿರುವ ಯೋಜನೆಯು, ಮುಖ್ಯವಾಗಿ ಕಳೆದ ಐದು ವರ್ಷಗಳ ಅವಧಿಗಾಗಿ ಪ್ರಜೆಗಳಿಗೆ ಸೌಕರ್ಯ ಕಲ್ಪನೆಗೋಸ್ಕರ ಏರ್ಪಟ್ಟು ಇನ್ನೇನು ಪೂರೈಸುವುದರಲ್ಲಿರುವ ಯೋಜನೆಯ ಕಾರ್ಯ ಕಲಾಪಗಳನ್ನೇ ಮುಂದುವರಿಸುವುದಾಗಿದೆ. ಇದೇ ಅದರ ಮುಖ್ಯ ಲಕ್ಷಣ. ಹಿಂದಿನಿಂದಲೂ ಮೈಸೂರು ರಾಜ್ಯದಲ್ಲಿ ಪ್ರಗತಿಸಾಧನೆಯು ನಡೆದು, ಅಭಿವೃದ್ಧಿ ಕಾರ್ಯಗಳು ಮುಂದು ವರಿಯುತ್ತಾ ಬಂದಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಅವುಗಳು ಮತ್ತಷ್ಟು ಮುಂದಿನ ಮಜಲನ್ನು ಮುಟ್ಟಿವೆಯೆಂಬುದು ಇದುವರೆಗೆ ನಾನು ಸೂಚಿಸಿರುವಂತೆ ಅಂಕಿ ಅಂಶ ಗಳಿಂದಲೇ ಮನವರಿಕೆಯಾಗುತ್ತದೆ. ಮುಂದಿನ ಪಂಚವಾರ್ಷಿಕ ಯೋಜನೆಯು ನೆರವೇರಿ ದ್ದಲ್ಲಿ, ಮೈಸೂರು ರಾಜ್ಯದ ಪ್ರಜೆಗಳ ಆರ್ಥಿಕ ಸ್ಥಿತಿಯೂ, ಜೀವನದ ಅಂತಸ್ತೂ, ನಿರ್ದಿಷ್ಟವಾಗಿ ಉತ್ತಮಗೊಳ್ಳುತ್ತದೆ. ಇನ್ನು ಮುಂದೆ ಕನಿಷ್ಠ ಪಕ್ಷ ಹತ್ತು ಅಥವಾ ಹದಿನೈದು ವರ್ಷಗಳು ಕಳೆಯುವವರೆಗೂ, ನಾವು ಪ್ರಗತಿಪರವಾದ ಕೆಲವು ಪಾಶ್ಚಾತ್ಯ ದೇಶಗಳ ಸ್ಥಿತಿಗಳಿಗೆ ಹೋಲಿಸಬಹುದಾದ ಮಟ್ಟಿನ ಪುರೋಭಿವೃದ್ಧಿ ಯನ್ನು ಪಡೆಯಬಹುದು. ಸಾಧ್ಯವಾದಷ್ಟು ಸತತವಾಗಿ ಶ್ರಮಿಸಿ ಅಭ್ಯುದಯ ಸಾಧನೆ ಮಾಡಬೇಕಾಗಿದೆ. ಅದಕ್ಕೆ ಸಹಕಾರ ಪ್ರಯತ್ನಗಳೂ, ಶಿಸ್ತಿನ ದುಡಿಮೆಯೂ ನಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬೇಕೆಂಬ ದೀಕ್ಷಾಬದ್ಧವಾದ ಸ್ಥಿತಿ ಪ್ರಯತ್ನವೂ ಅವಶ್ಯಕ. ಮುಂದಿನ ವರ್ಷಗಳಲ್ಲಿ ದೇಶೋನ್ನತಿ ಸಾಧನೆಯ ಸೋಪಾನ ಮಾರ್ಗದಲ್ಲಿ ನಾವು ನಿರಂತರವೂ ಮೇಲ್ಮಟ್ಟಕ್ಕೇರುವಂತೆ ಕೃಪಾಳುವಾದ ಭಗವಂತನು ಅನುಗ್ರಹಿಸಲೆಂಬುದೇ ನನ್ನ ಪ್ರಾರ್ಥನೆ.

– ಜೈಹಿಂದ್ –

ಲೇಖಕರು : **ಕೆ. ಚಂಗಲರಾಯರೆಡ್ಡಿ,** ಬಿ.ಎ., ಬಿ.ಎಲ್.,

ಮುಖ್ಯಮಂತ್ರಿ

ಮೈಸೂರು ರಾಜ್ಯ

5. ನೀರಾವರಿ ಯೋಜನೆಗಳು

ಸ್ವತಂತ್ರ ಮೈಸೂರು ರಾಜ್ಯ ನೀರಾವರಿಗೆ ಸಂಬಂಧಿಸಿದಂತೆ ಹೆಚ್ಚಿನ ಅನುಕೂಲಗಳನ್ನು ಹೊಂದಿದೆ. ಅಂದರೆ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಕೃಷ್ಣಾನದಿ, ತುಂಗಭದ್ರಾನದಿ, ಕಾವೇರಿ ನದಿಗಳಂತಹ ದೊಡ್ಡ ನದಿಗಳಿವೆ. ಈ ದೊಡ್ಡ ನದಿಗಳಿಗೆ ಸೇರುವ ಅನೇಕ ಉಪನದಿಗಳೂ ಮೈಸೂರು ರಾಜ್ಯದಲ್ಲಿವೆ. ಇದರ ಜೊತೆ ಅನೇಕ ಜಲಾಶಯಗಳನ್ನು ಸಹ ನೀರಾವರಿಯನ್ನು ಅಭಿವೃದ್ಧಿಗೊಳಿಸಲು ಬಳಸಿಕೊಳ್ಳಲಾಯಿತು. ಆರಂಭದಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಸರ್ಕಾರ "ಮೂರು ವರ್ಷಗಳ ಯೋಜನೆ"ಗಳನ್ನು ರೂಪಿಸಿ, ಆನಂತರದಲ್ಲಿ ಕೇಂದ್ರ ಸರ್ಕಾರ ಇಡೀ ಭಾರತಕ್ಕೆ ಅನ್ವಯಿಸುವಂತೆ ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ಎಲ್ಲ ರಾಜ್ಯಗಳಿಗೆ ತಿಳಿಸಿತು. ಅದರಂತೆ ಮೈಸೂರು ರಾಜ್ಯದ ಸರ್ಕಾರವು ಕೂಡ ಕೇಂದ್ರ ಸರ್ಕಾರದ ಅಣತಿಯಂತೆ ತನ್ನ ಮೊದಲ ಯೋಜನೆಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ, ಪರಿಷ್ಕರಿಸಿ ರಾಜ್ಯಕ್ಕೆ 'ಪಂಚವಾರ್ಷಿಕ ಯೋಜನೆ'ಯನ್ನು ರೂಪಿಸಲಾಯಿತು, (1951–1956)

ಒಟ್ಟು 22,000 ಎಕರೆಗಳಿಗೆ ನೀರಾವರಿಯಾಗುವಂತೆ 18 ದೊಡ್ಡ ಜಲಾಶಯಗಳನ್ನು ನಿರ್ಮಿಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಅದರಂತೆ ಈ ಯೋಜನೆಯಲ್ಲಿ ನೀರಾವರಿಗೆ ಮೂರು ರೀತಿಯಾಗಿ ವರ್ಗೀಕರಿಸಲಾಯಿತು. ಅಂದರೆ ದೊಡ್ಡ ಯೋಜನೆಗಳಿಗೆ 5 ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚ, ಮಧ್ಯಮ ಯೋಜನೆಗಳಿಗೆ 10 ಲಕ್ಷ ರೂಪಾಯಿಯಿಂದ 5 ಕೋಟಿ ರೂಪಾಯಿಗಳವರೆಗಿನ ವೆಚ್ಚ, ಸಣ್ಣ ನೀರಾವರಿ ಕಾಮಗಾರಿಗಳಿಗೆ 10 ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಕಡಮೆ ವೆಚ್ಚದವು. ಈ ಮೂರು ವರ್ಗಗಳಿಗೆ ಸೇರಿದ ಅನೇಕ ಯೋಜನೆಗಳು ಪ್ರಗತಿಯಲ್ಲಿತ್ತು.

ಈ ಯೋಜನೆಗಳ ಜೊತೆಗೆ ಹೊಸಪೇಟೆಯ ತುಂಗಭದ್ರಾ ಯೋಜನೆ, ಬೆಳಗಾಂ ಜಿಲ್ಲೆಯ ಘಟಪ್ರಭಾ ಯೋಜನೆ, ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಜಲಾಶಯ ಯೋಜನೆ, ಶಿವಮೊಗ್ಗ ಜಿಲ್ಲೆಯ ತುಂಗಾಅಣೆಕಟ್ಟು ಯೋಜನೆ ಮತ್ತು ಮೈಸೂರು ಜಿಲ್ಲೆಯ ನುಗು ಜಲಾಶಯ ಯೋಜನೆಗಳು ಸೇರಿದ್ದು, ಈ ಯೋಜನೆಗಳಿಗೆ ಮೊದಲ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ 1,609,64 ಲಕ್ಷ ರೂಪಾಯಿಗಳನು ಒದಗಿಸಲಾಗಿತ್ತು.

ಭದ್ರಾ ಜಲಾಶಯ, ತುಂಗಾ ಅಣೆಕಟ್ಟು, ನುಗು ಜಲಾಶಯ, ತುಪ್ಪದ ಹಳ್ಳಿಕೆರೆ. ಗಾಡಿಯಾಕುಂಟೆ ಕೆರೆ, ಸಂಗೇನಹಳ್ಳಿ ಕೆರೆ, ವಿಶ್ವೇಶ್ವರಯ್ಯ ನಾಲೆ ಉಪನಾಲೆಗಳ ವಿಸ್ತರಣೆ, ಉಯ್ಯನಹಳ್ಳಿ ಅಣೆಕಟ್ಟು, ಇರ್ಕಸಂದ್ರ ಕೆರೆ, ಹೊನ್ನೆಮಾಚನಹಳ್ಳಿ ಕೆರೆ, ನೆಲ್ಲಿಗುಡ್ಡ ಕೆರೆ, ಕಣ್ವ ಜಲಾಶಯ. ಮುತ್ತುಗದೂರು ಕೆರೆ. ಪರಶುರಾಮಪುರ ಕೆರೆ, ಕೃಷ್ಣರಾಜಸಾಗರ ಕಾಮಗಾರಿಯು, ದುಮ್ಮಸಂದ್ರ ಅಣೆಕಟ್ಟು, ಬೈರಮಂಗಲಕ್ಕೆ ರಕ್ಷಣಾ ಕಾಮಗಾರಿಗಳು. ಕೀಲಾರ "ಪಿಕ್-ಅಪ್"ಅನ್ನು ಉತ್ತಮಗೊಳಿಸುವುದು, ಮಾರ್ಕೋನಹಳ್ಳಿ ಬಲದಡದ ನಾಲೆಗಳ ಯೋಜನೆಗಳ ಜೊತೆಗೆ, ಹೊಸ ಯೋಜನೆಗಳನ್ನು ಸಹ ರೂಪಿಸಲಾಯಿತು. ಅದರಂತೆ ಅಂಬಳಿಗೋಳ ಜಲಾಶಯ, ಮಂಗಳ ಕೆರೆ, ಕೆಂಚನ ಕೆರೆ. ನಾರಣಪುರ ಅಣೆಕಟ್ಟು (ವೇದಾವತಿ ನದಿ), ಕರಿಯಾಳ ಕೆರೆ, ಪೆನ್ನಾರ್ ಕುಮುದ್ವತಿ, ಶ್ರೀನಿವಾಸ ಸಾಗರ ಕಾಮಗಾರಿ, ಸೊಣ್ಣಾಯಕನಹಳ್ಳಿ ಕೆರೆ, ತಿರುವಣಿ ಅಣೆಕಟ್ಟು ಕಾಮಗಾರಿ, ಬೋಳೆನಹಳ್ಳಿ ಅಣೆಕಟ್ಟು, ಜೋಡಿ ಆಲಪ್ಪನಹಳ್ಳಿ ಕೆರೆ, ಚೆಲ್ಲಘಟ್ಟದ ಬಳಿಯ ಹೊಸಕೆರೆ, ಬೆಳಗುಂಬದ ಹೊಸಕೆರೆ, ಸಣಬ ಕೆರೆಯ ಎಡದಡದ ನಾಲೆ, ಸುವರ್ಣಮುಖಿ ಅಣೆಕಟ್ಟು, ನವಲೂರು ಕೆರೆಯ ಫೀಡರ್ ನಾಲೆ, ತುಂಗಭದ್ರಾ ಜಲಾಶಯ ಯೋಜನೆ ಇತ್ಯಾದಿಗಳು. ಈ ರೀತಿ ಹೆಚ್ಚು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ ಮೂಲಕ ರಾಜ್ಯದ ಜನರ ಆಹಾರ ಸಮಸ್ಯೆಯನ್ನು ನೀಗಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು.

ಪ್ರಕಟಣೆ : ಕೆ.ಸಿ. ರೆಡ್ಡಿ ಸರ್ಕಾರ

6. 'ಡಾಕ್ಟರ್ ಆಫ್ ಲಾಸ್' ಪ್ರಶಸ್ತಿ

ಕೆ.ಸಿ. ರೆಡ್ಡಿಯವರಿಗೆ 'ಡಾಕ್ಟರ್ ಆಫ್ ಲಾಸ್' ಗೌರವ ಪ್ರಶಸ್ತಿ ನೀಡಲಾಯಿತು. (02 ಅಕ್ಟೋಬರ್ 1960), ಮೈಸೂರು ವಿಶ್ವವಿದ್ಯಾನಿಲಯದ 41ನೇ ಘಟಿಕೋತ್ಸವದಲ್ಲಿ ಕೆ.ಸಿ. ರೆಡ್ಡಿ (ಕೇಂದ್ರ ಸಚಿವರು)ಯವರಿಗೆ ಗೌರವ ಪದವಿ ನೀಡಿ ಗೌರವಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಜಯಚಾಮರಾಜ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಕ್ರಾಫರ್ಡ್ ಹಾಲ್‌ನಲ್ಲಿ ಸಮಾವೇಶಗೊಂಡಿದ್ದ ವಿಶ್ವವಿದ್ಯಾನಿಲಯದ 41ನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರಥಮ ಮುಖ್ಯಮಂತ್ರಿ, ಕೇಂದ್ರ ಸಚಿವರು, ಕೆ.ಸಿ. ರೆಡ್ಡಿ ಅವರಿಗೆ 'ಡಾಕ್ಟರ್ ಆಫ್ ಲಾಸ್' ಗೌರವ ಪದವಿಯನ್ನು ನೀಡಿ ಗೌರವಿಸಲಾಯಿತು. ರಾಜ್ಯದ ಶಿಕ್ಷಣ ಸಚಿವರು ಹಾಗೂ ವಿಶ್ವವಿದ್ಯಾನಿಲಯದ ಪ್ರೊ. ಚಾನ್ಸಲರ್‌ರವರು ಆಗಿರುವ ಶ್ರೀ ಅಣ್ಣಾರಾವ್ ಗಣಮುಖಿ ಭಾಷಣ ಮಾಡಿದರು. ಗೌರವ ಪದವಿ 'ಡಾಕ್ಟರ್ ಆಫ್ ಲಾಸ್' ಪದವಿ ಪಡೆದು ಮಾತನಾಡಿದ ಗೌರವಾನ್ವಿತ ಕೆ.ಸಿ. ರೆಡ್ಡಿ ಅವರು "ಮಹಾತ್ಮಗಾಂಧಿ ಅವರ ಜನ್ಮ ದಿನವಾದ ಈ ದಿನ ಮಹತ್ವವಾದ ದಿನವೆಂದೂ, ಇಂತಹ ಸಂದರ್ಭಗಳಲ್ಲಿ ಅವರ ಉಪದೇಶಗಳನ್ನು ಸ್ಮರಿಸಿ ಕಾರ್ಯಗತ ಮಾಡುವುದು ಅಗತ್ಯವಾಗಿದೆಯೆಂದು ನುಡಿದರು". ಕುಲಪತಿ ಶ್ರೀ ಜಯಚಾಮರಾಜ ಒಡೆಯರ್, ಪ್ರೊ. ಚಾನ್ಸಲರ್ ಶ್ರೀ ಅಣ್ಣಾರಾವ್ ಗಣಮುಖಿ, ಉಪಕುಲಪತಿ ಶ್ರೀ ಎನ್.ಎ. ನಿಕ್ಕಂ ಹಾಗೂ ಇತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ದಿನಾಂಕ : 03–10–1960

7. ಕೆ. ಚಂಗಲರಾಯರೆಡ್ಡಿ

ಸಾವಿರದ ಒಂಭೈನೂರ ಮೂವತ್ತೇಳನೇ ಅಕ್ಟೋಬರ್ ಹದಿನಾರು. ಈ ದಿನವನ್ನು ಮೈಸೂರು ಕಾಂಗ್ರೆಸ್ಸಿನ ಮುಂದಾಳುಗಳಾಗಲೀ, ಕೆಲಸಗಾರರಾಗಲೀ ಅಥವಾ ಅಭಿಮಾನಿಗಳಾಗಲೀ ಮರೆಯುವುದುಂಟೆ? ಮೈಸೂರು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಅದೊಂದು ಚಿರಸ್ಮರಣೀಯವಾದ ದಿನ. ಮೈಸೂರು ಕಾಂಗ್ರೆಸ್ಸಿನ ಭವ್ಯ ಭವನದ ಗೋಪುರಕ್ಕೆ ಕೀರ್ತಿಯ ಕಲಶವನ್ನಿಟ್ಟ ದಿನ. ಆಗ ಮೈಸೂರು ಕಾಂಗ್ರೆಸ್ಸನ್ನು ಉರುಳಿಸಬಲ್ಲ ಬಲವಾದ ರಾಜಕೀಯ ಸಂಸ್ಥೆಯೊಂದು ಮೈಸೂರಿನಲ್ಲಿ ಬೆಳಗುತ್ತಿತ್ತು. ಮೈಸೂರಿನ ಮಹಾ ಮುಖಂಡರುಗಳು ಪ್ರಜಾ ಸಂಯುಕ್ತ ಸಂಸ್ಥೆಯೆಂಬ, ಆ ಸಂಸ್ಥೆಯಲ್ಲಿ ಸೇರಿ ಮೈಸೂರು ಸರ್ಕಾರವನ್ನೂ ಸಹ ಬೆದರಿಸುತ್ತಿದ್ದರು.

ಈ ಪ್ರಚಂಡ ರಾಜಕೀಯ ಸಂಸ್ಥೆಯನ್ನು ಪ್ರತಿಭಟಿಸಿ ಚುನಾವಣೆಗೆ ನಿಲ್ಲಿಸಬೇಕಾದ ಸಂದರ್ಭ ಮೈಸೂರು ಕಾಂಗ್ರೆಸ್ಸಿಗೆ ಬಂತು. ಮೈಸೂರು ಕಾಂಗ್ರೆಸ್ಸಿಗೆ ಆಗ ಇನ್ನೂ ಬಾಲ್ಯಾವಸ್ಥೆ. ಚುನಾವಣೆಯಲ್ಲಿ ಬಹುಭಾಗ ಪ್ರಜಾ ಸಂಯುಕ್ತ ಸಂಸ್ಥೆಯೇ ಜಯಶೀಲವಾಯಿತು. ಸತ್ಯ, ಅಹಿಂಸೆಗಳ ಅಸ್ತಿಬಾರದ ಮೇಲೆ ಬೆಳೆಯಲಾರಂಭಿಸಿದ್ದ ಮೈಸೂರು ಕಾಂಗ್ರೆಸ್ಸಿಗೆ ಇದೊಂದು ಮಹಾ ಸಮಸ್ಯೆಯಾಗಿ ಪರಿಣಮಿಸಿತು. ಮೈಸೂರು ಜನತೆಗೆ ಪ್ರಜಾ ಸಂಯುಕ್ತ ಸಂಸ್ಥೆಯಲ್ಲಿದ್ದ ಮುಖಂಡರ ಮೇಲೆ ಹೆಚ್ಚು ಮಮತೆ, ವಿಶ್ವಾಸಗಳಿತ್ತೇ ಹೊರತು, ಮೈಸೂರು ಕಾಂಗ್ರೆಸ್ ಮುಂದಾಳುಗಳ ಮೇಲಲ್ಲ. ಈ ಎರಡು ಸಂಸ್ಥೆಗಳ ಧ್ಯೇಯ ಸಾಧನೆಗಳು ಒಂದೇ ಆಗಿದ್ದರೂ ಸಹ ಎರಡೂ ಮಿಲನವಾಗುವಂತಿರಲಿಲ್ಲ. ಅಂತಹ ಸಂದಿಗ್ಧ ಸಮಯದಲ್ಲಿ ಈ ಎರಡು ಪಕ್ಷಗಳ ಏಕೀಕರಣಕ್ಕೆ ಅವಿಶ್ರಾಂತವಾಗಿ ದುಡಿದ ಮಹಾವ್ಯಕ್ತಿಯೆಂದರೆ ಕ್ಯಾಸಂಬಳ್ಳಿಯ ಚಂಗಲರಾಯರೆಡ್ಡಿಯವರು. ಇವರು ಮಾಡಿದ ಈ ಮಹತ್ಕಾರ್ಯಕ್ಕೆ ಮೈಸೂರು ಕಾಂಗ್ರೆಸ್ ಚಿರಋಣಿಯಾಗಿದೆ.

ಅನೇಕ ಮಹನೀಯರುಗಳು ಈ ಏಕೀಕರಣ ಕಾರ್ಯಕ್ಕೆ ಕೈ ಹಾಕಿದ್ದರೂ ಸಹ ಅವರು ಜಯಶೀಲರಾಗಿರಲಿಲ್ಲ. ಎರಡು ಪಂಗಡಗಳಲ್ಲೂ ಪೂರ್ಣ ವಿಶ್ವಾಸಗಳಿಸಿಕೊಂಡಿದ್ದವರೆಂದರೆ ಚಂಗಲರಾಯರೆಡ್ಡಿಯವರೊಬ್ಬರೆ. ಪ್ರಜಾ ಸಂಯುಕ್ತ ಪಕ್ಷದ ಅಧ್ಯಕ್ಷರಾಗಿದ್ದರೂ ಸಹ ಅವರ ಹೃದಯ, ಮನಸ್ಸು ಕಾಂಗ್ರೆಸ್ಸಿನ ಕಡೆಯೇ ಇತ್ತು. ಆದ್ದರಿಂದಲೇ ಅವರು ಬಹು ಶ್ರಮಪಟ್ಟು 1937ನೇ ಅಕ್ಟೋಬರ್ 16ರಂದು ಪ್ರಜಾ ಸಂಯುಕ್ತ ಸಂಸ್ಥೆಯನ್ನು ಮೈಸೂರು ಕಾಂಗ್ರೆಸ್ಸಿನೊಂದಿಗೆ ಬೆರೆಸಿ ಮೈಸೂರು ಕಾಂಗ್ರೆಸ್ಸಿನ ಉನ್ನತಿಗೆ ಕಾರಣಭೂತರಾದರು.

ಸೇವಾವೃತ್ತಿ ರಕ್ತಗತವಾಗಿತ್ತು

ರೆಡ್ಡಿಯವರು ಹುಟ್ಟಿದ್ದು 1902ನೇ ಮೇ ತಿಂಗಳು 5ರಲ್ಲಿ. ಅವರ ಜನ್ಮಸ್ಥಳ ಬೌರಿಂಗ್‌ಪೇಟೆ (ಬಂಗಾರಪೇಟೆ) ತಾಲ್ಲೂಕು ಕ್ಯಾಸಂಬಳ್ಳಿ. ರೆಡ್ಡಿಯವರಲ್ಲಿ ಇಂದು ಕಂಡು ಬರುವ ಸುಗುಣಗಳೂ, ಉದಾತ್ತ ಧ್ಯೇಯಗಳೂ, ಬಾಲ್ಯದಿಂದ ಅವರಲ್ಲಿ ಬೆಳೆದು ಬಂದವುಗಳು. 1918ನೇ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. 1924ರಲ್ಲಿ ಮದ್ರಾಸ್ ಪಚಿಯಪ್ಪ ಕಾಲೇಜಿನಲ್ಲಿ ಬಿ.ಎ. ಪರೀಕ್ಷೆಯನ್ನು ಇತ್ತು, ರಾಜಾ ರಾಮಸ್ವಾಮಿ ಮೊದಲಿಯಾರ್‌ರವರ ಸುವರ್ಣ ಪದಕವನ್ನು ಪಡೆದರು. 1926ರಲ್ಲಿ ಬಿ.ಎಲ್. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆದರೆ ವಕೀಲ ವೃತ್ತಿಯನ್ನು ಮಾಡಲು ಇಷ್ಟಪಡಲಿಲ್ಲ. ಪ್ರಜಾ ಸೇವಕಾಂಕ್ಷಿಗಳಾದ ರೆಡ್ಡಿಯವರು 1928ರಲ್ಲಿ ರಾಜಕೀಯ ರಂಗಕ್ಕೆ ಧುಮುಕಿದರು. ರಾಜಕೀಯಕ್ಕೆ ಕಾಲಿಟ್ಟಾಗ ಅವರಿಗಿನ್ನೂ 26 ವರ್ಷ ವಯಸ್ಸು.

ರೆಡ್ಡಿಯವರು ರಾಜಕೀಯಕ್ಕೆ ಕಾಲಿಡುವ ಮುನ್ನ ರಾಜಕೀಯವಲ್ಲದ ಸಂಸ್ಥೆಗಳಲ್ಲಿ ಸೇವೆ ನಡೆಸಿದ್ದಾರೆ. ಮದರಾಸಿನಲ್ಲಿ ಓದುತ್ತಿದ್ದ ವೇಳೆ ವಿದ್ಯಾರ್ಥಿಗಳಲ್ಲಿ ಉತ್ಸಾಹ ತುಂಬಿ ಒಂದು ಯುವಜನ ಸಂಘವನ್ನು ಸ್ಥಾಪಿಸಿದರು. ಆ ಸಂಘಕ್ಕೆ ಇವರನ್ನೇ ಕಾರ್ಯದರ್ಶಿಗಳ ನ್ನಾಗಿ ನೇಮಿಸಲಾಗಿತ್ತು. ತಮ್ಮ ವಾಸಸ್ಥಳಕ್ಕೆ ಬಂದ ಮೇಲೆ ಅನೇಕಾನೇಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಹಿಂದೀ ಪ್ರಚಾರ ಸಭೆ, ಅಡಮಾನದ ಬ್ಯಾಂಕ್ ಮುಂತಾದವುಗಳ ಅಧ್ಯಕ್ಷರಾಗಿಯೂ ಇದ್ದರು. ರೆಡ್ಡಿಯವರಿಗೆ ಸಾರ್ವಜನಿಕ ಸೇವೆಯು ರಕ್ತಗತವಾಗಿ ಬಂದು ದೆಂದು ಹೇಳಬೇಕು. 1928ರಿಂದ ಇದುವರೆವಿಗೂ ಅವರು ಅನೇಕಾನೇಕ ಮಹತ್ಕಾರ್ಯ ಗಳನ್ನು ಮಾಡಿದ್ದಾರೆ.

ರೆಡ್ಡಿಯವರದು ಮೈಯಲ್ಲಾ ಕಣ್ಣು, ತೂಕ ತಪ್ಪುವುದು ಕಡಮೆ. ಇವರ ವರೆಗಲ್ಲು ಬಹುನಿಖರ. ಅಕ್ಕಸಾಲಿಗನ ಕೈವಾಡವಿದ್ದಂತೆ. ಹಿಡಿದ ಕೆಲಸವನ್ನು ಮಾಡಬೇಕೆಂಬ ಹಟ ವಿದ್ದರೂ ಅನೇಕ ವೇಳೆ ಅದನ್ನು ಸಡಿಲಿಸಿಕೊಂಡು ಹೋಗುವ ಪದ್ಧತಿ. ಅವಶ್ಯಕವಿದ್ದಾಗ ಕಾಯಕ್ಲೇಶವನ್ನೂ ಸಹ ಲೆಕ್ಕಿಸದೆ ಕೆಲಸ ಮಾಡುತ್ತಾರೆ. ಎಲ್ಲರೊಡನೆ ಹೊಂದಿಕೊಂಡು ಕೆಲಸ ತೆಗೆದುಕೊಳ್ಳುವ ಸಾಮರ್ಥ್ಯ ಚೆನ್ನಾಗಿದೆ. ವ್ಯವಹಾರ ಕುಶಲ ರಾಗಿರುವಂತೆ ರೆಡ್ಡಿ ಅವರು ಸಂಘ ಮತ್ತು ಸಮಾಜ ಸೇವಾ ಕುಶಲರಾಗಿದ್ದಾರೆ. ಇವರದು ಬಹು ಮೃದುಹೃದಯ. ಕಷ್ಟಪಡುವವರನ್ನು ಕಂಡರೆ ಬಿಸಿಲನ್ನು ಕಂಡ ಮಂಜಿನಂತೆ ಕರಗಿ ಹೋಗುತ್ತಾರೆ. ಇದನ್ನು ಕಂಡು ಕೂಲಿಕಾರರೂ, ಕಾಂಗ್ರೆಸ್ ಕೆಲಸಗಾರನೇಕರೂ ಸಹಾಯಕ್ಕಾಗಿ ಇವರನ್ನು ಮುತ್ತುತ್ತಿರುತ್ತಾರೆ. ಆ ರೀತಿ ಬಂದವರನ್ನು ಬರಿಗೈಯಲ್ಲಿ ಕಳುಹಿಸುವುದೇ ಇಲ್ಲ. ಸ್ಥಾನಬದ್ಧತೆ ಯಿಂದ ಜೈಲು ಒಳಗಡೆಯಿದ್ದರೂ ಇವರ ಕೊಡುಗೈ ಕೆಳಗೆ ಇಳಿದಿರಲಿಲ್ಲ.

ಅಪ್ರತಿಮ ರಾಜಕಾರಣ ಪಟು

ಒಮ್ಮೆ ನಾನು ಮುಖಂಡರೊಬ್ಬರೊಡನೆ ಮಾತನಾಡುತ್ತಿದ್ದ ವೇಳೆ ಅವರು ರೆಡ್ಡಿಯವರ ವಿಷಯ ಹೇಳುತ್ತಾ, "ಅವರು ಕೋಲಾರ ಜಿಲ್ಲೆಯಲ್ಲಿ ಮುಕುಟರಹಿತ ಮಹಾರಾಜ ರಂತಿದ್ದರು" ಎಂದರು. ಈ ರೀತಿ ಅವರು ಹೇಳಿದುದು ಅಕ್ಷರಶಃ ನಿಜವಾದ ಮಾತು. ಕೋಲಾರ ಜಿಲ್ಲೆಯ ಯಾವ ಮೂಲೆಯಲ್ಲಿ ಬೇಕಾದರೂ ಇವರ ಪ್ರಶಂಸೆಯನ್ನು ಕೇಳಬಹುದಾಗಿದೆ. 1933 ರಿಂದ 1936ರವರೆಗೆ ಒಂದೇ ಸಮವಾಗಿ ಸರ್ವ ಸಮ್ಮತದಿಂದ ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಆರಿಸಿಬಂದುದೂ, 1930ನೇ ವರ್ಷದಿಂದ 1937ನೇ ವರ್ಷದ ವರೆವಿಗೆ ನ್ಯಾಯವಿಧಾಯಕ ಸಭಾ ಸದಸ್ಯರಾಗಿ ಆರಿಸಿಬಂದುದೂ ಮತ್ತು ಅದೇ ವರ್ಷಗಳಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಆರಿಸಿ ಬಂದುದೂ ಇವರ ಬಗ್ಗೆ ಜಿಲ್ಲೆಯ ಜನರಿಗೆ ಇರುವ ಅಭಿಮಾನ, ಅಕ್ಕರೆಗಳನ್ನು ತೋರಿಸುತ್ತದೆ.

ರೆಡ್ಡಿಯವರು ಅದ್ಭುತ ಮೇಧಾವಿಗಳು. ಅವರ ಸ್ವಾತಂತ್ರ್ಯ ಪ್ರೀತಿ ಬಹಳ ದೃಢವಾದದ್ದು. ಅದು ಅವರ ಹುಟ್ಟುಗುಣ. ಶಾಸನಸಭೆಗಳಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ ಅವರು ಅನುಸರಿಸಿದ ನೀತಿ, ನಡೆಯಿಸಿದ ಕಾರ್ಯಗಳೇ ಅವಕ್ಕೆ ಸಾಕ್ಷಿ. ನಮ್ಮ ನಾಡಿನ ನಾಯಕರಲ್ಲಿ ರೆಡ್ಡಿಯವ ರಂತಹ ರಾಜ್ಯಾಡಳಿತ ವಿಮರ್ಶಕರೂ, ತಾರ್ಕಿಕರೂ, ಅದನ್ನೇ ಪ್ರಮುಖ ಉದ್ಯೋಗವನ್ನಾಗಿ ಮಾಡಿಕೊಂಡು, ಸಂಪೂರ್ಣವಾಗಿ ಮನನ ಮಾಡಿ ಕೊಂಡವರೂ ಯಾರೂ ಇಲ್ಲ. ಇದು ನಿರ್ವಿವಾದವಾದ ವಿಚಾರ.

ಕೋಲಾರದ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಜಿಲ್ಲೆಯ ಉನ್ನತಿಗಾಗಿ ಇವರು ನಡೆಯಿಸಿರುವ ಕಾರ್ಯಗಳೂ, ಶಾಸನ ಸಭೆಗಳಲ್ಲಿ ಹೊಡೆದಾಡಿ ಜನರಿಗೆ ದೊರಕಿಸಿ ಕೊಟ್ಟಿರುವ ಸೌಲಭ್ಯಗಳೂ, ಕೋಲಾರ ಜಿಲ್ಲೆಯ ಪ್ರಜೆಗಳಲ್ಲಿ ರೆಡ್ಡಿಯವರ ಬಗ್ಗೆ ಅಪ್ರತಿಮವಾದ ಗೌರವ, ನಂಬಿಕೆಗಳನ್ನು ಬೆಳೆಯಿಸಿವೆ. ಅಂದಿನಿಂದಲೂ ರೆಡ್ಡಿಯವರಲ್ಲಿ ಇರುವ ಪ್ರೀತಿ, ವಿಶ್ವಾಸಗಳು ಅಚ್ಚಳಿಯದೆ ಅವಿಚ್ಛಿನ್ನವಾಗಿ ನಿಂತಿವೆ. ಸಾರ್ವಜನಿಕ ಸೇವೆಗಾಗಿ ಕಂಕಣ ತೊಟ್ಟಂದಿನಿಂದ ಇವರು ಅನೇಕಾನೇಕ ಸಮ್ಮೇಳನಗಳಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಲೆಕ್ಕವಿಲ್ಲದಷ್ಟು ಉಪಸಮಿತಿಗಳ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವುಗಳನ್ನೆಲ್ಲಾ ಬರೆಯ ಬೇಕಾದರೆ ಅದೊಂದು ದೊಡ್ಡ ಪಟ್ಟಿಯೇ ಆಗುತ್ತದೆ. ಆದ್ದರಿಂದ ಅವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ತಿಳಿಸಲು ಇಚ್ಛಿಸುತ್ತೇನೆ.

1932ರಲ್ಲಿ ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಯ ರೈತರ ಸಮ್ಮೇಳನಗಳನ್ನೂ, 1935ರಲ್ಲಿ ಪ್ರಜಾ ಸಂಯುಕ್ತ ಸಂಸ್ಥೆಯ ಅಧಿವೇಶನದಲ್ಲೂ, ಅದೇ ವರ್ಷ ಒಕ್ಕಲಿಗರ ಸಮ್ಮೇಳನದಲ್ಲೂ, 1938ರಲ್ಲಿ ಚಿತ್ರದುರ್ಗದಲ್ಲಿ ನಡೆದ ಕಾಂಗ್ರೆಸ್ ಬೋರ್ಡ್ ಸಮ್ಮೇಳನ ದಲ್ಲೂ ಅಧ್ಯಕ್ಷ ಸ್ಥಾನವನ್ನು ವಹಿಸಿ ಉಜ್ವಲ ಭಾಷಣಗಳನ್ನು ಮಾಡಿದ್ದಾರೆ. ರೆಡ್ಡಿಯವರು ಅಪ್ರತಿಮ ರಾಜಕಾರಣಪಟುಗಳೆಂಬುದಕ್ಕೆ 1930–35ರವರೆವಿಗೂ "ಪ್ರಜಾ ಪಕ್ಷದ" ಕಾರ್ಯಕಾರಿ ಮಂಡಳಿಯ ಪ್ರಮುಖ ಸದಸ್ಯರಾಗಿದ್ದುದೂ, 1935–37ರವರೆವಿಗೆ "ಪ್ರಜಾ ಸಂಯುಕ್ತ"ಸಂಸ್ಥೆಯ

ಅಧ್ಯಕ್ಷರಾಗಿಯೂ, 1937–38ರವರೆವಿಗೆ ಮೈಸೂರು ಕಾಂಗ್ರೆಸ್ ಬೋರ್ಡಿನ ಅಧ್ಯಕ್ಷರಾಗಿದ್ದುದೂ. 1938–40ರವರೆಪಿಗೆ ಎರಡು ವರ್ಷಗಳ ಕಾಲ ಮೈಸೂರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿದ್ದುದೂ, ತರುವಾಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದುದೂ ಸಾಕ್ಷಿಗಳಾಗಿವೆ.

ಮಂತ್ರಿಮಂಡಲದಲ್ಲಿ ಇರಬಹುದಿತ್ತು

ರೆಡ್ಡಿಯವರು ಪಂಡಿತ ಜವಾಹರಲಾಲರಂತೆ ಆಗರ್ಭ ಶ್ರೀಮಂತರಾಗಿ ಜನಿಸಿ ಸುಮಾರು 25 ವರ್ಷಗಳ ಪರ್ಯಂತ ಅಪರಿಮಿತ ಸುಖಭೋಗ, ಭಾಗ್ಯಗಳ ನಡುವೆ ಬೆಳೆದವರಾದರೂ. ರಾಷ್ಟ್ರಸೇವೆಗಾಗಿ ಒಮ್ಮೆಲೆ ಅವುಗಳನ್ನು ಬದಿಗೊತ್ತಿ ಬಡತನದ ಜೀವನವನ್ನು ಅಪ್ಪಿದರು. ಬಡ ಬೋರೇಗೌಡನ ಉನ್ನತಿಗಾಗಿ ದುಡಿಯಲು ನಿಂತರು. ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಇವರು ಮುಂದೆ ಬಂದಿರುವುದು, ಅನ್ಯರ ಅಪೇಕ್ಷೆಯಿಂದಾಗಲೀ ಅಥವಾ ಸ್ವಾರ್ಥ ಸಾಧನೆಗಳಾಗಲೀ ಅಲ್ಲ; ಸ್ವಂತ ಇಚ್ಛೆಯಿಂದ, ಅವರ ಹೃದಯದಲ್ಲಿ ಮನೆ ಮಾಡಿಕೊಂಡಿರುವ ಸ್ವಾತಂತ್ರ್ಯಾಭಿಲಾಷೆಯಿಂದ. ಅದಕ್ಕಾಗಿ ತನು, ಮನ, ಧನಗಳನ್ನೂ ಸಹ ಅರ್ಪಿಸಲು ಸಿದ್ಧರಾಗಿ ಸ್ವಾತಂತ್ರ್ಯ ಸಾಧನೆಯ ರಂಗಕ್ಕೆ ಧುಮುಕಿದ್ದಾರೆ.

ರೆಡ್ಡಿಯವರು ಇಂದಿನ ಹಾದಿಯನ್ನು ತುಳಿಯದೆ, ಕೊಂಚ ಮನಸ್ಸು ಮಾಡಿದ್ದರೆ ಈ ವೇಳೆಗೆ ಮೈಸೂರಿನ ಮಂತ್ರಿಮಂಡಲದಲ್ಲಿ ಇರಬಹುದಾಗಿತ್ತು. ಬರೀ ಮಂತ್ರಿಮಂಡಲ ದಲ್ಲಿರುವುದೇನು, ಮೈಸೂರಿನ ಮುಖ್ಯಮಂತ್ರಿ – ದಿವಾನರಾಗಿರಬಹುದಾಗಿತ್ತು. ಇವರ ಬಂಧುಗಳು; ಮಿತ್ರರನೇಕರು ಈ ಬಗ್ಗೆ ಕನಸು ಕಾಣುತ್ತಿದ್ದರು. ಆದರೆ ಅವರುಗಳ ಕನಸು ನನಸಾಗಲಿಲ್ಲ. ಇವರಿಗೆ ಮೈಸೂರು ಹೈಕೋರ್ಟುಗಾಳಹಾಕಲು ಕಾದಿತ್ತು. ಇಂತಹಗಾಳಕ್ಕೆ ಸುಲಭವಾಗಿ ಸಿಕ್ಕುವ ಮೀನಲ್ಲವೆಂಬುದನ್ನು ಇವರು ತಮ್ಮ ದೃಢಮನಸ್ಸಿನಿಂದ ಜನತೆಗೆ ತೋರಿಸಿಕೊಟ್ಟರು.

ಚಂಗಲರಾಯರೆಡ್ಡಿಯವರನ್ನು ನೆನಸಿಕೊಂಡೊಡನೆ ಮುಗುಳು ನಗೆಯ ಸುಮಾರು 5 ಅಡಿಯ ಆ ಸುಂದರಮೂರ್ತಿ, ಕಣ್ಣಮುಂದೆ ಬಂದು ನಿಂತಂತಾಗುವುದು. ಅಗಲವಾದ ಹಣೆ, ಮೋಟಾದ ಮೂಗು, ಪುಟ್ಟ ಬಾಯಿ, ತುಂಬಿದ ಗಲ್ಲ, ಎಳೆತನವನ್ನು ತೋರಿಸುವ ಆ ಮುಖ ಮುದ್ದಾಗಿ ಕಾಣುತ್ತದೆ. ಇವುಗಳ ಜೊತೆಗೆ ಅವರ ಅಸಮಾನ ಕಾರ್ಯಶಕ್ತಿ, ಅಪರಿಮಿತ ಉತ್ಸಾಹ, ಬಿಡುವಿಲ್ಲದ ದುಡಿತ ಆ ಬಿಳಿ ಮುಖದಲ್ಲಿ ಸ್ಪಷ್ಟವಾಗಿ ಕಾಣುತ್ತಿರುತ್ತದೆ.

ರೆಡ್ಡಿಯವರ ಬುದ್ಧಿ ಬಹಳ ಚುರುಕು. ಹರಿತ, ಸಾಣೆ ಹಿಡಿದ ಕತ್ತಿಯಂತೆ. ಕಂಡ ಕೂಡಲೇ ಗುಣದೋಷಗಳನ್ನು ಬೇರ್ಪಡಿಸಲು ಇರಬೇಕಾದ ಕಣ್ಣುಗಳು. ವಿಮರ್ಶೆಯಲ್ಲಿ ನಿಷ್ಪಕ್ಷಪಾತವಾಗಿ ನೋಡುವ ವಿವೇಕ. ಬಡತನದ ಬೇಗೆಯನ್ನು ಗ್ರಹಿಸಬಲ್ಲ ಸೂಕ್ಷ್ಮ ಹೃದಯ. ತಮ್ಮ ಸಿದ್ಧಾಂತ ಸಾಧಿಸಲಿಕ್ಕೆ, ಪ್ರತಿಪಕ್ಷವನ್ನು ನಿರುತ್ತರ ಮಾಡಲಿಕ್ಕೆ ಬೇಕಾದ ತರ್ಕಶಕ್ತಿ. ಅದರ ಜೊತೆಗೆ ತರ್ಕಮಾಡಲಿಕ್ಕೆ ಬೇಕಾದ ತಾಳ್ಮೆ ಇವುಗಳ ಮೇಳ ಅವರು. ಚಂಗಲರಾಯರೆಡ್ಡಿಯೆಂದರೆ ಸಾಕು ಮೈಸೂರಿನ ರಾಜಕೀಯವೇ ಮೈದೋರಿಬಂದು

ಮುಂದೆ ನಿಂತಂತಾಗುವುದು. ಅದು ಮೈಸೂರು ರಾಜಕೀಯಕ್ಕೆ ಅವರು ಮಾಡಿರುವ ಸ್ವಾರ್ಥರಹಿತ ಸೇವೆಯೇ ಗುರುತು.

ದೂರದೃಷ್ಟಿ ಸಾಲದೇ

ಇಷ್ಟಾದರೂ ದೂರದೃಷ್ಟಿ ರಹಿತರೆಂಬ ಆಪಾದನೆ ರೆಡ್ಡಿಯವರಿಗೆ ತಪ್ಪಿಲ್ಲ; ಅನೇಕ ವೇಳೆ ಇವರು ಅನ್ಯರ ಮಾತನ್ನು ಕೇಳಿ ವಿವೇಚನಾ ರಹಿತರಂತೆ–ಹುಡುಗರಂತೆ–ವರ್ತಿಸಿರುವುದು ಉಂಟೆಂದು ಅವರ ಆಪ್ತಮಿತ್ರರೊಬ್ಬರು ನನಗೆ ತಿಳಿಸಿದರು. ಇದು ನಿಜವೆಂಬುದಕ್ಕೆ ಒಂದೆರಡು ಕಾರಣಗಳಿದ್ದರೂ ಅವರ ಸ್ವಾರ್ಥರಹಿತ ಸೇವೆಯಲ್ಲಿ ಈ ಪುಟ್ಟ ವಿಚಾರಗಳು ಪ್ರವಾಹದಲ್ಲಿನ ಸಣ್ಣ ಕಡ್ಡಿಯಂತೆ ಕೊಚ್ಚಿ ಹೋಗುತ್ತವೆ ಎಂಬುದು ಎಲ್ಲರಿಗೂ ಮನವರಿಕೆಯಾಗಿದೆ. ಗೊಂದಲ. ಘರ್ಷಣೆಗಳ ಕಾಲದಲ್ಲಿ ತತ್ವವನ್ನೂ ಸಹ ಮರೆತು ಅಂತಹ ಗೊಂದಲ, ಘರ್ಷಣೆಗಳಿಗೆ ಅವಕಾಶ ಕೊಡಬಾರದೆಂದು ಇವರು ವಾದ ಮಾಡುವುದೂ ಉಂಟು.

ರೆಡ್ಡಿಯವರು ಒಂದು ಬಾರಿಯಲ್ಲ ಮೂರು ನಾಲ್ಕು ಬಾರಿ ಅಖಿಲ ಭಾರತವನ್ನೆಲ್ಲಾ ಸುತ್ತಿದ್ದಾರೆ. ಎಲ್ಲಾ ಪ್ರಾಂತ್ಯಗಳ ಜನರ ಪರಿಚಯವಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದ ವೇಳೆ ಅನೇಕ ಮುಖಂಡರ ಮಿತ್ರತ್ವ ಬೆಳೆಯಿಸಿ ಕೊಂಡಿದ್ದಾರೆ.

ರೆಡ್ಡಿಯವರ ಜೀವನದಲ್ಲಿ ಆಡಂಬರವಿಲ್ಲ. ಬಲ್ಲಿಗರ ಮನೆತನದಲ್ಲಿ ಜನಿಸಿದೆನೆಂಬ ಅಹಂಕಾರವಿಲ್ಲ. ಇದ್ದದ್ದರಲ್ಲಿ ತೃಪ್ತಿಪಡಬೇಕೆಂಬುದನ್ನು ಇತರರಿಗೆ ತಿಳಿಸುತ್ತಿರುವಂತೆ ತಾವೂ ಸಹ ಅನುಸರಿಸುತ್ತಿದ್ದಾರೆ. ಇವರ ಉಡುಪು ಸಹ ಕೇವಲ ಸಾಮಾನ್ಯ ಮಟ್ಟದು. ಒಂದು ಪಂಚೆ, ಒಂದು ಷರಟು, ಒಂದು ಬಿಳೀ ಟೋಪಿ, ಇದ್ದರೆ ಹೆಗಲಮೇಲೆ ಒಂದು ಅಂಗವಸ್ತ್ರ ತೀರಿತು ಇವರ ಆಡಂಬರ. "ನಿಮ್ಮ ಹಿಂದಿನ ಜರತಾರಿ ಪೇಟಗಳು ಈಗ ಎಲ್ಲಿ? ಎಂದು ಒಮ್ಮೆ ನಾನು ಅವರನ್ನು ಪ್ರಶ್ನಿಸಿದಾಗ ಅಂತಹ ಬಹಿರಾಡಂಬರದ ಬಡಿದಾಟಕ್ಕೆ ಸಿಕ್ಕಿರುವುದ ರಿಂದಲೇ ನಮಗಿನ್ನೂ ಸ್ವಾತಂತ್ರ್ಯ ದೇವತೆಯು ವಶವಾಗಿಲ್ಲ" ಎಂದರು. ಇದನ್ನು ಅರಿತು ಕೊಂಡಂದಿನಿಂದ ಬಟ್ಟೆಗಳನ್ನು ಕಿತ್ತೊಗೆದಿದ್ದಾರೆ. ಅವರ ಹಿಂದಿನ ಜೀವನದ ವೈಭವ, ಬೆಡಗುಗಳು ಎಲ್ಲೋ ಮಾಯವಾಗಿವೆ. ಸರಳತೆ ಬಂದಿದೆ. ಕಾಂಗ್ರೆಸ್ ಸೇರುವುದಕ್ಕೆ ಅನೇಕ ವರ್ಷಗಳ ಮುಂಚಿನಿಂದಲೂ ರೆಡ್ಡಿಯವರು ಖಾದೀಧಾರಿಗಳಾಗಿದ್ದಾರೆ.

ಯಾವ ವಿಷಯವನ್ನೇ ಆಗಲಿ ಸೂಕ್ಷ್ಮವಾಗಿ ಪರಿಶೀಲಿಸಿ ಆಳವಾಗಿ ವಿಂಗಡಿಸಿ ನೋಡುತ್ತಾರೆ. ವೇದಿಕೆಯ ಮೇಲೆ ನಿಂತರೆ ಗಂಟೆಗಟ್ಟಲೆ ಭಾಷಣ ಮಾಡಬಲ್ಲರು. ಇವರ ಭಾಷಣದಲ್ಲಿ ಜಲಪಾತದ ರಭಸವೇನೂ ಇಲ್ಲ. ನಿಧಾನವಾಗಿ ವಿಂಗಡಿಸಿ ವಿರಳವಾಗಿ ಮಾತನಾಡುತ್ತಾರೆ. ಪ್ರೇಕ್ಷಕರನ್ನು ಆಕರ್ಷಿಸುವ ಶಕ್ತಿ, ಸಾಮರ್ಥ್ಯಗಳು ಇವರ ಭಾಷಣದಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ರೆಡ್ಡಿಯವರಿಗೆ ಓದುವ ಚಟ ಹೆಚ್ಚು. ವಿರಾಮ ಸಿಕ್ಕಿದರೆ

ಸಾಕು ಪುಸ್ತಕವು ಕೈಗೆ ಬರುತ್ತದೆ. ಅದಕ್ಕಾಗಿ ಅವರ ಕೊಠಡಿಯ ದೀಪ ಅರ್ಧರಾತ್ರಿಯ ವರೆವಿಗೂ ಉರಿಯುತ್ತಿರುವುದುಂಟು.

ಆಶ್ರಮವಾಸಿ

ವಿದುರಾಶ್ವತ್ಥ ದುರಂತ ಪ್ರಕರಣ, ಕಾಂಗ್ರೆಸ್ ಅಧ್ಯಕ್ಷರ ಮತ್ತು ಕಾರ್ಯಕಾರಿ ಸಮಿತಿಯ ದಸ್ತಗಿರಿ ಸತ್ಯಾಗ್ರಹ ಸರ್ಕಾರದ ದಬ್ಬಾಳಿಕೆ, ಕಿರುಕುಳ ಮುಂತಾದವುಗಳ ಗೊಂದಲಕ್ಕೆ ಸಿಕ್ಕಿ ಮೈಸೂರು ಒಮ್ಮೆ ಆಂದೋಲನದ ಹಗರಣವಾಗಿತ್ತು. ಆಗ ಮಹಾತ್ಮರಿಗೆ ಮೈಸೂರಿನ ರಾಜಕೀಯವನ್ನು ಚೆನ್ನಾಗಿ ಅರಿತು ಕೊಳ್ಳಬೇಕೆಂಬ ಕುತೂಹಲ ಬಂತು. ವಾರ್ಧದಲ್ಲಿಯೇ ಇದ್ದು ಮೈಸೂರಿನ ರಾಜಕೀಯ ನಡವಳಿಕೆಗಳನ್ನು ಪ್ರತಿನಿತ್ಯವೂ ತಮ್ಮ ಗಮನಕ್ಕೆ ತರಲು ದಕ್ಷರಾದ ಮುಖಂಡರೊಬ್ಬರನ್ನು ಕಳುಹಿಸಿಕೊಡಿ ಎಂದು ಇಲ್ಲಿಗೆ ಪತ್ರ ಬರೆದರು. ಆಗ ಯಾರನ್ನು ಕಳುಹಿಸಿದರೆ ಸರಿಯೆಂದು ಯೋಚಿಸಿ ಚಂಗಲರಾಯರೆಡ್ಡಿಯವರನ್ನೇ ಕಳುಹಿಸಲಾಯಿತು. ಅಲ್ಲಿದ್ದು ಮಹಾತ್ಮರಿಗೆ ಮೈಸೂರು ಕಾಂಗ್ರೆಸ್ಸಿನ ಮತ್ತು ಸರ್ಕಾರದ ನಡವಳಿಕೆಗಳನ್ನು ಪ್ರತಿದಿನವೂ ವರದಿ ಮಾಡುತ್ತಿದ್ದರು. ಅಂದಿನಿಂದಲೇ ಮಹಾತ್ಮರಿಗೆ ಮೈಸೂರು ಕಾಂಗ್ರೆಸ್ಸಿನ ಮೇಲೆ ಹೆಚ್ಚು ಹೆಚ್ಚು ಅಭಿಮಾನ ಹುಟ್ಟಲು ಆರಂಭವಾಯಿತು.

ಅಲ್ಲಿಗೆ ಹೋದಾಗ ರೆಡ್ಡಿಯವರಿಗೆ ವಾರ್ಧಾ ವಾತಾವರಣ ಹೊಂದಿಕೊಂಡಿತು. ಆಶ್ರಮಜೀವನವೂ ಅವರ ಮನಸ್ಸಿಗೆ ಅಂಟಿಕೊಂಡಿತು. ಎರಡು ತಿಂಗಳೊಳಗಾಗಿ ಅವರಲ್ಲಿ ಮಹತ್ತರ ಬದಲಾವಣೆಗಳು ಕಂಡು ಬಂದವು. ಅವರ ಪ್ರವೃತ್ತಿಯೇ ಅಂತಹುದು. ಎಲ್ಲವೂ ಅವರಿಗೆ ಹಿತವಾಗಿತ್ತು. ಮೈಸೂರಿಗೆ ಹಿಂತಿರುಗುವರೋ ಇಲ್ಲವೋ ಎಂಬ ಅನುಮಾನ ಅನೇಕರಿಗೆ ಬಂದಂತೆ ಅವರ ಪತ್ನಿಗೂ ಭಯ ಬಂತು. ಆದರೆ ಸನ್ನಿವೇಶಗಳು ಬದಲಾವಣೆ ಯಾಗಬೇಕಾಯ್ತು. ದಾಸಪ್ಪನವರ ದೇಹಾಲಸ್ಯ ವಾರ್ಧಾ ಯಾತ್ರೆಯನ್ನು ಕೈಕೊಳ್ಳುವಂತೆ ಮಾಡಿತು. ಅದರ ಪರಿಣಾಮವಾಗಿ ದಾಸಪ್ಪನವರು ವಾರ್ಧಾದಲ್ಲಿಯೇ ಉಳಿದುಕೊಂಡು ರೆಡ್ಡಿಯವರನ್ನು ಮೈಸೂರಿಗೆ ಕಳುಹಿಸಿದರು.

ರೆಡ್ಡಿಯವರು ರಾಜಕೀಯ ರಂಗದಲ್ಲಿದ್ದು, ಕೇವಲ ರಾಜಕಾರಣಿ ಪಟುಗಳಾಗಿದ್ದರೆಂದು ತಿಳಿಯಬಾರದು. ಮೈಸೂರು ಕಾಂಗ್ರೆಸ್ ಪಕ್ಷ ಕಲಾತ್ಮಕ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ರಚನಾತ್ಮಕ ಕಾರ್ಯಕ್ರಮಗಳ ಕಡೆಗೆ ತಮ್ಮ ಗಮನವನ್ನು ಕೊಟ್ಟು ಕೋಲಾರ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ವೇಳೆ ಕೋಲಾರ ಜಿಲ್ಲೆಯ ಹೊಸೂರು 'ಖಾದೀ ಕೇಂದ್ರ'ವನ್ನು ಸ್ಥಾಪಿಸಲು ಕಾರಣೀಭೂತರಾದರು. 1937ನೇ ಇಸವಿಯಲ್ಲಿ ಬೌರಿಂಗ್‌ಪೇಟೆಯಲ್ಲಿ 'ಹರಿಜನ ವಿದ್ಯಾರ್ಥಿ' ನಿಲಯವೊಂದನ್ನು ಸ್ಥಾಪಿಸಿ ಅಂದಿನಿಂದ ಇಂದಿನವರೆವಿಗೂ ಅದರ ಅಧ್ಯಕ್ಷರಾಗಿದ್ದಾರೆ. ಕೋಲಾರದಲ್ಲಿರುವ ನಿಮ್ನವರ್ಗದವರ ವಿದ್ಯಾರ್ಥಿನಿಲಯಕ್ಕೆ ಎರಡು ವರ್ಷಗಳ ಅಧ್ಯಕ್ಷರಾಗಿದ್ದರು. ಮೈಸೂರು ಸಂಸ್ಥಾನದ

ಹರಿಜನ ಸೇವಕ ಸಂಘದ ಕಾರ್ಯಕಾರಿ ಮಂಡಲಿಯ ಪ್ರಮುಖ ಸದಸ್ಯರಾಗಿ ಈಗಲೂ ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಕಾಂಗ್ರೆಸ್ ಮನೋಭಾವನೆ ಇವರ ಹೃದಯದಲ್ಲಿ ಮನೆ ಮಾಡಿಕೊಂಡಿತ್ತು. ಆದ್ದರಿಂದಲೇ ಇವರು 1930ನೇ ಇಸವಿಯಿಂದ ಅಖಿಲ ಭಾರತ ಕಾಂಗ್ರೆಸ್ಸಿನ ಸದಸ್ಯರಾಗಿದ್ದಾರೆ.

ಅಧಿಕಾರಿಗಳಿಗೂ ಅಭಿಮಾನವಿದೆ

ರೈತರ ಮನೆತನದಲ್ಲಿ ಹುಟ್ಟಿದರೂ ವ್ಯವಸಾಯದ ಅನುಭವವಿಲ್ಲ. ಆದರೂ ನಾನೊಬ್ಬ ವ್ಯವಸಾಯಗಾರನೆನ್ನುತ್ತಾರೆ. ವಕೀಲ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಕೀಲ ವೃತ್ತಿಯನ್ನು ಒಂದು ವರ್ಷ ಕಲಿತರೂ ಅವರು ವಕೀಲರಾಗಿ ಯಾವ ಕೋರ್ಟಿನಲ್ಲೂ ಹೋಗಿ ನಿಂತಿಲ್ಲ. ವಾಣಿಜ್ಯ ವೃತ್ತಿಯ ಅನುಭವವಿಲ್ಲದಿದ್ದರೂ ವ್ಯಾಪಾರವನ್ನೂ ಸಹ ನಡೆಯಿಸಿದ್ದಾರೆ.

ಇವೆಲ್ಲಕ್ಕಿಂತಲೂ ಇವರ ಪ್ರತಿಭೆಯನ್ನು ಬೆಳಗಿಸಿದುದೆಂದರೆ ಪತ್ರಿಕೋದ್ಯಮ. 1937ನೆಯ ವರ್ಷದಲ್ಲಿ ಸುಮಾರು 7 ತಿಂಗಳ ಕಾಲ, ಉಜ್ವಲ ರಾಷ್ಟ್ರೀಯ ದೈನಂದಿನ ಪತ್ರಿಕೆಯೆನಿಸಿಕೊಂಡಿದ್ದ "ಜನವಾಣಿ"ಯ ಪ್ರತಿಪಾದಕರಾಗಿದ್ದರು. ಅಲ್ಪಕಾಲವಾದರೂ ಇವರು ಸಂಪಾದಕರಾಗಿದ್ದ ವೇಳೆ "ಜನವಾಣಿ"ಯು ಪ್ರಜೆಗಳ ಹಕ್ಕುಭಾದ್ಯತೆಗಳಿಗೆ ಹೊಡೆದಾಡುವ ಪತ್ರಿಕೆಗಳ ಶ್ರೇಣಿಯಲ್ಲಿ ಪ್ರಥಮಸ್ಥಾನ ಪಡೆದಿತ್ತು. ಸರ್ಕಾರದ ಅಧಿಕಾರಿಗಳಲ್ಲಿ ಕಂಡುಬರುತ್ತಿದ್ದ ಅಸಭ್ಯ, ಅನ್ಯಾಯ ವರ್ತನೆಗಳ ಬಗ್ಗೆ ನಿರ್ಭಯ ಟೀಕೆ ಮತ್ತು ಖಂಡನಾತ್ಮಕ ಲೇಖನಗಳನ್ನು ಆಗಾಗ್ಗೆ ಅದರಲ್ಲಿ ನಾವು ಕಾಣಬಹುದಾಗಿತ್ತು. ಸರ್ಕಾರದ ಉನ್ನತಾಧಿಕಾರಿಗಳು ಪ್ರತಿದಿನವೂ ಆಗ "ಜನವಾಣಿ"ಯನ್ನು ಓದದೇ ಮಲಗುತ್ತಿರಲಿಲ್ಲ.

ಸರ್ಕಾರವನ್ನು ತೀವ್ರವಾಗಿ ವಿರೋಧಿಸುತ್ತಿರುವ ಮೈಸೂರು ಕಾಂಗ್ರೆಸ್ಸಿನ ಮುಖ್ಯ ನಾಯಕರಾಗಿದ್ದರೂ ಸಹ ಸರ್ಕಾರದ ಅಧಿಕಾರಿಗಳಿಗೆ ರೆಡ್ಡಿಯವರ ಮಾತಿನ ಮೇಲೆ ಇರುವ ಅಭಿಮಾನ, ಅವರ ಮಾತಿಗೆ ಕೊಡುವ ಬೆಲೆ ಮತ್ತಿನ್ನಾರಿಗೂ ಕೊಡುತ್ತಿಲ್ಲವೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಒಮ್ಮೆ ಸರ್ಕಾರ ಪ್ರಮುಖ ಅಧಿಕಾರಿಗಳಲ್ಲಿ ನಾನು ಮಾತನಾಡುತ್ತಿರುವಾಗ್ಗೆ ಇವರ ಬಗ್ಗೆ ಈಗಲೂ ಅಧಿಕಾರಿ ವರ್ಗದವರು ಎಂತಹ ಮಟ್ಟದ ಗೌರವ ಇಟ್ಟುಕೊಂಡಿರುವರೆಂಬುದನ್ನು ತಿಳಿದುಕೊಳ್ಳಲು ಅವಕಾಶವಾಯಿತು.

ಇದಕ್ಕೆ ಮತ್ತೊಂದು ನಿದರ್ಶನವನ್ನೂ ಸಹ ಕೊಡಬಹುದು. ಕೋಲಾರ ಜಿಲ್ಲೆಯ ಚುನಾವಣೆಗಳ ಕಾಲದಲ್ಲಿ ಕಾಂಗ್ರೆಸ್ ಸದಸ್ಯರು ಚುನಾವಣೆಗೆ ನಿಂತ ಕಡೆಗಳಲ್ಲೆಲ್ಲಾ ಸ್ವತಂತ್ರರನ್ನು ಪುಸಲಾಯಿಸಿ ಚುನಾವಣೆಗೆ ನಿಲ್ಲಿಸುತ್ತಿದ್ದ ಅಧಿಕಾರಿಗಳು ರೆಡ್ಡಿಯವರಿಗೆ ಎದುರಾಳಿಗಳನ್ನು ನಿಲ್ಲಿಸಲಿಲ್ಲ. ಹೀಗೇಕೆ ಮಾಡಿದರೆಂದು ಆ ಅಧಿಕಾರಿಗಳನ್ನು ಅವರ ಆಪ್ತಮಿತ್ರರೊಬ್ಬರು ಪ್ರಶ್ನಿಸಲಾಗಿ 'ರೆಡ್ಡಿಯವರು ಮಂತ್ರಿಯಾಗಲು ಬೇಕಾದ ಯೋಗ್ಯತೆ

ಮತ್ತು ಘನತೆಯುಳ್ಳ ಮನುಷ್ಯರು; ಅಲ್ಲದೆ ಅವರ ನಿಸ್ವಾರ್ಥ ಸೇವೆ, ಜನೋಪಕಾರ ಬುದ್ಧಿ ನನ್ನ ಮನಸ್ಸನ್ನು ಮೆಚ್ಚಿಸಿವೆ. ಆದ್ದರಿಂದ ಅವರಿಗೆ ಎದುರಾಳಿಯನ್ನು ನಿಲ್ಲಿಸಬೇಕೆಂಬ ಇಚ್ಛೆಯೇ ನನಗೆ ಬರಲಿಲ್ಲ' ಎಂದರಂತೆ.

ಕಾರಾಗೃಹವಾಸಗಳು

ರೆಡ್ಡಿಯವರು ಮೂರು ಬಾರಿ ಕಾರಾಗಾರವನ್ನು ಕಂಡಿದ್ದಾರೆ. ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹ ಸಂಬಂಧದಲ್ಲಿ ಇವರನ್ನು ದಸ್ತಗಿರಿ ಮಾಡಿ 3 ತಿಂಗಳ ಶಿಕ್ಷೆಯನ್ನು ವಿಧಿಸಲಾಗಿತ್ತು. ಆದರೆ 1 ತಿಂಗಳ ಶಿಕ್ಷೆಯನ್ನು ಅನುಭವಿಸಿದ ನಂತರ ಬಿಡುಗಡೆ ಮಾಡಲಾಯಿತು. ಮತ್ತು ಕೋಲಾರ ಚಿನ್ನದ ಗಣಿಯಲ್ಲಿ ದಸ್ತಗಿರಿಯಾಗಿ 3 ತಿಂಗಳು 30 ದಿವಸಗಳ ಕಠಿಣ ಶಿಕ್ಷೆಯನ್ನು ಅನುಭವಿಸಿ ಹೊರಗೆ ಬಂದರು. ತಿರುಗಿ 1942ನೆಯ ಆಗಸ್ಟ್ ತಿಂಗಳಲ್ಲಿ ಹೊಡೆದ ಬಿರುಗಾಳಿಯಲ್ಲಿ ಸಿಕ್ಕಿ 16 ತಿಂಗಳು ಕಾಲ ಸ್ಥಾನಬದ್ಧತೆಯಲ್ಲಿದ್ದರು.

ಆಗ ಅವರಿಗೆ ಉಂಟಾದ ಕಿವಿಯ ನೋವು ಇವರ ಶರೀರವನ್ನು ಕೃಶಗೊಳಿಸಿತು. ಜೈಲಿನಲ್ಲಿಟ್ಟಿದ್ದ ಸರ್ಕಾರ ಇವರಿಗೆ ತಕ್ಕ ಚಿಕಿತ್ಸೆ ಕೊಡಲಿಲ್ಲ. ಇವರೇ ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಇವರನ್ನು 'ಪೆರೋಲ್' ಮೇಲೂ ಬಿಡಲಿಲ್ಲ. ಕಿವಿಯ ಬಾಧೆ ಹೆಚ್ಚಾಯಿತು. ಉತ್ಕಟಾವಸ್ಥೆಗೆ ಬಂತು. ಚಿಕಿತ್ಸೆಗೆ ವೇಳೆ ಮೀರಿತೆಂದು ವೈದ್ಯರು ಹೇಳಿದರು. ರೆಡ್ಡಿಯವರಿಗೆ ಸಹನೆಯ ಮೇರೆ ಮೀರಿತು. ಸರ್ಕಾರದ ಮೇಲೆ ದಾವಾ ಹೂಡಲು ಸಿದ್ಧರಾದರು. ತಪ್ಪನ್ನು ಅರಿತುಕೊಂಡು ಸರ್ಕಾರ ಚಿಕಿತ್ಸೆಗೆ ಅನುಕೂಲವಾಗುವಂತೆ ಇವರನ್ನು 'ಪೆರೋಲ್' ಮೇಲೆ ಬಿಟ್ಟಿತು. ಆದರೆ ವೇಳೆ ಮೀರಿತ್ತಾದುದರಿಂದ ಸಂಪೂರ್ಣ ಗುಣವಾಗಲಿಲ್ಲ. ಒಂದು ಕಡೆಯ ಕಿವಿ ಈಗಲೂ ಕೊಂಚ ಅಸ್ವಸ್ಥವಾಗಿದೆ. ಸರ್ಕಾರದ ಕಪಿಮುಷ್ಟಿಯು ರೆಡ್ಡಿಯವರನ್ನು ಕೊಂಚ ಕಿವುಡರನ್ನಾಗಿ ಮಾಡಿದೆ. ಅದನ್ನು ಅವರು ತಾಳ್ಮೆಯಿಂದ ಸಹಿಸಿಕೊಂಡಿದ್ದಾರೆ.

ರಾಜಕೀಯದಲ್ಲಿ ರೆಡ್ಡಿಯವರಿಗೆ ಇರುವ ಅನುಭವ ಕಂಡು ಪ್ರಜಾ ಪ್ರತಿನಿಧಿ ಸಭಾ ಕಾಂಗ್ರೆಸ್ ಪಕ್ಷದ ಇವರನ್ನು ತಮ್ಮ ಪಕ್ಷದ ನಾಯಕರನ್ನಾಗಿ ಚುನಾಯಿಸಿಕೊಂಡಿತ್ತು. ಮತ್ತೆ ನ್ಯಾಯವಿಧಾಯಕ ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಇವರನ್ನೇ ನಾಯಕರನ್ನಾಗಿ ಮಾಡಿಕೊಂಡಿದೆ. ಎಂದು ರಾಜಕೀಯ ಪಕ್ಷವನ್ನು ಕಠಿಣ ಹೃದಯದ ಸರ್ಕಾರದ ಮುಂದೆ ಹೇಗೆ ನಡೆಸಿಕೊಂಡು ಹೋಗಬೇಕೆಂಬುದನ್ನೇ ರೆಡ್ಡಿಯವರು ಚೆನ್ನಾಗಿ ಅರಿತು ಕೊಂಡಿದ್ದಾರೆ. ಅದು ಪ್ರತಿನಿಧಿ ಸಭೆಗಳಲ್ಲಿ ಅವರು ಅರಿತು–ನುರಿತುದರ ಫಲ. ಅವರು ದುಡಿತಕ್ಕೆ ತಕ್ಕ ಪ್ರತಿಫಲ ಇಲ್ಲದೆ ಇಲ್ಲ. ಅದನ್ನು ದೇಶವೇ ಎದುರು ನೋಡುತ್ತಿದೆ.

ಬಿ.ಎನ್. ಗುಪ್ತ, ಸ್ವಾತಂತ್ರ್ಯ ಹೋರಾಟಗಾರರು

ಆಧಾರ : ತುಮಕೂರು ವಿಶೇಷಾಧಿವೇಶನ. ಸಂಪಾದಕರು, ಪತ್ರಕರ್ತರು.

8. ಶ್ರೀ ಕೆ. ಚಂಗಲರಾಯರೆಡ್ಡಿ

ಶ್ರೀ ಚಂಗಲರಾಯರೆಡ್ಡಿಯವರನ್ನು ಅವರು ಬೆಂಗಳೂರು ಒಕ್ಕಲಿಗರ ಸಂಘದ ವಿದ್ಯಾರ್ಥಿಗಳ ಸಂಘದ ಸಹಾಯಕ ಕಾರ್ಯದರ್ಶಿ ಆಗಿದ್ದಾಗಿನಿಂದಲೂ ಬಲ್ಲೆ. ಪ್ರಜಾ ಪ್ರತಿನಿಧಿ ಸಭೆಯಲ್ಲಿ ಪ್ರಜಾಪಕ್ಷದಲ್ಲಿದ್ದಾಗಲೂ ಅವರು ಗಣನೀಯ ಸ್ಥಾನ ಸಂಪಾದಿಸಿ ಕೊಂಡಿದ್ದರು. ಪ್ರಜಾಪಕ್ಷದ ಮುಖ್ಯಪತ್ರಿಕೆಯಾಗಿ 'ಜನವಾಣಿ' ಎಂಬ ದಿನಪತ್ರಿಕೆಯೊಂದು ಪ್ರಕಟವಾಗುತ್ತಿತ್ತು. ನಾನು ಆಗ ಯಾವ ಪತ್ರಿಕೆಯನ್ನೂ ನಡೆಸುತ್ತಿರಲಿಲ್ಲ. ಆದುದರಿಂದ ಅವರು ಒಂದೆರಡು ಸಾರಿ ನನ್ನನು ಕಂಡು ಪ್ರಜಾಪಕ್ಷದ ದಿನಪತ್ರಿಕೆಯಾಗಿ ಹೊರಡುತ್ತಿದ್ದ ಜನವಾಣಿ ಪತ್ರಿಕೆಗೆ ಸಂಪಾದಕನಾಗಬೇಕೆಂದು ಕೇಳಿಕೊಂಡರು. ಅವರು ಸೂಚಿಸಿದ ವೇತನ ಅಷ್ಟೇನೂ ಆಕರ್ಷಣೀಯವಾಗಿರಲಿಲ್ಲ. ಅವರು ನನ್ನನ್ನು ಬೇರೆ ಬೇರೆ ಸಮಯದಲ್ಲಿ ಎರಡು ಸಾರಿ ಒತ್ತಾಯಿಸಿದರೂ ನಾನು ಒಪ್ಪಿಕೊಳ್ಳಲಿಲ್ಲ. ಆಮೇಲೆ ಬೇರೆ ಬೇರೆ ಸಮಯದಲ್ಲಿ ಎರಡು ಸಾರಿ ಒತ್ತಾಯಿಸಿದರ ನಾನು ಒಪ್ಪಿಕೊಳ್ಳಲಿಲ್ಲ. ಆಮೇಲೆ ಬೇರೆ ಬೇರೆ ರಾಜಕೀಯ ಪಕ್ಷಗಳವರು ಕಾಂಗ್ರೆಸ್‌ನೊಡನೆ ಮಿಳಿತವಾಗುವ ವಿಚಾರದಲ್ಲಿ ಶ್ರೀಗಳಾದ ವಿ.ಎಸ್. ನಾರಾಯಣರಾವ್, ತಗಡೂರು ರಾಮಚಂದ್ರರಾವ್, ವೀರಕೇಸರಿ ಸೀತಾರಾಮಶಾಸ್ತ್ರಿಗಳೊಡ ಗೂಡಿ ಆ ಪಕ್ಷದ ವಾರ್ಷಿಕ ಸಭೆಗೆ ಕೋಲಾರಕ್ಕೆ ಹೋಗಿದ್ದ ವಿಚಾರವನ್ನು ನಾನು ಈ ಹಿಂದೆಯೇ ತಿಳಿಸಿರುವೆ. ಆಗ ನಡೆದ ಚುನಾವಣೆಗಳು ಮುಗಿದ ಮೇಲೆ 1937ನೇ ಅಕ್ಟೋಬರ್ 16ರಂದು ಶ್ರೀ ಭಾಷ್ಯಂರವರ ದಸ್ತಗಿರಿಯಾದ ಮೇಲೆ ಎಲ್ಲ ರಾಜಕೀಯ ಪಕ್ಷಗಳವರೂ ಕಾಂಗ್ರೆಸ್ ಸಂಸ್ಥೆಗೆ ಸೇರಿದುದನ್ನೂ, ಆಗ ಶ್ರೀ ಚಂಗಲರಾಯರೆಡ್ಡಿಯವರು ವಹಿಸಿದ ಮುಖ್ಯ ಪಾತ್ರವನ್ನೂ ನಾನು ಈಗಾಗಲೆ ತಿಳಿಸಿದ್ದೇನೆ.

ಶ್ರೀ ಚಂಗಲರಾಯರೆಡ್ಡಿಯವರು 1946ನೇ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಪ್ರವಾಸ ಮಾಡುತ್ತಾ ಇರುವಾಗ ಚನ್ನಪಟ್ಟಣದಲ್ಲಿ ನಡೆದ ಕೋಮುವಾರು ಗಲಭೆಯ ವಿಚಾರವನ್ನು ಈ ಮೊದಲೆ ತಿಳಿಸಿರುವೆ. ಅದಾದ ನಂತರ ಶ್ರೀ ರೆಡ್ಡಿಯವರು ಮೈಸೂರಿನ ಮುಖ್ಯಮಂತ್ರಿಗಳಾಗಿ ನೇಮಕವಾದುದನ್ನೂ, ಆಗವರು ನನ್ನನ್ನು ಸರ್ಕಾರದ ಚೀಫ್ ಪಾರ್ಲಿಮೆಂಟರಿ ಸೆಕ್ರೆಟರಿಯಾಗಬೇಕೆಂದು ಕೇಳಿದಾಗ ನಾನು ಹುದ್ದೆಯನ್ನು ನಿರಾಕರಿಸಿದ ವಿಷಯವನ್ನೂ ತಿಳಿಸಿದ್ದೇನೆ. ಆ ಮೇಲೆ ಶ್ರೀ ರೆಡ್ಡಿಯವರಿಗೂ ನನಗೂ ಆತ್ಮೀಯವಾದ ಸ್ನೇಹ ಮೂಡುತ್ತಾ ಬಂತು. ನಾನೇನಾದರೂ ಒಂದು ಮಾತನ್ನು ಅವರಿಗೆ ಹೇಳಿದರೆ ಆಕ್ಷೇಪಣೆಗೆಡೆಗೊಡದಂತೆ ಅವರದನ್ನು ಸಾಧ್ಯವಾದ ಮಟ್ಟಿಗೆ ನೆರವೇರಿಸಿ ಕೊಡುತ್ತಿದ್ದರು. ಆಗ ನಡೆಯುತ್ತಿದ್ದ ಅನೇಕ ಸಮಿತಿ ಮತ್ತು ಸಭೆಗಳಿಗೆ ಅವರು ನನ್ನನ್ನು ಒಬ್ಬ ಸದಸ್ಯನನ್ನಾಗಿ

ತೆಗೆದುಕೊಳ್ಳದಿರುತ್ತಿರಲಿಲ್ಲ. ಶ್ರೀಮಾನ್ ಹನುಮಂತಯ್ಯನವರು ಅವರ ಮೇಲೆ ಕತ್ತಿ ಕಟ್ಟಿದಾಗಲೂ ನಾನು ಅವರ ಕಡೆಯೇ ಇದ್ದೆ. ಆ ಕಾಲದಲ್ಲೆ ನಡೆದ ಒಂದು ಅಸಹನೀಯ ವಾದ ವಿಷಯವನ್ನು ಇಲ್ಲಿ ತಿಳಿಸುವುದು ಸರಿಯೆಂದು ಕೊಂಡಿದ್ದೇನೆ.

ಆಗ ಮೈಸೂರು ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ಅಧ್ಯಕ್ಷರೊಬ್ಬರನ್ನು ನೇಮಿಸ ಬೇಕಿತ್ತು. ನನ್ನ ಹೆಸರು ಆ ಸ್ಥಾನಕ್ಕೆ ಅಲ್ಲಲ್ಲೆ ಕೇಳಿಬರುತ್ತಿತ್ತು. ಗತಿಸಿರುವ ಶ್ರೀ ಚೆನ್ನಯ್ಯನವರು ಶ್ರೀರೆಡ್ಡಿಯವರ ಮೇಲೆ ದೊಡ್ಡ ಪ್ರಭಾವ ಹೊಂದಿದ್ದರು. ಆದುದರಿಂದ ಅವರು ನನ್ನನ್ನು ಕುರಿತು ಶ್ರೀ ಚಂಗಲರಾಯರೆಡ್ಡಿಯವರಿಗೆ ಹೇಳಿದ್ದೇನೆ, ಅವರು ನಿಮ್ಮನ್ನು ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಅಧ್ಯಕ್ಷರನ್ನಾಗಿಯೊ, ಅದು ಸಾಧ್ಯವಿಲ್ಲವಾದರೆ ಮಂತ್ರಿಯನ್ನಾಗಿಯೊ ತೆಗೆದುಕೊಳ್ಳುವಂತೆ ಹೇಳಿ ಅವರನ್ನು ಒಪ್ಪಿಸಿದ್ದೇನೆ ಎಂದು ನನಗೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಅದು ನಿಜವಾದುದಲ್ಲ. ಏನೊ ತಪ್ಪಿಸಿಕೊಳ್ಳಲು ಮತ್ತು ನನ್ನ ಮಿತ್ರತ್ವವನ್ನು ಕಳೆದು ಕೊಳ್ಳಲು ಸಿದ್ಧರಾಗಿಲ್ಲದ ಕಾರಣ ಶ್ರೀ ಚೆನ್ನಯ್ಯನವರು ನನ್ನೊಡನೆ ಹಾಗೆ ಹೇಳುತ್ತಿದ್ದರೆ ಹೊರತು ಶ್ರೀ ಚಂಗಲರಾಯರೆಡ್ಡಿಯವರೊಡನೆ ಈ ವಿಚಾರವನ್ನು ಅವರು ಪ್ರಸ್ತಾಪಿಸಿಯೇ ಇರಲಿಲ್ಲ ಎಂಬುದು ಆ ಮೇಲೆ ನನಗೆ ತಿಳಿಯ ಬಂತು. ಆಗ ಶ್ರೀ ರೆಡ್ಡಿಯವರು, ಏನೋ ಸರ್ಕಾರಿ ಕೆಲಸದ ನಿಮಿತ್ತ ದೆಹಲಿಗೆ ಹೋಗಿದ್ದರು. ಅವರು ದೆಹಲಿಯಿಂದ ಹಿಂದಿರುಗಿದ ಮೇಲೆ ಕೇಂದ್ರ ನಾಯಕರ ಅಭಿಪ್ರಾಯವನ್ನು ತಿಳಿದುಕೊಂಡು ಬಂದು ನಿಮ್ಮನ್ನು ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಅಧ್ಯಕ್ಷರನ್ನಾಗಿ ನೇಮಿಸಿದುದನ್ನು ಪ್ರಕಟಿಸುತ್ತಾರೆಂದು ಚನ್ನಯ್ಯನವರು ಹೇಳಿದ್ದರು. ಶ್ರೀ ರೆಡ್ಡಿಯವರು ಹಿಂದಿರುಗಿದ ನಂತರ ಶ್ರೀ ಎಚ್.ಬಿ. ಗುಂಡಪ್ಪಗೌಡರಿಗೆ ಆ ಸ್ಥಾನ ಸಿಕ್ಕಿರುವುದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದನ್ನು ನೋಡಿ ಶ್ರೀ ಬಂದಿಗೌಡರು ಕಿಡಿಕಿಡಿಯಾದರು. ಏಕೆಂದರೆ ಈ ವಿಷಯ ಅವರಿಗೆ ಅಮೂಲಾಗ್ರವಾಗಿ ತಿಳಿದಿತ್ತು. ಆದುದರಿಂದ ಅವರು ನನ್ನಲ್ಲಿಗೆ ಬಂದು ಇದನ್ನು ಪ್ರಸ್ತಾಪಿಸಿ, ರೆಡ್ಡಿಯವರ ಮೇಲೆ ತಮ್ಮ ಅಸಮಾಧಾನ ಪ್ರಕಟಿಸಿ, ಈಗಲೇ ನಾವು ರೆಡ್ಡಿಯವರ ಮನೆಗೆ ಹೋಗಿ ಅವರ ಮುಖದೆದುರಿಗೆ ಅವರು ಹೇಳಿದ್ದ ಸುಳ್ಳು ಮಾತನ್ನು ಹಂಗಿಸಿ ಬರೋಣವೆಂದು ನನಗೆ ಹೇಳಿದರು. ನಾನು ಕೆಲಸ ಮುಗಿದು ಹೋಗಿರುವಾಗ ರೆಡ್ಡಿಯವರನ್ನು ಹಂಗಿಸುವುದರಿಂದ ಏನು ಪ್ರಯೋಜನವೆಂದು ಸ್ವಲ್ಪ ಯೋಚಿಸಿದೆ. ಆದರೂ ಶ್ರೀ ಬಂದಿಗೌಡರು ನನ್ನನ್ನು ಬಲವಂತ ಮಾಡಿದುದರಿಂದ ಅವರೂ ನಾನೂ ಶ್ರೀ ರೆಡ್ಡಿಯವರ ಮನೆಗೆ ಹೋದೆವು. ಶ್ರೀ ರೆಡ್ಡಿಯವರು ನಮ್ಮನ್ನು ವಿಶ್ವಾಸದಿಂದ ಬರಮಾಡಿಕೊಂಡು ಪಕ್ಕದಲ್ಲೆ ಕೂರಿಸಿಕೊಂಡರು. ಶ್ರೀ ಎ.ಜಿ. ಬಂದಿಗೌಡರ ದುಗುಡ ಇನ್ನೂ ಕಮ್ಮಿಯಾಗಿರಲಿಲ್ಲ. ಅವರು ಶ್ರೀ ರೆಡ್ಡಿಯವರನ್ನು ಕುರಿತು "ಏನು ಸ್ವಾಮಿ ರೆಡ್ಡಿಯವರೆ, ವೀರಣ್ಣಗೌಡರಿಗೆ ಸುಳ್ಳು ಹೇಳಿ ಅವರಿಗೆ ವಂಚನೆ ಮಾಡುವುದಕ್ಕೆ ಅವರು ನಿಮಗೇನು ಅನ್ಯಾಯ ಮಾಡಿದ್ದರು?" ಎಂದು ಕೇಳಿಯೇ ಬಿಟ್ಟರು. ಶ್ರೀ ಚಂಗಲರಾಯರೆಡ್ಡಿಯವರಿಗೆ ವಿಷಯವೇನೆಂಬುದಾಗಲಿ,

ಬಂದಿಗೌಡರು ಅವರ ಮೇಲೆ ಅಷ್ಟು ದುಗುಡವಾಗಿ ಮಾತಾಡಿದುದೇಕೆಂಬುದಾಗಲಿ ಅರ್ಥವೇ ಆಗಲಿಲ್ಲ. ಶ್ರೀ ರೆಡ್ಡಿಯವರು ಸ್ವಲ್ಪ ಆತಂಕದಿಂದಲೆ "ಏಕೆ ಬಂದಿಗೌಡರೆ ಇಷ್ಟು ಕೋಪದಿಂದ ಮಾತಾಡುತ್ತಿದ್ದೀರಿ! ವೀರಣ್ಣಗೌಡರಿಗೆ ನಾನು ಮಾಡಿರುವ ಮೋಸವಾದರೂ ಏನು?" ಎಂದು ಖಿನ್ನಮನಸ್ಕರಾಗಿ ಕೇಳಿದರು. ಆಗಲೂ ಶ್ರೀ ಬಂದಿಗೌಡರು ಸ್ವಲ್ಪ ದುಗುಡದಿಂದಲೆ "ಏನು ಸ್ವಾಮಿ ಹೀಗೆ ಹೇಳುತ್ತಿದ್ದೀರಿ! ಶ್ರೀ ವೀರಣ್ಣಗೌಡರನ್ನೂ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಚೇರ್‌ಮನ್ ಆಗಿ ದೆಹಲಿಯಿಂದ ಹಿಂದಿರುಗಿದ ಕೂಡಲೆ ನೇಮಕ ಮಾಡುತ್ತೇವೆಂದು ಭರವಸೆ ಕೊಟ್ಟು, ದೆಹಲಿಯಲ್ಲಿ ಕೇಂದ್ರ ನಾಯಕರೊಂದಿಗೆ ಮಾತನಾಡಿ ಕೊಂಡು ಬಂದು ಅವರ ಹೆಸರನ್ನು ಪ್ರಕಟಿಸುವುದಾಗಿ ಹೇಳಿ ಹೋಗಿ, ಈಗ ಶ್ರೀ ಎಚ್.ಬಿ. ಗುಂಡಪ್ಪಗೌಡರನ್ನು ಆ ಸ್ಥಾನಕ್ಕೆ ನೇಮಿಸಿ ಈಗ ಏನೂ ತಿಳಿಯದವರಂತೆ ಮಾತಾಡುತ್ತೀರಿ! ನೀವು ಮೊದಲೇ ಹೇಳಬೇಕಾಗಿತ್ತು. ಚೆನ್ನಯ್ಯನವರೂ ಸಹ ಅದೇ ರೀತಿ ಹೇಳಿದ್ದರು" ಎಂದು ಕಠಿಣವಾಗೇ ಮಾತಾಡಿದರು. ಆಗ ಶ್ರೀ ರೆಡ್ಡಿಯವರಿಗೆ ದಿಕ್ಕುತೋಚ ದಂತಾಯಿತು. ಅವರು ಶ್ರೀ ಬಂದಿಗೌಡರನ್ನು ಕುರಿತು "ವಿಷಯ ಹಾಗಲ್ಲ ಗೌಡರೆ, ಶ್ರೀ ವೀರಣ್ಣಗೌಡರನ್ನು ಪಬ್ಲಿಕ್ ಸರ್ವಿಸ್ ಕಮೀಷನ್ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನನ್ನ ಮನಸ್ಸಿನಲ್ಲೇ ಇರಲಿಲ್ಲ. ನಾನು ದೆಹಲಿಗೆ ಹೋಗುವ ಮುನ್ನ ಮಂತ್ರಿಮಂಡಲದಲ್ಲಿ ಈ ವಿಷಯ ಪ್ರಸ್ತಾಪಿಸಿ ಅವರ ಒಪ್ಪಿಗೆ ಪಡೆಯುವ ಬಗ್ಗೆ ನೀವು ಹೇಳುವುದೂ ಸರಿಯಲ್ಲ. ಈ ವಿಷಯವನ್ನು ಮಂತ್ರಿಮಂಡಲದಲ್ಲಿ ನಾನು ಎಂದೂ ಪರ್ಯಾಲೋಚಿಸಲಿಲ್ಲ. ಕೇಂದ್ರದ ನಾಯಕರಲ್ಲಿಯೂ ವೀರಣ್ಣಗೌಡರ ವಿಚಾರವಾಗಿ ನಾನು ಏನೂ ಮಾತನಾಡಲಿಲ್ಲ. ಆ ರೀತಿ ಚೆನ್ನಯ್ಯನವರು ನಿಮಗೇನಾದರೂ ಹೇಳಿದ್ದರೆ ಅದು ಸುಳ್ಳು. ವೀರಣ್ಣಗೌಡರ ಸಮಾಧಾನಕ್ಕಾಗಿ ಅವರು ಹಾಗೆ ಹೇಳಿರಬಹುದು. ಅವರೊಡನೆಯೂ ನಾನು ಈ ವಿಷಯ ಎತ್ತಿರಲಿಲ್ಲ ಎಂದು ವ್ಯಸನದಿಂದ ತಿಳಿಸಿದರು.

ಶ್ರೀ ಚೆನ್ನಯ್ಯನವರು ಈ ರೀತಿ ಹೀಗೆ ವಿನಾಕಾರಣ ಸುಳ್ಳು ಹೇಳಿ ನಮ್ಮನ್ನು ವಂಚಿಸಿದುದು ಅಕ್ಷಮ್ಯ ಅಪರಾಧವೆಂದು ತಿಳಿದುಕೊಂಡು ನಾನು ಸುಮ್ಮನಾಗಿಬಿಟ್ಟೆ. ಆದರೆ ಬಂದಿಗೌಡರು ಹಾಗಿರಲಿಲ್ಲ. ಅವರು ಚಂಗಲರಾಯರೆಡ್ಡಿಯವರನ್ನು ಕಂಡು ಈ ಪ್ರಸ್ತಾಪ ತೆಗೆದಾಗ ಅವರು ಇಲ್ಲಿ ನಾನು ನಿಜವನ್ನೆ ಹೇಳಿದ್ದೆ. ಆದರೆ ಕೇಂದ್ರವಲ್ಲಿ ಸರ್ದಾರ್ ಪಟೇಲರ ಕಾರ್ಯದರ್ಶಿಯಗಿದ್ದ ಶ್ರೀ ಮೆನನ್, ವೀರಣ್ಣಗೌಡರು ದಕ್ಷರೇನೊ ಹೌದು, ಆದರೆ ಅವರು ಬಿ.ಎ. ಪಾಸು ಮಾಡಿಲ್ಲ. ಮೈಸೂರಲ್ಲಿ ಅನೇಕರು ಹೈಕೋರ್ಟ್ ಜಡ್ಜ್ ಗಳಾಗಿಯೂ, ಮಂತ್ರಿಗಳಾಗಿಯೂ ಕಾರ್ಯ ಮಾಡಿದವರಿರುವಾಗ ಅವರನ್ನು ನಿರ್ಲಕ್ಷಿಸಿ ವೀರಣ್ಣಗೌಡರನ್ನು ನೇಮಿಸುವುದು ಸರಿಯಲ್ಲ. ಅವರಿಗೆ ಬೇಕಾದರೆ ಬೇರೆ ಜವಾಬ್ದಾರಿ ಕೆಲಸ ಕೊಡೋಣವೆಂದರು. ಅದಕ್ಕಾಗಿ ಹಾಗೆ ಮಾಡಿದೆವು ಎಂದು ಏನೋ ಇನ್ನೊಂದು ಸುಳ್ಳು ಸೇರಿಸಿಬಿಟ್ಟರು. ಹೀಗೆ ಚೆನ್ನಯ್ಯನವರು ಸ್ನೇಹಿತರಲ್ಲೆ ಪರಸ್ಪರ ಸುಳ್ಳು

ಹೇಳಿ ತಮ್ಮ ಕಾರ್ಯ ಸಾಧಿಸಿಕೊಂಡಿರುವ ವಿಷಯಗಳು ಅನೇಕವಿವೆ. ಆದರೆ ಅವನ್ನೆಲ್ಲ ಇಲ್ಲಿ ಹೇಳಬೇಕಾದ ಅಗತ್ಯವಿಲ್ಲ.

ಶ್ರೀ ರೆಡ್ಡಿಯವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗಲೂ, ಆ ಮೇಲೆ ಗವರ್ನರ್ ಆಗಿದ್ದಾಗಲೂ ನನ್ನ ವಿಚಾರದಲ್ಲಿ ಬಹಳ ವಿಶ್ವಾಸ ಮತ್ತು ಪ್ರೀತಿಯಿಂದ ನಡೆದುಕೊಂಡು ಬಂದಿದ್ದಾರೆ. ಅವರು ಕೇಂದ್ರದ ಮಂತ್ರಿಮಂಡಲದಲ್ಲಿದ್ದಾಗ ನನಗೊಂದು ಕಾರನ್ನು ಅಲಾಟ್ ಮಾಡಬೇಕೆಂದು ಕೇಳಿದ್ದೆ. ಅವರು ಆಗಲೆಂದಿದ್ದರು. ಆದರೆ ಮರೆತು ಬಿಟ್ಟರೋ ಏನೋ. ಒಂದೆರಡು ತಿಂಗಳು ಕಳೆದರೂ ನನಗೆ ಕಾರು ಅಲಾಟ್ ಆಗಲಿಲ್ಲ. ಆದ್ದರಿಂದ ನಾನವರಿಗೊಂದು ಟೆಲಿಗ್ರಾಂ ಕಳುಹಿಸಿದೆ. ಅದರಲ್ಲಿ ಇನ್ನೇನೂ ಬರೆಯದೆ 'Car Car Car' ಎಂದು ಮೂರು ಸಾರಿ ಬರೆದು ವೀರಣ್ಣಗೌಡ ಎಂದು ತಿಳಿಸಿದೆ. ಎರಡು ದಿನಗಳಲ್ಲೆ ಕಲ್ಕತ್ತಾದಿಂದ ನನಗೊಂದು ಟೆಲಿಗ್ರಾಂ ಬಂತು. ನಿಮಗೆ ಕಾರು ತಯಾರು ಮಾಡುವ ಮಾಲೀಕರ ಕೋಟಾದಿಂದ ಕೇಂದ್ರ ಸರ್ಕಾರದ ಆಜ್ಞೆಯ ಮೇರೆಗೆ ಒಂದು ಕಾರು ಅಲಾಟ್ ಆಗಿದೆ. ಬೆಂಗಳೂರಲ್ಲಿ ನಮ್ಮ ಕಂಪನಿಯಿಂದ ಕೂಡಲೇ ಕಾರು ತೆಗೆದುಕೊಳ್ಳಿ ಎಂದು ತಿಳಿಸಿದ್ದರು. ಹೀಗೆ ನನಗೆ ಶ್ರೀ ರೆಡ್ಡಿಯವರಲ್ಲಿ ಬಹಳ ಸಲುಗೆಯೂ ವಿಶ್ವಾಸವೂ ಇದೆ. ಅವರು ಗವರ್ನರ್ ಆಗಿದ್ದಾಗ ನಾವು ಕೆಲವು ಮಂದಿ ಪಾರ್ಲಿಮೆಂಟ್ ಸದಸ್ಯರು ವಿಹಾರಾರ್ಥವಾಗಿ ಅಲ್ಲಿಗೆ ಹೋಗಿದ್ದಾಗ ಅವರ ಮನೆಯಲ್ಲೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಮತ್ತು ನಮ್ಮನ್ನು ಜೊತೆಯಲ್ಲೇ ಆ ಪ್ರಾಂತ್ಯದ ಕೆಲವು ಮುಖ್ಯ ಪ್ರದೇಶಗಳಿಗೆ ಕರೆದುಕೊಂಡು ಹೋಗಿದ್ದರು.

ಪಾರ್ಲಿಮೆಂಟ್ ಅಧಿವೇಶನ ಮುಗಿದು ಸ್ವಲ್ಪ ದಿನಗಳಲ್ಲೆ ನಡೆಯಬೇಕಾಗಿದ್ದ ಮಹಾ ಚುನಾವಣೆಯಲ್ಲಿ ನಾನು ಪಾರ್ಲಿಮೆಂಟಿಗೆ ಸ್ಪರ್ಧಿಸುವುದಿಲ್ಲವೆಂದು ತೀರ್ಮಾನಿಸಿದ್ದೆ. ಆದ್ದರಿಂದ ವಾಪಸ್ಸು ಬರುವಾಗ ಗಂಟುಮೂಟೆ ಕಟ್ಟಿಕೊಂಡು ಕಾರಲ್ಲಿ ಪ್ರಯಾಣ ಮಾಡಿದರೆ ದಾರಿಯಲ್ಲಿ ಸಿಕ್ಕುವ ಉಜ್ಜಯಿನಿ, ಅಜಂತಾ ಮುಂತಾದ ಸ್ಥಳಗಳನ್ನು ನೋಡಿ ಕೊಂಡು ಹೋಗಬಹುದೆಂದು ಆಗ ಪಾರ್ಲಿಮೆಂಟ್ ಸದಸ್ಯರಾಗಿದ್ದ ದೊಡ್ಡತಿಮ್ಮಯ್ಯನವರು ಅವರ ಕುಟುಂಬ, ನಾನು ನನ್ನ ಹೆಂಡತಿ ಮಕ್ಕಳು ಎರಡು ಕಾರುಗಳಲ್ಲಿ ಹೊರಟು ಪ್ರಯಾಣ ಮಾಡಿದೆವು. ನಮ್ಮ ಪ್ರವಾಸದ ವಿಚಾರವನ್ನು ಶ್ರೀ ರೆಡ್ಡಿಯವರಿಗೆ ತಿಳಿಸಿ, ಯಾವ ದಿನ ಅವರ ಸ್ಥಳಕ್ಕೆ ನಾವು ಬರುತ್ತೇವೆಂಬುದನ್ನು ತಿಳಿಸಿದ್ದೆ. ನಾವು ಅಲ್ಲಿಗೆ ಹೋಗುವ ದಿನ ಅವರು ಸಂಸಾರ ಸಮೇತ ಬೇರೆ ಕಡೆ ಪ್ರಯಾಣ ಮಾಡುವುದು ಖಚಿತವಾಗಿತ್ತು. ಆದರೂ ಅವರು ನಮ್ಮ ಊಟ ವಸತಿಗಳಿಗೆ ತಮ್ಮ ಮನೆಯಲ್ಲಿ ಏರ್ಪಾಟು ಮಾಡಿ ನಮ್ಮನ್ನು ವಿಚಕ್ಷಣತೆಯಿಂದ ನೋಡಿಕೊಳ್ಳುವಂತೆ ಸಿಬ್ಬಂದಿ ವರ್ಗದವ ರಿಗೂ, ತಮ್ಮ ಕಾರ್ಯದರ್ಶಿಯವರಿಗೂ ತಿಳಿಸಿದ್ದರಲ್ಲದೆ, ನನ್ನ ಹೆಂಡತಿಗೆ ಉಬ್ಬಸ

ರೋಗವಿರುವುದು ಅವರಿಗೆ ಗೊತ್ತಿದ್ದುದರಿಂದ ಗವರ್ನರ್ ವೈದ್ಯರೊಬ್ಬರನ್ನು ನಾವಿರುವಷ್ಟೂ ಕಾಲ ಗೌಡರ ಶ್ರೀಮತಿಯವರ ಆರೋಗ್ಯವನ್ನು ಗಮನಿಸಲು ತಿಳಿಸಿದ್ದರು. ವಿಷಯಗಳನ್ನೆಲ್ಲ ಕಾಗದದಲ್ಲಿ ಬರೆದು ತಿಳಿಸಿದ್ದರು. ನಾವಲ್ಲಿ ಕೆಲವು ದಿನಗಳಿದ್ದಾಗ ಅವರ ಪರಿವಾರದವರು ನಮ್ಮನ್ನು ಬಹಳ ಗೌರವದಿಂದ ನೋಡಿಕೊಂಡರು. ವೈದ್ಯರೂ ಸಹ ನಾವಿದ್ದ ಎರಡು ದಿನಗಳೂ ಬಂದು ನಮ್ಮ ಆರೋಗ್ಯವನ್ನು ವಿಚಾರಿಸಿಕೊಂಡು ಹೋಗುತ್ತಿದ್ದರು. ಶ್ರೀ ರೆಡ್ಡಿಯವರ ಅಭಿಮಾನಕ್ಕೂ ವಿಶ್ವಾಸಕ್ಕೂ ನಾನು ತುಂಬಾ ಕೃತಜ್ಞನಾಗಿದ್ದೇನೆ. ನನ್ನ ಮಗಳು, ಆಮೇಲೆ ನನ್ನ ಹಿರಿಯ ಮೊಮ್ಮಗಳು ಇವರ ವಿವಾಹಗಳಿಗೆ ಶ್ರೀ ರೆಡ್ಡಿಯವರು ಮದ್ದೂರಿಗೆ ಬಂದು ವಧೂವರರನ್ನು ಆಶೀರ್ವದಿಸಿದರು. ಮೊನ್ನೆ ಮೊನ್ನೆ ನಡೆದ ನನ್ನ ಎರಡನೆಯ ಮೊಮ್ಮಗಳ ಮದುವೆಯ ಸಂದರ್ಭದಲ್ಲಿ ಅವರಿಗೆ ಲಗ್ನಪತ್ರಿಕೆ ಸಕಾಲಕ್ಕೆ ಸೇರದಿದ್ದರೂ, ಅವರು ಬೆಂಗಳೂರಿಗೆ ಬಂದ ನಂತರ ಕಾಗದ ಬರೆದು ಮದುವೆಗೆ ಬರಲಾಗದಿದ್ದುದಕ್ಕೆ ತಮಗಾದ ವಿಷಾದವನ್ನು ವ್ಯಕ್ತಪಡಿಸಿದ್ದರು.

ಹೀಗೆ ದೇವರ ದಯೆಯಿಂದ ಶ್ರೀ ರೆಡ್ಡಿಯವರ ಮತ್ತು ನನ್ನ ಆತ್ಮೀಯ ಸ್ನೇಹ ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

ಆಧಾರ : ಬದುಕು–ಮೆಲುಕು (ಆತ್ಮಕಥೆ)

ಎಚ್.ಕೆ. ವೀರಣ್ಣಗೌಡ
ಸ್ವಾತಂತ್ರ್ಯ ಹೋರಾಟಗಾರರು,
ಸಂಪಾದಕರು, ಪತ್ರಕರ್ತರು

9. ಕೆ. ಚಂಗಲರಾಯರೆಡ್ಡಿ

ಮೈಸೂರು ಸಂಸ್ಥಾನದ ಪ್ರಬಲ ಬ್ರಾಹ್ಮಣೇತರ ರಾಜಕೀಯ ಪಕ್ಷವಾದ ಪ್ರಜಾ ಸಂಯುಕ್ತ ಪಕ್ಷವನ್ನು ಕಾಂಗ್ರೆಸ್ಸನ್ನು ವಿಲೀನಗೊಳಿಸುವ ಪ್ರಯತ್ನದ ನಿರ್ಧಾರ ಆಗುವ ವೇಳೆಗೆ ನಡೆದ ಮಾತುಕತೆಯಲ್ಲಿ ಕೆ.ಸಿ. ರೆಡ್ಡಿ ಅವರ ವ್ಯಕ್ತಿತ್ವ, ಪ್ರಾಮಾಣಿಕತೆ, ಧೈರ್ಯ, ಬುದ್ಧಿವಂತಿಕೆ, ಮುಂದಾಳತ್ವ, ಸಂಘಟನಾ ಚಾತುರ್ಯ, ನಿಸ್ವಾರ್ಥತೆಯನ್ನು ಸರ್ದಾರ್ ವೆಂಕಟರಾಮಯ್ಯನರು ತಮ್ಮ 'ಆತ್ಮಕಥೆ'ಯಲ್ಲಿ ಅನಾವರಣ ಗೊಳಿಸಿದ್ದಾರೆ.

"..... ಒಂದು ದಿನ ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ)ದ ಅಧ್ಯಕ್ಷರಾಗಿದ್ದ ಕೆ. ಚಂಗಲರಾಯರೆಡ್ಡಿ ಅವರನ್ನು ಕರೆದುಕೊಂಡು ಬಂದೆ. ಇನ್ನೊಬ್ಬರ ಮಾತಿನ ನಡುವೆ ಒಂದು ಚಕಾರವೆತ್ತದೆ ತಾಳ್ಮೆಯಿಂದ ಕೇಳುವ ಅವರ ಸಾಮರ್ಥ್ಯ ಪ್ರಶಂಸಾರ್ಹವಾಗಿತ್ತು. ಪೊಟೊನಿಯಸ್ ತನ್ನ ಮಗನಿಗೆ ನೀಡಿದ ಬುದ್ಧಿವಾದವನ್ನು ಅರೆದು ಕುಡಿದಿದ್ದವರಂತೆ ಕಾಣುತ್ತಿದ್ದ ವ್ಯಕ್ತಿ. ಒಂದು ಶಬ್ದವನ್ನೂ ಆಡದೆ ಎಲ್ಲವನ್ನೂ ಕೇಳಿಸಿಕೊಂಡ ಮೇಲೆ ತಮ್ಮ ಕಾರನ್ನು ಕೊಟ್ಟರು. ಅದರಲ್ಲಿ ಬಿ.ಎನ್. ಗುಪ್ತ ಮತ್ತು ಟಿ. ಸಿದ್ಧಲಿಂಗಯ್ಯ ಕ್ಯಾಸಂಬಳ್ಳಿಗೆ ಹೋಗಿ ಅವರ ಅಣ್ಣ ಕೆ. ವೆಂಕಟರಾಮರೆಡ್ಡಿಯವರಿಂದ ಒಂದು ಪತ್ರವನ್ನು ತಂದು ಚಂಗಲರಾಯರೆಡ್ಡಿಯವರ ಕೈಗೆ ಇಟ್ಟರು. "ನೀನು ರಾಜಕೀಯದಲ್ಲಿ ಮುಂದುವರೆಯುವವ ನಿದ್ದರೆ ದಯವಿಟ್ಟು ಕಾಂಗ್ರೆಸ್ಸಿನಲ್ಲಿರಬೇಕು" ಎಂದು ಕಾಗದದಲ್ಲಿ ಬರೆಯಲಾಗಿತ್ತು.

"ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ) ವನ್ನು ವಿಸರ್ಜಿಸಿ ಎಲ್ಲ ಸದಸ್ಯರೂ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸೇರಬೇಕೆಂಬುದಕ್ಕೆ ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ)ದ ಸಭೆಯಲ್ಲಿ ಒಂದು ನಿರ್ಣಯ ಮಂಡಿಸುವುದಾಗಿ ಚಂಗಲರಾಯರೆಡ್ಡಿ ಭರವಸೆ ನೀಡಿದರು. ಏತನ್ಮಧ್ಯೆ ತಾವು ಕೈಗೊಂಡಿರುವ ಪ್ರಚಾರವನ್ನು ನಿಲ್ಲಿಸಬೇಕೆಂದು ಸೂಚಿಸಿದರು. ಅದನ್ನು ಒಪ್ಪಿಕೊಳ್ಳಲಾಯಿತು ಮತ್ತು ಡಾ॥ ಹರ್ಡೀಕರ್ ನಂದಿಯಲ್ಲಿ ತಮ್ಮ ಬಿಡಾರವನ್ನು ರದ್ದುಗೊಳಿಸಿ ಹುಬ್ಬಳ್ಳಿಗೆ ಮರಳಬೇಕೆಂದೂ ಒಪ್ಪಿಕೊಳ್ಳಲಾಯಿತು........."

ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ) ದ ಸದಸ್ಯರು ಕಾಂಗ್ರೆಸ್ಸಿನಲ್ಲಿ ಸೇರಿದ್ದಾದ ಮೇಲೆ ಅವರು ಜಾತೀಯವಾದಿ ಪಕ್ಷದೊಡನೆ ಸಂಬಂಧ ಹೊಂದಿದ್ದರೆಂಬುದಕ್ಕಾಗಿ ಅವರನ್ನು ಎರಡನೆಯ ದರ್ಜೆಯ ಕಾಂಗ್ರೆಸ್ಸಿಗರನ್ನಾಗಿ ಪರಿಗಣಿಸಲಾಗುವುದೇ ? ಪರಿ ಪೂರ್ಣತೆ ಪಡೆದ ಕಾಂಗ್ರೆಸ್ ಸದಸ್ಯರನ್ನು ನಂಬುವಂತೆ ಈ ಹೊಸಬರನ್ನು ನಂಬಲಾಗು ತ್ತದೆಯೇ ? ಕಾಂಗ್ರೆಸ್ಸಿಗೆ ಹೋಗಿ ಅಲ್ಲಿ ಒಂದು ಹೀನ ಶ್ರೇಣಿಯಲ್ಲಿ ಇದ್ದುಕೊಂಡಿರುವುದಕ್ಕೆ ಬದಲಾಗಿ ಈಗಿರುವ ಪಕ್ಷದಲ್ಲೆ ಯಜಮಾನರಂತೆ ಇರಬಹು ದಲ್ಲವೆ ? ಎಂಬ ಸಂದೇಹಗಳಿಗೆ

ಉತ್ತರವಾಗಿ .... ನನಗೆ (ಸರ್ದಾರ್ ವೆಂಕಟರಾಮಯ್ಯ) ಹೀಗೆನಿಸುವುದಿಲ್ಲ. ನೀವು ಒಮ್ಮೆ ಕಾಂಗ್ರೆಸ್ಸಿಗೆ ಸೇರಿದ ಮೇಲೆ ನಿಮ್ಮನ್ನು ಕಾಂಗ್ರೆಸ್ಸಿಗರೆಂದು ಕಾಣಲಾಗುತ್ತದೆಯೇ ಹೊರತು ಅದರಲ್ಲಿ ಬೇರೆ ದೃಷ್ಟಿಗೆ ಎಡೆ ಇಲ್ಲ.... ಇಷ್ಟೆಲ ನಾನು ಹೇಳಿದ ಮೇಲೂ ನಿಮಗೆ ಯಾರಾದರೂ ಮನಸ್ಸಿಗೆ ತೃಪ್ತಿಯಾಗುವ ಉತ್ತರ ಕೊಡಬಲ್ಲವರಿದ್ದರೆ ಅದು ಮಹಾತ್ಮಗಾಂಧೀಯವರೊಬ್ಬರೇ. ಈ ಪ್ರಶ್ನೆಗಳನ್ನೆಲ್ಲ ಅವರ ಮುಂದಿಡಬಹುದು.

".........ಸ್ವಲ್ಪ ದಿನಗಳ ನಂತರ ತಮ್ಮ ಪ್ರಶ್ನೆಯನ್ನು ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ)ದ ನಾಯಕರು ಗಾಂಧಿಯವರು ಮುಂದಿಟ್ಟಾಗ ಅವರು ರೆಡ್ಡಿಯವರನ್ನು ಆಲಂಗಿಸಿ ಕೊಂಡು ತಮ್ಮ ಮಕ್ಕಳನ್ನು ಬರಮಾಡಿ ಕೊಳ್ಳುವಂತೆಯೇ ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ)ದ ಎಲ್ಲರನ್ನೂ ಕಾಂಗ್ರೆಸ್ ಕಕ್ಷೆಯೊಳಗೆ ಬರಮಾಡಿಕೊಳ್ಳುವುದಾಗಿ ಹೇಳಿದರೆಂದು ಅಲ್ಲಿದ್ದವರು ನನಗೆ ತಿಳಿಸಿದರು. ಕೆ.ಸಿ. ರೆಡ್ಡಿಯವರಿಗೆ ಆನಂದಭಾಷ್ಪ ತುಂಬಿಕೊಂಡು ಕೊರಳುಭಾರವಾಗಿ ಮಾತು ಮೂಕವಾಯಿತು. ಮಹಾತ್ಮರು ಸಂದೇಹಗಳನ್ನೆಲ್ಲ ಬದಿಗೆ ಸರಿಸಿದ್ದಲ್ಲದೆ ಅವರು ಕಾಂಗ್ರೆಸ್ಸಿನಲ್ಲಿ ಸೇರುವ ನಿರ್ಧಾರಕ್ಕೆ ವೇಗ ತಂದುಕೊಟ್ಟಿತು. ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ)ದ ಮುಂದಾಳಾಗಿದ್ದ ರೆಡ್ಡಿ ತಮ್ಮ ಇಡೀ ಪಕ್ಷವನ್ನು ಈ ನಿರ್ಧಾರಕ್ಕೆ ಪ್ರೇರೇಪಿಸಿ ಅಸಾಧಾರಣವಾದ ದೂರದೃಷ್ಟಿಯನ್ನು ಪ್ರದರ್ಶಿಸಿದರು" ಎಂದಿದ್ದಾರೆ.

ಮುಂದೆ ವಿಲೀನದ ಆ ನಂತರ "ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಎಸ್. ವೆಂಕಟಪತಯ್ಯನವರು ತಕ್ಷಣ ಅಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಯಸಿದರು. ವೆಂಕಟಪತಯ್ಯನವರೇ ಅಧ್ಯಕ್ಷರಾಗಿ ಮುಂದುವರೆದು ಪಕ್ಷದ ನಾಯಕರಾಗಿ ಇರಬೇಕೆಂದು ಕೆ.ಸಿ. ರೆಡ್ಡಿಯವರೇ ಆಗ್ರಹ ಪಡಿಸಿದರು. ಬ್ರಾಹ್ಮೇತರರು ಕಾಂಗ್ರೆಸ್ ಸೇರಿ ತಕ್ಷಣ ಬ್ರಾಹ್ಮಣರನ್ನು ಹೊರದೂಡಿದರೆಂಬ ಭಾವನೆಗೆ ಎಡೆಗೊಡಬಾರದೆಂದು ಅವರ ಅನಿಸಿಕೆಯಾಗಿತ್ತು. ತಾವೆಲ್ಲ (ಪ್ರಜಾ ಸಂಯುಕ್ತ ಪಕ್ಷ) ಕಾಂಗ್ರೆಸ್ ಸೇರಿದ್ದು ರಾಜ್ಯದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರ ನಡುವಿನ ಮತ್ಸರವನ್ನು ಅಳಿಸಿ ಹಾಕಬೇಕೆಂದು ರೆಡ್ಡಿ ಆಶಿಸಿದರು. ಪ್ರಜಾಪಕ್ಷ (ಪ್ರಜಾ ಸಂಯುಕ್ತ ಪಕ್ಷ)ವನ್ನು ವಿಸರ್ಜಿಸಿದ್ದಾದ ಮೇಲೆ ಜಾತೀಯ ಪರಿಗಣನೆಯನ್ನು ಆಳವಾಗಿ ಹೂತು ಹಾಕಲಾಗಿದೆ" ಎಂದು ಹೇಳಿದರು.

ಇದರ ದೆಸೆಯಿಂದ ವೆಂಕಟಪತಯ್ಯನವರ ಮನೆಯಲ್ಲಿ ನಡೆದ ಸಭೆಯಲ್ಲಿ "....ಪುನಃ ಕೆ.ಸಿ. ರೆಡ್ಡಿಯವರು, ವೆಂಕಟಪತಯ್ಯನವರು ಅಧ್ಯಕ್ಷರಾಗಿ ಮುಂದುವರೆದು ಪಕ್ಷವನ್ನು ನಡೆಸಬೇಕು; ತಾವೆಲ್ಲ ಹೊಸದಾಗಿ ಕಾಂಗ್ರೆಸ್ಸಿಗೆ ಸೇರಿರುವುದರಿಂದಲೂ ಇದು ಅವಶ್ಯಕವೆಂದೂ ವಾದಿಸಿದರು".

ಸರ್ದಾರ್ ವೆಂಕಟರಾಮಯ್ಯ
ಸ್ವಾತಂತ್ರ್ಯ ಹೋರಾಟಗಾರರು

ಆಧಾರ : ಸತ್ಯಾಗ್ರಹಿ : ಒಂದು ಜೀವನ ಕಥೆ

10. ಕ್ಯಾಸಂಬಳ್ಳಿ ರೆಡ್ಡಿ ಕುಟುಂಬದಿಂದ ಬಡವರಿಗೆ ಭೂ ಸಂಪತ್ತಿನ ದಾನ

ಹಿಂದೂಗಳ ನಂಬಿಕೆಯಂತೆ ಬಹು ಉತ್ತಮ ದಿನವೆಂದು ನಿರ್ಧರಿಸಲಾಗಿರುವ ಉತ್ತರಾಯಣ ಪ್ರಾರಂಭದ ಸಂಕ್ರಾಂತಿ ಹಬ್ಬದಂದು ಕೇಂದ್ರ ಸರ್ಕಾರದ ಉತ್ಪನ್ನಶಾಖಾ ಸಚಿವರಾದ ಶ್ರೀ ಕೆ. ಚಂಗಲರಾಯರೆಡ್ಡಿ ಅವರ ಹಿರಿಯ ಸಹೋದರರಾದ ಶ್ರೀ ಕೆ. ವೆಂಕಟರಾಮರೆಡ್ಡಿ ಅವರು ಆಚಾರ್ಯವಿನೋಭಭಾವೆ ಅವರ ಬೋಧನೆಯಂತೆ ತಮ್ಮ ಕುಟುಂಬದ ಒಟ್ಟು ಭೂ ಆಸ್ತಿಯಲ್ಲಿ 6/1ರಷ್ಟು ಭಾಗವನ್ನು ಜಮೀನಿಲ್ಲದ ರೈತರಿಗೆ ಹಂಚಲಿರುವುದಾಗಿ ನುಡಿದರು.

ಕೇಂದ್ರ ಸರ್ಕಾರದ ಉಪಮಂತ್ರಿ ಶ್ರೀ ಎಂ.ವಿ. ಕೃಷ್ಣಪ್ಪನವರು ಕಳೆದ ಬುಧವಾರ ಸಂಜೆ ಅನಿರೀಕ್ಷಿತವಾಗಿ ಕ್ಯಾಸಂಬಳ್ಳಿಗೆ ಭೇಟಿ ಇತ್ತಾಗ ಶ್ರೀ ಕೆ. ವೆಂಕಟರಾಮರೆಡ್ಡಿಯವರು ಭೂಮಿ ದಾನದ ಬಗ್ಗೆ ತಮ್ಮ ನಿರ್ಧಾರವನ್ನು ಶ್ರೀಕೃಷ್ಣಪ್ಪನವರಿಗೆ ತಿಳಿಸಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರಿದ್ದನ್ನು ಶ್ರೀ ಕೃಷ್ಣಪ್ಪನವರೇ ಕೂಡಲೇ ಒಪ್ಪಿದರು. ಕ್ಯಾಸಂಬಳ್ಳಿಯಲ್ಲಿ ಗುರುವಾರದಂದು ನಡೆದ ಬಹು ಸರಳ ರೀತಿಯ ಸಭೆಯಲ್ಲಿ ಶ್ರೀ ಎಂ.ವಿ. ಕೃಷ್ಣಪ್ಪನವರು ಶ್ರೀ ವೆಂಕಟರಾಮರೆಡ್ಡಿಯವರ ನಿರ್ಧಾರವನ್ನು ಪ್ರಕಟಿಸುತ್ತಾ ಜಮೀನು ಪಡೆಯುವವರ ಪಟ್ಟಿಯನ್ನು ಸಭೆಯಲ್ಲಿ ಓದಿದರು. ಸಭೆಯಲ್ಲಿ ಪ್ರಾರ್ಥನೆಯಾದ ನಂತರ ಶ್ರೀ ವೆಂಕಟ ರಾಮರೆಡ್ಡಿಯವರು ಮಾತನಾಡುತ್ತಾ "ಕಳೆದ ವಾರ ಕ್ಯಾಸಂಬಳ್ಳಿಯಲ್ಲಿ ನಡೆದ ಕಮ್ಯೂನಿಸ್ಟರ ಸಭೆಯಲ್ಲಿ ಹಲವರು ಮಾಡಲಾದ ಭಾಷಣಗಳ ಬಗ್ಗೆ ಮಾತನಾಡುತ್ತಾ ಅವರ ಭಾಷಣಗಳು ತುಂಬಾ ತಪ್ಪು ಅಂಶಗಳಿಂದ ಕೂಡಿದ್ದವೆಂದೂ ಅದನ್ನು ತಿಳಿದು ತಮಗೆ ತುಂಬಾ ವ್ಯಥೆ ಯಾಯಿತೆಂದೂ ತಾವು ತಮ್ಮ ಜಮೀನಿನ ವಿವರಣೆ ಸಾರ್ವಜನಿಕರಿಗೆ ನೀಡದೇ ಹೋದಲ್ಲಿ ತಪ್ಪು ಅಂಶ ಪ್ರಚಾರದಲ್ಲಿರುವವೆಂದರು".

ಶ್ರೀ ರೆಡ್ಡಿಯವರು ಮುಂದುವರೆದು "ತಮ್ಮ ತಂದೆಯವರಿಂದ (ವೆಂಕಟರೆಡ್ಡಿ) ತಮ್ಮ ಕುಟುಂಬಕ್ಕೆ 1400 ಎಕರೆಯಷ್ಟು ಜಮೀನು ಸಿಕ್ಕಿತೆಂದೂ ಆ ಪೈಕಿ ಕಳೆದ 15 ವರ್ಷಗಳಿಂದಲೇ ಗ್ರಾಮ ರೈತರಿಗೆ ಮಾರಾಟ ಮಾಡಲಾಯಿತೆಂದೂ ಈಗ ತಮಗೆ ತರಿ ಮತ್ತು ಖುಷ್ಕಿ ಜಮೀನು ಸೇರಿ 350 ಎಕರೆ ಇದೆ ಎಂದೂ ಆ ಪೈಕಿ ಈಗ ಸಾಗುವಳಿಗೆ ಅರ್ಹವಾಗಿರುವುದು ಕೇವಲ 150 ಎಕರೆಯಷ್ಟು ಜಮೀನೆಂದೂ ನುಡಿದು ಸವರಿ 150

ಎಕರೆಯಲ್ಲಿ ತಾವು ಕಳೆದ 15 ವರ್ಷಗಳ ಹಿಂದೆಯೇ ವಿಲ್‌ನ ಮೂಲಕ 25 ಎಕರೆ ಜಮೀನನ್ನು ನಿರ್ಗತಿಕ ಬಾಲಕ ವಿದ್ಯಾಭ್ಯಾಸ ಮತ್ತು ದೇವಸ್ಥಾನಗಳಿಗೆ ಹಂಚಿರುವುದಾಗಿಯೂ ತಿಳಿಸುತ್ತಾ, ಹಿಂದೂಗಳ ನಂಬಿಕೆಯಂತೆ ದಾನ ಮಾಡಿದ ಅಂಶಗಳು ಪ್ರಚಾರ ಮಾಡಬಾರದೆಂಬ ಕಾರಣದ ಮೂಲಕ ಸದರಿ ದಾನಗಳ ಅಂಶವನ್ನು ತಮ್ಮ ಗ್ರಾಮಸ್ಥರಿಗೆ ತಿಳಿಸಿರಲಿಲ್ಲ ಎಂದರು".

"120 ಎಕರೆ ಅಚ್ಚು ಕಟ್ಟಿರುವ ಕ್ಯಾಸಂಬಳ್ಳಿ ಕೆರೆಯ ಜಮೀನಿನ ಪೈಕಿ ತಮಗೆ 24 ಎಕರೆ ಮಾತ್ರ ಸೇರಿದ್ದೆಂದೂ ಇತರ ಹಲವರು ನಂಬಿರುವಂತೆ ಪೂರ್ಣ ಜಮೀನು ತಮ್ಮದಲ್ಲವೆಂದೂ ನುಡಿಯುತ್ತಾ ಸದರಿ ಅಂಶಗಳಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ಸಭೆಯಲ್ಲಿ ಓದಿದರು. ತಾವು ಸಂಕ್ರಾಂತಿಯಂದು 6 ಎಕರೆ ತರಿ ಮತ್ತು 25 ಎಕರೆ ಖುಷ್ಕಿ ಜಮೀನನ್ನು ಬಡ ಕುಟುಂಬಗಳಿಗೆ ಹಂಚಲು ನಿರ್ಧರಿಸಿರುವುದಾಗಿ ನುಡಿದು ಶ್ರೀ ಕೃಷ್ಣಪ್ಪ ನವರು ಆ ಕಾರ್ಯ ಮಾಡಬೇಕೆಂದರು".

ಎಂ.ವಿ. ಕೃಷ್ಣಪ್ಪನವರು ಮಾತನಾಡುತ್ತಾ "ಶ್ರೀ ವೆಂಕಟರಾಮರೆಡ್ಡಿಯವರು ತಮ್ಮ ಭೂಮಿಯನ್ನು ಬಡವರಿಗೆ ಹಂಚಿದಕ್ಕಾಗಿ ಮತ್ತೊಮ್ಮೆ ವಂದಿಸುತ್ತಾ ಈಗ ಶ್ರೀ ರೆಡ್ಡಿಯವರ ಸಂಸಾರದ ಪ್ರತಿ ಗಂಡು ಮಗುವಿಗೂ 10 ಎಕರೆ ತರಿ ಜಮೀನು ಮತ್ತು 5 ಎಕರೆ ಖುಷ್ಕಿ ಭೂಮಿ ಉಳಿದಿದೆ ಎಂಬುದನ್ನು ಸಹ ತಿಳಿಸಿದರು".

ದಿನಾಂಕ : ಜನವರಿ 15 **ಪತ್ರಿಕಾ ಪ್ರಕಟಣೆ (ಹೆಸರು ಇಲ್ಲ)**
ಕೋಲಾರ

ಸಂಗ್ರಹ : ವಿನೋಬಾ ಭಾವೆಯವರು ಭೂ ದಾನ ಚಳವಳಿ ಮೂಲಕ ರಾಷ್ಟ್ರದ ಭೂ ಸಮಸ್ಯೆಯನ್ನು ಶಾಂತಿಯುತವಾಗಿ ಅಹಿಂಸಾ ಮಾರ್ಗದಿಂದ ಬಗೆಹರಿಸಲು ಭಾರತದಾದ್ಯಂತ ಕಾಲ್ನಡಿಗೆಯಲ್ಲಿ [13 ವರ್ಷ, 1 ತಿಂಗಳು, 3 ದಿನ] ಸಂಚರಿಸಿ 40 ಲಕ್ಷ ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಸಂಗ್ರಹಿಸಿ ಗ್ರಾಮೀಣ ಭೂ ರಹಿತರಿಗೆ ವಿತರಿಸಿದ್ದಾರೆ.

ಹೀಗೆ 1957 ರಲ್ಲಿ ವಿಶಾಲ ಮೈಸೂರು ರಾಜ್ಯಕ್ಕೆ ಬಂದಿದ್ದಾಗ ಸುಮಾರು 20.000 (ಇಪ್ಪತ್ತು ಸಾವಿರ) ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಅವರಿಗೆ ನೀಡಲಾಯಿತು.

ಛಾಯಾಚಿತ್ರಗಳು



ಕೆ. ಚಂಗಲರಾಯರೆಡ್ಡಿ
(ಮೈಸೂರು ಕಾಂಗ್ರೆಸ್ ಮುಖಂಡರು)
1937–1952

ಕೆ.ಸಿ. ರೆಡ್ಡಿ ತಾಯಿ – ತಂದೆ



ಶ್ರೀಮತಿ ಗಂಗೋಜಮ್ಮ
ರಾಜಪೇಟೆ, ಕುಪ್ಪಂ (ತಾ),
ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.



ಶ್ರೀ ಬಿ. ವೆಂಕಟರೆಡ್ಡಿ
ಕ್ಯಾಸಂಬಳ್ಳಿ, ಬಂಗಾರಪೇಟೆ (ತಾ),
ಕೋಲಾರ ಜಿಲ್ಲೆ.



ಕೆ.ಸಿ. ರೆಡ್ಡಿ ಅವರ ಜನಿಸಿದ ತಾಯಿ ಮನೆ.
ರಾಜಪೇಟೆ, ಕುಪ್ಪಂ, ಆಂಧ್ರಪ್ರದೇಶ.



ಕೆ.ಸಿ. ರೆಡ್ಡಿ ಅವರ ತಂದೆ ಮನೆ.
ಕ್ಯಾಸಂಬಳ್ಳಿ, ಬಂಗಾರಪೇಟೆ, ಕೆ.ಜಿ.ಎಫ್., ಕೋಲಾರ ಜಿಲ್ಲೆ.



ಕೆ.ಸಿ. ರೆಡ್ಡಿ ಅವರು ಓದಿದ
ನರ್ಸರಿ ಲೋಯರ್ ಅಂಡ್ ಹೈಯರ್ ಪ್ರೈಮರಿ ಸ್ಕೂಲ್, ಕೆ.ಜಿ.ಎಫ್.



ಕೆ.ಸಿ. ರೆಡ್ಡಿ ಅವರು ಓದಿದ
ಲಂಡನ್ ಮಿಷನ್ ಹೈಸ್ಕೂಲ್, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು.




ಕೆ.ಸಿ. ರೆಡ್ಡಿ ಬಿ.ಎ., ಪದವಿ ಪಡೆದ ಕಾಲೇಜು. ಪಚ್ಚಿಯಪ್ಪ ಪದವಿ ಕಾಲೇಜು, ಚೆನ್ನೈ



ಕೆ.ಸಿ. ರೆಡ್ಡಿ ಬಿ.ಎಲ್., ಸ್ನಾತಕೋತ್ತರ ಪದವಿ ಪಡೆದ ಕಾಲೇಜು,
ಮದ್ರಾಸ್ ಲಾ ಕಾಲೇಜು, ಚೆನ್ನೈ.

ವಿವಾಹ ಸಮಾರಂಭ, ದಂಪತಿಗಳು
ದಿನಾಂಕ : 26–08–1934



ಶ್ರೀಮತಿ ಸರೋಜಮ್ಮ (2ನೇ ಪತ್ನಿ), ಕೆ.ಸಿ. ರೆಡ್ಡಿ

ಕೆ.ಸಿ. ರೆಡ್ಡಿಯವರ ಅಣ್ಣ ಮತ್ತು ಅತ್ತಿಗೆ



ಶ್ರೀ ವೆಂಕಟರಾಮರೆಡ್ಡಿ, ಶ್ರೀಮತಿ ರುಕ್ಮಿಣಮ್ಮ

ಕೆ.ಸಿ. ರೆಡ್ಡಿಯವರ ಮಾವ ಮತ್ತು ಅತ್ತೆ



ಶ್ರೀ ಹೆಚ್.ಆರ್. ಗುರುವಾರೆಡ್ಡಿ, ಶ್ರೀಮತಿ ಅಕ್ಕಮ್ಮ

ಕೋಲಾರ ನಗರ : ಹರಿಜನ ನಿಧಿ ಸಂಗ್ರಹ
ದಿನಾಂಕ : 31–05–1936



ಎಡದಿಂದ ಬಲಕ್ಕೆ : 1. ಕೆ.ಸಿ. ರೆಡ್ಡಿ, ಅಧ್ಯಕ್ಷರು, ಕೋಲಾರ ಜಿಲ್ಲಾ ಬೋರ್ಡ್
2. ಮಹಾತ್ಮ ಗಾಂಧೀಜಿ, 3. ಶ್ರೀಮತಿ ಸರೋಜಿನಿ ನಾಯ್ಡು,
4. ಶ್ರೀಮತಿ ಕಸ್ತೂರಿಬಾ ಗಾಂಧೀ.

ಸನ್ಮಾನ ಸಮಾರಂಭ : ಮೇಲೂರು, ಚಿಕ್ಕಬಳ್ಳಾಪುರ ಜಿಲ್ಲೆ. ದಿನಾಂಕ : 02-08-1933



ಎಡದಿಂದ ಬಲಕ್ಕೆ : 1. ಎನ್. ಸೊಣ್ಣಪ್ಪ, 2. ಬಿ. ಕೆಂಪಣ್ಣ, 3. ವಿ. ವೆಂಕಟಸ್ವಾಮಿಚಟ್ಟಿ, 4. ವಿ. ವೆಂಕಟಪ್ಪ, 5. ಕೆ. ಚಂಗಲರಾಯರೆಡ್ಡಿ, ಅಧ್ಯಕ್ಷರು, ಕೋಲಾರ ಜಿಲ್ಲಾ ಬೋರ್ಡ್, 6. ಕೆ. ವೆಂಕಟವರದಾಚಾರ್, 7. ಸುಬ್ಬರಾವ್, 8. ಎಸ್. ಸಂಪಂಗಿರಾಮಯ್ಯ, 9. ಬಿ.ಎನ್. ಗುಪ್ತ, 10. ಕೆ. ರಾಮೇಗೌಡ.

ಪ್ರಜಾ ಸಂಯುಕ್ತ ಪಕ್ಷದ ಎರಡನೆಯ ಅಧಿವೇಶನ,
ಕೋಲಾರ, ಜನವರಿ 23, 24 – 1937



ಎಡದಿಂದ ಬಲಕ್ಕೆ :– 1. ವಿ. ವೆಂಕಟಪ್ಪ, ಸಮ್ಮೇಳನ ಅಧ್ಯಕ್ಷರು,
2. ಕೆ.ಸಿ. ರೆಡ್ಡಿ, ಅಧ್ಯಕ್ಷರು, ಸ್ವಾಗತ ಸಮಿತಿ, 3. ಎಚ್.ಸಿ. ದಾಸಪ್ಪ, 4. ಪಾಮಡಿ ಸುಬ್ಬರಾಮಶೆಟ್ಟಿ.

ಪ್ರಜಾ ಸಂಯುಕ್ತ ಪಕ್ಷ ಮತ್ತು ಮೈಸೂರು ಕಾಂಗ್ರೆಸ್ ಬೋರ್ಡ್ ಪಕ್ಷಗಳ ವಿಲೀನ, ಮೈಸೂರು.
ದಿನಾಂಕ : **16–10–1937**



ಎಡದಿಂದ ಬಲಕ್ಕೆ : ಕುರ್ಚಿ ಮೇಲೆ ಕುಳಿತಿರುವವರು 3. ಹೆಚ್. ಸಿದ್ದಯ್ಯ, 4. ಬಿ.ಎನ್. ಗುಪ್ತ, 5. ಕೆ. ರಂಗರಾಮಯ್ಯ, 6. ಎಚ್.ಸಿ. ದಾಸಪ್ಪ, 7. ಕೆ.ಸಿ. ರೆಡ್ಡಿ, 8. ಎಸ್. ಚನ್ನಯ್ಯ ಹಾಗೂ ಇತರರು.

ಮೈಸೂರು ಕಾಂಗ್ರೆಸ್ ಮುಖಂಡರು
ಶಿವಪುರ ಧ್ವಜ ಸತ್ಯಾಗ್ರಹ : ದಿನಾಂಕ : 12–04–1938



ಬಂಧನ (ಎಡದಿಂದ ಬಲಕ್ಕೆ) :
1. ಕೆ.ಸಿ. ರೆಡ್ಡಿ, 2. ಹೆಚ್.ಸಿ. ದಾಸಪ್ಪ, 3. ವಿ. ವೆಂಕಟಪ್ಪ

ಮೈಸೂರು ಕಾಂಗ್ರೆಸ್ ನಾಯಕರು



ಎಡದಿಂದ ಬಲಕ್ಕೆ : 1. ಕೆ. ರಂಗರಾಮಯ್ಯ, 2. ಕೆ.ಸಿ. ರೆಡ್ಡಿ, 3. ಹೆಚ್.ಕೆ. ವೀರಣ್ಣಗೌಡ,
4. ಕೆ. ಸಂಪಂಗಿರಾಮಯ್ಯ 5. ಹೆಚ್.ಸಿ. ದಾಸಪ್ಪ 6. ಎ.ವಿ. ಶ್ರೀನಿವಾಸಮೂರ್ತಿ
7. ವೀರಕೇಸರಿ ಸೀತಾರಾಮಶಾಸ್ತ್ರೀ 8 ಕೆ. ಪಟ್ಟಾಭಿರಾಮನ್.

ಮೈಸೂರು ಕಾಂಗ್ರೆಸ್ ಶಾಸಕರ ಶಿಕ್ಷಣ ಶಿಬಿರ, ಬೆಂಗಳೂರು 1940–41



ಎಡದಿಂದ ಬಲಕ್ಕೆ :– 1. ಶ್ರೀಮೂರ್ತಿ, 2. ಕೆ. ಹನುಮಂತಯ್ಯ, 3. ಟಿ. ಪ್ರಕಾಶಂ, ಆಂಧ್ರಕೇಸರಿ 4. ಎಂ.ಎನ್. ಜೋಯಿಸ್ (ಹಿಂದೆ) 5. ಎಸ್. ನಿಜಲಿಂಗಪ್ಪ, 6. ಕೆ.ಸಿ. ರೆಡ್ಡಿ, 7. ಮಾರಪ್ಪ, ಮಳವಳ್ಳಿ, 8. ರಾಮಚಂದ್ರರಾವ್, ಮೈಸೂರು.

ಆಜಾದ್ ಯುತ್‌ಲೀಗ್ ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್., ಕೋಲಾರ. 1941–1942



ಎಡದಿಂದ ಕುಳಿತಿರುವವರು :
ಕೆ.ಸಿ. ರೆಡ್ಡಿ, ಅಧ್ಯಕ್ಷರು, ಆಜಾದ್‌ಯುತ್‌ಲೀಗ್, ಹಾಗೂ ಇತರರು.

ಉದ್ಘಾಟನೆ : ಅಖಿಲ ಕರ್ನಾಟಕ ಸರ್ವಪಕ್ಷ ಸಮ್ಮೇಳನ, ದಾವಣಗೆರೆ.
ದಿನಾಂಕ : 31–08–1946



ಎಡದಿಂದ ಬಲಕ್ಕೆ : 2 ಶರತ್‌ಚಂದ್ರಬೋಸ್ (ಸುಭಾಷ್ ಅಣ್ಣ),
3. ಕೆ.ಸಿ. ರೆಡ್ಡಿ, ಅಧ್ಯಕ್ಷರು, ಮೈಸೂರು ಕಾಂಗ್ರೆಸ್.

ಮೈಸೂರು ಕಾಂಗ್ರೆಸ್ ಭವನ ಉದ್ಘಾಟನಾ ಸಮಾರಂಭ, ಬೆಂಗಳೂರು.
ದಿನಾಂಕ : 05-12-1946




ಎಡದಿಂದ ಬಲಕ್ಕೆ ನಿಂತಿರುವವರು : 1. ಎ.ಜಿ. ರಾಮಚಂದ್ರರಾವ್
2. ಕೆ.ಸಿ. ರೆಡ್ಡಿ, ಅಧ್ಯಕ್ಷರು, ಮೈಸೂರು ಕಾಂಗ್ರೆಸ್ 3. ಜಿ.ಎ. ತಿಮ್ಮಪ್ಪಗೌಡ, ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್, 4. ಯಜಮಾನ್ ಮೊಹಮ್ಮದ್ ಖಾಸಿಂಸಾಬ್ ಹಾಗೂ ಇತರರು.



ಕೆ. ಚಂಗಲರಾಯರೆಡ್ಡಿ [1930–1950]
(ಎಂ.ಆರ್.ಎ. ಮತ್ತು ಎಂ.ಎಲ್.ಸಿ.)

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಭೆ



ಎಡದಿಂದ ಬಲಕ್ಕೆ : ಹೆಚ್.ಸಿ. ದಾಸಪ್ಪ, ಕೆ. ಹನುಮಂತಯ್ಯ, ಸಾಹುಕಾರ ಚನ್ನಯ್ಯ, ಕೆ.ಸಿ. ರೆಡ್ಡಿ ಹಾಗೂ ಇತರರು.

ಮೈಸೂರು ಚಲೋ ಸತ್ಯಾಗ್ರಹ ಘೋಷಣೆ
ದಿನಾಂಕ : 01–09–1947



ಕೆ.ಸಿ. ರೆಡ್ಡಿ ಪ್ರಥಮ ಡಿಕ್ಟೇಟರ್, ಮೈಸೂರು ಕಾಂಗ್ರೆಸ್,
ಬನಪ್ಪಾ ಪಾರ್ಕ್, ಬೆಂಗಳೂರು.

ಸನ್ಮಾನ ಸಮಾರಂಭ : ತುಮಕೂರು ಕಾಂಗ್ರೆಸ್ ಸೇವಾಧಳ : 1946–1947



ಮೈಸೂರು ಚಲೋ ಚಳವಳಿ :
1. ಕೆ.ಸಿ. ರೆಡ್ಡಿ, ಅಧ್ಯಕ್ಷರು, ಮೈಸೂರು ಕಾಂಗ್ರೆಸ್, 2. ಟಿ. ಸುಬ್ರಹ್ಮಣ್ಯ
3. ಆರ್.ಎಸ್. ಆರಾಧ್ಯ, 4. ಬಿ.ಸಿ. ನಂಜುಂಡಯ್ಯ.

ಮೈಸೂರು ರಾಜ್ಯಕ್ಕೆ ಜವಾಬ್ಧಾರಿ ಸರ್ಕಾರ ತಂದುಕೊಟ್ಟ ಮೈಸೂರು ಕಾಂಗ್ರೆಸ್‌ನ ಮಹಾನಾಯಕರು



ಎಡದಿಂದ ಬಲಕ್ಕೆ

1ನೇ ಸಾಲು : 1. ಎಚ್. ಸಿದ್ಧಯ್ಯ, 2. ಟಿ. ಮರಿಯಪ್ಪ, 3. ಕೆ.ಟಿ. ಭಾಷ್ಯಂ,
4. ಕೆ.ಸಿ. ರೆಡ್ಡಿ, 5. ಟಿ. ಸಿದ್ಧಲಿಂಗಯ್ಯ, 6. ಆರ್. ಚನ್ನಿಗರಾಯಮ್ಮ

2ನೇ ಸಾಲು : 1. ಹುಸೇನ್ ಸಾಹೇಬ್, 2. ಕೆ. ಹನುಮಂತಯ್ಯ 3. ಎ.ಜಿ. ರಾಮಚಂದ್ರರಾವ್,
4. ಎಚ್.ಕೆ. ವೀರಣ್ಣಗೌಡ, 5. ಹುಚ್ಚೇಗೌಡ.

3ನೇ ಸಾಲು : 1. ಕೆ.ಎಸ್. ಕುಮಾರನ್, 2. ಎ.ಜಿ. ಬಂಧೀಗೌಡ, 3. ರಾಜಶೇಖರ ಹಿರೇಮಠ,
4.ಎಸ್.ವಿ. ಕೃಷ್ಣಮೂರ್ತಿರಾವ್.

4ನೇ ಸಾಲು : 1. ಕೆ.ಆರ್. ಮಾಧವರಾವ್, 2. ಎಸ್. ನಿಜಲಿಂಗಪ್ಪ, 3. ವಿ. ವೆಂಕಟಪ್ಪ,
4. ಎಸ್. ಚನ್ನಯ್ಯ, 5. ಟಿ. ಸುಬ್ರಹ್ಮಣ್ಯ.

ಮೈಸೂರು ರಾಜ್ಯದ ಮೊದಲ ಮಂತ್ರಿಮಂಡಲದ ಸದಸ್ಯರು
ದಿನಾಂಕ : 24–10–1947



ಎಡದಿಂದ ಬಲಕ್ಕೆ : 1. ಪಿ. ಸುಬ್ಬರಾಯ ಶೆಟ್ಟಿ, 2. ಟಿ. ಮರಿಯಪ್ಪ, 3. ಹೆಚ್. ಸಿದ್ದಯ್ಯ, 4. ಕೆ.ಟಿ. ಬಾಷ್ಯಂ ಅಯ್ಯಂಗಾರ್, 5. ಕೆ.ಸಿ. ರೆಡ್ಡಿ, 6. ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್, 7. ಹೆಚ್.ಸಿ. ದಾಸಪ್ಪ, 8. ಡಿ.ಹೆಚ್. ಚಂದ್ರಶೇಖರಯ್ಯ, 9. ಮಹಮ್ಮದ್ ಷರೀಫ್, 10. ಆರ್. ಚನ್ನಿಗರಾಮಯ್ಯ.

Registered No. M. 1175

The Mysore Gazette.

(PUBLISHED BY AUTHORITY)

EXTRAORDINARY

BANGALORE, FRIDAY, OCTOBER 24, 1947

NOTIFICATION

No. 2307—C. B. 113-47-1, dated Bangalore, 24th October 1947

His Highness the Maharaja has been graciously pleased to appoint the following gentlemen to serve on the Council of Ministers:—

1.	MR. K. CHENGALARAYA REDDY	...	Chief Minister.
2.	MR. H. C. DASAPPA ...	...	Minister.
3.	MR. K. T. BHASHYAM IYENGAR	...	Do
4.	MR. H. SIDDIAH	...	Do
5.	MR. T. MARIAPPA	...	Do
6.	MR. R. CHENNIGARAMIAH ...	....	Do
7.	MR. MAHOMED SHERIFF ...	...	Do
8.	MR. D. H. CHANDRASEKHARIAH	...	Do
9.	*Rajasevasakta* P. SUBBARAMA SETTY	...	Do

The Ministers will take charge of their office on Friday, the 24th October 1947. The Council of Ministers will consist of the Dewan, the Chief Minister and Ministers mentioned above.

By Order,

V. VEDAVYASACHARYA,

Chief Secretary to Government.

Printed by the Superintendent at the Government Press, Bangalore



ಕೆ.ಸಿ. ರೆಡ್ಡಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಡೆದ ಮೆರವಣಿಗೆಯಲ್ಲಿ
ಎಂ.ಎಸ್. ಜೋಯಿಸ್ – 1947



ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, ಪ್ರಥಮ ಸಾರ್ವಜನಿಕ ಸಭೆ. ದಿನಾಂಕ : 24–10–1947



ಎಡದಿಂದ ಬಲಕ್ಕೆ : 4. ಸರ್ದಾರ್ ವಲ್ಲಭಬಾಯ್ ಪಟೇಲ್, ಉಪಪ್ರಧಾನಿ, ಗೃಹಮಂತ್ರಿ, ಭಾರತ ಸರ್ಕಾರ, 5. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, 6. ಎ.ಆರ್. ಮೊದಲಿಯಾರ್, ದಿವಾನರು, ಮೈಸೂರು ರಾಜ್ಯ, 1947.–1948.

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷ
ದಿನಾಂಕ : 22–12–1947 ಜನವಾಣಿ ಶುಭಾಶಯಗಳು



ಎಡದಿಂದ ಬಲಕ್ಕೆ (ಕುರ್ಚಿಯಲ್ಲಿ) 1. ಎಸ್. ಅಣ್ಣಪ್ಪಶೆಟ್ಟರು, 2. ಟಿ. ಮರಿಯಪ್ಪ, 3. ಹೆಚ್. ಸಿದ್ದಯ್ಯ, 4. ಕೆ.ಟಿ. ಬಾಷ್ಯಂ ಅಯ್ಯಂಗಾರ್, 5. ಹೆಚ್.ಸಿ. ದಾಸಪ್ಪ, 6. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, 7 ಕೆ. ಹನುಮಂತಯ್ಯ, 8. ಎಸ್. ಚನ್ನಯ್ಯ, 9. ಆರ್. ಚನ್ನಿಗರಾಮಯ್ಯ, 10. ಬಿ.ಎನ್. ಗುಪ್ತ, 11. ಎಂ.ಎನ್. ಜೋಯಿಸ್, 12. ಎಂ.ವಿ. ಕೃಷ್ಣಪ್ಪ, 13. ಕೆ. ರಾಮರಾಜ ಅಯ್ಯಂಗಾರ್.

ಗಾಂಧೀಜಿ ಚಿತಾಭಸ್ಮ, ಬೆಂಗಳೂರು.



ಎಡದಿಂದ ಬಲಕ್ಕೆ : 3. ಟಿ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಮೈಸೂರು ಕಾಂಗ್ರೆಸ್,
4. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, 5. ಕೆ. ಹನುಮಂತಯ್ಯ, 1948.

ಸಂದರ್ಭ : ಹೈದರಾಬಾದ್ ವಿಮೋಚನ ಹೋರಾಟ
ಹಳೆಯ ಬೆಂಗಳೂರು ವಿಮಾನ ನಿಲ್ದಾಣ : 1948



ಎಡದಿಂದ ಬಲಕ್ಕೆ : 1. ಎ.ಜಿ. ರಾಮಚಂದ್ರರಾವ್, 2. ಟಿ. ಸಿದ್ದಲಿಂಗಯ್ಯ, ಅಧ್ಯಕ್ಷರು, ಮೈಸೂರು ಕಾಂಗ್ರೆಸ್, 3. ಕೆ.ಸಿ. ರೆಡ್ಡಿ ಮುಖ್ಯಮಂತ್ರಿ, 4. ಕೆ.ಟಿ. ಭಾಷ್ಯಂ ಅಯ್ಯಂಗಾರ್, ಕಾನೂನು ಮತ್ತು ಕಾರ್ಮಿಕ ಮಂತ್ರಿ, 5. ಕೆ.ಎಂ. ಮುನ್ಷಿ, 6. ವೇದ ವ್ಯಾಸಚಾರ್, ಕಾರ್ಯದರ್ಶಿ 7. ಎಸ್. ನಿಜಲಿಂಗಪ್ಪ.

ಭಾರತದ ಸಂವಿಧಾನ ರಚನಾ ಸಮಿತಿ ಸದಸ್ಯರು, ದೆಹಲಿ

ದಿನಾಂಕ : 24-01-1950



ಡಾ. ರಾಜೇಂದ್ರ ಪ್ರಸಾದ್, ಡಾ. ಅಂಬೇಡ್ಕರ್, ಜವಹರಲಾಲ್‌ನೆಹರು, ವಲ್ಲಭಬಾಯ್ ಪಟೇಲ್ ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿ, ಕೆ.ಸಿ. ರೆಡ್ಡಿ, ಕೆ. ಹನುಮಂತಯ್ಯ, ಟಿ. ಸಿದ್ದಲಿಂಗಯ್ಯ, ಹೆಚ್.ಆರ್. ಗುರುವಾರೆಡ್ಡಿ, ಟಿ. ಚನ್ನಯ್ಯ, ಡಿ.ಹೆಚ್. ಚಂದ್ರಶೇಖರಯ್ಯ, ಎಸ್. ನಿಜಲಿಂಗಪ್ಪ, ಎ.ಆರ್. ಮೊದಲಿಯಾರ್, ಹೆಚ್.ವಿ. ಕಾಂತ್, ನವಾಬ್ ಮೊಹಮ್ಮದ್ ಇಸ್ಮಾಯಿಲ್‌ಖಾನ್, ಆರ್.ಆರ್. ದಿವಾಕರ್, ಸಿ.ಎಂ. ಪೂರ್ಣಚ್ಚ, ಟಿ.ಟಿ. ಕೃಷ್ಣಮಾಚಾರಿ ಹರ್‌ಗೋವಿಂದಪಂತ್, ಪ್ರಾಂಕ್ ಆಂಥೋಣಿ, ಟಿ. ಪ್ರಕಾಶಂ, ವಿ.ಐ. ಮುನಿಸ್ವಾಮಿ ಪಿಳ್ಳೈ ಹಾಗೂ ಇತರರು.



ಸಮಾರಂಭ : 1. ಜಯಚಾಮರಾಜ ಒಡೆಯರ್, ರಾಜ್ಯಪಾಲರು
2. ಜವಹರಲಾಲ್ ನೆಹರು, ಪ್ರಧಾನಮಂತ್ರಿ, 3. ಕು॥ ಇಂದಿರಾಗಾಂಧಿ,
4. ಕೆ.ಸಿ. ರೆಡ್ಡಿ ಮುಖ್ಯಮಂತ್ರಿ, 5. ಎಸ್. ಚನ್ನಯ್ಯ

ಆಹಾರ ತಾಂತ್ರಿಕ ಸಂಸ್ಥೆ ಪ್ರಾರಂಭೋತ್ಸವ, ಮೈಸೂರು – 1950



ಎಡದಿಂದ ಬಲಕ್ಕೆ : 1. ಸಿ. ರಾಜಗೋಪಾಲಚಾರಿ, ಗೌರ್ನರ್ ಜನರಲ್,
2. ಕೆ.ಸಿ. ರೆಡ್ಡಿ ಮುಖ್ಯಮಂತ್ರಿ, 3. ಜಯಚಾಮರಾಜ ಒಡೆಯರ್, ರಾಜ್ಯಪಾಲರು
4. ಹೆಚ್.ಸಿ. ದಾಸಪ್ಪ, ಸಚಿವರು, ಹಣಕಾಸು ಮತ್ತು ಕೈಗಾರಿಕೆ ಖಾತೆ.

ಸಮಾರಂಭ ಉದ್ಘಾಟನೆ : ವಿದುರಾಶ್ವತ್ಥ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.



ಎಡದಿಂದ ಬಲಕ್ಕೆ : 1. ಎನ್.ಸಿ. ನಾಗಯ್ಯರೆಡ್ಡಿ, 2. ಬಾಬು ರಾಜೇಂದ್ರಪ್ರಸಾದ್, ರಾಷ್ಟ್ರಪತಿ, 3. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ.



ಎಡದಿಂದ ಬಲಕ್ಕೆ : 1. ಟಿ. ಮರಿಯಪ್ಪ, 2. ಹೆಚ್. ಸಿದ್ಧಯ್ಯ, 4. ಪಿ. ಸುಬ್ಬರಾಮಶೆಟ್ಟಿ,
4. ಆರ್. ಚನ್ನಿಗರಾಮಯ್ಯ, 5. ಹೆಚ್.ಸಿ. ದಾಸಪ್ಪ, 6. ಬಾಬು ರಾಜೇಂದ್ರಪ್ರಸಾದ್, ರಾಷ್ಟ್ರಪತಿ,
7. ಜಯಚಾಮರಾಜ ಒಡೆಯರ್, ರಾಜ್ಯಪಾಲರು, 8. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ

ಸಂದರ್ಭ : ಮೈಸೂರು ಶಾಸನ ಸಭಾ ಭವನ (ವಿಧಾನಸೌಧ), ಬೆಂಗಳೂರು.
ದಿನಾಂಕ : 13–07–1951



ಎಡದಿಂದ ಬಲಕ್ಕೆ : 2. ಟಿ. ಮರಿಯಪ್ಪ, 3. ಎಸ್. ನಿಜಲಿಂಗಪ್ಪ, 4. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, 5. ಷೇಕ್ ಅಬ್ದುಲ್, ಕಾಶ್ಮೀರ ಪ್ರಧಾನಿ 6. ಕು. ಇಂದಿರಾಗಾಂಧಿ 7. ಹೆಚ್.ಸಿ. ದಾಸಪ್ಪ, 8. ಹೆಚ್. ಸಿದ್ದಯ್ಯ, 9. ಆರ್. ಚನ್ನಿಗರಾಮಯ್ಯ.



ಎಡದಿಂದ ಬಲಕ್ಕೆ : 1. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, 2. ಜಯಚಾಮರಾಜ ಒಡೆಯರ್, ರಾಜ್ಯಪಾಲರು, 3. ಸಿ. ರಾಜಗೋಪಾಲಚಾರಿ, ಗೌರ್ನರ್ ಜನರಲ್

ಕೋಲಾರ ಚಿನ್ನದ ಗಣಿ ನಗರಕ್ಕೆ ಭೇಟಿ : ಕೋಲಾರ
ದಿನಾಂಕ : 16–07–1951



1. ಜವಹರಲಾಲ್ ನೆಹರು, ಪ್ರಧಾನಮಂತ್ರಿ, 2. ಕು. ಇಂದಿರಾಗಾಂಧಿ, 3. ಕೆ.ಸಿ. ರೆಡ್ಡಿ ಮುಖ್ಯಮಂತ್ರಿ.

ಬೆಂಗಳೂರು ನಗರ ಕಾರ್ಪೋರೇಷನ್ ಚುನಾವಣೆ
ಮೈಸೂರು ಕಾಂಗ್ರೆಸ್ ಜಯಭೇರಿ – 1941



ಎಡದಿಂದ ಬಲಕ್ಕೆ : 1. ನಾಗಭೂಷಣರಾವ್, 2. ಟಿ. ಸಿದ್ದಲಿಂಗಯ್ಯ, 3. ಕೆ.ಸಿ. ರೆಡ್ಡಿ, 4. ಬಿ. ಗೋಪಾಲರೆಡ್ಡಿ, 5. ಕೆ.ಟಿ. ಭಾಷ್ಯಂ ಅಯ್ಯಂಗಾರ್, 6. ಹೆಚ್.ಆರ್. ಗುರುವಾರೆಡ್ಡಿ, 7. ಎ. ಕಲ್ಲೇಶ್ವರರಾವ್, 8. ಕೆ. ಹನುಮಂತಯ್ಯ.



ಉದ್ಘಾಟನೆ : ವಿವಿಧೋದ್ದೇಶ ಸಹಕಾರ ಸಂಘ, ಎಮ್ಮತ್ತನಹಳ್ಳಿ (ಮುಳಬಾಗಿಲು)
ಶ್ರೀಮತಿ ಸರೋಜಮ್ಮ ಕೆ.ಸಿ. ರೆಡ್ಡಿ, ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, ಎಂ.ವಿ. ಕೃಷ್ಣಪ್ಪ – 1951.




ಮಾದರಿ ಹರಿಜನ ಕೇರಿ, ಕಂಗಾಂಡ್ಲಹಳ್ಳಿ, ಕೋಲಾರ ಜಿಲ್ಲೆ.
ಕೆ.ಸಿ. ರೆಡ್ಡಿ ಮುಖ್ಯಮಂತ್ರಿ – 1951

ದಿನಾಂಕ : 13–07–1951, ಬೆಂಗಳೂರು.



ಮೈಸೂರು ಶಾಸನ ಸಭಾಭವನ (ವಿಧಾನಸೌಧ) ಕಟ್ಟಡದ ಶಂಕುಸ್ಥಾಪನೆ :
ಜವಹರಲಾಲ್ ನೆಹರು, ಪ್ರಧಾನಮಂತ್ರಿ.

ಮೈಸೂರು ಶಾಸನ ಸಭಾ ಭವನ (ವಿಧಾನಸೌಧ) ಶಿಲಾನ್ಯಾಸ ಸಮಾರಂಭ
ದಿನಾಂಕ : 13–07–1951



1. ಜಯಚಾಮರಾಜ ಒಡೆಯರ್, ರಾಜ್ಯಪಾಲರು, 2. ಜವಹರಲಾಲ್‌ನೆಹರು, ಪ್ರಧಾನಮಂತ್ರಿ, 3. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ



ಎಡದಿಂದ ಬಲಕ್ಕೆ :

1. ಕೆ.ಟಿ. ಭಾಷ್ಯಂ ಅಯ್ಯಂಗಾರ್, ಕಾನೂನು ಮತ್ತು ಕಾರ್ಮಿಕ ಮಂತ್ರಿ,
2. ಕೆ.ಸಿ. ರೆಡ್ಡಿ ಮುಖ್ಯಮಂತ್ರಿ, ಮೈಸೂರು ರಾಜ್ಯ,
3. ಜವಹರಲಾಲ್ ನೆಹರು, ಪ್ರಧಾನಮಂತ್ರಿ, ಭಾರತ ಸರ್ಕಾರ. 1951.

ದಿನಾಂಕ : 13-07-1951




ಎಡದಿಂದ ಬಲಕ್ಕೆ : 3. ಕೆ. ಹನುಮಂತಯ್ಯ, 4. ಜಯಚಾಮರಾಜ ಒಡೆಯರ್,
5. ಜವಹರಲಾಲ್ ನೆಹರು ಪ್ರಧಾನ ಮಂತ್ರಿ, 6. ಪುರುಷೋತ್ತಮದಾಸ್ ಟಂಡನ್ ಅಧ್ಯಕ್ಷರು,
(ಎ.ಐ.ಸಿ.ಸಿ.) 7. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ

ಮೈಸೂರು ರಾಜ್ಯದ ರಾಜಕೀಯ ಬಿಕ್ಕಟ್ಟು ಪರಿಹಾರ ಸಭೆ, ಬೆಂಗಳೂರು. 1951.



ಎಡದಿಂದ ಬಲಕ್ಕೆ : ಶ್ರೀಮತಿ ಸರೋಜಮ್ಮ ಕೆ.ಸಿ. ರೆಡ್ಡಿ, 3. ಎಸ್. ನಿಜಲಿಂಗಪ್ಪ,
4. ಲಾಲ್‌ಬಹದ್ದೂರ್ ಶಾಸ್ತ್ರಿ, 5. ಚಕ್ರವರ್ತಿ, ಕಾರ್ಯದರ್ಶಿ,
6. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ, ಮೈಸೂರು ರಾಜ್ಯ. – 1951.

ಕೋಲಾರ ಚಿನ್ನದ ಗಣಿ ಪ್ರದೇಶ, ಕೋಲಾರ :
ದಿನಾಂಕ : 16-07-1951



ಎಡದಿಂದ ಬಲಕ್ಕೆ : 1. ಕು. ಇಂದಿರಾಗಾಂಧಿ, 2. ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ,
3. ಜವಹರಲಾಲ್ ನೆಹರು, ಪ್ರಧಾನಮಂತ್ರಿ.



ಕೆ.ಸಿ. ರೆಡ್ಡಿ, ಮುಖ್ಯಮಂತ್ರಿ
ದಿನಾಂಕ : 24–10–1947 ರಿಂದ 30–03–1952.



ಡಾ. ಆರ್.ವಿ. ರವೀಂದ್ರನಾಥ

ಡಾ. ಆರ್.ವಿ. ರವೀಂದ್ರನಾಥ ಅವರು ಕೋಲಾರದ ಕಠಾರಿಪಾಳ್ಯದಲ್ಲಿ ವಾಸವಾಗಿರುವ ಶ್ರೀಮತಿ ಎ. ಶಾಂತಮ್ಮ ಮತ್ತು ಶ್ರೀ ಆರ್. ವೆಂಕಟಾಚಲಪತಿ ಅವರ ಪುತ್ರ. ಇತಿಹಾಸ ದಲ್ಲಿ ಎಂ.ಎ., ಎಂ.ಫಿಲ್., ಪಿಎಚ್.ಡಿ., ಸ್ನಾತಕೋತ್ತರ ಪದವಿಗಳೊಂದಿಗೆ, ಪುರಾತತ್ವಶಾಸ್ತ್ರ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಇಂಡಾಲಜಿ ಮತ್ತು ಶಾಸನಶಾಸ್ತ್ರ ವಿಷಯಗಳಲ್ಲಿ ಸ್ನಾತಕೋತ್ತರ ಡಿಪ್ಲೊಮ ಪದವಿಗಳನ್ನು ಪಡೆದಿರುವ ನಿರಂತರ ಅಧ್ಯಯನಶೀಲ ಜ್ಞಾನದಾಹಿ.

ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಯಲ್ಲಿ ನಿರಂತರವಾಗಿ ತೊಡಗಿಸಿ ಕೊಂಡಿರುವ ರವಿ ಅವರನ್ನು ನಾನು ಸುಮಾರು ಹದಿನೆಂಟು ವರ್ಷಗಳಿಂದ ನೋಡುತ್ತಿದ್ದೇನೆ. ಅವರ ಅಧ್ಯಯನಶೀಲತೆ ಹಾಗೂ ಪರಿಶ್ರಮಗಳಿಂದ ಕೂಡಿರುವ ಸಂಶೋಧನಾಸಕ್ತಿಯು ಬೆರಗು ಹುಟ್ಟಿಸುವಂತಹದ್ದು. ಯಾರ ದೃಷ್ಟಿಗೋ ಗೋಚರವಾಗದೇ ಪತ್ರಾಗಾರಗಳ ಕಡತಗಳಲ್ಲಿ ಅಜ್ಞಾತವಾಗಿ ಉಳಿದಿದ್ದ ಹಲವಾರು ಚಾರಿತ್ರಿಕ ಮಹತ್ವದ ಸಂಗತಿಗಳು ರವಿ ಅವರ ಪರಿಶ್ರಮದಿಂದಾಗಿ ಮೊಟ್ಟಮೊದಲ ಬಾರಿಗೆ ಬೆಳಕು ಕಾಣುತ್ತಿವೆ.

ರವಿ ಅವರ ಸಂಶೋಧನೆಯ ಫಲವಾಗಿ ಧೀಮಂತ ರಾಜತಂತ್ರಜ್ಞ ಕೆ.ಸಿ. ರೆಡ್ಡಿ ಎಂಬ ಕೃತಿ ಈ ಹಿಂದೆಯೇ ಪ್ರಕಟವಾಗಿತ್ತು. ಪ್ರಸ್ತುತ ಮಹಾನ್ ಸಾಧಕ : ಕೆ.ಸಿ. ರೆಡ್ಡಿ (ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ) ಕೃತಿಯು ಪ್ರಕಟವಾಗುತ್ತಿದೆ. ಇದು ರವಿ ಅವರ ಸುಮಾರು ಹತ್ತು ವರ್ಷಗಳ ಸಂಶೋಧನೆಯ ಫಲವಾಗಿ ರೂಪುಗೊಂಡಿದೆ. ರಾಜ್ಯದ ಮೊಟ್ಟಮೊದಲ ಮುಖ್ಯಮಂತ್ರಿಯಾಗಿದ್ದ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ ಅವರ ಜೀವನ ಹೋರಾಟ, ಸಾಧನೆಗಳನ್ನು ಸಮಗ್ರವಾಗಿ ದಾಖಲಿಸಿರುವುದರ ಜೊತೆಗೆ 1900 ರಿಂದ 1952ರವರೆಗಿನ ಅಂದಿನ ಮೈಸೂರು ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಸಮರ್ಥವಾಗಿ ಚಿತ್ರಿಸಿರುವಂತಹ ಅಪರೂಪದ ಕೃತಿಯಾಗಿದೆ. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ತಿಳಿಸುವ ಇಂತಹ ಮತ್ತಷ್ಟು ಕೃತಿಗಳನ್ನು ರವಿ ಅವರು ರಚಿಸಲೆಂದು ಹಾರೈಸುತ್ತೇನೆ.



ಡಾ. ಎಂ.ಜಿ. ಮಂಜುನಾಥ
ಕನ್ನಡ ಪ್ರಾಧ್ಯಾಪಕರು,
ಮೈಸೂರು ವಿಶ್ವವಿದ್ಯಾಲಯ.

